
# ಶ್ರೀಮನ್ಮಹಾಭಾರತ ಕಾವ್ಯ

## (ಅರಣ್ಯಪರ್ವ ಮತ್ತು ವಿರಾಟಪರ್ವ)



ರಚನಕಾರರು: ಲಕ್ಷ್ಮಣ.ವಿರುಪಾಕ್ಷ.ಜೋಶಿ, ಧಾರವಾಡ

ಈ ಹೊತ್ತಿಗೆಯು
ತಿರುಮಲ ತಿರುಪತಿ ದೇವಸ್ಥಾನದವರ
"ಧಾರ್ಮಿಕ ಕೃತಿಗಳಿಗಾಗಿ ಸಹಾಯ ಧನ"
ಎಂಬ ಯೋಜನೆಯ ಮೇರೆಗೆ
ಅವರು ನೀಡಿರುವ ಸಹಾಯ ಧನದಿಂದ
ಪ್ರಕಟಿಸಲ್ಪಟ್ಟಿದೆ



"THIS BOOK IS PUBLISHED
WITH
THE FINANCIAL ASSISTANCE OF
TIRUMALA TIRUPATI DEVASTHANAMS
UNDER THEIR SCHEME
AID TO
PUBLISH RELIGIOUS BOOK"

# ಶ್ರೀ ಮನ್ಮಹಾ ಭಾರತ ಕಾವ್ಯ

## ಅರಣ್ಯಪರ್ವ ಮತ್ತು ವಿರಾಟಪರ್ವ

(ಸಂಪುಟ–೨)

ರಚಿಸಿದವರು :

**ಲಕ್ಷ್ಮಣ ವಿರೂಪಾಕ್ಷ ಜೋಶಿ**

ಪ್ರಕಾಶಕರು :

**ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ**

**ಶ್ರೀರಾಮ ಪ್ರಕಾಶನ ಧಾರವಾಡ**

**ಧಾರವಾಡ**

**೧೯೭೦**

ಶ್ರೀಮನ್ಮಹಾಭಾರತ ಕಾವ್ಯ

ಅರಣ್ಯಪರ್ವ ಮತ್ತು ವಿರಾಟಪರ್ವ

(ಸಂಪುಟ-೨)

ರಚಿಸಿದವರು : ಲಕ್ಷ್ಮಣ ವಿರೂಪಾಕ್ಷ ಜೋಶಿ
ಜೋಶಿ ಕಂಪೌಂಡ, ಮಾಳಮಡ್ಡಿ
ಧಾರವಾಡ-೫೮೦೦೦೭

ಪ್ರಕಾಶಕರು : ಲಕ್ಷ್ಮಣ ವಿರೂಪಾಕ್ಷ ಜೋಶಿ
ಶ್ರೀರಾಮ ಪ್ರಕಾಶನ, ಧಾರವಾಡ-೫೮೦೦೦೭

© ಎಲ್ಲ ಹಕ್ಕುಗಳು ಲೇಖಕರದು

ಪ್ರಥಮ ಮುದ್ರಣ : ಮೇ ೧೯೯೮

ಪ್ರತಿಗಳು : ೧೦೦೦ ಪುಟಗಳು ೧೭೪ + xvi

ಮುದ್ರಕರು : ಶ್ರೀ ಎಸ್.ಟಿ. ತಡಕೋಡ
ರಾಜಶ್ರೀ ಪ್ರಿಂಟಿಂಗ ಪ್ರೆಸ್, ತಡಕೋಡಗಲ್ಲಿ
ಧಾರವಾಡ-೫೮೦೦೦೧

ಬೆಲೆ : ರೂ॥ ೬೦/-

'SHREEMANMAHA BHARATHA KAVYA'
(Kannada Epic)
(ARANYAPARVA AND VIRATAPARVA)
(Volume-2)

Author : LAXMAN VIRUPAX JOSHI
Joshi compound. Malamaddi
DHARWAD-580007

Publisher : Sri Laxman Virupax Joshi
Shree Rama Prakashana.
Joshi compound Malamaddi
DHARWAD-580007

Printed by : Sri S.T. Tadkod
Rajahri Printing Press
Tadakod Galli, DHARWAD-580001

# ಮುನ್ನುಡಿ

## ಲಲಿತ ಮಹಾಕಾವ್ಯಕರ್ತ ಲಕ್ಷ್ಮಣ ಜೋಶಿ ಅವರಿಗೆ 'ಕೃತಾಸ್ತ್ರೀರಸಸಂಭಾಷಣ'



ವೇದಾಂತಗಳೆನಿಸಿದ ಉಪನಿಷತ್ತುಗಳನ್ನೂ ಶ್ರೀ ಆದಿಶಂಕರರ ಭಕ್ತಿಪರ ಲಲಿತ ಕಾವ್ಯಗಳನ್ನೂ ಕಾವ್ಯ-ರಾಮಾಯಣದ ಮೂರು ಸಂಪುಟಗಳಲ್ಲದೆ, ಕುಮಾರವ್ಯಾಸ ಕುವರನೆನಿಸಿ ಗದುಗಿನ ಭಾರತವನ್ನು ಇನ್ನಷ್ಟು ತಿಳಿಯಾಗಿ ಹದಗೊಳಿಸಿ ಪದಪದ್ಯರೂಪಿ ಚತುಷ್ಪದಿ ರೂಪದಲ್ಲಿ ಶ್ರೀ ಮನ್ಮಹಾಭಾರತ ಕಾವ್ಯದ ಆದಿ-ಸಭಾ ಪರ್ವಗಳನ್ನೀಗಾಗಲೆ ಪ್ರಕಟಿಸಿದ್ದ ಶ್ರೀ ಲಕ್ಷ್ಮಣ ಜೋಶಿ ಅವರು ಈಗ ಅರಣ್ಯ-ವಿರಾಟಪರ್ವಗಳ ಲಲಿತರಸ ಪದ್ಯಗಳನ್ನು ನೀಡಿದ್ದಾರೆ.

ಕುಮಾರವ್ಯಾಸನ ಅರಣ್ಯಪರ್ವವು ಅನೇಕ ಉಪಕಥೆ ಪುರಾಣಕಥೆಗಳ ಧರ್ಮ-ನೀತಿತತ್ತ್ವ ಬೋಧಕ ಕಾವ್ಯ ಭಾಗಗಳ ಸಂಕೀರ್ಣವಾಗಿದೆ. ಅರಣ್ಯಪರ್ವದ ಪ್ರಾರಂಭದಲ್ಲಿ ಬರುವ ಜಂಬೂಫಲ ವೃತ್ತಾಂತವು ಕುಮಾರವ್ಯಾಸನ ಭಾರತದಲ್ಲಿದ್ದ ಮೂಲವ್ಯಾಸ ಭಾರತದಲ್ಲಿಲ್ಲ. ಇದನ್ನು ಕುಮಾರವ್ಯಾಸನು ಒಂದು ಪುರಾಣದಿಂದ ಆಯ್ದುಕೊಂಡು ಅದೊಂದು ತನ್ನ ಸ್ವಂತಿಕೆಯ ಕೊಡುಗೆ ಎಂಬಂತೆ ತನ್ನ ಭಾರತ ಕಥಾಮಂಜರಿಯಲ್ಲಿ ಸೇರಿಸಿದ್ದಾನೆ. ಇದರಲ್ಲಿ ಪಂಚಪಾಂಡವರ ಹಾಗೂ ಪಾಂಚಾಲಿಯ ಪಾತ್ರಗಳ ಪ್ರಕೃತಿ ಗುಣಗಳ ಮೇಲೆ ಶ್ರೀಕೃಷ್ಣನು ಕ್ಷ-ಕಿರಣ ಬೀರುತ್ತಾನೆ. ಈ ಅಗ್ನಿಪರೀಕ್ಷೆಯ ಪ್ರಸಂಗಕ್ಕೆ ದ್ರುಪದನಂದನೆಯನ್ನು ಹೊರತುಪಡಿಸಿಲ್ಲ. ದ್ರೌಪದಿ ತನ್ನ ಅಂತರಂಗವನ್ನ ಅಣ್ಣನ ಮುಂದೆ ತೆರೆದಿಟ್ಟು ಹೇಳುತ್ತಾಳೆ :

ಮುರಹರನೆ ಕೇಳುವುದು, ಸತ್ಯವನು ನುಡಿಯುವೆನು
ಎನ್ನ ಈ ದೇಹದಲಿ ಶಕ್ತಿಗಳು ಆರಿಹವು
ಐವರೀ ಪತಿಗಳನು ದೇವರೆನಗಿತ್ತಿಹನು
ಇನ್ನೊಬ್ಬ ಪತಿಯಿಲ್ಲ ಎನ್ನುವಾ ಚಿಂತೆಯಿದೆ ॥

ಈ ಹೃದ್ಗತ ಅಂತಸ್ಥ ಕಾಯಶಕ್ತಿ ಕೃಷ್ಣೆಯ ಬಾಯಿಂದ ಸತ್ಯವನ್ನೆ ನುಡಿಸುತ್ತದೆ! ಇದು ನಿಜವಾದರೆ ಇದರಿಂದ ಕುಮಾರವ್ಯಾಸ ಹೆಚ್ಚಿನದೇನು ಸಾಧಿಸಿದ ?-ಎಂದು ಕೆಲವರು ಪಂಡಿತರು ಹುಬ್ಬೇರಿಸಿದ್ದಾರೆ. ಅದೇನೆ ಇರಲಿ ನನ್ನ ಕವಿ ಲಕ್ಷ್ಮಣ, ಕುಮಾರವ್ಯಾಸನ ಕುವರನಿಗೆ ಅದು ಅಪ್ರಸ್ತುತವಾದಂಗೆ. ಆಗರ, ಆದರ್ಶ ಗದುಗಿನ ಭಾರತ. ಅಂತೆಯೆ ಗದುಗಿನ ಭಾರತದಲ್ಲಿರುವುದೆಲ್ಲ ಈ ಧಾರವಾಡದ ಭಾರತದಲ್ಲಿ ಬಂದಿರುವುದು ಸಹಜ.

ಅರಣ್ಯಪರ್ವದ ಹಲವಾರು ಪೌರಾಣಿಕ ಪ್ರಸಂಗಗಳಲ್ಲಿ ಕುಮಾರವ್ಯಾಸನು ಕೆಲವು ಕಥೆ ಉಪಕಥೆಗಳನ್ನು ಸಂಕ್ಷೇಪಿಸಿಯೂ ಸವಿಸ್ತಾರ-ಗೊಳಿಸಿಯೂ ತನ್ನ ಕೃಷ್ಣ ಕಥೆಯ ಶೀರ್ಷಿಕೆಗೆ ಅನುಗುಣವಾಗುವಂತೆ ಅನುವಾದಿಸಿದ್ದಾರೆ. ಆದರೆ 'ನಳದಮಯಂತಿ', 'ಸತ್ಯವಾನ ಸಾವಿತ್ರಿ' ಕಥಾವಸ್ತುಗಳನ್ನು ಕೇವಲ ಕೆಲವೆ ಪದ್ಯಗಳಿಗೆ ಸೀಮಿತಗೊಳಿಸಿರುವುದು ಒಂದು ಕೊರತೆ ಎನ್ನುವ ಮಟ್ಟಿಗೆ ಇದೆ. ಖ್ಯಾತ ನಾಟಕಕಾರ ಕೆರೂರ ವಾಸುದೇವಾಚಾರ್ಯರು ತಮ್ಮ ಸುಂದರ ಸಂಗೀತ ನಾಟಕದಲ್ಲಿ 'ನಳದಮಯಂತಿ' ಕಥಾನಕವನ್ನು ಶೃಂಗಾರದ ಶೃಂಗಕೃತಿ ಎನ್ನುವಂತೆ ಚಿತ್ರಿಸಿದ್ದಾರೆ. ಮಹಾಯೋಗಿ ಶ್ರೀ ಅರವಿಂದರು 'ಸತ್ಯವಾನ ಸಾವಿತ್ರಿ ಕಥೆ'ಯನ್ನು ೨೪೦೦೦ ಸಾಲುಗಳ ಒಂದು ಆಧ್ಯಾತ್ಮಿಕ ಮಹಾಕಾವ್ಯ, ಇದೊಂದು ಯುಗದ ದಿವ್ಯಜೀವನದ, ದಿವ್ಯಪ್ರಣದ ಮಹಾಶಕ್ತಿಯನ್ನೂ ಅದರ ಜಯಘೋಷವನ್ನೂ ಮಾಡುವ ಜಗದ ಏಕಮೇವ ದಿವ್ಯ-ಕಾವ್ಯ ಎಂದು ಹೇಳಬಹುದು. ಶ್ರೀ ಲಕ್ಷ್ಮಣ ಜೋಶಿ ಅವರು. ಈ ಎರಡೂ ಪ್ರಸಂಗಗಳ ನಿರೂಪಣೆಯನ್ನು ನೂರುನೂರು ಸಾಲಿಗೂ ಮಿಕ್ಕಿ ರಸವುಕ್ಕುವಂತೆ ರಚಿಸಿ ತಮ್ಮ ಸ್ವಂತಿಕೆ, ಸ್ವೋಪಜ್ಞತೆಗಳನ್ನೂ ಮೆರೆದಿದ್ದಾರೆ. ಇದು ಸ್ತುತ್ಯವ್ಯತ್ಯಾಸ.

ಅರಣ್ಯಪರ್ವದ ಇನ್ನೊಂದು ಪ್ರಸಂಗದಲ್ಲಿ ಪಾರ್ಥನು ತನ್ನ ಶೌರ್ಯ, ತಪ, ಭಕ್ತಿಗಳನ್ನು ಮೆಚ್ಚುವಂತೆ ಮೆರೆದಿದ್ದಾನೆ. ಪಾಶು-ಪತಾಸ್ತ್ರ ದೊರಕಿಸಲು ಇಂದ್ರಕೀಲ ಪರ್ವತಕ್ಕೆ ಹೋಗಿ ಘೋರ ತಪವಾಚರಿಸಿ, ಕಿರಾತರೂಪಿ ಶಿವಮಾರಿಯನ್ನು ಒಲಿಸಿಕೊಂಡ ಸನ್ನಿವೇಶ ಭಕ್ತಿರಸೋತ್ಕರದ ಬೆಡಗಿನ ಭಾಗವಾಗಿದೆ. ಕಿರಾತನೆಂದೇ ತಿಳಿದು ಆತನೊಡನೆ ಕಾದಾಡಿ ಆಮೇಲೆ ಆತನು ಸಾಕ್ಷಾತ್ ಪಾರ್ವತೀರಮಣ-ನೆಂದು ಕಂಡುಬಂದಾಗ ಆತನಲ್ಲಿ ಉಂಟಾದ ಪಶ್ಚಾತ್ತಾಪ ಭಾವವನ್ನು ಪ್ರಕಟಿಸಿದ ನಮ್ಮ ಕವಿ ಲಕ್ಷ್ಮಣರ ಪದ್ಯಗಳು ಹೃದ್ಯವಾಗಿ ಹೃದಯ ಸ್ಪರ್ಶವಾಗಿದೆ. ಉದಾಹರಣೆಗೆ-ಪರಶಿವನಿಗೆ ಶರಣು ಬಂದು ಆತನ ರಕ್ಷಣೆ ಬೇಡುತ್ತ, ಕ್ಷಮೆ ಕೇಳುತ್ತ—

ವೇದೋಪನಿಷದುಗಳು ಶಾಸ್ತ್ರಗಳ ತರ್ಕಗಳ<br>
ತತ್ತ್ವಗಳ ಮಥನದಲಿ ನಿಲುಕದಿಹ ತೋರದಿಹ<br>
ಸಾವಿರದ ವರುಷಗಳ ತಪಸಿಂಗೆ ಮೈಗೊಡದ<br>
ಪರತತ್ತ್ವ ಮಹಂತನೆ ರಕ್ಷಿಪುದು ಎಂದಿಹನು

'ಹುಳಜಂತುನಾನರನು, ಲೋಕವನು ಲಯಗೈವ ರುದ್ರನನು ಕೆಣಕಿದೆನು ಕ್ಷಮಿಸುವುದು' ಎಂಬ ನೈಚ್ಯಾನುಸಂಧಾನವು ಪಾರ್ಥನ ಪರಶಿವನ ಭಕ್ತಿಪಾರಮ್ಯವನ್ನೇ ಸಾರುತ್ತದೆ.

ಜಗದೋಳಿಹ ಸಕಲಮೀ ಪ್ರಾಣಿಗಳ ಹೃದಯದಲಿ<br>
ಚೈತನ್ಯರೂಪದಲಿ ವಾಸಿಸುತ ಪ್ರವಹಿಸುತ<br>
ವಿಧವಿಧದ ಕರ್ಮಗಳ ಗೈಯ್ಯುತಲಿ ಲಯಗೊಳಿಪ<br>
ಏಕಮೇದಾದ್ವಿತಿಯನೇ ರಕ್ಷಿಪುದು ಎಂದಿಹನು

ಹೀಗೆ ಪರಮಾತ್ಮನ ಪರಮ ಗುಣ ಪ್ರಶಂಸೆಯೊಂದಿಗೆ ತನ್ನ ನೃಶಂಸತ್ವವನ್ನು ಒಪ್ಪಿಕೊಂಡಿರುವುದು ಶರಣಾಗತಿ ಭಕ್ತಿಯ ಯುಕ್ತ ಲಕ್ಷಣ-ವಾಗಿದೆ.

ಮುಂದಿನ ಇನ್ನೊಂದು ರಸವತ್ತಾದ ಸನ್ನಿವೇಶ ಊರ್ವಶೀ ಶಾಪಕ್ಕೆ ಸಂಬಂಧಿಸಿದುದು. ಪಾಶುಪತಾಸ್ತ್ರವನ್ನು ಗೆದ್ದ ಪುತ್ರನ ಸಂಪ್ರೀತಿಗಾಗಿ ಇಂದ್ರನು ತನ್ನ ಶ್ರೇಷ್ಠ ಸುರಾಪ್ಸರೆಯಾದ ಊರ್ವಶಿಯನ್ನು ಪಾರ್ಥನಲ್ಲಿಗೆ ಆತನ ಶೃಂಗಾರವಿಲಾಸ ಭೋಗಕ್ಕಾಗಿ ಕಳಿಸಿ-ಕೊಡುತ್ತಾನೆ. ಆದರೆ ತನ್ನವಂಶದ ಹಿರಿಯ ಪುರೂರವ ಪತ್ನಿಯಾದ ಊರ್ವಶಿ ತನಗೆ ತಾಯಿಯ ಸಮಾನವೆಂದು ಭಾವಿಸಿದ ಭಾವುಕಯೋಗಿ ಪಾರ್ಥ ಆಕೆಯನ್ನು ತಾಯಿಯಂತೆ ಮರ್ಯಾದಿಸುತ್ತಾನೆ.

ಈ ಊರ್ವಶಿ ಅಸುರ ಅಪ್ಸರೆ, ಸದಾಕಾಲ ನವೋನವ ಶೃಂಗಾರ ದೇವತೆ. ತರುವಾಯ ಎಷ್ಟೋ ರಾಜರು, ದೇವರ್ಷಿ-ಮಹರ್ಷಿಗಳು ಈ ಊರ್ವಶಿಯ ಶೃಂಗಾರ ಜಾಲದಲ್ಲಿ ಬಿದ್ದವರು. ಎಷ್ಟೋ ಜನ ಅಭಿಲಾಷಿಗಳನ್ನು ಆಕೆ ತನ್ನ ಕಟಾಕ್ಷ ಬಾಣದಿಂದಲೇ ಸೋಲಿಸಿ ಮುಖ ತಿರುವಿದಳು. ಹೀಗಿರುವಾಗ ಈ ಅರ್ಜುನ ಆಕೆಗೆ ವಶವಾಗದಿದ್ದಾಗ ರೋಷ ನಿರಾಸೆಗಳಿಂದ 'ಧಾರೆಗಂಗಳಲ್ಲಿ ರೋಷಾ-ಯುಧವ ಮಸೆದು (ಈ ಶ್ರೇಷ್ಠ ವರ್ಣನೆಯನ್ನು, ಈ ಕವಿಯ ರೂಪಕ ಕಾವ್ಯಕವನ್ನು ಬಳಸದೆ ಬಿಟ್ಟಿದ್ದಾರೆ !) ಆತನಿಗೆ ಶಾಪಕೊಡುತ್ತಾಳೆ. ಷಂಢನಂತೆ ನಡೆದುಕೊಂಡ ಈ ಪಾರ್ಥ ನಿಜವಾಗಿಯೂ ಒಂದುವರ್ಷಕಾಲ ಷಂಢನೆ ಆಗಲಿ, ಎಂದು ಮುಂದೆ ವಿರಾಟಪರ್ವದ ಅಜ್ಞಾತ ವಾಸದ ಕಾಲಕ್ಕೆ ಈ ಶಾಪವು ಬೃಹನ್ನಳೆಯಾಗಿ ವಿರಾಟರಾಜನ ಮಗಳಿಗೆ ನಾಟ್ಯಗುರುವಾಗಿ ನಟಿಸಲು ಪ್ರಯೋಜನಕ್ಕೆ ಬರುತ್ತದೆ. ಕವಿ ಕುಮಾರವ್ಯಾಸ ಕುವರರ ಊರ್ವಶೀ ಶಾಪವು ತನ್ನ ಪ್ರಖರತೆಯಲ್ಲಿ ಮುಖ್ಯವಾಗಿಲ್ಲ.

ಬೆಂಕಿಯಲಿ ಅರೆಬೆಂದ ನಾಗಿಣಿಯು ರೋಷದಲಿ
ಭುಸುಗುಡುತ ಫೂತ್ಕರಿಪ ಪರಿಯಲ್ಲಿ ಊರ್ವಶಿಯು
ಕ್ರೋಧದಾ ಜ್ವಾಲೆಯದು ಧಗಧಗನೆ ಉರಿಯುತಲಿ
ಬಿಸಿಯುಸಿರ ಸೂಸುತಲಿ ತಳಮಳಿಸಿ ನುಡಿದಿಹಳು
ನಿಮ್ಮಯಾ ವರ ಭರತ ರುಕ್ಷದಾ ಸೀಮೆಯಲಿ
ವರುಷೊಂದು ಕಾಲವದು ನಪುಂಸಕನಾಗುತಲಿ
ಜನರುಗಳು ನೋಡುತಲಿ ನಗುತಲಿಹ ಪರಿಯಲ್ಲಿ
ಚರಿಸುವುದು ಎನ್ನುತಲಿ ಶಾಪವನು ಇತ್ತಿಹಳು.

ನಿಜವಾಗಿಯೂ ಕುಮಾರವ್ಯಾಸ ಭಾರತವೆಂಬ ಬಾಳೆಯ ಹಣ್ಣಿನ ಸಿಪ್ಪೆಯನ್ನು ಸುಲಿದು ಅದರಲ್ಲಿದ್ದಷ್ಟು ಅಸ್ಪಷ್ಟತೆ, ಕ್ಲಿಷ್ಟತೆಗಳನ್ನು ಕಳೆದು ಒಳತಿರುಳನ್ನೆ ನಮ್ಮ ಬಾಯ್ದೆರೆಗೆ ಒಡಿಯುವಂತೆ ಈ ಕವಿ ಉದ್ದಕ್ಕೂ ಅರಣ್ಯಪರ್ವವನ್ನು ಅತಿಸುಲಭಗೊಳಿಸಿ, ಅದರ ಬೆಡಗು-ಬಿನ್ನಾಣಗಳು, ಪಡೆನುಡಿ-ನುಡಿಗಟ್ಟು, ಕೆಚ್ಚಿನಶೈಲಿಯ ಕುಮಾರವ್ಯಾಸನ ಭಾಷೆಗೆ ಚ್ಯುತಿಬರವಂತೆ ಸರಸ ನಿರೂಪಣೆಯನ್ನು ನೀಡಿರುವುದೆ ಈ ಕಾವ್ಯದ ಮೌಲಿಕ ಮೇಲ್ಮೆ.

ಮುಂದೆ ವಿರಾಟಪರ್ವವೂ ಅಷ್ಟೇ ರೋಚಕವಾಗಿ ಶ್ರುತಿಸುಭಗತ್ವದಿಂದಲೂ, ರಸನಾಗುಣದಿಂದಲೂ ಕಾವ್ಯರಸಾಸ್ವಾದ ಗುಣವೂ ಹೆಚ್ಚಿಸುತ್ತವೆ. ವಿರಾಟಪರ್ವದಲ್ಲ. ಕೀಚಕ-ಸೈರಂಧ್ರಿ ಪ್ರಣಯಯಾಚನೆಯ ಪ್ರಸಂಗ ಮುಂದೆ ಬಲ್ಲವ (ಭೀಮ)ನಿಂದ ಕೀಚಕನ ವಧೆಯಾದ ಅಂತಿಮ ಸನ್ನಿವೇಶಗಳು ಸಹಜಸುಂದರವಾಗಿ ಚಿತ್ರಿತವಾಗಿವೆ. ಕೀಚಕನ ಶೃಂಗಾರ ಭಿಕ್ಷುವಾಗಿ ಸೈರಂಧ್ರಿಯಲ್ಲಿ ಕ್ಷೇಮಯಾಚನೆ ಮಾಡುತ್ತಾನೆ, ಸೈರಂಧ್ರಿ ಜರೆದು ಕಳಿಸುತ್ತಾಳೆ. ಆಮೇಲೆ ತನ್ನಕ್ಕನವಾಣಿ ಸುದೇಷ್ಣೆಯನ್ನು ಒಲಿಸಿ ತನ್ನಂತಃಪುರಕ್ಕೆ ಬರುವಂತೆ ಹೊಂಚು ಹಾಕುತ್ತಾನೆ. ಕೊನೆಗೆ ಸೈರಂಧ್ರಿ ಅಡುಗೆ ಮನೆಯಲ್ಲಿ ಮಲಗಿದ್ದ ಭೀಮನನ್ನು ಎಬ್ಬಿಸಿ ತನ್ನ ಅವಮಾನದ ಪ್ರಸಂಗವನ್ನು ಹೇಳಿ ಆತನನ್ನು ಹಂಗಿಸಿ, ಕೊನೆಗೆ ಆತನಿಂದ ಸೇಮವನ್ನು ಬೇಡಿ ತಾನು ಆತ್ಮಹತ್ಯೆ ಮಾಡಿಕೊಳ್ಳುವದಾಗಿ ಉದ್ವೇಗಗೊಂಡಾಗ ಭೀಮಬಲ್ಲವನು ಭುಗಿಲೆದ್ದು ಕೀಚಕನ ಸಂಹಾರಕ್ಕೆ ಅಣಿಗೊಳ್ಳುವ ಸನ್ನಿವೇಶಗಳು ನಾಟಕೀಯವಾಗಿ ಮೂಲದ ಸ್ವಾರಸ್ಯವನ್ನೆಲ್ಲ ನೆನಪಿಗೆ ತಂದುಕೊಡುತ್ತವೆ.

ಐವರೀ ಗಂಡರೊಳು ನೀನೊಬ್ಬನೇ ಗಂಡನಿಹೆ
ಗಂಡುಸರ ಗಂಡನಿಹೆ ಎನ್ನುತಲಿ ನಿನ್ನಲ್ಲಿ
ಕಷ್ಟವನು ಹೇಳಿದರೆ ನೀನಿಂತು ನುಡಿಯುವದೆ
ನೀನಲ್ಲದಿನ್ನಾರು ಎನ್ನನ್ನು ರಕ್ಷಿಪರು

ಎಂದು ಮೊರೆಯಿಡುತ್ತ ಆ ಮೊರೆ ಹುಸಿಯಾಗುವಾಗ ಮತ್ತೆ ಛೇಡಿಸಿ ಪಿಡಿಸಿ ನುಡಿಯುತ್ತಾಳೆ.

ಹೆಂಡತಿಯ ಮಾನವನು ರಕ್ಷಿಸಲು ನಿಜಗಂಡ
ಅರಿರುಂಡ ಚೆಂಡಾಡಿ ಹೆಂಡತಿಯ ರಕ್ಷಿಪನು
ಇಲ್ಲದಿರೆ ತನ್ನಯಾ ಪ್ರಾಣವನು ತೊರೆಯುವನು
ನಿಮ್ಮಂಥ ಹೇಡಿಗಳ ನಾಕಾಣೆ ಜಗದೊಳಗೆ

ಎಂದರಷ್ಟೇ ಸಾಲದೆ ಇನ್ನೂ ಕೇಳಿ—

ಹೆಂಡತಿಯ ಮಾನವನು ಎದುರಿನಲಿ ಕಳೆವುದನು
ಕಣ್ಣಾರೆ ಕಾಣುತಲಿ ಸುಮ್ಮನೆ ಕಳಿತಿರುವ
ನೀವೇನು ಗಂಡರೋ ಷಂಢರೋ ಹೇಳುವುದು
ಎನ್ನುತಲಿ ಸಿಡಿಲಂತೆ ನುಡಿದಿಹಳು ದ್ರೌಪದಿಯು ॥

ಆದರೇನು ಅಣ್ಣನಾಜ್ಞೆಯ ಗೆರೆಯಲ್ಲಿ ಗರ ಹೊಡೆದಂತಾಗಿ ಬಿದ್ದುಕೊಂಡಿದ್ದಾರೆ ನಾಲ್ವರೂ ತಮ್ಮಂದಿರು. ಕೇವಲ ಭೀಮನೂ ಹೇಡಿಯಂತೆ ಸುಮ್ಮನಿದ್ದಾಗ 'ನೀನೂ ಷಂಢನಾದೆ' ಎಂದು ಕೆಣಕಿ 'ನನ್ನ ಪತಿಯಳೇ ನನಗೆ ಪರಮವೈರಿಗಳು' ಇನ್ನು ಹುಟ್ಟದೆ ಇರಲಿ ಎನ್ನವೋಲ್ ಭಂಗಿತರು ಎಂದುಕೊಂಡು ಭೀಮನಿಗೆ ಕೊನೆಯ ನಮಸ್ಕಾರ ಮಾಡ ಹೋದಾಗ ಭಡಾಳಿಸಿದ ಉರಿಯಂತೆ ಭೀಮ ಭುಗಿಲೆದ್ದು ಹೋಗು ಈ ಕ್ಷಣದಿಂದ ಅಣ್ಣನಾಜ್ಞೆಯ ಗೆರೆಯ ದಾಟಿದೆ. ಇನ್ನು ಕೀಚಕನನ್ನು ಸಹರಿ ಪ್ರಸಂಗಬಿದ್ದರೆ ವೈರಾಟ ವಂಶವನ್ನೆ ನಿರ್ವಂಶಗೊಳಿಸುತ್ತೇನೆ. ಎಂದು ವಚನಬದ್ಧನಾಗಿ ಭೀಮನು ಕೊನೆಗೆ ಕೀಚಕನನ್ನು ಸಂಹರಿಸಿ ದ್ರೌಪದಿಯ ಕಣ್ಣಿಗೆ 'ಗಂಡರಗಂಡ'ನೆನಿಸಿದ.

ಹೀಗೆ ಈ ಅರಣ್ಯಪರ್ವ ಮತ್ತು ವಿರಾಟಪರ್ವಗಳು ಈ ಮೊದಲಿನ ಆದಿಪರ್ವ-ಸಭಾಪರ್ವಗಳೋಪಾದಿಯಲ್ಲಿ ರಸಪೂರ್ಣವಾಗಿ ಉದ್ಬೋಧಕವಾಗಿ ಬೆಳೆದು ರಸಪುಷ್ಟವಾಗಿವೆ. ನಮ್ಮ ಕವಿ ಲಕ್ಷ್ಮಣ ಜೋಶಿ ಅವರ ಅಪಾರ ಕೊಡುಗೆಗೆ ನಾಲ್ಕು ಕೋಟಿಮಿಕ್ಕ ಕನ್ನಡಿಗರು ಉಪಕೃತರು.

ಧಾರವಾಡ-೧
೧೪-೫-೯೮

—ಎನ್ಕೆ

# ರಚನಕಾರರ ನುಡಿ

ನನ್ನ ಶ್ರೀಮನ್ಮಹಾಭಾರತ ಕಾವ್ಯದ ಆದಿಪರ್ವ ಮತ್ತು ಸಭಾಪರ್ವಗಳನ್ನೊಳಗೊಂಡ ಮೊದಲನೆಯ ಸಂಪುಟವು ೧೯೯೫ರಲ್ಲಿ ಪ್ರಕಟವಾಯಿತು. ಈಗ ಈ ಮಹಾಕಾವ್ಯದ ಅರಣ್ಯಪರ್ವ ವಿರಾಟಪರ್ವವನ್ನೊಳಗೊಂಡ ಎರಡನೆಯ ಸಂಪುಟವು ಪ್ರಕಟವಾಗುತ್ತಿದೆ. ಇದರ ಮೊದಲನೆಯ ಸಂಪುಟವನ್ನು ಅನೇಕ ಗಣ್ಯ ಸಾಹಿತಿಗಳು, ಕವಿಗಳು, ವಿಮರ್ಶಕರು, ಸಾಮಾನ್ಯ ಜನರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಖ್ಯಾತ ಸಾಹಿತಿಗಳಾದ ಮತ್ತು ಮಹಾಕವಿ ಕುಮಾರವ್ಯಾಸನ ಅಭಿಮಾನಿಗಳಾದ ಶ್ರೀ.ಎನ್ಕೆ ಕುಲಕರ್ಣಿಯವರು ಮುನ್ನುಡಿಯನ್ನು ಬರೆಯುತ್ತ 'ಶ್ರೀ ಜೋಶಿಯವರು ಕುಮಾರವ್ಯಾಸನ ಕಡಲನೀಸಿ, ಆತನ ಬೆಡಗು ಬಿನ್ನಾಣಗಳನ್ನು ಸರಳ ಕನ್ನಡಕ್ಕೆ ಸೋಸಿ. ಆತನ ರೂಪಕ ರಸಾಯನವನ್ನು ಕಿರಿದಾದ ಹಿರಿದರ್ಥದ ನಿರೂಪಣ ಕಥನ ಕುತೂಹಲದ ಕೌತುಕಕಾರಿ ಕಥಾನಕವನ್ನು ತಿಳಿಯಾದ ಸುಲಿದ ಬಾಳೆಯ ಹಣ್ಣಿನಂತಹ, ಸುಲಭ ಶೈಲಿಗೆ ಅಳವಡಿಸಿ ಅಮೋಘವಾದ ತಮ್ಮದೇ ಒಂದು ಕೊಡುಗೆಯನ್ನು ಕನ್ನಡಕ್ಕೆ ನೀಡಿದ್ದಾರೆ' ಎಂದು ಉದ್ಗಾರ ತೆಗೆದಿದ್ದಾರೆ. ಅವರ ಈ ನುಡಿಗಳು ಈಗ ಪ್ರಕಟವಾಗುತ್ತಿರುವ ಎರಡನೆಯ ಸಂಪುಟಕ್ಕೂ ಸಹ ಅನ್ವಯವಾಗುತ್ತವೆ.

ಇದೇ ರೀತಿಯಲ್ಲಿ ಖ್ಯಾತಸಾಹಿತಿಗಳು ಮತ್ತು ವಿಮರ್ಶಕರಾದ ಶ್ರೀ.ಟಿ.ಮಹಾಬಲೇಶ್ವರ ಭಟ್ಟ ಇವರು ದಿನಾಂಕ ೧೫-೨-೯೭ರ 'ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಬೇವುಬೆಲ್ಲ ಅಂಕಣದಲ್ಲಿ ಮೊದಲನೆಯ ಸಂಪುಟವನ್ನು ವಿಮರ್ಶಿಸುತ್ತ ಹೀಗೆ ಹೇಳಿದ್ದಾರೆ. ಈ ಕಾವ್ಯವು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳ ಭಾಷೆಯಿಂದ ಕೂಡಿದೆ. ನಾನು ಓದುತ್ತಾ ಹೋದಂತೆಲ್ಲ, ನನ್ನದೇ ಈ ಕಾವ್ಯ ಸೆರೆಹಿಡಿಯಿತು. ಮುಂದೇನಾಗುತ್ತದೆ ಎಂಬ ಕುತೂಹಲ ಏಳುತ್ತಲೇ ಹೋಗುತ್ತದೆ. ಇಡೀ ಕಾವ್ಯವನ್ನು ಓದುವಾಗ ಆನಂದ, ರೋಮಾಂಚನ, ಭಾವುಕತೆಗಳು ಆಗಾಗ ಒಮ್ಮೊಮ್ಮೆ ಒಟ್ಟಿಗೇ ಅನುಭವಿಸಬಹುದಾಗಿದೆ. ಮುಂದೆ ಹೇಳುತ್ತ ಮಹಾಭಾರತವು ಎಂದಿಗೂ ಪ್ರಸ್ತುತವಾದ ಮಹಾಗ್ರಂಥ. ಇಂದು ಭಾರತದಲ್ಲಿ ನಡೆಯುತ್ತಿರುವುದು 'ಮಹಾಭಾರತ.' ಇಲ್ಲಿ ಕೌರವರು, ಪಾಂಡವರು, ಶಕುನಿಗಳು ನಮ್ಮ ಕಣ್ಣ ಮುಂದೆ ಇದ್ದಾರೆ. ದುಶ್ಶಾಸನರು ಅನೇಕ ದ್ರೌಪದಿಗಳ ಸೀರೆಗಳನ್ನು ಸೆಳೆದು ಮಾನಭಂಗ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಮಹಾಭಾರತದಲ್ಲಿ ಬರುವ ಎಲ್ಲ ಪಾತ್ರಧಾರಿಗಳನ್ನು ಇಂದು ನಮ್ಮ ಕಣ್ಣ ಮುಂದೆಯೇ ಕಾಣುತ್ತಿದ್ದೇವೆ. ಮಹಾಭಾರತದತ ಓದುವ ಎಲ್ಲ ಘಟನೆಗಳು ಈಗ ಕಣ್ಣ ಮುಂದೆ ಕಾಣಲು ಸಾಧ್ಯ. ಅದಕ್ಕಾಗಿ ಯಾವುದೇ ವಿಡಿಯೋ ರೀಲುಗಳನ್ನು ನೋಡುವ ಅವಶ್ಯಕತೆ ಇಲ್ಲ. ಮತ್ತೆ ಮುಂದುವರಿಯುತ್ತ, ಮಹಾಭಾರತದ ಕಥೆಯು ಇಂದಿನ ನಮ್ಮ ನಿತ್ಯ ಜೀವನಕ್ಕೆ ಬಹಳ ಸಮೀಪವಾಗಿದೆ. ಯಾವುದೇ ರಾಜಕಾರಣಿಯೂ ಕೂಡ ಇದನ್ನು ಅರಿಯುವುದು ಬಹಳ ಮುಖ್ಯವಾಗಿರುತ್ತದೆ. ಮಹಾಭಾರತದ ಎಚ್ಚರದಿಂದ ನಮ್ಮ ರಾಜಕಾರಣಿಗಳು ಕಲಿಯುವ ಪಾಠ ಬಹಳಷ್ಟಿದೆ. ಆದ್ದರಿಂದ ಮಹಾಭಾರತ ಇಂದಿನ ಪರಿಸ್ಥಿತಿಗೆ ಪ್ರಚಾರವಾಗುವುದು ಅವಶ್ಯವಾಗಿದೆ ಎಂಬ ಮಾತನ್ನು ಒಪ್ಪಬಹುದು. ಶ್ರೀ ಜೋಶಿಯವರ ಬಹುಕಾಲದ ಶ್ರಮ ಸಾರ್ಥಕವಾಗಿದೆ' ಎಂದು ಹೇಳಿದ್ದಾರೆ.

ಸುಪ್ರಸಿದ್ಧ ಹಿರಿಯ ವಿಮರ್ಶಕರಾದ ಪ್ರೊ. ಜಿ.ಡಿ. ನಾಡಕರ್ಣಿಯವರು ಮೊದಲನೆಯ ಸಂಪುಟವನ್ನು ವಿಮರ್ಶೆ ಮಾಡುತ್ತಾ ದಿನಾಂಕ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ, 'ಪ್ರಕೃತ ಸಮಗ್ರ ಭಾರತವನ್ನು ಕನ್ನಡ ಚೌಪದಿ ರೂಪದಲ್ಲಿ ರಚಿಸಲು ಸಂಕಲ್ಪಿಸಿ, ಅದರ ೧ನೇ ಸಂಪುಟವಾಗಿ ಆದಿಪರ್ವ ಮತ್ತು ಸಭಾಪರ್ವಗಳನ್ನು ಈಗ ನೀಡಿದ್ದಾರೆ. ಇದು ಶಬ್ದಶಃ ಅನುವಾದವಲ್ಲ. ಸ್ವತಂತ್ರ ಕೃತಿಯಾಗಿದೆ. ಲೇಖಕರ ಅಚ್ಚುಮೆಚ್ಚಿನ ಕವಿಯಾದ ಕುಮಾರವ್ಯಾಸನ ಕಾವ್ಯದಿಂದ ಸ್ಫೂರ್ತಿಗೊಂಡು ಈ ಕಾವ್ಯ ರಚಿಸಿದ್ದೇನೆಂದು ತಾವೇ ನುಡಿದಿದ್ದಾರೆ. "ಕುಮಾರವ್ಯಾಸ ಕುಮಾರ" ತಾವು ಎಂದು ಹೆಮ್ಮೆಯಿಂದ ನಿರೂಪಿಸಿದ್ದಾರೆ. ಕೌರವ ಪಾಂಡವರ ದಾಯಾದಿ ಮತ್ಸರ, ಪಾಂಡವರ

ವನವಾಸ, ಬಕಾಸುರವಧೆ, ದ್ರೌಪದಿ ಸ್ವಯಂವರದಂತಹ ಸನ್ನಿವೇಶಗಳು ರಸೋತ್ಕಟವಾಗಿ ಚಿತ್ರಿತವಾಗಿವೆ. ಕಲ್ಮಾಷಪಾದ ರಾಜನ ವೃತ್ತಾಂತ, ಕುಮಾರವ್ಯಾಸನ ನಿರೂಪಣೆಗಿಂತ ಭಿನ್ನವಾಗಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಕಣ್ಣಿಗೆ ಕಟ್ಟುವ ವರ್ಣನೆಗಳಂತೆ ವಿವಿಧ ಪಾತ್ರಗಳ ಪೋಷಣೆಯನ್ನು, ಲೇಖಕರು ಹದವರಿತು ಮಾಡಿ, ಅವುಗಳಲ್ಲಿ ಸಜೀವತೆಯನ್ನು ತಂದಿದ್ದಾರೆ. ಮತ್ತು ಅಲ್ಲಲ್ಲಿ ಸ್ವಂತಿಕೆಯನ್ನು ಮೆರೆದಿದ್ದಾರೆ. 'ಲಲಿತ ಪದ ಬಂಧದಲಿ ಸುಸ್ವರದ ನುಡಿಗಳಲಿ, ಸುಸ್ವರದ ನುಡಿಗಳಲಿ ರಚಿಸಿರುವ ಕಾವ್ಯಮಿದು ಎಂದು ಲೇಖಕರು ವಿನಯ ದಿಂದ ಹೇಳಿದ ಮಾತು ಸಫಲವಾಗಿದೆ. ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಈ ಹಿರಿಯ ಈರ್ವರು ವಿಮರ್ಶಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಈ ಎರಡನೆಯ ಸಂಪುಟಕ್ಕೂ ಸಹ ಅಷ್ಟೇ ಅನ್ವಯವಾಗುತ್ತವೆ. ಮೊದಲನೆಯ ಭಾಗವನ್ನು ಓದಿದ ನೂರಾರು ಜನರು ಕಾವ್ಯದ ಸೊಗಸನ್ನು ಮತ್ತು ಅದನ್ನು ಓದಿ ತಮಗುಂಟಾದ ಆನಂದವನ್ನು ಬಹುವಾಗಿ ವ್ಯಕ್ತಪಡಿಸಿದ್ದಾರೆ. ವಿಸ್ತಾರದ ಭಯದಿಂದ ಅವುಗಳನ್ನು ಇಲ್ಲಿ ಕೊಡಲಾಗಿಲ್ಲ. ಅನೇಕ ಗಮಕಿಗಳೂ ಸಹ ಈ ಕಾವ್ಯವನ್ನು ಗಮಕವಾಚನ ಮಾಡಿ ಶ್ರೋತೃಗಳನ್ನು ತಣಿಸಿದ್ದಾರೆ.

ಧಾರವಾಡದ ಕೆ. ಪಿ. ಈ. ಎಸ್. ಕಾನೂನು ವಿದ್ಯಾಲಯದ ೧೯೯೮ರನೇ ಸಾಲಿನ ಶ್ರೀ ಮಹಾಲಕ್ಷ್ಮಿ ಸಾಹಿತ್ಯ ಪ್ರಶಸ್ತಿಯ ಪ್ರಥಮ ಬಹುಮಾನವು ಈ ಮಹಾಭಾರತ ಕಾವ್ಯದ ಆದಿಪರ್ವ ಮತ್ತು ಸಭಾಪರ್ವದ ಗ್ರಂಥಕ್ಕೆ ಲಭಿಸಿದೆ ಎಂದು ಹೇಳಲು ಸಂತೋಷವಾಗುತ್ತದೆ.

## ಅರಣ್ಯ ಪರ್ವ

ಪ್ರಸ್ತುತ ಎರಡನೆಯ ಸಂಪುಟದಲ್ಲಿ, ಅರಣ್ಯಪರ್ವದಲ್ಲಿ ೨೩೦೨ ಪದ್ಯಗಳು ಇರುತ್ತವೆ. ಮೊದಲಯ ಸಂಪುಟದಲ್ಲಿ, ನಾನು ಮಹಾ–ಭಾರತವನ್ನು ಬರೆಯಲಿಕ್ಕೆ ಉಂಟಾದ ಪ್ರೇರಣೆ, ಕಾವ್ಯದ ರಚನೆಯ ಬಗ್ಗೆ ವಿಸ್ತಾರವಾಗಿ ಹೇಳಿದ್ದೇನೆ. ಈ ಅರಣ್ಯಪರ್ವದಲ್ಲಿ, ಪಾಂಡವರು ರಾಜ್ಯವನ್ನು ಕಳೆಕೊಂಡು ವನಪ್ರವೇಶ ಮಾಡುವುದು, ಜಂಬೂಫಲ ಪ್ರಸಂಗ, ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯುವುದು, ಅರ್ಜುನನು ಸ್ವರ್ಗಕ್ಕೆ ತೆರಳುವುದು, ಹದಿನಾಲ್ಕು ಲೋಕಗಳ ವಿಸ್ತಾರವಾದ ವರ್ಣನೆ, ಅರ್ಜುನ ಊರ್ವಶಿಯರ ಪ್ರಣಯಪ್ರಸಂಗ, ಊರ್ವಶಿಯ ಶಾಪ, ಬೃಹದಶ್ವಮುನಿಯು ಧರ್ಮರಾಜನಿಗೆ ನಳದಮಯಂತಿಯ ಕಥೆಯನ್ನು ಬಹುವಿಸ್ತಾರವಾಗಿ ಹೇಳಿ ಸಾಂತ್ವನ ಗೊಳಿಸುವುದು, ವಾತಾಪಿ ಇಲ್ವಲರ ಕಥೆ, ಭಗೀರಥ ಗಂಗೆಯನ್ನು ಭೂಲೋಕಕ್ಕೆ ಕರೆತಂದದ್ದು, ಪರಶುರಾಮ ಕಾರ್ತವೀರ್ಯಾರ್ಜುನರ ಯುದ್ಧ,ದ್ರೌಪದಿಗೆ ಸೌಗಂಧಪುಷ್ಪದ ಬಯಕೆ, ಭೀಮ ಹನುಮಂತನನ್ನು ಕಾಣುವುದು ಭೀಮನಿಂದ ಜಟಾಸುರನ ವಧೆ, ಅರ್ಜುನನ ಆಗಮನ, ನಿವಾತಕವಚರ ಯುದ್ಧದ ವರ್ಣನೆ, ಮಾರ್ಕಂಡೆಯನಿಂದ ಜ್ಞಾನೋಪದೇಶ, ಭೀಮನನ್ನು ಸರ್ಪವು ಬಂಧಿಸುವುದು. ಸರ್ಪಜನ್ಮವನ್ನು ತಾಳಿದ ನಹುಷನ ಪೂರ್ವ ವೃತ್ತಾಂತ, ದೂರ್ವಾಸ ಧರ್ಮಜನ ಸತ್ವ ಪರೀಕ್ಷೆ ಮಾಡುವುದು, ದುರ್ಯೋಧನನ ಘೋಷಯಾತ್ರೆ, ಚಿತ್ರರಥ ಗಂಧರ್ವ ದುರ್ಯೋಧನನ್ನು ಬಂಧಿಸುವುದು, ಧರ್ಮರಾಜನು ಬಂಧನವನ್ನು ಬಿಡಿಸುವುದು, ಜಯದ್ರಥನು ದ್ರೌಪದಿಯನ್ನು ಅಪಹರಿಸುವದು ಮತ್ತು ಭೀಮಾರ್ಜುನರಿಂದ ಸೈಂಧವನು ಮಾನಭಂಗವಾಗುವದು ಮಾರ್ಕಂಡೇಯರು ರಾಮಾಯಣ ಕಥೆಯನ್ನು ಹೇಳುವುದು ನಾರದನಿಂದ ಸತ್ಯವಾನ-ಸಾವಿತ್ರಿಯರ ಕಥಾ ನಿರೂಪಣೆ ಯಕ್ಷ ಪ್ರಶ್ನೆ, ಧರ್ಮರಾಜನು ಸತ್ತ ನಾಲ್ವರು ಸೋದರರನ್ನು ಬದುಕಿಸುವುದು ಇವು ಪ್ರಮುಖ ವಾದ ಕಥಾ ಭಾಗಗಳಾಗಿವೆ.

ಈ ಪ್ರಸಂಗಗಳನ್ನು ಬಹು ವಿಸ್ತಾರವಾಗಿ, ರಸವತ್ತಾಗಿ, ಹೃದಯ ಸ್ಪರ್ಶಿಯಾಗಿ, ಛಂದಸ್ಸು, ಅಲಂಕಾರ, ಪದಗಳ ಲಾಲಿತ್ಯ, ಗೇಯತೆ ಮೊದಲಾದ ಕಾವ್ಯದ ಎಲ್ಲ ಗುಣಗಳಿಂದ, ಸೊಬಗಿನಿಂದ ಮನಸ್ಸನ್ನು ಸಂತೋಷಗೊಳಿಸುವಂತೆ ರಚಿಸಲಾಗಿದೆ. ಈ ಕಾವ್ಯವು ಓದುಗನನ್ನು ಒಂದು ಅವರ್ಣನೀಯವಾದ ಆನಂದದ ಲೋಕಕ್ಕೆ ಕರೆದೊಯ್ದು ಭಕ್ತಿಯ ಪರಾಕಾಷ್ಠತೆಯ ಮೂಲಕ ಆಧ್ಯಾತ್ಮದ ಉತ್ತುಂಗಶಿಖರವನ್ನು

ತಲುಪಿಸುತ್ತದೆ. ಇದನ್ನು ಓದಿಯೇ ಅದನ್ನು ಸವಿಯಬೇಕು. ಉದಾಹರಣೆಗಾಗಿ ಇಲ್ಲಿ ಕೆಲವು ಸನ್ನಿವೇಶಗಳನ್ನು ಮತ್ತು ಪದ್ಯಗಳನ್ನು ನೋಡಬಹುದು.

ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲಿಕ್ಕೆ ಶಿವನನ್ನುಕುರಿತುತಪಸ್ಸು ಮಾಡುತ್ತಿರುವಾಗ, ಶಿವನು ಬೇಡನ ರೂಪದಲ್ಲಿ ಬರಲು, ಅರ್ಜುನನು ತಿಳಿಯದೆ ಅವರೊಡನೆ ಯುದ್ಧ ಮಾಡಿ ಕೊನೆಗೆ ಬೇಡನು ಶಿವನೆಂದು ಅರಿತಾಗ ಉತ್ಕಟ ಭಕ್ತಿಯಿಂದ ಶಿವನನ್ನು ಸ್ತುತಿಸುತ್ತಾನೆ. ಇವನಲೇ ಹದಿನಾಲ್ಕು ಲೋಕಗಳ ರಕ್ಷಿಸುವ । ಫಾಲಾಕ್ಷಪರಮೇಶ ಜಗದೀಶ ಈಶನಿಹ । ಎನ್ನುತಲಿ ಹರ್ಷಾಶ್ರು ಸುರಿಸುತಲಿ ಸಂತಸದಿ ಹರನಂಘ್ರಿಕಮಲದಲಿ ಸಾಷ್ಟಾಂಗವೆರಗಿದನು ॥೩೫೮॥ ಮನದೊಳಗೆ ನೋಯುತಲಿ ಫಲುಗುಣನು ತಾ ಬೆಮರಿ ತ್ರಾಯಸ್ವ ತ್ರೈಲೋಕ್ಯ ವಂದಿತನೆ ತ್ರಿನೇತ್ರನೆ । ಕಾರುಣ್ಯ ಮೂರುತಿಯೆ ಕರುಣಾಸಮುದ್ರನೆ ಎನ್ನಯಾ ಅಪರಾಧ ಕ್ಷಮಿಸುತಲಿ ರಕ್ಷಿಪುದು ॥೩೫೯॥ ವಿಶ್ವತೋ ಚಕ್ಷುವಿಹ ವಿಶ್ವತೋಕರ್ಣವಿಹ । ವಿಶ್ವತೋ ಬಾಹುವಿಹ ವಿಶ್ವತೋ ಪಾದವಿಹ । ವಿಶ್ವತೋ ಮುಖವಿರುವ ವಿಶ್ವತೋ ದೇಹವಿಹ । ವೈರಾಟಪುರುಷನಿಗೆ ನಮೋನ್ನಮೋ ರಕ್ಷಿಪುದು ॥೩೬೭॥ ಎಂದು ಭಕ್ತಿಯ ಪರಾಕಾಷ್ಠತೆಯಲ್ಲಿ ಶಿವನನ್ನು ಪ್ರಾರ್ಥಿಸುತ್ತಾನೆ. ಈ ಪದ್ಯಗಳಲ್ಲಿ ಮೂಡಿಬಂದ ಶಿವಸ್ತುತಿಯು ಭಾವುಕರಿಗೆ ನಿತ್ಯ ಪಾರಾಯಣ ಮಾಡಲು ಯೋಗ್ಯವಾಗಿದೆ.

ಇದೇ ರೀತಿಯಲ್ಲಿ ದೂರ್ವಾಸ ಋಷಿಯು ರಾತ್ರಿಯಲ್ಲಿ ಧರ್ಮರಾಯನಲ್ಲಿ ಬಂದು ಭೋಜನವನ್ನು ನೀಡು ಎಂದು ಕೇಳಿದಾಗ, ದ್ರೌಪದಿಯು ಅನನ್ಯ ಭಕ್ತಿಯಿಂದ ಶ್ರೀ ಕೃಷ್ಣನನ್ನು ಹೀಗೆ ಸ್ತುತಿಸುತ್ತಿದ್ದಾಳೆ. ಹೇ ಕೃಷ್ಣ ಕೇಶವನೆ ಮಾಧವ ಜನಾರ್ಧನನೆ। ವಾಮನ ತ್ರಿವಿಕ್ರಮನೆ ಅಚ್ಯುತನೆ ನರಯಣನೆ। ಶಕಟನನು ಧೇನುಕನ ಚಾಣೂರ ಮುಷ್ಟಿಯನು। ಕಂಸನನು ವಧಿಸಿರುವ ಶ್ರೀಕೃಷ್ಣ ರಕ್ಷಿಪುದು॥೧೬೪೭॥ ಮಮಪ್ರಾಣ ಪಾಂಡವರು ಎಂಬುವಾ ಬಿರುದನ್ನು । ಹೊತ್ತಿರುವ ನಿನ್ನಯಾ ಪ್ರಾಣಗಳು ಐಯ್ದುಗಳು । ನೋಯುತಿರೆ ಸುಮ್ಮನೇ ಇರುತಿಪುದು ಯೋಗ್ಯವೇ । ಬೇಗನೇ ಬಾ ಎಂದು ಆರ್ತದಲಿ ಕೂಗಿದಳು ॥೧೬೬೦॥ ಹೇ ಅಣ್ಣ, ಹೇ ಕೃಷ್ಣ ಬೇಗ ಬಾ ಎಂದು । ಗಗನವನು ಭೇದಿಸುವ ಸ್ವರದಲ್ಲಿ ಕೂಗುತಿರೆ ನಾದವದು ಇರುಳಿನಲಿ ತೀವ್ರದಲಿ ಸಾಗುತಲಿ । ದ್ವಾರಕೆಯ ಕೃಷ್ಣನಾ ಹೃದಯವನು ತಾಗಿದುದು ॥೧೬೬೨॥ ಆಗ ಶ್ರೀಕೃಷ್ಣ ಬಂದು, ಅಕ್ಷಯ ಪಾತ್ರೆಯಲ್ಲಿಯ ಒಂದು ಅಗಳು ಅನ್ನವನ್ನು ತಿನ್ನಲು, ದೂರ್ವಾಸ ಋಷಿ ಸಹಿತ ಹದಿನಾಲ್ಕು ಲೋಕಗಳು ಸಂತೃಪ್ತಗೊಂಡವು. ಪಾಂಡವರನ್ನು ಮತ್ತು ದ್ರೌಪದಿಯನ್ನು ಶ್ರೀಕೃಷ್ಣ ಸಂತೈಸಿ ದ್ವಾರಕೆಗೆ ತೆರಳುತ್ತಾನೆ. ಈ ಕಥಾಭಾಗಗನ್ನು ಬಹು ರಸವತ್ತಾಗಿ ಮತ್ತು ಮನಕರಗುವಂತೆ ರಚಿಸಲಾಗಿದೆ.

ಶೃಂಗಾರರಸನಿರೂಪಣೆಗೆ ಅರ್ಜುನ ಮತ್ತು ಊರ್ವಶಿಯರ ಪ್ರಣಯ ಪ್ರಸಂಗ ನಿರೂಪಣೆಯು ನಿದರ್ಶನವಾಗಿದೆ. ಊರ್ವಶಿಯು ಅರ್ಜುನನನ್ನು ಮೋಹಿಸಿ ಅವನ ಅರಮನೆಗೆ ಬರುವಾಗ ಆಕೆಯ ಸೌಂದರ್ಯದ ವರ್ಣನೆಯನ್ನು ನೋಡಿ—
ಚಂದಿರನೆ ಕರಗುತಲಿ ಎರಕವನು ಹೊಯ್ದಂತೆ । ವಧುವಿನಾ ರೂಪದಲಿ ಧರೆಗಿಳಿದು ಬಂದಿಹಳೊ । ಜಗದಖಿಲ ಸೌಂದರ್ಯ ಸೇರಿಸುತ ಪರಬ್ರಹ್ಮ । ನಿರ್ಮಿಸಿದ ಪುತ್ಥಳಿಯೊ ಎಂಬಂತೆ ಹೊಳೆದಿಹಳು ॥೫೪೭॥ ಪರಶಿವನ ತಪವನ್ನು ಕೆಡಿಸಲಿಕೆ ಮನ್ಮಥನು । ನಿರ್ಮಿಸಿದ ಮೋಹಿನಿಯೊ, ಕ್ರೂರಲಗೊ ಎಂಬಂತೆ । ಹೊಚ್ಚ ಹೊಸ ಯೌವ್ವನದ ಲಾವಣ್ಯ ರಸದಿಂದ । ತುಳುಕುತಿಹ ತನುವಿಂದ ಊರ್ವಶಿಯು ಮೆರೆದಿಹಳು ॥೫೪೮॥ ಎಂದು ಮನಸಂಬುಗುವಂತೆ ವರ್ಣಿಸಲಾಗಿದೆ. ಪ್ರಣಯ ಭಿಕ್ಷೆಯನ್ನು ಬೇಡಿ ಬಂದ ಊರ್ವಶಿಗೆ ಅರ್ಜುನನು ನೀನು ನನ್ನ ಪೂರ್ವಜನಾದ ಪೃಥುವಿನ ಪತ್ನಿ ನನಗೆ ತಾಯಿಯ ಸಮಾನ 'ಮಾತೃದೇವೋಭವ' ಎಂಬಂತೆ. ಇದು ಸಲ್ಲದು ಎಂದು ಹೇಳಿದಾಗ ಊರ್ವಶಿಯು ಕುಪಿತನಾಗಿನಿಯಂತೆ ಘೂತ್ಕರಿಸಿ ಹೇಳಿದ ಮಾತಿನ ವೈಖರಿಯನ್ನು ನೋಡಿ—

ಕೋಪಾಗ್ನಿ ಹೊತ್ತುತಲಿ ಧಗಧಗನೆ ಉರಿಯುತಲಿ । ದೇಹವನು ಆಪಾದ ಮಸ್ತಕದಿ ವ್ಯಾಪಿಸುತ । ಬಾಲಕವಿ ಕೆಂಪಿನಲಿ ಮುಖಕೆಂಡಮಾಗುತಲಿ । ಕಣ್ಣುಗಳ ಕೆಂಡಗಳ ಕಿಡಿಗಳನು ಕಾರುತಲಿ । ಕಂಪಿತದ ಕಂಠದಲಿ ನಡುಗುತಲಿ ಅಧರದಲಿ । ಉಕ್ಕುತಿಹ ಕೋಪದಲಿ ಊರ್ವಶಿಯು ನುಡಿದಿಹಳು ॥೫೭॥ ಊರ್ವಶಿಯು ಅರ್ಜುನನಿಗೆ ಶಾಪವನ್ನು ಕೊಡುವ ನಿಂದನೆಯ ನುಡಿಗಳನ್ನು ಗಮನಿಸಿ ಹೇ ಮರ್ತ್ಯಲೋಕದಾ ಹುಳುಜಂತು ಪಾರ್ಥನೆ । ಒಲಿಯುತಲಿ ಬಂದಿರುವ ಹೆಣ್ಣನ್ನು ಧಿಕ್ಕರಿಪ । ನೀ ಕಾಳ ಘೂಳನಿಹೆ ಖೂಳನಿಹೆ ಹೀನನಿಹೆ । ಭಂಡನಿಹೆ ಷಂಡನಿಹೆ ॥೫೮॥ ಎಂದು ಹೇಳುತ್ತ, ನಿಮ್ಮಯಾ ವರಭರತ ವರುಷದಾ ಸೀಮೆಯಲಿ । ವರುಷವೊಂದು ಕಾಲವನು ನಪುಂಸಕನಾಗುತಲಿ । ಜನರುಗಳು ನೋಡುತಲಿ ನಗುತಲಿಹ ಪರಿಯಲ್ಲಿ । ಚರಿಸುವುದು ಎನ್ನುತಲಿ ಶಾಪವನು ಇತ್ತಿಹಳು ॥೫೯॥ ಈ ಪ್ರಸಂಗವು ಶೃಂಗಾರಾತ್ಮಕವಾಗಿದ್ದು ಬಹು ಸೊಗಸಾಗಿ ವರ್ಣಿಸಲ್ಪಟ್ಟಿದೆ.

ಘೋಷಯಾತ್ರೆಯ ಕಾಲದಲ್ಲಿ, ದುರ್ಯೋಧನನನ್ನು ಚಿತ್ರರಥ ಗಂಧರ್ವ ಬಂಧಿಸಿದಾಗ, ಧರ್ಮರಾಜನು ಭೀಮಾರ್ಜುನರಿಗೆ, ದುರ್ಯೋಧನನ ಬಂಧನವನ್ನು ಬಿಡಿಸಲಿಕ್ಕೆ ಹೇಳುತ್ತಾನೆ ಆದರೆ ಇಬ್ಬರೂ ಒಪ್ಪುವದಿಲ್ಲ. ಆಗ ಧರ್ಮರಾಜನು ಹೇಳುವ ರಾಜನೀತಿಯ ಮಾತನ್ನು ನೋಡಿರಿ 'ಮಾನನಿಧಿ ಕುರುಪತಿಯು ಎಮ್ಮಯಾ ತಮ್ಮನಿಹ । ಪರರುಗಳು ಕಲಹಕ್ಕೆ ಬಂದೊಡೆಯು ನಾವುಗಳು । ನೂರೈವರಿರುತಿಹೆವು ನಮ್ಮೊಳಗೆ ಜಗಳಕ್ಕೆ ನಾವುಗಳು ಐವರೂ ನೂರ್ವರುಗಳವರೆಂದ' ॥೧೮೭೮॥ ಎಂದು ಹೇಳುತ್ತಾನೆ ಎಂದರೆ ಪರರು ನಮ್ಮೊಡನೆ ಯುದ್ಧಕ್ಕೆ ಬಂದರೆ ನಾವು ಕೌರವರು ಕೂಡಿಯೇ ನೂರಾಐಯ್ದು ಜನರು. ಆದರೆ ನಮ್ಮೊಳಗೆ ಕಲಹವಾದರೆ, ನಾವುಗಳು ಐಯ್ದು ಅವರು ನೂರು ಬೇರೆ ಎಂದು ಹೇಳುತ್ತಾನೆ.

ಹೀಗೆ ಇಲ್ಲಿ ಶೃಂಗಾರ, ವೀರ, ರೌದ್ರ ಕರುಣೆ–ಭಕ್ತಿ ಮೊದಲಾದ ನವರಸಗಳ ಸನ್ನಿವೇಶಗಳನ್ನು, ಸವಿಸ್ತಾರವಾಗಿ, ಹೃದಯಸ್ಪರ್ಶಿಯಾಗಿ ವರ್ಣಿಸಲಾಗಿದೆ. ವಾಚಕರು ಓದಿಯೇ ಸವಿಯಬೇಕಾದುದು ಸೂಕ್ತವಾಗಿದೆ.

## ವಿರಾಟಪರ್ವ

ವಿರಾಟಪರ್ವವು ೪೩೨ ಪದ್ಯಗಳನ್ನು ಒಳಗೊಂಡಿದೆ. ಪಾಂಡವರು ಬೇರೆ ಬೇರೆ ವೇಷಗಳಲ್ಲಿ ವಿರಾಟರಾಜನಲ್ಲಿ ಬಂದು ಆಶ್ರಯವನ್ನು ಪಡೆಯುತ್ತಾರೆ. ಧರ್ಮರಾಜನು ಪುರೋಹಿತನಾಗಿ, ಭೀಮನು ಅಡಿಗೆಯವನಾಗಿ ಅರ್ಜುನನು ನಾಟ್ಯ ಕಲಿಸುವವನಾಗಿ, ನಕುಲ ಸಹದೇವರು ಅಶ್ವಪಾಲಕ ಮತ್ತು ಗೋಪಾಲಕರಾಗಿ ಮತ್ತು ಸೈರಂಧ್ರಿಯಾಗಿ ದ್ರೌಪದಿಯು ಸುದೇಷ್ಣೆಯ ಸೇವೆಯನ್ನು ಮಾಡುತ್ತಾ ವಾಸಿಸುತ್ತಾರೆ. ಕೀಚಕನು ದ್ರೌಪದಿಯನ್ನು ಕಾಮಮೋಹಿತನಾಗಿ, ತನ್ನ ಅರಮನೆಗೆ ಕಳುಹಿಸುವಂತೆ ಸುದೇಷ್ಣೆಗೆ ಹೇಳುತ್ತಾನೆ. ಸುದೇಷ್ಣೆಯು ಪರಸ್ತ್ರೀಯ ಮೋಹ ಬೇಡ ಎಂದು ಹಿತದ ಮಾತನು ಹೇಳುತ್ತಾಳೆ. ಆಗ ಕೀಚಕನು ಆ ಗೊಡ್ಡುಧರ್ಮಗಳ ಪಾಪಗಳ ಪುಣ್ಯಗಳ।ನಾನೊಂದು ಯೋಚಿಸೆನು ಲೆಕ್ಕಿಸೆನು ಈ ಕ್ಷಣದಿ । ಕಾಮದಬಾಧೆಯಲಿ ಚಿತ್ತದಲಿ ಕಾಣಿಸದು । ಅವಳನ್ನು ಕಳುಹುವುದು ಇಲ್ಲದಿರೆ ಸಾಯುವೆನು॥ಎಂದು ಹೇಳುತ್ತಾನೆ. ಮಧುವನ್ನು ತರಲಿಕ್ಕೆ ಕೀಚಕನು ಅರಮನೆಗೆ ಸುದೇಷ್ಣೆಯು ದ್ರೌಪದಿಯನ್ನು ಕಳುಹುತ್ತಾಳೆ. ದ್ರೌಪದಿಯ ಅರಮನೆಗೆ ಬರಲು ಕೀಚಕನು ಅವಳ ಮೇಲೆ ಬಲಾತ್ಕಾರ ಮಾಡುತ್ತಾನೆ. ಆಗ ದ್ರೌಪದಿಯು ಕೊಸರಿಕೊಂಡು ಹೋಗಿ ಭೀಮನಿಗೆ ತನ್ನ ಅಳಲನ್ನುದುಃಖವನ್ನು ತೋಡಿಕೊಳ್ಳುತ್ತಾಳೆ. ಆದರೆ ಭೀಮನುಅಣ್ಣನಾದ ಧರ್ಮರಾಜನ ಆಜ್ಞೆಯನ್ನು ಮೀರಲಾರದೆ, ನನ್ನಿಂದ ಏನನ್ನು ಮಾಡುವುದು ಸಾಧ್ಯವಿಲ್ಲ ಎಂದು ಹೇಳಿದಾಗದ್ರೌಪದಿಯ ಕೋಪವು ಪರಾಕಾಷ್ಠತೆಯನ್ನುಮೀರುತ್ತಾ 'ಹೆಂಡತಿಯ ಮಾನವನು ಎದುರಿನಲಿ ಕಳೆವುದನು।ಕಣ್ಣಾರೆಕಾಣುತಲಿ ಸುಮ್ಮನೇ ಕುಳಿತಿರುವ । ನೀವೇನು ಗಂಡರೊ ಷಂಡರೋ ಹೇಳುವುದು । ಎನ್ನುತಲಿ ಸಿಡಿಲಂತೆ ನುಡಿದಿಹಳು ಅಚ್ಚಗನ್ನಡ ಗಂಡು ಭಾಷೆಯಲ್ಲಿ ನುಡಿದಿದ್ದಾಳೆ. ಆಗ ಭೀಮನ ವಜ್ರಹೃದಯ ಕರಗಿ, ದ್ರೌಪದಿಯನ್ನು ಅಪ್ಪಿಕೊಂಡು, ಆಕೆಯ ಕಣ್ಣೀರನ್ನು ಒರೆಸಿ ಭೀಮನು ಹೇಳುವ ಗಂಡು ನುಡಿಗಳ ಬೇಡಗನ್ನು ನೋಡಿರಿ 'ಮೀರಿದೆನು ಮೀರಿದೆನು ಅಣ್ಣನಾ ಆಜ್ಞೆಯನು ಗೆರೆಯನ್ನು । ಇಂದೆನ್ನ ತಡೆವವರು ಆರಿಲ್ಲ ಜಗದೊಳಗೆ ।

ನೀಚನಾ ಕೀಚಕನ ಖಚಿತವಲಿ ಕೊಲ್ಲುವೆನು ಎಂದು ಸಾಂತ್ವನವಗೊಳಿಸಿ ಕಳುಹುತ್ತಾನೆ. ಮರುದಿವಸ ಭೀಮನು ಹೆಣ್ಣಿನ ವೇಷ ತೊಟ್ಟು ಅರಮನೆಗೆ ಹೋಗಿ ಕೀಚಕನನ್ನು ಕೊಲ್ಲುತ್ತಾನೆ. ಈ ಭಾಗ ಶೃಂಗಾರ, ಕರುಣೆ, ರೌದ್ರ, ವೀರ ರಸಗಳಿಂದ ವರ್ಣಿಸಲ್ಪಟ್ಟು ಒಂದು ರಸ ಘಟ್ಟಿಯಾಗಿದೆ ಮುಂದೆ ಉತ್ತರ ಗೋಗ್ರಹಣ, ಉತ್ತರ ಕುಮಾರನ ಪೌರುಷ ಹಾಸ್ಯಪ್ರಸಂಗ, ವಿರಾಟನು ಧರ್ಮರಾಜನಿಗೆ ಲೆತ್ತ ಪ್ರಹಾರ ಮಾಡುವುದು, ಶ್ರೀ ಕೃಷ್ಣನ ಆಗಮನ, ಅಭಿಮನ್ಯು ಉತ್ತರೆಯರ ವಿವಾಹದಲ್ಲಿ ಈ ಪರ್ವವು ಸುಖಾಂತವಾಗಿ ಕೊನೆಗೊಳ್ಳುತ್ತದೆ. ಈ ಕಾವ್ಯವು ಕುಮಾರವ್ಯಾಸನ ಜಾಡಿನಲ್ಲಿಯೇ ಮತ್ತು ಅವನ ಪ್ರಭಾವದಲ್ಲಿಯೇ ಸಾಗಿದೆ. ವಾಚಕರಿಗೆ ಕುಮಾರವ್ಯಾಸ ಭಾರತದಂತೆಯೇ, ಈ ಈ ಕಾವ್ಯವು ಸಂತೋಷವನ್ನು ಇತ್ತರೆ ನನ್ನ ಶ್ರಮವು ಸಾರ್ಥಕವಾಯಿತು ಎಂದು ಭಾವಿಸುತ್ತೇನೆ.

ಖ್ಯಾತ ಸಾಹಿತಿಗಳಾದ ಮತ್ತು ಕುಮಾರವ್ಯಾಸಭಾರತದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ, ವ್ಯಾಸಭಾರತ' ಎಂಬ ಬೃಹತ್‌ಗ್ರಂಥ ವನ್ನು ಬರೆದಿರುವ ಶ್ರೀ ಎನ್ಕೆ ಕುಲಕರ್ಣಿಯವರು, ಎಂದಿನಂತೆ, ಈ ಗ್ರಂಥಕ್ಕೂ ಸಹ ಅವರು ಮುನ್ನುಡಿಯನ್ನು ಬರೆದು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಅವರಿಗೆ ತುಂಬ ಕೃತಜ್ಞನಾಗಿದ್ದೇನೆ. ದೇವರು ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಗ್ರಂಥ ಪ್ರಕಟಣೆಗೆ ಶ್ರೀ ತಿರುಮಲ ತಿರುಪತಿ ದೇವಸ್ಥಾನದವರು ರೂ ೧೫,೦೦೦/ಗಳನ್ನು ಧನಸಹಾಯ ಮಾಡಿದ್ದಕ್ಕಾಗಿ ನಾನು ಅವರಿಗೆ ತುಂಬ ಕೃತಜ್ಞನಾಗಿದ್ದೇನೆ.

ಪರಮಪೂಜ್ಯರಾದ ಶ್ರೀ ಜಗದ್ಗುರು ಶಂಕರಾಚಾರ್ಯರು, ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಈ ಗ್ರಂಥ ಪ್ರಕಟಣೆಗೆ ರೂ ೩.೦೦೦/ಗಳನ್ನು ಧನಸಹಾಯ ಮಾಡಿ ಆಶೀರ್ವದಿಸಿದ್ದಾರೆ. ನಾನು ಅವರಿಗೆ ಚಿರಋಣಿಯಾಗಿದ್ದೇನೆ. ಅವರ ಪಾದಾರವಿಂದದಲ್ಲಿ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಅನೇಕ ಗಣ್ಯರು ಮಹಾಜನರು ಈ ಗ್ರಂಥಪ್ರಕಟಣೆಗೆ ಧನಸಹಾಯಮಾಡಿದ್ದಾರೆ. ಅವರ ಹೆಸರುಗಳನ್ನು ಗ್ರಂಥದಲ್ಲಿ ಬೇರೆ ಕಡೆಗೆ ಪ್ರಕಟಿಸಲಾಗಿದೆ. ಮತ್ತು ನಾನು ಅವರಿಗೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಈ ಕಾವ್ಯದ ೩ನೇ ಭಾಗವಾದ ಉದ್ಯೋಗಪರ್ವ ಮತ್ತು ಭೀಷ್ಮಪರ್ವವು ಪ್ರಕಟಣೆಗೆ ಸಿದ್ಧವಾಗಿದೆ. ಉದಾರ ದಾನಿಗಳು ೩ನೇಭಾಗದ ಪ್ರಕಟಣೆಗೂ ಸಹ ಧನಸಹಾಯ ಮಾಡಬೇಕಾಗಿ ನಮ್ರ ಪ್ರಾರ್ಥನೆ ಬೇಗನೇ ಪ್ರಕಟಮಾಡಲಿಕ್ಕೆ ಸಹಕಾರಿಯಾಗುತ್ತದೆ.

ಶ್ರೀ ಎಸ್.ಟಿ. ತಡಕೋಡ, ವ್ಯವಸ್ಥಾಪಕರು, ರಾಜಶ್ರೀ ಪ್ರಿಂಟಿಂಗ ಪ್ರೆಸ್, ಧಾರವಾಡ ಮತ್ತು ಅವರ ಸಿಬ್ಬಂದಿ ವರ್ಗದವರು ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪಂಪ, ರನ್ನ, ಕುಮಾರವ್ಯಾಸರ ಘನಪರಂಪರೆಯ ಕನ್ನಡದ ಕಾವ್ಯ ಪ್ರಪಂಚಕ್ಕೆ ನನ್ನ ಅಳಿಲು ಸೇವೆಯ ದ್ಯೋತಕವಾಗಿ, ಈ ಶ್ರೀಮನ್ಮಹಾಭಾರತ ಕಾವ್ಯದ ೨ನೇ ಸಂಪುಟವನ್ನು-ಅರಣ್ಯ ಮತ್ತು ವಿರಾಟಪರ್ವದ ಕಾವ್ಯ ಕುಸುಮವನ್ನು ಕನ್ನಡ ತಾಯಿಯ ಚರಣಾವಿಂದ ದಲ್ಲಿ ಅರ್ಪಿಸುತ್ತೇನೆ. ಸರ್ವರಿಗೂ ಶುಭವಾಗಲಿ, ಮಂಗಲವಾಗಲಿ ಎಂದು ಹಾರೈಸುತ್ತೇನೆ.

ಸರ್ವೇ ಜನಾಃ ಸುಖಿನೋ ಭವಂತು !
ಭದ್ರಂ, ಶುಭಂ, ಮಂಗಲಂ.

ಮಾಳಮಡ್ಡಿ ಧಾರವಾಡ-೭
ತಾ॥ ೧೫-೫-೧೯೯೮

**ಲಕ್ಷ್ಮಣ ವಿರೂಪಾಕ್ಷ ಜೋಶಿ**

# ಪರಿವಿಡಿ


| ಸಂ | ವಿಷಯ | ಪುಟಗಳು |
|---|---|---|
| i) | ಮುನ್ನುಡಿ | i) |
| ii) | ಕವಿನುಡಿ | |

**ಅರಣ್ಯಪರ್ವ**

| | | |
|---|---|---|
| ೧) | ಧರ್ಮರಾಜನು ಸೂರ್ಯನಿಂದ ಅಕ್ಷಯ ಪಾತ್ರೆಯನ್ನು ಪಡೆಯುವುದು | ೧ |
| ೨) | ಭೀಮನು ಕಿಮ್ಮೀರ ರಾಕ್ಷಸನನ್ನು ಕೊಲ್ಲುವುದು | ೫ |
| ೩) | ಶ್ರೀಕೃಷ್ಣನು ಪಾಂಡವರನ್ನು ಕಾಣಲಿಕ್ಕೆ ಬರುವುದು | ೬ |
| ೪) | ಕಣ್ವರ ಆಶ್ರಮದ ಜಂಬೂಫಲ ವೃತ್ತಾಂತ | ೯ |
| ೫) | ಇಂದ್ರಕೀಲ ಪರ್ವತದಲ್ಲಿ ಅರ್ಜುನನ ತಪಸ್ಸು | ೧೫ |
| ೬) | ಪರಶಿವನು ಬೇಡರ ವೇಷದಲ್ಲಿ ಬರುವುದು | ೧೭ |
| ೭) | ಅರ್ಜುನನ ಮತ್ತು ಪರಶಿವನ ಘನಘೋರ ಯುದ್ಧ | ೨೦ |
| ೮) | ಪಶುಪತಿಯು ಅರ್ಜುನಗೆ ಪಾಶುಪತಾಸ್ತ್ರವನ್ನು ಕೊಡುವುದು | ೨೭ |
| ೯) | ಮಾತಲಿಯ ರಥದಲ್ಲಿ ಅರ್ಜುನನು ಸ್ವರ್ಗಕ್ಕೆ ತೆರಳುವುದು | ೨೯ |
| ೧೦) | ಊರ್ವಶಿಯು ಅರ್ಜುನನಿಗೆ ಶಾಪವನ್ನು ಕೊಡುವುದು | ೩೪ |
| ೧೧) | ಬೃಹದಶ್ವಮುನಿಯು ನಳದಮಯಂತಿಯ ಕಥೆಯನ್ನು ವಿಸ್ತಾರವಾಗಿ ಹೇಳುವುದು | ೪೦ |
| ೧೨) | ಧರ್ಮರಾಯನು ಕ್ಷೇತ್ರಯಾತ್ರೆಯನ್ನು ಮಾಡುವುದು | ೫೮ |
| ೧೩) | ಲೋಮಶರು, ಅಗಸ್ತ್ಯ, ವಾತಾಪಿ ಇಲ್ವಲರ ಕಥೆ, ಭಗೀರಥನು ಭೂಲೋಕಕ್ಕೆ ಗಂಗೆಯನ್ನು ತರುವುದು, ಪರಶುರಾಮ ಕಾರ್ತವೀರ್ಯಾರ್ಜುನರ ಕಥೆಯನ್ನು ಹೇಳುವುದು | ೬೧ |
| ೧೪) | ಭೀಮನು ಸೌಗಂಧ ಪುಷ್ಪವನ್ನು ತರಲಿಕ್ಕೆ ತೆರಳುವುದು ಮಾರ್ಗದಲ್ಲಿ ಮಾರುತಿಯ ದರ್ಶನ ಮತ್ತು ಸಂವಾದ | ೭೫ |
| ೧೫) | ಭೀಮನು ಜಟಾಸುರನನ್ನು ಮಣಿಮಾನ ರಾಕ್ಷಸನನ್ನು ಕೊಲ್ಲುವುದು | ೮೦ |
| ೧೬) | ಅರ್ಜುನನ ಆಗಮನ ಮತ್ತು ಪಾಶುಪತಾಸ್ತ್ರವನ್ನು ಪಡೆದ ವೃತ್ತಾಂತ, ನಿವಾತಕವಚರ ಯುದ್ಧದ ವೃತ್ತಾಂತವನ್ನು ಹೇಳುವುದು | ೮೩ |
| ೧೭) | ಶ್ರೀಕೃಷ್ಣನು ಕಾಮ್ಯಕ ವನಕ್ಕೆ ಬಂದು ಪಾಂಡವರನ್ನು ಸಾಂತ್ವನಗೊಳಿಸಿ ತೆರಳುವುದು | ೯೪ |

೧೮) ದೂರ್ವಾಸನು ರಾತ್ರಿಯಲ್ಲಿ ಭೋಜನಕ್ಕೆ ಪಾಂಡವರ ಆಶ್ರಮಕ್ಕೆ ಬರುವುದು. ದ್ರೌಪದಿಯು ಕೃಷ್ಣನನ್ನು ಸ್ತುತಿಸುವುದು. ಕೃಷ್ಣನು ಬಂದು ದೂರ್ವಾಸರನ್ನು ಸಂತುಷ್ಟಗೊಳಿಸುವುದು ೧೦೯

೧೯) ದುರ್ಯೋಧನನ ಘೋಷಯಾತ್ರೆ ಚಿತ್ರರಥ ಗಂಧರ್ವ ದುರ್ಯೋಧನನನ್ನು ಬಂಧಿಸುವುದು ಮತ್ತು ಧರ್ಮರಾಜನು ಬಿಡಿಸುವುದು ೧೦೭

೨೦) ದುರ್ಯೋಧನನು ಪ್ರಾಯೋಪವೇಶನ ವ್ರತವನ್ನು ಕೈಗೊಳ್ಳುವುದು ೧೨೩

೨೧) ಜಯದ್ರಥನು ದ್ರೌಪದಿಯನ್ನು ಅಪಹರಿಸುವುದು. ಭೀಮಾರ್ಜುನರು ಜಯದ್ರಥನನ್ನು ಜಯಿಸಿ ಅಪಮಾನಗೊಳಿಸುವುದು ೧೨೯

೨೨) ಮಾರ್ಕಂಡೇಯರು ಧರ್ಮರಾಜನಿಗೆ. ಶ್ರೀರಾಮ ಚರಿತೆಯನ್ನು ಮತ್ತು ಸಾವಿತ್ರಿ ಸತ್ಯವಾನರ ಕಥೆಯನ್ನು ವಿಸ್ತಾರವಾಗಿ ಹೇಳಿದುದು ೧೩೫

೨೩) ಸಾರಂಗಮೃಗವು ಅರುಣಿಯನ್ನು ಕೊಂಡೊಯ್ಯುವುದು. ಧರ್ಮರಾಜನು ಬೆನ್ನಟ್ಟುವುದು. ಭೀಮಾಗಿ ಸೋದರರು ಕೊಳದ ನೀರು ಕುಡಿದು ಸಾಯುವುದು. ಯಕ್ಷನ ಪ್ರಶ್ನೆಗಳಿಗೆ ಧರ್ಮರಾಯನ ಉತ್ತರ ಸತ್ತ ಸೋದರರು ಸುಪ್ರಾಣರಾಗುವುದು

## ವಿರಾಟ ಪರ್ವ


| ಸಂ | ವಿಷಯ | ಪುಟಗಳು |
|---|---|---|
| ೧) | ಪಾಂಡವರು ವಿರಾಟರಾಜನಲ್ಲಿ ಆಶ್ರಯ ಪಡೆಯುವದು | ೧೪೬ |
| ೨) | ಕೀಚಕನು ದ್ರೌಪದಿಯನ್ನು ಕಂಡು ಮೋಹಿತನಾಗುವುದು | ೧೪೭ |
| ೩) | ದ್ರೌಪದಿಯು ಕೀಚಕನ ಮಂದಿರಕ್ಕೆ ಹೋಗುವುದು | ೧೪೮ |
| ೪) | ದ್ರೌಪದಿಯು ತನ್ನ ದುಃಖವನ್ನು ಭೀಮನಲ್ಲಿ ಹೇಳುವುದು | ೧೪೯ |
| ೫) | ಭೀಮನೂ ದ್ರೌಪದಿಯನ್ನು ಸಂತೈಸುವುದು | ೧೫೦ |
| ೬) | ಭೀಮನು ಕೀಚಕನನ್ನು ಕೊಲ್ಲುವುದು | ೧೫೧ |
| ೭) | ಉತ್ತರ ಗೋಗ್ರಹಣ ಮತ್ತು ಉತ್ತರನ ಪೌರುಷ | ೧೫೩ |
| ೮) | ಅರ್ಜುನನು ಕೌರವರನ್ನು ಜಯಿಸುವುದು | ೧೫೯ |
| ೯) | ವಿರಾಟರಾಜನು ಲೆತ್ತದಿಂದ ಧರ್ಮರಾಜನ ಹಣೆಯನ್ನು ಒಡೆಯುವುದು | ೧೬೪ |
| ೧೦) | ಪಾಂಡವರು ವೇಷಕಳಚಿ ಪ್ರಕಟವಾಗುವದು | ೧೬೭ |
| ೧೧) | ಶ್ರೀಕೃಷ್ಣನ ಆಗಮನ | ೧೭೦ |
| ೧೨) | ಅಭಿಮನು. ಮತು ಉತ.ರೆಯ ವಿವಾಹ | ೧೭೧ |

## ದಾನಿಗಳ ಹೆಸರುಗಳು

| | |
|---|---|
| ಶ್ರೀ ರವಿ ದೇಶಪಾಂಡೆ ಧಾರವಾಡ | ರೂ ೫೦೦-೦೦ |
| ಶ್ರೀ ಜಿ ಎ ದೇಸಾಯಿ ಹುಬ್ಬಳ್ಳಿ | ರೂ ೧೦೦-೦೦ |
| ಶ್ರೀ ಆರ್ ಜಿ ಯರಗಡ್ಡಿ ಬೆಳಗಾಂವ | ರೂ ೧೦೫-೦೦ |
| ಶ್ರೀ ವಾಮನ ಬೇಂದ್ರೆ ಧಾರವಾಡ | ರೂ ೬೦-೦೦ |
| ಶ್ರೀ ಎಚ್ ರಂಗರಾವ ಹೊಸಪೇಟ | ರೂ ೨೦೦-೦೦ |
| ಶ್ರೀ ಎಸ್ ಎಮ ಪದಕಿ ಧಾರವಾಡ | ರೂ ೧೧೦-೦೦ |
| ಶ್ರೀ ಎಸ್ ಎಮ್ ಶೇಟ ಬೆಂಗಳೂರು | ರೂ ೧೫೦-೦೦ |
| ಶ್ರೀ ಭೀಮಸೇನ ಮಧ್ವರಾವ ಕುಲಕರ್ಣಿ | ರೂ ೧೦೦-೦೦ |
| ಶ್ರೀ ವ್ಹಿ ಎನ್ ಜೋಶಿ ಹುಬ್ಬಳ್ಳಿ | ರೂ ೧೦೦-೦೦ |
| ಶ್ರೀ ಮಂಜುನಾಥ ಎಮ್ ನಾಯಕ ಹಳದಿಪುರ | ರೂ ೧೫೦-೦೦ |
| ಶ್ರೀ ಎಸ್ ಜಯರಾಮು ಬೆಂಗಳೂರ | ರೂ ೨೦೦-೦೦ |
| ಶ್ರೀ ಎಸ್ ವ್ಹಿ ಕುಲಕರ್ಣಿ ಸಿಂದಗಿ | ರೂ ೨೦೦-೦೦ |
| ಶ್ರೀ ಮಲ್ಲಣ್ಣ ಕಟ್ಟೀಮನಿ ಯಾದಗಿರಿ | ರೂ ೬೦-೦೦ |
| ಶ್ರೀ ವ್ಹಿ ಎನ್ ಹನುಮಂತಗೌಡ ಬೈಲಹೊಂಗಲ | ರೂ ೧೦೦-೦೦ |
| ಶ್ರೀ ಮಿಶ್ರಾ ಧಾರವಾಡ | ರೂ ೩೦೦-೦೦ |
| ಶ್ರೀ ವ್ಹಿ ಪಿ ಬಳಿಗಾರ, ಹಿರೇಬಾಗೇವಾಡಗಿ | ರೂ ೧೦೦-೦೦ |
| ಶ್ರೀ ಜಿ ಎಮ್ ಗುಮಾಸ್ತೆ, ಔರಂಗಾಬಾದ | ರೂ ೫೦೦-೦೦ |
| ಶ್ರೀ ಕೆ ಆರ್ ಜೋಶಿ ಆಲಮಟ್ಟಿ | ರೂ ೨೨೫-೦೦ |
| ಶ್ರೀ ವಾಯ್ ಎಸ್ ಸಣ್ಣತೋಟಪ್ಪ ತಾಂಬ್ರಹಳ್ಳಿ | ರೂ ೧೦೦-೦೦ |
| ಶ್ರೀ ಸಾಯಣ್ಣಾ ವೆಂಕಪ್ಪ ಅಕ್ಕಿ ಬಂದಳ್ಳಿ | ರೂ ೬೦ ೦೦ |
| ಶ್ರೀ ಎನ್ ಬಿ ಪವಾರ ಯಾದಗಿರಿ | ರೂ ೬೦-೦೦ |
| ಶ್ರೀ ಪರಮೇಶ್ವರ ರಾಮಯ್ಯ ಹೆಗಡೆ ಹೊಸಕೊಪ್ಪ | ರೂ ೬೦-೦೦ |
| ಶ್ರೀ ನಾರಾಯಣ ದೇವರು ಭಟ್ಟ ಹಂದ್ಯಾನೆ | ರೂ ೬೦-೦೦ |
| ಶ್ರೀ ಕೆ ರಾಮಚಂದ್ರ ಶಾಸ್ತ್ರಿ, ರಾಯದುರ್ಗ | ರೂ ೧೦೦-೦೦ |
| ಶ್ರೀ ಕೆ ವ್ಹಿ ಹಾವನೂರು ಧಾರವಾಡ | ರೂ ೨೦೧-೦೦ |
| ಶ್ರೀ ರಾಮಕೃಷ್ಣ ಎನ್ ಕೆ ರಾಮಯ್ಯ ಮೈಸೂರು | ರೂ ೫೦೧-೦೦ |

॥ ಶ್ರೀ ॥

# ಶ್ರೀ ಮಹಾಭಾರತ ಕಾವ್ಯ

## ಅರಣ್ಯ ಪರ್ವ

### ಪ್ರಾರ್ಥನೆ

ಜನಮೇಜಯ ಕ್ಷಿತಿಪ ಕೇಳುವುದು ಪಾಂಡವರು
ಕಾನನಕೆ ನಡೆಯುತಿರೆ ಅಪರಿಮಿತ ಪೌರಜನ
ದ್ವಿಜವೃಂದ ತಂಡದಲಿ ಬೆನ್ನಿನಲಿ ಬರುತಲಿರೆ
ಧರ್ಮಜನು ಕರಮುಗಿದು ಪುರಜನಕೆ ನುಡಿದಿಹನು ॥೧॥

ನಾವುಗಳು ಸರ್ವಸ್ವ ರಾಜ್ಯವನು ಕಳೆಕೊಂಡು
ಕಷ್ಟ ಬಡುವರಾಗುತಲಿ ಕಾನನಕೆ ನಡೆದಿಹೆವು
ಆ ಭೀಷ್ಮ ವರವಿದುರ ಇಲ್ಲಿಯೇ ಇರುತಿಹರು
ನೀವುಗಳು ಇಲ್ಲಿಯೇ ಇಹುದೆಂದು ನುಡಿದಿಹನು ॥೨॥

**ದ್ವಿಜವೃಂದ ಸಲುಹಲಿಕೆ ಸೂರ್ಯನನು ಭಜಿಸುತಲಿ ।**
**ಧರ್ಮಜನು ಅಕ್ಷಯದ ಪಾತ್ರೆಯನು ಪಡೆದಿಹನು ॥**

ಮಂತ್ರಿಗಳು ಪುರಜನರು ನಾಯಕರು ತೆರಳುತಿರೆ
ದ್ವಿಜವೃಂದ ಧರ್ಮಜನೆ ನೀನೆಮ್ಮ ಜೀವವಿಹೆ
ನಿನ್ನನ್ನು ತೊರೆಯುತಲಿ ನಾವೆಂತು ಜೀವಿಪೆವು
ಎನ್ನುತಲಿ ಧರ್ಮಜನ ಬೆನ್ನಿನಲಿ ನಡೆದಿಹರು ॥೩॥

ಲಕ್ಷೋಪಲಕ್ಷದಾ ವಿಪ್ರರನು ನೋಡುತಲಿ
ಧರ್ಮಜನು ಅಗಣಿತದ ದ್ವಿಜವೃಂದ ಬರುತಿಹುದು
ಸಕಲರಿಗೆ ಅನ್ನವನು ಈಯುವುದು ಹೇಗೆಂದು
ಋಷಿವರನ ಗುರುವರನ ಧೌಮ್ಯನನು ಕೇಳಿದನು ॥೪॥

ಜಗದೊಳಿಹ ಧಾನ್ಯಗಳು ಸಸ್ಯಗಳು ಔಷಧಿಯು
ಸೂರ್ಯನಾ ಶಕ್ತಿಯಲಿ ಸಕಲವೂ ಬೆಳೆಯುವವು
ಧರ್ಮಜನೆ ಅನ್ನಕ್ಕೆ ಮೂಲನಿಹ ಸೂರ್ಯನನು
ಭಕುತಿಯಲಿ ಭಜಿಸುವುದು ಎಂದಿಹನು ಮುನಿಧೌಮ್ಯ ॥೫॥

ಹೇ ಸೂರ್ಯ ಭಾನುವೇ ಆದಿತ್ಯ ಭಾಸ್ಕರನೆ
ಹೇ ಮಿತ್ರ ಸವಿತೃವೆ ಕೋಟಿ ಕಿರಣಾನ್ವಿತನೆ
ಜಗದೊಳಿಹ ಜೀವಿಗಳ ರಾಶಿಗಳ ಪ್ರಾಣವಿಹ
ಹೇ ಕೋಟಿ ಪ್ರಕಾಶನೆ ಕರುಣಿಪುದು ಎಂದಿಹನು ॥೬॥

ಸಶರೀರನಾಗುತಲಿ ಬೆಳಗುತಲಿ ವರಸೂರ್ಯ ಇಳಿಯುತಿರೆ
ಧರ್ಮಜನು ದಿನಪನಾ ಚರಣಕ್ಕೆ ಎರಗುತಲಿ
ಅಪರಿಮಿತ ವಿಪ್ರರಿಗೆ ಅನ್ನವನು ಈಯಲಿಕೆ
ಶಕ್ತಿಯನು ಈಯುವುದು ಎನ್ನುತಲಿ ನುಡಿದಿಹನು ॥೭॥

ಹೊಳಹೊಳೆವ ಥಳಥಳಿಪ ತಾಮ್ರದಾ ಪಾತ್ರೆಯನು
ಧರ್ಮಜನ ಕರದೊಳಗೆ ಇರಿಸುತಲಿ ದಿನಪತಿಯು
ಉಪವಾಸವಿರುತಿರ್ದು ಪಾತ್ರೆಯನು ಪೂಜಿಸಲು
ಅಕ್ಷಯದ ಅನ್ನವನು ಈಯುವುದು ಎಂದಿಹನು ॥೮॥

ಅಕ್ಷಯದ ಪಾತ್ರೆಯನು ಕೊಳ್ಳುತಲಿ ಯಮಸೂನು
ದ್ರೌಪದಿಗೆ ಈಯುತಲಿ ಶಾಗ್ಯದ ಅನ್ನವನು
ಪಾತ್ರೆಯಲಿ ಇರಿಸುತಿರೆ ಅಕ್ಷಯದ ಅನ್ನವನು
ಪರ್ವತದ ರಾಶಿಯಾ ಪರಿಯಲ್ಲಿ ಇತ್ತಿಹುದು ॥೯॥

ವಿಧವಿಧದ ಪಕ್ವಾನ್ನ ಭಕ್ಷ್ಯಗಳ ಭೋಜ್ಯಗಳ
ಈಯುತಿರೆ ಯಮಸುತನು ಸಕಲರಿಗೆ ಭೂಸುರರ್ಗೆ
ಸುಗ್ರಾಸ ಭೋಜನವನೀಯುತಿರೆ ಸಕಲರೂ
ಸಂತಸದಿ ಸವಿಯುತಲಿ ಸಂತೃಪ್ತರಾಗಿಹರು ॥೧೦॥

ಬಳಿಕಲಾ ಯಮಸೂನು ತನ್ನಯಾ ಮೇಳದಲಿ
ಸರಸತಿಯು ಯಮುನೆಯಾ ನದಿಗಳನು ದಾಂಟುತಲಿ
ದಿನಮೂರು ಕಳೆಯುತಿರೆ ಮನತಣಿಪ ಸುಂದರದ
ಚೆಲುವಿನಾ ಕಾಮ್ಯಕದ ವನವನ್ನು ಹೊಕ್ಕಿಹನು ॥೧೧॥

**ಅಂಧನೃಪ ನಿಂದಿಸಲು ಮುನಿಸಿಕೊಂಡು ವರವಿದುರ ।**
**ಕಾಮ್ಯಕದಿ ಪಾಂಡವರ ಬಳಿಯಲ್ಲಿ ಬಂದಿಹನು ॥**

ಹೇ ಪರೀಕ್ಷಿತ ತನಯ ಕೇಳುವುದು ಬಳಿಕಿನಲಿ
ಅತ್ತಲಾ ಪಾಂಡವರು ಕಾನನಕೆ ತೆರಳುತಿರೆ
ಇತ್ತಲಾ ಧೃತರಾಷ್ಟ್ರ ಪಾಂಡವರ ವಿಷಯವನು
ಕೌತುಕದಿ ತಿಳಿಯಲಿಕೆ ವಿದುರನನು ಕರೆಸಿದನು ॥೧೨॥

ಹೇ ವಿದುರ ವಿಪಿನಕ್ಕೆ ತೆರಳುವಾ ಸಮಯದಲಿ
ಪಾಂಡವರು ಏನನ್ನು ಮಾಡಿದರು ಹೇಳುವುದು
ಎನ್ನನ್ನು ಮಕ್ಕಳನು ಕೋಪದಲಿ ಶಪಿಸಿದರೆ
ಎಂಬುದನು ಹೇಳುವದು ಎಂದಿಹನು ಅಂಧನೃಪ ॥೧೩॥

ಭೂಪತಿಯೆ ಧರ್ಮಜನು ವಿಚಲಿತನು ವಿಹ್ವಲನು
ಆಗದೆಯೆ ಸ್ಥಿತಪ್ರಜ್ಞ ಸ್ಥಿತಿಯೊಳಗೆ ಇರ್ದಿಹನು
ಪವನಜನು ಕೌರವನ ತೊಡೆಗಳನು ಮುರಿಯುತಲಿ
ಕುರು ಕುಲವನೆಲ್ಲವನು ಒರೆಸುವೆನು ಎಂದಿಹನು ॥೧೪॥

ಫಲಗುಣನು ಕರ್ಣನಾ ಶಿರವನ್ನು ಹಾರಿಸುತ
ಬಾಸಿಂಗ ಕಟ್ಟುವೆನು ಎನ್ನುತಲಿ ನುಡಿದಿಹನು
ದುಶ್ಶಾಸನಾ ಖಳನ ರಕುತದಲಿ ಕೇಶವನು
ಅದ್ದುತಲಿ ಕಟ್ಟುವೆನು ಎಂದಿಹಳು ದ್ರೌಪದಿಯು ॥೧೫॥

ಹದಿಮೂರು ವರುಷಗಳ ವನವಾಸ ಕಳೆಯುತಲಿ
ಹಸ್ತಿನೆಗೆ ಐತಂದು ಪಾಂಡವರು ಸಮರದಲಿ
ಕುರುವಂಶವೆಲ್ಲವನು ನಾಶವನು ಖಂಡಿತದಿ
ಮಾಡುವರು ಎಂದಿಹನು ವರ ವಿದುರ ಭೂಪತಿಗೆ ॥೧೬॥

ವಿನಾಶ ಕಾಲದಲಿ ವಿಪರೀತ ಬುದ್ಧಿಯದು
ಎಂಬಂತೆ ಎಮ್ಮಯಾ ಬುದ್ಧಿಯದು ಮಸುಕಾಯ್ತು
ದ್ರೌಪದಿಯೆ ಎಲ್ಲಕ್ಕೆ ಕಾರಣಳು ಇರುತಿಹಳು
ನಗೆಹೋಗಿ ಹೊಗೆಯಾಯ್ತು ಎಂದಿಹನು ಭೂಪತಿಯು ॥೧೭॥

ಮಕ್ಕಳಾ ಆಟಿಕೆಯು ಮೃತ್ಯುವದು ಎಮಗಾಯ್ತು
ಲೋಕದಲಿ ಪಾಂಡವರ ಮೀರಿಸುವ ವೀರರನು
ನಾ ಕಾಣೆ ನಮ್ಮಯಾ ನಾಶವದು ಖಂಡಿತವು
ಹೇ ವಿದುರ ಪರಿಹಾರ ಸೂಚಿಪುದು ಎಂದಿಹನು ॥೧೮॥

ಪಾಂಡವರ ಕರೆಸುತಲಿ ರಾಜ್ಯವನು ಭಾಗಿಸುತ
ಸಮಅರ್ಧ ರಾಜ್ಯವನು ಆದರದಿ ಈಯುತಲಿ
ದ್ರೌಪದಿಯ ಕ್ಷಮೆಯನ್ನು ಕೇಳುತಲಿ ಪ್ರೀತಿಯಲಿ
ಕೌರವರು ಪಾಂಡವರು ಸರಸದಲಿ ಬಾಳುವುದು ॥೧೯॥

ಮೊದಲಿಂಗೆ ಈ ಶಕುನಿ ಕರ್ಣರನು ದುರುಳರನು
ಹಸ್ತಿನೆಯ ಪುರದಿಂದ ದೂರದಲಿ ಅಟ್ಟುವುದು
ಇವರುಗಳ ಸಂಗದಲಿ ಮಾತುಗಳ ಕೇಳುತಲಿ
ನಿನ್ನ ಮಗ ಕೌರವನು ಕೆಟ್ಟಿಹನು ಎಂದಿಹನು ॥೨೦॥

ನಿನ್ನ ಮಗ ಇದಕೊಪ್ಪದಿರ್ದೊಡೆಯು ಮಗನನ್ನು
ಯೋಚನೆಯ ಮಾಡದಲೆ ಕೂಡಲೇ ತ್ಯಜಿಸುವುದು
ವಂಶವನು ದೇಶವನು ಉಳಿಸಲಿಕೆ ಮಗನನ್ನು
ತ್ಯಜಿಸಿದರೆ ಕೇಡಿಲ್ಲ ಎಂದಿಹನು ವರವಿದುರ ॥೨೧॥

ಕೌರವನು ಕೇಳುತಲಿ ಕೋಪದಲಿ ಕುದಿಯುತಲಿ
ಮನೆಮುರಕ ಕುಹಕನಿಹ ಕಪಟಿಯಿಹ ಈ ವಿದುರ
ಮನದೊಳಗೆ ಪಾಂಡವರ ಹಿತವನ್ನು ಬಯಸುತಿಹ
ವಿದುರನನು ನಂಬದಿರು ಎನ್ನುತಲಿ ನುಡಿದಿಹನು ॥೨೨॥

ಹೇ ವಿದುರ ಎನ್ನಯಾ ಸುತರುಗಳ ಹಿತವನ್ನು
ನೋಡದೆಯೆ ಪಾಂಡವರ ವೃದ್ಧಿಯನು ಬಯಸುತಿಹೆ
ಎನ್ನಯಾ ಮಕ್ಕಳನು ನಾನೆಂತು ತೊರೆಯುವುದು
ಸಾಧ್ಯವಿದೆ ಹೇಳೆಂದು ನುಡಿದಿಹನು ಧೃತರಾಷ್ಟ್ರ ॥೨೩॥

ತಂದೆಯನು ಮಕ್ಕಳನು ಅಗಲಿಸಲು ಯತ್ನಿಸುವ
ಕುಹಕದಾ ಯೋಚನೆಯ ಗೈಯ್ಯುತಿಹ ವಿದುರನೇ
ಈ ಕ್ಷಣದಿ ಇಲ್ಲಿಂದ ಹೊರಡುವುದು ಎನ್ನುತಲಿ
ವಿದುರಂಗೆ ಅಂಧನೃಪ ಕೋಪದಲಿ ನುಡಿದಿಹನು ॥೨೪॥

ನಿಜವನ್ನು ನುಡಿದೊಡೆಯು ನಂಬದೀ ದುರ್ಜನರು
ಎನ್ನುತಲಿ ವರವಿದುರ ಮನದೊಳಗೆ ನೋಯುತಲಿ
ರಥವೇರಿ ಸಾಗುತಲಿ ಗಜಪುರವ ತೊರೆಯುತಲಿ
ಕಾಮ್ಯಕದಿ ಪಾಂಡವರ ಬಳಿಯಲ್ಲಿ ಬಂದಿಹನು ॥೨೫॥

ವಿದುರನನು ಕಾಣುತಲಿ ಧರ್ಮಜನು ಹರುಷದಲಿ
ಆದರದಿ ಕುಳ್ಳಿರಿಸಿ ಸತ್ಕಾರಗೈಯ್ಯುತಲಿ
ಧೃತರಾಷ್ಟ್ರ ಗಾಂಧಾರಿ ಕೌರವರು ಕ್ಷೇಮವೇ
ಮಹತಾಯಿ ವರಕುಂತಿ ಕುಶಲಳೇ ಎಂದಿಹನು ॥೨೬॥

ಧೃತರಾಷ್ಟ್ರ ಮೊದಲಾದ ಬಾಂಧವರು ಸುಕ್ಷೇಮ
ನಿಮ್ಮಯಾ ಮೋಹದಾ ವರಕುಂತಿ ಚಿಂತೆಯಲಿ
ನಿಮ್ಮನ್ನು ನೆನೆಯುತಲಿ ಕಣ್ಣೀರ ಸುರಿಸುತಲಿ
ಕೊರಗಿತಳು ಸೊರಗಿಹಳು ಎಂದಿಹನು ವರವಿದುರ ॥೨೭॥

ನಿಮ್ಮನ್ನು ಕರೆಸುತಲಿ ರಾಜ್ಯವನು ಈಯುತಲಿ
ಕೌರವರು ಪಾಂಡವರು ಪ್ರೇಮದಲಿ ಬಾಳುವುದು
ಎನ್ನುತಲಿ ಧೃತರಾಷ್ಟ್ರ ನುಡಿಯುತಲಿ ಎನ್ನನ್ನು
ನಿಂದಿಸುತ ಅಟ್ಟುತಿರೆ ಬಂದಿಹೆನು ಎಂದಿಹನು ॥೨೮॥

ಇತ್ತಲಾ ಧೃತರಾಷ್ಟ್ರ ಮನದೊಳಗೆ ಚಿಂತಿಸುತ
ಆ ವಿದುರ ಸುಜ್ಞಾನಿ ಶಾಸ್ತ್ರದಲಿ ಪರಿಣತನು
ತರ್ಕದಲಿ ನೃಪನೀತಿ ಧರ್ಮದಲಿ ನಿಪುಣನಿಹ
ಅವನನ್ನು ಅಟ್ಟುತಲಿ ಕಡುಮೂರ್ಖ ನಾನಾದೆ ॥೨೯॥

ನರರೊಳಗೆ ಸುರರೊಳಗೆ ಭೀಮಾರ್ಜುನೀರ್ವರನು
ಜಯಿಸುವಾ ವಿಕ್ರಮರ ಶೂರರನು ನಾಕಾಣೆ
ಪಾಂಡವರ ಜೊತೆಯಲ್ಲಿ ಆ ವಿದುರ ಸೇರಿದೊಡೆ
ಬೆಂಕಿಯಲಿ ಗಾಳಿಯದು ಬೆರೆತಂತೆ ಆಗುವುದು ॥೩೦॥

ಕುರುಕುಲದ ಕಾನನವ ಪಾಂಡವರ ದಾವಾಗ್ನಿ
ನಾಲಗೆಯ ಚಾಚುತಲಿ ದಹಿಸುವುದು ಎನ್ನುತಲಿ
ಕಳವಳದಿ ಚಿಂತಿಸುತ ಸಂಜಯನ ಕರೆಸುತಲಿ
ವಿದುರನನು ಕರೆತಹುದು ಎನ್ನುತಲಿ ನುಡಿದಿಹನು ॥೩೧॥

ಸಂಜಯನು ಕಾಮ್ಯಕಕೆ ಐತಂದು ಭರದಲ್ಲಿ
ವಿದುರನನು ಕಾಣುತಲಿ ಧೃತರಾಷ್ಟ್ರ ಭೂಪತಿಯ
ಕಳವಳದ ಚಿಂತೆಯನು ಆದೇಶ ತಿಳಿಸುತಲಿ
ಮತ್ತೆ ವಿದುರನನು ಕರೆತಂದನಿಭಪುರಕೆ ॥೩೨॥

**ವರವಿದುರ ಐತಂದು ಪಾಂಡವರ ವಿಷಯವನು ।**
**ವಿಸ್ತರದಿ ಧೃತರಾಷ್ಟ್ರ ಭೂಪತಿಗೆ ಅರುಹಿದನು ॥**

ಬಾ ತಮ್ಮ ವಿದುರನೇ ಮಕ್ಕಳಾ ಮೋಹದಲಿ
ಸಲ್ಲದಾ ನುಡಿಗಳನು ನುಡಿದಿಹೆನು ಕ್ಷಮಿಸುವುದು
ಮಕ್ಕಳನು ತ್ಯಜಿಸುವುದು ಎನ್ನುತಲಿ ನೀನುಡಿಯೆ
ಮನನೊಂದು ಕೋಪದಲಿ ನುಡಿದಿಹೆನು ಎಂದಿಹನು ॥೩೩॥

ಸುತರನ್ನು ತೊರೆಯುತಲಿ ಜೀವಿಪುದು ದುಸ್ಸಾಧ್ಯ
ಎನ್ನುತಲಿ ನೋಯುತಲಿ ನಿನ್ನನ್ನು ನಿಂದಿಸಿದೆ
ತಂದೆಯನು ಕಳಕೊಂಡು ಪರದೇಸಿಯಾಗಿರುವ
ಪಾಂಡವರೊಳೆನ್ನಯಾ ಪ್ರೀತಿಯದು ಹೆಚ್ಚಿಹುದು ॥೩೪॥

ದುಃಖದಲಿ ನುಡಿದಿರುವ ನುಡಿಗಳನು ಮರೆಯುತಲಿ
ಎನ್ನನ್ನು ಪ್ರೇಮದಲಿ ನೋಡುವುದು ಎನ್ನುತಲಿ
ವಿದುರನನು ಅಪ್ಪುತಲಿ ಹರ್ಷಾಶ್ರು ಸುರಿಸುತಲಿ
ತಮ್ಮನನು ಕಳುಹಿದನು ಧೃತರಾಷ್ಟ್ರ ಭೂಪತಿಯು ॥೩೫॥

ಆ ವಿದುರ ಕಾಮ್ಯಕದ ವಿಪಿನಕ್ಕೆ ತೆರಳುತಲಿ
ಪಾಂಡವರ ಕಾಣುತಲಿ ಮರಳುತಲಿ ಭೂಪತಿಗೆ
ವಿಸ್ತರದಿ ಅರುಹಿರುವ ವಿಷಯವನು ಅರಿಯುತಲಿ
ದುರ್ಯೋಧನಾ ದುರುಳ ಕಳವಳಗೊಂಡಿಹನು ॥೩೬॥

ವಿದುರನಾ ನುಡಿಗಳನು ಕೇಳುತಲಿ ನಮ್ಮಪ್ಪ
ಮತ್ತೆ ಆ ಪಾಂಡವರ ಕರೆಸುತಲಿ ಪ್ರೇಮದಲಿ
ರಾಜ್ಯವನು ಈಯುವನು ಎನ್ನುತಲಿ ಯೋಚಿಸುತ
ಎಮ್ಮಯಾ ಶ್ರಮವೆಲ್ಲ ಹಾಳಾಗಿ ಹೋಗುವದು ॥೩೭॥

ಹೊಳೆಯಲ್ಲಿ ಹುಣಿಸೆಯಾ ಹಣ್ಣನ್ನು ತೊಳೆದಂತೆ
ವ್ಯರ್ಥವದು ಆಗುವದು ಎನ್ನುತಲಿ ಚಿಂತಿಸುತ
ಆ ಕ್ಷಣದಿ ಚರರನ್ನು ಕಳಿಸುತಲಿ ಕೌರವನು
ದುಶ್ಯಾಸನಾ ಕರ್ಣ ಶಕುನಿಯರ ಕರೆಸಿದನು ॥೩೮॥

ಚಾಂಡಾಲ ಚೌಕುಳಿಗಳೊಂದೆಡೆಗೆ ಸೇರುತಿರೆ
ಆ ವಿದುರ ಕಾಮ್ಯಕಕೆ ತೆರಳುತಲಿ ಪಾಂಡವರ
ಕಾಣುತಲಿ ಐತಂದು ಭೂಪತಿಗೆ ಅರುಹಿರುವ
ವೃತ್ತಾಂತವೆಲ್ಲವನು ಕೌರವನು ತಿಳಿದಿಹನು ॥೩೯॥

ಆ ವಿದುರ ನಮ್ಮಪ್ಪ ಭೂಪತಿಯ ಕಿವಿಯೊಳಗೆ
ಊದುತಲಿ ಪಾಂಡವರನಿಭಪುರಿಗೆ ಕರೆಸುತಲಿ
ರಾಜ್ಯವನು ಈಯಲಿಕೆ ಉಪದೇಶಗೈದಿಹನು
ಎಮ್ಮಯಾ ಕಾರ್ಯವನು ಕೆಡಿಸಿದನು ಎಂದಿಹನು ॥೪೦॥

ಪಾಂಡವರು ಮತ್ತೆ ಈ ಹಸ್ತಿನೆಗೆ ಬಂದೊಡೆಯು
ಎಮ್ಮಯಾ ನಾಶವನು ಖಂಡಿತದಿ ಮಾಡುವರು
ಈಗಲೇ ವಿಷವನ್ನು ಕುಡಿಯುತಲಿ ಸಾಯುವೆನು
ಪರಿಹಾರ ಸೂಚಿಪುದು ಎಂದಿಹನು ಕೌರವನು ॥೪೧॥

ಕೌರವನೆ ಪಾಂಡವರು ಸತ್ಯದಲಿ ನಡೆವವರು
ಹದಿಮೂರು ವರುಷಗಳ ವನವಾಸ ಕಳೆಯದಲೆ
ಅವರೆಂದು ಗಜಪುರದಿ ಕಾಲನ್ನು ಇಡದಿಹರು
ಎನ್ನುತಲಿ ಆ ಶಕುನಿ ಕೌರವಗೆ ನುಡಿದಿಹನು ॥೪೨॥

ಪಾಂಡವರು ಬಂದೊಡೆಯು ಮತ್ತೆ ಆ ದ್ಯೂತವನು
ಆಡುತಲಿ ಹದಿಮೂರು ವರುಷಗಳ ಪರ್ಯಂತ
ವನವಾಸಕಟ್ಟುವುದು ಎನ್ನುತಿರೆ ಆ ಶಕುನಿ
ಸೂತ-ಸುತ ರಾಧೇಯ ಕಲಿಕರ್ಣ ನುಡಿದಿಹನು ॥೪೩॥

ಕೌರವ ಮಹೇಶ್ವರನೆ ಪಾಂಡವರು ಗುಹುರಗೆ
ಶಸ್ತ್ರಾಸ್ತ್ರ ಸೈನ್ಯವನು ರಾಜ್ಯವನು ಕಳಕೊಂಡು
ಈ ಸಮಯ ನಿಬಗಲರು ನಿಶ್ಶಸ್ತ್ರರಾಗಿಹರು
ಈಗಲೇ ಪಾಂಡವರ ನಾಶವನು ಮಾಡುವುದು ॥೪೪॥

ಶತ್ರುಗಳು ಸಂಕಟದಿ ಸಿಲುಕಿರುವ ಸಮಯದಲಿ
ದಂಡೆತ್ತಿ ಸಾಗುತಲಿ ನಿರ್ಮೂಲ ಮಾಡುವುದು
ರಾಜರಾ ಧರ್ಮವಿದು ನೃಪನೀತಿ ಇರುತಿಹುದು
ಸ್ವರ್ಗದಾ ಸಮಯವಿದು ಬಂದಿಹುದು ಎಂದಿಹನು

ಸೈನ್ಯದಾ ಸಹಿತದಲಿ ಕಾಮ್ಯಕವ ಮುತ್ತುತಲಿ
ಪಾಂಡವರ ಸಂಹಾರ ಗೈದೊಡೆಯು ಮುಂದಕ್ಕೆ
ನಿನಗಾವ ಭಯಭೀತಿ ಚಿಂತೆಯದು ಇಲ್ಲವದು
ಕಲಿಕರ್ಣ ರಾಧೇಯ ನುಡಿದಿಹನು ಕೌರವನೆ ॥೪೬॥

ಆ ಶಕುನಿ ದುಶ್ಯಾಸನೀರ್ವರೂ ಖಳರುಗಳು
ಅಹುದಹುದು ಎನ್ನುತಿರೆ ಕೌರವನು ಭರದಲ್ಲಿ
ಅಪರಿಮಿತ ಶಸ್ತ್ರಾಸ್ತ್ರ ಸೈನ್ಯದಾ ಸಹಿತದಲಿ
ಯುದ್ಧವನು ಗೈಯಲಿಕೆ ಕಾಮ್ಯಕಕೆ ನಡೆದಿಹನು ॥೪೭॥

ವರವ್ಯಾಸ ಮಹಋಷಿಯು ದಿವ್ಯದಾ ದೃಷ್ಟಿಯಲಿ
ಕುಹಕರಾ ಮನವನ್ನು ಅರಿಯುತಲಿ ಐತಂದು
ಕೌರವನೆ ಬಿಡು ನಿನ್ನ ಈ ದುಷ್ಟ ಬುದ್ಧಿಯನು
ಜಗದೊಳಗೆ ಪಾಂಡವರ ಜಯಿಸುವವರಾರಿಲ್ಲ ॥೪೮॥

ನಿನ್ನನ್ನು ನಿಮಿಷದಲಿ ನಿರ್ನಾಮ ಗೈಯುವರು
ಹಿಂದಕ್ಕೆ ನೀ ಮರುಳು ಇಲ್ಲದಿರೆ ಕಲಿಭೀಮ
ನಿಮ್ಮನ್ನು ಕಡಿಕಡಿದು ದಿಗುಬಲಿಯನೀಯುವನು
ಎನ್ನುತಿರೆ ವರವ್ಯಾಸ ಕೌರವರು ಮರಳಿದರು ॥೪೯॥

ಬಳಿಕಲಾ ವರವ್ಯಾಸ ಧೃತರಾಷ್ಟ್ರನೆಡೆಯಲ್ಲಿ
ಆಗಮಿಸಿ ಕೌರವರು ಗೈದಿರುವ ದುಷ್ಕೃತ್ಯ
ಉಸುರುತಲಿ ನಿನ್ನಯಾ ಮಕ್ಕಳಿಗೆ ಬದುಕಲಿಕೆ
ಬುದಿಯನು ಹಿತನುಡಿಯ ಹೇಳುವುದು ಎಂದಿಹನು ॥೫೦॥

ಈ ದುಷ್ಟ ಸುತರುಗಳು ಎನ್ನಯಾ ನುಡಿಗಳನು
ಎಂದಿಗೂ ಕೇಳದೆಯೆ ತಮ್ಮಯಾ ಮನಸಿಂಗೆ
ಬಂದಂತೆ ಮಾಡುವರು ಎನ್ನಯ ಮಾತನ್ನು
ಒಪ್ಪದೆಯೆ ದ್ಯೂತವನು ಆಡಿದರು ಎಂದಿಹನು ॥೫೧॥

ಧೃತರಾಷ್ಟ್ರ ಕೇಳುವುದು ನಿನ್ನಯ ಸುತರುಗಳ
ಅಭ್ಯುದಯ ಶ್ರೇಯಕ್ಕೆ ಪಾಂಡವರ ಸ್ನೇಹವೇ
ಕಾರಣವು ಎಂಬುದನು ಮರೆಯದಿರು ಇಲ್ಲದಿರೆ
ನಾಶವದು ಖಂಡಿತವು ಎನ್ನುತಲಿ ತೆರಳಿದನು ॥೫೨॥

**ಕೌರವರ ಕುಲವನ್ನು ನಾಶವನು ಮಾಡುವನು !**
**ಎನ್ನುತಲಿ ಮೈತ್ರೇಯ ಶಾಪವನು ಇತ್ತಿಹನು ॥**

ಆ ಸಮಯ ವರಮುನಿಯು ಮೈತ್ರೇಯನೈತರಲು
ಕೌರವನು ಆದರದಿ ಫಲಪುಷ್ಪವೀಯುತಲಿ
ಸತ್ಕಾರಗೈಯ್ಯುತಲಿ ತಾವುಗಳು ಬಂದಿರುವ
ಕಾರಣವನುಸುರುವುದು ಎನ್ನುತಲಿ ನುಡಿಯುತಿರೆ ॥೫೩॥

ನಾವುಗಳು ವಿಪಿನದಲಿ ಚರಿಸುತಲಿ ಇರುತಿರಲು
ಕಾಮ್ಯಕದ ವನದೊಳಗೆ ಪಾಂಡವರ ಕಾಣುತಲಿ
ದ್ಯೂತದಾ ವೃತ್ತಾಂತವೆಲ್ಲವನು ಅರಿಯುತಲಿ
ಮನನೊಂದು ನಾವಿಲ್ಲಿ ಬಂದಿಹೆವು ಎಂದಿಹನು ॥೫೪॥

ಕೌರವನೆ ಬಿಡು ನಿನ್ನ ಪಾಪದೀ ಕೃತ್ಯವನು
ಜಗದೊಳಗೆ ಪಾಂಡವರ ಸಮಬಲರು ಆರಿಲ್ಲ
ಅವರನ್ನು ಕರೆಸುತಲಿ ಕೊಡು ಅರ್ಧ ರಾಜ್ಯವನು
ನಿನ್ನಯಾ ಹಿತಕಾಗಿ ಪಡೆಯುಮೆನು ಎಂದಿಹನು ॥೫೫॥

ಕೌರವನು ಕೋಪದಲಿ ಮನದೊಳಗೆ ಕುದಿಯುತಲಿ
ತನ್ನಯಾ ತೊಡೆಗಳನು ತೋರಿಸುತ ಚಪ್ಪರಿಸಿ
ಪಾಂಡವರ್ಗೆ ನೆಲವನ್ನು ಕೊಡೆನೆಂದು ನುಡಿಯುತಿರೆ
ಮೈತ್ರೇಯ ಮುನಿವರನು ಮುನಿಯುತಲಿ ನುಡಿದಿಹನು ॥೫೬॥

ಕೌರವನೆ ಗರ್ವದಲಿ ಮೆರೆದಿರುವ ನಿನ್ನಯಾ
ತೊಡೆಗಳನು ಕಲಿಭೀಮ ಗದೆಯಿಂದ ಅಪ್ಪಳಿಸಿ
ಸೀಳುತಲಿ ಕಡಿಯುತಲಿ ಪುಡಿಪುಡಿಯ ಗೈಯ್ಯುತಲಿ
ಶಾಕಿನಿಗೆ ಡಾಕಿನಿಗೆ ಈಯುವನು ಎಂದಿಹನು ॥೫೭॥

ನಿನ್ನಯಾ ಮರಣವದು ನೀ ತೋರ್ದ ತೊಡೆಗಳಲಿ
ಸಂಭವಿಸಲೆನ್ನುತಲಿ ಶಾಪವನು ಈಯುತಿರೆ
ಅಂಧನೃಪ ಕೇಳುತಲಿ ಕಳವಳದಿ ಐತಂದು
ಮುನಿವರರ ಚರಣಕ್ಕೆ ಎರಗುತಲಿ ನುಡಿದಿಹನು ॥೫೮॥

ಎನ್ನ ಸುತ ತಿಳಿಯದಲೆ ನುಡಿದಿರುವ ನುಡಿಗಳನು
ಕ್ಷಮಿಸುವುದು ಕರುಣೆಯಲಿ ಎನ್ನುತಿರೆ ಭೂಪತಿಯು
ಸುಧಾನಗೈಯುತಲಿ ಪಾಂಡವರ ಕರೆಸುತಲಿ
ರಾಜ್ಯವನು ಇತ್ತೊಡೆಯು ಶಾಪವದು ತೊಲಗುವುದು ||೫೯||

ಇಲ್ಲದಿರೆ ನಿಮ್ಮಯಾ ಕುರುಕುಲವನೆಲ್ಲವನು
ಘನಘೋರ ಯುದ್ಧವನು ಗೈಯ್ಯುತಲಿ ಪಾಂಡವರು
ತಪ್ಪದಲೆ ನಾಶವನು ಮಾಡುವರು ಎನ್ನುತಲಿ
ಮೈತ್ರೇಯ ನುಡಿಯುತಲಿ ಆಶ್ರಮಕೆ ತೆರಳಿದನು ||೬೦||

ಮುನ್ನಿನಲಿ ವರವ್ಯಾಸ ನುಡಿದಿರುವ ನುಡಿಗಳನು
ಮೈತ್ರೇಯನಿತ್ತಿರುವ ಶಾಪವನು ನೆನೆಯುತಲಿ
ಧೃತರಾಷ್ಟ್ರ ಭೂಪತಿಯು ಚಿಂತೆಯಲಿ ಮುಳುಗುತಲಿ
ದಾರಿಯನು ಕಾಣದಲೆ ವಿದುರನನು ಕರೆಸಿದನು ||೬೧||

ವ್ಯಾಸರಾ ನುಡಿಗಳನು ಮೈತ್ರೇಯ ಶಾಪವನು
ಅರುಹುತಲಿ ಪರಿಹಾರ ಸೂಚಿಪುದು ಎನ್ನುತಿರೆ
ಮಹಯುಪಿಗಳೊರೆದಿರುವ ನುಡಿಗಳವು ಶಾಪವದು
ಎಂದಿಗೂ ಸುಳ್ಳಾಗವೆಂದಿಹನು ವರವಿದುರ ||೬೨||

ಹುಟ್ಟಿದಾಕ್ಷಣದಲ್ಲಿ ಕೌರವರ ನೂರ್ವರಾ
ಪಿಂಡಗಳನೆಸೆಯುವದು ಎನ್ನುತಲಿ ನುಡಿದಿರ್ದೆ
ನೀನೆಸೆಯದಿರ್ದುದಕೆ ಇಂದು ಈ ಕಷ್ಟವನು
ಭೋಗಿಸುವದಾಯ್ತೆಂದು ವರವಿದುರ ನುಡಿದಿಹನು ||೬೩||

ಎನ್ನೆದೆಯು ಉರಿಯುತಿಹ ಚಿಂತೆಯಾ ಅಗ್ನಿಯಲಿ
ತುಪ್ಪವನು ಸುರಿಯದಿರು ಹೇ ತಮ್ಮ ವಿದುರನೆ
ಮಾರಾಯ ಮಾಡಿದ್ದು ಉಣ್ಣುವುದು ಎಂಬಂತೆ
ಎನ್ನಯಾ ಗತಿಯಾಯ್ತು ಎಂದಿಹನು ಅಂಧನೃಪ ||೬೪||

ಕಾಮ್ಯಕದ ವನದೊಳಗೆ ಪಾಂಡವರ ಕಂಡಿರುವೆ
ಗಜಪುರವ ತ್ಯಜಿಸುತಲಿ ಕಾನನಕೆ ತೆರಳಿರುವ
ಪಾಂಡವರ ಮುಂದಣದ ವೃತ್ತಾಂತವೆಲ್ಲವನು
ಅರುಹುವುದು ಎನ್ನುತಲಿ ಧೃತರಾಷ್ಟ್ರ ನುಡಿದಿಹನು ||೬೫||

ಭೂಪತಿಯೆ ಕೇಳುವುದು ಇಭಪುರಿಯ ತೊರೆಯುತಲಿ
ಸರಸತಿಯ ಯಮುನೆಯಾ ನದಿಗಳನು ದಾಟುತಲಿ
ಸೂರ್ಯನಾ ಕರುಣೆಯಲಿ ಅಕ್ಷಯದ ಅನ್ನದಾ
ಪಾತ್ರೆಯನು ಪಡೆಯುತಲಿ ಪರಿವಾರ ಸಹಿತದಲಿ ||೬೬||

ಪಯಣದಲಿ ಸಾಗುತಲಿ ದಿನಮೂರು ಕಳೆಯುತಿರೆ
ಘೋರತರ ತಿಮಿರವದು ಸುತ್ತಲೂ ಕವಿದಿರಲು
ಕಾಮ್ಯಕದ ವನದೊಳಗೆ ಧರ್ಮಜನು ಹೋಗುತಿರಲು
ಪರ್ವತದ ಕಾಯಕದಾ ರಕ್ಕಸನ ಕಂಡಿಹನು ||೬೭||

**ಘನಘೋರ ಯುದ್ಧವನು ಗೈಯ್ಯುತಲಿ ಕಲಿಭೀಮ |**
**ಕ್ರೂರನಾ ಕಿಮ್ಮೀರ ರಕ್ಕಸನ ಕೊಂದಿಹನು ||**

ಅಮಮ ಇದು ಎತ್ತಣದ ಮಾನವರ ಮಾಂಸದಾ
ವಾಸನೆಯು ಬರುತಲಿದೆ ನಾಸಿಕವು ಅರಳುತಿದೆ
ರುಚಿಕರದ ಸುಗ್ರಾಸಭೋಜನವು ದೊರಕಿಹುದು
ಎನ್ನುತಲಿ ರಕ್ಕಸನು ಧಾವಿಸುತ ಬಂದಿಹನು ||೬೮||

ಉರಿಯುಗುಳ್ವ ಕಣ್ಣುಗಳ ಜ್ವಾಲೆಯಾ ಬೆಳಕಿನಲಿ
ಹೊಳೆಯುತಿಹ ಕೋರೆಯಾ ಹಲ್ಲುಗಳ ಕಾಂತಿಯಲಿ
ಕೆದರಿರುವ ಕೇಶದಾ ಹೇರೊಡಲ ರಕ್ಕಸನ
ಕಾಣುತಲಿ ಧರ್ಮಜನು ಭಯಭೀತನಾಗಿಹನು ||೬೯||

ಇಂದಿಗೇ ಇರುಳನ್ನು ಕಳೆದೊಡೆಯು ಮುಂದಕ್ಕೆ
ನೂರೊಂದು ವರುಷದಾ ಪರ್ಯಂತ ಜೀವಿಪೆವು
ಮೃತ್ಯುವಿನ ಬಾಯೊಳಗೆ ಸಿಲುಕಿಹೆವು ಎನ್ನುತಲಿ
ಭೀತಿಯಲಿ ತನುಬೆಮರಿ ಯಮಸೂನು ಚಿಂತಿಸಿದ ||೭೦||

ಅಂಜದಿರು ಧರ್ಮಜನೆ ದುರುಳನೀ ದಾನವನ
ತಡೆಯುವೆನು ಎನ್ನುತಲಿ ಗುರುಧೌಮ್ಯ ಭರದಲ್ಲಿ
ರಕ್ಷೋಘ್ನ ಮಂತ್ರವನು ಜಪಿಸುತಿರೆ ರಕ್ಕಸನು
ನಿಂತಲ್ಲಿ ನಿಂದಿಹನು ಅಲುಗದೆಯೆ ಚಲಿಸದೆಯೆ ||೭೧||

ರಾಕ್ಷಸರು ಅಲೆಯುತಿಹ ಘೋರತರ ಕಾನನದಿ
ಗಾಢಾಂಧಕಾರದಲಿ ಪ್ರಾಣದಾ ಭಯತೊರೆದು
ಚರಿಸುತಲಿ ಬಂದಿರುವ ನೀವಾರು ಇರುತಿಹಿರಿ
ಎನ್ನುತಲಿ ಕಿಮ್ಮೀರ ಧರ್ಮಜಗೆ ನುಡಿದಿಹನು ||೭೨||

ದ್ಯೂತದಲಿ ಕೌರವಗೆ ರಾಜ್ಯವನು ಸೋಲುತಲಿ
ಮಡದಿಯಾ ಸಹಿತದಲಿ ಕಾನನಕೆ ಬಂದಿರುವ
ಪಾಂಡವರು ನಾವಿಹೆವು ನೀನಾರು ಹೇಳುವುದು
ಎನ್ನುತಲಿ ಧರ್ಮಜನು ರಕ್ಕಸನ ಕೇಳಿಹನು ||೭೩||

ಆ ಏಕಚಕ್ರದಲಿ ಕಲಿಭೀಮ ಕೊಂದಿರುವ
ಆ ಬಕನ ಸೋದರನು ಕಿಮ್ಮೀರ ನಾನಿಹೆನು
ಎನ್ನಯಾ ಸೋದರನ ಕೊಂದಿರುವ ಭೀಮನನು
ಕೊಲ್ಲಲಿಕೆ ಹುಡುಕುತಲಿ ನಾನಿರ್ದೆ ಎಂದಿಹನು ||೭೪||

ಎನ್ನಯಾ ಸೋದರನ ಬಕನನ್ನು ವಧಿಸಿರುವ
ಎನ್ನಯಾ ಸ್ನೇಹಿತನ ಹಿಡಿಂಬಕ ಸುರನನು
ಕೊಲ್ಲುತಲಿ ಹಿಡಿಂಬಕೆಯನೊಯ್ದಿರುವ ಭೀಮನನು
ಸಂಹಾರ ಗೈಯ್ಯುತಲಿ ಸೇಡನ್ನು ತೀರಿಪೆನು ॥೭೫॥

ಭೀಮನನು ಕೊಲ್ಲುತಲಿ ಮಾಂಸವನು ತಿನ್ನುತಲಿ
ಕರುಳನ್ನು ಬಗೆಯುತಲಿ ರಕುತವನು ಕುಡಿ ಕುಡಿದು
ತೃಪ್ತಿಯಲಿ ತೇಗುತಲಿ ಸಂತಸವ ಪಡೆಯುವೆನು
ಎನ್ನುತಲಿ ರಕ್ಕಸನು ಧಾವಿಸುತ ಬಂದಿಹನು ॥೭೬॥

ಕಲಿಭೀಮ ಕೇಳುತಲಿ ಕ್ರೋಧದಲಿ ಕುದಿಯುತಲಿ
ಕೆಲದೊಳಗೆ ಬೆಳೆದಿರ್ದ ಹೆಮ್ಮರವ ಕೀಳುತಲಿ
ದಾನವನ ನೆತ್ತಿಯಲಿ ರಭಸದಲಿ ಇಕ್ಕುತಿರೆ
ರಕ್ಕಸನು ಕಿರ್ರೆಂದು ಕಿರುಚುತಲಿ ಬಿದ್ದಿಹನು ॥೭೭॥

ಚೇತರಿಸಿಕೊಳ್ಳುತಲಿ ಕಿಮ್ಮೀರ ಏಳುತಲಿ
ಎಲವೆಲವೊ ಭೀಮನೇ ನಿನ್ನನ್ನು ತಿನ್ನುವೆನು
ಎನ್ನುತಲಿ ಹುಲಿಯಂತೆ ಆರ್ಭಟಿಸಿ ನೆಗೆಯುತಲಿ
ಪವನಜನ ಮುತ್ತುತಲಿ ಮುಷ್ಟಿಯಲಿ ಹೊಡೆದಿಹನು

ನೊಣವೊಂದು ಮುತ್ತುತಿರೆ ಮದ್ದಾನೆ ಅಂಜುವುದೆ
ಸಿಡಿಲೊಂದು ಎರಗುತಿರೆ ಪರ್ವತವು ಅಳುಕುವುದೆ
ವಜ್ರದಾ ಕಾಯದಾ ಕಲಿಭೀಮ ದಾನವನ
ಮಲ್ಲದಾ ಹಿಡಿತದಲಿ ಬಂಧಿಸುತ ಹಿಸುಕಿದನು ॥೭೯॥

ವಿಧವಿಧದ ಹಿಡಿತದಲಿ ಬಂಧಿಸುತ ಕೊಸರುತಲಿ
ದಕ್ಷದಲಿ ಮುಷ್ಟಿ ಪ್ರಹಾರವನು ಗೈಯ್ಯುತಲಿ
ಪರ್ವತಗಳೆರಡೆದು ಸೆಣಸುತಿಹ ಪರಿಯಲ್ಲಿ
ಕಿಮ್ಮೀರ ಭೀಮರಾ ಯುದ್ಧವದು ರಂಜಿಸಿತು ॥೮೦॥

ಬಹುಕಾಲ ಭೀಕರದಿ ಹೆಣಗುತಿರೆ ಈರ್ವರೂ
ಕಲಿಭೀಮ ರಕ್ಕಸನ ಕೆಡಹುತಲಿ ಭೂಮಿಯಲಿ
ಎದೆಯಲ್ಲಿ ಮುಷ್ಟಿ ಪ್ರಹಾರವನು ಗೈಯುತಿರೆ
ರಕ್ತದಾ ಬುಗ್ಗೆಯದು ಘಳಿಲೆಂದು ಚಿಮ್ಮಿದುದು ॥೮೧॥

ದಶದಿಸೆಯು ಬಿರಿವಂತೆ ನಭಹರಿವ ಪರಿಯಲ್ಲಿ
ರಕ್ಕಸನು ಚೀರುತಲಿ ಅಸುವನ್ನು ತೊರೆದಿಹನು
ಬಂದಿರುವ ಸಂಕಟವು ತೊಲಗಿಹುದು ಎನ್ನುತಲಿ
ಧರ್ಮಜನು ಭೀಮನನು ಅಪ್ಪಿದನು ಸಂತಸದಿ ॥೮೨॥

ಇವನರಿಯದಾ ವಿಷಯ ಆವುದಿದೆ ಜಗದೊಳಗೆ
ತೃಣವೊಂದು ಅಲುಗದದು ವಾಯುವದು ಚಲಿಸದದು
ಸಕಲಸಚರಾಚರದ ವಸ್ತುಗಳ ವ್ಯವಹರಣ
ನಡೆಸುವೀ ಮಹಿಮಂಗೆ ಅರಿಯದದು ಆವುದಿದೆ ॥೯೧॥

ಜಗದೊಳಗೆ ನರರೂಪ ತಾಳುತಲಿ ರಕ್ಕಸರ
ದುಷ್ಟರನು ಸಂಹರಿಸಿ ಶಿಷ್ಟರನು ಸಲುಹಿದನು
ಈಗಲೀ ಕೌರವರ ಪಾಂಡವರ ಕೆಡಿಸುತಲಿ
ಕಲಹದಾ ಬೀಜವನು ಈತನೇ ಬಿತ್ತಿಹನು ॥೯೨॥

ಹೇ ನೃಪನೆ ಕೇಳುವುದು ಶ್ರೀಕೃಷ್ಣ ದುಗುಡದಲಿ
ಬಂಧುಗಳ ಬಾಂಧವರ ಅರಮನೆಯ ನಾರಿಯರ
ಯಾದವರ ಸೈನ್ಯದಾ ಸಹಿತದಲಿ ಹೊರಡುತಲಿ
ಪಾಂಡವರ ಕಾಣಲಿಕೆ ಕಾಮ್ಯಕಕೆ ಬಂದಿಹನು ॥೯೩॥

ಇತ್ತಲಾ ಪಾಂಚಾಲ ಕೇಕಯರು ಸೋಮಕರು
ಸೃಂಜಯನು ಕುಂತಿನೃಪ ಆ ಧೃಷ್ಟಕೇತುವು
ದೇಶದಾ ನೃಪರುಗಳು ಕೇಳುತಲಿ ಪಾಂಡವರ
ಸಂತೈಸಲೋಸುಗವೆ ಭರದಲ್ಲಿ ಬಂದಿಹರು ॥೯೪॥

ಬಂದಿರುವ ಅರಸುಗಳ ಅವರವರಿಗುಚಿತದಲಿ
ಸತ್ಕಾರಗೈಯ್ಯುತಲಿ ಧರ್ಮಜನು ಕುಳ್ಳಿರಿಸಿ
ಮುರಹರನ ಚರಣದಲಿ ಸಾಷ್ಟಾಂಗವೆರಗುತಲಿ
ಕಂಬನಿಯ ಸುರಿಸುತಲಿ ಧಾರೆಯಲಿ ತೊಳೆದಿಹನು ॥೯೫॥

**ದ್ರೌಪದಿಯು ಸಹಿತದಲಿ ಪಾಂಡವರನೈವರನು ।**
**ಸಕಲರನು ಕರುಣಾಳು ಸಾಂತ್ವನವಗೊಳಿಸಿಹನು ॥**

ಮುಮುಪ್ರಾಣ ಪಾಂಡವನೆ ಏಳೆಂದು ಎಬ್ಬಿಸುತ
ಸೆಲೆಗಟಾ ಸೆರಗಿನಲಿ ಕಂಬನಿಯನೊರೆಸುತಲಿ
ತೆಕ್ಕೆಯೊಳು ಅಪ್ಪುತಲಿ ಧರ್ಮಜನ ಶಿರವನ್ನು
ನೇವರಿಸಿ ಸಾಂತ್ವನವಗೈದಿಹನು ಕರುಣಾಳು ॥೯೬॥

ಭೀಮನನು ಅರ್ಜುನನ ನಕುಲ ಸಹದೇವರನು
ತೆಗೆತೆಗೆದು ಅಪ್ಪುತಲಿ ಅಭಯವನು ಹೇಳುತಲಿ
ಸೋದರಿ ಸುಭದ್ರೆಯನು ಅಭಿಮನ್ಯು ಅಳಿಯನನು
ಕಾಣುತಲಿ ಧೈರ್ಯವನು ಹೇಳಿಹನು ಕರುಣಾಳು ॥೯೭॥

ಎಳಗರುವು ದೂರದಲಿ ಬರುತಲಿಹ ತಾಯಿಯನು
ಆಕಳನು ನೋಡುತಲಿ ಧಾವಿಸುವ ಪರಿಯಲ್ಲಿ
ದ್ರೌಪದಿಯು ಭರದಲ್ಲಿ ಓಡುತಲಿ ಐತಂದು
ಕೃಷ್ಣನಾ ಚರಣದಲಿ ರೋದಿಸುತ ಬಿದ್ದಿಹಳು ॥೯೮॥

ಇದು ಗಂಗೆಯುದಿಸಿರುವ ಪಾವನದ ಪಾದವಿದು
ಇದು ವೇದ ವಧುಗಳನು ಕಾಯ್ದಿರುವ ಚರಣವಿದು
ಶಿಲೆಯಾದಹಲ್ಯೆಯನು ಸಲಹಿರುವ ಪಾದವಿದು
ಎನ್ನುತಲಿ ಕಂಬನಿಯೊಳದ್ದಿದಳು ಪಾದವನು ॥೯೯॥

ಸಭೆಯೊಳಗೆ ಎನ್ನಯಾ ಸೀರೆಯನು ಸೆಳೆಯುತಿರೆ
ಅಕ್ಷಯದ ವಸ್ತ್ರವನು ಈಯುತಲಿ ಎನ್ನಯಾ
ಮಾನವನು ರಕ್ಷಿಸಿದ ಕರುಣಾಳು ಮೂರುತಿಯ
ಘನಪಾದವೆನ್ನುತಲಿ ದೃಗುಂಜಲವ ಸುರಿದಿಹಳು ॥೧೦೦॥

ಗಂಡಂದಿರೈವರೂ ದ್ಯೂತದಲಿ ಸೋಲುತಲಿ
ಕೈಕಟ್ಟಿ ಮೌನದಲಿ ನೋಡುತಲಿ ಕುಳಿತಿರಲು
ಗುರುಹಿರಿಯರೆಲ್ಲರೂ ಸುಮ್ಮನೇ ಕುಳಿತಿರಲು
ಎನ್ನಯಾ ಮಾನವನು ರಕ್ಷಿಸಿದ ಪಾದವಿದು ॥೧೦೧॥

ಅಡವಿಯಲಿ ಧ್ರುವರಾಯ ನಾರಾಯಣೆನ್ನುತಲಿ
ದೈನ್ಯದಲಿ ತಪಗೈಯ್ಯೆ ರಕ್ಷಿಸಿದ ಪಾದವಿದು
ಬಾಲಕನು ಪ್ರಹ್ಲಾದ ಕೂಗಿದೊಡೆ ಭರದಲ್ಲಿ
ಕಂಭದಲಿ ಮೂಡುತಲಿ ರಕ್ಷಿಸಿದ ಪಾದವಿದು ॥೧೦೨॥

ಮರಣದಾ ಸಮಯದಲಿ ಮಗನನ್ನು ಕರೆದೊಡೆಯು
ಕರುಣೆಯಲಿ ಅಜಮಿಳನ ಪೊರೆದಿರುವ ಪಾದವಿದು
ವರಗಜನ ಪಾದವನು ಮೊಸಳೆಯದು ಹಿಡಿದಿರಲು
ಬಿಡಿಸುತಲಿ ಉದ್ಧಾರಗೈದಿರುವ ಪಾದವಿದು ॥೧೦೩॥

ನಾಥರುಗಳಿಲ್ಲದಿಹ ಅನಾಥಳನು ಎನ್ನನ್ನು
ರಕ್ಷಿಸಿದ ದೀನಾನಾಥನಾ ಪಾದವಿದು
ದೀನರಾ ಬಂಧುವೇ ಕಾರುಣ್ಯ ಸಿಂಧುವೇ
ದರುಶನವ ನೀನಿತ್ತೆ ನಾ ಧನ್ಯಳಾಗಿಹೆನು ॥೧೦೪॥

ಶೃತಿಸ್ಮೃತಿಗೆ ಘನತಪಕೆ ಮುನಿಗಳಿಗೆ ತೋರದಾ
ಘನ ಮಹಿಮ ದೇವನೇ ದರುಶನವನಿತ್ತಿರುವೆ
ಎನ್ನುತಲಿ ಹರ್ಷಾಶ್ರು ಧಾರೆಯನು ಸುರಿಸುತಲಿ
ಯಾದವನ ಪಾದಗಳ ತೊಳೆದಿಹಳು ಪಾಂಚಾಲಿ ॥೧೦೫॥

ಪಳಿನ್ನ ತಂಗಿಯೆ ನಲುಮೆಯಾ ದ್ರೌಪದಿಯೆ
ನೀ ಕಷ್ಟ ಅನುಭವಿಸಲೋಸುಗವೆ ಹುಟ್ಟಿರುವೆ
ನಿನ್ನಯಾ ದುಃಖವನು ಕೇಳುತಲಿ ನೋಯುತಲಿ
ಮನನೊಂದು ಮರುಗುತಲಿ ಕರಗುತಲಿ ಬಂದಿಹೆನು ॥೧೦೬॥

ಸನಿಹದಲಿ ಹರಿಯುತಿಹ ನದಿಯೊಳಗೆ ಮೀಯುತಲಿ
ಮುನಿಜನರ ಉಪದೇಶ ಕಥನಗಳ ಕೇಳುತಲಿ
ರವಿಯಿತ್ತ ಪಾತ್ರೆಯಾ ಅನ್ನವನು ಸೇವಿಸುತ
ಪರಿವಾರ ಸಹಿತದಲಿ ಧರ್ಮಜನು ಇರ್ದಿಹನು ॥೧೩೯॥

ಒಂದು ದಿನ ಮಾರುತಜನು ಬೇಟೆಯನು ಆಡಲಿಕೆ
ಬೇಡರಾ ಜೊತೆಗೂಡಿ ಅಡವಿಯನು ಹೊಕ್ಕಿಹನು
ಪಾದದಾ ಘಟ್ಟಣೆಗೆ ಗಿಡಮರಗಳಲುಗಿದವು
ಭೂಮಿಯದು ಕಂಪಿಸುತ ನೆಗ್ಗುತಲಿ ಕುಸಿದಿಹುದು ॥೧೪೦॥

ಶಾರ್ದೂಲ ಸಿಂಹಗಳು ಆನೆಗಳು ತೋಳಗಳು
ಜಿಂಕೆಗಳು ಮೊದಲಾದ ಪ್ರಾಣಿಗಳ ಸಂಕುಲವು
ಪ್ರಳಯವೇ ಸನ್ನಿಹಿತವಾಗಿಹುದೊ ಎನ್ನುತಲಿ
ಪ್ರಾಣದಾ ಭಯದಲ್ಲಿ ದಿಕ್ಕೆಟ್ಟು ಓಡಿದವು ॥೧೪೧॥

ಅಗಣಿತದ ಸಿಂಹಗಳ ವ್ಯಾಘ್ರಗಳ ಸಿರಿಯುತಲಿ
ಮಾಂಸವನು ಬೇಡರಿಗೆ ಈಯುತಲಿ ಮಾರುತಜನು
ಭರದಿಂದ ಸಾಗುತಲಿ ನದಿತಟದೊಳಿಸೆಯುತಿಹ
ಚೆಲುವಿನಾ ನೇರಿಳೆಯ ಮರವೊಂದ ಕಂಡಿಹನು ॥೧೪೨॥

ನೀಲಿಮೆಯ ಕಾಂತಿಯಲಿ ಹೊಳೆ ಹೊಳೆದು ತೂಗುತಿಹ
ಗಜಗಾತ್ರ ರಸಭರಿತ ನೇರಿಳೆಯ ಹಣ್ಣನ್ನು
ಕಾಣುತಲಿ ಪವನಜನು ಅಚ್ಚರಿಯಗೊಳ್ಳುತಲಿ
ಈ ಪರಿಯ ಫಲವನ್ನು ಕಂಡಿಲ್ಲವೆಂದಿಹನು ॥೧೪೩॥

ಈ ಒಂದು ನೇರಿಳೆಯ ಹಣ್ಣನ್ನು ಸವಿಯುತಲಿ
ಸಕಲರೂ ಸಂತೃಪ್ತಿಗೊಳ್ಳುವರು ಎನ್ನುತಲಿ
ಗದೆಯನ್ನು ಕಂಕುಳದಿ ಇರಿಸುತಲಿ ಭರದಲ್ಲಿ
ಪವನಜನು ಮರವನ್ನು ಸರಸರನೆ ಏರುತಲಿ ॥೧೪೪॥

ಹಣ್ಣನ್ನು ತರಿಯುತಲಿ ಧಾವಿಸುತಲೈತಂದು
ಧರ್ಮಜನ ಚರಣದಲಿ ಇರಿಸುತಲಿ ನಮಿಸುತಿರೆ
ಧರ್ಮಸುತ ಬೆರಗಾಗಿ ಗಜಗಾತ್ರ ನೇರಿಳೆಯ
ಫಲವನ್ನು ಮುನಿಜನರ ಎದುರಿನಲಿ ಇರಿಸಿದನು ॥೧೪೫॥

ಈ ಪರಿಯ ಭಾರಿಯಾ ನೇರಿಳೆಯ ಹಣ್ಣನ್ನು
ಮುನ್ನಿನಲಿ ಕಂಡಿಲ್ಲವೆಂದಿಹುದು ಮುನಿನಿಕರ
ಈ ತ್ರಿಕಾಲಜ್ಞಾನಿ ಸಹದೇವ ಅರಿತಿಹನು
ಹೇಳುವುದು ಎನ್ನುತಲಿ ಧರ್ಮಜನು ನುಡಿದಿಹನು ॥೧೪೬॥

ಅಕಟಕಟ ಕಣ್ವಮುನಿ ತಪದೊಳಗೆ ಇರುತಿಹನು
ವರುಷಕ್ಕೊಂದು ಕಳೆಯುತಿರೆ ಕಣ್ತೆರೆದು ಕರಚಾಚಿ
ಕರತಳದಿ ಫಲ ಪಿಡಿಯೆ ಕೊಳ್ಳುವನು ಹರುಷದಲಿ
ಈ ಫಲವನ್ನು ಕಾಣದಿರೆ ಶಾಪವನು ಈಯುವನು ॥೧೪೭॥

ಕಣ್ವಋಷಿ ಕೋಪಿಸಲು ಅಜಹರರು ನಡುಗುವರು
ಪವನಜನು ತಿಳಿಯದಲೆ ಫಲವನ್ನು ಹರಿಯುತಲಿ
ಅನುಚಿತದ ಮೂರ್ಖತನ ಕಾರ್ಯವನು ಗೈದಿಹನು
ಘೋರತರ ಕಷ್ಟವದು ಕಟ್ಟಿಹುದು ಎಂದಿಹನು ॥೧೪೮॥

ಈ ಕ್ಷಣದಿ ಫಲವನ್ನು ಮತ್ತೆ ಆ ಟೊಂಗೆಯಲಿ
ತಗಲಿಸುತ ಅಂಟಿಪುದು ಇಲ್ಲದಿರೆ ಕಣ್ವಮುನಿ
ಹಣ್ಣನ್ನು ಕಾಣದಿರೆ ತಪ್ಪದಲೆ ಕೋಪದಲಿ
ಶಾಪವನು ಈಯುವನು ಎಂದಿಹನು ಸಹದೇವ ॥೧೪೯॥

ಸೋದರನ ನುಡಿಗೇಳ್ದು ಧರ್ಮಜನು ಚಿಂತೆಯಲಿ
ಕಳವಳವ ಗೊಳ್ಳುತಲಿ ದಿಕ್ಕನಗೆ ತೋರದಿದೆ
ಪರಿಹಾರ ಸೂಚಿಪುದು ಎನ್ನುತಲಿ ನುಡಿಯುತಿರೆ
ಕುಲಗುರುವು ಧೌಮ್ಯಮುನಿ ಧರ್ಮಜಗೆ ನುಡಿದಿಹನು ॥೧೫೦॥

ಈ ಕಷ್ಟ ಕಳೆಯಲಿಕೆ ಆ ಕೃಷ್ಣನೊರ್ವನೇ
ಶಕ್ತನಿಹ ಕೃಷ್ಣನನ ನೆನೆಯುವುದು ಎನ್ನುತಲಿ
ಧೌಮ್ಯಮುನಿ ನುಡಿಯುತಿರೆ ಧರ್ಮಜನು ಮನದೊಳಗೆ
ದ್ವಾರಕಾಧೀಶನನ ನರಯಣನ ನೆನೆದಿಹನು ॥೧೫೦॥

ಹೇ ಕೃಷ್ಣ ಕೇಶವನೆ ಅಚ್ಯುತ ಜನಾರ್ದನನೆ
ಗೋವಿಂದ ಗೋಪಾಲ ಗಿರಿಧರ ಮುರಾಂತಕನೆ
ಯಾದವ ಕುಲೋದ್ಭವನೆ ಭಕುತಜನ ಬಂಧುವೆ
ರಕ್ಷಿಪುದು ಎನ್ನುತಲಿ ಭಕುತಿಯಲಿ ನುತಿಸಿದನು ॥೧೫೨॥

ಧರ್ಮಜನ ಆರ್ತದಾ ನುಡಿಗೇಳ್ದು ಮುರಹರನು
ಭಾಮೆಯಾ ಜೊತೆಯಲ್ಲಿ ಆಡುತಿಹ ಆಟವನು
ತೊರೆಯುತಲಿ ಧರ್ಮಜನು ಸಂಕಟದಿ ಸಿಲುಕಿಹನು
ಎನ್ನುತಲಿ ಮಿಡುಕುತಲಿ ಭರದಲ್ಲಿ ಬಂದಿಹನು ॥೧೫೩॥

ಬಂದಿರುವ ಗೋವಿಂದನಂಘ್ರಿಯಲಿ ಬೀಳುತಲಿ
ಅರಿಯದಲೆ ಪವನಜನು ಕಣ್ವಮುನಿ ಭುಂಜಿಸುವ
ನೇರಿಳೆಯ ಫಲವನ್ನು ತರಿಯುತಲಿ ತಂದಿಹನು
[ಕ]ಣ್ವಮುನಿ ಕೋಪದಲಿ ಶಾಪವನು ಈಯುವನು ॥೧೫೪॥

ಈ ಕಷ್ಟ ಕಳೆಯುತಲಿ ಎಮ್ಮನ್ನು ರಕ್ಷಿಪುದು
ಎನ್ನುತಲಿ ಕಂಬನಿಯ ಧಾರೆಯನು ಸುರಿಸುತಲಿ
ಧರ್ಮಸುತ ನುಡಿಯುತಿರೆ ಚಿಂತೆಯನು ಮಾಡದಿರು
ಈ ಫಲವ ವೃಕ್ಷವಾ ಅಡಿಯಲ್ಲಿ ಇರಿಸುತಲಿ ॥೧೫೫॥

ನಿಮ್ಮಯಾ ಶೀಲವನು ಗುಣಧರ್ಮ ಚರಿತೆಯನು
ಮನದೊಳಿಹ ನಿಜವಾದ ಇಂಗಿತವ ಸತ್ಯವನು
ನುಡಿಯುತಿರೆ ಮತ್ತೆ ಈ ನೇರಿಳೆಯು ಏರುತಲಿ
ಶಾಖೆಯಲಿ ಅಂಟಿವುದು ಎಂದಿಹನು ಮುರಹರನು ॥೧೫೬॥

**ಪಾಂಡವರು ತಮ್ಮಯಾ ಗುಣ ಧರ್ಮ ಹೇಳುತಿರೆ ।**
**ಜಂಬುಫಲವೇರುತಲಿ ತರುವಿಂಗೆ ಅಂಟಿದುದು ॥**

ಧರ್ಮಜನು ನೇರಿಳೆಯ ಫಲವನ್ನು ವೃಕ್ಷದಡಿ
ಇರಿಸುತಲಿ ಕರಮುಗಿದು ರವಿ ಚಂದ್ರ ತಾರೆಗಳೆ
ಇಂದ್ರಾಗ್ನಿ ವರುಣರೆ ಪಂಚಭೂತಂಗಳಿರ
ಕೇಳುವುದು ಎನ್ನುತಲಿ ಕರಮುಗಿದು ನುಡಿದಿಹನು ॥೧೫೭॥

**ಶ್ಲೋಕ**—ಮಾತೃವತ್ ಪರದಾರಾಣಿ
ಪರದ್ರವ್ಯಾಣಿ ಲೋಷ್ಟವತ್
ಆತ್ಮವತ್ ಸರ್ವಭೂತಾನಿ
ಯಃಪಶ್ಯತಿ ಸಪಶ್ಯತಿ ॥೧॥

ಪರಸ್ತ್ರೀಯು ಎನ್ನಯಾ ತಾಯಂತೆಳು ಎನ್ನುತಲಿ
ಪರಧನವ ತೃಣವೆಂದು ಕಡೆಯಾಗಿ ಭಾವಿಸುವೆ
ಎನ್ನಂತೆ ಜಗದೊಳಿಹ ಜೀವರುಗಳೆಲ್ಲರಾ
ನೋವುಗಳು ಎನ್ನವೆಂದೆನ್ನುತಲಿ ಭಾವಿಪೆನು ॥೧೫೮॥

ಈ ಪರಿಯ ಧರ್ಮಸುತ ನುಡಿಯುತಿರೆ ಫಲವದುವೆ
ಭೂಮಿಯನು ತೊರೆಯುತಲಿ ಮೊಳವೊಂದು ನೆಗೆಯುತಿರೆ
ಮರುತಜನೆ ಬಾ ಬೇಗ ನೀನುಡಿಯೆ ಎನ್ನುತಲಿ
ಮುರಹರನು ನುಡಿಯುತಿರೆ ಪವನಜನು ನುಡಿದಿಹನು ॥೧೫೯॥

**ಶ್ಲೋಕ**—ಪ್ರಾಣಮೇವ ಪರಿತ್ಯಜ್ಯ । ಮಾನಮೇವಾಭಿರಕ್ಷತು ॥
ಅನಿತ್ಯ ಮಧ್ರುವಂ ಪ್ರಾಣಂ।ಮಾನಮಾಚಂದ್ರತಾರಕಂ॥೨॥

ಈ ದೇಹ ಈ ಪ್ರಾಣ ನಶ್ವರವು ಆಗಿಹವು
ಪ್ರಾಣವನು ತ್ಯಜಿಸುತಲಿ ಮಾನವನು ರಕ್ಷಿಪೆನು
ಚಂದ್ರಾರ್ಕಪರ್ಯಂತ ಕೀರ್ತಿಯದು ಮೆರೆಯುವುದು
ಇದನುಳಿದು ಅನ್ಯವನು ನಾನರಿಯೆನೆಂದಿಹನು ॥೧೬೦॥

ಈ ಪರಿಯೊ ಪವನಜನು ನುಡಿಯುತಿರೆ ಆಕ್ಷಣದಿ
ನೇರಿಳೆಯು ಮೂರ್ಮೊಳವು ಮೇಲಕ್ಕೆ ನೆಗೆಯುತಿರೆ
ಕಲಿಪಾರ್ಥ ನೀ ನಿನ್ನ ಗುಣಧರ್ಮವರುಹುವುದು
ಎನ್ನುತಿರೆ ಮುರರಿಪುವು ಫಲ್ಗುಣನು ನುಡಿದಿಹನು ॥೧೬೧॥

**ಶ್ಲೋಕ**—ನಿಮಂತ್ರಣೋತ್ಸವೋ ವಿಪ್ರಾಃ ।
ಗಾವೊ ನವತೃಣೋತ್ಸವಾಃ ।
ಸುಭರ್ತಾರೋತ್ಸವಾಃ ನಾರ್ಯಃ ।
ಅಹಂ ಕೃಷ್ಣ ರಣೋತ್ಸವಃ ॥೩॥

ಮದನಾರಿ ತ್ರಿಪುರಾರಿ ಕಂಸಾರಿ ಕೇಳುವುದು
ಪರಮನೆಯ ಭೋಜನದ ಆಮಂತ್ರಣಕ್ಕೊಡೆಯು
ಹಾರುವರು ಹಾರುತಲಿ ಸಂತಸವ ಪಡುವಂತೆ
ಎಳೆಹಸಿರ ಕಾಣುತಲಿ ಗೋವುಗಳು ನಲಿವಂತೆ ॥೧೬೨॥

ಸಾಧ್ವೀ ಪತಿವ್ರತೆಯು ನಿಜಪತಿಯ ಕಾಣುತಲಿ
ಹರುಷವದು ಉಕ್ಕುತಲಿ ಹಿಗ್ಗುವಾ ಪರಿಯಲ್ಲಿ
ಹೇ ಕೃಷ್ಣ ರಣದೊಳಗೆ ಎನ್ನಯಾ ಉತ್ಸಾಹ
ಉಗ್ಗಿಯದು ಚಿಮ್ಮುವುದು ಎಂದಿಹನು ಫಲಗುಣನು ॥೧೬೩॥

ಆಕ್ಷಣದಿ ನೇರಿಳೆಯು ಮೇಲಕ್ಕೆ ಏರುತಿರೆ
ಬಾ ನಕುಲ ನಿನ್ನಯಾ ಮನದೊಳಿಹ ಇಷ್ಟವನು
ನಿಜವಾದ ಗುಣಧರ್ಮ ತಿಳುಹುವುದು ಎನ್ನುತಲಿ
ಯಾದವನು ನುಡಿಯುತಿರೆ ವರನಕುಲ ನುಡಿದನು ॥೧೬೪॥

**ಶ್ಲೋಕ**—ಧರ್ಮೋ ಜಯತು ನಾಧರ್ಮಃ
ಸತ್ಯಂ ಜಯತು ನಾನೃತಂ ।
ಕ್ಷಮಾ ಜಯತು ನಕ್ರೋಧೋ
ವಿಷ್ಣುರ್ಜಯತು ನಾಸುರಃ ॥೪॥

ಧರ್ಮವೇ ಜಗದೊಳಗೆ ಎಂದಿಗೂ ಜಯಿಸುವುದು
ಅಧರ್ಮವೆಂದಿಗೂ ಖಂಡಿತದಿ ಜಯಿಸದದು
ಸತ್ಯವೇ ಜಯಿಸುವುದು ಅನೃತಕ್ಕೆ ಜಯವಿಲ್ಲ
ಕ್ಷಮೆಯೊಂದೆ ಗೆಲ್ಲುವುದು ಕ್ರೋಧವದು ಅಲ್ಲೆಂದ ॥೧೬೫॥

ಘನಮಹಿಮ ಕೃಷ್ಣನೇ ಜಯಿಸುವನು ಅಲ್ಲದೇ
ಅಸುರ ದಾನವರು ಪಾಪಿಗಳು ಜಯಿಸುವರೆ
ಎನ್ನುತಲಿ ವರನಕುಲ ನುಡಿಯುತಿರೆ ನೇರಿಳೆಯು
ಆಕ್ಷಣದಿ ಪುನರಪಿಯು ಮೇಲಕ್ಕೆ ನೆಗೆದಿಹುದು ॥೧೬೬॥

**ಶ್ಲೋಕ**—ಸತ್ಯಂ ಮಾತಾ ಪಿತಾ ಜ್ಞಾನಂ
ಧರ್ಮೋ ಭ್ರಾತಾದಯಾಸಖಾ
ಶಾಂತಿಃ ಪತ್ನಿ ಕ್ಷಮಾ ಸೂನುಃ
ಷಡೈತೇ ಮಮ ಬಾಂಧವಾಃ ॥೫॥

ಸತ್ಯವೇ ಮಾತೆಯುಳು ಜ್ಞಾನವೇ ಪಿತನಿಹನು
ಧರ್ಮವೇ ಭ್ರಾತೃವಿಹ ಕರುಣೆಯೇ ಮಿತ್ರನಿಹ
ಶಾಂತಿಯೇ ನನಸತಿಯು ಈ ಆರು ಎನ್ನಯಾ
ಬಾಂಧವರು ಇರುತಿಹರು ಎಂದಿಹನು ಸಹದೇವ ॥೧೬೭॥

ಮತ್ತೆ ಆ ನೇರಳೆಯು ಮೇಲಕ್ಕೆ ನೆಗೆಯುತಿರೆ
ಹೇ ದ್ರುಪದನಂದಿನಿಯೇ ಸಾಧ್ವೀಶಿರೋಮಣಿಯೆ
ನಿನ್ನಯಾ ಮನದೊಳಿಹ ಗೂಢತರ ಧರ್ಮವನು
ನಿಜವಾಗಿ ನುಡಿಯುವುದು ಎಂದಿಹನು ಮುರಹರನು ॥೧೬೮॥

**ಶ್ಲೋಕ**—ಸುಂದರಂ ಪುರುಷಂ ದೃಷ್ಟ್ವಾ
ಪಿತರಂ ಭ್ರಾತರಂ ಸುತಂ ।
ಯೋನಿ ದ್ರವತಿ ನಾರೀಣಾಂ
ಸತ್ಯಂ ಬ್ರೂಮೀಹ ಕೇಶವ ॥೬॥

ಚೆಲುವಿನಾ ಸುಂದರರ ಪುರುಷರನು ಕಾಣುತಲಿ
ಪಿತರುಗಳು ಸುತರುಗಳ ಸೋದರರು ಆದರೂ
ಕಾಣುತಲಿ ಸ್ತ್ರೀಯರಾ ಯೋನಿಯದು ದ್ರವಿಸುವುದು
ಮುಚ್ಚುಮರೆ ಏನಿಲ್ಲ ಸತ್ಯವಿದು ಎಂದಿಹಳು ॥೧೬೯॥

ಈ ಪರಿಯ ದ್ರೌಪದಿಯು ನುಡಿಯುತಿರೆ ಆ ಫಲವು
ಮೇಲಕ್ಕೆ ಏರದಿರೆ ಯಾದವನು ನೋಡುತಲಿ
ನಿನ್ನಯಾ ಮನವನ್ನು ಮುಚ್ಚಿಡದೆ ವಂಚಿಸದೆ
ಎಲ್ಲವನು ಬಿಚ್ಚಿಡುತ ನಿಜ ನುಡಿವುದೆಂದಿಹನು ॥೧೭೦॥

**ಶ್ಲೋಕ**—ಪಂಚಮೋ ಪತಯಸ್ಸಂತಿ
ಷಷ್ಠಸ್ತು ಮಮ ರೋಚತೇ ।
ಪುರುಷಾಣಾಮಭಾವೇನ
ಸರ್ವಾ ನಾರ್ಯಾಃ ಪತಿವ್ರತಾಃ ॥೭॥

ಮುರಹರನೆ ಕೇಳುವುದು ಸತ್ಯವನು ನುಡಿಯುವೆನು
ಎನ್ನಯಾ ದೇಹದಲಿ ಶಕ್ತಿಗಳು ಅರಿಹವು
ಐವರೀಪತಿಗಳನು ದೇವರೆನಗತ್ತಿಹನು
ಇನ್ನೊಬ್ಬ ಪತಿಯಿಲ್ಲ ಎನ್ನುವಾ ಚಿಂತೆಯಿದೆ ॥೧೭೧॥

ಪುರುಷರ ಅಭಾವಲಿ ಜಗದೊಳಿಹ ನಾರಿಯರು
ಎಲ್ಲರೂ ಸಾಧ್ವಿಯರು ಸುವ್ರತಿಯರೆನಿಸುವರು
ಪರಪುರುಷ ಸಂಗವನು ಬಯಸುತಿಹ ಪಾಪಿ ಸತಿ
ಸತಿಯಹಳೇ ಕರುಣಾಳು ರಕ್ಷಿಪುದು ಎಂದಿಹಳು ॥೧೭೨॥

ನೇರಳೆಯ ಫಲವದುವೆ ಚೆಂಗನೆಯೆ ನೆಗೆಯುತಲಿ
ಶಾಖೆಯಾ ತೊಟ್ಟಿನಲಿ ತಾಗುತಲಿ ಮೆತ್ತಿಕುದು
ಜಯ ಜಯತು ಕೃಷ್ಣಂಗೆ ಜಯ ಜಯತು ಧರ್ಮಂಗೆ
ಎನ್ನುತಲಿ ಧೌಮ್ಯಮುನಿ ಘೋಷಣೆಯ ಗೈದಿಹನು ॥೧೭೩॥

ಕರುಣಾಳು ಕೃಷ್ಣನಾ ಕರುಣೆಯಾ ಕವಚವದು
ನಿಮಗಿರಲು ಕಷ್ಟಗಳ ಭಯವೆಂತು ಇರುತಿಹುದು
ಎನ್ನುತಲಿ ಧೌಮ್ಯಗುರು ಧರ್ಮಜನ ಸಹಿತದಲಿ
ಸಕಲರೂ ಕೃಷ್ಣಂಗೆ ಎರಗುತಲಿ ತೆರಳಿದರು ॥೧೭೪॥

ಕಣ್ವಮುನಿ ಕಣ್ತೆರೆದು ದೇವರನು ನೆನೆಯುತಲಿ
ಕರವನ್ನು ಚಾಚುತಿರೆ ಕರದೊಳಗೆ ಫಲವಿಳಿಯೆ
ಮನದೊಳಗೆ ಕೃಷ್ಣನಾ ಲೀಲೆಯದು ಎನ್ನುತಲಿ
ಫಲಸಹಿತ ಕೃಷ್ಣನಾ ಬಳಿಯಲ್ಲಿ ಬಂದಿಹನು ॥೧೭೫॥

ದಿವ್ಯದಾ ತೇಜದಲಿ ಹೊಳೆಯುತಿಹ ಕೃಷ್ಣನನು
ಕಾಣುತಲಿ ಫಲವನ್ನು ಚರಣದಲಿ ಇರಿಸುತಲಿ
ಕೃಷ್ಣಾರ್ಪಣೆನ್ನುತಲಿ ಸಾಷ್ಟಾಂಗ ಗೈಯುತಿರೆ
ಮುದದಿಂದ ಮಾಧವನು ಮುನಿವರನನೆಬ್ಬಿಸಿದ ॥೧೭೬॥

ಮುರಹರನು ಹಣ್ಣನ್ನು ಧರ್ಮಜಗೆ ಈಯುತಲಿ
ಹೆಚ್ಚುತಲಿ ಸಕಲರಿಗೆ ಹಂಚುವುದು ಎನ್ನುತಿರೆ
ಧರ್ಮಸುತ ಸಾವಿರದ ಹೋಳುಗಳ ಗೈಯುತಲಿ
ಹಂಚುತಲಿ ಸಕಲರೂ ಸವಿಯುತಲಿ ನಲಿದಿಹರು ॥೧೭೭॥

ಕಣ್ವಮುನಿ ಸಂತಸದಿ ಫಲವನ್ನು ಸವಿಯುತಲಿ
ಪಾರಣೆಯ ಮಾಡುತಲಿ ಪಾಂಡವರ ಸಹಿತದಲಿ
ಕೃಷ್ಣನನು ಬೀಳ್ಕೊಟ್ಟು ದ್ವಾರಕಾಧೀಶನನ
ನೆನೆಯುತಲಿ ಬೇರೊಂದು ಕಾನನಕೆ ತೆರಳಿದನು ॥೧೭೮॥

ಹೇ ಕೃಷ್ಣ ಗೋವಿಂದ ಮಾಧವ ಮುಕುಂದನೆ
ನಿನ್ನನ್ನು ನಂಬಿರುವ ಭಕುತರನು ಕೈಬಿಡದೆ
ಅನವರತ ಸಲಹುತಿಹ ಘನಮಹಿಮ ದೇವನಿಹೆ
ಎನ್ನುತಲಿ ಧರ್ಮಜನು ಕೃಷ್ಣಂಗೆ ಎರಗಿದನು ॥೧೭೯॥

ಧರ್ಮದಾ ಸಾಕಾರ ಮೂರ್ತಿಯೇ ನೀನಿರುವೆ
ಎನ್ನುತಲಿ ಧರ್ಮಜನನೆಬ್ಬಿಸುತ ಅಪ್ಪುತಲಿ
ಭೀಮನನು ಪಾರ್ಥನನು ಮಾದ್ರಿಜನರಪ್ಪುತಲಿ
ದ್ರೌಪದಿಯ ಸಂತೈಸಿ ಮುರಹರನು ನುಡಿದನು ॥೧೮೦॥

ಅನುಚಿತವ ಕಾರ್ಯಗಳ ನೀವೆಂದು ಮಾಡದಿರಿ
ಮುಂದಕ್ಕೆ ಶುಭವಹುದು ಶ್ರೇಯವದು ಲಭಿಸುವುದು
ಎನ್ನುತಲಿ ಮುರಹರನು ಹಿತನುಡಿಯ ನುಡಿಯುತಲಿ
ಹರಸುತಲಿ ರಥವೇರಿ ಪಯಣಕ್ಕೆ ಅಣಿಯಾಗೆ ॥೧೮೧॥

ಬಲದೊಳಗೆ ಧರ್ಮಜನು ಎಡದಲ್ಲಿ ಭೀಮಾದಿ
ಸೋದರರ ಸಹಿತದಲಿ ದ್ರೌಪದಿಯು ನೊಡಗೂಡಿ
ಸಾಗುತಲಿ ಕೊಳದ ಬಳಿ ಕೃಷ್ಣನನು ಕಳುಹುತಲಿ
ದ್ವಾರಕಾಧೀಶನನ ನೆನೆಯುತಲಿ ಮರಳಿದನು ॥೧೮೨॥

ಜನಮೇಜಯ ಕ್ಷಿತಿಪ ಕೇಳುವುದು ಬಳಿಕಿನಲಿ
ಧರ್ಮಜನು ಕೆಲಕಾಲ ಕಳೆಯುತಿರೆ ಕಾನನದಿ
ನದಿಕೊಳದ ಜಲವೆಲ್ಲ ಬತ್ತುತಿರೆ ಬಿಸಿಲಿನಲಿ
ಫಲಜಲವು ತೀರುತಲಿ ತರುನಿಕರ ಒಣಗುತಿರೆ ॥೧೮೩॥

ಬೇರೊಂದು ವನವನ್ನು ಅರಸುವುದು ಎನ್ನುತಲಿ
ಧರ್ಮಜನು ಪರಿವಾರ ಸಹಿತದಲಿ ಹೊರಡುತಲಿ
ನಳನಳಿಪ ಫಲಭರಿತ ವೃಕ್ಷಗಳ ನಿಕರಗಳ
ಚಿಲಿಪಿಲಿಯಗುಟ್ಟುತಿಹ ಪಕ್ಷಿಗಳ ಸಂಕುಲದ ॥೧೮೪॥

ನಿರ್ಮಳದ ಶುಭ್ರದಾ ಸಲಿಲದಲಿ ಸೊಗಯಿಸುವ
ಅಮಳದಾ ಕಾಂತಿಯಲಿ ಅರಳಿರುವ ಕಮಲಗಳ
ಮಕರಂದ ಸವಿಯುತಲಿ ಝೇಂಕಾರ ಗೈಯ್ಯುತಿಹ
ದುಂಬಿಗಳ ಗಾಯನದ ಸರಸಿಗಳ ಕಂಡಿಹನು ॥೧೮೫॥

ಗಿಳಿಗಳಾ ಮೆಲ್ನುಲಿಯು ಕೋಗಿಲೆಯ ಇಂಚರದ
ಹಂಸಗಳ ಗೀತೆಗಳ ನವಿಲುಗಳ ಕೇಕೆಗಳ
ಭಾರದ್ವಾಜ ಪಾರಿವದ ವಿಹಗಗಳ ಮಧುರತರ
ಕಲರವದ ಸೊಂಪಿನಾ ದ್ವೈತವನ ಹೊಕ್ಕಿಹನು ॥೧೮೬॥

ಇದು ರಮ್ಯವಾದುದೆಡೆ ಮನವನ್ನು ತಣಿಸುತಿದೆ
ಇಲ್ಲಿಯೇ ವಾಸಿಪುದು ಎನ್ನುತಲಿ ಯೋಚಿಸುತ
ಧರ್ಮಜನು ನಿಜಮೇಳದೈವರಾ ಸಹಿತದಲಿ
ವಿಪ್ರಜನರೊಡಗೂಡಿ ವಾಸ್ತವ್ಯ ಗೈದಿಹನು ॥೧೮೭॥

ಸೇವಕನನೋರ್ವನನು ಧರ್ಮಸುತ ಕರೆಯುತಲಿ
ನೀನೀಗ ಗಜಪುರಕೆ ತೆರಳುತಲಿ ಕೌರವರ
ವೃತ್ತಾಂತವರಿಯುತಲಿ ಬಂದು ತಿಳುಹುವುದು
ಎನ್ನುತಲಿ ಬೆಸಸುತಲಿ ಚರನನ್ನು ಅಟ್ಟಿದನು ॥೧೮೮॥

ಕೌರವರ ವಿಷಯವನು ಸೇವಕನು ಅರಿಯುತಲಿ
ಮರಳುತಲಿ ಕೌರವ ಮಹೀಪತಿಯ ಐಶ್ವರ್ಯ
ವೈಭವದ ಗರ್ವವನು ಆ ಅಟ್ಟಹಾಸವನು
ವಿಸ್ತರದಿ ವರ್ಣನೆಯ ಗೈದಿಹನು ಧರ್ಮಜಗೆ ॥೧೮೯॥

ಕೇಳುತಲಿ ದ್ರೌಪದಿಯು ಕೋಪದಲಿ ಕುದಿಯುತಲಿ
ನೀವುಗಳು ಈ ಗೊಡ್ಡು ಧರ್ಮದಲಿ ಸತ್ಯದಲಿ
ನಡೆಯುತಲಿ ಕಾನನದ ಗಡ್ಡೆಯನು ಗೆಣಸನು,
ತಿನ್ನುವಾ ದುರ್ಗತಿಯು ನಿಮಗಾಯ್ತು ಎಂದಿಹಳು ॥೧೯೦॥

ಕೌರವನು ಜಾಣನಿಹ ಕುಶಲಮತಿ ಧೂರ್ತನಿಹ
ನೀವುಗಳು ಕಡುಮೂರ್ಖಮೌಳಿಗಳು ಬೆಪ್ಪುಗಳು
ದ್ಯೂತದಲಿ ಸೋಲುತಲಿ ವನವಾಸವಪ್ಪಿದಿರಿ
ನಿಮ್ಮನ್ನು ವರಿಸುತಲಿ ತಪ್ಪನ್ನು ಗೈದಿಹೆನು ॥೧೯೧॥

ಸಭೆಯೊಳಗೆ ಎನ್ನಯಾ ಸೀರೆಯನು ಸೆಳೆಯುತಿರೆ
ಕೈಕಟ್ಟಿ ಕುಳಿತಿರುವ ನೀವುಗಳು ಗಂಡಸರೆ
ಮೀಸೆಯನು ಹೊತ್ತಿರುವ ಗಂಡಸರು ನೀವಲ್ಲ
ಬಳೆಯನ್ನು ತೊಟ್ಟಿರುವ ಹೆಂಗಸರು ಎಂದಿಹಳು ॥೧೯೨॥

ಕೇಳುತಲಿ ಕಲಿಭೀಮ ತನುರಕುತ ಕುದಿಯುತ್ತ
ಕೋಪದಾ ಜ್ವಾಲೆಯದು ನಖಶಿಖದಿ ಉರಿಯುತಲಿ
ಈಗಲೇ ಕೌರವರ ಕುನ್ನಿಗಳನೊರೆಸುವೆನು
ಎನ್ನುತಲಿ ಗದೆಯನ್ನು ತಿರುಹುತಲಿ ಎದ್ದಿಹನು ॥೧೯೩॥

ಫಲಗುಣನು ಬಿಲ್ಲನ್ನು ಟಂಕಾರ ಗೈಯ್ಯುತಲಿ
ಶರಗಳನು ಅಳವಡಿಸಿ ಈಗಲೇ ಕೌರವನ
ನೂರ್ವರಾ ಶಿರಗಳನು ತರಗೆಲೆಯ ತರಿದಂತೆ
ತರಿಯುತಲಿ ತೋರಣವ ಕಟ್ಟುವೆನು ಎಂದಿಹನು ॥೧೯೪॥

ದುಡುಕದಿರಿ ಮಿಡುಕದಿರಿ ಭೀಮಾರ್ಜುನಿರ್ವರೆ
ತಾಳ್ಮೆಯನು ತಾಳುವುದು ಈ ಸಮಯ ಸರಿಯಲ್ಲ.
ಹದಿಮೂರು ವರುಷಗಳ ಅವಧಿಯದು ಸವೆಯುತಿರೆ
ನಿಮ್ಮಯಾ ಶೌರ್ಯವನು ತೋರಿಪುದು ಎಂದಿಹನು ॥೧೯೫॥

ಎನ್ನಯಾ ಸತ್ಯದಾ ಕಳಶವನು ಕೆಡುಹದಿರಿ
ಧರ್ಮದಾ ಕರುಬೇರ ಕೊಯ್ಯುತಲಿ ಕೆಡುಹದಿರಿ
ದ್ರೌಪದಿಯ ಪರಿಯಲ್ಲಿ ನೀವುಗಳು ಮೂರ್ಖರೇ
ಎನ್ನುತಲಿ ಸೋದರರ ಸಾಂತ್ವನವಗೊಳಿಸಿದನು ॥೧೯೬॥

ಕಂಬನಿಯ ಸುರಿಸುತಿಹ ಕಾಮಿನಿಯು ದ್ರೌಪದಿಯು
ಕರುಳನ್ನನೇವರಿಸಿ ನಿನ್ನಯಾ ದುಃಖವನು
ಅರಿತಿಹೆನು ನೀ ಸುರಿವ ಕಂಬನಿಗೆ ನೂರ್ಮಡಿಯು
ಕೌರವರ ಪತ್ನಿಯರ ಕಣ್ಣೀರು ಹರಿಯುವುದು ॥೧೯೭॥

ಹದಿಮೂರು ವರುಷಗಳ ಕಾಲವದು ಕಳೆಯುತಿರೆ
ತ್ರೈಲೋಕ್ಯ ವೀರರೀ ಭೀಮಾರ್ಜುನೀರ್ವರೂ
ಕೌರವರ ಸರ್ವರನು ಸಂಹಾರ ಗೈಯ್ಯುವರು
ಸಾಮ್ರಾಜ್ಞಿಯಾಗುತಲಿ ನೀ ಮೆರೆವ ಎಂದಿಹನು ॥೧೯೮॥

**ವರವ್ಯಾಸರೈತಂದು ಅರ್ಜುನನು ತಪಗೈದು**
**ಶಿವನಿಂದ ಅಸ್ತ್ರಗಳ ಪಡೆಯಲಿಕೆ ತಿಳುಹಿದನು ॥**

ಆ ಸಮಯ ಬ್ರಹ್ಮನೇ ಧರೆಗಿಳಿದು ಬಂದಿಹನೊ
ವಿಷ್ಣುವೇ ನರರೂಪ ತಾಳುತಲಿ ಬಂದಿಹನೊ
ಎಂಬಂತೆ ದಿವ್ಯ ಪ್ರಕಾಶದಲಿ ಹೊಳೆಯುತಿಹ
ಕೃಷ್ಣಮುನಿ ವರವ್ಯಾಸ ಗುರುವರನು ಐತಂದ ॥೧೯೯॥

ಬರುತಲಿರೆ ವಿಪ್ರಜನ ಬುಧಜನರು ಏಳುತಲಿ
ಗುರುವರನ ಚರಣಕ್ಕೆ ಸಕಲರೂ ಎರಗುತಿರೆ
ಧರ್ಮಜನು ಸೋದರರು ದ್ರೌಪದಿಯ ಸಹಿತದಲಿ
ವ್ಯಾಸರಾ ಚರಣದಲಿ ಸಾಷ್ಟಾಂಗ ಗೈದಿಹರು ॥೨೦೦॥

ವರವ್ಯಾಸ ಮುನಿವರನು ಧರ್ಮಜನ ಮರುತಜನ
ಅರ್ಜುನನ ಮಾದ್ರಿಜರ ತೆಗೆತೆಗೆದು ಅಪ್ಪುತಲಿ
ಒಳಗೊಳಗೆ ಕುದಿಯುತಿಹ ದುಃಖದಲಿ ಮಿಡುಕುತಲಿ
ಅಳುತಲಿಹ ದ್ರೌಪದಿಯ ಕಣ್ಣೀರನೊರೆಸಿದನು ॥೨೦೧॥

ಬಳಿಕಲಾ ಗುರುವರನ ಸಹಿತದಲಿ ಧರ್ಮಜನು
ನಿಜಪರ್ಣಶಾಲೆಯಲಿ ಐತಂದು ಉಚಿತದಲಿ
ದರ್ಭೆಯಾ ಆಸನವು ಇದು ರತ್ನಪೀಠವಿದೆ
ಇಲ್ಲಿಯೇ ಕೂಡ್ರುವುದು ಎಂದಿಹನು ನಮಿಸುತಲಿ ॥೨೦೨॥

ಕಮಲದಾ ಪತ್ರವೇ ಕಾಂಚನದ ಪಾತ್ರೆಯಿದು
ಈ ಪರ್ಣ ಶಾಲೆಯೇ ಎಮ್ಮಯಾ ಅರಮನೆಯು
ಎಮ್ಮಯಾ ಆತಿಥ್ಯ ಸ್ವೀಕರಿಪುದೆನ್ನುತಲಿ
ಧರ್ಮಜನು ಋಷಿವರಗೆ ಸತ್ಕಾರ ಗೈದಿಹನು ॥೨೦೩॥

ಭರತ ಕುಲದರಸುಗಳ ದಿವ್ಯ ಪಾರಂಪರೆಯು
ನೃಪರೊಳಗೆ ನಿನ್ನಸಮ ಧರ್ಮದಲಿ ಸತ್ಯದಲಿ
ಕೀರ್ತಿ ಪ್ರಕಾಶದಲಿ ತೊಳಗುತಿಹ ಬೆಳಗುತಿಹ
ಬೇರೊಬ್ಬ ನೃಪನಿಲ್ಲ ಎಂದಿಹನು ವರವ್ಯಾಸ ॥೨೦೪॥

ಸೋದರರು ಎನ್ನನ್ನು ತೊರೆಯುತಲಿ ಹೋದರೂ
ರೋಷದಲಿ ಹೆಂಡತಿಯು ಎನ್ನನ್ನು ಶಪಿಸಿದೊಡೆ
ಆಕಾಶ ಕಳಚುತಲಿ ಶಿರದಲ್ಲಿ ಬಿದ್ದೊಡೆಯು
ಸತ್ಯದಲಿ ನಡೆಯುವೆನು ಎಂದಿಹನು ಧರ್ಮಜನು ॥೨೦೫॥

ಧರ್ಮಜನೆ ಸತ್ಯಕ್ಕೆ ಎಂದಿಗೂ ಜಯವಿಹುದು
ನಿಮಗೆಲ್ಲ ದೈವದಾ ಬಲವುಂಟು ಮೇಲಾಗಿ
ಘನಮಹಿಮ ಕೃಷ್ಣನಾ ಕರುಣೆಯಾ ಕವಚವಿದೆ
ನಿಮಗಾವ ಭಯವಿಹುದು ಎಂದಿಹನು ಗುರುರಾಯ ॥೨೦೬॥

ಶ್ರೇಷ್ಠವಿಹ ಪ್ರತಿಸ್ಮೃತಿಯ ವಿದ್ಯೆಯನು ಅರಿಯುತಿರೆ
ಜಗದೊಳಿಹ ವಿಷಯಗಳು ಎಲ್ಲವೂ ತಿಳಿಯುವವು
ಇದು ಸಕಲ ಸಂಪದವ ವೈಭವವನೀಯುವುದು
ಎನ್ನುತಲಿ ಪ್ರತಿಸ್ಮೃತಿಯ ವಿದ್ಯೆಯನು ಅರುಹಿದನು ॥೨೦೭॥

ಫಲಗುಣಗೆ ಪ್ರತಿಸ್ಮೃತಿಯ ವಿದ್ಯೆಯನು ತಿಳುಹುವುದು
ಇದನರಿತು ಉತ್ತರದ ದಿಕ್ಕಿನೆಡೆ ಸಾಗುತಲಿ
ಮಹೇಂದ್ರ ಕೀಲದಲಿ ಪರ್ವತದಿ ಭಕುತಿಯಲಿ
ಶೂಲಿಯನು ಭಜಿಸುತಲಿ ತಪವನ್ನು ಗೈಯ್ಯುವುದು ॥೨೦೮॥

ಏಕಾಂತದೆಡೆಯಲ್ಲಿ ಮುನಿವರನು ಧರ್ಮಜಗೆ
ಭವದುರಿತ ಪರಿಹರಿಪ ತ್ರಿಪುರಹರ ಈಶ್ವರನ
ಮಂತ್ರವದು ಉಪದೇಶಗೈಯ್ಯುತಲಿ ಇದು ನೃಪರ
ಇಷ್ಟಾರ್ಥ ಸಿದ್ಧಿಯನು ಈಯುವುದು ಎಂದಿಹನು ॥೨೦೯॥

ಧರಣೀಶ ಕಷ್ಟಗಳ ತೊಲಗಿಸುವ ಮಂತ್ರವಿದು
ಶತ್ರುಗಳ ಸಂಹಾರ ಗೈಯ್ಯುವಾ ಮಂತ್ರವಿದು
ನೃಪರುಗಳ ಸಂಪದವ ಅಭ್ಯುದಯ ಕೀರ್ತಿಯನು
ಸರ್ವಾರ್ಥ ಕಾಮಿತವನೀಯುತಿಹ ಮಂತ್ರವಿದು ॥೨೧೦॥

ಪರದಿವ್ಯ ಮಂತ್ರವಿದ ಕೊಳ್ಳೆಂದು ಧರ್ಮಜಗೆ
ಈಶನಾ ಮಂತ್ರೋಪದೇಶವನು ಗೆಯ್ಯುತಲಿ
ನಿನ್ನಯಾ ಕಷ್ಟಗಳು ಪಶುಪತಿಯ ದಯೆಯಿಂದ
ಸಕಲವೂ ತೊಲಗುವವು ಎಂದಿಹ ಋಷಿವರನು ॥೨೧೧॥

ಪಾರ್ಥನಿಗೆ ದಿವ್ಯವೀ ಮಂತ್ರವನು ಅರುಹುತಲಿ
ಆ ಇಂದ್ರ ಕೀಲದಾ ಪರ್ವತದಿ ಶೂಲಿಯನು
ಭಕುತಿಯಲಿ ಭಜಿಸುತಲಿ ವರಭಾಳಲೋಚನನ
ಕರುಣೆಯ ಅನುಗ್ರಹವ ಪಡೆಯುವುದು ಎಂದಿಹನು ॥೨೧೨॥

ನಿನ್ನಯಾ ಶತ್ರುಗಳ ನಿರ್ಮೂಲ ಗೈಯ್ಯಲಿಕೆ
ಶಕ್ತಿಯನು ಈಯಲಿಕೆ ಲೋಕದಲಿ ಶ್ರೇಷ್ಠನಿಹ
ಶಂಕರನು ಒಬ್ಬನೇ ಶಕ್ತನಿಹ ಸಮರ್ಥನಿಹ
ಆ ಶಿವನ ಭಜಿಸುವುದು ಎಂದಿಹನು ವರವ್ಯಾಸ ॥೨೧೩॥

ಹೇ ಮಗಳೆ ದ್ರೌಪದಿಯೆ ಚಿಂತೆಯನು ಮಾಡದಿರು
ಜಗದೊಳಗೆ ನಿನ್ನಯಾ ಗಂಡಂದಿರೈವರೀ
ಪಾಂಡವರ ಸರಿಸಮರರು ವೀರರುಗಳಾರಿಲ್ಲ
ಸುರರುಗಳು ಅಂಜುವರು ನರರುಗಳ ಪಾಡೇನು ॥೨೧೪॥

ಹದಿಮೂರು ವರುಷಗಳ ಕಾಲವದು ಉರುಳುತಿರೆ
ನಿನ್ನವರು ಕೌರವರ ಸವರುವರು ಖಚಿತದಲಿ
ನಿನ್ನಯಾ ಬಯಕೆಗಳು ಸಿದ್ಧಿಪವು ಎನ್ನುತಲಿ
ಮುನಿವರನು ದ್ರೌಪದಿಯ ಸಾಂತ್ವನವಗೊಳಿಸಿದನು ॥೨೧೫॥

ಬಳಿಕಲಾ ಘನಮಹಿಮ ಕೃಷ್ಣ ದ್ವೈಪಾಯನರು
ಪಾಂಡವರನೈವರನು ಧೃಡವಾಗಿ ಅಪ್ಪುತಲಿ
ದ್ರೌಪದಿಯ ಸಹಿತದಲಿ ಸಕಲರನು ಹರಸುತಲಿ
ಮುನಿನಿಕರ ಕರುಣಿಸುತ ಆಶ್ರಮಕೆ ತೆರಳಿದನು ॥೨೧೬॥

**ಅರ್ಜುನನು ಆ ಇಂದ್ರಕೀಲದಾ ಪರ್ವತಕೆ ।**
**ಐತಂದು ಘೋರತರ ತಾಪವನು ಗೈದಿಹನು ॥**

ಧರ್ಮಜನು ಅರ್ಜುನಗೆ ಏಕಾಂತ ಸ್ಥಳದಲ್ಲಿ
ಮುನಿವರನು ಹೇಳಿರುವ ಧೂರ್ಜಟಿಯ ಮಂತ್ರವನು
ಉಪದೇಶಗೈಯ್ಯುತಲಿ ಕೈಲಾಸ ಪರ್ವತದ
ಸನಿಹದಲಿ ಮೆರೆಯುತಿಹ ವರ ಇಂದ್ರಕೀಲದಾ ॥೨೧೭॥

ಶೈಲಕ್ಕೆ ತೆರಳುತಲಿ ಭವಹರನ ಪಾವನನ
ಶೂಲಿಯನು ಮೌಳಿಯನು ಮಹದೇವ ದೇವನನ
ದೇವೇಂದ್ರ ಸುರವೃಂದ ವರುಣಾಗ್ನಿ ರವಿಚಂದ್ರ
ಅಜಹರಿಗಳರ್ಚಿತನ ಶಂಕರನ ಭಜಿಸುವುದು ॥೨೧೮॥

ಪ್ರತಿನಿತ್ಯ ಬ್ರಾಹ್ಮೀ ಮುಹೂರ್ತದಲಿ ಏಳುತಲಿ
ಭವದುರಿತ ತಾರಕನ ತಾರಕನ ಮರ್ದನನ
ತ್ರಿಪುರಹರ ಕಾಮಹರ ಪಾರ್ವತೀ ರಮಣನನು
ಭಜಿಸುತಲಿ ತಪಗೈದು ಶಿವಕೃಪೆಯ ಪಡೆಯುವುದು ॥೨೧೯॥

ಭಕುತಜನವತ್ಸಲನ ಶಂಕರನ ಕರುಣೆಯಲಿ
ಶತ್ರುಗಳ ಸಂಹರಿಪ ಘೋರತರ ಭೀಕರದ
ಪ್ರಳಯವನು ಗೈಯ್ಯುವಾ ಪಾಶುಪತ ಅಸ್ತ್ರವನು
ಪಶುಪತಿಯ ಕರುಣೆಯಲಿ ಪಡೆಯುವುದು ಎಂದಿಹನು ॥೨೨೦॥

ಧನಪತಿಯು ದೇವೇಂದ್ರ ಅಗ್ನಿ ವರುಣಾದಿಗಳು
ಅಷ್ಟವಸು ರುದ್ರಾದಿ ಯಮಧರ್ಮ ಸಿದ್ಧಿಗಳು
ಗಂಧರ್ವ ಕಿನ್ನರರು ಕಿಂಪುರುಷ ಯಕ್ಷರರು
ಶಸ್ತ್ರಾಸ್ತ್ರ ನಿನಗೀಯಲೆನ್ನುತಲಿ ನುಡಿದಿಹನು ॥೨೨೧॥

ವಸುಧೆಯಲಿ ನಿನ್ನಸಮ ವೀರರಿಲ್ಲೆನ್ನುತಲಿ
ಗರ್ವದಲಿ ಉಬ್ಬದಿರು ಸೊಕ್ಕಿನಲಿ ಮೆರೆಯದಿರು
ಮುನ್ನಿನಲಿ ರಾವಣನು ಬಲಮದದಿ ಮೆರೆಯುತಲಿ
ಉರಿಯುತಲಿ ಹಾಳಾದನೆಂಬುದನು ಅರಿಯೆಯಾ ॥೨೨೨॥

ಪ್ರಾಣವನು ತೆತ್ತರೂ ಸತ್ಯವನೆ ನುಡಿಯುವುದು
ಹೀನರಾ ಸಹವಾಸವೆಂದಿಗೂ ಮಾಡದಿರು
ತನ್ನಂತೆ ಪರರೆಂದು ಸಕಲ ಭೂತಂಗಳಲಿ
ಸಮಭಾವ ದಯೆಯನ್ನು ತೋರುವುದು ಎಂದಿಹನು ॥೨೨೩॥

ಇಂದ್ರಿಯಂದ ವಿಷಯೋಪಭೋಗಗಳ ತೊರೆಯುತಲಿ
ಕಾಮವನು ನಿಗ್ರಹಿಸಿ ನಿರ್ಮೋಹನಾಗುತಲಿ
ಪರವಧುವ ಸಂಗವನು ಎಂದಿಗೂ ಮಾಡದಿರು
ಕಾಮಹರ ಶಿವನನ್ನು ಚಿತ್ತದಲಿ ಭಜಿಸುವುದು ॥೨೨೪॥

ಅಲ್ಲಲ್ಲಿ ಚೆಲುವೆಯರು ಸುರಲೋಕ ಲಲನೆಯರು
ತಮ್ಮಯಾ ಸೌಂದರ್ಯ ಲಾವಣ್ಯ ರೂಪದಲಿ
ಬಲೆಯನ್ನು ಬೀಸುತಲಿ ಮರುಳಾಗಿ ಮಾಡುತಲಿ
ನಿನ್ನನು ಸೆಳೆಯುವರು ಸಿಲುಕದಿರು ಎಂದಿಹನು ॥೨೨೫॥

ಮುಂದಣಾ ಘನತರದ ಕಾರ್ಯವನು ನೆನೆಯುತಲಿ
ಏಕಾಗ್ರಚಿತ್ತವಲಿ ಅನವರತ ಶಂಕರನ
ಧ್ಯಾನಿಸುತ ತಪಗೆದು ಕೃಪೆಯನ್ನು ಪಡೆಯುವುದು
ಎನ್ನುತಲಿ ಧರ್ಮಜನು ಫಲಗುಣಗೆ ನುಡಿದಿಹನು ॥೨೨೬॥

ಹರ ಹರಿಯು ಇರುತಿಹನು ಹರಿ ಹರನು ಇರುತಿಹನು
ಹರಿ ಹರರ ಭೇದವನು ಎಂದಿಗೂ ಮಾಡದಿರು
ಹರಿಹರರ ಭೇದವನು ಮಾಡುತಲಿ ನಿಂದಿಸುವ
ನರರುಗಳು ನರಕದಲಿ ಬೀಳುವರು ಎಂದಿಹನು ॥೨೨೭॥

ಬಳಿಕಲಾ ಫಲಗುಣನು ಧರ್ಮಜಗೆ ಮರುತಜಗೆ
ಸಾಷ್ಟಾಂಗ ಗೈಯ್ಯುತಲಿ ಮಾದ್ರಿಜರನಪ್ಪುತಲಿ
ಋಷಿಜನಕೆ ಎರಗುತಿರೆ ಅಕ್ಷತೆಯು ನೆರಚುತಲಿ
ಇಷ್ಟಾರ್ಥ ಸಿದ್ಧಿಸಲಿ ಎನ್ನುತಲಿ ಹರಸಿದರು ||೨೨೮||

ದ್ರೌಪದಿಯು ಮುನಿ ಪಥಂಗಳೊಡಗೂಡಿ ಐತಂದು
ಫಲಗುಣನ ನೊಸಲಿನಲಿ ತಿಲಕವನು ಹಚ್ಚುತಲಿ
ಕೊರಳೊಳಗೆ ಪುಷ್ಪದಾ ಹಾರವನು ಇರಿಸುತಲಿ
ದಿವ್ಯದಾ ಮಂಗಲದ ಆರತಿಯ ನೆತ್ತಿದಳು ||೨೨೯||

ಮೂರುಲೋಕ ಗಂಡನೇ ತ್ರೈಲೋಕ್ಯ ವೀರನೇ
ಶತ್ರುಗಳ ವೈಭವದ ಗರ್ವವನು ನೆನೆಯುವುದು
ಸಭೆಯೊಳಗೆ ಎನಗಾದ ಅಪಮಾನ ನೆನೆಯುತಲಿ
ಮುಯ್ಯವನು ತೀರಿಪುದು ನೆನೆಯುವುದು ಎಂದಿಹಳು ||೨೩೦||

ನಿಮ್ಮಣ್ಣ ನುಡಿದಿರುವ ನುಡಿಗಳನು ತಪ್ಪದಲೆ
ನೆನೆಪಿನಲಿ ಇರಿಸುತಲಿ ಮುಕ್ಕಣ್ಣನೊಲಿಸುತಲಿ
ಶಸ್ತ್ರಾಸ್ತ್ರ ಪಡೆಯುತಲಿ ಶತ್ರುಗಳ ವಧಿಸುವುದು
ಎನ್ನುತಲಿ ಪಾಂಚಾಲಿ ಫಲಗುಣಗೆ ಎರಗಿದಳು ||೨೩೧||

ಕೇಳುವುದು ಪಾಂಚಾಲಿ ಪಶುಪತಿಯ ಭಜಿಸುತಲಿ
ಪ್ರಳಯವನು ಗೈಯ್ಯುವಾ ಪಾಶುಪತ ಅಸ್ತ್ರವನು
ಪಡೆಯುತಲಿ ಕೌರವರ ಶಿರಗಳನು ತರಿಯುವೆನು
ನಿನ್ನಯಾ ಇಷ್ಟಾರ್ಥ ಫಲಿಸುವುದು ಎಂದಿಹನು ||೨೩೨||

ಬಿಗಿಯಾಗಿ ಕಚ್ಚೆಯುದ ಪಂಚೆಯುದು ಧರಿಸುತಲಿ
ಬೆನ್ನಿನಲಿ ಬತ್ತಳಿಕೆ ಭುಜದೊಳಗೆ ಚಾಪವನು
ಟೊಂಕದಲಿ ಕತ್ತಿಯು ಕಠಾರಿಯನು ಕಟ್ಟುತಲಿ
ಧರ್ಮಜಗೆ ಎರಗುತಲಿ ಕಲಿಪಾರ್ಥ ಹೊರಟಿಹನು ||೨೩೩||

ಸುಕಪಿಕವು ಹಂಸಗಳು ಪಾರಿವ ಭರದ್ವಾಜ
ಪಕ್ಷಿಗಳು ಮಧುರತರ ಗಾಯನವ ಗೈದಿಹವು
ಪಶುಪತಿಯ ಒಲುಮೆಯುದು ಸಿದ್ಧಿಪುದು ಎನ್ನುತಲಿ
ನವಿಲುಗಳು ಗರಿಗೆದರಿ ನರ್ತನವ ಗೈದಿಹವು ||೨೩೪||

ಕೊಳದೊಳಗೆ ಅರಳಿರುವ ಕಮಲಗಳ ಮಕರಂಧ
ಸವಿಯುತಲಿ ದುಂಬಿಗಳು ಝೇಂಕಾರ ಗೈದಿಹವು
ವೃಕ್ಷಗಳು ಪುಷ್ಪಗಳ ರಾಶಿಯನು ಸುರಿದಿಹವು
ತಂಬೆಲರು ಗಂಧವನು ಸೂಸುತಲಿ ಸುಳಿದಿಹುದು ||೨೩೫||

ಶುಭಶಕುನ ವೀಕ್ಷಿಸುತ ಕಾರ್ಯವದು ಸಿದ್ಧಿಪುದು
ಎನ್ನುತಲಿ ಕಲಿಪಾರ್ಥ ಸಂತಸದಿ ಸಾಗುತಲಿ
ಗಿರಿಗಳನು ನದಿಗಳನು ವನವನವ ದಾಂಟುತಲಿ
ವರಭರತ ವರುಷದಾ ಸೀಮೆಯನು ಉತ್ತರಿಸಿ ||೨೩೬||

ಘನಮಹಿಮ ಪರಶಿವನು ವಾಸಿಸುವ ಪಾವನದ
ಶೃತಿಸ್ಮೃತಿಗೆ ಆಗಮಕೆ ತವರು ಮನೆಯಾಗಿರುವ
ಸಂಚಿತದ ಪಾಪಗಳ ಭವದುರಿತ ಪರಿಹರಿಪ
ಕೈಲಾಸ ಸೀಮೆಯಲಿ ಕಲಿಪಾರ್ಥ ಬಂದಿಹನು ||೨೩೭||

ನಿರ್ಮಳದ ಸಲಿಲದಲಿ ಸೊಗಸುತಿಹ ಸರಸಿಗಳ
ಅರಳಿರುವ ಕಮಲಗಳ ಗಂಧವನು ಸವಿಯುತಲಿ
ಗಾಯನವ ಗೈಯ್ಯುತಿಹ ದುಂಬಿಗಳ ನಿಕರಗಳ
ಮನದಣಿಪ ಸುಂದರದ ವನವನ್ನು ಕಂಡಿಹನು ||೨೩೮||

ಮಾವುಗಳ ದ್ರಾಕ್ಷಿಗಳ ದಾಳಿಂಬ ಹಲಸುಗಳ
ಬಾಳೆಗಳ ತೆಂಗುಗಳ ಕಿತ್ತಳೆಯು ನೇರಿಳೆಯು
ರಾಮಫಲ ಸೀತಾಫಲಾದಿಗಳ ವಿಧವಿಧದ
ಅಗಣಿತದ ಫಲಭರಿತ ವೃಕ್ಷಗಳ ಕಂಡಿಹನು ||೨೩೯||

ಇದು ಹರನ ಶಂಭುವಿನ ಸ್ಥಾಣುವಿನ ಸ್ಥಾನವಿದೆ
ಇದು ಶಿವನ ಪಾವನದ ಪುಣ್ಯದಾ ಕ್ಷೇತ್ರವಿದೆ
ಇಲ್ಲಿಯೇ ನೆಲೆಸುವುದು ಇಷ್ಟಾರ್ಥ ಸಿದಿಪುದು
ಎನ್ನುತಲಿ ಅಶರೀರ ವಾಣಿಯುದು ನುಡಿದಿಹುದು ||೨೪೦||

ಗಗನವೇ ಕಳಚುತಲಿ ಕಾಸಾರವಾಗಿಹುದೊ
ಭೂರಮೆಯು ತನ್ನಯಾ ಸೌಂದರ್ಯ ನೋಡಲಿಕೆ
ಕರದೊಳಗೆ ಹಿಡಿದಿರುವ ಕನ್ನಡಿಯೊ ಎಂಬಂತೆ
ಸುಂದರದ ಮಾನಸ ಸರೋವರವು ಎಸೆದಿಹುದು ||೨೪೧||

ಹಿಮದಿಂದ ಆವೃತದ ಗಗನವನು ಚುಂಬಿಸುವ
ಶಿಖರದಲಿ ಶುಭ್ರದಾ ತೇಜದಲಿ ಹೊಳೆಯುತಿಹ
ಪಾವನದ ಕೈಲಾಸ ಪರ್ವತವ ನೋಡುತಲಿ
ಇದು ಶಿವನ ಮನೆ ಎಂದು ಕರಮುಗಿದು ನಮಿಸಿದನು ||೨೪೨||

ಪಾರ್ವತೀವಲ್ಲಭನು ವಾಸಿಸುವ ಪಾವನದ
ಭವದುರಿತ ಪರಿಹರಿಪ ಪುಣ್ಯದಾ ಸ್ಥಾನವಿದು
ಪಾಪಗಳ ಕಳೆಯುತಲಿ ಮೋಕ್ಷವನು ಈಯುತಿಹ
ಪಶುಪತಿಯ ಸ್ಥಾನವಿದು ಎನ್ನುತಲಿ ನಮಿಸಿದನು ||೨೪೩||

ಇದು ಹರನ ಶಂಭುವಿನ ಸ್ಥಾಣುವಿನ ಸ್ಥಾನವಿದೆ
ಇದು ಶಿವನ ಪಾವನದ ಪುಣ್ಯದಾ ಕ್ಷೇತ್ರವಿದೆ
ಇಲ್ಲಿಯೇ ನೆಲೆಸುವುದು ಇಷ್ಟಾರ್ಥ ಸಿದ್ಧಿಪುದು
ಎನ್ನುತಲಿ ಅಶರೀರ ವಾಣಿಯದು ಮೊಳಗಿಹುದು ||೨೪೪||

ಮರುದಿವಸ ಬ್ರಾಹ್ಮೀ ಮುಹೂರ್ತದಲಿ ಏಳುತಲಿ
ಸರಸಿಯಲಿ ಸ್ನಾನವನು ಗೈಯ್ಯುತಲಿ ಶುದ್ಧದಲಿ
ಶುಭ್ರದಾ ವಸ್ತ್ರವನು ಧರಿಸುತಲಿ ಫಲಗುಣನು
ಭಸ್ಮವನು ನೊಸಲಿಂಗೆ ಅಂಗಾಂಗ ಲೇಪಿಸುತ

ಬೆನ್ನಿನಲಿ ಬತ್ತಳಿಕೆ ಹೆಗಲಿನಲಿ ಚಾಪವನು
ಟೊಂಕದಲಿ ಹಿಡುಗದ ಕಠಾರಿಯನು ಕಟ್ಟುತಲಿ

ನಿಲ್ಲುತಲಿ ತೋಳೆರಡು ಮೇಲಕ್ಕೆ ಎತ್ತುತಲಿ ||೨೪೫||

ಅರೆ ತೆರೆದ ನಯನದಲಿ ಏಕಾಗ್ರ ಚಿತ್ತದಲಿ
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಎನ್ನುತಲಿ ಧರ್ಮಜನು ಉಸುರಿರುವ ಮಂತ್ರವನು
ಮನದೊಳಗೆ ನೆನೆಯುತಲಿ ಜಪವನ್ನು ಗೈದಿಹನು ||೨೪೬||

ಸುರಪತಿಯು ದೇವೇಂದ್ರ ನೋಡುತಲಿ ಭರದಲ್ಲಿ
ವಿಪ್ರನಾ ವೇಷವನು ಧರಿಸುತಲಿ ಧರೆಗಿಳಿದು
ಶರಚಾಪ ಧರಿಸುತಲಿ ತಪಗೈವ ಹೊಸಪರಿಯ
ತಾಪಸಿಯ ನೀನಾರು ಎಂದಿಹನು ಪಾರ್ಥಂಗೆ ||೨೪೮||

ಋಷಿವರರು ಮುನಿವರರು ಸಾಧುಗಳು ಸಾಧಕರು
ಶಾಂತಿಯಲಿ ಧ್ಯಾನದಲಿ ತಪಗೈವ ತಾಣವಿದು
ಧನುವನ್ನು ಶರಗಳನು ಧರಿಸಿರುವ ನೀನಿಲ್ಲಿ
ಏತಕ್ಕೆ ಬಂದಿರುವೆ ಎಂದಿಹನು ಸುರಪತಿಯು ||೨೪೯||

ಸಾಮಾನ್ಯ ನರರುಗಳು ಸುಳಿಯದಾ ತಾಣವಿದು
ನೀನಿಲ್ಲಿ ಬಂದಿಹುದು ಶೌರ್ಯವನು ತೋರುವುದು
ಕ್ಷತ್ರಿಯರ ತೇಜದಲಿ ತೊಳಗುತಿಹ ಋಷಿವರನು
ನೀನಾರು ಹೇಳುವುದು ಎಂದಿಹನು ದೇವೇಂದ್ರ ||೨೫೦||

ಓಂಸೆಯನು ಗೈಯ್ಯಲಿಕೆ ನಾನಿಲ್ಲಿ ಬಂದಿಲ್ಲ
ಘೋರ ತಪಗೈಯ್ಯುತಲಿ ಹರನನ್ನು ಒಲಿಸುತಲಿ
ದಿವ್ಯಾಸ್ತ್ರ ಪಡೆಯಲಿಕೆ ನಾನಿಲ್ಲಿ ಬಂದಿಹೆನು
ಎನ್ನಯಾ ತಪಕೆಡಿಪ ನೀನಾರು ಹೇಳೆಂದ

ಸುರಪತಿಯು ತನ್ನಯಾ ನಿಜರೂಪ ತೋರಿಸುತ
ಹೇ ಮಗನೆ ನಿನ್ನಯಾ ಕಾರ್ಯವನು ಮೆಚ್ಚಿಹೆನು
ಉಗ್ರತಪ ಗೈಯ್ಯುತಲಿ ಪಶುಪತಿಯ ನೀನೊಲಿಸೆ
ಶತ್ರುಗಳ ಸಂಹರಿಪ ಅಸ್ತ್ರಗಳ ನೀಯುವೆನು ||೨೫೨||

ಮಂಗಳವು ಶುಭಕರವು ನಿನಗಾಗಲೆನ್ನುತಲಿ
ನಿನ್ನಯಾ ಕಾಮಿತವು ಸಿದ್ಧಿಸಲಿ ಎನ್ನುತಲಿ
ದೇವೇಂದ್ರ ತೆರಳುತಿರೆ ಫಲಗುಣನು ದಿವ್ಯದಾ
ಮಂತ್ರ[illegible] ಜಪಿಸುತಲಿ ತಪವನ್ನು ಗೈದಿಹನು ||೨೫೩||

**ಅರ್ಜುನನು ಘೋರತಪಗೈಯ್ಯುತಿರೆ ಪರಶಿವನು |**
**ಬೇಡನಾ ವೇಷವನು ಧರಿಸುತಲಿ ಬಂದಿಹನು ||**

ಹೇ ಪರೀಕ್ಷಿತ ಪುತ್ರ ಜನಮೇಜಯನೆ ಕೇಳ್ವುದು
ಮೂರು ದಿನಕೊಮ್ಮೊಮ್ಮೆ ಆಹಾರವನು ಸೇವಿಸಿ
ತಿಂಗಳುಗಳಾರನ್ನು ಕಳೆಯುತಲಿ ಫಲಗುಣನು
ಮೂರು ದಿನಕೊಂದು ಸಲ ಆಹಾರ ಸೇವಿಸುತ ||೨೫೪||

ತರಗೆಲೆಯ ಸೊಪ್ಪುಗಳ ಕಳಿಕೆಗಳ ತಿನ್ನುತಲಿ
ತಿಂಗಳುಗಳ್ಎರಡನ್ನು ಕಳೆಯುತಲಿ ಫಲಗುಣನು
ನೀರು ಆಹಾರವದು ಅವುದೂ ಇಲ್ಲದೆಯೆ
ಬರಿಗಾಳಿ ಸೇವಿಸುತ ತಪವನ್ನು ಗೈದಿಹನು ೨೫೫||

ತುದಿಗಾಲ ನಿಲ್ಲುತಲಿ ಮೊಗವೆತ್ತಿ ಮೇಲಕ್ಕೆ
ಕರವೆರಡ ಚಾಚುತಲಿ ಬರಿಗಾಳಿ ಸೇವಿಸುತ

ಎನ್ನುತಲಿ ಉಗ್ರತಪ ಗೈದಿಹನು ಅರ್ಜುನನು ||೨೫೬||

ಕೈಲಾಸಾಧಿಪತಿಯೆ ಫಾಲಾಕ್ಷ ಮಹೇಶನೆ
ಹೇ ಶೂಲಪಾಣಿಯೆ ಹೇ ಫಾಳನೇತ್ರನೆ
ಮದನಾರಿ ತ್ರಿಪುರಾರಿ ಅಘಹಾರಿ ಹರಹರನೆ
ಕರುಣಿಪುದು ಎನ್ನುತಲಿ ತಪವನ್ನು ಗೈದಿಹನು ೨೫೭||

[illegible] ಶಿವನೆ ಗಳ
ಧ್ಯಾನಿಸುತಲಿ ಏಕಾಗ್ರ ಚಿತ್ತದಲಿ ತೂರ್ಯದಲಿ
ಎನ್ನೊಳಗೆ ಶಿವನಿಹನೊ ಶಿವನೊಳಗೆ ತಾನಿಹನೊ
ಎಂಬಂತೆ ಅದ್ವೈತವಾಗುತಲಿ ನೆನೆದಿಹನು ||೨೫೮||

ಉರಿಬಿಸಿಲು ಮಳೆಗಾಳಿ ಬಿರುಗಾಳಿ ಸಹಿಸುತಲಿ
ದಿನರಾತ್ರಿ ಎನ್ನದಲೆ ಕುಳಿತ ಎಡೆ ತೊರೆಯದಲೆ
ಹಸಿವೆ ನೀರಡಿಕೆಗಳ ಪರಿವೆಯದು ಇಲ್ಲದೆಯೆ
ಕಠಿಣತರ ತಪವನ್ನು ಫಲಗುಣನು ಗೈದಿಹನು ||೨೫೯||

ಈ ಪರಿಯ ಅರ್ಜುನನು ಘೋರ ತಪಗೈಯ್ಯುತಿರೆ
ತಪಜ್ವಾಲೆ ಪೊತ್ತುತಲಿ ಕಾನನದೊಳಿರುತಿರುವ
ತರುಲತೆಯ ಗುಲ್ಮಗಳು ಕಂದ ಫಲಮೂಲಗಳು
ತೃಣಕಾಷ್ಠವೆಲ್ಲವೂ ದಹಿಸುತಲಿ ನಶಿಸಿದವು ||೨೬೦||

ಕೆರೆತೊರೆಯು ಬತ್ತಿದವು ಕಾಸಾರ ಒಣಗಿದವು
ಕೊಳಬಾವಿ ಬರಿದಾಗಿ ಬಾಯ್ದೆರೆದು ನಿಂದಿದವು
ನೀರು ಆಹಾರವದು ದೊರೆಯದಲೆ ಮುನಿವರರು
ಕೋಪದಲಿ ಫಲುಗುಣನ ನಿಂದಿಸುತ ಶಪಿಸಿದರು ||೨೬೧||

ಶರಧನುವ ಧರಿಸಿರುವ ಇವನೆಂಥ ಋಷಿ ಇವನು
ನಿಜಋಷಿಯೊ ಇಲ್ಲವೇ ವೇಷವನು ಧರಿಸಿಹನೊ
ಇಲ್ಲಿಂದ ಇವನನ್ನು ತೊಲಗಿಸುತ ಓಡಿಪುದು
ಎನ್ನುತಲಿ ಮುನಿವರರು ನಿಶ್ಚಯವ ಗೈದಿಹರು ||೨೬೨||

ಇವನನ್ನು ಕೆಣಕಿದೊಡೆ ಬಾಣಗಳ ನೆಸೆಯುತಲಿ
ನಮ್ಮನ್ನು ಕೊಲ್ಲುವನು ಇದು ಸಲ್ಲದೆನ್ನುತಲಿ
ಪಶುಪತಿಯ ಮೊರೆಪೊಕ್ಕು ಬಿನ್ನವಿಪುದೆನ್ನುತಲಿ
ಸಕಲರೂ ಮುನಿವರರು ಕೈಲಾಸ ಕೈದಿದರು ||೨೬೩||

ಶಂಭು ಹರಶಂಕರನೆ ದೇವಾಧಿ ದೇವನೆ
ಅಜಹರಿ ಸುರೇಂದ್ರಾದಿ ಸುರನಿಕರ ವಂದಿತನೆ
ಭವಮುರಿತ ಹರಹರನೆ ರಕ್ಷಿಪುದು ಎನ್ನುತಲಿ
ಶಿವನಂಘ್ರಿ ಕಮಲದಲಿ ಸಾಷ್ಟಾಂಗ ಗೈದಿಹರು ||೨೬೪||

ಅಭಯದಾ ಕರವೆತ್ತಿ ಸಾಂತ್ವನವ ಗೈಯ್ಯುತಲಿ
ನಿಮಗಾವ ಕಷ್ಟವದು ಬಂದಿಹುದು ತಿಳುಹುವುದು
ಚಿಂತೆಯನು ಮಾಡದಿರಿ ಕಷ್ಟಗಳ ಪರಿಹರಿಪೆ
ಎನ್ನುತಿರೆ ಪಶುಪತಿಯು ಋಷಿವರರು ನುಡಿದಿಹರು ||೨೬೫||

ಬಿಲ್ಲನ್ನು ಬಾಣಗಳ ಧರಿಸಿರುವ ಅವನೊ
ಋಷಿಯೊಬ್ಬ ನಮ್ಮಯಾ ತಾಣಕ್ಕೆ ಬಂದಿಹನು
ಉಗ್ರತಪವ ಗೈಯ್ಯುತಿರೆ ತಪಜ್ವಾಲೆ ಪೊತ್ತುತಲಿ
ಕಂದ ಫಲಮೂಲಗಳ ವೃಕ್ಷಗಳ ದಹಿಸಿಹುದು ||೨೬೬||

ಕೆರೆತೊರೆಯ ಹೊಳೆಹಳ್ಳ ಜಲವೆಲ್ಲ ಬತ್ತಿಹುದು
ಕುಡಿಯಲಿಕೆ ನೀರಿಲ್ಲ ಆಹಾರವೆನಿತಿಲ್ಲ
ಹಸಿವೆ ನೀರಡಿಕೆಯಲಿ ಬಳಲಿದೆವು ಬೆಂದಿಹೆವು
ಜಪತಪ ಸಮಾಧಿಗಳು ಎಲ್ಲವೂ ತೊಲಗಿಹವು ||೨೬೭||

ನಮ್ಮಯಾ ಸ್ಥಳವನ್ನು ತೊಲಗಿಸುತ ಆ ನರನ
ಓಡಿಸುತ ನಮ್ಮಯಾ ಜಪತಪಕೆ ಧ್ಯಾನಕ್ಕೆ
ವಿಘ್ನಗಳು ಬರದಂತೆ ಶಾಂತಿಯನು ಈಯುತಲಿ
ರಕ್ಷಿಪುದು ಎನ್ನುತಲಿ ದೈನ್ಯದಲಿ ಬೇಡಿದರು ||೨೬೮||

ಆ ನರನು ನರನಿಹನು ನಮ್ಮವನು ಇರುತಿಹನು
ಎನ್ನುತಲಿ ಪುರಹರನು ಮನದೊಳಗೆ ಅರಿಯುತಲಿ
ಚಿಂತೆಯನು ಮಾಡದಿರಿ ಆ ನರನ ಕಳುಹುವೆವು
ನೀವುಗಳು ತೆರಳುವುದು ಎನ್ನುತಲಿ ನುಡಿದಿಹನು ||೨೬೯||

ನಂದಿಯನು ಕರೆಯುತಲಿ ಪ್ರಮಥಗಣ ಭೂತಗಣ
ಸಕಲರೂ ಬೇದರಾ ರೂಪವನು ತಾಳುತಲಿ
ಬೇಟೆಯ ವಿಹಾರದಲಿ ಪಯಣದಲಿ ಹೊರಡುವುದು
ಎನ್ನುತಲಿ ಆಜ್ಞೆಯನು ಇತ್ತಿಹನು ಪಶುಪತಿಯು ||೨೭೦||

ಶಿರದೊಳಿಹ ಮಾಲೆಯನು ತೆಗೆಯುತಲಿ ಪರಶೂಲಿ
ಜಡೆಗಳನು ನವಿಲುಗರಿ ಶೋಭೆಯಲಿ ಕಟ್ಟುತಲಿ
ನೊಸಲಿನಲಿ ಉದ್ದನೆಯ ಕುಂಕುಮವ ಧರಿಸುತಲಿ
ಕೊರಲಿನಲಿ ರುದ್ರಾಕ್ಷಿ ಮಾಲೆಯನು ಇರಿಸುತಲಿ ||೨೭೧||

ನಡುವಿನಲಿ ಹೊಳೆಹೊಳೆವ ಚರ್ಮಾಂಬರುಡುವಿನಲಿ
ಬೆನ್ನಿನಲಿ ಆಗಣಿತದ ಬಾಣಗಳ ಬತ್ತಳಿಕೆ
ಹೆಗಲಿನಲಿ ಬಿಲ್ಲನ್ನು ಬಲೆಗಳನು ಧರಿಸುತಲಿ
ಬೇಡನಾ ರೂಪದಲಿ ಪರಮೃಡನು ಮೆರೆದಿಹನು ||೨೭೨||

ಶ್ರುತಿಗಳಿಗೆ ಸ್ಮೃತಿಗಳಿಗೆ ತರ್ಕಕ್ಕೆ ಶಾಸ್ತ್ರಕ್ಕೆ
ನಿಲುಕದಿಹ ನಿರ್ಗುಣ ನಿರಾಕಾರ ನಿರುಪಮನು
ಸಗುಣದಲಿ ಶಬರನಾ ರೂಪವನು ತಾಳುತಲಿ
ಶೋಭಿಸಲು ಸಕಲರೂ ಸಾಷ್ಟಾಂಗ ಗೈದಿಹರು ||೨೭೩||

ಹೇ ಗೌರಿ ನನ್ನಯಾ ಭಕುತನಾ ಶೌರ್ಯವನು
ತೋರಿಪೆನು ನಡೆ ಎಂದು ನುಡಿಯುತಿರೆ ಪರಶಿವನು
ಪಾರ್ವತಿಯು ಚರ್ಮಾಂಬರುಡುವುಗಳ ಧರಿಸುತಲಿ
ಬೇಡತಿಯ ರೂಪವನು ತಾಳುತಲಿ ನಿಂದಿಹಳು ||೨೭೪||

ರತಿಸ್ಮೃತಿಯು ಸರಸತಿಯು ಧೃತಿಮಹೋನ್ನತಿಯು
ಮಾನಿನಿ ಕಳಾವತಿಯು ಸಿದ್ಧಿಯಳು ಬುದ್ಧಿಯಳು
ಚಂಡಿನಿ ಮನಸ್ವಿನಿಯು ಮಧುಮತಿಯು ಮೊದಲಾದ
ದೇವಿಯರು ಶಬರಿಯರ ರೂಪವನು ತಾಳಿದರು ||೨೭೫||

ಆ ಗುಹನು ಗಣಪತಿಯು ಮಹ ವೀರಭದ್ರನು
ವರನಂದಿ ತುಂಬುರರು ಭೃಂಗಿ ಮೊದಲಾದವರು
ಮುನಿವರರ ಪ್ರಮಥಗಣ ಭೂತಗಣ ಸಕಲರೂ
ಬೇಡರಾ ವೇಷವನು ತಾಳುತಲಿ ನಿಂದಿಹರು ॥೨೭೬।

ಅಣಿಮಾದಿ ಅಷ್ಟವಸು ಆದಿತ್ಯ ರುದ್ರರು
ಗಂಧರ್ವ ಖೇಚರರು ಯಕ್ಷರು ಕುಬೇರರು
ಕೈಲಾಸಪರ್ವತದೊಳಿರುತಿರುವ ಸಕಲರೂ
ಶಬರರಾ ರೂಪಗಳ ತಾಳುತಲಿ ನಿಂದಿಹರು ॥೨೭೭॥

ಬಿಲ್ಲುಗಳ ಭಾಲೆಗಳ ಭಲ್ಲೆಗಳ ಕೋಲುಗಳ
ಕತ್ತಿಗಳ ಢಾಳಗಳ ಖಡ್ಗಗಳ ಪರಶುಗಳ
ಮುದ್ಗಗಳ ಬಲೆಗಳನು ಪಾಶಗಳ ಕೊಳ್ಳುತಲಿ
ಬೇಟೆಯಾ ಶ್ವಾನಗಳ ಸಹಿತದಲಿ ನಿಂದಿಹರು ॥೨೭೮॥

ಹರ ಆಜ್ಞೆ ಈಯುತಿರೆ ಬೇಡರಾ ಸೈನ್ಯವದು
ದಶದಿಕ್ಕು ವ್ಯಾಪಿಸುತ ನಡೆಯುತಿರೆ ರಭಸದಲಿ
ಹುಲಿಸಿಂಹ ಕರಡಿಗಳು ಆನೆಗಳು ಚಿಗರೆಗಳು
ವನ್ಯಮೃಗವೆಲ್ಲವೂ ದೆಸೆಗೆಟ್ಟು ಓಡಿದವು ೭೯॥

ಉಕ್ಕುತಿಹ ಸಾಗರದ ತೆರೆಗಳಾ ಪರಿಯಲ್ಲಿ
ಒತ್ತೊತ್ತಿ ಶಬರರಾ ಸೈನ್ಯವದು ಸಾಗುತಲಿ
ವರ ಇಂದ್ರ ಕೀಲದಾ ಪರ್ವತದ ಪರಿಸರದಿ
ಇಳಿಯುತಿರೆ ಭರದಲ್ಲಿ ಧರೆಕುಸಿದು ತಗ್ಗಿಹುದು ॥೨೮೦

ದೇ ಗಿರಿಜೆ ಎನ್ನಯಾ ವರಭಕುತ ಅರ್ಜುನನ
ವಿಕ್ರಮ ಪರಾಕ್ರಮದ ಮಹಭಕುತಿ ನೋಡುವುದು
ಎನ್ನುತಲಿ ಪಶುಪತಿಯು ಜೊತೆಯ ಪಾರ್ವತಿಯು
ಸಹಿತದಲಿ ವರ ಇಂದ್ರಕೀಲದಲಿ ಇಳಿದಿಹನು ॥೨೮೧।

ಜಯ ಜಯತು ಶಂಕರಗೆ ಪರಶಿವಗೆ ಪಶುಪತಿಗೆ
ಜಯ ಜಯತು ಪಾರ್ವತೀ ವಲ್ಲಭಗೆ ಮೌಳಿಗೆ
ಜಯ ಚಂದ್ರಶೇಖರಗೆ ಕೈಲಾಸಾಧಿಪತಿಗೆ
ಎನ್ನುತಲಿ ಸಕಲರೂ ಜಯಕಾರ ಗೈದಿಹರು

**ಸೂಕರನ ಸಂಹಾರ ಗೈಯ್ಯುತಲಿ ಅರ್ಜುನನು ।**
**ಅರಿಯದಲೆ ಹರನೊಡನೆ ಸಂವಾದ ಗೈದಿಹನು ॥**

ಕೇಳುವುದು ಜನಮೇಜಯ ಕ್ಷಿತಿಪ ಆ ವನದಿ
ಅಲೆಯುತಿಹ ಭೀಕರದ ಮೂಕನಾ ದಾನವನು
ಕಳಕಳದ ಧ್ವನಿಯನ್ನು ಕೇಳುತಲಿ ಹರುಷದಲಿ
ಇಂದೆನಗೆ ಭಕ್ಷ್ಯವನ್ನು ದೊರೆತಿಹುದು ಎನ್ನುತಲಿ ॥೨೮೩॥

ಸಕಲರನು ತಿನ್ನುತಲಿ ತೇಗುವೆನು ಎನ್ನುತಲಿ
ಗಿರಿಶೃಂಗದಂತಿರುವ ಕೋರೆಯಾ ಹಲ್ಲುಗಳ
ನೀಲಾಚಲಂತಿರುವ ಪೇರೊಡಲ ಹಂದಿಯಾ
ರೂಪವನು ತಾಳುತಲಿ ಧಾವಿಸುತ ಸುಳಿದಿಹನು ॥೨೮೪॥

ಬೇಟೆಯಾ ನಾಯಿಗಳು ನೋಡುತಲಿ ಬೊಗಳುತಿರೆ
ಹಂದಿಯನು ಹಿಡಿಯುವುದು ಬಡಿಯುವುದು ಕಡಿಯುವುದು
ಎನ್ನುತಲಿ ಬೇಡರುಗಳಾರ್ಭಟಿಸಿ ಕೂಗುತಿರೆ
ಸೂಕರವು ಶಬರರಾ ನಿಕರದಲಿ ಹೊಕ್ಕಿಹುದು ॥೨೮೫॥

ಮೂಕನಾ ದಾನವನು ಮೂಗಿನಾ ತುದಿಯಿಂದ
ಬೇಡರನು ನೂಕುತಲಿ ನೆಗೆಯುತಲಿ ಚಿಮ್ಮುತಲಿ
ಕೋರೆಯಾ ದಾಡೆಯಲಿ ಹಿಡಿಯುತಲಿ ಎತ್ತುತಲಿ
ಮುಗಿಲೆತ್ತರೆಸೆಯುತಲಿ ಚೆಲ್ಲಿದನು ದೆಸೆದೆಸೆಗೆ ॥೨೮೬॥

ಕಳವಳದಿ ಕಂಗೆಟ್ಟು ಪ್ರಾಣದಾ ಭಯದಲ್ಲಿ
ಸಕಲರೂ ಪರಶಿವನ ಅಂಘ್ರಿಗಳಿಗೆರಗುತಲಿ
ರಕ್ಷಿಪುದು ರಕ್ಷಿಪುದು ಎನ್ನುತಲಿ ಪ್ರಾರ್ಥಿಸಲು
ಅಂಜದಿರಿ ಎನ್ನುತಲಿ ಅಭಯವನು ಇತ್ತಿಹನು ॥೨೮೭॥

ಘುಡು ಘುಡಿಸುತಬ್ಬರದಿ ಬೇಡರನು ಧೃತಿಗೆಡಿಸಿ
ಬೆಂಧಿಸುತ ಚಮುರಿಸುತ ಸೂಕರವು ಮೊರಬರಲು
ನರವರನು ಹೊಳೆಹೊಳೆವ ಹರಿತ ಶರ ತೆಗೆಯುತಲಿ
ಧನುವಿನಲಿ ಅಳವಡಿಸಿ ಜಗ್ಗುತಲಿ ಬಿಟ್ಟಿಹನು ॥೨೮೮॥

ತೀವ್ರತರ ವೇಗದಲಿ ಸಾಗುತಲಿ ನಿಶಿತ ಶರ
ಭೀಕರದ ಸೂಕರನ ಮೂಕನಾ ದಾನವನ
ಪೇರೊಡಲ ನಿರಿಯುತಿರೆ ನಭ ಬಿರಿವ ತೆರದಲ್ಲಿ
ದಶದಿಶೆಯು ಕಂಪಿಸುವ ಪರಿಯಲ್ಲಿ ಕೂಗುತಲಿ ॥೨೮೯॥

ಚೀರುತಲಿ ಫಲುಗುಣನ ಬರುತಿರಲು
ಕಿವಿಗಳಲಿ ಹರಿಯುವಾ ಸ್ವರವನ್ನು ಕೇಳುತಲಿ
ತಿರುಗಾಳಿ ನನು ಎಚ್ಚರದ ಗೊಳ್ಳುತಲಿ
ನೀಲಗಿರಿ ಪರಿಯಲ್ಲಿ ತೋರುತಿಹ ಭೀಕರದ ॥೨೯೦॥

ಮೂಕನಾ ದಾನವನ ಸೂಕರನ ನೋಡುತಲಿ
ಹರಿತದಾ ಬಾಣವನು ಧನುವಿನಲಿ ಇರಿಸುತಲಿ
ತೂಗುತಲಿ ಜಗ್ಗುತಲಿ ಗುರಿಯಿಡುತ ಬಿಡುತಲಿರೆ
ಬಾಣವದು ಧಾವಿಸುತ ಹಂದಿಯನು ಇರಿದಿಹುದು ॥೨೯೦॥

ಪರ್ವತದ ಶಿಖರವದು ಕಡೆದುರುಳಿ ಬೀಳ್ವಂತೆ
ಘನಘೋರ ಕಾಯದಾ ಸೂಕರವು ನೆಗೆಯುತಲಿ
ನೆಲ ಮುಗಿಲು ಕಂಪಿಸುವ ದನಿಯಲ್ಲಿ ಚೀರುತಲಿ
ಪ್ರಾಣವನು ತೊರೆಯುತಲಿ ಧರೆಗುರುಳಿ ಬಿದ್ದಿಹುದು ॥೨೯೨॥

ಆ ಕ್ಷಣದಿ ಮುಕ್ಕಣ್ಣ ಧರದಲ್ಲಿ ಐತಂದು
ನಾವುಗಳು ಕೊಂದಿಹೆವು ಈ ಹಂದಿ ನಮ್ಮದಿದೆ
ಮುಟ್ಟದಿರು ಮುಟ್ಟದಿರು ತೊಲಗಾಚೆ ಎನ್ನುತಿರೆ
ಚಕಿತದಲಿ ಅರ್ಜುನನು ನೋಡುತಲಿ ನುಡಿದಿಹನು ॥೨೯೩॥

ಎಮ್ಮಯಾ ಬಾಣದಲಿ ಈ ಹಂದಿ ಸತ್ತಿಹುದು
ಎಮ್ಮದಿದೆ ಎನ್ನುತಲಿ ಅರ್ಜುನನು ನುಡಿಯುತಿರೆ
ಕಣ್ಮುಚ್ಚಿ ತಪಗೈವ ನೀನೆಂತು ಕೊಂದಿರುವೆ
ಈ ಹಂದಿ ನಮ್ಮದಿದೆ ಎಂದಿಹನು ಇಂದುಧರ ॥೨೯೪॥

ಜಗದೊಳಗೆ ಎನ್ನನ್ನು ಸೋಲಿಸುವರಾರಿಲ್ಲ
ಮೂಲೋಕ ಗಂಡನಿಹೆ ತ್ರೈಲೋಕ್ಯ ವೀರನಿಹೆ
ನೀನೊಬ್ಬ ಅಡವಿಯಾ ಸಾಮಾನ್ಯ ಬೇಡನಿಹೆ
ನೀನೆಂತು ಕೊಲ್ಲುವನು ಎಂದಿಹನು ಅರ್ಜುನನು ॥೨೯೫॥

ತಪಸಿಗಳಿಗೆತ್ತಣದು ಬಿಲ್ಲಿನಾ ವಿದ್ಯೆಯಿದು
ಜಪಮಾಲೆ ಧರ್ಭೆಗಳ ಎತ್ತಲಿಕೆ ಆಗದಿಹ
ಉಪವಾಸ ವ್ರತಗಳಲಿ ನಿಶ್ಶಕ್ತನಾಗಿರುವ
ನೀನೆಂತು ಹಂದಿಯನು ವಧಿಸುವುದು ಎಂದಿಹನು ॥೨೯೬॥

ಮೊದಲಿಂಗೆ ಹರಿತದಾ ಬಾಣವನು ಎಸೆಯುತಲಿ
ನಾವುಗಳು ಹಂದಿಯನು ಕೊಂದಿಹೆವು ನಮ್ಮದಿದೆ
ಸತ್ತಿರುವ ಹಂದಿಯನು ಮತ್ತೊಮ್ಮೆ ಕೊಂದೊಡೆಯು
ಅದು ನಿನ್ನದಾಗುವುದೆ ಹೇಳೆಂದನಾ ಶಬರ ॥೨೯೭॥

ಹೇ ಶಬರ ಎನ್ನಯಾ ಶಕ್ತಿಯನು ಶೌರ್ಯವನು
ನಿಂದಿಸಲು ಬೇಡವೊ ಗಂಧರ್ವ ಸುರರೊಳಗೆ
ಮೂಲೋಕದೊಳಗೆನ್ನ ಜಯಿಸುವರಾರಿಲ್ಲ
ಎನ್ನನ್ನು ಕೆಣಕದಿರು ಎಂದಿಹನು ಫಲಗುಣನು ॥೨೯೮॥

ಹೇ ಬೇಡ ಅಡವಿಯಲಿ ನರಿಮೊಲದ ಬಿಗರೆಯನು
ತೋಳಗಳ ಹಕ್ಕಿಗಳ ಬಡ ಪ್ರಾಣಿ ಕೊಂದಿರುವ
ನಿನ್ನಯಾ ಗರ್ವವನು ಎನ್ನೊಡನೆ ತೋರದಿರು
ನಿಮಿಷದಲಿ ನಿನ್ನನ್ನು ಜಯಿಸುವೆನು ಎಂದಿಹನು ॥೨೯೯॥

ಎನ್ನನ್ನು ಜಯಿಸುವಾ ವಿಷಯವದು ಬೇರಿರಲಿ
ತಪವನ್ನು ಗೈಯುತಿಹ ಋಷಿವರರು ನೀವಿಹಿರಿ
ಶಾಸ್ತ್ರಗಳನರಿತಿಹಿರಿ ಹಂದಿಯನು ಕೊಲ್ಲುವಾ
ಹಿಂಸೆಯನು ನೀವೆಂತು ಗೈದಿಹಿರಿ ಎಂದಿಹನು ॥೩೦೦॥

ಜಪಮಾಲೆ ಹಿಡಿಯುತಲಿ ಜಪತಪವ ಮಾಡುತಲಿ
ಭುಜದೊಳಗೆ ಶರಧನುವ ಏತಕ್ಕೆ ಧರಿಸಿಹಿರಿ
ನೀವುಗಳು ಮುನಿವರರೊ ಕಪಟದಾ ಕ್ಷತ್ರಿಯರೊ
ಹೇಳೆಂದು ಧೂರ್ಜಟಿಯು ಅರ್ಜುನಗೆ ನುಡಿದಿಹನು ॥೩೦೦॥

ಎಮ್ಮಯಾ ಜಪತಪದ ಗೊಡವೆಯದು ನಿಮಗೇಕೆ
ವನದೊಳಿಹ ಮುನಿವರರ ಪ್ರಾಣಿಗಳ ಹಿಂಸಿಸುತ
ಅಲೆಯುತಿಹ ದುಷ್ಟರನು ಶಿಕ್ಷಿಸುವ ಕಾರ್ಯವದು
ಎಮ್ಮದಿದೆ ಎಂದಿಹನು ಅರ್ಜುನನು ಶಬರಂಗೆ ॥೩೦೨॥

ಒಪ್ಪನಿಹ ನಿನ್ನೊಡನೆ ಯುದ್ಧವನು ಗೈಯ್ಯುವುದು
ಮೂಲೋಕ ವೀರಂಗೆ ಶೋಭಿಸದು ಸಲ್ಲದಿದು
ನಿನ್ನಯ ಸಹಾಯಕ್ಕೆ ಅನ್ಯರನು ಶಬರನು
ಕರೆತಹುದು ಎನ್ನುತಲಿ ಫಲಗುಣನು ನುಡಿದಿಹನು ॥೩೦೩॥

ನೀವುಗಳು ಧರ್ಮದಲಿ ಶಾಸ್ತ್ರದಲಿ ಪರಿಣತರು
ನಾವುಗಳು ಧನುವಿನಲಿ ಬಾಣದಲಿ ಪರಿಣತರು
ನಿಮ್ಮೊಡನೆ ಯುದ್ಧವನು ಗೈಯುವುದು ಅನುಚಿತವು
ಕರೆ ಶಾಸ್ತ್ರನಿಪುಣರನು ಎಂದಿಹನು ಆ ಶಬರ ॥೩೦೪॥

ಹೇ ಬೇಡ ನಾವುಗಳು ತಪವನ್ನು ಗೈಯ್ಯುವೆವು
ಋಷಿವರರು ಎಂಬುದಿದು ದಿಟವಿಹುದು ನಿಜವಿಹುದು
ಶರಧನುವ ಶೂಲವನು ಧರಿಸಿರುವ ಪರಶಿವನ
ಶಿಷ್ಯರುಗಳಾವೆಂದು ನುಡಿದಿಹನು ಅರ್ಜುನನು ॥೩೦೫॥

ಈ ತಾಣ ನಮ್ಮದಿದೆ ಇಲ್ಲಿರುವ ಸಕಲವೂ
ವಸ್ತುಗಳು ಪ್ರಾಣಿಗಳು ಎಮ್ಮಯಾ ವಶವಿಹವು
ನಾವುಗಳು ಕೊಂದಿರುವ ಈ ಹಂದಿ ನಮ್ಮದಿದೆ
ನಾವೆಂದು ಬಿಡೆವೆಂದು ಎಂದಿಹನು ಇಂದುಧರ ॥೩೦೬॥

**ಅರ್ಜುನನ ಧೂರ್ಜಟಿಯ ಭೀಕರದ ಯುದ್ಧವನು ।**
**ನಭದೊಳಿಹ ಸುರರುಗಳು ಚಕಿತದಲಿ ಕಂಡಿಹರು ॥**

ಶಶಿಮೌಳಿಯುಸಿರುರುವ ನುಡಿಗಳನು ಕೇಳುತಲಿ
ಫಲಗುಣನ ಕೋಪದಾ ಜ್ವಾಲೆಯದು ಹೊತ್ತುತಲಿ
ಉರಿಯುತಲಿ ಏಳುತಲಿ ನೆತ್ತಿಯೊಳು ಏರುತಲಿ
ಕಿಡಿಕೆಂಡವಾಗುತಲಿ ರುದ್ರಂಗೆ ನುಡಿದಿಹನು ॥೩೦೭॥

ಹೇ ಶಬರ ಎನ್ನಯಾ ಸ್ಮರಣೆಯ ಕಲಿಕಿರುವ
ನಿನಗಿನ್ನು ಉಳಿಗಾಲವಿಲ್ಲೆನುತ ಫಲಗುಣನು
ಹರಿತ ಶಿರ ತೆಗೆಯುತಲಿ ಧನುವಿನಲಿ ಅಳವಡಿಸಿ
ತೂಗುತಲಿ ಬಿಟ್ಟಿಹನು ಹರನೆದೆಗೆ ಅರ್ಜುನನು ॥೩೦೮॥

ಇದು ಆವ ಘನ ಶರವು ನಿನ್ನಯಾ ಶೌರ್ಯವದು
ಇಷ್ಟೆಯೇ ಇರುತಿಹುದೆ ಎನ್ನುತಲಿ ಧೂರ್ಜಟಿಯು
ಶರಬಿಡುತ ಅರ್ಜುನನ ಬಾಣವನು ಕತ್ತರಿಸಿ
ಪುಡಿಪುಡಿಯ ಗೈಯ್ಯುತಲಿ ಕೆಡಹಿದನು ಭರದಲ್ಲಿ ॥೩೦೯॥

ಫಲಗುಣನು ಕ್ರೋಧದಲಿ ನೂರಾರು ಶರಗಳನು
ಓರಿಯುತಲಿ ಎಸೆಯುತಲಿ ಶರಜಾಲ ರಚಿಸುತಲಿ
ಹರನನ್ನು ಮುಚ್ಚುತಿರೆ ಹರರುದ್ರ ಕೋಪದಲಿ
ಬಾಣವನು ಎಸೆಯುತಲಿ ಶರಪಾಶ ಕಡಿದಿಹನು ॥೩೧೦॥

ಮತ್ತೆ ಶತಸಾವಿರದ ಬಾಣಗಳ ಸುರಿಮಳೆಯ
ಸುರಿಸುತಲಿ ಮೃಡನನ್ನು ಮುತ್ತುತಿರೆ ಮುಸುಕಿನಲಿ
ಸುತ್ತಲೂ ಗಾಢಾಂಧಕಾರವದು ಕವಿಯುತಲಿ
ಇರುಳಾಯ್ತೊ ಎಂಬಂತೆ ಕತ್ತಲದು ಪಸರಿಹುದು ॥೩೧೧॥

ಹರನೊಡನೆ ಸವಸಾಚಿ ಶಕ್ತಿಯಲಿ ಶೌರ್ಯದಲಿ
ಧೈರ್ಯದಲಿ ಯುದ್ಧವನು ಗೈಯ್ಯುವಾ ಅರ್ಜುನನ
ಧನುರ್ವಿದ್ಯೆ ಕೌಶಲವ ಪರಿಣತಿಯ ಕಾಣುತಲಿ
ನಭದೊಳಿಹ ಸುರರುಗಳು ಭಲಿ ಭಾಪು ಎಂದಿಹನು ॥೩೧೨॥

ಹೊಳೆಹೊಳೆವ ಶರವೊಂದ ಹರತೆಗೆದು ಎಸೆಯುತಿರೆ
ಶರಪಾಶ ಕತ್ತರಿಸಿ ದೆಸೆದೆಸೆಗೆ ಚೆಲ್ಲುತಿರೆ
ಮೇಘಗಳ ಮುಸುಕಿಂದ ಹೊರಬಂದ ರವಿಯಂತೆ
ತೊಳತೊಳಗಿ ಬೆಳಗಿದನು ಹರದಿವ್ಯ ಪ್ರಭೆಯಲ್ಲಿ ॥೩೧೩॥

ಭವಪಾಶ ತರಿವಂಗೆ ಭವದುರಿತ ಕಳೆವಂಗೆ
ಮುನಿದೊಡೆಯು ಲೋಕವನು ಲಯಗೈವ ರುದ್ರಂಗೆ
ಶರಗಳಾ ಪಾಶವನು ಕಡಿಯುವುದು ಅಸುಳವೆ
ಹರನೆಂದು ಅರ್ಜುನನು ತಾನೆತ್ತ ಬಲ್ಲಹನು ॥೩೧೪॥

ಎನ್ನನು ಎದುರಿಸುತ ಯುದ್ಧವನು ಗೈಯ್ಯುವಾ
ವೀರರನು ನಾಕಾಣೆ ಈ ಕಾಲ ಪರ್ಯಂತ
ಸಾಮಾನ್ಯ ಬೇಡನಾ ಪರಿಯಲ್ಲಿ ಇವನಿಲ್ಲ
ಈತನಾ ರೀತಿಯದು ಬೇರೆಯೇ ಇರುತಿಹುದು ॥೩೧೫॥

ಬಡಬೇಡ ಎನ್ನನ್ನು ಸೋಲಿಸಿದನೆಂಬುವಾ
ಅಪಕೀರ್ತಿ ನಾರಿಯನು ನಾ ವರಿಸೆನೆನ್ನುತಲಿ
ಗಾಂಡಿವದ ಹಿಡಿಯುತಲಿ ಝೇಂಕಾರ ಗೈಯ್ಯುತಲಿ
ಅಗಣಿತದ ಶರಗಳನು ಮತ್ತೆ ಸರ ಎಸೆದಿಹನು ॥೩೧೬॥

ಬಹುಕಾಲ ತಿಣುಕಿದನು ಹೆಣಗಿದನು ಸೆಣಸಿದನು
ಖಾಂಡವದ ವನದೊಳಗೆ ಪಾವಕನು ಇತ್ತಿರುವ
ಬತ್ತಳಿಕೆಯಲ್ಲಿರುವ ಅಕ್ಷಯದ ಬಾಣಗಳು
ಕ್ಷಯವಾಗಿ ಬತ್ತುತಿರೆ ಫಲಗುಣನು ಚಿಂತಿಸಿದ ॥೩೧೭॥

ಕರದೊಳಿಹ ಗಾಂಡಿವದ ಚಾಪವನು ಕೊಳ್ಳುತಲಿ
ಪರಶಿವನ ಶಿರದಲ್ಲಿ ಬಲವಾಗಿ ಹೊಡೆಯುತಿರೆ
ಕೆಲದೊಳಿಹ ಪಾರ್ವತಿಯು ಕಳವಳವಗೊಳ್ಳುತಿರೆ
ಪರಸ್ಥಾಣು ಸ್ಥಿರವಾಗಿ ಕದಲದೆಯೆ ಕುಳಿತಿಹನು ॥೩೧೮॥

ಮಂಜುಮಳೆ ಮುತ್ತುತಿರೆ ಪರ್ವತವು ಅಳುಕುವುದೆ
ನೊರಜೊಂದು ಎರಗುತಿರೆ ಘನಗಜವು ಅಂಜುವುದೆ
ಓನ ಮೊಲ ಮುತ್ತುತಿರೆ ವ್ಯಾಘ್ರವದು ಬೆದರುವುದೆ
ಕೈಲಾಸದಧಿಪತಿಯು ನಸುನಗುತಲಿರ್ದಿಹನು ॥೩೧೯

ಇನ್ನಾವ ಆಯುಧವು ಅಸ್ತ್ರಗಳು ನಿನ್ನೊಳಿವೆ
ಶಕ್ತಿಯಾ ಶೌರ್ಯದಾ ಸಾಗರವು ಬತ್ತಿಹುದೆ
ಮೊಲ ಚಿಗರೆ ಕೊಲ್ಲುವಾ ಬಡಬೇಡ ನಾನಿಹೆನು
ಶೂರರುಗಳಾವಲ್ಲ ಎಂದಿಹನು ಪರಶಿವನು ॥೩೨೦॥

ಎನ್ನಯಾ ಬಾಹುಗಳು ಶಸ್ತ್ರಗಳು ಅಸ್ತ್ರಗಳು
ಎನ್ನಯಾ ಭುಜಬಲವ ಶಕ್ತಿಯನು ನೋಡುವುದು
ಮುಷ್ಟಿಪ್ರಹಾರಗಳ ಸವಿಯನ್ನು ಸವಿಯುವುದು
ಎನ್ನುತಲಿ ಬಾಹುಗಳ ಚಪ್ಪರಿಸಿದರ್ಜುನನು ॥೩೨೧॥

ಹೇ ಗಿರಿಜೆ ನೋಡಿವನ ಧೈರ್ಯವನು ಶೌರ್ಯವನು
ಅಸ್ತ್ರಗಳು ತೀರಿದವು ಎನ್ನುತಲಿ ಅಳುಕಿದನೆ
ಸಲೆ ನಾಲ್ಕು ತಿಂಗಳಲಿ ಸೊಪ್ಪನ್ನು ತಿನ್ನುತಲಿ
ಬಳಿಕಿನಲಿ ಬರಿಗಾಳಿ ಸೇವಿಸುತ ತಪಗೈದು ॥೩೨೨॥

ಕೊರಗಿರುವ ಸೊರಗಿರುವ ಸೊಪ್ಪಾದ ದೇಹದಲಿ
ಎಸೆತೊಂದು ಜಿಗುಟುತನ ಅಧಟುತನವಿರುತಿಹುದು
ಎನ್ನೊಡನೆ ಕಾದಲಿಕೆ ಸಹಸವನು ತೋರಿಹ
ಎನ್ನುತಲಿ ಪರಶಿವನು ಪಾರ್ವತಿಗೆ ನುಡಿದಿಹನು ॥೩೨೩॥

ಈತಗೇ ಮುನ್ನಿನಲಿ ನಾರಾಯಣನೆಂಬುವಾ
ಮುನಿವರಗೆ ಸಂಗಾತಿಯಾಗಿರ್ದ ನರ ಋಷಿಯು
ಈರ್ವರೂ ಹರಿಕುಲದ ಸಂಭೂತರಿರುತಿಹನು
ಎಮ್ಮಯಾ ಭಕ್ತರು ಗಳೆಮ್ಮವರು ಎಂದಿಹನು ॥೩೨೪॥

ಇವನೆಮ್ಮ ಪಾಶುಪತ ಅಸ್ತ್ರವನು ಬಯಸುತಲಿ
ಭಕುತಿಯಲಿ ಉಗ್ರತರ ತಪವನ್ನು ಗೈದಿಹನ್ನು
ಇವನಿಗೆ ಪಾಶುಪತ ಅಸ್ತ್ರವನು ಈಯುವೆನು
ಈ ನರನ ಶೌರ್ಯವನು ನೋಡುವುದು ಎಂದಿಹನು ॥೩೨೫॥

ಆ ಕ್ಷಣದಿ ಫಲಗುಣನು ಧಾವಿಸುತಲೈತಂದು
ಫಾಲಾಕ್ಷನೆರಡುಗಳ ತೋಳುಗಳ ಓಡಿಯುತಲಿ
ನಾಗದಾ ಬಂಧದಲಿ ಬಿಗಿಯುತಲಿ ಜಗ್ಗುತಲಿ
ಎಳೆಯುತಲಿ ಬಾಹುಬಲ ಯುದ್ಧವನು ಗೈದಿಹನು ॥೩೨೬॥

ಮುಂದಕ್ಕೆ ತಳ್ಳುತಲಿ ಹಿಂದಕ್ಕೆ ಕೊಳ್ಳುತಲಿ
ಬಲವಾಗಿ ಅಪ್ಪುತಲಿ ಹಿಸುಕುತಲಿ ಮರ್ದಿಸುತ
ಮಲ್ಲದಾ ಓಡಿತವಲಿ ಓಡಿಯುತಲಿ ಸೆಣಸುತಲಿ
ಗಜವೆರಡ ಪರಿಯಲ್ಲಿ ಹೆಣಗಿದರು ಈರ್ವರೂ ॥೩೨೭॥

ಶಬರನನು ಎತ್ತುತಲಿ ಭೂಮಿಯಲಿ ಅಪ್ಪಳಿಸಿ
ಮಣ್ಣನ್ನು ಮುಕ್ಕಿಪುದು ಎನ್ನುತಲಿ ಫಲಗುಣನು
ಪರಶಿವನನೆತ್ತಲಿಕೆ ತಿಣುಕುತಲಿ ಯತ್ನಿಸಲು
ಪರ್ವತದ ಪರಿಯಲ್ಲಿ ಹರ ಅಚಲ ನಿಂದಿಹನು ॥೩೨೮॥

ಫಲುಗುಣನು ಪುರಹರನ ಉದರವನು ತಿವಿಯುತಿರೆ
ಪರಮೃಡನು ಕೋಪದಲಿ ಅರ್ಜುನನ ಒಡಲಿನಲಿ
ತಿವಿಯುತಿರೆ ಚೆಂಡಂತೆ ಪುಟಿಪುಟಿದು ನೆಗೆಯುತಲಿ
ದೂರದಲಿ ಬಿದ್ದಿಹನು ಮಣ್ಣನ್ನು ಮುಕ್ಕುತಲಿ ॥೩೨೯॥

ಫಲಗುಣನು ಪಳುತಲಿ ನಿನ್ನಯಾ ಶೌರ್ಯವನು
ಮೆಚ್ಚಿಹೆನು ಬೆಚ್ಚಿಹೆನು ಇಂದಿನಾ ಪರ್ಯಂತ
ಎನ್ನನ್ನು ಎದುರಿಸುತ ಯುದ್ಧವನು ಗೈದಿರುವ
ನಿನ್ನಸಮ ವೀರನನು ನಾ ಕಾಣೆ ಎಂದಿಹನು ॥೩೩೦॥

ತ್ರೈಲೋಕ್ಯ ವೀರನಿಹೆ ಮೂಲೋಕ ಗಂಡನಿಹೆ
ಬಡಬೇಡ ಅರ್ಜುನನ ಸೋಲಿಸಿದನೆಂಬುವಾ
ಅಪಕೀರ್ತಿ ನಾನೆಂದು ಹೊರಲಾರೆ ಸಹಿಸದಿಹೆ
ಎನ್ನುತಲಿ ಮನದೊಳಗೆ ಕೋಪದಲಿ ಉರಿಯುತಲಿ ॥೩೩೧॥

ಈಗಲೇ ನಿನ್ನನ್ನು ಮುಗಿಸುವೆನು ಎನ್ನುತಲಿ
ಬಲವಾದ ಮುಷ್ಟಿಯನು ಗೈಯ್ಯುತಲಿ ಫಲಗುಣನು
ಓಡುತಲಿ ಧಾವಿಸುತ ಐತಂದು ಪಶುಪತಿಯ
ವಕ್ಷದಲಿ ಘೋರ ಪ್ರಹಾರವನು ಗೈದಿಹನು ॥೩೩೨॥

ಬರಸಿಡಿಲು ಎರಗಿದೊಡೆ ಪರ್ವತವು ಅಳುಕುವುದೆ
ನೊರಜೊಂದು ತಾಗಿದೊಡೆ ಗಜವಂಜಿ ನಡುಗುವದೆ
ಮುನಿದೊಡೆಯು ಮೂಲೋಕ ಲಯಗೈವ ರುದ್ರನಿಗೆ
ಇದು ಆವ ನೋವನ್ನು ಕಷ್ಟವನು ಈಯುವದು ॥೩೩೩॥

ಸಭದೊಳಿಹ ಸುರರುಗಳು ಬೆರಗಿನಲಿ ನೋಡುತಲಿ
ಹರನೊಡನೆ ಯುದ್ಧವನು ಮಾಡಲಿಕೆ ಅರ್ಜುನನು
ಸಮದಂಡಿ ಸಮಬಲನು ಸರಿಸಾಟಿ ಇರುತಿಹನು
ಭಲೆಬಾಪು ಫಲಗುಣನೆ ಎಂದಿಹರು ಕೌತುಕದಿ ॥೩೩೪॥

ರುದ್ರನತಿ ಕ್ರೋಧದಲಿ ರೌದ್ರದಲಿ ಜ್ವಲಿಸುತಲಿ
ಅರ್ಜುನನ ಶಿರದಲ್ಲಿ ಮುಷ್ಟಿ ಪ್ರಹಾರವನು
ಗೈಯ್ಯುತಿರೆ ಪ್ರಜ್ಞೆಯದು ತಪ್ಪುತಲಿ
ರುಧಿರವನು ಕಾರುತಲಿ ಧರೆಗುರುಳಿ ಬಿದ್ದಿಹನು ॥೩೩೫॥

ಬಾಯಿಯಲಿ ಮೂಗಿನಲಿ ರಕುತವದು ಸುರಿಯುತಲಿ
ನಾಲಗೆಯ ಚಾಚುತಲಿ ಫಲಗುಣನು ಬೀಳುತಿರೆ
ಅಕಟಕಟ ಭಕುತನನ ನೋಯಿಸಿದೆ ಎನ್ನುತಲಿ
ಮಮ್ಮಲನೆ ಮರುಗಿದನು ಕರುಣಾಳು ಶಶಿಮೌಳಿ ॥೩೩೬॥

ಈ ಪರಿಯ ಶಿಷ್ಯನನು ಒಳಲಿಪುದು ಸರಿಯಿಹುದೆ
ಲೋಕವನು ರಕ್ಷಿಸುವ ದೇವಾಧಿದೇವನೇ
ಹಿಂಸಿಸುತ ಕೊಲ್ಲುತಿರೆ ಇನ್ನಾರು ರಕ್ಷಿಪರು
ಎನ್ನುತಲಿ ಪಾರ್ವತಿಯು ನೋಯುತಲಿ ನುಡಿದಿಹಳು ॥೩೩೭॥

ಎಚ್ಚರವಗೊಳ್ಳುತಲಿ ಅರ್ಜುನನು ಮನದೊಳಗೆ
ಇದು ನಾನು ಗೈದಿರುವ ಪಾಪದಾ ಫಲವಿಹುದೊ
ಮುನ್ನಿನಲಿ ಗುರುಹಿರಿಯ ಮುನಿವರನ ನೋಯಿಸಿದ
ಫಲವಿಹುದೊ ಎನ್ನುತಲಿ ಕಳವಳದಿ ಚಿಂತಿಸಿದ ॥೩೩೮॥

ಈ ಪರಿಯ ಪರಿಭವವ ಪೂರ್ವದಲಿ ನಾನೆಂದು
ಅನುಭವಿಸದಿರುತಿರಲು ಈ ಶಬರನಾರಿಹನು
ಎನ್ನಯಾ ಶೌರ್ಯವನು ಪರಿಕಿಸಲು ಬಂದಿರುವ
ದೇವಾಧಿದೇವನೇ ಶಿವನಿಹನೊ ಎಂದಿಹನು ॥೩೩೯॥

ನಿಜವಾಗಿ ಬೇಡನೇ ಇವನಿವನೊ ಇಲ್ಲವೇ
ಗಂಧರ್ವ ಖೇಚರನೊ ಯಕ್ಷನೊ ಕುಬೇರನೋ
ಅಜಹರಿಯು ರುದ್ರನೊ ಇಲ್ಲವೇ ಅರ್ಜುನನು
ನಾನಿವನೊ ಇಲ್ಲವೋ ಎನ್ನುತಲಿ ಚಿಂತಿಸಿದ ॥೩೪೦॥

ವೇದೋಪನಿಷದುಗಳ ಗೂಢದಾ ತತ್ವಗಳ
ನಿರ್ಗುಣ ನಿರಾಕಾರ ನಿತ್ಯನು ಪರಬ್ರಹ್ಮ
ಸಗುಣದಲಿ ಸಾಕಾರ ರೂಪದಲಿ ಎದುರಿನಲಿ
ನಿಂತಿರಲು ಆರಿಗೂ ಅರಿಯಲಿಕೆ ಅಸದಳವು ॥೩೪೧॥

ಶಿವಪೂಜೆಯೊಳಗಾವ ತಪ್ಪನ್ನು ಮಾಡಿದೆನೊ
ಧೃಢ ಭಕುತಿಯಿಲ್ಲದೆಯೆ ಮೃಡನನ್ನು ಭಜಿಸಿದೆನೊ
ಈ ಹಂದಿ ಈ ಬೇಡ ನಮಗೇಕೆ ತೊಡಕೇಕೆ
ಅಕಟಕಟ ಪಶುಪತಿಯ ಕೃಪೆಗೆ ನಾ ಹೊರಗಾದೆ ॥೩೪೨

ಈ ಪರಿಯೆ ಫಲುಗುಣನು ಮನದೊಳಗೆ ಚಿಂತಿಸುತ
ಏಕಾಗ್ರ ಚಿತ್ತದಲಿ ಹರನನ್ನು ಪೂಜಿಸುತ
ಒಲಿಸುತಲಿ ಹರನನ್ನು ಪಡೆಯುವೆನು ಎನ್ನುತಲಿ
ಯೋಚಿಸುತ ಭರದಲ್ಲಿ ಹರಪೂಜೆ ಗೈಯ್ಯಲಿಕೆ ॥೩೪೩

**ಬೇಡನಾ ವೇಷದಾ ಶಿವನನ್ನು ಸೋಲಿಸಲು**
**ಅರ್ಜುನನು ಶಿವಪೂಜೆ ಗೈದಿಹನು ಭಕುತಿಯಲಿ**

ನಿರ್ಮಳದ ಮಳಲಿನಾ ಲಿಂಗವನು ಮಾಡುತಲಿ
ನಿರ್ಗುಣನ ನಿರಾಕಾರ ನಿತ್ಯನ ನಿರಂಜನನ
ಸಗುಣದಲಿ ಗಂಧಮಾಲ್ಯಾದಿಯಲಿ ಬಿಲ್ವದಲಿ
ಕಣಗಿಲೆಯ ಕುಸುಮದಲಿ ಅರ್ಚನೆಯ ಗೈದಿಹನು ॥೩೪೪॥

ಭವಹರನ ಭಯಹರನ ಅಘಹರನ ಪುರಹರನ
ಕಾಮಹರ ಶೂಲಧರ ಚಂದ್ರಧರ ಪಾವನನ
ಅಜಹರಿ ಸುರೇಂದ್ರಾದಿ ಸುರನಿಕರ ವಂದಿತನ
ಜಗದಧಿಕ ದೇವನನ ಪರಶಿವನ ಸ್ತುತಿಸಿಹನು ॥೩೪೫॥

ಲಿಂಗವನು ಸುತ್ತುತಲಿ ಪ್ರದಕ್ಷಿಣೆಯಗೈಯ್ಯುತಲಿ
ಹೇ ಶಂಭು ಶಂಕರನೆ ಶಿವಹರನೆ ಶೂಲಿಯೆ
ಈ ಶಬರ ಮಾಲೋಕ ವೀರನಿಹ ಎನ್ನನ್ನು
ಗೆಲ್ಲುತಲಿ ಎನ್ನಯಾ ಮಾನವನು ಅಳಿಸಿಹನು ॥೩೪೬॥

ನಿನ್ನಯಾ ಭಕುತನಾ ಕೀರ್ತಿಯನು ಕಾಯುವದು
ನಿನ್ನಯಾ ಹೊಣೆಯಿಹುದು ಕರುಣೆಯಾ ಸಾಗರನೆ
ಶಬರನನು ಸೋಲಿಸುವ ಶಕ್ತಿಯನು ಶೌರ್ಯವನು
ಈಯುತಲಿ ರಕ್ಷಿಪುದು ಎನ್ನುತಲಿ ಪ್ರಾರ್ಥಿಸಿದ ॥೩೪೭॥

ಈಶನಾ ಕೃಪೆಯದುವೆ ಲಭಿಸಿಹುದು ಎನಗೀಗ
ಎನ್ನುತಲಿ ಫಲುಗಣನು ಯೋಚಿಸುತ ಗರ್ವದಲಿ
ಬಾಣಗಳ ಚಪ್ಪರಿಸಿ ಧಾವಿಸುತ ಮುಂದಕ್ಕೆ
ಮತ್ತೆ ಬಾ ಯುದ್ಧಕ್ಕೆ ಹೇ ಶಬರ ಎಂದಿಹನು ॥೩೪೮॥

ಹರನೊಲುಮೆ ಎನಗಿಹುದು ನಿನ್ನನ್ನು ಮುಗಿಸುವೆನು
ಶಿರವನ್ನು ತರಿಯುವೆನು ಪ್ರಾಣವನು ಹಿಂಡುವೆನು
ಎನ್ನಯಾ ಶಕ್ತಿಯನು ಶೌರ್ಯವನು ನೋಡುವುದು
ಎನ್ನುತಲಿ ಮೃಡನನ್ನು ದಿಟ್ಟಿಸುತ ನೋಡಿದನು ॥೩೪೯॥

ಲಿಂಗಕ್ಕೆ ಲೇಪಿಸಿದ ಗಂಧವದು ಅಕ್ಷತೆಯು
ಬೇಡನಾ ಮಸ್ತಕದಿ ಕಂಗೊಳಿಸುತಿರ್ಪುದು
ಕಣಗಿಲೆಯ ಹಾರವದು ಶಬರನಾ ಕೊರಳಿನಲಿ
ಶೋಭಿಸುತಲಿರ್ಪುದನು ಕಂಡಿಹನು ಬೆರಗಿನಲಿ ॥೩೫೦॥

ಆಜಂದ್ರ ಜಾಲದಾ ಮಾಯದಾ ವಿದ್ಯೆಯಲಿ
ಕಪಟದಲಿ ಲಿಂಗಕ್ಕೆ ಅರ್ಪಿಸಿದ ಕುಸುಮಗಳ
ಕೊಳ್ಳುತಲಿ ಧರಿಸಿಹನು ಪುನರಪಿಯು ಕಪರ್ದಿಯನು
ಪೂಜಿಸುತ ಭಕುತಿಯಲಿ ಶಬರನನು ಜಯಿಸುವೆನು ॥೩೫೧॥

ಎನ್ನುತಲಿ ಯೋಚಿಸುತ ಫಲುಗುಣನು ಮತ್ತೊಮ್ಮೆ
ಗಂಧಮಾಲ್ಯಾದಿಯಲಿ ಬಿಲ್ವ ಪತ್ರಾದಿಯಲಿ
ಮಲ್ಲಿಗೆಯು ಕೇದಗೆಯುವರ ಪಾರಿಜಾತಗಳ
ವಿಧವಿಧದ ವಿಲಸಿತದ ಪುಷ್ಪದಲಿ ಪೂಜಿಸಿದ ॥೩೫೨॥

ದೇವಕ್ಷಧ್ವಂಸಿಯೆ ಫಾಲಾಕ್ಷ ವಿರುಪಾಕ್ಷ
ಪ್ರಳಯ ಪ್ರತಾಪನೆಹ ರಶಿವನೇ ರುದ್ರನೇ
ಶಬರನನು ಜಯಿಸುವಾ ಶಕ್ತಿಯನು ಕರುಣಿಪುದು
ಎನ್ನುತಲಿ ಸ್ತುತಿಸುತಲಿ ಮರುಳುತಲಿ ಫಲುಗುಣನು ॥೩೫೩॥

ಹೇ ಬೇಡ ಬಾ ಬೇಗ ಯುದ್ಧಕ್ಕೆ ಎನ್ನೊಡನೆ
ಈಗೆನ್ನ ಬಲವನ್ನು ವಿಕ್ರಮವ ನೋಡುವುದು
ಹರನೊಲುಮೆ ಎನಗಿಹುದು ನಿನ್ನನ್ನು ಜಯಿಸುವೆನು
ಎನ್ನುತಲಿ ಶಬರನಾ ಎದುರಿನಲಿ ಬಂದಿಹನು ॥೩೫೪॥

ಲಿಂಗಕ್ಕೆ ಲೇಪಿಸಿದ ಭಸ್ಮವದು ಗಂಧವದು
ಅರ್ಪಿಸಿದ ಬಿಲ್ವಗಳು ಕಣಗಿಲೆಯ ಪುಷ್ಪಗಳು
ಶಬರನಾ ಶಿರದೊಳಗೆ ಕಾಣುತಲಿ ಬೆರಳಿನಲಿ
ಮೊಗತಿರುವಿ ಲಿಂಗವನು ನೋಡಿದನು ಫಲುಗುಣನು ॥೩೫೫॥

**ಬೇಡನೇ ಸಾಕ್ಷಾತ್ತು ಪರಶಿವನು ಎನ್ನುತಲಿ**
**ಸಾಷ್ಟಾಂಗವೆರಗುತಲಿ ಭಕುತಿಯಲಿ ಸ್ತುತಿಸಿಹನು**

ಗಂಧ ಮಾಲ್ಯಾದಿಗಳ ಬಿಲ್ವಗಳ ಪುಷ್ಪಗಳ
ಲಿಂಗದಲಿ ಕಾಣದಲೆ ಶಬರನಾ ಶಿರದೊಳಗೆ
ಕಾಣುತಲಿ ಚಕಿತದಲಿ ಇವನಲೇ ಸಾಕ್ಷಾತ್ತು
ಪರಶಿವನು ಶಬರನಾ ರೂಪದಲಿ ಬಂದಿಹನು ॥೩೫೬॥

ಅಕಟಕಟ ಬೇಡನನು ಮೃಡನೆಂದು ಅರಿಯದಲೆ
ಕಡುಮೂರ್ಖ ನಾನಾದೆ ಕಡುಪಾಪಿ ನಾನಿಹೆನು
ಮೂಲೋಕದಧಿದೈವ ಕೈಲಾಸದಧಿಪತಿಯು
ಎದುರಿನಲಿ ನಿಂತಿರಲು ಅರಿಯದಾ ಮೂಢನಿಹೆ ॥೩೫೭॥

ಇವನಲೇ ಹದಿನಾಲ್ಕು ಲೋಕಗಳ ರಕ್ಷಿಸುವ
ಫಾಲಾಕ್ಷ ಪರಮೇಶ ಜಗದೀಶ ಈಶನಿಹ
ಎನ್ನುತಲಿ ಹರ್ಷಾಶ್ರು ಸುರಿಸುತಲಿ ಸಂತಸದಿ
ಹರನಂಘ್ರಿ ಕಮಲದಲಿ ಸಾಷ್ಟಾಂಗವೆರಗಿದನು ॥೩೫೮॥

ಮನದೊಳಗೆ ನೋಯುತಲಿ ಫಲಗುಣನು ತನುಬಿಮರಿ
ತ್ರಾಯಸ್ವ ತ್ರೈಲೋಕ್ಯವಂದಿತನೇ ತ್ರಿನೇತ್ರನೆ
ಕಾರುಣ್ಯ ಮೂರುತಿಯೆ ಕರುಣಾ ಸಮುದ್ರನೆ
ಎನ್ನಯಾ ಅಪರಾಧ ಕ್ಷಮಿಸುತಲಿ ರಕ್ಷಿಪುದು ॥೩೫೯॥

ಎನ್ನುತಲಿ ಶಂಭುವಿನ ಚರಣಾರವಿಂದದಲಿ
ಕಂಬನಿಯ ಸುರಿಸುತಲಿ ಪಾದಗಳ ತೊಳೆಯುತಲಿ
ಹೇ ಶಿವನೆ ಶರಗಳನು ಎಸೆಯುತಲಿ ನಿನ್ನನ್ನು
ನೋಯಿಸಿದೆ ಬಳಲಿಸಿದೆ ರಕ್ಷಿಪುದು ಎಂದಿಹನು ॥೩೬೦॥

ಬಾಹುವಿನ ಯುದ್ಧದಲಿ ಮಲ್ಲದಾ ಯುದ್ಧದಲಿ
ನಿನ್ನಯಾ ದೇಹವನು ಮರ್ದಿಸುತ ಘಾತಿಸುತ
ಹಿಂಸೆಯನು ಗೈದಿರುವ ಪಾತಕಿಯು ನಾನಿಹೆನು
ಎನ್ನಯಾ ಅವಗುಣವ ಮರೆಯುತಲಿ ರಕ್ಷಿಪುದು ॥೩೬೧॥

ಮೂಲೋಕ ವೀರನೆಂದೆಂಬುವಾ ಗರ್ವದಲಿ
ತಾಮಸದ ಮುಸುಕಿನಲಿ ನಿನ್ನನ್ನು ಅರಿಯದಲೆ
ಬಡ ಬೇಡನೆನ್ನುತಲಿ ಭಾವಿಸುತ ಹಿಂಸೆಯನು
ಇತ್ತಿರುವ ಕಡುಪಾಪಿ ನಾನಿಹೆನು ರಕ್ಷಿಪುದು ॥೩೬೨॥

ಜಗವೆಲ್ಲ ರಕ್ಷಿಸುವ ಮಹದೇವ ದೇವನಿಹೆ
ಭಕುತಜನ ವತ್ಸಲನು ಕರುಣೆಯಾ ಸಾಗರನು
ನರಜಂತು ಹುಳುನೊರಜು ಕಡುಹೀನ ನಾನಿಹೆನು
ಎನ್ನನ್ನು ಕ್ಷಮಿಸುತಲಿ ರಕ್ಷಿಪುದು ಎಂದಿಹನು ॥೩೬೩॥

ವೇದೋಪನಿಷದುಗಳ ಶಾಸ್ತ್ರಗಳ ತರ್ಕಗಳ
ತತ್ವಗಳ ಮಥನದಲಿ ನಿಲುಕದಿಹ ತೋರದಿಹ
ಸಾವಿರದ ವರುಷಗಳ ತಪಸಿಂಗೆ ಮೈಗೊಡದ
ಪರತತ್ವ ಮಹೇಶನೆ ರಕ್ಷಿಪುದು ಎಂದಿಹನು ॥೩೬೪॥

ಕಣ್ಣೆರೆಡು ಕಿವಿಯೆರಡು ಭುಜವೆರಡು ಪಾದೆರಡು
ಹಣೆಯೊಂದು ಮೂಗೊಂದು ಬಾಯೊಂದು ಇರುತಿರುವ
ಹುಳಜಂತು ನಾನಕಟ ಲೋಕವನು ಲಯಗೈವ
ರುದ್ರನನು ಕೆಣಕಿದೆನು ಕ್ಷಮಿಸುವುದು ಎಂದಿಹನು ॥೩೬೫॥

ಕೋಟಿಗಳ ನಯನಗಳ ಕೋಟಿಗಳ ಬಾಹುಗಳ
ಕೋಟಿಗಳ ನಾಸಿಕದ ಕೋಟಿಗಳ ವದನಗಳ
ವಿಶ್ವವನು ವ್ಯಾಪಿಸಿದ ಭವ್ಯವೀ ವೈರಾಟ
ಪುರುಷನನು ಕೆಣಕಿದೆನು ರಕ್ಷಿಪುದು ॥೩೬೬॥

ವಿಶ್ವತೋ ಚಕ್ಷುವಿಹ ವಿಶ್ವತೋ ಕರ್ಣವಿಹ
ವಿಶ್ವತೋ ಬಾಹುವಿಹ ವಿಶ್ವತೋ ಪಾದವಿಹ
ವಿಶ್ವತೋ ಮುಖವಿರುವ ವಿಶ್ವತೋ ದೇಹವಿಹ
ವೈರಾಟ ಪುರುಷನಿಗೆ ನಮೋನ್ನಮೋ ರಕ್ಷಿಪುದು ॥೩೬೭॥

ಮೇಲಿನಾ ಏಳುಗಳು ಲೋಕಗಳು ಶಿರವಿರುವ
ಕೆಳಗಿರುವ ಏಳುಗಳು ಲೋಕಗಳು ಪಾದವಿಹ
ದಶದಿಶೆಯು ಬಾಹುವಿಹ ಅಂತರಿಕ್ಷದ ನಾಭಿಯಿಹ
ವೈರಾಟ ಪುರುಷನಿಗೆ ನಮೋನ್ನಮೋ ರಕ್ಷಿಪುದು ॥೩೬೮

ಅಜನಾಗಿ ಹದಿನಾಲ್ಕು ಲೋಕಗಳ ಸೃಷ್ಟಿಸುತ
ಹರಿಯಾಗಿ ಲೋಕವನು ಸಕಲಗಳ ಪೊರೆಯುತಲಿ
ಹರನಾಗಿ ವಿಶ್ವವನು ಸಕಲವನು ಲಯಗೊಳಿಪ
ಪರಬ್ರಹ್ಮನೊಡನೆಮ್ಮ ಸಮರವೇ ರಕ್ಷಿಪುದೆ ॥೩೬೯॥

ತನ್ನಯ ವಿನೋದದಲಿ ಸೃಷ್ಟಿಯನು ನಿರ್ಮಿಸುತ
ಸಕಲ ಸಚರಾಚರದ ವಸ್ತುಗಳ ಭೂತಗಳ
ಸೂತ್ರದಾ ಬೊಂಬೆಗಳ ಆಟವನು ಆಡಿಸುತ
ಕೆಡಿಸುವಾ ದೇವನನು ಕೆಣಕಿದೆನು ರಕ್ಷಿಪುದು ॥೩೭೦॥

ಅಣುವಿಂಗೆ ಅಣುವಾಗಿ ಮಹತ್ತಿಗೆ ಮಹತ್ತಾಗಿ
ಸಕಲವೀ ಜಂಗಮದ ಸ್ಥಾವರದ ವಿಶ್ವವನು
ವ್ಯಾಪಿಸುತ ವಿಧವಿಧದ ವ್ಯವಹರಣೆ ಗೈಯ್ಯುತಿಹ
ವಿಶ್ವೇಶ ನಿನ್ನನ್ನು ನಿಂದಿಸಿದೆ ರಕ್ಷಿಪುದು ॥೩೭೧॥

ಜಗದೊಳಿಹ ಸಕಲಮೀ ಪ್ರಾಣಿಗಳ್ಗ ಹೃದಯದಲಿ
ಚೈತನ್ಯ ರೂಪದಲಿ ವ್ಯಾಪಿಸುತ ಪ್ರವಹಿಸುತ
ವಿಧ ವಿಧದ ಕರ್ಮಗಳ ಗೈಯ್ಯುತಲಿ ಲಯಗೊಳಿಪ
ಏಕಮೇವಾದ್ವಿತೀಯನೇ ರಕ್ಷಿಪುದು ಎಂದಿಹನು ॥೩೭೨॥

ರವಿಚಂದ್ರ ನವಗ್ರಹವು ನಕ್ಷತ್ರ ಪಾವಕನು
ಆವನಾ ತೇಜದಲಿ ಪ್ರಭೆಯಲ್ಲಿ ಬೆಳಗುವವೊ
ಆವನಾ ಕರುಣೆಯಲಿ ಜಗವೆಲ್ಲ ಚಲಿಸುವದೊ
ಅವನೊಡನೆ ಏನ್ಮಯಾ ಕಾಪಾಡೆ ಎಂದಿಹನು ॥೩೭೩॥

ಆವನಾ ಕರುಣೆಯಲಿ ಹಗಲಿರುಳು ಪಕ್ಷಗಳು
ಮಾಸಗಳು ಅಯನಗಳು ಋತುಚಕ್ರ ವರ್ಷಗಳು
ಯುಗ ಯುಗವು ಕಲ್ಪಗಳು ಕೋಟಿಗಳು ಸೇರಳುವವೊ
ಅವನನ್ನು ಕಣಕಿರುವ ಮಹಾಜ್ಞನು ರಕ್ಷಿಪುದು ॥೪೭೪॥

ಕೋಟಿಗಳ ಶಿರಗಳಲಿ ಭುಜಗಳಲಿ ಚರಣದಲಿ
ಬ್ರಹ್ಮಾಂಡವೆಲ್ಲವನು ಒಳಹೊರಗು ವ್ಯಾಪಿಸುತ
ದಶಾಂಗುಲ ಮೀರುತಲಿ ನಿಂತಿರುವ ಭವ್ಯನಿಹ
ವಿರಾಟನು ಪುರುಷನಿಹೆ ರಕ್ಷಿಪುದು ಎಂದಿಹನು ॥೩೭೫॥

ಜಗದೊಳಿಹ ಜೀವಿಗಳ ಕೋಟಿಗಳ ಹೃದಯದಲಿ
ಅಂಗುಷ್ಠ ಮಾತ್ರದಲಿ ಆತ್ಮದಲಿ ವಾಸಿಸುತ
ಕರ್ಮಗಳ ವ್ಯವಹರಣೆ ಗೈಯ್ಯುತಿಹ ಪುರುಷನನು
ಕಣಕಿರುವ ಕಡುಮೂರ್ಖ ನಾನಿಹೆನು ಕರುಣಿಪುದು ॥೩೭೬॥

ವಿಶ್ವದಾ ಪ್ರಾಣಿಗಳ ದೇಹದಾ ಪುರದೊಳಗೆ
ಅಂಗುಷ್ಠ ಮಾತ್ರದಲಿ ಆತ್ಮದಲಿ ವಾಸಿಸುತ
ಲೀಲೆಯನು ಗೈಯುತಲಿ ಲಯಗೊಳಿಪ ಪರಮಾತ್ಮ
ಮಹರುದ್ರ ನಿನ್ನೊಡನೆ ಕಾದಿದೆನು ಕರುಣಿಪುದು ॥೩೭೭॥

ಆವನಾ ಕೃಪೆಯಲ್ಲಿ ಪರ್ಜನ್ಯ ಸುರಿಯುವುದೊ
ಧನಧಾನ್ಯ ಔಷಧಿಯು ಸಸ್ಯಗಳು ವರ್ಧಿಪವೊ
ಜಗದೊಳಿಹ ಜೀವಿಗಳು ಸಕಲವೂ ಜೀವಿಪವೊ
ಅವನೊಡನೆ ಸೆಣಸಿದೆನು ಕರುಣೆಯಲಿ ರಕ್ಷಿಪುದು ॥೩೭೮॥

ಹದಿನಾಲ್ಕು ಲೋಕಗಳ ಜೀವಿಗಳ ಬೊಂಬೆಗಳ
ಜಗನಾಟ್ಯ ರಂಗದಲಿ ಆಟವನು ಆಡಿಸುತ
ತನ್ನಲ್ಲಿ ಲಯಗೊಳಿಪ ಏಕಮೇವಾದ್ವಿತೀಯನ
ಮಹರುದ್ರ ನಿನ್ನನ್ನು ಕೆಣಕಿದನು ಕ್ಷಮಿಸುವುದು ॥೩೭೯॥

ಅಜಹರಿಯು ದೇವೇಂದ್ರ ಸುರವೃಂದ ಭಜಿಸುತಿಹ
ಶ್ರೇಷ್ಠಳಾ ಮಹದೇವಿ ಶಕ್ತಿಯಾ ದೇವತೆಯು
ಸೇವಿಸುತ ಪಶುಪತಿಯ ಮಹದೇವ ದೇವನನು
ಕೆಣಕಿರುವ ಪಾತಕಿಯು ನಾಗಿಹೆನು ರಕ್ಷಿಪುದು ॥೩೮೦॥

ವೇದಾಂತ ವೇದ್ಯನನ ಆದ್ಯಂತರಹಿತನನ
ಓಂಕಾರರೂಪನನ ಅಕ್ಷಯನ ಅಕ್ಷರನ
ನಿತ್ಯನನ ಸನಾತನನು ಜಗದೇಕ ದೈವನನು
ಅಕಟಕಟ ಕೆಣಕಿದನು ಕರುಣೆಯಲಿ ರಕ್ಷಿಪುದು ॥೩೮೧॥

ವೇದೋಪನಿಷದುಗಳು ಶಾಸ್ತ್ರ ಮೀಮಾಂಸಾದಿಗಳು
ನಿನ್ನನ್ನು ಹೊಗಳಲಿಕೆ ಅಸಮರ್ಥವಾಗಿಹವು
ಅಜ್ಞಾನಿ ನಾನಂತು ನಿನ್ನನ್ನು ಬಣ್ಣಿಪೆನು
ಪ್ರಾಜ್ಞನೀ ಎನ್ನನ್ನು ರಕ್ಷಿಪುದು ಎಂದಿಹನು ॥೩೮೨॥

ಅರಿಯದಲೆ ಗೈದಿರುವ ಅಪರಾಧ ಶತವನ್ನು
ಮನ್ನಿಸುತಲಿ ಎನ್ನನ್ನು ಕರುಣೆಯಲಿ ರಕ್ಷಿಪುದು
ಶಿವಹರನೆ ಶಂಕರನೆ ಪಾರ್ವತೀ ವಲ್ಲಭನೆ
ರಕ್ಷಿಪುದು ಎನ್ನುತಲಿ ಸಾಷ್ಟಾಂಗ ಗೈದಿಹನು ॥೩೮೩॥

ಜನಮೇ ಜಯಾಧಿಪತಿ ಕೇಳುವುದು ನಿನ್ನಯಾ
ಪೂರ್ವಜರ ಪುಣ್ಯವೇ ಫಲಿಸಿತೋ ಎಂಬಂತೆ
ಶಬರನಾ ರೂಪವನು ತೊರೆಯುತಲಿ ಪಶುಪತಿಯು
ನಿಜರೂಪ ತೋರಿದನು ದಿವ್ಯ ಪ್ರಕಾಶದಲಿ ॥೩೮೪॥

ಮೇಘವನು ಒಗೆಯುತಲಿ ಮೂಡುತಿಹ ಮಿಂಚಂತೆ
ಶಬರನಾ ರೂಪವನು ತ್ಯಜಿಸುತಲಿ ಹರಶಿವನು
ಕೋಟಿರವಿ ತೇಜದಲಿ ದಿವ್ಯ ಪ್ರಕಾಶದಲಿ
ಹೊಳೆಯುತಲಿ ಬೆಳಗುತಲಿ ನಿಜರೂಪ ತೋರಿದನು ॥೩೮೫॥

ಕಂಜನಯ ವಿಲಸಿತದ ಪಿತಾಂಬರಾ ವಸ್ತ್ರಕದಿ
ಸಿಂಗರಿಸಿದ ಚಂದಿರನ ನಟ್ಟಿಳಗ ನೊಸಲಿನಲಿ
ರುದ್ರಾಕ್ಷ ಮಾಲೆಗಳ ನಾಗಗಳ ಹಾರಗಳ
ಕೊರಳಿನಲಿ ಶೋಭಿತನು ಹರಶಿವನು ಎಸೆದಿಹನು ॥೩೮೬॥

ಪೂರ್ಣಿಮೆಯ ಚಂದಿರನ ತೇಜದಲಿ ತೊಳದೊಳಗಿ
ಮಿರುಗುತಿಹ ತನುವಿನಾ ಕಾಂತಿಯಲಿ ಹೊಳೆಹೊಳೆದು
ಭಸ್ಮಾಂಗ ಭೂಷಿತನು ಗಜಚರ್ಮ ಶೋಭಿತನು
ಮೂಲೋಕದಧಿದೈವ ಮುಕ್ಕಣ್ಣನೆಸೆದಿಹನು ॥೩೮೭॥

ಕರದೊಳಗೆ ಖಟ್ವಾಂಗ ಖಡ್ಗವನು ಶೂಲವನು
ಅಂಕುಶವ ಪಾಶವನು ಶೂಲವನು ಧರಿಸುತಲಿ
ಚರಣದಲಿ ಕಿಂಕಿಣಿಯು ಗೆಜ್ಜೆಗಳ ಧರಿಸುತಲಿ
ತಾಂಡವದ ನಾಟ್ಯಪ್ರಿಯ ನಟರಾಜನೆಸದಿಹನು ॥೩೮೮॥

ಶಿರದೊಳಗೆ ಗಂಗೆಯನು ನೊಸಲಿನಲಿ ಚಂದಿರನ
ಕೊರಲಿನಲಿ ರುದ್ರಾಕ್ಷಿ ಸರ್ಪಗಳ ಮಾಲೆಗಳ
ಧರಿಸುತಲಿ ಕೈಲಾಸದಧಿಪತಿಯು ಪರಶಿವನು
ಅಭಯದಾ ಕರವೆತ್ತಿ ಮೆರೆದಿಹನು ಪ್ರಭೆಯಲ್ಲಿ ॥೩೮೯॥

ಭರತ ಕುಲ ಸಂತತಿಯ ವೈಭವದ ಫಳಿಗೆಯೊ
ಫಲುಗುಣನ ಕೀರ್ತಿಲತೆ ಕುಡಿವರಿದು ಹಬ್ಬಿಹುದೊ
ಧರ್ಮಜನ ಪುಣ್ಯವೇ ಸಾಕಾರಗೊಂಡಿಹುದೊ
ಎಂಬಂತೆ ಪರಶಿವನು ನಿಜರೂಪ ತೋರಿದನು ॥೩೯೦॥

ಬೇಡತಿಯ ರೂಪವನು ತ್ಯಜಿಸುತಲಿ ಪಾರ್ವತಿಯು
ರವಿಯಂತೆ ಹೊಳೆಯುತಿಹ ಕುಂಕುಮದ ತಿಲಕದಲಿ
ಥಳಥಳಿಪ ದಿವ್ಯಾಂಬರಾಭರಣ ಧರಿಸುತಲಿ
ಪಶುಪತಿಯ ವಾಮದಲಿ ಶೋಭಿಸುತ ನಿಂದಿಹಳು ॥೩೯೧॥

ವೇದಗಳು ಉಪನಿಷದ ಶಾಸ್ತ್ರಗಳು ತರ್ಕಗಳು
ಗುಹ್ಯಗಣಪ ಗಂಧರ್ವ ಕಿನ್ನರರು ಖೇಚರರು
ತುಂಬುರರು ನಾರದರು ಭೂತಗಣ ಅಗಣಿತವು
ಶಬರರಾ ರೂಪಗಳ ತ್ಯಜಿಸುತಲಿ ನಿಂದಿಹರು ॥೩೯೨॥

ಊರ್ವಶಿ ತಿಲೋತ್ತಮೆಯು ಮೇನಕೆ ಘೃತಾಚಿಯು
ಗಂಧರ್ವ ಲಲನೆಯರು ಶಬರಿಯ.ರ ರೂಪಗಳ
ತೊರೆಯುತಲಿ ಹೊಳೆಹೊಳೆವ ನಿಜರೂಪ ತಾಳುತಲಿ
ಪಾರ್ವತಿಯ ಸುತ್ತಲೂ ನಿಂದಿಹರು ಚೆಲುವಿನಲಿ ॥೩೯೩

ವರವ್ಯಾಸ ಗೌತಮನು ಭೃಗುಮುನಿ ಭರದ್ವಾಜ
ಕೌಶಿಕನು ಕಾಶ್ಯಪನು ಸನಕಾದಿ ಮುನಿವೃಂದ
ಐತಂದು ಪರಶಿವನ ದರುಶನವ ಪಡೆದಿಹರು
ಫಲಗುಣನ ಧನ್ಯನಿಹೆ ಎನ್ನುತಲಿ ಹರಸಿದರು ॥೩೯೪॥

ದಿವ್ಯ ಪ್ರಕಾಶದಲಿ ಹೊಳೆಹೊಳೆವ ಶಂಭುವಿನ
ದಿವ್ಯದಾ ರೂಪವನು ನೋಡುತಲಿ ಹರುಷದಲಿ
ಆನಂದ ಸಾಗರದಿ ಮುಳುಗುತಲಿ ಫಲಗುಣನು
ಪರಶಿವನ ಚರಣದಲಿ ಸಾಷ್ಟಾಂಗವೆರಗಿದನು ॥೩೯೫॥

ಅಗಣಿತದ ಜನ್ಮಗಳ ಸುಕೃತಗಳೆ ಸಂಚಿತದ
ಪುಣ್ಯವೇ ಫಲಿಸಿಹುದೊ ಎಂಬಂತೆ ಪರಶಿವನ
ದರುಶನವು ಎನಗಾಯ್ತು ಎನ್ನುತಲಿ ಸಂತಸದಿ
ಆನಂದ ಬಾಷ್ಪದಲಿ ಹರನಂಘ್ರಿ ತೊಳೆದಿಹನು ॥೩೯೬॥

ಶತಕೋಟಿ ಪಾಪಗಳ ಕಲ್ಮಷವ ತೊಲಗಿಸುತ
ಭವದುರಿತ ಕಷ್ಟಗಳ ಕೋಟಿಗಳ ಕಳೆಯುತಲಿ
ಮೋಕ್ಷವನು ಈಯುತಿಹ ಫಾಲಾಕ್ಷ ಪಶುಪತಿಯೆ
ಪರಶಿವನ ಹರಹರನೆ ಕರುಣಿಪುದು ಎಂದಿಹನು ॥೩೯೭॥

ಪರಶಿವನ ದಿವ್ಯದಾ ರೂಪವನು ನೋಡುತಲಿ
ನಭದೊಳಗೆ ನೆರೆದಿರ್ದ ಅಜ ಹರಿಯು ಸುರವೃಂದ
ಪುಷ್ಪದಾ ವೃಷ್ಟಿಯನು ಸುರಿಸುತಿರೆ ಹರುಷದಲಿ
ಕೊಂಬುಗಳು ಕಹಳೆಗಳು ಭೇರಿಗಳು ಮೊಳಗಿದವು ॥೩೯೮॥

ಜಯ ಜಯತು ಜಗದೀಶ ವಿಶ್ವೇಶ ಸರ್ವೇಶ
ಜಯ ಜಯತು ಗಿರಿಜೇಶ ಮಹೇಶ ಪರಮೇಶ
ಜಯ ಜಯತು ಶಂಕರನೆ ಶಿವಹರನೆ ಭವಹರನೆ
ಎನ್ನುತಲಿ ಸುರರುಗಳು ಸ್ತುತಿಸಿದರು ನಮಿಸುತಲಿ ॥೩೯೯॥

ನಿರ್ಗುಣಾ ನಿರಾಕಾರ ನಿರವಯನು ನಿರ್ಮಳನು
ನಿತ್ಯನು ನಿರಂಜನನು ನಿರುಪಮ ನಿರಾಮಯನು
ಎನ್ನನ್ನು ಉದ್ಧರಿಸಲೋಸುಗವೆ ಬಂದಿರುವ
ಪರಬ್ರಹ್ಮ ನೀನಿರುವೆ ಎಂದಿಹನು ಕಲಿಪಾರ್ಥ ॥೪೦೦॥

ಆದಿಯಲಿ ಅಜನಾಗಿ ಬ್ರಹ್ಮಾಂಡ ಸೃಷ್ಟಿಸುತ
ಸ್ಥಿತಿಯಲ್ಲಿ ಹರಿಯಾಗಿ ಲೋಕವನು ರಕ್ಷಿಸುತ
ಅಂತ್ಯದಲಿ ಹರನಾಗಿ ವಿಶ್ವವನು ಲಯಗೈವ
ಘನಮಹಿಮ ಪರಬ್ರಹ್ಮ ನೀನಿರುವೆ ಎಂದಿಹನು ॥೪೦೧॥

ನಿನ್ನನ್ನು ತಿಳಿಯದಲೆ ಸೊಕ್ಕಿನಲಿ ಮೌಢ್ಯದಲಿ
ನಿನ್ನೊಡನೆ ಹೆಣಗಿದೆನು ಸೆಣಸಿದೆನು ತಿಣುಕಿದೆನು
ಎನ್ನಯಾ ಅವಗುಣವ ಅಪರಾಧ ಮನ್ನಿಸುತ
ಕರುಣಿಪುದು ಎನ್ನುತಲಿ ಕಲಿಪಾರ್ಥ ಪ್ರಾರ್ಥಿಸುತ ॥೪೦೨॥

ರಕ್ಷಿಪುದು ದಕ್ಷಹರ ಗಂಗಧರ ಇಂದುಧರ
ರಕ್ಷಿಪುದು ಫಾಲಾಕ್ಷ ದಾಕ್ಷಾಯಣೀ ಪತಿಯೇ
ರಕ್ಷಿಪುದು ವಿರುಪಾಕ್ಷ ಪರಮೇಶ ಗಿರಿಜೇಶ
ಎನ್ನುತಲಿ ಹರನಂಘ್ರಿಕಮಲದಲಿ ಎರಗಿದನು ॥೪೦೩॥

**ವರಭಕುತ ಅರ್ಜುನಗೆ ಪಾಶುಪತಿ ಅಸ್ತ್ರವನು।**
**ಈಯುತಲಿ ಕರುಣಾಳು ಪರಶಿವನು ಹರಸಿದನು॥**

ಅಕಟಕಟ ನನ ಭಕುತ ನವೆದಿಹನು ನೊಂದಿಹನು
ಎನ್ನುತಲಿ ಕರುಣಾಳು ಭಕುತ ಜನ ವತ್ಸಲನು
ಕರುಣೆಯಾ ಸಾಗರನು ಪರಶಿವನು ಮರುಗುತಲಿ
ನರನನ್ನು ಭುಜವಿಡಿದು ಎಬ್ಬಿಸುತ ನುಡಿದಿಹನು ॥೪೦೪॥

ನಿನ್ನಯಾ ಶೌರ್ಯವನು ಧೃಡಭಕುತಿ ಮೆಚ್ಚಿಹೆನು
ನೀಗೈದ ಸೆಣಸಾಟ ಅರ್ಚನವು ಎನಗಹುದು
ನೋಯದಿರು ನವೆಯದಿರು ಎನಗಾವ ಮುನಿಸಿಲ್ಲ
ಎನ್ನುತಲಿ ಫಲುಗುಣನನಪ್ಪಿದನು ಬಲವಾಗಿ ॥೪೦೫॥

ಮುನ್ನಿನಲಿ ಖ್ಯಾತನಿಹ ನರನೆಂಬ ಋಷಿವರನು
ನಾರಾಯಣಾಂಶನಿಹೆ ಎಮ್ಮಯಾ ಭಕುತನಿಹೆ
ಮುರಹರನ ಅಳಿಯನಿಹೆ ಎಮ್ಮವನು ನೀನಿರುವೆ
ಎನ್ನುತಲಿ ನರನನ್ನು ಅಪ್ಪಿದನು ಒಲವಿನಲಿ ॥೪೦೬॥

ಎನ್ನೊಡನೆ ಸರಿಸಮನು ಎನಿಸುತಲಿ ಸಮರದಲಿ
ಅದ್ಭುತ ಪರಾಕ್ರಮವ ಶೌರ್ಯವನು ತೋರಿರುವೆ
ನಿನ್ನಯಾ ಧೈರ್ಯವನು ಸ್ಥೈರ್ಯವನು ಮೆಚ್ಚಿರುವೆ
ಎನ್ನುತಲಿ ದಿವ್ಯದಾ ಶರಖಡ್ಗವಿತ್ತಿಹನು ॥೪೦೭॥

ನಿನ್ನಯಾ ಧೃಡಭಕುತಿ ತಪಸಿಂಗೆ ಒಲಿದಿಹೆನು
ಅಪ್ರತಿಮ ಸಾಹಸಕೆ ಬೆರಗಿನಲಿ ಮೆಚ್ಚಿಹೆನು
ಅಂಜದಿರು ನೀನಿನ್ನು ಬೇಡಿದುದನೀಯುವೆನು
ವರವನ್ನು ಕೇಳುವುದು ಎನ್ನುತಲಿ ಮೃಡ ನುಡಿದ ॥೪೦೮॥

ಕರುಣೆಯಾ ಸಾಗರನೆ ಅತಿಸುಲಭ ನೀನಿರುವೆ
ವರವನ್ನು ಕೊಡುವೊಡೆಯ ನಿಮಿಷದಲಿ ಬ್ರಹ್ಮಾಂಡ
ಸುಡುವಂಥ ದಿವ್ಯಾಸ್ತ್ರ ಪಾಶುಪತ ಅಸ್ತ್ರವನು
ಬ್ರಹ್ಮಾಸ್ತ್ರ ನೀಯುವುದು ಎಂದಿಹನು ಕಲಿಪಾರ್ಥ ॥೪೦೯॥

ತಡವೇಕೆ ಅರ್ಜುನನೆ ಹದಿನಾಲ್ಕು ಲೋಕಗಳ
ದಹಿಸುವೀ ಪರಮಾಸ್ತ್ರ ಪಾಶುಪತ ಶರವನ್ನು
ಗಂಧರ್ವ ಕಿನ್ನರರ ಖೇಚರರ ಉರಗರನು
ಜಯಿಸುವೀ ಬ್ರಹ್ಮಾಸ್ತ್ರವಿತ್ತಿಹೆನು ಎಂದಿಹನು ॥೪೧೦॥

ನನಿಹದಲಿ ಕೊಳದೊಳಗೆ ಸ್ನಾನವನು ಗೈಯ್ಯುತಲಿ
ಆಚಮನ ಗೈಯ್ಯುತಿರೆ ವರವೃಷಭನು ಗುಪಿತದಲಿ
ಕಿವಿಯೊಳಗೆ ಅಸ್ತ್ರದಾ ಮಂತ್ರವನು ಉಸುರುತಲಿ
ಹೊಳೆಹೊಳೆವ ಪಾಶುಪತ ಅಸ್ತ್ರವನು ಇತ್ತಿಹನು ॥೪೧೧॥

ಜಗವೆಲ್ಲ ಜಯಜಯವು ಎನ್ನುತಲಿ ಉಲಿಯುತಿರೆ
ಗಗನದಲಿ ಭೇರಿಗಳು ವಾದ್ಯಗಳು ಮೊಳಗುತಿರೆ
ಸುರರುಗಳು ಜಯಕಾರ ಗೈಯ್ಯುತಲಿ ಸಂತಸದಿ
ಹರನಂಘ್ರಿ ಕಮಲದಲಿ ಹೂಮಳೆಯ ಸುರಿದಿಹರು ॥೪೧೨॥

ಋಷಿಗಳಾ ವೇದಗಳ ಘೋಷಣೆಯ ನಾದದಲಿ
ನಾರದರ ತುಂಬುರರ ಸಂಗೀತ ಸುಸ್ವರದಿ
ರಂಭೆಯಾ ಊರ್ವಶಿಯ ನೃತ್ಯದಲಿ ಗೀತದಲಿ
ಕಲಿಪಾರ್ಥ ಆನಂದಸಾಗರದಿ ಮುಳುಗಿದನು ॥೪೧೩॥

ಸಮರದಲಿ ಶತ್ರುಗಳ ಜಯಿಸುವಾ ಶಕ್ತಿಯನು
ಧರ್ಮಾರ್ಥ ಕಾಮಗಳ ಮೋಕ್ಷಗಳ ಪುರುಷಾರ್ಥ
ನಿನಗಿತ್ತೆ ಎನ್ನುತಲಿ ಹರಸುತಲಿ ಪಾರ್ಥನನು
ಪರಶಿವನು ತೆಗೆತೆಗೆದು ಅಪ್ಪಿದನು ಒಲುಮೆಯಲಿ ॥೪೧೪॥

ಹೇ ಗಿರಿಜೆ ಎನ್ನಯಾ ಶ್ರೇಷ್ಠನಿಹ ಭಕ್ತನನು
ಅರ್ಜುನನ ಹರಸುವುದು ಎನ್ನುತಲಿ ಹರನುಡಿಯೆ
ಪಾರ್ವತಿಯು ಪಾರ್ಥನನು ಪ್ರೀತಿಯಲಿ ನೋಡುತಿರೆ
ಸಾಷ್ಟಾಂಗ ಗೈಯ್ಯುತಲಿ ಗೌರಿಯನು ಸ್ತುತಿಸಿದನು ॥೪೧೫॥

ಮುರಹರನ ಮೈದುನನೆ ಪ್ರಾಣಸಖ ಫಲಗುಣನೆ
ನಿನ್ನಯಾ ಸಾಹಸದ ಶೌರ್ಯದಲಿ ಮೆಚ್ಚಿಹೆನು
ದಿವ್ಯಾಂಜನಾಸ್ತ್ರವನು ನಿನಗೀವೆನೆನ್ನುತಲಿ
ಪಾರ್ವತಿಯು ಅಸ್ತ್ರವನು ಕರದೊಳಗೆ ಇತ್ತಿಹಳು ॥೪೧೬॥

ರಣದೊಳಗೆ ಸಾವಿರದ ಕೋಟಿಗಳ ಅರ್ಭಟದ
ಶತ್ರುಗಳ ಸಂಹಾರಗೈಯ್ಯುವೀ ಘೋರತರ
ವರ ಅಂಜನಾಸ್ತ್ರವಿದು ಕೊಳ್ಳೆನುತ ಪಾರ್ವತಿಯು
ಪಾರ್ಥಂಗೆ ಮಂತ್ರವನು ಉಪದೇಶಗೈದಿಹಳು ॥೪೧೭॥

ಗಜಮುಖನ ಷಣ್ಮುಖನ ಪಾದಕ್ಕೆ ಎರಗುತಿರೆ
ಸಂತಸದಿ ಫಲುಗುಣನ ಬಲವಾಗಿ ಅಪ್ಪುತಲಿ
ವಿಧವಿಧದ ದಿವ್ಯಾಸ್ತ್ರ ಶಸ್ತ್ರಗಳ ನೀಯುತಲಿ
ರಣದೊಳಗೆ ಜಯಿಸುವುದು ಎನ್ನುತಲಿ ಹರಸಿದರು ॥೪೧೮॥

ಶಸ್ತ್ರಾಸ್ತ್ರ ವಿದ್ಯೆಯನು ವಿಸ್ತರದಿ ತಿಳುಹಿದೆನು
ಇಲ್ಲಿಂದ ನೀ ಇಂದ್ರ ಪುರದತ್ತ ತೆರಳುವುದು
ಎಮ್ಮಯಾ ಪ್ರತಿರೂಪ ಹರಿ ನಿನ್ನ ರಕ್ಷಿಪನು
ಎನ್ನೊಳಗೆ ಹರಿಯೊಳಗೆ ಭೇದವನು ಮಾಡದಿರು ॥೪೧೯॥

ಹರಿಯನ್ನು ಭಜಿಸುತಲಿ ಹರನನ್ನು ನಿಂದಿಸಲು
ಹರನನ್ನು ಭಜಿಸುತಲಿ ಹರಿಯನ್ನು ದ್ವೇಷಿಸಲು
ನೂರಾರು ಜನ್ಮದಲಿ ನರಕದಲಿ ಬೀಳುತಲಿ
ಘೋರತರಯಾತನೆಯ ತಪ್ಪದಲೆ ಭೋಗಿಪರು ॥೪೨೦॥

ಹರಿ ಹರನ ಪ್ರತಿರೂಪ ಹರ ಹರಿಯ ಪ್ರತಿರೂಪ
ಹರಗಿಂತ ಹರಿಶ್ರೇಷ್ಠ ಹರಿಗಿಂತ ಹರಶ್ರೇಷ್ಠ
ಎನ್ನುತಲಿ ಹರಿಹರರ ಭೇದವನು ಗೈಯುತಿಹ
ನರರುಗಳು ಪಾಪಿಗಳು ಇದು ನಮ್ಮ ಮತವೆಂದ ॥೪೨೧॥

ನಿಮ್ಮಯಾ ಕಥೆ ಇದುವೆ ಪುಣ್ಯ ಕಥೆ ಎನಿಸುತಲಿ
ಚಂದ್ರಾರ್ಕ ಪರ್ಯಂತ ಜಗದೊಳಗೆ ಮೆರೆಯುವುದು
ನಿಮ್ಮಯಾ ಚರಿತೆಯನು ಕೇಳುವಾ ನರರುಗಳು
ಪುಣ್ಯವನು ಪಡೆಯುತಲಿ ಸ್ವರ್ಗವನು ದೊರಕಿಪರು ॥೪೨೨॥

ನಿಮ್ಮನ್ನು ನಿಂದಿಸುವ ನರರುಗಳು ಪಾಪಿಗಳು
ಪಾತಕಿಗಳೆನಿಸುತಲಿ ನರಕದಲಿ ಬೀಳುವರು
ಇದು ನಮ್ಮ ಮತವೆಂದು ಪರಶಿವನು ನುಡಿಯುತಲಿ
ಮಂಗಲವು ಜಯಜಯವು ನಿನಗೆಂದು ಹರಸಿದನು ॥೪೨೩॥

ಜಗನ್ಮಾತೆ ಪಾರ್ವತಿಯು ಗಣಪತಿಯು ಹರಸುತಿರೆ
ಶಂಭುವಿನ ಕರುಣೆಯದು ಎಂತಹುದೊ ಎನ್ನುತಲಿ
ತನುಪುಳಕವಾಗುತಲಿ ಮನದೊಳಗೆ ಶಂಭುವನು
ನೆನೆಯುತಲಿ ಆನಂದ ಸಾಗರದಿ ಮುಳುಗಿದನು ॥೪೨೪

ಕೈಲಾಸದಧಿಪತಿಯು ಪಾರ್ವತಿಯು ಸಹಿತದಲಿ
ಹರಸುತಲಿ ಕೈಲಾಸಪರ್ವತಕೆ ತೆರಳುತಿರೆ
ಕಲಿಪಾರ್ಥ ಪಾಶುಪತ ಅಸ್ತ್ರದಾ ಪ್ರಾಪ್ತಿಯಲಿ
ಮನದೊಳಗೆ ಪಶುಪತಿಯ ನೆನೆಯುತಲಿ ಇರ್ದಿಹನು ॥೪೨೫॥

ಹೇ ಪರೀಕ್ಷಿತ ತನಯ ಜನಮೇಜಯನೆ ಕೇಳುವುದು
ಅತ್ತಲಾ ಪಶುಪತಿಯು ಕೈಲಾಸ ಪರ್ವತಕೆ
ಸರಿಯುತಿರೆ ಕಲಿಪಾರ್ಥ ಪಾಶುಪತ ಅಸ್ತ್ರವನು
ಪರಶಿವಗೆ ಬೇಡುತಲಿ ಕಡುಮೂರ್ಖ ನಾನಾದೆ ॥೪೨೬॥

ಜನ್ಮ ಜನ್ಮಾಂತರದಿ ಗೈದಿರುವ ಪುಣ್ಯದಲಿ
ವೈಗೊಡದ ಘನಮಹಿಮ ಭವಪಾಪ ಕಳೆಯುತಲಿ
ಮೋಕ್ಷವನು ಈಯುತಿಹ ಫಾಲಾಕ್ಷ ವೈದೊರೆ
ಭವಪಾರ ಬೇಡುತಲಿ ಕಡುಮೂರ್ಖ ನಾನಾದೆ ॥೪೨೭॥

ಈ ಪರಿಯೆ ಫಲಗುಣನು ಚಿಂತಿಸುತಲಿರುತಿರಲು
ಧನಪತಿಯು ವರವರುಣ ಯಮಧರ್ಮ ಸುರರುಗಳು
ಗಂಧರ್ವ ಕಿನ್ನರರು ಖೇಚರರು ಗುಹ್ಯಕರು
ಅಪರಿಮಿತ ಸಂಖ್ಯೆಯಲಿ ನಭದಿಂದ ಇಳಿದಿಹರು ॥೪೨೮॥

ಕಹಳೆಗಳ ಕೊಂಬುಗಳ ಭೇರಿಗಳ ನಾದವದು
ಜಯತು ಜಯತು ಪಾರ್ಥಂಗೆ ಜಯ ಜಯತು ಫಲಗುಣಗೆ
ಎಂಬುವಾ ಜಯಕಾರ ದಶದಿಶೆಯ ತುಂಬುತಿರೆ
ಸಕಲರೂ ಸುರರುಗಳು ಎಮರಿನಲಿ ಇಳಿದಿಹರು ॥೪೨೯॥

ಪರಶಿವನ ಕರುಣೆಯಲಿ ಪಾಶುಪತ ಅಸ್ತ್ರವನು
ಪಡೆದಿರುವ ನಿಜಸುತನ ಫಲಗುಣನ ಉತ್ಕರ್ಷ
ವೈಭವವ ನೋಡಲಿಕೆ ದಿವಿಜರಾ ಸಹಿತದಲಿ
ದೇವೇಂದ್ರನಿಳಿದಿಹನು ದಿವ್ಯ ಪ್ರಕಾಶದಲಿ ॥೪೩೦॥

ಬಂದಿರುವ ದಿವಿಜರನು ಅವರವರಿಗುಚಿತದಲಿ
ಉಪಚರಿಸಿ ಕಲಿಪಾರ್ಥ ಸತ್ಕಾರಗೈಯ್ಯುತಿರೆ
ಪಶುಪತಿಯನುಗ್ರಹದಿ ಪಾಶುಪತ ಅಸ್ತ್ರವನು
ಪಡೆದಿರುವ ಕಲಿಪಾರ್ಥ ನೀ ಧನ್ಯನೆಂದಿಹನು ॥೪೩೧॥

ಇಗೊ ನಿನಗೆ ಉಡುಗೊರೆಯನೀಯುವೆನು ಎನ್ನುತಲಿ
ವರವರುಣ ಪಾಶವನು ಅಸ್ತ್ರವನು ಇತ್ತಿಹನು
ಧನಪತಿಯು ಧನುರ್ಬಾಣ ದಿವ್ಯಾಸ್ತ್ರವಗಣಿತದಿ
ಯಮಧರ್ಮ ದಂಡವನು ಕಾಣಿಕೆಗಳಿತ್ತಿಹನು ॥೪೩೨॥

ಮೂರಲೋಕ ದಹಿಸುವಾ ದಿವ್ಯಾಸ್ತ್ರ ಪಡೆದಿರುವ
ನಿನ್ನನ್ನು ಜಯಿಸುವರಾರಿಲ್ಲ ಜಗದೊಳಗೆ
ಹರನೊಲುಮೆ ಲಭಿಸುತಲಿ ಧನ್ಯನಾದೆನ್ನುತಲಿ
ಅಮರೇಂದ್ರ ಅಣುಗನನ ಅರ್ಜುನನಪ್ಪಿದನು ॥೪೩೩॥

ಶಿವನೊಡನೆ ಸೆಣಸಾಡಿ ಸಂಗ್ರಾಮ ಗೈಯ್ಯುತಲಿ
ಶಿವನನ್ನು ಒಲಿಸುತಲಿ ಪಾಶುಪತ ಪಡೆದಿರುವೆ
ಹರಕರುಣೆ ಕವಚವದು ನಿನ್ನಂಗ ರಕ್ಷಿಸಲು
ಇನ್ನಾರು ನಿನ್ನನ್ನು ಗೆಲ್ಲುವರು ಎಂದಿಹನು ॥೪೩೪॥

ಘನಘೋರ ಪಾಶುಪತ ದಿವ್ಯಾಸ್ತ್ರ ಪಡೆದಿರುವೆ
ಇನ್ನಾವ ಅಸ್ತ್ರವ ಅವಶ್ಯಕತೆ ನಿನಗಿಲ್ಲ
ಇದು ಎನ್ನ ಒಲುಮೆಯಾ ಕಾಣಿಕೆಯ ಕೊಳ್ಳುವುದು
ಎನ್ನುತಲಿ ದೇವೇಂದ್ರ ಅಸ್ತ್ರಗಳ ನಿತ್ತಿಹನು ॥೪೩೫॥

ಆಹಾರ ನೀರನ್ನು ತೊರೆಯುತಲಿ ಉಗ್ರತರ
ತಪವನ್ನು ಗೈಯ್ಯುತಲಿ ಬಳಲಿರುವೆ ಸೊರಗಿರುವೆ
ಎಮ್ಮಯಾ ಸ್ವರ್ಗಕ್ಕೆ ಐತಂದು ಸೌಖ್ಯದಲಿ
ಕೆಲಸಮಯ ವಿಶ್ರಾಂತಿ ಕೊಳ್ಳುವುದು ಎಂದಿಹನು ॥೪೩೬॥

ಗಾಯನದಿ ಗೀತದಲಿ ನೃತ್ಯದಲಿ ನಾಟಕದಿ
ನಂದನದ ವನದೊಳಗೆ ವಿಹರಿಸುತ ರಮಿಸುವುದು
ಎನ್ನಯಾ ಸಾರಥಿಯ ರಥಸಹಿತ ಕಳುಹುವೆನು
ನೀ ಬಹುದು ಎನ್ನುತಲಿ ನುಡಿದಿಹನು ಅಮರೇಂದ್ರ ॥೪೩೭॥

ನೂರಾರು ಯಜ್ಞ ಸ್ಥಳ ರಾಜಸೂಯಾಧ್ವರದ
ವರ ಅಶ್ವಮೇಧವನು ಮಾಡಿದೊಡೆ ಮರ್ತ್ಯನಿಗೆ
ಲಭಿಸದಿಹ ಸ್ವರ್ಗವನು ಕಾಂಬುವಾ ಪುಣ್ಯವದು
ದೊರಕಿಹುದು ಬಹೆನೆಂದು ನುಡಿದಿಹನು ಅರ್ಜುನನು ॥೪೩೮॥

ಮಂಗಳವು ಶುಭಕರವು ನಿನಗಾಗಲೆನ್ನುತಲಿ
ದೇವೇಂದ್ರ ಹರಸುತಲಿ ಸಭದೆಡೆಗೆ ಸರಿಯುತಿರೆ
ವರವರುಣ ಧನಪತಿಯು ಗಂಧರ್ವ ಸುರರುಗಳು
ಸಕಲರೂ ಫಲಗುಣನ ಹರಸುತಲಿ ತೆರಳಿದರು ॥೪೩೯॥

**ಮಾತಲಿಯು ಸಹಿತದಲಿ ಸ್ವರ್ಗಕ್ಕೆ ತೆರಳುತಲಿ ।**
**ಕಲಿಪಾರ್ಥ ಸುರಪತಿಯ ಇಂದ್ರನನು ಕಂಡಿಹನು ॥**

ಹೇ ನೃಪನೆ ಆಲಿಪುದು ಆ ಕ್ಷಣದಿ ಗಗನದಲಿ
ಹೊಳಿಹೊಳೆವ ತೇಜದಲಿ ಕೋಲ್ಮಿಂಚಿನಂತೆಸೆವ
ಬಾಲರವಿ ಮೂಡಿಹನೊ ಎಂಬಂತೆ ಬೆಳಗುತಲಿ
ಹೇಮರಥವಿಳಿದಿಹುದು ಮಾತಲಿಯು ಸಹಿತದಲಿ ॥೪೪೦॥

ಸ್ವರ್ಣದಾ ಆಭರಣ ವಸ್ತ್ರಗಳ ಸೊಬಗಿನಲಿ
ತುರಾಯಿಗಳ ಬೆಡಗಿನಾ ಸಾವಿರದ ಅಶ್ವದಳ
ಸಾವಿರವ ಕಡಿವಾಣ ಸತ್ತಿಗೆ ಪತಾಕೆಗಳ
ಶೋಭಿತದ ರಥಸಹಿತ ಮಾತಲಿಯು ಇಳಿದಿಹನು ॥೪೪೧॥

ಇದು ರವಿಯೊ ಚಂದ್ರಮನೊ ಧರೆಗಿಳಿದು ಬರುತಿಹನೊ
ಎಂಬಂತೆ ದೀಪ್ತಿಯಲಿ ಗಗನದಲಿ ಇಳಿಯುತಿರೆ
ಫಲಗುಣನು ನೋಡುತಲಿ ಅಚ್ಚರಿಯಗೊಳ್ಳುತಲಿ
ಸುರರಥವ ಕಾಣುತಲಿ ಸಂತಸವಗೊಂಡಿಹನು ॥೪೪೨॥

ಧರೆಗಿಳಿದು ವರರಥವು ಫಲಗುಣನ ಎದುರಿನಲಿ
ನಿಲ್ಲುತಿರೆ ಇಂದ್ರನಾ ಸಾರಥಿಯು ಮಾತಲಿಯು
ಹೇ ನರೋತ್ತಮವರನೆ ಹರನೊಲುಮೆ ಗಳಿಸಿರುವ
ನಿನಗಾರು ಸಮರಿಲ್ಲ ಜಗದೊಳಗೆ ಎಂದಿಹನು ॥೪೪೩॥

ಲೋಕವನು ಲಯಗೊಳಿಪ ಪಾಶುಪತ ಅಸ್ತ್ರವನು
ಪಡೆದಿರುವ ನಿನ್ನನ್ನು ಜಯಿಸುವವರಾರಿಲ್ಲ
ನಿನ್ನಯಾ ಪುಣ್ಯತರು ಫಲಿಸಿಹುದು ಏಳುವುದು
ರಥವನ್ನು ಏರುತಲಿ ಸ್ವರ್ಗಕ್ಕೆ ತೆರಳುವುದು ॥೪೪೪॥

ಸುರಪತಿಯು ನಿನ್ನನ್ನು ಸ್ವರ್ಗಕ್ಕೆ ಕರೆತರಲು
ಎನ್ನನ್ನು ಕಳುಹಿದನು ರಥವನ್ನು ಏರುವುದು
ಸ್ವರ್ಗದಾ ಬಾಗಿಲವು ನಿನಗಾಗಿ ತೆರೆಯುತಲಿ
ನಿನ್ನಯಾ ಸ್ವಾಗತಕೆ ಕಾತರಿಸಿ ನಿಂದಿಹುದು ॥೪೪೫॥

ಎಲ್ಲಿಯದು ಭೂಲೋಕ ಎಲ್ಲಿಯದು ಆ ಸ್ವರ್ಗ
ನರರಿಂಗೆ ಸುರರಿಂಗೆ ಎತ್ತಣದ ಸಂಬಂಧ
ನೂರಾರು ಯಜ್ಞಗಳಿಗೆಟುಕದಿಹ ಆ ನಾಕ
ಪರಶಿವನ ಕರುಣೆಯಲಿ ದೊರಕಿಹುದು ಎಂದಿಹನು ॥೪೪೬॥

ಜೀವಂತ ಸ್ವರ್ಗವನು ಕಾಂಬುವಾ ಸೌಭಾಗ್ಯ
ಎನಗಿಂದು ದೊರೆತಿಹುದು ಧನ್ಯನಿಹೆ ಎನ್ನುತಲಿ
ವರಇಂದ್ರಕೀಲದಾ ಪರ್ವತಕೆ ನದಿಕೊಳಕೆ
ತರುಲತೆಗೆ ಖಗಮೃಗಕೆ ಮುನಿಜನಕೆ ಕರಮುಗಿದು ॥೪೪೭॥

ಹೋಗಿ ಬಹೆನೆನ್ನುತಲಿ ರಥವನ್ನು ಏರುತಿರೆ
ಮಾತಲಿಯು ಸಾವಿರದ ಕಡಿವಾಣ ಜಗ್ಗುತಲಿ
ಫಲಗುಣನೆ ಧೃಢವಾಗಿ ಕುಳಿತಿಹುದು ಎನ್ನುತಲಿ
ಕುದುರೆಗಳ ಚಪ್ಪರಿಸಿ ರಥವನ್ನು ಬಿಟ್ಟಿಹನು ॥೪೪೮॥

ಸಾರಥಿಯು ಹೈಹಯದ ಅಶ್ವಗಳ ಹೂಂಕೃತಿಯು
ಚಕ್ರಗಳ ಕೀಲುಗಳ ಕಿರ್ರನೆ ನಿನಾದದಲಿ
ಕಣ್ಣನ್ನು ಮಿಟುಕಿಸುವ ಸಮಯದಲಿ ವರರಥವು
ಗಗನದಲಿ ತಲುಪುತಿರೆ ಫಲಗುಣನು ನುಡಿದಿಹನು ॥೪೪೯॥

**ಮಾರ್ಗದಾ ಮಧ್ಯದಲಿ ಮಾತಲಿಯು ಪಾರ್ಥಂಗೆ ।**
**ಹದಿನಾಲ್ಕು ಲೋಕಗಳ ವರ್ಣನೆಯ ಗೈದಿಹನು ॥**

ಸಾರಥಿಯೆ ಹೇಳುವುದು ಈ ಪೃಥಿವಿ ಪರ್ವತವು
ಸಾಗರವು ವರುಷಗಳು ದ್ವೀಪಗಳು ನದಿಕೊಳವು
ಲೋಕಗಳು ಮೇಲಕ್ಕೆ ಕೆಳಗಡೆಗೆ ಎಷ್ಟಿಹವು
ಎಂಬುದನು ವಿಶದದಲಿ ಹೇಳುವುದು ಎಂದಿಹನು ॥೪೫೦॥

ಈ ಭೂಮಿ ದೆಸೆಗಳನು ಧರಿಸಿರುವರಾರಿಹರು
ರವಿ ಚಂದ್ರ ತಾರೆಗಳ ಗ್ರಹಗಳಾ ವಿಸ್ತರದ
ಕೌತುಕದ ವಿಷಯವನು ವಿಶದದಲಿ ಅರುಹುವುದು
ಎನ್ನುತಲಿ ಅರ್ಜುನನು ಮಾತಲಿಗೆ ನುಡಿದಿಹನು ॥೪೫೧॥

ಕೆಳಗಣದ ಭೂಸಹಿತ ವ್ಯಾಪಿಸಿಹ ಜಲಸಿಧಿಯ
ವಿಸ್ತರವು ಇಪ್ಪತ್ತು ಮೇಲೈದು ಕೋಟಿಯಾ
ಪವಣವದು ವಾರಿಧಿಯ ಮೇಲಿರ್ಪ ಪೃಥಿವಿಯಾ
ವಿಸ್ತರವು ಕೋಟ್ಯೊಂದು ಫಲಗುಣನೆ ಕೇಳೆಂದ ॥೪೫೨॥

ನೆಲದಿಂದ ಮೇಲಕ್ಕೆ ಬ್ರಹ್ಮಾಂಡ ಪರ್ಯಂತ
ಇಪ್ಪತ್ತು ಮೇಲ್ನಾಕು ಕೋಟಿಯಾ ಪವಣವದು
ಭೂಲೋಕ ತಳದಲ್ಲಿ ಅತಳವದು ವಿತಳವದು
ಸುತಳವದು ತಳಾತಳವು ಮಹತಳ ರಸಾತಳವು ॥೪೫೩॥

ಪಾತಾಳವೆಂಬುವಾ ಲೋಕಗಳು ಏಳುಗಳು
ಈರೈದು ಸಾವಿರದ ಯೋಜನದ ಅಂತರದಿ
ಸ್ಥಿರವಾಗಿ ನೆಲಸಿಹವು ಕಮಲಭವ ಈ ಸಕಲ
ಸೃಷ್ಟಿಯನು ಸೃಜಿಸಿಹನು ತನ್ನಯ ವಿನೋದದಲಿ ॥೪೫೪॥

ಈ ಲೋಕ ಭೂಲೋಕ ಶ್ರೇಷ್ಠತರ ಎನಿಸುವುದು
ಇಲ್ಲಿಂದ ಮೇಲಕ್ಕೆ ಭುವಲೋಕ ಸುವಲೋಕ
ಮಹಲೋಕ ತಪೋಲೋಕ ಅಲ್ಲಿಂದ ಮೇಲಕ್ಕೆ
ಪರಸತ್ಯ ಲೋಕವದು ಶ್ರೇಷ್ಠತಮ ಮೆರೆಯುವುದು ॥೪೫೫॥

ಮೇಲಣದ ಹದಿನಾಲ್ಕು ಲೋಕಗಳ ಸಹಿತದಲಿ
ರವಿ ಚಂದ್ರ ತಾರೆಗಳ ಸಹಿತದೀ ಬ್ರಹ್ಮಾಂಡ
ಮರುತನಾಧಾರದಲಿ ದೇವತತಿ ಸಹಿತದಲಿ
ಅದ್ಭುತದಿ ಮೆರೆಯುತಿದೆ ವರ್ಣಿಸಲು ಅಸದಳವು ॥೪೫೬॥

ವರಕೂರ್ಮ ಭೂಮಿಯನು ಬೆನ್ನಿನಲಿ ಧರಿಸಿಹನು
ವರಶಕ್ತಿ ಭೂಮಿಯಾ ಭಾರವನು ಹೊತ್ತಿಹಳು
ವಿಶ್ವವಿದು ಜಲದೊಳಗೆ ಮುಳುಗುವಾ ಕಾರಣದಿ
ಎಂಟುಗಳ ದಿಕ್ಕಿನಲಿ ದಿಗ್ದಂತಿ ಧರಿಸಿಹವು ॥೪೫೭॥

ಎಂಟು ದಿಕ್ಪಾಲಕರ ಭವ್ಯದಾ ಪುರಗಳೆನು
ಎಂಟನ್ನು ಬೆನ್ನಿನಲಿ ದಿಗ್ಗಜಗಳಾಂತಿಹವು
ಮಧ್ಯದಲಿ ಹೇಮಮಯ ಕಾಂತಿಯಲಿ ಹೊಳೆಹೊಳೆವ
ಕಮಲಜನ ಪಟ್ಟಣವು ವೈಭವದಿ ಮೆರೆಯುತಿದೆ ॥೪೫೮॥

ವಜ್ರಗಳೆ ರತ್ನಗಳೆ ವೈಡೂರ್ಯ ಮಾಣಿಕದ
ಮುತ್ತುಗಳೆ ವಿಲಸಿತದ ಹಾರಗಳ ಧರಿಸುತಲಿ
ಶೋಭಿಸುವ ಸುಂದರರು ಸ್ತ್ರೀ ಪುರುಷರಗಣಿತವು
ಕಮಲಜನ ಪಟ್ಟಣದಿ ಸೊಬಗಿನಲಿ ಚರಿಸುವರು ॥೪೫೯॥

ಹತ್ತೈದು ಕೋಟಿಯಾ ವಿಸ್ತರದ ಭೂಮಿಯನು
ಸಾಗರಗಳೇಳುಗಳು ಸುತ್ತಣದಿ ಸುತ್ತಿಹವು
ಈ ಧರಣಿ ಮಂಡಲದ ಮಧ್ಯದಲಿ ಪಾವನದ
ಪುಣ್ಯತಮ ವಿರುಜಂಬುದ್ವೀಪವದು ಮೆರೆಯುತಿದೆ ॥೪೬೦॥

ಕಮಲಜನ ಪುರದಿಂದ ಹಿಮಗಿರಿಯ ಪರ್ಯಂತ
ಕೋಲ್ಮಿಂಚಿನಂತೆಸೆವ ಸೇತುವೆಯ ರಚಿಸಿರುವ
ಆ ವರ ಸತ್ಯಲೋಕವನು ತಲುಪಲಿಕೆ ನಿರ್ಮಿಸಿದ
ದಾರಿಯೋ ಎಂಬಂತೆ ವರಗಂಗೆ ಹರಿದಿಹಳು ॥೪೬೧॥

ಸುರನರರ ಪಾಪಗಳ ಕೋಟಿಗಳ ಕಳೆಯಲಿಕೆ
ರಭಸದಲಿ ಧರೆಗಿಳಿದು ಬರುತಲಿಹ ಜಾಹ್ನವಿಯು
ಹಿಮಗಿರಿಯ ಮಧ್ಯದಲಿ ಕಾಂಚನದ ಅದ್ರಿಯಲಿ
ವಾಹಿನಿಯು ನಾಲ್ಕರಲಿ ಶೋಭಿಸುತ ಹರಿದಿಹಳು ॥೪೬೨॥

ವರ ಅಲಕೆ ಸುಚಕ್ಷುಯಳು ಆ ಭದ್ರೆ ಸತ್ಯೆಯರು
ಎಂಬುವಾ ನಾಲ್ಕುಗಳ ಮುಖಗಳಲಿ ಪ್ರವಹಿಸುತ
ಹಿಮಗಿರಿಯನಿಳಿಯುತಲಿ ವರತ್ರಿಪಥಗಾಮಿನಿಯು
ಹರಿಯುತಲಿ ಮೂಡಣದ ಕಡಲೊಡಲ ಸೇರಿಹಳು ॥೪೬೩॥

ಹಿಮಗಿರಿಯ ಮೊದಲಿಂಗೆ ವರಕೀಲಕಾದಿಗಳು
ನಾಲ್ಕುಗಳ ಶೋಭಿಪವು ಅವುಗಳಲಿ ನಾಲ್ಕುಗಳು
ಅರುಣೋದೆ ವರಭದ್ರೆ ಸಿತೋದೆ ಮಾನಸದ
ಸರಸಿಗಳು ಸೊಬಗಿನಲಿ ಚೆಲುವಿನಲಿ ಸೊಗಯಿಪವು ॥೪೬೪॥

ಕೀಲಕದ ಗಿರಿಹೊರಗೆ ಐವತ್ತು ಯೋಜನದ
ವಿಸ್ತರದ ಹರಹಿನಲಿ ಸುಂದರದ ಉದ್ಯಾನ
ನಾಲ್ಕುಗಳು ಶೋಭಿಪವು ಗಿರಿಶಿಖರ ವಿಸ್ತರವು
ಸಾವಿರದ ಯೋಜನದಿ ಪಸರಿಹುದು ಕೇಳೆಂದ ॥೪೬೫॥

ಮೂಡಣದಿ ಅರಳಿಮರ ಪಡುವಣದಿ ಕದಂಬವು
ಬಡಗಣದಿ ವಟವೃಕ್ಷ ತೆಂಕಣದಿ ನೇರಳೆಯು
ವೃಕ್ಷಗಳು ಕೀಲಿಕದ ಪರ್ವತದ ಮೇಲಣದಿ
ಸುರರಿಂಗೆ ಆಶ್ರಯವು ಎನಿಸುತಲಿ ಶೋಭಿಪವು ॥೪೬೬॥

ಮೂಡಣದಿ ತೆಂಕಣದಿ ವರಮಂದರಾಚಲವು
ಪಶ್ಚಿಮದಿ ವರಗಂಧಮಾದನದ ಪರ್ವತವು
ಮತ್ತು ಆ ಉತ್ತರದಿ ಸುಪಾರ್ಶ್ವವೆಂಬುವಾ
ಕೀಲಕದ ನಾಲ್ಕುಗಳು ಪರ್ವತಗಳೆಸೆಯುವವು ॥೪೬೭॥

ಉತ್ತರದ ದೆಸೆಯೊಳಗೆ ನಂದನದ ಪರ್ವತವು
ಪಶ್ಚಿಮದಿ ವೈಭ್ರಾಜ ಪರ್ವತವು ಶೋಭಿಪವು
ದಕ್ಷಿಣದಿ ವರಗಂಧಮಾದನದ ಅದ್ರಿಯು
ಪೂರ್ವದಲಿ ಚೈತ್ರರಥ ಅಚಲಗಳು ಮೆರೆಯುವವು ॥೪೭೮॥

ಧಾರುಣಿಯ ಮಧ್ಯದಲಿ ಮೆರೆಯುತಿಹ ಹಿಮಗಿರಿಯ
ಅಪ್ಪುತಲಿ ವೃತ್ತದಾಕಾರದಲಿ ಶೋಭಿಸುವ
ಸುತ್ತಲೂ ಸಾಗರಗಳೊಪ್ಪುತಿಹ ಪಾವನದ
ವರಜಂಬುದ್ವೀಪದಾ ವಿಷಯವನು ಅರುಹುವೆನು ॥೪೭೯॥

ಉತ್ತರದಿ ಮೂಡಣದ ದೆಸೆಯಿಂದ ಪಡುವಣದಿ
ಪಸರಿರುವ ಹಿಮಗಿರಿಯ ತುದಿಯಿಂದ ತೆಂಕಣಕೆ
ಕಡಲಿನಾ ಪರ್ಯಂತ ವರಜಂಬುದ್ವೀಪವಿದು
ಸುತ್ತಲೂ ಸಾಗರಗಳಪ್ಪುತಲಿ ಶೋಭಿಪುದು ॥೪೮೦॥

ಕುರುವರುಷ ಹರಿವರುಷ ಹಿರಣ್ಮಯ ಇಳಾವೃತವು
ಕಿಂಪುರುಷ ವರಭರತ ವರುಷಗಳು ಎಂಬುವಾ
ಪಾವನ ಪವಿತ್ರಮಿಹ ಪುಣ್ಯತರ ಪ್ರದೇಶಗಳ
ವರಜಂಬುದ್ವೀಪದಾ ಉತ್ತರದಿ ಮೆರೆಯುವವು ॥೪೮೧॥

ಹಿಮಗಿರಿಯನಪ್ಪಿರುವ ಇಳಾವೃತದ ತುದಿಯಿಂದ
ಪೂರ್ವದಲಿ ಮಾಲ್ಯವತ ಪರ್ವತವು ಎಸೆಯುವದು
ಮತ್ತೆ ಆ ಸಾಗರದ ಪರ್ಯಂತ ಪಸರಿರುವ
ವರುಷವದು ಭದ್ರಾಶ್ವ ಎನಿಸುವುದು ಕೇಳೆಂದ ॥೪೮೨॥

ವರಗಂಧ ಮಾದನದ ಪರ್ವತದ ಕೆಲದಿಂದ
ಪಶ್ಚಿಮದ ಸಾಗರದ ಪರ್ಯಂತ ಚಾಚಿರುವ
ವಾರಿಧಿಯ ಅಲೆಗಳನು ಅಪ್ಪುತಲಿ ಸೊಗಯಿಸುವ
ಆ ಕೇತು ಮಾಲವು ವರವರುಷ ಮೆರೆಯುವದು ॥೪೮೩॥

ವರುಷಗಳ ಮಧ್ಯದಲಿ ಎಸೆಯುತಿಹ ಅದ್ರಿಗಳು
ಎರಡೆರಡು ಸಾವಿರದ ವಿಸ್ತರದಿ ಮೆರೆಯುವವು
ವರುಷಾರು ಒಂಭತ್ತರೊಂಭತ್ತು ಒಂಭತ್ತು
ಸಾವಿರದ ವಿಸ್ತರದಿ ಪಸರಿಹವು ದ್ವೀಪದಲಿ ॥೪೮೪॥

ಕಾಳಿಂದಿ ಜಾಹ್ನವಿಯು ಸರಯೂ ಶತದ್ರುತುವು
ಪಾವನದ ಸ್ತ್ರೋತ್ರಗಳು ಪ್ರವಹಿಸುವ ಪುಣ್ಯತರ
ನಿಮ್ಮದೀ ವರಭರತ ವರುಷದಲಿ ಸುರರುಗಳು
ದೇವತೆಗಳವತಾರ ಗೈಯಲಿಕೆ ಆಶಿಪರು ॥೪೮೫॥

ಪಾವನದ ಮಾಲ್ಯವತ ಪರ್ವತದ ಕೆಲದಲ್ಲಿ
ಕರುಣೆಯಾ ಸಾಗರನು ಮೋಕ್ಷಪ್ರದಾಯಕನು
ಪರಶಿವನು ಪರಶಂಭು ವಾಸಿಸುವ ತಾಣವದು
ಶೂಲಿಯಾ ಕೈಲಾಸ ಪರ್ವತವು ಶೋಭಿಪುದು ॥೪೮೬॥

ವರಗಂಧಮಾದನವು ಆ ನಿಷಧ ಪರ್ವತವು
ನೀಲಗಿರಿ ಶೃಂಗಗಿರಿ ವರಹೇಮಕೂಟಗಳ
ಪರ್ವತದ ಸಿಕರಗಳು ಪೂರ್ವಾರ್ಣವಪ್ಪುತಲಿ
ಎಂಭತ್ತು ಯೋಜನದ ವಿಸ್ತರದಿ ಮೆರೆಯುವವು ॥೪೮೭॥

ಉತ್ತರದಿ ಹಿಮಗಿರಿಯ ಒಪ್ಪುತಲಿ ಅಪ್ಪಿರುವ
ಮೂಡಣದಿ ಪಡುವಣದಿ ತೆಂಕಣದ ದೆಸೆಯೊಳಗೆ
ಸುತ್ತಲೂ ಸಾಗರವು ಮುದ್ದಿಡುತ ಅಪ್ಪಿರುವ
ವರಜಂಬುದ್ವೀಪದಾ ವಿಸ್ತರವನರುಹಿದೆನು ॥೪೮೮॥

ಕೇಳುವುದು ಆ ಕ್ಷೀರಸಾಗರವ ಬಳಸಿರುವ
ಸ್ವಾದೋದ ಸಾಗರದ ಸನಿಹದಲಿ ಮೆರೆಯುತಿಹ
ಲೋಕಾಲೋಕದಾ ಪರ್ವತವು ಸುರಲೋಕ ಭೂಲೋಕ
ಎರಡರಾ ಮಧ್ಯದಲಿ ಕೋಟೆಯಂತೆಸೆಯುತಿದೆ ॥೪೮೯॥

ಅಲ್ಲಿಂದ ಬ್ರಹ್ಮಾಂಡ ಭೂಲೋಕ ಪರ್ಯಂತ
ಘೋರತರ ಕತ್ತಲೆಯು ಗಾಢವಲಿ ಮುಸುಕಿಹುದು
ವಿಶ್ವದಾ ವಿಸ್ತರವ ಸೃಷ್ಟಿಯನು ವರ್ಣಿಪುದು
ವರ ಆದಿಶೇಷನಿಗೆ ಅಸದಳವು ಕೇಳೆಂದ ॥೪೯೦॥

ಶೇಷನಾ ನಾಳದಲಿ ಕಮಲದಾ ಪರಿಯಲ್ಲಿ
ಶೋಭಿಸುವ ಭೂಮಿಯಿದು ಹಿಮಗಿರಿಯು ಕನಕಗಿರಿ
ಮೊದಲಾದ ಪರ್ವತದ ಸಿಕರಗಳು ಬಳಸುತಲಿ
ಅರಳಿರುವ ಕೇಸರಿಯ ಪರಿಯಲ್ಲಿ ರಂಜಿಪುದು ॥೪೯೧॥

ಈ ಜಂಬುದ್ವೀಪದಾ ಅಗಣಿತದ ಪರ್ವತದ
ಸಿಕರಗಳ ಮಧ್ಯದಲಿ ಕಮಲಭವ ಮೆರೆಯುತಿರೆ
ಭೂಮಿಯಿದು ಆ ಕ್ಷೀರ ಸಾಗರದ ವಿಷ್ಣುವಿನ
ನಾಭಿಯಲಿ ಉದಿಸಿರುವ ಕಮಲದಂತೆಸೆಯುವುದು ॥೪೯೨॥

ಕೇಳುವುದು ಫಲಗುಣನೆ ವರುಷಗಳ ಅದ್ರಿಗಳ
ಬಳಸುತಲಿ ಪಸರಿರುವ ಸಾಗರದ ಸಾವಿರದ
ಯೋಜನದ ಆಚೆಯಲಿ ದೀಪಪ್ಲವ ಶಾಲ್ಮಲವು
ಸುರೆಶರಧಿ ಕುಶಘೃತವು ಕಡಲುಗಳು ಎಸೆಯುವವು ॥೪೯೩॥

ಅಲ್ಲಿಂದ ಆ ಕ್ರೌಂಚ ದ್ವೀಪದಾ ಕೇಲದಲ್ಲಿ
ಹಬ್ಬಿರುವ ವರಕ್ಷೀರಸಾಗರದ ಮಧ್ಯದಲಿ
ಘನಮಹಿಮ ಪಾವನನು ದೇವಾಧಿದೇವನು
ಶ್ರೀ ವಿಷ್ಣು ವಾಸಿಸುತ ಮೆರೆಯುವನು ||೪೮೪||

ವೇದಗಳ ಉಪನಿಷದ ಪೌರಾಣದಾಗಮದ
ಯೋಗಿಗಳ ಮುನಿವರರ ದಿವ್ಯದಾ ತಾಣಮದು
ಶೇಷನಾ ತಲ್ಪದಲಿ ಶ್ರೀಲಕುಮಿ ಸೇವಿಸುವ
ಶ್ರೀಹರಿಯು ವಾಸದಾ ನಿಳಯವದು ಮೆರೆಯುವನು ||೪೮೫||

ಸಕಲಮೀ ವರುಷಗಳ ಅದ್ರಿಗಳ ಬಳಸಿರುವ
ಶರಧಿಗಳ ವಿಷಯವನು ಮಧ್ಯದಲಿ ಮೆರೆಯುತಿಹ
ಮೇರುಗಿರಿ ಕೈಲಾಸ ಕಮಲಜನ ಪಟ್ಟಣದ
ವಿಷಯ್ಯಗಳ ವಿಸ್ತರದಿ ತಿಳುಹಿದೆನು ಕೇಳೆಂದು ||೪೮೬||

ಕೋಟಿಗಳ ಕಿರಣಗಳ ದಿವ್ಯ ಪ್ರಕಾಶವನು
ಸೂಸುತಲಿ ಅನವರತ ಹದಿನಾಲ್ಕು ಲೋಕಗಳ
ಸಂಚರಿಪ ದಿನಕರನ ಗ್ರಹತಾರೆ ಮಂಡಲದ
ವಿಷಯವನು ಅರುಹುವೆನು ಕೇಳುವುದು ಎಂದಿಹನು ||೪೮೭||

ಭೂಲೋಕ ಮೇಲಣದಿ ಕೋಟ್ಯಾನುಕೋಟಿಗಳ
ಯೋಜನದ ಅಂತರದಿ ಅಗ್ನಿಯಾ ತೇಜದಲಿ
ಕೋಟಿಗಳ ಕಿರಣಗಳ ಉಜ್ವಲಿಪ ಕಾಂತಿಯಲಿ
ರವಿತೊಳಗಿ ಬೆಳಗುತಲಿ ಬಾನಿನಲಿ ಚಲಿಸುವನು ||೪೮೮||

ರತ್ನಗಳ ವಜ್ರಗಳ ವೈಡೂರ್ಯ ದೀಪ್ತಿಯಲಿ
ಹೊಳೆಹೊಳೆವ ಹೇಮದಾ ಅಗಣಿತದ ಯೋಜನದ
ವಿಸ್ತರದ ರಥದಲ್ಲಿ ರತ್ನದಾ ಪೀಠದಲಿ
ಶತಕೋಟಿ ಕಿರಣಗಳ ದಿನಕರನು ಚರಿಸುವನು ||೪೮೯||

ಸ್ವರ್ಣದಾಭರಣಗಳ ಕಾಂತಿಯಲಿ ಶೋಭಿಸುವ
ಹೊಳೆ ಹೊಳೆವ ಶುಭ್ರದಾ ಸಾವಿರ ಸಹಸ್ರಗಳ
ಅಶ್ವಗಳ ಹೂಡಿರುವ ಹೇಮಮಯ ರಥವನ್ನು
ವರವರುಣ ಸಾರಥಿಯು ಗಗನದಲಿ ನಡೆಸುವನು ||೪೯೦||

ಉದಯದಲಿ ಮೂಡಣದ ಹಿಮಗಿರಿಯ ತುದಿಯಿಂದ
ಹೊಂಬಣ್ಣ ಕಿರಣಗಳ ಕೋಟಿಗಳ ಸೂಸುತಲಿ
ಸಕಲಮೀ ವಿಶ್ವವನು ಚರಿಸುತಲಿ ಬೆಳಗುತಲಿ
ಸಂಜೆಯಲಿ ಸಾಗರದ ಆಚೆಯಲಿ ತೆರಳುವನು ||೪೯೧||

ತಿಥಿಗಳನು ಪಕ್ಷಗಳ ಮಾಸಗಳ ಋತುಗಳನು
ಅಯನಗಳ ವರ್ಷಗಳ ಸಾವಿರದ ಕೋಟಿಗಳ
ಯುಗಯುಗದ ಕಾಲವನು ಅಳೆಯುತಲಿ ಭಾಸ್ಕರನು
ಬಾನಿನಲ ಬೆಳಗುತಲಿ ಅನವರತ ಚರಿಸುವನು ||೪೯೨||

ರವಿ ಸೋಮ ಮಂಗಳನು ಬುಧ ಗುರುವು ಶುಕ್ರನು
ಶನಿ ರಾಹು ಕೇತುಗಳ ಒಂಭತ್ತು ಗ್ರಹಗಳು
ಕೋಟ್ಯಾನುಕೋಟಿಗಳ ಯೋಜನದ ಅಂತರದಿ
ಮರುತನಾಧಾರದಲಿ ಗಗನದಲಿ ಚರಿಸುವವು ||೪೯೩||

ಕೇಂದ್ರದಲಿ ಆದಿತ್ಯನಾಧಾರವಾಗುತಲಿ
ಸಕಲ ಗ್ರಹ ಭಾನುವಿನ ಸುತ್ತಣದ ಪಥದಲಿ
ಪರಿಭ್ರಮಣಗೈಯ್ಯುತಲಿ ವರುಷೊಂದು ಕಾಲದಲಿ
ಪ್ರದಕ್ಷಣೆಯನೊಂದನ್ನು ಗೈಯ್ಯುವವು ಕೇಳೆಂದ ||೪೯೪||

ರಾತ್ರಿಯಲಿ ಮುಗಿಲಿನಲಿ ಮಿರುಗುತಿಹ ಅಗಣಿತದ
ಕೋಟಿಗಳ ಕೋಟಿಗಳ ನಕ್ಷತ್ರ ನಿಕರಗಳು
ಪಶ್ಚಿಮದ ದೆಸೆಯಿಂದ ಮೂಡಣದ ದೆಸೆಯೆಡೆಗೆ
ಥಳಥಳನೆ ಕಾಂತಿಯಲಿ ಹೊಳೆಯುತಲಿ ಚರಿಸುವವು ||೪೯೫||

ಅಶ್ವಿನಿಯು ರೋಹಿಣಿಯು ಕೃತ್ತಿಕೆಯು ರೇವತಿಯು
ಮೃಗಶಿರವು ಆರಿದ್ರಾ ಪುಷ್ಯವು ಪುನರ್ವಸುವು
ಮೊದಲಾದ ಇಪ್ಪತ್ತು ಮೇಲೇಳು ತಾರೆಗಳು
ಕೋಟಿಗಳ ನಕ್ಷತ್ರ ಸಹಿತದಲಿ ಮೆರೆಯುವವು ||೪೯೬||

ಆ ಮೀನ ಮಕರದಾ ಕುಂಭದಾ ವೃಶ್ಚಿಕದ
ಕರ್ಕಟದ ಕೇಸರಿಯು ಕನ್ಯಾ ತುಲಾದಿಗಳ
ವರ ಮೇಷ ವೃಷಭಗಳ ಧನು ಮಿಥುನದಾಕೃತಿಯ
ರೂಪಗಳೊಳೆಸೆಯುವವು ನಕ್ಷತ್ರ ಪುಂಜಗಳು ||೪೯೭||

ಉತ್ತರದಿ ಉತ್ತಮದ ಶಾಶ್ವತದ ಪದವಿಯನು
ಪಡೆದಿರುವ ವರಧ್ರುವನು ಅಚಲದಲಿ ಮಿರುಗುವನು
ಸಪ್ತರ್ಷಿ ಮಂಡಲವು ಆಕಾಶಗಂಗೆಯದು
ಆ ಧೂಮಕೇತುಗಳು ಕಾಂತಿಯಲಿ ಹೊಳೆಯುವವು ||೪೬೮||

ರತ್ನಗಳ ಪಚ್ಚೆಗಳ ಮುತ್ತುಗಳ ಕಾಂತಿಯಲಿ
ಥಳಥಳನೆ ರಾತ್ರಿಯಲಿ ಗಗನದಲಿ ಹೊಳೆಯುತಿಹ
ಕೋಟಿಗಳ ಅರ್ಬುದದ ಅಗಣಿತದ ತಾರೆಗಳ
ಅದ್ಭುತ ರಹಸ್ಯವನು ವರ್ಣಿಸಲು ಅರಿದೆಂನ ||೪೯೯||

ತಿಳಿಯುವೊಡೆ ಭಾಸ್ಕರನು ಹದಿನಾಲ್ಕು ಲೋಕದಲಿ
ಮೆರೆಯುತಿಹ ಸುರರೊಳಗೆ ಅತಿಬಲನು ಶಕ್ತನಿಹ
ಲೋಕಗಳ ಕತ್ತಲೆಯ ಕಳೆಯುತಿಹ ಶ್ರೇಷ್ಠನಿಹ
ಎನ್ನುತಲಿ ಅಜಹರಿ ಸುರೇಂದ್ರರು ಸೇವಿಪರು ॥೫೦೦॥

ರವಿರಥಕೆ ಕಾಲವೇ ಚಕ್ರವಾಗಿರುತಿಪುದು
ಕಾಲವದು ಉರುಳುತಿರೆ ಯುಗಯುಗವು ತೆರಳುವವು
ಯಮಧರ್ಮ ಮೃತ್ಯುವಿನ ಲೀಲೆಯಲಿ ನಲಿಯುವನು
ವರರುದ್ರ ಜಗಲಯದ ನೃತ್ಯದಲಿ ಕುಣಿಯುವನು ॥೫೦೧॥

ಕೇಳುವುದು ಜನಮೇಜಯ ಕ್ಷಿತಿಪ ಈ ಪರಿಯೆ
ಸಾರಥಿಯು ಮಾತಲಿಯು ಪಾರ್ಥಂಗೆ ವಿಶದದಲಿ
ವರುಷಗಳ ಅದ್ರಿಗಳ ದ್ವೀಪಗಳ ಶರಧಿಗಳ
ಭೂಲೋಕ ಸುರಲೋಕ ವರ್ಣನೆಯ ಗೈದಿಹನು ॥೫೦೨॥

ಹೇ ಪಾರ್ಥ ನೋಡಿತ್ತು ಈ ರಥದ ಕೆಲದಲ್ಲಿ
ದಿವ್ಯ ಗಗಣಾಂಗಣದಿ ಸಾವಿರದ ಕೋಟಿಗಳ
ಸುರಸುಂದರಾಂಗಿಯರು ದೇವವಧು ವೃಂದಗಳು
ಸರಸದಲಿ ಸಂತಸದಿ ಆಟದಲಿ ನಲಿಯುವರು ॥೫೦೩॥

ಭೂಮಿಯಲಿ ವಿಧವಿಧದ ದಾನಗಳ ಧರ್ಮಗಳ
ವ್ರತನಿಯಮ ಜಪತಪವ ಯಜ್ಞಗಳ ಯಾಗಗಳ
ಸತ್ಕರ್ಮ ಗೈಯ್ಯುತಲಿ ಅಗಣಿತದ ಪುಣ್ಯವನು
ಗಳಿಸಿರುವ ಪಾವನರು ಸತ್ಪುರುಷರಿವರೆಂದ ॥೫೦೪॥

ಥಳಥಳಿಪ ನಕ್ಷತ್ರ ಮಾಲೆಗಳ ತೆರದಲ್ಲಿ
ವರಅಶ್ವಮೇಧವನು ರಾಜಸೂಯಾಧ್ವರವ
ನೂರಾರು ಯಜ್ಞಗಳ ಗೈದಿರುವ ಅಗಣಿತದ
ನೃಪರುಗಳು ಪ್ರಭೆಯೊಳಗೆ ಹೊಳೆಯುವರು ನೋಡೆಂದ ॥೫೦೫॥

ಪುರುಪೃಥುವು ಕನು ಭರತ ಕುತ್ಸನು ಪಂಹೀಶ್ವರರು
ನಳನಹುಷ ಮಾಂಧಾತ ಹರಿಶ್ಚಂದ್ರ ಧರಣಿಪರು
ಹೈಹಯರು ಮರುತ್ತರು ಶಂತನುವು ದಿಲೀಪರು
ಅಜರಘುವು ದಶರಥನ ನೃಪರಗಳ ನೋಡೆಂದ ॥೫೦೬॥

ಕೆರೆಕೊಳವ ಕಟ್ಟಿಸಿದ ಛತ್ರಗಳ ನಿಟ್ಟಿರುವ
ದಾನಗಳ ಧರ್ಮಗಳ ಗೈದಿರುವ ಪುಣ್ಯರನು
ನೂರಾರು ವರ್ಷಗಳ ತಪವನ್ನು ಗೈದಿರುವ
ಮುನಿವರರ ಋಷಿವರರ ನೀನಿತ್ತ ನೋಡೆಂದ ॥೫೦೭॥

ನಿಮ್ಮದೀ ವರಭರತ ವರುಷಮಿದು ಜಗದೊಳಗೆ
ಅತಿಶ್ರೇಷ್ಠ ಪುಣ್ಯತರ ಎನಿಸುತಲಿ ಮೆರೆಯುವದು
ಅಗಣಿತದ ಮುನಿವರರು ಋಷಿವರರು ಧರಣಿಪರು
ಸತ್ಕರ್ಮ ಗೈಯ್ಯುತಲಿ ಸ್ವರ್ಗವನು ಪಡೆಯುವರು ॥೫೦೮॥

ಆಗೋ ಅಲ್ಲಿ ಮಂಜಿನಲಿ ಕೈಲಾಸಗಿರಿಯಂತೆ
ಸುರಪತಿಯ ಸುರಗಜವು ಐರಾವತೆಸೆಯುತಿದೆ
ಕೆಲದಲ್ಲಿ ರತ್ನಗಳ ವಜ್ರಗಳ ದೀಪ್ತಿಯಲಿ
ಹೊಳೆಹೊಳೆವ ಇಂದ್ರನಾ ಅರಮನೆಯ ನೋಡೆಂದ ॥೫೦೯॥

ಸನಿಹದಲಿ ಸ್ವರ್ಣದಾ ಕಾಂತಿಯಲಿ ಹೊಳೆಯುತಿಹ
ಗಗನವನು ಚುಂಬಿಸುವ ಹೇಮಮಯ ಹರ್ಮ್ಯಗಳ
ಸ್ವರ್ಗಕ್ಕೆ ಕಳಶವನು ಇಟ್ಟಂತೆ ಶೋಭಿಸುವ
ದಿವ್ಯ ಅಮರಾವತಿಯ ಪಟ್ಟಣವ ನೋಡೆಂದ ॥೫೧೦॥

ರಾಜಪಥ ಮಧ್ಯದಲಿ ರಥಹರಿದು ಬರುತಿರಲು
ಇಕ್ಕೆಲದಿ ಗಂಧರ್ವ ಸ್ತ್ರೀ ಪುರುಷ ವೃಂದಗಳ
ಇವನಾರೊ ಹೊಸಪರಿಯ ಹೊಸಪುರುಷ ಬಂದಿಹನು
ಎನ್ನುತಲಿ ಪಾರ್ಥನನು ಕೌತುಕದಿ ನೋಡಿದರು ॥೫೧೧॥

ದೇವೇಂದ್ರನರಮನೆಯ ಮುಂದೆಡೆಯೆ ಬರುತಲಿರೆ
ಫಲಗುಣನು ರಥವಿಳಿದು ದ್ವಾರವ ಪ್ರವೇಶಿಸಲು
ಸಿಂಹಾಸನಾರೂಢನಾಗಿರ್ದ ಸುರಪತಿಯು
ನೋಡುತಲಿ ಇಳಿಯುತಲಿ ಪಾರ್ಥನನ ಅಪ್ಪಿದನು ॥೫೧೨॥

ಆನಂದ ಸಾಗರವು ಉಕ್ಕುತಲಿ ಮಿಕ್ಕುತಲಿ
ಹರ್ಷಾಶ್ರು ಧಾರೆಯಲಿ ಸುರಿಸುತಲಿ ದೇವೇಂದ್ರ
ಫಲಗುಣನ ಗಲ್ಲವನು ಹಿಡಿಯುತಲಿ ಎತ್ತುತಲಿ
ಮುದಿಡುತ ತೆಗೆತೆಗೆದು ಅಪ್ಪಿದನು ಒಲವಿನಲಿ ॥೫೧೩॥

ಅರ್ಜುನನ ಶಿರವನ್ನು ಹರುಷದಲಿ ಮೂಸಿಸುತ
ಕರವಿಡಿದು ಕರೆತಂದು ಪ್ರೇಮವದು ಉಕ್ಕುತಲಿ
ತನ್ನಯಾ ಸನಿಹದಲಿ ಸಿಂಹಾಸನಾರ್ಧದಲಿ
ಕುಳ್ಳಿರಿಸಿ ಕುಶಲವನು ಕೇಳಿದನು ಸುರಪತಿಯು ॥೫೧೪॥

ನೂರಾರು ಯಜ್ಞಗಳ ರಾಜಸೂಯಾಧ್ವರವ
ವರ ಅಶ್ವಮೇಧವನು ತಪವನ್ನು ಗೈದಿರುವ
ನೃಪರಿಂಗೆ ತನ್ನಯಾ ಸಿಂಹಾಸನೀಯದಿಹ
ದೇವೇಂದ್ರ ಫಲಗುಣಗೆ ಸಿಂಹಾಸನಿತ್ತಿಹನು ॥೫೧೫॥

ಪುನುಪೃಥುವು ನಳನಹುಷ ಮಾಂಧಾತ
ನೃಪರಿಂಗೆ ಪುಣ್ಯದಲಿ ಮಿಗಿಲಾಗಿ ಕಲಿಪಾರ್ಥ
ಸುರಪತಿಯ ನೂರ್ಮಡಿಯ ತೇಜದಲಿ ಬೆಳಗಿದನು
ಸುರನರರೊಳೀತಂಗೆ ಸರಿಸಮರು ಇಲ್ಲೆಂದ ॥೫೧೬॥

ಭೂಲೋಕ ನರರುಗಳು ನರಹೀನ ದುರ್ಬಲರು
ಹೇಡಿಗಳು ಜಂತುಗಳು ಎಂಬುದಿದು ವಿದಿತವಿದೆ
ನರನೋರ್ವ ಜೀವಂತ ಸ್ವರ್ಗಕ್ಕೆ ಬಂದಿಹುದು
ಅಚ್ಚರಿಯು ಎನ್ನುತಲಿ ಸುರರುಗಳು ನುಡಿದಿಹರು ॥೫೧೭॥

ಹೊಸಬಗೆಯ ನರನಿವನ ನೋಡುವೆವು ಎನ್ನುತಲಿ
ಗಂಧರ್ವ ಕಿನ್ನರರು ಖೇಚರರು ನಾಗಗಳ
ಅಷ್ಟವಸು ಅಣಿಮಾದಿ ಸಿದ್ಧಿಗಳು ಸುರರುಗಳು
ಅಗಣಿತದಿ ಅರ್ಜುನನ ನೋಡಲಿಕೆ ಬಂದಿಹರು ॥೫೧೮॥

ಒಂದೆಸರಿ ಮುಂದೆಸರಿ ತೊಲಗಾಚೆ ಎನ್ನುತಲಿ
ಸಾಗರದ ತೆರೆಗಳಾ ಪರಿಯಲ್ಲಿ ವಿಸ್ತರದ
ಜನಸ್ತೋಮ ಒತ್ತೊತ್ತಿ ನೂಕುತಲಿ ತಳ್ಳುತಲಿ
ಗಜಬಜಿಸಿ ದೇವೇಂದ್ರನಾಸ್ಥಾನ ವ್ಯಾಪಿಸಿತು ॥೫೧೯॥

ದಾರಿಬಿಡಿ ಮಾರ್ಗಕೊಡಿ ಎನ್ನುತಲಿ ಕೂಗುತಲಿ
ಸೇವಕರು ಬರುತಲಿರೆ ಮನ್ಮಥನ ಸೇನೆಯೋ
ಎಂಬಂತೆ ಯೌವ್ವನದ ಲಾವಣ್ಯ ಪೂರಿತದ
ಸುರಮೋಹನಾಂಗಿಯರ ವೃಂದಗಳು ಬಂದಿಹವು ॥೫೨೦॥

ಜರದ ಪೀತಾಂಬರವ ಸ್ವರ್ಣದಾಭರಣಗಳ
ಮಿಂಚುತಿಹ ರತ್ನಗಳ ವಜ್ರಗಳ ಹಾರಗಳ
ಒಡ್ಯಾಣ ಕಂಕಣದಿ ನೂಪುರದಿ ಶೋಭಿಸುವ
ಸುರಲಲನೆ ಅಪ್ಸರೆಯ ವೃಂದಗಳು ಬಂದಿಹವು ॥೫೨೧॥

ಪರರಂಭೆ ಮೇನಕೆಯು ಸುರಭಿಯು ತಿಲೋತ್ತಮೆಯು
ಸುರಸೆಯು ಸುಕೇಶಿಯು ಸುಲೇಖೆಯು ಘೃತಾಚಿಯರು
ಸೌಂದರ್ಯ ಸಾಗರದ ನಿಧಿಯಂತೆ ಶೋಭಿಸುವ
ಊರ್ವಶಿಯು ಅಪ್ಸರೆಯರೆಲ್ಲರೂ ಬಂದಿಹರು ॥೫೨೨॥

ವೀಣೆಯು ಮೃದಂಗಗಳ ಘಟವಾದ್ಯ ಮೇಳದಲಿ
ತಾಳಲಯ ಬಂಧದಲಿ ಆರೋಹ ಅವರೋಹ
ಸುಸ್ವರದ ಮೇನಕೆಯು ರಂಭೆಯರ ಗಾಯನದ
ಸವಿರಸದ ಸಾಗರದಿ ಆಸ್ಥಾನ ಮುಳುಗಿದುದು ॥೫೨೩॥

**ಊರ್ವಶಿಯು ಮದನನಾ ಕದನದಲಿ ನೋಯುತಲಿ !**
**ಅರ್ಜುನಗೆ ಕೋಪದಲಿ ಶಾಪವನು ಇತ್ತಿಹಳು !!**

ಹಾವಗಳ ಭಾವಗಳ ವಿಧವಿಧದ ಭಂಗಿಗಳ
ಹಸ್ತಗಳ ಬೆರಳುಗಳ ವಿನ್ಯಾಸ ಮುದ್ರೆಗಳ
ಮಿಂಚಿನಾ ಲತೆಯಂತೆ ಬಳುಕುತಿಹ ಬಾಗುತಿಹ
ತನುಲತೆಯ ಊರ್ವಶಿಯ ನೃತ್ಯವದು ರಂಜಿಸಿತು ॥೫೨೪॥

ಕಾಂಚನದ ಕಂಕಣದ ಕಿಂಕಿಣಿಯ ನಾದದಲಿ
ಒಡ್ಯಾಣ ನೂಪುರದ ಝಣಝಣದ ರವವೊಳಗೆ
ತೋಂ ತಕನೆ ಧೀಂ ತಕನ ತಾಂತಿಕಟ ಎನ್ನುತಲಿ
ನರ್ತಿಸುವ ಊರ್ವಶಿಯ ನೃತ್ಯವದು ಶೋಭಿಸಿತು ॥೫೨೫॥

ಚಂದಿರನು ವಧುವಾಗಿ ಧರೆಗಿಳಿದು ಬಂದಿಹನೊ
ನಾಲ್ಮೊಗನು ಜಗದಖಿಲ ಸೌಂದರ್ಯ ಸೇರಿಸುತ
ಎರಕವನು ಹೊಯ್ಯುತಲಿ ಪುತ್ಥಳಿಯ ರಚಿಸಿಹನೊ
ಎಂಬಂತೆ ಫಲಗುಣನು ಊರ್ವಶಿಯ ನೀಕ್ಷಿಸಿದ ॥೫೨೬॥

ಮನ್ಮಥನ ಮದ್ದಾನೆ ಕ್ರೂರಲಗಿನಂತಿರುವ
ಅದ್ಭುತದ ಲಾವಣ್ಯ ರೂಪದಲಿ ಸೊಗಯಿಪಳು
ಇವಳಾವ ಪಂಹತಾಯಿ ತಾಯಿಯಾ ಭಾವನೆಯು
ಮನದಲ್ಲಿ ಮೊಳೆಯುತಿದೆ ಎಂದಿಹನು ಕಲಿಪಾರ್ಥ ॥೫೨೭॥

ಊರ್ವಶಿಯು ಅರ್ಜುನನು ಈರ್ವರೂ ಬೆರಗಿನಲಿ
ನಟ್ಟಿರುವ ದೃಷ್ಟಿಯಲಿ ದಿಟ್ಟಿಸುತ ನೋಡುತಿರೆ
ಮೈಯ್ಯೊಳಗೆ ಮಿಂಚಿನಾ ಸಂಚಾರವಾದಂತೆ
ರೋಮಗಳು ನಿಮಿರುತಲಿ ತನು ಪುಳಕಗೊಂಡಿಹರು ॥೫೨೮॥

ಊರ್ವಶಿಗೆ ಮೇನಕೆಗೆ ರಂಭೆಗೆ ತಿಲೋತ್ತಮೆಗೆ
ರತ್ನಗಳ ಮುತ್ತುಗಳ ವಜ್ರಗಳ ವಸ್ತ್ರಗಳ
ಉಡುಗೊರೆಯ ನೀಯುತಲಿ ಅವರವರಿಗುಚಿತದಲಿ
ಸತ್ಕರಿಸಿ ಅಮರೇಂದ್ರ ಸಕಲರನು ಕಳುಹಿದನು ॥೫೨೯॥

ನಿಜಸುತನ ಅರ್ಜುನನ ಜೊತೆಯಲ್ಲಿ ದೇವೇಂದ್ರ
ಪಂಚಪಕ್ವಾನ್ನಗಳ ಷಡ್ರಸದ ಭೋಜನವ
ಸಂತಸದಿ ಗೈಯ್ಯುತಲಿ ಶಯನದಾ ಮಂದಿರಕೆ
ನಿದ್ರೆಯನು ಗೈಯ್ಯಲಿಕೆ ಫಲಗುಣನು ಕಳುಹಿದನು ॥೫೩೦॥

ಬಳಿಕಿನಲಿ ಆ ಚಿತ್ರಸೇನನ ಕರೆಸುತಲಿ
ಇಂದಿನಾ ಸಭೆಯೊಳಗೆ ಇಂದೀವರಾನನೆಯು
ಊರ್ವಶಿಯ ರೂಪವನು ಫಲಗುಣನು ನೋಡುತಲಿ
ಮೋಹಿತನು ಆಗಿಹನು ಎಂದಿಹನು ದೇವೇಂದ್ರ ॥೫೩೧॥

ನೀನೀಗ ಊರ್ವಶಿಯ ಮಂದಿರಕೆ ತೆರಳುತಲಿ
ಎಮ್ಮ ಮಗ ಅರ್ಜುನಗೆ ನಿಮ್ಮಲ್ಲಿ ಮನವಾಯ್ತು
ನೀವೆಮಗೆ ಸೊಸೆಯಾಗಿ ಅರ್ಜುನನ ಬಯಕೆಯನು
ಸಲಿಸುವುದು ಎನ್ನುತಲಿ ಅರುಹುವುದು ಎಂದಿಹನು ॥೫೩೨॥

ಆ ಕ್ಷಣದಿ ವರಚಿತ್ರಸೇನನತಿ ವೇಗದಲಿ
ಊರ್ವಶಿಯ ನಿಳಯಕ್ಕೆ ಭರದಿಂದಲೈತಂದು
ದಿವ್ಯ ವಸ್ತ್ರಾಭರಣ ಕಾಣಿಕೆಯ ನೀಯುತಿರೆ
ಊರ್ವಶಿಯು ನಸುನಗೆಯ ಬೀರುತಲಿ ನುಡಿದಿಹಳು ॥೫೩೩॥

ನೀವುಗಳು ಎಮ್ಮಲ್ಲಿ ಅವಸರದಿ ಬಂದಿರುವ
ಕಾರಣವನರುಹುವುದು ಎನ್ನುತಲಿ ನುಡಿಯುತಿರೆ
ಅಮರೇಂದ್ರ ಅವಸರದ ಕಾರ್ಯದಾ ಕಾರಣದಿ
ಅಟ್ಟುತಿರೆ ಬಂದಿಹೆನು ಎಂದಿಹನು ಚಿತ್ರಸೇನ ॥೫೩೪॥

ಎಮ್ಮ ಮಗ ಅರ್ಜುನನು ನಿಮ್ಮನ್ನು ನೋಡುತಲಿ
ಮೋಹಿಸುತ ಪ್ರೇಮದಾ ಒಲೆಯೊಳಗೆ ಸಿಲುಕಿಹನು
ನೀವೆಮ್ಮ ಸೊಸೆಯಾಗಿ ಫಲಗುಣನ ಮನದಾಸೆ
ಬಯಕೆಯನು ಸಲಿಸುವುದು ಎನ್ನುತಲಿ ನುಡಿದಿಹನು ॥೫೩೫॥

ನೀ ಕಮಲ ಕುಸುಮವಿಹೆ ಫಲಗುಣನು ಭ್ರಮರನಿಹ
ಮಧುವನ್ನು ಸವಿಯುವಾ ಮಧುಸಮಯ ಬಂದಿಹುದು
ನಂದನದ ವನದೊಳಗೆ ಮಧುಚಂದ್ರ ಭೋಗಿಪುದು
ಎನ್ನುತಲಿ ದೇವೇಂದ್ರ ತಿಳಿಸಿಹನು ಎಂದಿಹನು ॥೫೩೬॥

ಕೇಳುತಲಿ ಮೈನವಿರುಗೊಳ್ಳುತಲಿ ಪುಳಕಿತದಿ
ರೋಮಗಳು ನಿಮಿರುತಲಿ ತನುಬೆವರಿ ಲಜ್ಜೆಯಲಿ
ಮನದೊಳಗೆ ಹರುಷದಾ ಸಾಗರವು ಉಕ್ಕುತಲಿ
ಶಿರಬಾಗಿ ನಿಂದಿಹಳು ನಸುನಗುತಲೂರ್ವಶಿಯು ॥೫೩೭॥

ಮೂಲೋಕ ಗಂಡನಿಹ ತ್ರೈಲೋಕ್ಯ ವೀರನಿಹ
ಪಾರ್ಥಂಗೆ ಸರಿಸಮರು ಆರಿಲ್ಲ ಜಗದೊಳಗೆ
ಲೋಕದಲಿ ನಿಮ್ಮಸಮ ಸುಂದರಿಯರಾರಿಲ್ಲ
ಇದರೊಳಗೆ ಏತಕ್ಕೆ ನಾಚಿಕೆಯು ಎಂದಿಹನು ॥೫೩೮॥

ಪುರುಪೃಥುವು ನಳನಹುಷ ಮಾಂಧಾತವೆಗ್ಗಳದ
ನೃಪರೊಳಗೆ ಅತಿಶ್ರೇಷ್ಠನೆನಿಸುವನು ಫಲಗುಣನು
ಬಂಧುಗಳು ಬಾಂಧವರು ನಾವುಗಳು ನಿಮಗಿರಲು
ನಿಮಗಾವ ಭಯಲಜ್ಜೆ ಇರುತಿಹುದು ಎಂದಿಹನು ॥೫೩೯॥

ಸುರಪತಿಯ ಆಜ್ಞೆಯನು ನಾಮೀರಲಾಪೆನೇ
ನಿನ್ನನುಡಿ ಹರುಷವನು ಸಂತಸವನೀಯುವುದು
ನಾ ಬಹೆನು ಒಪ್ಪಿಹೆನು ಹೋಗೆಂದು ತಿಳುಹುತಲಿ
ಆ ಚಿತ್ರಸೇನನ ಕಳುಹಿದಳು ಊರ್ವಶಿಯು ॥೫೪೦॥

ಅಪ್ರತಿಮ ವೀರರಸ ಸೌಂದರ್ಯ ತೇಜದಲಿ
ತೊಳತೊಳಗಿ ಬೆಳಗುತಿಹ ಮೂಲೋಕ ವೀರನಾ
ಪಾರ್ಥನಾ ಚಿತ್ರವನು ಚಿತ್ತದಾ ಭಿತ್ತಿಯಲಿ
ಬರೆಯುತಲಿ ಊರ್ವಶಿಯು ಉತ್ಸವದಿ ನಲಿದಿಹಳು ॥೫೪೧॥

ದೇವೇಂದ್ರ ತನಯನನ ತ್ರೈಲೋಕ್ಯ ವೀರನನ
ದ್ವಾರಕಾಧೀಶನನ ಶ್ರೀ ಕೃಷ್ಣ ನಳಿಯನನ
ಫಲಗುಣನ ಪೊಳೆಪೊಳೆವ ಸೌಂದರ್ಯ ರೂಪವನು
ಮನದೊಳಗೆ ನೆನೆಯುತಲಿ ಊರ್ವಶಿಯು ನಲಿದಿಹಳು ॥೫೪೨॥

ಕೇಳುವುದು ಜನಮೇಜಯಾಧಿಪತಿಯೆ ಊರ್ವಶಿಯು
ಆ ಚಿತ್ರಸೇನನ ಕಳುಹಿಸುತ ಬಳಿಕಿನಲಿ
ತನ್ನೊಲುಮೆ ಕೆಳದಿಯರ ಸಾವಿರದ ಸಂಖ್ಯೆಯಲಿ
ಕರೆದಿಹಳು ಹರುಷದಲಿ ಸಂತಸವು ಉಕ್ಕುತಲಿ ॥೫೪೩॥

ಪುಷ್ಪದಲಿ ಸ್ನಾನವನು ಗೈಯ್ಯುತಲಿ ಸುರಲಲನೆ
ಹೊಳೆಹೊಳೆವ ಪೀತಾಂಬರಾಭರಣ ಧರಿಸುತಲಿ
ವಜ್ರಗಳ ಹಾರಗಳ ರತ್ನಗಳ ಉಂಗುರವ
ಒಡ್ಯಾಣದೊಡವೆಗಳ ಭೂಷಣದಿ ಸೊಗಸಿದಳು ॥೫೪೪॥

ಪೌರ್ಣಿಮೆಯ ಚಂದಿರನ ಪರಿಯಲ್ಲಿ ಶೋಭಿಸುವ
ಕುಂಕುಮದ ತಿಲಕವನು ನೊಸಲಿನಲಿ ಇರಿಸುತಲಿ
ಕಸ್ತೂರಿ ಜವಾಜಿಗಳ ಚಂದನವ ಪರಿಮಳವ
ತನುವಿಂಗೆ ಲೇಪನವ ಗೈದಿಹರು ಕೆಳದಿಯರು ॥೫೪೫॥

ಚಂದಿರನ ಕರಗುತಲಿ ಎರಕವನು ಹೊಯ್ದಂತೆ
ವಧುವಿನಾ ರೂಪದಲಿ ಧರೆಗಿಳಿದು ಬಂದಿಹನೊ
ಜಗದಖಿಲ ಸೌಂದರ್ಯ ಸೇರಿಸುತ ಪರಬ್ರಹ್ಮ
ನಿರ್ಮಿಸಿದ ಪುತ್ಥಳಿಯೊ ಎಂಬಂತೆ ಹೊಳೆದಿಹಳು ॥೫೪೬॥

ಪರಶಿವನ ತಪಸನ್ನು ಕೆಡಿಸಲಿಕೆ ಮನ್ಮಥನು
ನಿರ್ಮಿಸಿದ ಮೋಹಿನಿಯೊ ಕ್ರೂರಲಗೊ ಎಂಬಂತೆ
ಹೊಚ್ಚಹೊಸ ಯೌವ್ವನದ ಲಾವಣ್ಯ ರಸದಿಂದ
ತುಳುಕುತಿಹ ತನುವಿಂದ ಊರ್ವಶಿಯು ಮೆರೆದಿಹಳೇ ॥೫೪೭॥

ಅರಳಿರುವ ವಿಲಸಿತದ ಕಮಲವನು ಭ್ರಮರಗಳು
ಮುತ್ತುವಾ ಪರಿಯಲ್ಲಿ ಕತ್ತಲನು ಚದುರಿಸುವ
ಕಂಗಳಿನ ಬೆಳಕುಗಳ ಸ್ವರ್ಣದಾಭರಣಗಳ
ಚದುರೆಯರು ಕೆಳದಿಯರು ಊರ್ವಶಿಯ ಮುತ್ತಿದರು ॥೫೪೮॥

ಛತ್ರಗಳ ಚಾಮರವ ಬೀಸಣಿಕೆ ಚವರಿಗಳ
ಹೊಳೆಹೊಳೆವ ಕನ್ನಡಿ ಪತಾಕೆಗಳ ಓಡಿಯುತಲಿ
ಚಂದ್ರಮನ ಕಾಂತಿಯಲಿ ಸೊಗಸುತಲಿ ಬೆಳಗುತಿಹ
ತನುವಿನಾ ಪ್ರಭೆಯಲ್ಲಿ ಸಖಿನಿಕರ ಬಳಸಿಹುದು ॥೫೪೯॥

ವರ ಅಶ್ವಮೇಧವನು ರಾಜಸೂಯಾಧ್ವರವ
ಮಹಯಜ್ಞ ಗೈದಿರುವ ನೃಪರುಗಳು ಕಾಣದಿಹ
ಊರ್ವಶಿಯು ಫಲಗುಣನ ಪುಣ್ಯವದು ಫಲಿಸಿತೋ
ಎಂಬಂತೆ ತಾನಾಗಿ ಒಲಿಯುತಲಿ ಬಂದಿಹಳು ॥೫೫೦॥

ಧನಪತಿಯು ವರಅಗ್ನಿ ಅಷ್ಟವಸು ಮರುತ್ತರು
ಸುರವೃಂದವೀಕೆಯನು ಕಾಣದಲೆ ಪರಿತಪಿಸಿ
ಸೌಧದಾ ದ್ವಾರದಲಿ ಚಾತಕದ ಪಕ್ಷಿಪರಿ
ಊರ್ವಶಿಯ ಮುಖಶಶಿಯ ನೋಡಲಿಕೆ ಕಾಯುವರು ॥೫೫೧॥

ಮನ್ಮಥನ ಸಮರದಲಿ ವಿಟನಿಕರ ಕಾಮುಕರ
ಸೈನ್ಯವನು ಧ್ವಂಸಿಸಲು ಮತ್ತದಲಿ ಹೊರಟಿರುವ
ಮದ್ದಾನೆ ಪರಿಯಲ್ಲಿ ಗಂಭೀರ ಮುದ್ರೆಯಲಿ
ಸುರಲಲನೆ ಬಂದಿಹಳು ಅರ್ಜುನನ ಅರಮನೆಗೆ ॥೫೫೨॥

ಈಕೆಯಾ ಮೆಲ್ನುಡಿಗೆ ಶುಕನಿಕರ ಮುತ್ತಿಹವು
ಕೊರಲಸರ ಕೇಳುತಲಿ ಪಿಕನಿಕರ ಸುತ್ತಿಹವು
ಬೆಳಗುತಿಹ ಮುಖವನ್ನು ಕಾಣುತ ಚಕೋರಿಗಳು
ಚಂದ್ರಮನು ಎನ್ನುತಲಿ ಭಾವಿಸುತ ಮುತ್ತಿಹವು ॥೫೫೩॥

ಸೌಧದಾ ಬಳಿಯಲ್ಲಿ ಐತಂದು ಬಾಗಿಲಲಿ
ಛತ್ರಗಳ ಚಾಮರವ ದಾಸಿಯರ ಕೆಳದಿಯರ
ನಿಲ್ಲಿಸುತ ಒಳಗಡೆಗೆ ಓರ್ವಳೇ ಊರ್ವಶಿಯು
ಫಲಗುಣನು ನಿದ್ರಿಸುವ ನಿಲಯವನು ಹೊಕ್ಕಿಹಳು ॥೫೫೪॥

ಮೃಗಶಿರವ ಮಂಚವಲಿ ಚಂದ್ರಮನ ಪರಿಯಲ್ಲಿ
ಶೇಷನಾ ತಲ್ಪದಲಿ ವಿಷ್ಣುವಿನ ಪರಿಯಲ್ಲಿ
ದಿವ್ಯ ಪ್ರಕಾಶವಲಿ ಸೌಂದರ್ಯ ತೇಜದಲಿ
ಹೊಳೆಯುತಲಿ ಮಲಗಿರುವ ಫಲಗುಣನ ಕಂಡಿಹಳು ॥೫೫೫॥

ವೀರರಸ ಲಾವಣ್ಯ ಪೂರದಲಿ ತುಳುಕುತಿಹ
ಅಂಗಾಂಗ ಸೌಷ್ಟವದ ಸೊಗಯಿಸುವ ಅರ್ಜುನನ
ಕಾಣುತಲಿ ಈ ಪರಿಯ ಸುಂದರನ ಪುರುಷನನು
ಮುನ್ನಿನಲಿ ಕಂಡಿಲ್ಲವೆಂದಿಹಳು ಚಕಿತದಲಿ ॥೫೫೬॥

ತನುವಿಂಗೆ ಲೇಪಿಸಿದ ಚಂದನದ ಸೌರಭವು
ಸುತ್ತಲೂ ಪಸರುತಲಿ ಅರ್ಜುನನ ನಾಸಿಕಕೆ
ಸೋಂಕುತಿರೆ ಎಚ್ಚೆತ್ತು ಎತ್ತಣದ ಘಮಘಮಿಪ
ಪರಿಮಳವು ಬರುತಲಿದೆ ಎನ್ನುತಲಿ ಕಣ್ತೆರೆದ ॥೫೫೭॥

ಜರದ ಪೀತಾಂಬರವ ವಸ್ತ್ರಗಳ ಧರಿಸುತಲಿ
ಹೊಳೆಹೊಳೆವ ರತ್ನಗಳ ವಜ್ರಗಳ ಹಾರಗಳ
ಒಡ್ಯಾಣ ನೂಪುರದ ಉಂಗುರದ ಚೆಲುವಿನಲಿ
ಶೋಭಿಸುವ ಊರ್ವಶಿಯ ಕಂಡಿಹನು ಬೆರಗಿನಲಿ ॥೫೫೮॥

ಇವಳಲೇ ಅಂದಿದಲಿ ಎಮ್ಮಯ್ಯ ನೋಲಗದಿ
ಅಂದವಲಿ ನರ್ತಿಸಿದ ಅಭಿನಂದನೀಯಳಿಹ
ಚಂದ್ರಕುಲ ಜನನಿಯಿಹ ಇಂದ್ರನಾ ಮಾನಿನಿಯು
ಎನ್ನುತಲಿ ಮಂಚದಿಂದಿಳಿಯುತಲಿ ನಡೆತಂದ ॥೫೫೯॥

ತಾಯಿಯರೆ ದೇವಿಯರೆ ನೀವಿತ್ತ ನಮ್ಮೆಡೆಗೆ
ಬಂದಿಹುದು ಪೂರ್ವಕೃತ ಪುಣ್ಯದಾ ಭಾಗ್ಯವಿದೆ
ನೀವೆಮ್ಮ ಅಯ್ಯನಾ ಪರಿವಾರ ಲಲನೆಯರು
ಕುಳ್ಳಿರಿಪುದೆನ್ನುತಲಿ ಪೀಠವನು ಇತ್ತಿಹನು ॥೫೬೦॥

ಕೇಳುತಲಿ ಊರ್ವಶಿಯು ಅಚ್ಚರಿಗೊಳ್ಳುತಲಿ
ಹುಚ್ಚನಾ ಪರಿಯಲ್ಲಿ ಇವನೆಂತು ನುಡಿಯುತಿಹ
ಮೆಚ್ಚುತಲಿ ಬಂದಿರುವ ಹೆಣ್ಣನ್ನು ತುಚ್ಛದಲಿ
ಕಾಣುತಿಹ ಘನ ಹುಚ್ಚನೀತನಿಹನೆಂದಿಹಳು ॥೫೬೧॥

ಮತ್ತೆ ತಾ ಮನದೊಳಗೆ ಕಳವಳದಿ ಚಿಂತಿಸುತ
ತಾನೇಕೆ ಕಾಮನಾ ಶರಹತಿಗೆ ಸಿಲುಕಿದೆನೊ
ಸುರಪತಿಯು ತನಗೇಕೆ ನೇಮವನು ಇತ್ತಿಹನೊ
ಎನ್ನುತಲಿ ಕುಂದಿದಲಿ ಕರಗಿದಳು ಊರ್ವಶಿಯು ॥೫೬೨॥

ಜಗದೊಳಗೆ ಎಲ್ಲರಾ ಪರಿಯಂತೆ ಇವನಲ್ಲ
ಈತನಾ ರೀತಿಯೇ ನಡವಳಿಕೆ ಬೇರೆ ಇದೆ
ಈ ಪರಿಯ ನರನನ್ನು ಸೃಷ್ಟಿಸಲು ಬೊಮ್ಮಂಗೆ
ಬುದ್ಧಿಯದು ಇಲ್ಲೆಂದು ನುಡಿದಿಹಳು ಊರ್ವಶಿಯು ॥೫೬೩॥

ಇವನೇನು ಮಾನವನೊ ಪ್ರಾಣಿಯೋ ಪಶುವಿಹನೊ
ಕಲ್ಬಂಡೆ ಪರ್ವತವೊ ಬೋರ್ಗಲ್ಲೋ ಮೂರ್ಖನೊ
ಮೇಲ್ಬಾಯ್ದು ಬಂದಿರುವ ಹೆಣ್ಣನ್ನು ತಳ್ಳುತಿಹ
ಇವ ಭಂಡ ಷಂಡನೋ ಎಂದಿಹಳು ಮನದೊಳಗೆ ॥೫೬೪॥

ಆಹಾರ ನೀರನ್ನು ತ್ಯಜಿಸುತಲಿ ಘೋರತರ
ತಪವನ್ನು ಗೈಯುತಿಹ ಶ್ರೇಷ್ಠರಾ ಋಷಿವರರ
ತಪಸನ್ನು ಕೆಡಿಸಿರುವ ನಾನಿಂದು ಈ ನರನ
ಒಲಿಸದೆಯೆ ಭಂಗಿತಳು ಆಗಿಹೆನು ಎಂದಿಹಳು ॥೫೬೫॥

ಎಲವೆಲವೊ ನಿಮ್ಮಯಾ ಸುರಪತಿಯ ಆಜ್ಞೆಯಲಿ
ಆ ಚಿತ್ರಸೇನನಾ ಮಾತಿಂಗೆ ಮರುಳಾಗಿ
ನಿನ್ನನ್ನು ಮೋಹಿಸುತ ಕಾಮನಾ ಬಾಧೆಯಲಿ
ನರಳುತಲಿ ನಿನ್ನೆಡೆಗೆ ಬಂದಿಹೆನು ಎಂದಿಹಳು ೫೬೬॥

ಅಕಟಕಟ ಕಾಮದಾ ತಾಪದಲಿ ಬೇಯುತಲಿ
ಈ ಪರಿಯ ಘೋರತರ ನುಡಿಗಳನು ನುಡಿಯುವುದೆ
ನೀವೆಮ್ಮ ವಂಶಕ್ಕೆ ಮಾತೃಸ್ವರೂಪಳಿಹೆ
ನೀವೆಮಗೆ ಮಾತೃಸಮವೆಂದಿಹನು ಅರ್ಜುನನು ॥೫೬೭।

ನೀವುಗಳು ಪೂರ್ವದಲಿ ಪುರುನೃಪನ ವರಸತಿಯು
ನಿಮ್ಮಲ್ಲಿ ಸುತ ಆಯು ಆಯುವಲಿ ನಹುಷನೃಪ
ಆತನಲಿ ಕುಡಿವರಿವ ದಿವ್ಯ ಪಾರಂಪರೆಯ
ಅರಸುಗಳ ಸಾಲಿನಲಿ ನಾವುಗಳು ಜನಿಸಿಹೆವು ॥೫೬೮॥

ನೀವೆಮಗೆ ತಾಯಿಹುದು ನಾ ನಿಮಗೆ ಮಗನಿಹೆನು
ಕನಸಿನಲಿ ಮನಸಿನಲಿ ಎಂದಿಗೂ ನೆನೆಸದಿಹ
ಕಾಮದಾ ಭಾವನೆಯ ಘೋರತರ ಪಾಪಮಿದು
ಪ್ರಕೃತಿಯಾ ನಿಯಮಕ್ಕೆ ವಿಪರೀತ ವೆಂದಿಹನು ॥೫೬೯॥

ಪೌರ್ಣಿಮೆಯ ಚಂದಿರನ ಪರಿಯಲ್ಲಿ ಬೆಳಗುತಿಹ
ಚಂದ್ರಕುಲದರಸುಗಳ ಧವಳಗಿರಿ ಕೀರ್ತಿಂಗೆ
ಹೇಯಮಿಹ ಪಾಪದ ಕಳಂಕವನು ಸೋಂಕಿಸೆನು
ಭರತಕುಲದುನ್ನತದ ಗೋಪುರವನುರುಳಿಸೆನು ॥೫೭೦॥

ಉಪ್ಪುಂಡ ದೇಹದಲಿ ಕಾಮಗಳು ಕ್ರೋಧಗಳು
ಜನಿಸುವದು ಸಹಜಮಿದು ಶರೀರದ ಧರ್ಮವಿದೆ
ಕ್ಷಣವೊಂದು ಸುಖಕಾಗಿ ಚಿರಕಾಲ ಪರ್ಯಂತ
ಅಪಕೀರ್ತಿ ಹೋರಲಾರೆ ಎಂದಿಹನು ಅರ್ಜುನನು ॥೫೭೧॥

ಪಾಪಗಳ ಪುಣ್ಯಗಳ ಆ ಗೊಡ್ಡು ಧರ್ಮಗಳ
ಶಾಸ್ತ್ರಗಳ ಕೇಳಲಿಕೆ ನಾನಿಲ್ಲಿ ಬಂದಿಲ್ಲ
ನೀವೆಷ್ಟು ಧರ್ಮಿಷ್ಠ ಚಾರಿತ್ರ್ಯವುಳ್ಳವರು
ಸುತಚರಿತರೆಂಬುದನು ಜಗವೆಲ್ಲ ಬಲ್ಲಿಹುದು ॥೫೭೨॥

ಒಬ್ಬಳೇ ಹೆಂಡತಿಯನೈವರೂ ಗಂಡಸರು
ನೀವುಗಳು ಭೋಗಿಸುವುದು ಶಾಸ್ತ್ರಕ್ಕೆ ಸಮ್ಮತವೆ
ಲೋಕಕ್ಕೆ ವಿಪರೀತವಾಗಿರುವ ಕೃತ್ಯವನು
ಗೈದಿರುವ ನೀವುಗಳು ಜಗಭಂಡರೆಂದಿಹಳು ॥೫೭೩॥

ಮಾತೃದೇವೋಭವ ಎಂಬುವಾ ಶೃತಿಯಂತೆ
ವರಕುಂತಿ ತಾಯಿಯಾ ನುಡಿಯಂತೆ ಪಾಂಚಾಲಿ
ವೈದಿಕ ವಿಧಾನದಲಿ ಐವರರು ವರಿಸಿಹಳು
ಜಗವೆಲ್ಲ ಮೆಚ್ಚಿಹುದು ಎಂದಿಹನು ಫಲಗುಣನು ॥೫೭೪॥

ತಾಯಿಯಾ ವಚನವನು ಮೀರಲಿಕೆ ಆಗದಿರೆ
ತಂದೆಯಾ ವಚನವನು ಮೀರುವುದು ಯೋಗ್ಯವೇ
ನಿಮ್ಮಯ್ಯನಿರುಹಿದೊಡೆ ನಾನೊಲಿದು ಬಂದಿಹೆನು
ಎನ್ನಯಾ ಇಚ್ಛೆಯನು ಸಲಿಸುವುದು ಎಂದಿಹನು ॥೫೭೫॥

ಆಕಾಶ ಕಳಚುತಲಿ ಶಿರದಲ್ಲಿ ಬಿದ್ದೊಡೆಯು
ಭೂಮಿಯದು ಬಿರಿಯುತಲಿ ಎನ್ನನ್ನು ನುಂಗಿದೊಡೆ
ಮೇರುವಿನ ಪರ್ವತದ ಪರಿಯಲ್ಲಿ ನನ ಚಿತ್ತ
ಅಚಲವಿದೆ ಇದು ಎನ್ನ ನಿರ್ಧಾರ ವೆಂದಿಹನು ॥೫೭೬॥

ಹೇ ತಾಯೆ ನಿಮ್ಮಿಷ್ಟ ಎನ್ನಲ್ಲಿ ಫಲಿಸದದು
ನಿಮ್ಮಯಾ ಬೇಳೆಯದು ಎನ್ನಲ್ಲಿ ಬೇಯದದು
ಬಂದಿರುವ ಹಾದಿಗೇ ಸುಂಕವದು ಇಲ್ಲೆಂದು
ಮರಳುವುದು ನಿಮ್ಮಯಾ ಸ್ಥಾನಕ್ಕೆ ಎಂದಿಹನು ॥೫೭೭॥

ಕಾದಿರುವ ಸೀಸಕದ ಎರಕವನು ಕಿವಿಯೊಳಗೆ
ಹೊಯ್ದಂತೆ ಫಲಗುಣನ ಬಿರುನುಡಿಯ ಕೇಳುತಲಿ
ಕೋಪಾಗ್ನಿ ಹೊತ್ತುತಲಿ ಧಗಧಗನೆ ಉರಿಯುತಲಿ
ದೇಹವನು ಆ ಪಾದ ಮಸ್ತಕದಿ ವ್ಯಾಪಿಸುತ ॥೫೭೮॥

ಬಾಲರವಿ ಕೆಂಪಿನಲಿ ಮುಖ ಕೆಂಡವಾಗುತಲಿ
ಕಣ್ಣುಗಳು ಕೆಂಡಗಳ ಕಿಡಿಗಳನು ಕಾರುತಲಿ
ಕಂಪಿತವ ಕಂಠದಲಿ ನಡುಗುತಲಿ ಅಧರದಲಿ
ಉಕ್ಕುತಿಹ ಕೋಪದಲಿ ಊರ್ವಶಿಯು ನುಡಿದಿಹಳು ॥೫೭೯॥

ಭಾರತದ ನರರುಗಳು ಬಣಗುಗಳಾ ಹುಳು ಜಂತು
ಸುರಲೋಕ ಲಲನೆಯರ ರತಿಕೇಳಿ ಸುಖವನ್ನು
ಆನಂದ ಸುಖವನ್ನು ಅವರೆತ್ತ ಬಲ್ಲವರು
ಹೀನ ನೀ ಮೂರ್ಖಂಗೆ ಏಕೆಂದು ನುಡಿದಿಹಳು ॥೫೮೦॥

ಅಂಗಜನ ಸಮರದಲಿ ಅಂಗನೆಯ ನೋಡುತಲಿ
ಅಂಜುತಲಿ ಓಡುತಿಹ ಅಂಜುಗುಳಿ ನೀನಿರುವೆ
ಜಗದೊಳಗೆ ಎನಗಾರು ಕಾಮನಾ ಕಾಳಗದಿ
ಸೋಲದಿಹ ಒಬ್ಬರೂ ಇಂಲ್ಲೆಂದಳೆಂದು ಮುಖಿ ॥೫೮೧॥

ನಮ್ಮಜ್ಜ ಮುತ್ತಜ್ಜ ಅಪನಜ್ಜ ನೆನ್ನುತಲಿ
ಅತ್ತೆಯಾ ನಾದಿನಿಯ ಭಾವನಾ ಮೈದುನನು
ಎನ್ನುತಲಿ ಬಂಧುತ್ವ ಗಣಿಕೆಯರ ಮನೆಯೊಳಗೆ
ಎಣಿಸುತಲಿ ಯೋಚಿಪುದು ಮೂರ್ಖ ತನವೆಂದಿಹಳು ॥೫೮೨॥

ಮನ್ಮಥನ ಸಮರದಲಿ ಎನ್ನನ್ನು ಬಯಿಸುವುದು
ಇಲ್ಲದಿರೆ ಮೂಲೋಕ ಗಂಡನೆಂದೆಂಬುವಾ
ಬಿರುದನ್ನು ಬಿಸಡುತಲಿ ಸನ್ಯಾಸ ತಾಳುವುದು
ಶರವೇಕೆ ಧನುವೇಕೆ ನಿನಗೇಕೆ ಎಂದಿಹಳು ॥೫೮೩॥

ಹೇಮರ್ತ್ಯ ಲೋಕದಾ ಹುಳುಜಂತು ಪ್ರಾರ್ಥನೆ
ಒಲಿಯುತಲಿ ಬಂದಿರುವ ಹೆಣ್ಣನ್ನು ಧಿಕ್ಕರಿಪ
ನೀ ಕಾಳ ಮೂಳನಿಹೆ ಖೂಳನಿಹೆ ಹೀನನಿಹೆ
ಭಂಡನಿಹೆ ಷಂಡನಿಹೆ ಎಂದಿಹಳು ಊರ್ವಶಿಯು ॥೫೮೪॥

ಮೀಸೆಯನು ಹೊತ್ತಿರುವ ಗಂಡುತನ ನಿನಗೇಕೆ
ರವಕೆಯನು ಸೀರೆಯನು ಬಳೆಗಳನು ಧರಿಸುತಲಿ
ಜೋಗತಿಯ ವೇಷದಲಿ ಜಗದೊಳಗೆ ಚರಿಸುವುದು
ಎನ್ನುತಲಿ ರೋಷದಲಿ ಊರ್ವಶಿಯು ನುಡಿದಿಹಳು ॥೫೮೫॥

ನಿಮ್ಮಯಾ ಪೂರ್ವಜರು ಚಂದ್ರಕುಲದರಸುಗಳು
ಎಮ್ಮನ್ನು ರಮಿಸುತಲಿ ಸೌಖ್ಯವನು ಪಡೆದಿಹರು
ಸುರಸ್ತ್ರೀಯರೆಮಗಾವ ಪಾಪವದು ಸೋಂಕದದು
ಸ್ವರ್ಗದಾ ಲಲನೆಯರ ರೀತಿಯೇ ಬೇರಿಹುದು ॥೫೮೫॥

ನಾನಾಗಿ ಒಲಿಯುತಲಿ ಬಂದಿರುವ ಎನ್ನನ್ನು
ನಾನಾರು ಎಂಬುದನು ಅರಿಯದಲೆ ಹೀನದಲಿ
ಭಂಗಿಸಿದ ನಿನ್ನನ್ನು ಎಂದಿಗೂ ಬಿಡೆನೆಂದು
ಒಡಿಶಾಪವೆನ್ನುತಲಿ ಕರವೆತ್ತಿ ನುಡಿದಿಹಳು ॥೫೮೬॥

ಬೆಂಕಿಯಲಿ ಆರೆಬೆಂದ ನಾಗಿಣಿಯು ರೋಷದಲಿ
ಭುಸುಗುಡುತ ಫೂತ್ಕರಿತಪ ಪರಿಯಲ್ಲಿ ಊರ್ವಶಿಯು
ಕ್ರೋಧದಾ ಜ್ವಾಲೆಯದು ಧಗಧಗನೆ ಉರಿಯುತಲಿ
ಬಿಸಿಯುಸಿರ ಸೂಸುತಲಿ **ತಳಮಳಿಸಿ** ನುಡಿದಿಹಳು ॥೫೮೭॥

ನಿಮ್ಮಯಾ ವರಭರತ ವರುಷದಾ ಸೀಮೆಯಲಿ
ವರುಷೊಂದು ಕಾಲವನು ನಪುಂಸಕ ನಾಗುತಲಿ
ಜನರುಗಳು ನೋಡುತಲಿ ನಗುತಲಿಹ ಪರಿಯಲ್ಲಿ
ಚರಿಸುವುದು ಎನ್ನುತಲಿ ಶಾಪವನು ಇತ್ತಿಹಳು ॥೫೮೮॥

ನಿಮ್ಮಪ್ಪ ದೇವೇಂದ್ರ ಹರಿಹರನ ಮೊರೆಹೋಗು
ಸುರನರರ ಗಂಧರ್ವರಾರನೂ ಮೊರೆಹೋಗು
ಎಂದಿಗೂ ಶಾಪವಿದು ತಪ್ಪದದು ಎನ್ನುತಲಿ
ತೆರಳಿದಳು ಊರ್ವಶಿಯು ಸಖಿವೃಂದ ಸಹಿತದಲಿ ॥೫೮೯॥

ಅಕಟಕಟ ಅಂದಿನಲಿ ಧರ್ಮದಲಿ ನಡೆಯುತಿರೆ
ಪಶುಪತಿಯ ಕರುಣೆಯಲಿ ಪಾಶುಪತ ದೊರೆತಿಹುದು
ಇಂದಿನಲಿ ಶೀಲದಲಿ ಸತ್ಯದಲಿ ನಡೆದೊಡೆಯು
ಶಾಪವದು ಎನಗಾಯ್ತು ಎಂದಿಹನು ಫಲಗುಣನು ॥೫೯೦॥

ಪಾಶುಪತ ಶರದಿಂದ ಕೌರವರ ಧ್ವಂಸಿಸುವೆ
ದ್ರೌಪದಿಯ ಸಿರಿಮುಡಿಯ ಕಟ್ಟುವಾ ವಚನವದು
ಫಲಿಸುವದು ಎಂಬುವಾ ಕನಸಿನೊಳು ನಾನಿರ್ದೆ
ಆ ಕನಸಗೋಪುರವು ಕಳಚುತಲಿ ಬಿದ್ದಿಹುದು ॥೫೯೦॥

ನಾನೊಂದು ನೆನೆಯುತಿರೆ ಬೇರೊಂದು ಘಟಿಸಿದುದು
ದೈವವನು ಮೀರುವುದು ಆರಿಗೂ ಅಸುದಳವು
ವಿಧಿಲಿಖಿತ ನೊರೆಸುವುದು ಆರಿಗೂ ದುಸ್ಸಾಧ್ಯ
ಎನ್ನುತಲಿ ಫಲಗುಣನು ಮನದೊಳಗೆ ಚಿಂತಿಸಿದ ॥೫೯೨॥

ಇತ್ತಲಾ ಊರ್ವಶಿಯು ವರಚಿತ್ರಸೇನನ
ಕರೆಸುತಲಿ ಆ ಪಾರ್ಥ ಗೈದಿರುವ ಹುಚ್ಚುತನ
ಹೇಳುತಿರೆ ಆ ಚಿತ್ರಸೇನನತಿವಿನಯದಲಿ
ಊರ್ವಶಿಯ ಸಂತೈಸಿ ದೇವೇಂದ್ರಗರುಹಿದನು ॥೫೯೩॥

ಕೇಳುತಲಿ ಸುರಪತಿಯು ಮನನೊಂದು ಐತಂದು
ಹೇ ಮಗನೆ ಕಲಿಪಾರ್ಥ ಚಿಂತೆಯನು ಮಾಡದಿರು
ಮುಂದಣದ ಹನ್ನೆರಡು ವರುಷಗಳ ವನವಾಸ
ಕಳೆಯುತಲಿ ವರುಷೊಂದು ಅಜ್ಞಾತವಾಸವನು ॥೫೯೪॥

ಆರಿಗೂ ರಿಪುಗಳಿಗೆ ತಿಳಿಯದಲೆ ಚರಿಸಲಿಕೆ
ಗುಪಿತದಲಿ ವಾಸಿಸಲು ಸಾಧನವು ನಿನಗಾಯ್ತು
ಭಾವಿಪೊಡೆ ಊರ್ವಶಿಯು ಉಪಕಾರ ಗೈದಿಹಳು
ಶಾಪವದು ವರವಾಯ್ತು ನಿನಗೆಂದು ನುಡಿದಿಹನು ॥೫೯೫॥

ಹೇ ಪಾರ್ಥ ನಾರಿಯರು ಅತಿಶೀಘ್ರ ಕೋಪಿಗಳು
ಬುದ್ಧಿಯಲಿ ದುರ್ಬಲರು ಎಂಬುದಿದು ಜಗವಿದಿತ
ರೋಷದಲಿ ಊರ್ವಶಿಯು ಇತ್ತಿರುವ ಶಾಪವನು
ಎನ್ನನ್ನು ನೋಡುತಲಿ ಮರೆಯುವುದು ಎಂದಿಹನು ॥೫೯೬॥

ಅಂಜದಿರು ಅಳುಕದಿರು ಚಿಂತೆಯನು ಮಾಡದಿರು
ನಿನ್ನಯಾ ನೆರವಿಂಗೆ ನಾನಿಹೆನು ಎನ್ನುತಲಿ
ಅರ್ಜುನನನಪ್ಪುತಲಿ ಸಂತೈಸಿ ಅರಮನೆಗೆ
ಕರೆತಂದು ವಿಧವಿಧ ವಿಹಾರದಲಿ ಸುಖಿಸಿದರು ॥೫೯೭॥

ಪಾವಕನು ವರವರುಣ ಕುಬೇರನು ಮರುತ್ತರು
ಅಣಿಮಾದಿ ಅಷ್ಟವಸು ಗಂಧರ್ವ ಸುರರುಗಳು
ಅಗಣಿತದ ದಿವ್ಯಾಸ್ತ್ರ ಫಲಗುಣಗೆ ಈಯುತಿರೆ
ಸುರವೃಂದ ಜಯಕಾರ ಗೈದಿಹುದು ಹರಸುತಲಿ ॥೫೯೮॥

ದಿವ್ಯತರ ಶಸ್ತ್ರಾಸ್ತ್ರ ಅಗಣಿತವ ದೇವೇಂದ್ರ
ಮಂತ್ರಗಳನರುಹುತಲಿ ಫಲಗುಣಗೆ ಇತ್ತಿಹನು
ದ್ವಾರಕಾಧೀಶನಾ ಶ್ರೀ ಕೃಷ್ಣರಾಯನಾ
ಮೈದುನನ ಕೀರ್ತಿಯದು ಮೆರೆದಿಹುದು ಮೂಜಗದಿ ॥೫೯೯॥

ಜನಮೇಜಯ ಕ್ಷಿತಿಪ ಕೇಳುವುದು ಚಿತ್ತದಲಿ
ಒಂದು ದಿನ ಮಹಋಷಿಯು ಪಾವನರು ಲೋಮಶರು
ಸ್ವರ್ಗಕ್ಕೆ ಐತರುತ ಇಂದ್ರನಾ ಬಳಿಯಲ್ಲಿ
ಕುಳಿತಿರುವ ನರನನ್ನು ಕಾಣುತಲಿ ಬೆರಗಾಗಿ ॥೬೦೦॥

ಮಹಯಜ್ಞ ವ್ರತಗಳನು ಗೈದಿರುವ ನರರಿಂಗೆ
ದೊರೆಯದಿಹ ದೇವೇಂದ್ರನೆಡೆಯಲ್ಲಿ ಕೂಡುವಾ
ಸೌಭಾಗ್ಯ ದೈವವದು ದೊರೆತಿರುವ ಇವನಾರು
ಎನ್ನುತಲಿ ಲೋಮಶರು ಕೌತುಕದಿ ಕೇಳಿದರು ॥೬೦೧॥

ಮುನಿವರರೆ ಮುನ್ನಿನಲಿ ಬದರಿಯಾ ಆಶ್ರಮದಿ
ನರನಾರಾಯಣೆಂಬುವಾ ಋಷಿಗಳೊಳು
ನಾರಾಯಣೆಂಬುವನು ಕಪಿಲಋಷಿ ಎನಿಸಿಹನು
ಆ ನರನು ಎನ್ನಮಗ ಈ ನರನು ಇರುತಿಹನು ॥೬೦೨॥

ಪಾಂಡುವಿನ ಪುತ್ರನಿಹ ಪಾಂಡವರ ಮಧ್ಯಮನು
ಧರ್ಮಜನ ಸೋದರನು ಇವನಿಲ್ಲಿ ಐತಂದು
ದಿನವೆಷ್ಟೊ ಕಳೆದಿಹವು ಅವರಣ್ಣ ಧರ್ಮಜನು
ವಿರಹದಲಿ ದಿನದಿನವು ಚಿಂತಿಸುತಲಿರುತಿಹನು ॥೬೦೩॥

ನೀವುಗಳು ಈಗಾಗಲೇ ಕಾಮ್ಯಕಕೆ ತೆರಳುತಲಿ
ಅರ್ಜುನನು ಸ್ವರ್ಗದಲಿ ಸುಕ್ಷೇಮನಿರುತಿಹನು
ಹರನಿಂದ ಪಾಶುಪತ ಅಸ್ತ್ರವನು ಪಡೆದಿಹನು
ಅಗ್ನ್ಯಾಸ್ತ್ರ ವರುಣಾಸ್ತ್ರ ಘೋರತರ ಪಡೆದಿಹನು ॥೬೦೪॥

ವಿಧವಿಧವ ಸಂಗೀತ ನೃತ್ಯವನು ಕಲಿತಿಹನು
ಬೇಗನೇ ಅರ್ಜುನನು ನಿಮ್ಮೆಡೆಗೆ ಬಹನೆಂದು
ಧರ್ಮಜಗೆ ತಿಳುಹುತಲಿ ಸಂತೈಪುದೆನ್ನುತಲಿ
ದೇವೇಂದ್ರ ಮಹಋಷಿಗೆ ಲೋಮಶಗೆ ನುಡಿದಿಹನು ॥೬೦೫॥

ರಾಕ್ಷಸರ ಭಯದಿಂದ ಧರ್ಮ ಭೀಮಾದಿಗಳ
ನೀವುಗಳು ರಕ್ಷಿಸುತ ಪುಣ್ಯ ಕ್ಷೇತ್ರಾದಿಗಳ
ತೋರಿಪುದು ಎನ್ನುತಲಿಫಲಗುಣನು ನುಡಿಯುತಿರೆ
ಲೋಮಶರು ಕಾಮ್ಯಕದ ವನದೆಡೆಗೆ ತೆರಳಿದರು ॥೬೦೬॥

ಇತ್ತಲಾ ಧೃತರಾಷ್ಟ್ರ ಶಂಭುವಿನ ಕರುಣೆಯಲಿ
ಪಾಶುಪತ ಅಸ್ತ್ರವನು ಪಡೆಯುತಲಿ ಫಲಗುಣನು
ಸ್ವರ್ಗಕ್ಕೆ ತೆರಳಿದನು ಎಂಬುವಾ ವಾರ್ತೆಯನು
ವರವ್ಯಾಸರುಹುತಿರೆ ಕಳವಳವಗೊಂಡಿಹನು ॥೬೦೭॥

ಸಂಜಯನ ಕರೆಸುತಲಿ ಎನ್ನ ಮಗ ಅತಿದುಷ್ಟ
ಗರ್ವದಲಿ ಪಾಂಡವರ ಓಂಸಿಸುತ ಮೋಸದಲಿ
ರಾಜ್ಯವನು ಕೊಳ್ಳುತಲಿ ದ್ರೌಪದಿಯ ಭಂಗಿಸುತ
ಕಾನನಕೆ ಅಟ್ಟಿರುವ ಕಡುಮೂರ್ಖನೆಂದಿಹನು ॥೬೦೮॥

ಆ ಕರ್ಣ ಶಕುನಿಗಳ ಮಾತುಗಳ ಕೇಳುತಲಿ
ಎಮ್ಮಯಾ ಕುಲಬೇರ ಕೊಯ್ಯುವಾ ಖಳನಿಹನು
ಇವನಿಂಗೆ ಬುದ್ಧಿಯನು ಹೇಳುವವರಾರಿಲ್ಲ
ಕುರುಕುಲವ ನೆಲ್ಲವನು ನರಕದೊಳು ಅದ್ದುವನು ॥೬೦೯॥

ಆ ಭೀಷ್ಮ ಗುರುದ್ರೋಣ ಅಶ್ವತ್ಥ ಕೃಪರುಗಳು
ಎಮ್ಮೊಡನೆ ಇರ್ದರೂ ಅವರಮನ ಹೃದಯಗಳು
ಪಾಂಡವರ ಬಳಿಯಲ್ಲಿ ಇರುತಿಹವು ನಾ ಬಲ್ಲೆ
ನಮ್ಮಲ್ಲಿ ಅವರಿಂಗೆ ಲವಲೇಶ ಮನವಿಲ್ಲ ॥೬೧೦॥

ದೇವನೇ ಇಹನೆಂದು ಖ್ಯಾತಮಿಹ ಶ್ರೀಕೃಷ್ಣ
ಅರ್ಜುನನ ಪರಮಸಖ ರಕ್ಷಕನು ಇರುತಿಹನು
ಧರ್ಮವೇ ಸಾಕಾರ ರೂಪವನು ತಳೆದಿರುವ
ಪರಿಯಲ್ಲಿ ಧರ್ಮಜನು ಅಣ್ಣನಿಹ ಬೆನ್ನಿನಲಿ ॥೬೧೧॥

ಕಲ್ಬಂಡೆ ಗಿರಿಗಳನು ಗದೆಯಿಂದ ಪುಡಿಗೈವ
ದಶಗಜಗಳದ್ಭುತದ ಸಾಮರ್ಥ್ಯವಂತನಿಹ
ಪರಶಿವನ ಪರಿಯಲ್ಲಿ ರೌದ್ರನಿಹ ಭೀಕರನ
ವಜ್ರತನು ಭೀಮನನು ಜಯಿಸುವವರಾರಿಲ್ಲ ॥೬೧೨॥

ಆ ನಕುಲ ಸಹದೇವ ವೀರರತಿ ವಿಕ್ರಮರು
ಬಲಯುತರು ರಣದೊಳಗೆ ಅಜೇಯರಿರುತಿಪರು
ಮೇಲಾಗಿ ಕೃಷ್ಣನಾ ಕರುಣೆಯಾ ಕವಚವಿಹ
ಪಾಂಡವರ ಗೆಲ್ಲುವುದು ಆರಿಗೂ ಅಸದಳವು ॥೬೧೩॥

ಅಕಟಕಟ ಎನ್ನಸುತ ಪಾಂಡವರ ದ್ವೇಷಿಸುತ
ಕೆಟ್ಟಿಹನು ಕುಲತರುವ ಕೊಡಲಿಯಲಿ ಕಡಹುವನು
ಎನ್ನುತಲಿ ಹಗಲಿರುಳು ಚಿಂತಿಸುತ ಚಿಂತಾಗ್ನಿ
ಕುಲುಮೆಯಲಿ ಬೆಂದಿಹೆನು ಎಂದಿಹನು ಅಂಧನೃಪ ॥೬೧೪॥

ಅಹುದಹುದು ಭೂಪತಿಯೆ ನಿನ್ನ ನುಡಿ ನಿಜವಿಹುದು
ಪಾಂಡವರು ಕಾನನಕೆ ತೆರಳಿದಾ ವಾರ್ತೆಯನು
ಕೇಳುತಲಿ ಆ ಕೃಷ್ಣ ಕಾಮ್ಯಕಕೆ ತೆರಳುತಲಿ
ಧರ್ಮಜನ ಕಂಡಿಹನು ಎನ್ನುತಲಿ ಕೇಳಿದೆನು ॥೬೧೫॥

ಕೌರವರು ಗೈದಿರುವ ದುಷ್ಕೃತ್ಯ ಕೇಳುತಲಿ
ಕೌರವರ ನೆಲ್ಲರನು ನಿರ್ನಾಮ ಗೈಯ್ಯುತಲಿ
ಮತ್ತೆ ಈ ಹಸ್ತಿನೆಯ ರಾಜ್ಯವನು ನಿನಗೀವೆ
ಎನ್ನುತಲಿ ಶ್ರೀಕೃಷ್ಣ ಧರ್ಮಜಗೆ ನುಡಿದಿಹನು ॥೬೧೬॥

ಹೇ ಕೃಷ್ಣ ದುಡುಕದಿರು ಹದಿಮೂರು ವರ್ಷಗಳ
ಕಾಲವದು ಸವೆಯುತಲಿ ವನವಾಸ ಮುಗಿಯುತಿರೆ
ಎನ್ನಯಾ ಸತ್ಯವದು ವಚನವದು ಮೆರೆಯುತಿರೆ
ನಿನ್ನಿಷ್ಟ ಗೈಯ್ಯುವೆನು ಎಂದಿಹನು ಧರ್ಮಜನು ॥೬೧೭॥

ವಿಷದೊಳಗೆ ರಕ್ಷಿಸಿದೆ ಉರಿಯೊಳಗೆ ಸಲುಹಿರುವೆ
ಸಭೆಯೊಳಗೆ ಮಾನಿನಿಯ ಮಾನವನು ಕಾಯ್ದಿರುವೆ
ಇಂದಿನಾ ಪರ್ಯಂತ ನಿನ್ನಯಾ ಕರುಣೆಯಲಿ
ದುರಿತಗಳೆಲ್ಲವನು ದಾಂಟಿಹೆವು ಎಂದಿಹನು ॥೬೧೮॥

ನೀನಲ್ಲದಿನ್ನಾರು ಗತಿ ಎಮಗೆ ಇರುತಿಹರು
ಎಂದೆಂದು ನಿನ್ನನ್ನು ಧೃಢವಾಗಿ ನಂಬಿಹೆವು
ಹಾಲಿನಲಿ ಅದ್ದುವುದು ನೀರಿನಲಿ ಚೆಲ್ಲುವುದು
ಎಲ್ಲವೂ ನಿನ್ನನ್ನು ಕೂಡಿಹುದು ಎಂದಿಹನು ॥೬೧೯॥

ದುಷ್ಟರನು ಶಿಕ್ಷಿಸುವ ಶಿಷ್ಟರನು ರಕ್ಷಿಸುವ
ಎಮ್ಮಯಾ ಕರ್ತವ್ಯ ಧರ್ಮವದು ಇರುತಿಹುದು
ದುರುಳರಾ ಕೌರವರ ನಾಶವನು ಗೈಯ್ಯುತಲಿ
ರಾಜ್ಯವನು ಕೊಡಿಸುವೆನು ಎಂದಿಹನು ಆ ಕೃಷ್ಣ ॥೬೨೦॥

ಅಲ್ಲಿರ್ದ ಧೃಷ್ಟದ್ಯುಮ್ನ ಮೊದಲಾದ ನೃಪರುಗಳು
ಸೈನಿಕ ಸಹಾಯವನು ನೀಡುವೆವು ಎಂದಿಹರು
ಈ ಪರಿಯೆ ಸಂಜಯನು ನುಡಿಯುತಿರೆ ಅಂಧನೃಪ
ಕಳವಳದಿ ಚಿಂತೆಯಾ ಕಡಲೊಳಗೆ ಮುಳುಗಿದನು ॥೬೨೧॥

**ಬ್ರಹದಶ್ವ ಮುನಿವರನು ನಳನೃಪನ ಕಥೆಯನ್ನು ।**
**ಹೇಳುತಲಿ ಧರ್ಮಜನ ಸಾಂತ್ವನವ ಗೈದಿಹನು ॥**

ಒಂದು ದಿನ ಧರ್ಮಸುತ ಸೋದರರ ಸಹಿತದಲಿ
ಕಾಮ್ಯಕದಿ ಕುಳಿತಿರಲು ಬ್ರಹದಶ್ವ ಮುನಿವರನು
ಬರುತಲಿರೆ ಆದರದಿ ಅರ್ಘ್ಯ ಪಾದ್ಯಾದಿಗಳ
ನೀಯುತಲಿ ಸತ್ಕರಿಸಿ ಧರ್ಮಜನು ನುಡಿದಿಹನು ॥೬೨೨॥

ಮುನಿವರರೆ ಮನದೊಳಗೆ ಶಾಂತಿಯದು ಎನಿತಿಲ್ಲ
ಕೌರವರು ಗೈದಿರುವ ಅಪಮಾನ ದುಷ್ಕೃತ್ಯ
ಜ್ವಾಲೆಯದು ಎನ್ನನ್ನು ಕ್ಷಣಕ್ಷಣವು ದಹಿಸುತಿದೆ
ಊಟವದು ರುಚಿಸದಿದೆ ನಿದ್ರೆಯದು ಬಾರದಿದೆ ॥೬೨೩॥

ರಾಜ್ಯವನು ಸಂಪದವನೆಲ್ಲವನು ಕಳೆಕೊಂಡು
ಸತಿಸಹಿತ ಸೋದರರ ಒಡಗೂಡಿ ಅಡವಿಯಲಿ
ತಿರುಗುವಾ ದುರ್ಗತಿಯು ಎನಗಾಯ್ತು ಎನ್ನವೊಲ್
ಕಷ್ಟದಲಿ ನವೆದವರು ಆರಿಲ್ಲ ಎಂದಿಹನು ॥೬೨೪॥

ಕೇಳುತಲಿ ಋಷಿವರನು ಬ್ರಹದಶ್ವ ನುಡಿದಿಹನು
ಚಿಂತೆಯನು ಮಾಡದಿರು ಧರ್ಮಜನೆ ನಿನಗಿಂತ
ಮಿಗಿಲಾದ ಕಷ್ಟವನು ನಿಮ್ಮಯಾ ವಂಶದಲಿ
ಭೋಗಿಸಿದ ಖ್ಯಾತಮಿಹ ನೃಪರುಂಟು ಎಂದಿಹನು ॥೬೨೫॥

ನಿನ್ನಪರಿ ದ್ಯೂತದಲಿ ವಿಧರ್ಭ ದೊರೆ ವರನಲನು
ತಮ್ಮನಿಗೆ ಪುಷ್ಕರಗೆ ರಾಜ್ಯವನು ಸೋಲುತಲಿ
ಸತಿಸಹಿತ ಕಾನನಕೆ ತೆರಳುತಲಿ ತೊಳಲುತಲಿ
ಸತಿಯಗಲಿ ಓರ್ವನೇ ಕಷ್ಟವನು ಭೋಗಿಸಿದ ॥೬೨೬॥

ನಳನೃಪನ ಕಥೆಯನ್ನು ವಿಸ್ತರಿಪೆ ಕೇಳುವುದು
ಆ ನಿಷಧ ದೇಶವನು ಆಳುತಿಹ ಧರಣಿಪಗೆ
ವರವೀರಸೇನಂಗೆ ಅಪ್ರತಿಮ ಸುಂದರನು
ಹಯವಿದ್ಯೆ ಪರಿಣತನು ನಳ ಕುವರನಿರ್ದಿಹನು ॥೬೨೭॥

ಜಗದೊಳತಿ ವಿಕ್ರಮನು ಸೂರ್ಯಪರಿ ತೇಜಸ್ವಿ
ಸತ್ಯವನು ಧರ್ಮವನು ಎಂದೆಂದು ಪಾಲಿಸುವ
ನುತಚರಿತ ನಳನೃಪಗೆ ಚಂದಿರನ ಕಲೆಯಂತೆ
ದ್ಯೂತದಲಿ ಹವ್ಯಾಸ ಅತಿಮೋಹ ವಿರ್ದಿಹುದು ॥೬೨೮॥

ಅಗಣಿತದ ಐಶ್ವರ್ಯ ರಾಜಸುಖ ವೈಭವವು
ಯೌವ್ವನವು ಸೌಂದರ್ಯ ಶೌರ್ಯವದು ಇರ್ದೊಡೆಯು
ಸರ್ವೇಂದ್ರಿಯಂಗಳನು ವಶದೊಳಗೆ ಇರಿಸುತಲಿ
ಶೀಲದಲಿ ಸದ್ಗುಣದಿ ಮೆರೆದಿಹನು ಜಗದೊಳಗೆ ॥೬೨೯॥

ಆ ಸಮಯ ವೈದರ್ಭ ದೇಶವನು ಆಳುತಿಹ
ನುತಭೀಮ ಮಹಿಪತಿಯು ಸಂತಾನವಿಲ್ಲದೆಯೆ
ಚಿಂತೆಯಲಿ ಮುಳುಗಿರಲು ಘನಮಹಿಮ ದಮ ಮುನಿಯು
ಐತಂದು ಕರುಣೆಯಲಿ ವರಗಳನು ಇತ್ತಿಹನು ॥೬೩೦॥

ಜಗದೊಳಗೆ ಸಮವಿಲ್ಲದಪ್ರತಿಮ ಚೆಲುವಿನಲಿ
ರೂಪದಲಿ ಬೆಳಗುತಿಹ ದಮಯಂತಿ ಕುವರಿಯನು
ದಮದಾಂತ ವರದಮನ ಎಂಬುವಾ ಮುದ್ದಾದ
ಈರ್ವರನು ಕುವರರನು ಭೀಮನೃಪ ಪಡೆದಿಹನು ॥೬೩೧॥

ಇತ್ತಲಾ ವರನಳನು ದಿನದಿನದಿ ವೃದ್ಧಿಸುತ
ಯೌವ್ವನದ ಸೌಂದರ್ಯ ಸೊಬಗಿನಲಿ ಬೆಳಗುತಲಿ
ಕರಿತುರಗ ಶಸ್ತ್ರಾಸ್ತ್ರ ವಿದ್ಯೆಗಳ ಕಲಿಯುತಲಿ
ಪರಿಣತನು ಎನಿಸುತಲಿ ಕೀರ್ತಿಯಲಿ ಮೆರೆದಿಹನು ॥೬೩೨॥

ಅತ್ತಲಾ ದಮಯಂತಿ ಶುಕ್ಲದಾ ಚಂದಿರನ
ಪರಿಯಲ್ಲಿ ಬೆಳೆಯುತಲಿ ಹೊಚ್ಚ ಹೊಸ ಪರೆಯದಾ
ಲಾವಣ್ಯ ರಸದಿಂದ ತುಂಬುತಲಿ ತುಳುಕುತಿಹ
ತನುವಿನಲಿ ಶೋಭಿಸುತ ದಮಯಂತಿ ಸೊಗಸಿದಳು ॥೬೩೩॥

ವರನಳನ ಸುಂದರದ ರೂಪವನು ಕೀರ್ತಿಯನು
ಕೇಳುತಲಿ ದಮಯಂತಿ ಮೋಹಿಸುತ ಯೋಚಿಸುತ
ನಳನನ್ನು ವರಿಸುವುದು ಎನ್ನುತಲಿ ಮನದೊಳಗೆ
ಸಂತಸದಿ ಧೃಡವಾಗಿ ನಿಶ್ಚಯವ ಗೈದಿಹಳು ॥೬೩೪॥

ವರನಳನು ಭೀಮ ನೃಪನಾತ್ಮಜೆಯ ಸುಂದರಿಯ
ದಮಯಂತಿಯತಿ ಚೆಲುವ ರೂಪವನು ಶೀಲವನು
ಕೇಳುತಲಿ ಭೀಮನೃಪ ಕುವರಿಯನು ವರಿಸುವುದು
ಎನ್ನುತಲಿ ಮನದೊಳಗೆ ನಿರ್ಧಾರ ಗೈದಿಹನು ॥೬೩೫॥

ಒಂದು ದಿನ ಅರಮನೆಯ ಅಂಗಣದಿ ನಳನೃಪನು
ದಮಯಂತಿ ಚೆಲುವೆಯಾ ರೂಪವನು ನೆನೆಯುತಲಿ
ನಿಂತಿರಲು ಎದುರಿನಲಿ ಶುಭ್ರದಲಿ ಹೊಳೆಹೊಳೆವ
ಹಂಸಗಳು ಅಭ್ರದಿಂದಿಳಿದಿಹವು ಸೊಗಸಿನಲಿ ॥೬೩೬॥

ಎನ್ನಯಾ ಪ್ರೇಯಸಿಗೆ ಸಂದೇಶ ಕಳಿಸುವುದು
ಎನ್ನುವಾ ಯೋಚನೆಯು ಮನದೊಳಗೆ ಹೊಳೆಯುತಿರೆ
ನಳನೃಪನು ದಮಯಂತಿ ಕೋಮಲೆಯ ರೂಪವನು
ನೆನೆ ನೆನೆದು ಪ್ರೇಮದಾ ಓಲೆಯನು ಬರೆದಿಹನು ॥೬೩೭॥

ಹೇ ಭೀಮ ನೃಪಸುತೆಯೆ ದಮಯಂತಿ ಸುಂದರಿಯೆ
ಹೇ ಎನ್ನ ಹೃತ್ಕಮಲ ಕೋಮಲ ಲತಾಂಗಿಯೇ
ನಿನ್ನಯಾ ರೂಪವನು ಗುಣಗಳನು ಶೀಲವನು
ಮೆಚ್ಚುತಲಿ ನಿನ್ನಲ್ಲಿ ಮೋಹಿತನು ಆಗಿಹೆನು ॥೬೩೮॥

ನೀ ಎನ್ನ ಕರವಿಡಿದು ಮನದೊಳಿಹ ಬೇಗೆಯನು
ಹೃದಯದಲಿ ಉರಿಯುತಿಹ ಜ್ವಾಲೆಯನು ಕಳೆಯುವದು
ನಿನ್ನನ್ನು ವರಿಸದಲೆ ನಾನಿರೆನು ಎಂದಿಗೂ
ಎನ್ನುತಲಿ ಓಲೆಯನು ಬರೆಯುತಲಿ ನಳವರನು ॥೬೩೯॥

ಹಂಸದಾ ಕಾಲಿಂಗೆ ಕಟ್ಟುತಲಿ ಹಂಸವನು
ಬಾನಿನಲಿ ಮೇಲಕ್ಕೆ ತೂರುತಲಿ ಬಿಡುತಲಿರೆ
ಹಾರುತಲಿ ವೈದರ್ಭ ದೇಶಕ್ಕೆ ಬರುತಿರಲು
ಸೌಧಾಗ್ರದಂಗಣದಿ ಭರದಲ್ಲಿ ಇಳಿದಿಹುದು ॥೬೪೦॥

ದಮಯಂತಿ ಹಂಸವನು ಕೌತುಕದಿ ಹಿಡಿಯುತಲಿ
ಮುದ್ದಿಸುತ ಮೃದುವಾಗಿ ಮೈಯನ್ನು ಸವರುತಲಿ
ಕಾಲಿನಲಿ ಕಟ್ಟಿರ್ದ ಓಲೆಯನು ನೋಡುತಲಿ
ಬೆರಗಾಗಿ ಕೊಳ್ಳುತಲಿ ಕೌತುಕದಿ ಓದಿದಳು ॥೬೪೧॥

ಮೈಯ್ಯೊಳಗೆ ಮಿಂಚಿನಾ ಸಂಚಾರವಾದಂತೆ
ರೋಮಗಳು ನಿಮಿರುತಲಿ ತನುಪುಳಕ ಗೊಳ್ಳುತಲಿ
ಬೆವರು ಹನಿ ಸೂಸುತಲಿ ಸಂತಸವು ಉಕ್ಕುತಲಿ
ಓಲೆಯನು ಪುನರಪಿಯು ಪುನರಪಿಯು ಓದಿದಳು ॥೬೪೨॥

ಎನ್ನಯಾ ಹೃತ್ಕಮಲ ಮಧುಸವಿವ ಭೃಂಗವೆ
ಮನವನದ ವರಹಂಸ ಎನ್ನರಸ ಪ್ರಿಯಸರಸ
ನಿನ್ನನ್ನು ಮನಸ್ಸಾರೆ ಮೆಚ್ಚಿಹೆನು ಪ್ರೀತಿಪೆನು
ನೀನಲ್ಲದಿನ್ನಾರ ನಾ ವರಿಸೆನೆನ್ನುತಲಿ ॥೬೪೩॥

ಓಲೆಯನು ಬರೆಯುತಲಿ ಹಂಸದಾ ಪಾದದಲಿ
ಕಟ್ಟುತಲಿ ಶಿರವನ್ನು ಮುದ್ದಿಸುತ ನೇವರಿಸಿ
ಎನ್ನಯಾ ಪ್ರಿಯತಮಗೆ ಓಲೆಯನು ತಲುಪಿಪುದು
ಎನ್ನುತಲಿ ಮುಗಿಲಿನಲಿ ಹಾರಿಸುತ ಬಿಟ್ಟಿಹಳು ॥೬೪೪॥

ಹದಿನಾಲ್ಕು ವರುಷಗಳು ತುಂಬುತಿರೆ ಯೌವ್ವನದಿ
ನಿಜಸುತೆಯು ದಮಯಂತಿ ಚೆಲುವಿನಲಿ ಬೆಳಗುತಿರೆ
ಭೀಮನೃಪ ಅನುರೂಪ ವರನನ್ನು ಆರಿಸಲು
ಸ್ವಯಂವರ ಸಿದ್ಧತೆಯ ಮಾಡಿಹನು ವೈಭವದಿ ॥೬೪೫॥

ತಳಿರುಗಳ ತೋರಣ ಪತಾಕೆಗಳ ಮಂಡಪವ
ರತ್ನಗಳ ಸ್ತಂಭಗಳ ವೇದಿಕೆಯ ರಚಿಸುತಲಿ
ಅಗಣಿತದ ನೃಪರಿಂಗೆ ಆಮಂತ್ರಣೋಲೆಗಳ
ಬರೆಸುತಲಿ ಚರರುಗಳ ನಟ್ಟಿದನು ಹರುಷದಲಿ ॥೬೪೬॥

ಇಂದ್ರನಾ ಸಭೆಯೊಳಗೆ ನಾರದ ಮುನೀಂದ್ರನು
ಐತಂದು ಭೂಮಿಯಲಿ ಸ್ವರ್ಗದಾ ಲಲನೆಯರ
ರೂಪಕ್ಕೆ ನೂರ್ಮಡಿಯು ಮಿಗಿಲಾದ ದಮಯಂತಿ
ಸುಂದರಿಯು ಸ್ವಯಂವರ ಜರಗುವುದು ಎಂದಿಹನು ॥೬೪೭॥

ದೇವೇಂದ್ರ ಪಾವಕನು ಯಮ ವರುಣರಾಲಿಸುತ
ದಮಯಂತಿ ಚೆಲುವೆಯನು ವರಿಸಲಿಕೆ ಇಚ್ಛಿಸುತ
ವೈದರ್ಭ ದೇಶಕ್ಕೆ ಬರುತಲಿರೆ ಮಾರ್ಗದಲಿ
ನಳನೃಪನ ಕಾಣುತಲಿ ಅಚ್ಚರಿಯಗೊಂಡಿಹರು ॥೬೪೮॥

ನಮಗಿಂತ ಸುಂದರನು ಕಡುಚೆಲುವನೀತನಿಹ
ದಮಯಂತಿ ನಳನನ್ನು ವರಿಸುವಳು ಎನ್ನುತಲಿ
ಸುರರುಗಳು ನಳನಿಂಗೆ ನಮ್ಮಯಾ ಕಾರ್ಯವನು
ಗೈಯ್ಯುವುದು ಎನ್ನುತಲಿ ನಮ್ರದಲಿ ನುಡಿದಿಹರು ॥೬೪೯॥

ದಮಯಂತಿ ಬಳಿಯಲ್ಲಿ ಸಾಗುತಲಿ ನಮ್ಮನ್ನು
ವರಿಸುವಾ ಪರಿಯಲ್ಲಿ ಆಕೆಯಾ ಮನವನ್ನು
ತಿದ್ದುತಲಿ ಒಪ್ಪಿಪುದು ನಿನ್ನಯಾ ಕರ್ತವ್ಯ
ಎನ್ನುತಲಿ ನುಡಿಯುತಿರೆ ನಳನೃಪನು ನುಡಿದಿಹನು ॥೬೫೦॥

ಸೈನಿಕರು ಸತತವೂ ರಕ್ಷಿಸುವ ಅರಮನೆಯ
ಒಳಗಡೆಗೆ ಇರುತಿರುವ ದಮಯಂತಿಯೆಡೆಯಲ್ಲಿ
ಆರಿಗೂ ತಿಳಿಯದಲೆ ಗುಪಿತದಲಿ ತೆರಳುವುದು
ದುಸ್ತರವು ಎನ್ನುತಲಿ ನಳನೃಪನು ನುಡಿದಿಹನು ॥೬೫೧॥

ಸೈನಿಕರು ಸೇವಕರು ಅರಿಯದಾಪರಿಯಲ್ಲಿ
ತೆರಳುವಾ ಶಕ್ತಿಯನು ಸುರರುಗಳು ನಳಗೀಯೆ
ಭರದಿಂದ ನಳವರನು ಸೌಧದಲಿ ಸರಸದಲಿ
ತಾರೆಗಳ ಮಧ್ಯದಲಿ ರೋಹಿಣಿಯ ಪರಿಯಲ್ಲಿ ॥೬೫೨॥

ಸಖಿಯರಾ ಮಧ್ಯದಲಿ ಸೊಗಯಿಸುವ ಸುಂದರಿಯ
ದಮಯಂತಿಯೆಡೆಯಲ್ಲಿ ಐತಂದು ಚಕಿತದಲಿ
ಜಗದೊಳಗೆ ಅಪ್ರತಿಮ ಸೌಂದರ್ಯ ರೂಪದಲಿ
ಹೊಳೆಹೊಳೆವ ದಮಯಂತಿ ಚೆಲುವೆಯನು ಕಂಡಿಹನು ॥೬೫೩॥

ಮನ್ಮಥನ ಪರಿಯಲ್ಲಿ ಶೋಭಿಸುವ ಸುಂದರನ
ನಲವರನ ಕಾಣುತಲಿ ಸಖಿಯರುಗಳೆಲ್ಲರೂ
ನೋಡುತಲಿ ಕೌತುಕದಿ ಚಕಿತದಲಿ ನಿಂದಿಹರು
ದಮಯಂತಿ ಬೆರಗಿನಲಿ ನಲವರನ ನೋಡಿಹಳು ॥೬೫೪॥

ಎವೆಗಳನು ಇಕ್ಕದೆಯೆ ದಿಟ್ಟಿಸುತ ನಲವರನ
ಸುಂದರದ ಅಂಗಾಂಗ ಸೌಷ್ಟವದ ರೂಪವನು
ಸೌಂದರ್ಯ ಸವಿರಸವ ಕಂಗಳಾ ಬೊಗಸೆಯಲಿ
ಕುಡಿಕುಡಿದು ತನುಪುಳಕಗೊಂಡಿಹಳು ದಮಯಂತಿ ॥೬೫೫॥

ಭಟರುಗಳ ಕಾವಲನು ಭೇದಿಸುತ ಅರಮನೆಯ
ಒಳಗಡೆಗೆ ಬಂದಿರುವ ನೀನಾರು ಹೇಳುವುದು
ಲಲನೆಯರ ಏಕಾಂತ ಸ್ಥಳದೊಳಗೆ ನರರುಗಳು
ಬರುವುದಿದು ಅನುಚಿತವು ಎಂದಿಹಳು ದಮಯಂತಿ ॥೬೫೬॥

ರಾಜಸುತೆ ಕೇಳುವುದು ನಳರಾಜನಾನಿಹೆನು
ನಿನ್ನಯ ಸ್ವಯಂವರಕೆ ಇಂದ್ರಾಗ್ನಿ ಯಮವರುಣ
ಸುರರುಗಳು ಬಂದಿಹರು ಅವರೊಳಗೆ ಓರ್ವರನು
ವರಿಸುವುದು ಎಂಬುದನು ತಿಳುಹಲಿಕೆ ಕಳುಹಿಹರು ॥೬೫೭॥

ಆರಿಗೂ ತಿಳಿಯದಲೆ ಬರುವಂಥ ಶಕ್ತಿಯನು
ಎನಗೀಯೆ ಗುಪಿತದಲಿ ನಾನಿಲ್ಲಿ ಬಂದಿಹೆನು
ಎನ್ನುತಲಿ ನಳನೃಪನು ನುಡಿಯುತಿರೆ ದಮಯಂತಿ
ಸಂತಸವು ಉಕ್ಕುತಲಿ ಹರುಷದಲಿ ನುಡಿದಿಹಳು ॥೬೫೮॥

ದೈವವೇ ನಳನೃಪನ ಎನ್ನೆಡೆಗೆ ಕಳುಹಿಸಿವೆ
ಎನ್ನುತಲಿ ಭೀಮಸುತೆ ಮನದೊಳಗೆ ಹಿಗ್ಗುತಲಿ
ನಾಳೆಯು ಸ್ವಯಂವರದಿ ನಿನ್ನನ್ನೆ ವರಿಸುವೆನು
ಎನ್ನುತಲಿ ನಸುನಗುತ ನಾಚುತಲಿ ನುಡಿದಿಹಳು ॥೬೯॥

ನಿನ್ನಯಾ ಕೈಹಿಡಿವೆ ಎನ್ನುತಲಿ ಬಹುದಿನದಿ
ಭಕುತಿಯಲಿ ದೇವತೆಯ ಪೂಜೆಯನು ಗೈದಿಹೆನು
ನಿನ್ನನ್ನು ನಂಬಿಹೆನು ನಿನ್ನನ್ನು ನೆಚ್ಚಿಹೆನು
ನಿನ್ನನ್ನು ಪತಿ ಎಂದು ಭಾವಿಸಿದೆ ಎಂದಿಹಳು ॥೭೦॥

ಸುರಪತಿಯ ಕೈಹಿಡಿಯೆ ಸ್ವರ್ಗಸುಖ ಲಭಿಸುವುದು
ಅಗ್ನಿಯನು ವರಿಸಿದೊಡೆ ತೇಜಸ್ಸು ದೊರೆಯುವದು
ವರುಣನನು ವರಿಸಿದೊಡೆ ಧನ ಧಾನ್ಯ ದೊರೆಯುವದು
ಯಮನನ್ನು ವರಿಸಿದೊಡೆ ಆಯುಸ್ಸು ವರ್ಧಿಪುದು ॥೭೧॥

ದಿವಿಜರನು ತೊರೆಯುತಲಿ ಹುಲು ನರನ ಎನ್ನನ್ನು
ವರಿಸಿದೊಡೆ ನಿನಗಾವ ಸಿರಿಸುಖವು ದೊರೆಯುವುದು
ಕಲ್ಪತರು ತ್ಯಜಿಸುತಲಿ ಒಡಮರ ಬಯಸುವರೆ
ಎನ್ನುತಲಿ ನಳನುಡಿಯೆ ಭೀಮಸುತೆ ನುಡಿದಿಹಳು ॥೭೨॥

ನುಡಲಿ ಆ ಸ್ವರ್ಗಸುಖ ಸಂಪತ್ತು ವೈಭವವು
ನಿನ್ನಲ್ಲಿ ಎನ್ನಮನ ಧೃಡವಾಗಿ ನಟ್ಟಿಹುದು
ನೀನಲ್ಲದಿನ್ನಾರ ನಾ ವರಿಸೆನೆಂದಿಗೂ
ಇಲ್ಲದಿರೆ ಮರಣವನು ಅಪ್ಪುವೆನು ಎಂದಿಹಳು ॥೭೨॥

ಈ ಪರಿಯೆ. ಹೇಳಿದೊಡೆ ಸುರರುಗಳು ಕೋಪಿಪರು
ಸ್ವಾರ್ಥದಲಿ ಎಮ್ಮನ್ನು ವಂಚಿಸಿದನೆನ್ನುತಲಿ
ಶಾಪವನು ಈಯುವರು ಉಪಾಯವ ಸೂಚಿಪುದು
ಎನ್ನುತಲಿ ನಳನುಡಿಯೆ ದಮಯಂತಿ ನುಡಿದಿಹಳು ॥೭೪॥

ನಾಳಿನ ಸ್ವಯಂವರದಿ ನಿಮ್ಮೊಳಗೆ ಒಬ್ಬರನು
ವರಿಸುವೆನು ಎನ್ನುತಲಿ ಸುರರಿಂಗೆ ತಿಳಿಸುವುದು
ಎನ್ನುತಲಿ ದಮಯಂತಿ ನುಡಿಯುತಿರೆ ನಳನೃಪನು
ಐತಂದು ಇಂದ್ರಾಗ್ನಿ ಸುರರಿಂಗೆ ಅರುಹಿದನು ॥೭೫॥

**ಸುರಸುಂದರಾಂಗಿಯಳು ಕಲುಚೆಲುವೆ ದಮಯಂತಿ ।**
**ನಳನೃಪನ ವರಿಸಿದಳು ಸ್ವಯಂವರ ಮಂಡಪದಿ ॥**

ಕಾಂಭೋಜ ಕುಂತಳನು ವೈಪಯನು ಕೋಸಲನು
ಅಂಗವಂಗಾದಿಗಳು ಪಾಟಲನು ಸೌರಾಷ್ಟ್ರ
ಅಗಣಿತದ ದೇಶಗಳ ನೃಪರುಗಳು ನೃಗಸುತರು
ಶೃಂಗಾರ ನಡಗರದಿ ನೊಳೆಯುತಲಿ ಬಂದಿಪರು ॥೭೬॥

ದೇವೇಂದ್ರ ಪಾವಕನು ವರವರುಣ ಯಮಧರ್ಮ
ಹೊಳೆಹೊಳೆವ ರತ್ನಗಳ ವಜ್ರಗಳ ಹಾರಗಳ
ಕೊರಳೊಳಗೆ ಧರಿಸುತಲಿ ದಮಯಂತಿ ಸುಂದರಿಯ
ವರಿಸುವೆವು ಎನ್ನುತಲಿ ಯೋಚಿಸುತ ಬಂದಿಹರು ॥೭೭॥

ಸರ್ವವಿಧ ಸಿದ್ಧತೆಯ ಗೈಯುತಿರೆ ಭೀಮನೃಪ
ದಮಯಂತಿ ಸಹಿತದಲಿ ಸ್ವಯಂವರ ಮಂಡಪದಿ
ಬರುತಲಿರೆ ನೃಪರುಗಳು ತೇಜದಲಿ ಹೊಳೆಯುತಿಹ
ದಮಯಂತಿ ಸುಂದರಿಯ ಚಕಿತದಲಿ ಕಂಡಿಹರು ॥೭೮॥

ಮೇಘಗಳ ಮಧ್ಯದಲಿ ಥಳಥಳಿಸಿ ಹೊಳೆಯುತಿಹ
ಮಿಂಚಿನಾ ಲತೆಯಂತೆ ಕಾಂತಿಯನು ಸೂಸುತಲಿ
ಸೌಂದರ್ಯ ಸರ್ವಸ್ವ ಪುತ್ಥಳಿಯ ಪರಿಯಲ್ಲಿ
ಶೋಭಿಸುತ ದಮಯಂತಿ ಲತಾಂಗಿ ಬಂದಿಹಳು ॥೭೯॥

ಭ್ರಾತೃವರ ಸೋದರಿಯ ಕರವಿಡಿದು ನಡೆಸುತಲಿ
ಕಾಂಭೋಜ ನೃಪನಿತ ಕುಂತಿಳ ಕಳಿಂಗಾನಿವ
ಸೌರಷ್ಟ್ರ ಪಾಟಲನು ಚೇರಳನು ಪಾಂಡ್ಯನಿವ
ಎನ್ನುತಲಿ ಧರಣಿಪರ ತೋರಿಸುತ ನಡೆದಿಹನು ॥೮೦॥

ಬಾಯೊಳಗೆ ಹಾಕಿರುವ ತಂಬುಲವ ತಿನ್ನದೆಯೆ
ಕಣ್ಣವೆಯ ಮಿಳುಕಿಸದೆ ಮೂಗಿನಲಿ ಬೆರಳಿಟ್ಟು
ಮೊಗವೆತ್ತಿ ದಮಯಂತಿ ಸುಂದರಿಯ ನೋಡುತಿರೆ
ನೃಪರುಗಳ ಕಿರೀಟಗಳು ಉರುಳುತಲಿ ಬಿದ್ದಿಹವು ॥೮೧॥

ತಮಗೊಲಿದು ದಮಯಂತಿ ಮಾಲೆಯನು ಹಾಕುವಳು
ಎನ್ನುತಲಿ ಕೊರಲನ್ನು ಭೂಮಿಪರ ಚಾಚುತಿರೆ
ದಮಯಂತಿ ನಸುನಗುತ ಮುಂದಕ್ಕೆ ಸಾಗುತಿರೆ
ಧರಣಿಪರ ಮುಖಕಮಲ ಬಾಡಿಹವು ಭತ್ತಿಹವು ॥೮೨॥

ಬಾಲರವಿ ತೇಜದಲಿ ವೀರರಸ ಕಾಂತಿಯಲಿ
ರಾಜಕಳೆ ಉಕ್ಕುತಿಹ ನಳನೆಡೆಗೆ ಬರುತಲಿರೆ
ವಿಲಸಿತದ ರತ್ನಗಳ ಹಾರಗಳ ಧರಿಸಿರುವ
ಸುರತೇಜ ದೈವರನು ನಳರನ್ನು ಕಂಡಿಹಳು ॥೮೩॥

ಅನಿಮಿಷರು ಕಣ್ಣವೆಯ ಮುಚ್ಚದೆಯೇ ಇರುತಿಹರು
ಇವರುಗಳು ಕಣ್ಣವೆಯ ಬಡಿಯುತಲಿ ಇರುತಿಹರು
ಸುರರುಗಳು ಭೂಮಿಯನು ಎಂದಿಗೂ ಸ್ಪರ್ಶಿಸರು
ಇವರುಗಳು ನೆಲವನ್ನು ಸೋಂಕುತಲಿ ನಿಂದಿಹರು ॥೮೪॥

ದಿವಿಜರಿಗೆ ಎಂದಿಗೂ ಬೆವರ ಹನಿ ಸೂಸದವು
ಇವರುಗಳು ಸ್ವೇದಜಡ ಸ್ನಾನದಲಿ ನೆನೆದಿಹರು
ಐವರೂ ನಳನಂತೆ ತೋರುವುದು ಅಚ್ಚರಿಯು
ನಿಜನಳನು ಆರೆಂದು ಚಿಂತಿಸುತ ನುಡಿದಿಹಳು ॥೬೭೫॥

ಹೇ ಸೂರ್ಯ ಚಂದ್ರರೆ ಅಷ್ಟ ದಿಕ್ಪಾಲಕರೆ
ಇಂದ್ರಾಗ್ನಿ ಯಮವರುಣರೆ ಅಣಿಮಾದಿ ವಸುಗಳೆ
ನಿಷಧ ನೃಪ ನಳನನ್ನು ಮನಸಾರೆ ಮೆಚ್ಚಿಹೆನು
ನಿಜನಳನ ತೋರಿಸುತ ಕರುಣಿಪುದು ಎಂದಿಹಳು ॥೬೭೬॥

ಎಂದಿಗೂ ನಳನನ್ನು ನಂಬಿಹೆನು ಮೆಚ್ಚಿಹೆನು
ನಳ ಎನ್ನ ಪತಿಯೆಂದು ಎಂದಿಗೂ ಭಾವಿಪೆನು
ನಳನನ್ನು ವರಿಸುವೆನು ಇಲ್ಲದಿರೆ ಸಾಯುವೆನು
ಎನ್ನುತಲಿ ದಮಯಂತಿ ನುಡಿದಿಹಳು ದೈನ್ಯದಲಿ ॥೬೭೭॥

ಸುರಪತಿಯು ಪಾವಕನು ವರವರುಣ ಯಮಧರ್ಮ
ನರರೂಪ ತೊರೆಯುತಲಿ ನಿಜರೂಪ ಧರಿಸುತಿರೆ
ದಮಯಂತಿ ಹರುಷದಲಿ ಮುಖಕಮಲ ಅರಳುತಲಿ
ವರನಳನ ಕೊರಳೊಳಗೆ ಮಾಲೆಯನು ಹಾಕಿದಳು ॥೬೭೮॥

ಹರುಷದಲಿ ವರನಳನು ದಮಯಂತಿ ಇಂದ್ರಾದಿ
ಸುರರುಗಳ ಚರಣದಲಿ ಸಾಷ್ಟಾಂಗ ಗೈಯ್ಯುತಿರೆ
ದೇವೇಂದ್ರ ಯಜ್ಞದಲಿ ಹವಿಸನ್ನು ಪಡೆಯುತಲಿ
ಸ್ವರ್ಗದಾ ಸೌಖ್ಯವನು ಈಯುವೆನು ಎಂದಿಹನು ॥೬೭೯॥

ಸೂರ್ಯಸಮ ತೇಜವನು ಶ್ರೇಷ್ಠ ಮಿಹ ಲೋಕವನು
ನಿಮಗೀವೆನೆನ್ನುತಲಿ ಪಾವಕನು ನುಡಿದಿಹನು
ಪಾಕದಲಿ ಪರಿಣತೆಯು ಧರ್ಮದಲಿ ಸ್ಥಿರಬುದ್ಧಿ
ಆಯುವನು ಈಯುವೆನು ಎಂದಿಹನು ಯಮಧರ್ಮ ॥೬೮೦॥

ಧನಧಾನ್ಯ ಜಲವೃಷ್ಟಿ ಕುಂದದಿಹ ಕುಸುಮಗಳ
ಸಂಪದವ ನೀಯುವೆನು ಎಂದಿಹನು ವರವರುಣ
ಮಂಗಲವು ನಿಮಗೆಂದು ಹರಸುತಲಿ ಸುರರುಗಳು
ಆಗಸದ ಮಾರ್ಗದಲಿ ಸರಿದಿಹರು ಹರುಷದಲಿ ॥೬೮೧॥

ಭೀಮನೃಪ ಸಂತಸದಿ ದಮಯಂತಿ ನಳದೊರೆಯ
ಮದುವೆಯನು ಸಡಗರದಿ ವೈಭವದಿ ಗೈಯ್ಯುತಲಿ
ರತ್ನಗಳ ವಜ್ರಗಳ ಸ್ವರ್ಣದಾಭರಣಗಳ
ಕರಿತುರಗ ಉಡುಗೊರೆಯ ಸಹಿತದಲಿ ಕಳುಹಿದನು ॥೬೮೨॥

ನಳರಾಜ ಸತ್ಯದಲಿ ನ್ಯಾಯದಲಿ ಧರ್ಮದಲಿ
ರಾಜ್ಯವನು ಆಳುತಲಿ ವಾತ್ಸಲ್ಯ ಪ್ರೀತಿಯಲಿ
ಮಕ್ಕಳ ಪರಿಯಲ್ಲಿ ಪ್ರಜೆಗಳನು ಪಾಲಿಸಲು
ಕೀರ್ತಿಯಲಿ ತೇಜದಲಿ ಮೆರೆದಿಹನು ಧರೆಯೊಳಗೆ ॥೬೮೩॥

ಇಂತಿರಲು ಸೌಖ್ಯದಲಿ ಕಾಲವನು ಕಳೆಯುತಿರೆ
ಇಂದ್ರಸೇನೆಂಬುವಾ ಸುತನೋರ್ವ ಜನಿಸಿಹನು
ಸುತೆ ಇಂದ್ರಸೇನೆಯಳು ಅತಿ ಚೆಲುವೆ ಜನಿಸಿಹಳು
ಸಂತಸದ ಸಾಗರದ ಮೇರೆಯದು ಮೀರಿದುದು ॥೬೮೪॥

ಅತ್ತಲಾ ಸುರರುಗಳು ನಭದಲ್ಲಿ ತೆರಳುತಿರೆ
ಮಾರ್ಗದಲಿ ಖಳಕಲಿಯ ದ್ವಾಪರನ ಕಾಣುತಲಿ
ಆವಕಡೆ ತಮ್ಮಯಾ ಪಯಣವನು ಬೆಳೆಸಿಹಿರಿ
ಎನ್ನುತಲಿ ದೇವೇಂದ್ರ ಕೇಳಿದನು ಕೌತುಕದಿ ॥೬೮೫॥

ನಾವೀಗ ದಮಯಂತಿ ಚೆಲುವೆಯ ಸ್ವಯಂವರಕೆ
ತೆರಳುವೆವು ಎನ್ನುತಲಿ ಕಲಿಖಳನು ನುಡಿಯುತಿರೆ
ದಮಯಂತಿ ಆಗಲೇ ನಳನೃಪನ ವರಿಸಿಹಳು
ಇನ್ನೇಕೆ ಹೋಗುವಿರಿ ಎಂದಿಹನು ದೇವೇಂದ್ರ ॥೬೮೬॥

ಕೇಳುತಲಿ ಖಳಕಲಿಯು ಸಖಿಶಿಖಿದಿ ಉರಿಯುತಲಿ
ಪತ್ನಿಯಾ ಸೌಖ್ಯವನು ಪಡೆಯದಲೆ ವಿರಹದಲಿ
ತೊಳಲುತಲಿ ಬಳಲುತಲಿ ಗಳಗಳನೆ ಅಳುವಂತೆ
ನಳನನ್ನು ಪೀಡಿಪೆನು ಎಂದಿಹನು ಕೋಪದಲಿ ॥೬೮೭॥

ದ್ವಾಪರನೆ ಎನ್ನೊಡನೆ ನೀನುಸಹ ನಳನಂಗೆ
ವಿಧವಿಧದ ಕಷ್ಟಗಳ ನೀಯುವುದು ಎನ್ನುತಲಿ
ದಾಳದಲಿ ಸೇರುತಲಿ ದ್ಯೂತದಲಿ ಸೋಲಿಸುತ
ನಳನನ್ನು ಕಾನನಕೆ ಅಟ್ಟುವುದು ಎಂದಿಹನು ॥೬೮೮॥

ದ್ವಾಪರನು ಸಮ್ಮತಿಯ ನೀಯುತಿರ ಕಲಿಖಳನು
ನಳನೃಪನ ದೇಹದಲಿ ಸೇರಲಿಕೆ ಐತಂದು
ದುಷ್ಕೃತ್ಯ ಪಾಪವನು ನಳನಲ್ಲಿ ಕಾಣದಲೆ
ಹನ್ನೆರಡು ವರುಷಗಳ ಕಾಲವನು ಕಳೆದಿಹನು ॥೬೮೯॥

**ನಳನೃಪನು ದ್ಯೂತದಲಿ ರಾಜ್ಯವನು ಸೋಲುತಲಿ ।**
**ಕಾನನವ ಸೇರುತಲಿ ಸತಿಸಹಿತ ಕೊಳಲಿದನು ॥**

ಒಂದು ದಿನ ನಳನಲ್ಲಿ ದೋಷವನು ಕಾಣುತಲಿ
ದೇಹದಲಿ ಕಲಿಖಳನು ಹೊಕ್ಕಿಹನು ಸಂತಸದಿ
ನಳನೃಪನ ಸೋದರನ ಪುಷ್ಕರನ ಬಳಿಯಲ್ಲಿ
ಖಳಕಲಿಯು ಸಾಗುತಲಿ ನುಡಿದಿಹನು ನಲವಿನಲಿ ॥೬೯೦॥

ನಿಮ್ಮಣ್ಣ ನಳನೊಡನೆ ದ್ಯೂತವನು ನೀನಾಡು
ನಿನ್ನನ್ನು ಗೆಲ್ಲಿಸುತ ರಾಜ್ಯವನು ಕೊಡಿಸುವೆನು
ಎನ್ನುತಲಿ ಖಳಕಲಿಯು ನುಡಿಯುತಿರೆ ಹರುಷದಲಿ
ಪುಷ್ಕರನು ಒಪ್ಪುತಲಿ ನಳನೆಡೆಗೆ ಐತಂದು ॥೧೯೦॥

ಹೇ ಅಣ್ಣ ನಳರಾಜ ನಿನ್ನೊಡನೆ ಜೂಜನ್ನು
ಆಡುವಾ ಇಚ್ಛೆಯದು ಎನಗಿಂದು ಆಗಿಹುದು
ಸರಸದಿ ವಿನೋದದಲಿ ಕಾಲವನು ಕಳೆಯಲಿಕ್ಕೆ
ದ್ಯೂತವನು ಆಡುವುದು ಎಂದಿಹನು ಪುಷ್ಕರನು ॥೧೯೨॥

ಹೇ ತಮ್ಮ ಪುಷ್ಕರನೆ ದ್ಯೂತಮಿದು ದುಷ್ಕರವು
ದುಷ್ಟತರ ದುಷ್ಕೀರ್ತಿ ಪಾಪಕರ ವೆನಿಸುವುದು
ಮೊದಲಿಂಗೆ ಸರಸದಲಿ ಕೊನೆಯಲ್ಲಿ ವಿರಸದಲಿ
ಸರ್ವವನು ನಾಶವನು ಗೈಯ್ಯುವದು ಎಂದಿಹನು ॥೧೯೩॥

ಸುಮ್ಮನೆಯೆ ಮನವನ್ನು ತಣಿಸಲಿಕೆ ಆಡುವದು
ಬೇಸರವ ಕಳೆಯುವದು ಎನ್ನುತಲಿ ಪುಷ್ಕರನು
ನುಡಿಯುತಿರೆ ನಳನೃಪನು ಹೊಳೆಹೊಳೆವ ರೇಶಿಮೆಯ
ಪಟ್ಟವನು ತರಿಸುತಲಿ ಹಾಸಿದನು ಅಂಗಣದಿ ॥೧೯೪॥

ಬಣ್ಣದಲಿ ಸೊಗಯಿಸುವ ಪಗಡೆಗಳನಿರಿಸುತಿರೆ
ದ್ವಾಪರನು ಭರದಲ್ಲಿ ಪಗಡೆಯೊಳು ಹೊಕ್ಕಿಹನು
ದಂತದಾ ದಾಳಗಳ ಒಳಗಡೆಗೆ ಸೇರಿಹನು
ದ್ಯೂತವನು ಆಡಿಹರು ಸೋದರರು ಈರ್ವರು ॥೧೯೫॥

ಹೇ ತಮ್ಮ ಸಾವಿರದ ಹೊನ್ನಿನಾ ನಾಣ್ಯಗಳ
ಬೌಗುನಕೆ ಹಚ್ಚಿಹೆನು ಆಡುವದು ಎಂದಿಹನು
ಘುಳುಘುಳಿಸಿ ದಂತಗಳ ಪುಷ್ಕರನು ಒಗೆಯುತಿರೆ
ಚೌಗುನವೆ ಬಿದ್ದಿಹುದು ದ್ವಾಪರನ ಕುಟಿಲದಲಿ ॥೧೯೬॥

ಲಕ್ಷದಾ ರಜತದಾ ನಾಣ್ಯಗಳ ಪಂಚಮಕೆ
ಪಣವಾಗಿ ಇಟ್ಟಿಹೆನು ಎಂದಿಹನು ನಳನೃಪನು
ಪುನರಪಿಯು ದಾಳಗಳ ಎಸೆಯುತಿರೆ ಪುಷ್ಕರನು
ಪಂಚಮವೆ ಬಿದ್ದಿಹುದು ದ್ವಾಪರನ ಮೋಸದಲಿ ॥೧೯೭॥

ಮುತ್ತುಗಳ ಹಾರಗಳ ವಜ್ರಗಳ ಭಂಡಾರ
ಮತ್ತೆ ನಳ ತಿಗುನಕ್ಕೆ ಹಚ್ಚಿಹೆನು ಎಂದಿಹನು
ಪುಷ್ಕರನು ನಸುನಗುತ ದಾಳಗಳ ಚೆಲ್ಲುತಿರೆ
ತಿಗುನವದು ಬಿದ್ದಿಹುದು ದ್ವಾಪರನ ತಂತ್ರದಲಿ ॥೧೯೮॥

ಹೇ ತಮ್ಮ ಈ ಸಲವು ಖಚಿತದಲಿ ನಾ ಜಯಿಪೆ
ಕರಿತುರಗ ಶಸ್ತ್ರಾಸ್ತ್ರ ಸೈನ್ಯವ ಪದಾತಿಯನು
ಸರ್ವವನು ಅಷ್ಟಮಕೆ ಪಣವಾಗಿ ಇಟ್ಟಿಹೆನು
ಆಡುವುದು ಎಂದಿಹನು ಧೃಢವಾಗಿ ನಳನೃಪನು ॥೧೯೯॥

ಬಾರೆನ್ನ ಭಾಗ್ಯನಿಧಿ ಅಷ್ಟಮವೆ ಶ್ರೇಷ್ಠವೇ
ಎನ್ನುತಲಿ ಘುಳುಘುಳಿಸಿ ದಾಳಗಳನೆಸೆಯುತಿರೆ
ನಳನೃಪನ ದುರದೃಷ್ಟ ದುರ್ದೈವವೆಂಬಂತೆ
ಅಷ್ಟಮವೆ ಬಿದ್ದಿಹುದು ದ್ವಾಪರನ ಕುಹಕದಲಿ ॥೨೦೦॥

ಈ ಪರಿಯೆ ಹಲವು ದಿನ ದ್ಯೂತವನು ಆಡುತಲಿ
ನಳನೃಪನು ಅಗಣಿತದ ಸಂಪದವ ಸೋಲುತಿರೆ
ದಮಯಂತಿ ಮಕ್ಕಳನು ತಂದೆಯಾ ಮನೆಯಲ್ಲಿ
ಇರಿಸುವುದು ಎನ್ನುತಲಿ ಸಾರಥಿಯ ಕರೆಸಿದಳು ॥೨೦೧॥

ಸಾರಥಿಯು ವಾರ್ಷ್ಣೇಯ ಬರುತಲಿರೆ ಭೀಮಸುತೆ
ಮಕ್ಕಳನು ರಥದೊಳಗೆ ಕರಕೊಂಡು ತೆರಳುತಲಿ
ಕುಂಡಿನಾಪುರದಲ್ಲಿ ಎನ್ನಯಾ ಪಿತೃಗೃಹದಿ
ಇರಿಸುವುದು ವೃತ್ತಾಂತವೆಲ್ಲವನು ಅರುಹುತಲಿ ॥೨೦೨॥

ಬಳಿಕ ನೀ ಅಲ್ಲಿ ಇರು ಇಲ್ಲದಿರೆ ನಿನ್ನಿಷ್ಟ
ಬಂದೆಡೆಗೆ ತೆರಳುವುದು ಎನ್ನುತಲಿ ದಮಯಂತಿ
ದುಃಖವನು ಉಕ್ಕುತಲಿ ಮಕ್ಕಳನು ಮುದ್ದಿಡುತ
ಅಪ್ಪುತಲಿ ಕಳುಹಿದಳು ಕಂಬನಿಯ ಸುರಿಸುತಲಿ ॥೨೦೩॥

ದ್ಯೂತದಾ ಸಂಭ್ರಮವು ಸಾಕಿನ್ನು ಎನ್ನುತಲಿ
ನಳನೃಪನು ದುಗುಡದಲಿ ನುಡಿಯುತಿರೆ ಪುಷ್ಕರನು
ಕ್ಷತ್ರಿಯರು ಅಂಜುತಲಿ ಓಡುವದು ಸಲ್ಲದಿದು
ಧೈರ್ಯದಲಿ ಎದುರಿಸುತ ಆಡುವುದು ಎಂದಿಹನು ॥೨೦೪॥

ದೈವವೇ ಜಗ್ಗುತಲಿ ಎಳೆದಂತೆ ನಳನೃಪನು
ಮತ್ತೆ ಮನ ಮಾಡುತಲಿ ದ್ಯೂತಕ್ಕೆ ಕುಳಿತಿಹನು
ಎನ್ನಯಾ ರಾಜ್ಯವನು ಎಲ್ಲವನು ಪಣವಾಗಿ
ದಶಮಕ್ಕೆ ಹಚ್ಚಿಹೆನು ಆಡುವುದು ಎಂದಿಹನು ॥೨೦೫॥

ಬಾ ಎನ್ನ ಜೀವನದ ಸರ್ವಸ್ವ ದಶಮವೇ
ಎನ್ನುತಲಿ ಘುಳುಘುಳಿಸಿ ದಾಳಗಳ ನೆಸೆಯುತಿರೆ
ದಶಮದಲಿ ಬೀಳುತಿದೆ ನಳನೃಪನ ಮುಖಕಮಲ
ಬತ್ತಿಹುದು ಬಾಡಿಹುದು ಕಳ್ಳನೆ ಕಂದಿಹುದು ॥೨೦೬॥

ಪುಷ್ಕರನ ಮುಖಕಮಲ ಹಿಗ್ಗುತಲಿ ಅರಳುತಲಿ
ಪಣವನ್ನು ಹಚ್ಚಲಿಕೆ ನಿನಗಾವ ವಸ್ತುವಿದೆ
ಹೆಂಡತಿಯ ಬಿಟ್ಟುಳಿದ ವಸ್ತುವದು ಒಂದಿಲ್ಲ
ಅವಳನ್ನು ಪಣವಾಗಿ ಹಚ್ಚುವದು ಎಂದಹನು ॥೨೦೭॥

ಈ ಪರಿಯ ಕೇಳುತಲಿ ನಳನೃಪನು ಕೋಪದಲಿ
ಏಳುತಲಿ ಮನನೊಂದು ಕಳವಳದಿ ತಾಪದಲಿ
ಪುರವನ್ನು ತ್ಯಜಿಸುತಲಿ ಪುರದ ಹೊರಬಾಹೆಯಲಿ
ಸತಿಸಹಿತ ನಳನೃಪನು ವಾಸಿಸಿದ ಗುಡಿಸಲಲಿ ॥೨೦೮॥

ಆಹಾರ ನೀರನ್ನು ನಳನಿಂಗೆ ಪುರಜನರು
ಕೊಡಲಾಗದೆನ್ನುತಲಿ ಕೊಟ್ಟೊಡೆಯು ಮರಣದಾ
ದಂಡನೆಯ ವಿಧಿಸುವುದು ಎನ್ನುತಲಿ ಪುಷ್ಕರನು
ಕೇರಿಯಲಿ ಪುರದೊಳಗೆ ಡಂಗುರವ ಹೊಯ್ಸಿದನು ॥೨೦೯॥

ಅನ್ನನೀರಿಲ್ಲದೆಯೆ ಹಸಿವೆ ನೀರಡಿಕೆಯಲಿ
ಬಾಯಾರಿ ನರಳುತಲಿ ಹುಲ್ಲಿನಲಿ ಮುಳ್ಳಿನಲಿ
ಮಲಗುತಲಿ ದಮಯಂತಿ ನಳನೃಪನು
ದಿನರಾತ್ರಿ ಮೂರುಗಳ ಕಳೆದಿಹನು ಕಷ್ಟದಲಿ ॥೨೧೦॥

ಪಂಚ ಪಕ್ವಾನ್ನಗಳ ರಸದೂಟ ಸವಿಯುತಲಿ
ಅರಮನೆಯ ರತ್ನದಾ ಮಂಚದಲಿ ಮಲಗುತಿಹ
ಚಂದ್ರಕುಲವೆಗ್ಗಳದ ನಳನೃಪನು ದಮಯಂತಿ
ಸತಿಸಹಿತ ಹಸಿವೆಯಲಿ ತೃಷೆಯಲ್ಲಿ ಬಳಲುತಲಿ ॥೨೧೧॥

ಕಲ್ಮುಳ್ಳ ಹುಲ್ಲಿನಾ ಹಾಸಿನಲಿ ಮಲಗುತಲಿ
ರಾತ್ರಿಯನು ಕಳೆದಿಹರು ಇನ್ನುಳಿದ ಹುಳುಜಂತು
ಕಡುಬಡವ ಹೀನರಾ ಮಾನವರ ಪಾಡೇನು
ವಿಧಿಲಿಖಿತ ಮೀರುವುದು ಆರಿಗೂ ಅಸದಳವು ॥೨೧೨॥

ಕಂದ ಮೂಲಾದಿಗಳ ತಿನ್ನುತಲಿ ಕಾನನದಿ
ವಾಸಿಪುದು ಲೇಸೆಂದು ನಳನೃಪನು ಯೋಚಿಸುತ
ವರಸಾಧ್ವಿ ದಮಯಂತಿ ಸುವ್ರತೆಯ ಸತಿಸಹಿತ
ಅಡವಿಯನು ಹೊಕ್ಕಿಹನು ದುಃಖ ಕಡಲುಕ್ಕುತಲಿ ॥೨೧೩॥

ಹಸಿವೆಯಲಿ ಬಳಲುತಲಿ ಆಹಾರಕೋಸುಗವೆ
ವನದೊಳಗೆ ಚಲಿಸುತಿರೆ ಹಕ್ಕಿಗಳ ಗುಂಪೊಂದು
ಕುಳಿತಿರುದ ಕಾಣುತಲಿ ಹಿಡಿಯುವುಪು ಎನ್ನುತಲಿ
ಬಿಲ್ಲೊಂದು ಬಾಣಗಳು ಜಾಲವದು ಅವುದು ॥೨೧೪॥

ಇಲ್ಲದೆಯೆ ಯೋಚಿಸುತ ಉಟ್ಟಿರುವ ಪಂಚೆಯನು
ಕಳೆಯುತಲಿ ಹಕ್ಕಿಗಳ ಮೇಲಕ್ಕೆ ಎಸೆಯುತಿರೆ
ವಿಹಗಗಳು ಪಂಚೆಯಾ ಸಹಿತದಲಿ ಊರ್ಧ್ವದಲಿ
ಗಗನಕ್ಕೆ ಏರುತಲಿ ಹಾರುತಲಿ ತೆರಳಿಹವು ॥೨೧೫॥

ಕೈಯೊಳಗೆ ಬಂದಿರುವ ತುತ್ತದುವೆ ಬಾಯ್ಗಿಲ್ಲ
ಎಂಬಂತೆ ಮನದೊಳಗೆ ಪರಿತಪಿಸಿ ನಳನೃಪನು
ಉಡಲಿಕ್ಕೆ ತುಣುಕೊಂದು ವಸ್ತ್ರವದು ಇಲ್ಲದೆಯೆ
ದಮಯಂತಿ ಬಳಿಯಲ್ಲಿ ನಗ್ನದಲಿ ಬಂದಿಹನು ॥೨೧೬॥

ಭರದಲ್ಲಿ ದಮಯಂತಿ ಉಟ್ಟಿರ್ದ ಸೀರೆಯನು
ಹರಿಯುತಲಿ ನಳನಿಂಗೆ ಅರ್ಧವನು ಈಯುತಿರೆ
ನಳನರ್ಧ ಸೀರೆಯದು ಧರಿಸುತಲಿ ಖೇದದಲಿ
ನಿಜಸತಿಗೆ ದಮಯಂತಿ ಸದ್ಗುಣೆಗೆ ನುಡಿದಿಹನು ॥೨೧೭॥

ಹೇ ಸಾಧ್ವೀ ಶಿರೋಮಣಿಯೆ ಶ್ರೇಷ್ಠ ಸತಿ ದಮಯಂತಿ
ಎನಗಾಗಿ ಆಹಾರವಿಲ್ಲದೆಯೆ ಬಳಲುತಲಿ
ಕಾನನದಿ ನೀನಿಂತು ಕಷ್ಟವನು ಪಡುತಿಹುದು
ಸಲ್ಲದಿದು ಎನ್ನಮನ ನೋಯುವುದು ಎಂದಿಹನು ॥೨೧೮॥

ಮುಂದಕ್ಕೆ ಅವಪರಿ ಘೋರತರ ಕಷ್ಟಗಳು
ಎಮಗಾಗಿ ಕಾದಿಹವೊ ತಿಳಿಯದಿದೆ ನೀನೀಗ
ನಿನ್ನಯಾ ಪಿತೃಗೃಹಕೆ ತೆರಳುತಲಿ ವಾಸಿಪುದು
ಎನ್ನುತಲಿ ನಳನುಡಿದ ದಮಯಂತಿ ಸುವ್ರತೆಗೆ ॥೨೧೯॥

ಸತಿಪತಿಯು ಸಂಸಾರ ರಥದೆರಡು ಚಕ್ರಗಳು
ಚಕ್ರೊಂದು ಕುಸಿಯುತಿರೆ ರಥಮುಂದೆ ಸಾಗದೆಯೆ
ಮುಗ್ಗರಿಸಿ ಬೀಳ್ವಂತೆ ಸಂಸಾರ ರಥವಿದುವೆ
ಎಮ್ಮಯಾ ವಿರಹದಲಿ ನೆಗ್ಗುತಲಿ ನಶಿಸುವುದು ॥೨೨೦॥

ಸುಖದಲ್ಲಿ ದುಃಖದಲಿ ಸಹಭಾಗಿಯಾಗುತಲಿ
ಪತಿಯೊಡನೆ ಬಾಳುವುದು ಸತಿಧರ್ಮವೆನಿಸುವುದು
ಸುಖದಲ್ಲಿ ಭೋಗಿಸುತ ಕಷ್ಟದಲಿ ಪತಿಯನ್ನು
ತೊರೆಯುವಾ ನಾರಿಯಳು ಜಾರೆ ಎಂದೆನಿಸುವಳು ॥೨೨೧॥

ಅಗ್ನಿಯಾ ಸಾಕ್ಷಿಯಲಿ ಎನ್ನಯಾ ಕರಪಿಡಿದು
ಸೆರಗಿನಾ ಗಂಟಿನಲಿ ಸಪ್ತಪದಿ ಚರಿಸುತಲಿ
ಧರ್ಮಾರ್ಥ ಕಾಮದಲಿ ಕರ್ತವ್ಯ ಮೀರದಲೆ
ಸತಿಯನ್ನು ರಕ್ಷಿಸುವೆ ಎಂದುದನು ಮರೆತಿಹೆಯ ॥೨೨೨॥

ಪತಿಯಿದ್ದ ಸ್ಥಾನವೇ ಸ್ವರ್ಗವದು ಸತಿಗಹುದು
ಪತಿಯಿರದತಾಣವದು ನರಕವದು ಎನಿಸುವುದು
ನೀರನ್ನು ತೊರೆಯುತಲಿ ಮೀನವದು ಸಾಯ್ವಂತೆ
ನಿನ್ನನ್ನು ತೊರೆದೊಡೆಯೆ ನಾ ಸಾಯ್ವೆನೆಂದಿಹಳು

ಉಡಲಿಕ್ಕೆ ಮರ್ಯಾದೆ ಮುಚ್ಚಲಿಕೆ ವಸ್ತ್ರವಿರೆ
ಉಣಲಿಕ್ಕೆ ತುಣುಕಿನಾ ರೊಟ್ಟಿಯದು ಇರ್ದೊಡೆಯು
ವಾಸಿಸಲು ಕಾಡಿನಾ ಗುಡಿಸಲವೆ ಇರ್ದೊಡೆಯು
ನೀನಿದ್ದ ಎಡೆಎನಗೆ ಸ್ವರ್ಗವದು ಎಂದಿಹಳು

ಈ ಪರಿಯ ಸತಿನುಡಿಯ ಕೇಳುತಲಿ ನಳನೃಪನು
ಇವಳನ್ನು ತೊರೆಯುತಲಿ ನಾ ದೂರ ಹೋದೊಡೆಯು
ತನ್ನಯಾ ತವರಿಂಗೆ ತೆರಳುವಳು ಎನ್ನುತಲಿ
ಮನದೊಳಗೆ ನಿಶ್ಚಯವ ಮಾಡಿದನು ನಳನೃಪನು

ಅಂದಿನಾ ರಾತ್ರಿಯಲಿ ಗಾಢಾಂಧ ಕಾರದಲಿ
ಗಾಢದಾ ನಿದ್ರೆಯಲಿ ದಮಯಂತಿ ಮಲಗಿರಲು
ನಳನೃಪನು ಏಳುತಲಿ ಒಂದುಸಲ ಸತಿಯನ್ನು
ನೋಡುತಲಿ ಕಾಡಿನಲಿ ತ್ಯಜಿಸುತಲಿ ಹೊರಟಿಹನು

ಬೆಳಗಿನಲಿ ದಮಯಂತಿ ಏಳುತಲಿ ನಳನನ್ನು
ಕಾಣದಲೆ ಹೌಹಾರಿ ಕಂಗೆಟ್ಟು ಕಳವಳದಿ
ನಳನೃಪನೆ ಎಲ್ಲಿರುವೆ ಬೇಗ ಬಾ ಎನ್ನುತಲಿ
ದೆಸೆದೆಸೆಗೆ ಕೂಗುತಲಿ ರೋದನವ ಗೈದಿಹಳು

ಪತಿಯನ್ನು ಹುಡುಕುತಲಿ ಕಾಡಿನಲಿ ನಡೆದಿರಲು
ಕಷ್ಟಗಳ ಮೇಲ್ಕಷ್ಟ ಮಾಲೆಗಳು ಬರುವಂತೆ
ಸನಿಹದಲಿ ಘೋರತರ ಹೆಬ್ಬಾವು ನೋಡುತಲಿ
ಸರಸರನೆ ಐತಂದು ಕಾಲನ್ನು ಸುತ್ತಿಹುದು

ದಮಯಂತಿ ಕೋಮಲೆಯ ಲತಾಂಗಿಯಾ ಅಂಗವನು
ಅಡಿಯಿಂದ ಮುಡಿವರೆಗೆ ಧೃಢವಾಗಿ ಬಿಗಿಯುತಲಿ
ಹಿಂಸಿಸುತಲಿರುತಿರಲು ನಭಬಿರಿವ ಪರಿಯಲ್ಲಿ
ಆಕ್ರಂದ ಗೈದಿಹಳು ಕಾನನವು ನಿನದಿಸಲು

ಬೇಟೆಯನು ಆಡಲಿಕೆ ಅಲೆಯುತಿಹ ಬೇಡೋರ್ವ
ಆವಳೋ ಹೆಂಗಸಿನ ಅಳುವದನಿ ಕೇಳುತಿರೆ
ಎನ್ನುತಲಿ ರೋದನದ ಸ್ವರವಿಡಿದು ಬರುತಲಿರೆ
ಹೆಬ್ಬಾವು ಸುತ್ತಿರುವ ಲಲನೆಯನು ಕಂಡಿಹನು

ಎಮ್ಮೊಡನೆ ಚೇದಿಯಾ ದೇಶಕ್ಕೆ ತೆರಳುತಲಿ
ನೀನಲ್ಲಿ ವಾಸಿಪುದು ಎನ್ನುತಿರೆ ವರ್ತಕರು
ದಮಯಂತಿ ಒಪ್ಪುತಲಿ ವರ್ತಕರ ಜೊತೆಯಲ್ಲಿ
ಚೇದಿಯಾ ರಾಜ್ಯಕ್ಕೆ ನಡೆದಿಹಳು ಸಂತಸದಿ ॥೨೩೯॥

ಒಂದು ದಿನ ಕಾನನದಿ ರಾತ್ರಿಯಲಿ ಮಲಗಿರಲು
ಆನೆಗಳ ಹಿಂಡುಗಳು ವರ್ತಕರ ಕೊಲ್ಲುತಿರೆ
ಇವಳಿಂದ ಕೇಡೆಮಗೆ ಉಂಟಾಯ್ತು ಎನ್ನುತಲಿ
ವರ್ತಕರು ನಳಸತಿಯ ತೊರೆಯುತಲಿ ಸಾಗಿದರು ॥೨೪೦॥

ರಾಜ್ಯವನು ಮಕ್ಕಳನು ಪತಿಯನ್ನು ಕಳಕೊಂಡು
ಉಡಲಿಕ್ಕೆ ವಸ್ತ್ರವದು ಉಣಲಿಕ್ಕೆ ಅನ್ನವದು
ಇಲ್ಲದೆಯೆ ಅಡವಿಯೊಳು ಅಲೆಯುವಾ ದುರ್ಗತಿಯು
ಎನಗಾಯ್ತು ಎನ್ನುತಲಿ ರೋದಿಸುತ ನಡೆದಿಹಳು ॥೨೪೧॥

ಹುಲಿಕರಡಿ ಸಿಂಹಗಳ ಅಡವಿಗಳ ದಾಂಟುತಲಿ
ಕಲ್ಲನ್ನು ಮುಳ್ಳನ್ನು ತುಳಿಯುತಲಿ ನೋಯುತಲಿ
ಗಿರಿತೊರೆಯು ಹಳ್ಳಗಳ ಕೊಳ್ಳಗಳ ದಾಂಟುತಲಿ
ಚೇದಿಯಾ ದೇಶಕ್ಕೆ ದಮಯಂತಿ ಬಂದಿಹಳು ॥೨೪೨॥

ಕೆದರಿರುವ ಕೇಶದಲಿ ಹುದುಗಿರುವ ಕಂಗಳಲಿ
ಬತ್ತಿರುವ ಬಾಡಿರುವ ಖಿನ್ನದಾ ವದನದಲಿ
ಮಲಿನದಾ ವಸ್ತ್ರದಾ ತುಣುಕೊಂದು ಧರಿಸುತಲಿ
ಅರೆನಗ್ನ ದೇಹದಲಿ ಬೀದಿಯಲಿ ನಡೆದಿಹಳು ॥೨೪೩॥

ಬಾಲಕರು ನೋಡುತಲಿ ಹುಚ್ಚಿ ಇವಳೆನ್ನುತಲಿ
ಮೋಜಿನಲಿ ಕಲ್ಲುಗಳ ದಮಯಂತಿಗೆಸೆದಿಹರು
ವಿಧವಿಧದ ಹಿಂಸೆಗಳ ನಿಂದನೆಯ ನುಡಿಗಳನು
ಸಹಿಸುತಲಿ ರಾಜಪಥ ಮಧ್ಯದಲಿ ಬಂದಿಹಳು ॥೨೪೪॥

ಸೌಧಾಗ್ರಪಂಗಣದಿ ಚೇದಿಯಾ ಸಾಮ್ರಾಜ್ಞಿ
ಸಖಿವೃಂದ ಸಹಿತದಲಿ ಸರಸದಲಿ ಆಡುತಿರೆ
ತುಣುಕೊಂದು ಮಲಿನದಾ ವಸ್ತ್ರದಲಿ ಚೆಲುವಿನಲಿ
ಶೋಭಿಸುವ ರೂಪವತಿ ಇವಳಾರು ಎಂದಿಹಳು ॥೨೪೫॥

ಕೌತುಕದಿ ನೋಡುತಲಿ ದಾಸಿಯರ ಕಳುಹುತಲಿ
ಕರೆಸುತಲಿ ಸುಂದರಿಯು ನೀನಾರು ಇರುತಿರುವೆ
ಮುಖದಲ್ಲಿ ತೇಜಸ್ಸು ರಾಣಿಕಳೆ ಉಕ್ಕುತಿದೆ
ಸತ್ಕುಲದ ಸ್ತ್ರೀಯಂತೆ ಕಾಂತಿಯಲಿ ಬೆಳಗುತಿರೆ ॥೨೪೬॥

ಕೊಳಕಾದ ವಸ್ತ್ರದಲಿ ಅರೆನಗ್ನ ದೇಹದಲಿ
ಬತ್ತಿರುವ ಬಾಡಿರುವ ವದನದಲಿ ಬೀದಿಯಲಿ
ಹುಚ್ಚಿಯಾ ಪರಿಯಲ್ಲಿ ನೀನೇಕೆ ತಿರುಗುತಿಹೆ
ಎನ್ನುತಲಿ ಚೇದಿಯಾ ಸಾಮ್ರಾಜ್ಞಿ ಕೇಳಿಹಳು ॥೨೪೭॥

ದೇವಿಯರೆ ಎನಗೊಬ್ಬ ವೀರನಿಹ ಗಂಡನಿಹ
ಜೂಜಿನಲಿ ಸರ್ವಸ್ವ ಐಶ್ವರ್ಯ ನೀಗುತಲಿ
ಕಾಡಿನಲಿ ರಾತ್ರಿಯಲಿ ಮಲಗಿರುವ ಸಮಯದಲಿ
ಎನ್ನನ್ನು ತೊರೆಯುತಲಿ ಹೋಗಿಹನು ಎಂದಿಹಳು ॥೨೪೮॥

ಚಿಂತೆಯನು ಮಾಡದಿರು ನೀನಿಲ್ಲಿ ಸೌಧದಲಿ
ಎನ್ನಯಾ ಸೇವೆಯನು ಮಾಡುತಲಿ ವಾಸಿಪುದು
ನಿನಗಾವ ಕಷ್ಟವನು ನಾವೀಯೆವೆನ್ನುತಲಿ
ಸಾಮ್ರಾಜ್ಞಿ ನುಡಿಯುತಿರೆ ದಮಯಂತಿ ನುಡಿದಿಹಳು ॥೨೪೯॥

ಎನ್ನಯಾ ಮಾತುಗಳ ನೀವುಗಳು ನಡೆಸುವೊಡೆ
ನಿಮ್ಮಯಾ ಸೇವೆಯನು ಮಾಡುತಲಿ ವಾಸಿಪೆನು
ಎಂಜಲಿನ ಅನ್ನವನು ನಾನೆಂದು ಭುಂಜಿಸೆನು
ಪುರುಷರಾ ಸೇವೆಯನು ಎಂದಿಗೂ ಮಾಡದಿಹೆ ॥೨೫೦॥

ಎನ್ನಯಾ ಪತಿಯನ್ನು ಹುಡುಕಲಿಕೆ ದೂತರನು
ಎಲ್ಲ ಕಡೆ ಕಳುಹಿಸುತ ಯತ್ನವನು ಮಾಡಲಿಕೆ
ಒಪ್ಪಿಗೆಯು ನಿಮಗಿರ್ದುದಾದೊಡೆಯು ಇಲ್ಲಿಯೇ
ನಿಮ್ಮನ್ನು ಸೇವಿಸುತ ವಾಸಿಪೆನು ಎಂದಿಹಳು ॥೨೫೧॥

ಚೇದಿಯಾ ನೃಪನರಸಿ ನಿಜಸುತೆ ಸುನಂದೆಯನು
ಕರೆಸುತಲಿ ಇವಳೆನ್ನ ನಿನ್ನನ್ನು ಸೇವಿಪಳು
ಈಕೆಯನು ಪ್ರೀತಿಯಲಿ ನೋಡುವುದು ಎನ್ನುತಿರೆ
ದಮಯಂತಿ ಈರ್ವರನು ಸೇವಿಸುತ ಇರ್ದಿಹಳು ॥೨೫೨॥

ರಾಣಿಯಾ ಕೇಶವನು ಒಕ್ಕುತಲಿ ಬಾಚುತಲಿ
ತುರುಬನ್ನು ಕಟ್ಟುತಲಿ ಹೂವನ್ನು ಮುಡಿಸುತಲಿ
ಪೀತಾಂಬರಾದಿಗಳ ಆಭರಣ ತೊಡಿಸುತಲಿ
ಅರಸಿಯಳ ಸೈರಂಧ್ರಿ ಎನಿಸುತಲಿ ಇರ್ದಿಹಳು ॥೨೫೩॥

**ಕರ್ಕೋಟಕ ಸರ್ಪವದು ಕಚ್ಚುತಿರೆ ನಳನೃಪನ ।**
**ದೇಹವದು ಸಕಲವೂ ವಿಷದಿಂದ ಕಪ್ಪಾಯ್ತು ॥**

ಇತ್ತಲಾ ನಳನೃಪನು ಕಾನನದಿ ಕತ್ತಲಲಿ
ಸಾಗುತಲಿ ಮುಂದೆ ಬರೆ ಕಾಳ್ಗಿಚ್ಚು ಹೊತ್ತುತಲಿ
ಸುತ್ತಲೂ ವ್ಯಾಪಿಸುತ ಧಗಧಗನೆ ಉರಿಯುತಲಿ
ವನವೆಲ್ಲ ದಹಿಸುತಲಿ ಇರ್ದುದನು ಕಂಡಿಹನು ॥೨೫೪॥

ಘೋರತರ ಚೀತ್ಕಾರ ರವವನ್ನು ಕೇಳುತಲಿ
ಮುಂದಕ್ಕೆ ಬರುತಲಿರೆ ಸರ್ಪವನು ಕಂಡಿಹನು
ನಳನೃಪನೆ ಬೆಂಕಿಯಲಿ ಸಾಯುತಿಹ ಎನ್ನನ್ನು
ಬೇಗನೇ ಹೊರತೆಗೆದು ರಕ್ಷಿಪುದು ಎಂದಿಹುದು ॥೨೫೫॥

ಕರ್ಕೋಟಕೆಂಬುವನು ನಾನಿಹೆನು ಕೇಳುವುದು
ಮುನ್ನಿನಲಿ ನಾರದ ಮುನೀಂದ್ರರನು ವಂಚಿಸಲು
ಶಾಪವನು ಈಯುತಿರೆ ಸರ್ಪಾಗಿ ಬಿದ್ದಿಹೆನು
ನಳ ನಿನ್ನ ರಕ್ಷಣವನು ಎನ್ನುತಲಿ ನುಡಿದಿಹರು ॥೨೫೬॥

ನೀನೀಗ ಎನ್ನನ್ನು ಸಲಹುವುದು ಎನ್ನುತಿರೆ
ನಳನೃಪನು ಕರ್ಕೋಟಕೋರಗನ ಹೊರತೆಗೆದು
ನೆಲದಲ್ಲಿ ಇಳುಹುತಿರೆ ಭರದಲ್ಲಿ ನಳನನ್ನು
ವಿಷವನ್ನು ಕಾರುತಲಿ ಸರ್ಪವದು ಕಚ್ಚಿಹುದು ॥೨೫೭॥

ವಿಷವೇರಿ ವ್ಯಾಪಿಸಲು ನಳನೃಪನ ದೇಹವದು
ಕರ್ರನೇ ಕಪ್ಪಾಗಿ ಕಂದಿಹುದು ಕುಂದಿಹುದು
ಹಾಲನ್ನು ಇಕ್ಕಿದೊಡೆ ವಿಷವಾಗಿ ಕಚ್ಚುವದು
ಹಾವುಗಳ ಸಹಜಗುಣ ದುರ್ಗುಣವು ಎಂದಿಹನು ॥೨೫೮॥

ಬೆಂಕಿಯಲಿ ಸಾಯುತಿಹ ನಿನ್ನನ್ನು ರಕ್ಷಿಸುತ
ಉಪಕಾರ ಗೈದುದಕೆ ಪ್ರತಿಫಲವ ನಿತ್ತಿಹೆಯಾ
ಉಪಕಾರ ಗೈದವಗೆ ಅಪಕಾರ ಗೈದಿರುವ
ಕಡುಪಾಪಿ ಕೃತಘ್ನನಿಹೆ ಎಂದಿಹನು ನಳನೃಪನು ॥೨೫೯॥

ಮುನಿಯದಿರು ನಳನೃಪನೆ ನಿನ್ನಯಾ ಹಿತಕಾಗಿ
ನಿನ್ನನ್ನು ಕಚ್ಚಿಹೆನು ನಿನಗರಿವು ಆಗದಲೆ
ಖಳಕಲಿಯು ನಿನ್ನಯಾ ದೇಹವನು ಹೊಕ್ಕಿಹನು
ನಿನ್ನಯಾ ಕಷ್ಟಕ್ಕೆ ಕಾರಣನು ಅವನಿಹನು ॥೨೬೦॥

ನಿನ್ನಯಾ ದೇಹದಲಿ ಈ ವಿಷವು ಇಹತನಕ
ಕಲಿಖಳನ ಸತತವೂ ಪೀಡಿಸುತಲಿರುತಿಹುದು
ಆವುದೇ ವಿಷಜಂತು ನಿನ್ನನ್ನು ಕಚ್ಚದದು
ಯುದ್ಧದಲಿ ನಿನಗೆ ಜಯ ನಿಶ್ಚಿತವು ಎಂದಿಹನು ॥೨೬೧॥

ಉತ್ತರದಯೋಧ್ಯೆಯಾ ರಾಜ್ಯವನು ಆಳುತಿಹ
ಋತುಪರ್ಣನೆಂಬುವಾ ನೃಪನೆಡೆಗೆ ಸಾಗುತಲಿ
ಬಾಹುಕನು ಎಂಬುವಾ ಹೆಸರನ್ನು ಹೇಳುತಲಿ
ನಿನ್ನೊಳಿಹ ಅಶ್ವದಾ ವಿದ್ಯೆಯನು ತಿಳಿಸುವದು ॥೨೬೨॥

ಅಶ್ವಗಳ ಪಾಲನೆಯ ಪೋಷಣೆಯ ವಿದ್ಯೆಯನು
ಯುದ್ಧದಲಿ ಅಶ್ವಗಳ ಕೌಶಲದ ವಿದ್ಯೆಯನು
ಸಾರಥಿಯ ಕುಶಲತೆಯ ನರಿತಿಹೆನು ಎನ್ನುತಲಿ
ತಿಳಿಸುತಲಿ ಸಾರಥಿಯು ನೀನಾಗು ಎಂದಿಹನು ॥೨೬೩॥

ಋತುಪರ್ಣ ನೃಪವರನು ದ್ಯೂತದಲಿ ಅತಿನಿಪುಣ
ಸಖ್ಯವನು ಬೆಳೆಸುತಲಿ ಹಯವಿದ್ಯೆ ಕಲಿಸುತಲಿ
ಸಮಯವನು ಸಾಧಿಸುತ ಅಕ್ಷದಾ ವಿದ್ಯೆಯಲಿ
ಜಾಣ್ಮೆಯನು ಪರಿಣತಿಯ ಪಡೆಯುವುದು ಎಂದಿಹನು ॥೨೬೪॥

ಬಳಿಕಲಾ ಸೋದರನ ಪುಷ್ಕರನ ಜೊತೆಯಲ್ಲಿ
ದ್ಯೂತವನು ಆಡುತಲಿ ರಾಜ್ಯವನು ಗೆಲ್ಲುತಲಿ
ಹೆಂಡತಿಯ ಮಕ್ಕಳನು ಮತ್ತೆ ನೀ ಪಡೆಯುತಲಿ
ಜೊತೆಯಾಗಿ ಸುಖವಾಗಿ ಜೀವಿಸುವೆ ಎಂದಿಹನು ॥೨೬೫॥

ಈ ನಿನ್ನ ಕುರೂಪಕ್ಕೆ ಅಂಜದಿರು ಅಳುಕದಿರು
ಗುಪಿತದಲಿ ವಾಸಿಸಲು ಕುರೂಪವು ಸಹಾಯವು
ಎನ್ನನ್ನು ನೆನೆಯುತಲಿ ಈ ದಿವ್ಯ ವಸ್ತ್ರಗಳ
ಧರಿಸುತಿರೆ ಸುಂದರದ ರೂಪವನು ನೀ ಪಡೆವೆ ॥೨೬೬॥

**ನಳನೃಪನು ಋತುಪರ್ಣ ನೃಪವರನ ಆಶ್ರಯಿಸಿ ।**
**ಅಶ್ವಗಳ ಪಾಲನೆಯ ಪೋಷಣೆಯ ಗೈದಿಹನು ॥**

ಈ ತೆರದಿ ಕರ್ಕೋಟಕುಸುರುತಲಿ ತೆರಳುತಿರೆ
ನಳನೃಪನು ಅಯೋಧ್ಯೆಯಾ ನಗರಕ್ಕೆ ಸಾಗುತಲಿ
ಸಭೆಯೊಳಗೆ ಮೆರೆಯುತಿಹ ಋತುಪರ್ಣ ಧರಣಿಪನ
ಕಾಣುತಲಿ ಶಿರಬಾಗಿ ನಮಿಸುತಲಿ ನುಡಿದಿಹನು ॥೨೬೭॥

ಬಾಹುಕನು ನಾನಿಹೆನು ಹಯವಿದ್ಯೆ ಪರಿಣತನು
ನಿಷಧನೃಪ ನಳನಿಂಗೆ ಸಾರಥಿಯು ನಾನಿರ್ದೆ
ದ್ಯೂತದಲಿ ರಾಜ್ಯವನು ಸಂಪದವ ಸೋಲುತಲಿ
ನಳದೊರೆಯು ಸತಿಸಹಿತ ಕಾನನವ ಸೇರುತಿರೆ ॥೨೬೮॥

ದೇಶಗಳ ಚರಿಸುತಲಿ ನಾನಿಲ್ಲಿ ಬಂದಿಹೆನು
ನಿಮ್ಮಯಾ ಅಶ್ವಗಳ ಪಾಲನೆಯ ಗೈಯ್ಯುತಲಿ
ಸಾರಥಿಯು ನಿಮಗಾಗಿ ಸೇವೆಯನು ಗೈಯ್ಯುವೆನು
ಯುದ್ಧದಾ ಕೌಶಲವ ಅರಿತಿಹೆನು ಎಂದಿಹನು ॥೨೬೯॥

ರಾಜ್ಯವನು ಆಳುವಾ ಆ ರಾಜನೀತಿಯನು
ಹಣಕಾಸು ಆಡಳಿತ ನಿಯಮಗಳ ನರಿತಿಹೆನು
ಪಾಕದಾ ಯುದ್ಧದಾ ಶಾಸ್ತ್ರದಲಿ ನಿಪುಣನಿಹೆ
ಆಶ್ರಯವ ನೀಡುತಲಿ ರಕ್ಷಿಪುದು ಎಂದಿಹನು ॥೨೭೦॥

ಋತುಪರ್ಣ ಆಲಿಸುತ ಸಂತಸದಿ ಒಪ್ಪುತಲಿ
ಎಮ್ಮಯಾ ಅರಮನೆಯ ಅಶ್ವಗಳು ತುಂಟವಿವೆ
ಅವುಗಳನು ಪೋಷಿಸುತ ಯುದ್ಧದಾ ಕೌಶಲದಿ
ಪಳಗಿವುದು ಎನ್ನುತಲಿ ನಳನೃಪಗೆ ನುಡಿದಿಹನು ॥೭೭೦॥

ವಾರ್ಷ್ಣೇಯ ಜೀವಲರು ಎಂಬುವಾ ಈರ್ವರೂ
ಅಶ್ವಗಳ ಶಾಲೆಯಾ ನಾಯಕರು ಇರುತಿಹರು
ಅವರುಗಳ ಮೇಲಣದ ಅಧಿಕಾರಿಯಾಗುತಲಿ
ನೀನಿಲ್ಲಿ ವಾಸಿಪುದು ಎನ್ನುತಲಿ ನುಡಿದಿಹನು ॥೭೭೧॥

**ದಮಯಂತಿ ಲಲನೆಯಾ ವೃತ್ತಾಂತವರಿಯುತಲಿ ।**
**ಚೇದ್ಯರಸಿ ಕಳುಹಿದಳು ತಾಯ್ತಂದೆ ಬಳಿಯಲ್ಲಿ ॥**

ಅತ್ತಲಾ ಭೀಮನೃಪ ನಳವರನು ದ್ಯೂತದಲಿ
ರಾಜ್ಯವನು ಸೋಲುತಲಿ ಸತಿಸಹಿತ ತೆರಳಿಹನು
ಎಂಬುವಾ ವಾರ್ತೆಯನು ಕೇಳುತಲಿ ಕಳವಳದಿ
ನಳನನ್ನು ಶೋಧಿಸಲು ಚರರನ್ನು ಅಟ್ಟಿದನು ॥೭೭೩॥

ದೆಸೆದೆಸೆಗೆ ತೆರಳುತಲಿ ವಿಧವಿಧದ ರಾಜ್ಯದಲಿ
ಚರರುಗಳು ನಳನೃಪನ ಶೋಧನೆಯ ಗೈದಿಹರು
ಸುದೇವನೆಂಬುವಾ ದ್ವಿಜನೋರ್ವ ಶೋಧಿಸುತ
ಚೇದಿಯಾ ದೇಶಕ್ಕೆ ಬಂದಿಹನಕಸ್ಮಕದಿ ॥೭೭೪॥

ಅರಮನೆಯ ಬಳಿಬರಲು ದ್ವಾರದಲಿ ಸೇವಕರು
ನೀನಾರು ಬಂದಿರುವ ಕಾರಣವ ಪೇಳುವುದು
ಎನ್ನುತಿರೆ ವಿಧರ್ಭದೊರೆ ಎನ್ನನ್ನು ಕಳುಹಿದನು
ರಾಣಿಯನು ಕಾಣಲಿಕೆ ಬಂದಿಹೆನು ಎಂದಿಹನು ॥೭೭೫॥

ರಾಜ್ಞಿಯಾ ಅಪ್ಪಣೆಯ ಪಡೆಯುತಲಿ ಸುದೇವನು
ಸೌಧದಲಿ ತೆರಳುತಲಿ ರಾಣಿಯಳ ನಮಿಸುತಲಿ
ವಿಧರ್ಭ ದೊರೆ ನಿಜಸುತೆಯ ದಮಯಂತಿಯರಸಲಿಕೆ
ಎನ್ನನ್ನು ಕಳುಹುತಿರೆ ಬಂದಿಹೆನು ಎಂದಿಹನು ॥೭೭೬॥

ನಿಷಧನೃಪ ನಲವರನು ಜೂಜಿನಲಿ ಸೋಲುತಲಿ
ರಾಜ್ಯವನು ಸತಿಯನ್ನು ತೊರೆಯುತಲಿ ಹೋಗಿಹನು
ನಿಮ್ಮಲ್ಲಿ ನಳಸತಿಯು ದಮಯಂತಿ ಇರ್ದೊಡೆಯು
ತಿಳುಹುವುದು ಎನ್ನುತಲಿ ಸುದೇವನು ನುಡಿದಿಹನು ॥೭೭೭॥

ದಮಯಂತಿ ಎಂಬುವಾ ಲಲನೆಯನು ಕೇಳರಿಯೆ
ಕೆಲದಿನದ ಪೂರ್ವದಲಿ ಓರ್ವಳಾ ನಾರಿಯಳು
ತನಗಾರು ಗತಿಯಿಲ್ಲ ಪರದೇಶಿ ತಾನೆಂದು
ಹೇಳುತಲಿ ಆಶ್ರಯವ ಪಡೆದಿಹಳು ಎಂದಿಹಳು ॥೭೭೮॥

ನೀನರಸು ಎನ್ನುತಿರೆ ಸುದೇವನು ಸಾಗುತಲಿ
ಮೇಘಗಳು ಮುಸುಕಿರುವ ಚಂದಿರನ ಪರಿಯಲ್ಲಿ
ನಾರಿಯರ ಮಧ್ಯದಲಿ ಬಾಡಿರುವ ವದನದಾ
ಚಂದ್ರಮುಖಿ ದಮಯಂತಿ ಸಾಧ್ವಿಯನು ಕಂಡಿಹನು ॥೭೭೯॥

ಚೇದಿಯಾ ನೃಪಸುತೆಯ ಸುನಂದೆಯಾ ಕೇಶವನು
ಹಿಕ್ಕುತಲಿ ಬಾಚುತಲಿ ತುರುಬನ್ನು ಕಟ್ಟುತಲಿ
ಮಲಿನದಾ ವಸನದಲಿ ಚಿಂತೆಯಲಿ ಕುಳಿತಿರುವ
ದಮಯಂತಿ ಸಾಧ್ವಿಯನು ಕಂಡಿಹನು ಚಕಿತದಲಿ ॥೭೮೦॥

ಅಕಟಕಟ ವಿಧರ್ಭದೊರೆ ಭೀಮನಾ ತನಯಳಿಗೆ
ನಿಷಧನೃಪ ನಳವರನ ಮಹಾರಾಣಿ ದಮಯಂತಿ
ಸಾಧ್ವೀ ಶಿರೋಮಣಿಗೆ ಈ ಪರಿಯ ಕಷ್ಟವೇ
ಹಾಯ್ ವಿಧಿಯೇ ಎನ್ನುತಲಿ ಮರುಗಿದನು ಸುದೇವನು ॥೭೭೦॥

ಹೇ ತಂಗಿ ದಮಯಂತಿ ನಿನ್ನಯಾ ಸೋದರನ
ಮಿತ್ರನಿಹೆ ಸುದೇವನೆಂಬುವಾ ಹೆಸರಿಹುದು
ನಿನತಂದೆ ಭೀಮನೃಪ ನಿನ್ನನ್ನು ಹುಡುಕಲಿಕೆ
ಎನ್ನನ್ನು ಕಳುಹುತಿರೆ ಬಂದಿಹೆನು ಎಂದಿಹನು ॥೭೮೧॥

ದಮಯಂತಿ ಕೇಳುತಲಿ ಹರ್ಷದಾ ಸಾಗರವು
ಉಕ್ಕುತಲಿ ಮೇರೆಯನು ಮೀರುತಲಿ ಹರಿದಂತೆ
ಮುದದಿಂದ ಹಿಗ್ಗುತಲಿ ಎನ್ನಯಾ ತಾಯ್ತಂದೆ
ಸೋದರರು ಕ್ಷೇಮವೇ ಎಂದಿಪಳು ದಮಯಂತಿ ॥೭೮೩॥

ನಿನ್ನಯಾ ತಾಯ್ತಂದೆ ಸೋದರರು ಸಕಲರೂ
ಸುಕ್ಷೇಮವಿರುತಿಹರು ಚಿಂತೆಯನು ಮಾಡದಿರು
ನಿನ್ನನ್ನು ಕಾಣದೆಯೆ ಚಿಂತಿಸುತ ದಿನದಿನದಿ
ಕೊರಗುತಲಿ ಸೊರಗುತಲಿ ವ್ಯಾಕುಲದೊಳಿರುತಿಹರು ॥೭೮೪॥

ವೈಧರ್ಭ ರಾಜನಾ ಭೀಮನೃಪ ಸುತೆಯಾಗಿ
ಖ್ಯಾತನಾ ನಿಷಧನೃಪ ನಲವರನ ಸತಿಯಾಗಿ
ಸಾಮ್ರಾಜ್ಞಿಯಾಗುತಲಿ ಮೆರೆದವಳ ನೀನಿಂದು
ಅರಮನೆಯ ದಾಸಿಯಳು ಆಗುವುದು ಯೋಗ್ಯವೇ ॥೭೮೫॥

ನಿನ್ನನ್ನು ಅರಸುತಲಿ ಕರೆತರಲು ಎನ್ನನ್ನು
ಭೀಮನೃಪ ಕಳುಹಿದೊಡೆ ನಾನಿಲ್ಲಿ ಬಂದಿಹೆನು
ಎನ್ನೊಡನೆ ನಿನ್ನಯಾ ತಾಯ್ತಂದೆ ಬಳಿಯಲ್ಲಿ
ಬೇಗನೆ ಬಹುದೆಂದು ಸುದೇವನು ನುಡಿದಿಹನು ॥೭೮೬॥

ಎನ್ನಯಾ ತಾಯ್ತಂದೆ ಸೋದರರ ಕಾಣಲಿಕೆ
ಎನ್ನಮನ ತವಕಿಪುದು ಎನ್ನುತಲಿ ದುಃಖವದು
ಉಕ್ಕುತಲಿ ಬಿಕ್ಕುತಲಿ ಅಳುತಲಿರೆ ಸುನಂದೆಯು
ಭರದಲ್ಲಿ ತೆರಳುತಲಿ ಸಾಮ್ರಾಜ್ಞಿಗುಸುರಿದಳು ॥೨೮೭॥

ಚೇದಿನೃಪನರಸಿಯಳು ಕೇಳುತಲಿ ಐತಂದು
ಇವಳ್ಯಾರು ಇರುತಿಹಳು ಏತಕ್ಕೆ ಬಂದಿಹಳು
ಈಕೆಯಾ ನಿಜವಾದ ವೃತ್ತಾಂತ ಅರುಹುವುದು
ಎನ್ನುತಿರೆ ಸಾಮ್ರಾಜ್ಞಿಗುಸುರಿದನು ಸುದೇವನು ॥೨೮೮॥

ದೇವಿಯರೆ ವೈದರ್ಭದೊರೆ ಭೀಮನಾ ಮಗಳಿವಳು
ನಿಷಧದೊರೆ ನಳನೃಪನ ಸತಿಯಿವಳು ದಮಯಂತಿ
ತಮ್ಮನಿಗೆ ಜೂಜಿನಲಿ ರಾಜ್ಯವನು ಸೋಲುತಲಿ
ನಳನೃಪನು ಸತಿಸಹಿತ ಎಲ್ಲಿಗೋ ತೆರಳುತಿರೆ ॥೨೮೯॥

ಭೀಮದೊರೆ ದಮಯಂತಿ ನಳನನ್ನು ಈರ್ವರನು
ಹುಡುಕಲಿಕೆ ಚಾರರನು ದೆಸೆದೆಸೆಗೆ ಕಳುಹುತಿರೆ
ದೇಶಗಳ ಚರಿಸುತಲಿ ಅರಸುತಲಿ ಬರುತಿರಲು
ದಮಯಂತಿ ಸಾಧ್ವಿಯನು ಕಂಡಿಹೆನು ಎಂದಿಹನು ॥೨೯೦॥

ಚೇದ್ಯರಸಿ ಕೇಳುತಲಿ ಕೌತುಕದಿ ಆತನದಿ
ನಿನ್ನಯಾ ನಿಜವಾದ ವೃತ್ತಾಂತವರುಹುವುದು
ನೀನಿಲ್ಲಿ ಏತಕ್ಕೆ ವಾಸಿಸುವೆ ಎಂಬುದನು
ವಿಸ್ತರದಿ ಪೇಳುವುದು ಎಂದಿಹಳು ನಳಸತಿಗೆ ॥೨೯೧॥

ಭೀಮನೃಪ ಸುತೆಯಿಹೆನು ನಳಸತಿಯು ನಾನಿಹೆನು
ದ್ಯೂತದಲಿ ಸರ್ವವನು ಸೋಲುತಿರೆ ನಳದೊರೆಯು
ಮಕ್ಕಳನು ಎನ್ನಯಾ ತೌರಿಂಗೆ ಕಳುಹುತಲಿ
ಪತಿನಳನ ಜೊತೆಯಲ್ಲಿ ಕಾನನಕೆ ತೆರಳಿದನು ॥೨೯೨॥

ರಾತ್ರಿಯಲಿ ಅಡವಿಯಲಿ ಮಲಗಿರಲು ನಳವರನು
ಎನ್ನನ್ನು ತೊರೆಯುತಲಿ ಎಲ್ಲಿಗೋ ಹೋಗಿಹನು
ದೇಶಗಳ ಅಲೆಯುತಲಿ ನಿಮ್ಮಲ್ಲಿ ಬರುತಿರಲು
ಆಶ್ರಯವನಿತ್ತಿಹಿರಿ ಎಂದಿಹಳು ದಮಯಂತಿ ॥೨೯೩॥

ಕೇಳುತಲಿ ರಾಣಿಯೊಳು ಮನನೊಂದು ಖೇದದಲಿ
ಭೀಮನೃಪ ನರಸಿಯಳು ಎನ್ನಕ್ಕಳಿರುತಿಹಳು
ತಿಳಿಯದಲೆ ನಿನ್ನನ್ನು ದಾಸಿಯನು ಮಾಡಿರುವ
ಕಡುಪಾಪಿ ನಾನಿಹೆನು ಎಂದಿಹಳು ಸಾಮ್ರಾಜ್ಞಿ ॥೨೯೪॥

ನಿನ್ನನ್ನು ಸೇವಕಿಯ ಮಾಡುತಲಿ ವಿಧವಿಧದ
ಕಷ್ಟಗಳ ಹಿಂಸೆಗಳ ನಿತ್ತಿಹೆವು ಕ್ಷಮಿಸುವುದು
ಎನ್ನುತಲಿ ಸಾಮ್ರಾಜ್ಞಿ ದುಃಖವದು ಉಕ್ಕುತಲಿ
ಕಂಬನಿಯ ಸುರಿಸುತಲಿ ದಮಯಂತಿಯಪ್ಪಿದಳು ॥೨೯೫॥

ಎಲ್ಲವನು ಮರೆಯುತಲಿ ಎನ್ನನ್ನು ಕ್ಷಮಿಸುತಲಿ
ಇದು ನಿನ್ನ ಮನೆಯಿಹುದು ಸುಖವಾಗಿ ವಾಸಿಪುದು
ಎನ್ನುತಲಿ ರಾಣಿಯಳು ಪ್ರೀತಿಯಲಿ ನುಡಿಯುತಿರೆ
ದಮಯಂತಿ ನೃಪಸತಿಗೆ ನುಡಿದಿಹಳು ಹರುಷದಲಿ ॥೨೯೬॥

ದೇವಿಯರೆ ನೀವೆಮಗೆ ಚಿಕ್ಕಮ್ಮರಿರುತಿಹಿರಿ
ನಿಮ್ಮಯಾ ಶುಶ್ರೂಷೆ ಸೇವೆಯನು ಗೈಯ್ಯುವುದು
ಎಮ್ಮಯಾ ಕರ್ತವ್ಯ ಧರ್ಮವಿದೆ ಮರುಗದಿರಿ
ಕಷ್ಟದಲಿ ನೆರಳನ್ನು ಈಯುತಲಿ ಸಲುಹಿದಿರಿ ॥೨೯೭॥

ಹೆತ್ತಿರುವ ತಾಯಿಯಾ ಪರಿಯಲ್ಲಿ ರಕ್ಷಿಸಿದ
ನಿಮ್ಮಯಾ ಉಪಕಾರ ನಾನೆಂತು ಮರೆಯುವುದು
ನಿಮ್ಮೊಳಗೆ ಆವುದೇ ದೋಷವದು ಎನಿತಿಲ್ಲ
ಇದು ನಮ್ಮ ಪೂರ್ವದಾ ಕರ್ಮಫಲವೆಂದಿಹಳು ॥೨೯೮॥

ಎನ್ನಯಾ ತಾಯ್ತಂದೆ ಮಕ್ಕಳನು ನೋಡದೆಯೆ
ಹಲವು ದಿನ ಕಳೆದಿಹುವು ಕಾಣುವಾ ಆಸೆಯದು
ಆತುರವು ಹೆಚ್ಚಿಹುದು ಎನ್ನ ಮನ ತವಕಿಪುದು
ನೀವೆನ್ನ ಕಳುಹುವುದು ಎಂದಿಹಳು ದಮಯಂತಿ ॥೨೯೯॥

ಹೇ ಮಗಳೆ ಎನ್ನಯಾ ಅಕ್ಕನಿಗೆ ಕುಶಲವನು
ತಿಳಿಸುವುದು ಎನ್ನುತಲಿ ಸ್ವರ್ಣದಾಭರಣಗಳ
ಪೀತಾಂಬರಾದಿಗಳ ದಮಯಂತಿಗೀಯುತಲಿ
ಸುದೇವನ ಸಹಿತದಲಿ ಕಳುಹಿದಳು ಹರುಷದಲಿ ॥೩೦೦॥

ದಮಯಂತಿ ವಿಧರ್ಭದಾ ದೇಶಕ್ಕೆ ಸಾಗುತಲಿ
ಅರಮನೆಗೆ ಬರುತಿರಲು ಭೀಮನೃಪ ಕಾಣುತಲಿ
ಹರುಷದಲಿ ಹರ್ಷಾಶ್ರು ಧಾರೆಯನು ಸುರಿಸುತಲಿ
ಪ್ರೀತಿಯಲಿ ದಮಯಂತಿ ಸುತೆಯನ್ನು ಅಪ್ಪಿದನು ॥೩೦೧॥

ಭೀಮನೃಪನರಸಿಯಳು ಮಗಳನ್ನು ಕಾಣುತಲಿ
ತೊಲಗಿರುವ ಜೀವವದು ಮರಳಿ ತಾ ಬಂದಂತೆ
ದಮಯಂತಿಯಪ್ಪುತಲಿ ಕುರುಳನ್ನು ನೇವರಿಸಿ
ಹಣೆಯನ್ನು ಮೂಸುತಲಿ ಮುದದಿಂದ ನುಡಿದಿಹಳು ॥೩೦೨॥

ಹೇ ಮಗಳೆ ಇಷ್ಟು ದಿನ ಪರ್ಯಂತ ಎಲ್ಲಿದ್ದೆ
ಆವಾವ ಕಷ್ಟಗಳ ಕಾರ್ಪಣ್ಯ ಭೋಗಿಸಿದೆ
ಕಷ್ಟಗಳ ಭೋಗಿಸಲು ನೀ ಹುಟ್ಟಿದಂತಾಯ್ತು
ವಿಶದದಲಿ ಹೇಳುವುದು ಎಂದಿಹಳು ಆ ತಾಯಿ ॥೧೦೩॥

ಹೇ ತಾಯೆ ನಳನೃಪನು ಎನ್ನನ್ನು ಕಾನನದಿ
ತ್ಯಜಿಸುತಲಿ ತೆರಳುತಿರೆ ಏಕಾಕಿ ಕಾಡಿನಲಿ
ಚರಿಸುತಲಿ ಚೇದಿಯಾ ದೇಶಕ್ಕೆ ಬರುತಿರಲು
ಸಾಮ್ರಾಜ್ಞಿ ನಿನ್ನಕ್ಕ ಆಶ್ರಯವನಿತ್ತಿಹಳು ॥೧೦೪॥

ಸುದೇವನೈತಂದು ಎನ್ನನ್ನು ಗುರುತಿಸಲು
ಎನ್ನಯಾ ವಿಷಯವನು ಸಾಮ್ರಾಜ್ಞಿಗರುಹುತಿರೆ
ನಿಮ್ಮಕ್ಕ ಸಂತಸದಿ ಉಡುಗೊರೆಯ ಸಹಿತದಲಿ
ಎನ್ನನ್ನು ಕಳುಹಿದಳು ಎಂದಿಹಳು ದಮಯಂತಿ ॥೧೦೫॥

ಎನ್ನಯಾ ಪತಿಯನ್ನು ನಳನನ್ನು ಅರಸಲಿಕೆ
ಚಾರರನು ಕಳುಹುವುದು ಎನ್ನುತಲಿ ನುಡಿಯುತಿರೆ
ಭೀಮನೃಪ ದೂತರನು ಚರರನ್ನು ಕರೆಯುತಲಿ
ನಳನನ್ನು ಅರಸಲಿಕೆ ಆಜ್ಞೆಯನು ಇತ್ತಿಹನು ॥೧೦೬॥

ವಿಧವಿಧದ ಕಾನನವ ತಾಣಗಳ ರಾಜ್ಯಗಳ
ಚರಿಸುತಲಿ ಅರಸುತಲಿ ನಳನೃಪನ ಕರೆತಹುದು
ನಳನೃಪನ ಸಹಿತದಲಿ ಬಂದವಗೆ ಅಗಣಿತವ ಧನಕನಕ
ಬಹುಮಾನವೀಯುವೆನು ಎನ್ನುತಲಿ ಕಳುಹಿದನು ॥೧೦೭॥

ಚರರುಗಳು ದೆಸೆದೆಸೆಗೆ ವಿಧವಿಧದ ದೇಶದಲಿ
ನಳನನ್ನು ಹುಡುಕುತಲಿ ಕಾಣದಲೆ ಬಂದಿಹನು
ಹಲವು ದಿನ ಕಳೆಯುತಿರೆ ಪರ್ಣಾದನೆಂಬುವನು
ಚಾರಕನು ಐತಂದು ದಮಯಂತಿ ಗುಸುರಿದನು ॥೧೦೮॥

ಅಯೋಧ್ಯೆಯಾ ಪುರವನ್ನು ಆಳುತಿಹ ಖ್ಯಾತಮಿಹ
ಋತುಪರ್ಣನರಮನೆಯ ಬಳಿಯಲ್ಲಿ ತೆರಳುತಲಿ
ನಳವರನ ವೃತ್ತಾಂತ ಸಕಲವನು ತಿಳಿಸುತಿರೆ
ತಮಗಾವುದರಿವಿಲ್ಲ ಎನ್ನುತಲಿ ನುಡಿದಿಹರು ॥೧೦೯॥

ಆಗಲಾ ಅರಮನೆಯ ಹೊರಗಡೆಗೆ ಓರ್ವನು
ಕಪ್ಪಿನಾ ದೇಹದಲಿ ಬಾಹುಕನು ಎಂಬುವನು
ಅಶ್ವಗಳ ಪಾಲನೆಯ ಪಾರದಲಿ ಪರಿಣತನು
ಸಾರಥಿಯು ಐತಂದು ಈ ಪರಿಯ ನುಡಿದಿಹನು ॥೧೧೦॥

ಘೋರತರ ಕಷ್ಟಗಳು ಮುತ್ತುತಿರೆ ನಿಜಪತಿಯು
ಸತಿಯನ್ನು ತೊರೆಯುತಿರೆ ನಿಜಪತಿಯು ಕೋಪಿಸದೆ
ಪತಿಯನ್ನು ಪ್ರೀತಿಸುತ ನೆನೆಯುತಲಿ ವಾಸಿಪುದು
ಪತಿವ್ರತೆಗೆ ಶ್ರೇಯವದು ಯೋಗ್ಯಮದು ಎಂದಿಹನು ॥೧೧೧॥

ಈ ತೆರನ ಬಾಹುಕನ ನುಡಿಗಳನು ಕೇಳುತಲಿ
ನಾನಿಲ್ಲಿ ಬಂದಿಹೆನು ಎನ್ನುತಲಿ ಪರ್ಣಾದ
ನುಡಿಯುತಿರೆ ದಮಯಂತಿ ಎನ್ನಯಾ ನುಡಿಗಳಿಗೆ
ಬಾಹುಕನು ಉತ್ತರವ ನಿತ್ತಿಹನು ಎನ್ನುತಲಿ ॥೧೧೨॥

**ದಮಯಂತಿ ಸ್ವಯಂವರ ತಂತ್ರದಲಿ ಪುನರಪಿಯು ।**
**ಪತಿಯನ್ನು ನಳನೃಪನ ಪಡೆಯುತಲಿ ನಲಿದಿಹಳು ॥**

ಮನದೊಳಗೆ ಯೋಚಿಸುತ ಉಪಾಯವ ಹುಡುಕುತಲಿ
ಸುದೇವನನು ಕರೆಸುತಲಿ ಗುಪಿತದಲಿ ನುಡಿದಿಹನು
ಋತುಪರ್ಣ ಭೂಪತಿಯ ಬಳಿಯಲ್ಲಿ ಸಾಗುತಲಿ
ನಾಳೆಯೇ ದಮಯಂತಿ ಸ್ವಯಂವರವು ನಡೆಯುವದು ॥೧೧೩॥

ಅಗಣಿತದ ದೇಶಗಳ ನೃಪರುಗಳು ಬರುತಿಹರು
ತಪ್ಪದೆಯೆ ಬಹುದೆಂದು ತಿಳಿಸುವುದು ಎನ್ನುತಲಿ
ಸುದೇವನನು ಅಟ್ಟುತಿರೆ ಅಯೋಧ್ಯೆಯಾ ನಗರಕ್ಕೆ
ಐತಂದು ಋತುಪರ್ಣ ಧರಣಿಪಗೆ ನುಡಿದಿಹನು ॥೧೧೪॥

ಧರಣಿಪನೆ ನಾಳೆಯೇ ವಿಧರ್ಭ ದೇಶದಾ
ಭೀಮ ದೊರೆಯಾತ್ಮಜಳ ದಮಯಂತಿ ಸುಂದರಿಯ
ಸ್ವಯಂವರ ಜರುಗುವುದು ಆಮಂತ್ರಣಿತ್ತಿಹರು
ತಾವುಗಳು ತಪ್ಪದೇ ಬಹುದೆಂದು ನುಡಿದಿಹನು ॥೧೧೫॥

ಆಲಿಸುತ ಋತುಪರ್ಣ ನಾಳೆಯೇ ಸ್ವಯಂವರವು
ಅತಿದೂರವಿರುತಿರುವ ವಿಧರ್ಭದಾ ದೇಶವನು
ನಾಳೆಯೇ ತಲುಪುವುದು ಸಾಧ್ಯವೇ ಎನ್ನುತಲಿ
ಮನದೊಳಗೆ ಚಿಂತಿಸುತ ಯೋಚನೆಯಗೈದಿಹನು ॥೧೧೬॥

ಬಾಹುಕನು ಅತಿನಿಪುಣ ಅಶ್ವಪತಿ ಸಾರಥಿಯು
ಇದುಸಾಧ್ಯವೆನ್ನುತಲಿ ಬಾಹುಕನ ಕರೆಸುತಲಿ
ನಾಳೆಯೇ ದಮಯಂತಿ ಸ್ವಯಂವರವು ಜರಗುವುದು
ವಿಧರ್ಭದಾ ದೇಶಕ್ಕೆ ಈಗಲೇ ಹೊರಡುತಲಿ ॥೧೧೭॥

ನಾಳೆಯಾ ಬೆಳಗಿನಲಿ ವಿಧರ್ಭವ ತಲುಪುವುದು
ಬೇಗನೇ ರಥವನ್ನು ತಡಮಾಡದೆ ನುಡಿಯುತಿರೆ
ನಳವರನು ಕೇಳುತಲಿ ದಿಗ್ಭ್ರಾಂತನಾಗುತಲಿ
ಮನದೊಳಗೆ ಕಳವಳದಿ ಚಿಂತೆಯನು ಮಾಡಿಹನು ॥೧೧೮॥

ನಾ ತೊರೆದು ಬಂದಿರುವ ಕಾರಣದಿ ದಮಯಂತಿ
ಈ ಪರಿಯ ತಂತ್ರವನು ನಾಟಕವ ರಚಿಸಿಹಳು
ಪ್ರತ್ಯಕ್ಷ ತೆರಳುತಲಿ ಅರಿಯುವುದು ಎನ್ನುತಲಿ
ಅಶ್ವವನು ಹುಡುಕುತಲಿ ರಥವನ್ನು ತಂದಿಹನು ॥೮೧೯॥

ತುರಗವನು ನೋಡುತಲಿ ಋತುಪರ್ಣ ಇದು ಎಂಥ
ಸೊರಗಿರುವ ಕುದುರೆಯನು ತಂದಿರುವೆ ಎನ್ನುತಿರೆ
ಹತ್ತು ಸುಳಿ ಇರುತಿರುವ ಅಶ್ವವಿದು ಉತ್ತಮವು
ಅತಿವೇಗ ಚಲಿಸುವುದು ನಾಳೆಯೇ ತಲುಪುವೆವು ॥೮೨೦॥

ಎನ್ನುತಲಿ ಕುದುರೆಯಾ ಅಂಗದಲಿ ಇರುತಿರುವ
ಸುಳಿಗಳನು ಹತ್ತನ್ನು ಬಾಹುಕನು ತೋರಿಸಲು
ಅಶ್ವಗಳ ಪರಿಣತನು ಈತನಿಹ ಎನ್ನುತಲಿ
ಋತುಪರ್ಣ ರಥವೇರಿ ಪಯಣವನು ಬೆಳೆಸಿದನು ॥೮೨೧॥

ಕಡಿವಾಣ ಜಗ್ಗುತಲಿ ಬಿಡುತಲಿರೆ ಅಶ್ವಗಳು
ಕುಣಿಕುಣಿದು ಹೂಂಕೃತಿಯ ಗೈಯ್ಯುತಲಿ ನೆಗೆಯುತಿರೆ
ಖುರಪುಟದ ತುಳಿತಕ್ಕೆ ಕೆಂಧೂಳಿ ಅಡರುತಿರೆ
ಪುರದ ಹೊರವಳಯದಲಿ ರಥ ಶೀಘ್ರ ಬಂದಿಹುದು ॥೮೨೨॥

ಕುದುರೆಗಳ ಚಪ್ಪರಿಸಿ ರಥವನ್ನು ಬಿಡುತಲಿರೆ
ಮೇಲಕ್ಕೆ ಏರುತಲಿ ಗಗನದಾ ಮಾರ್ಗದಲಿ
ಭರದಲ್ಲಿ ವಾಯುವಿನ ವೇಗದಲಿ ಚಲಿಸುತಿರೆ
ನೋಡುತಲಿ ಋತುಪರ್ಣ ಆಶ್ಚರ್ಯಗೊಂಡಿಹನು ॥೮೨೩॥

ಇವನಿಂದ್ರ ಸಾರಥಿಯೊ ಮಾತಲಿಯು ಇರುತಿಹನೊ
ಇಲ್ಲವೇ ಖ್ಯಾತನಿಹ ಆ ಶಾಲಿಹೋತ್ರನೊ
ಅಶ್ವದಾ ವಿದ್ಯೆಯಲಿ ನಿಪುಣನಿಹ ನಳನೃಪನೊ
ಎನ್ನುತಲಿ ಋತುಪರ್ಣ ಯೋಚನೆಯ ಗೈದಿಹನು ॥೮೨೪॥

ನಳದೊರೆಯು ಇವನಲ್ಲ ಕಠ್ರನೆ ಕುರೂಪಿಯಿಹ
ನಲವರನು ಸುಂದರನು ಅತಿಚೆಲುವ ಸುರೂಪಿಯು
ನಳನಪರಿ ರಥವನ್ನು ವೇಗದಲಿ ನಡೆಸುವೀ
ಸಾರಥಿಯು ನಳನಿಹನೆ ಎಂದಿಹನು ಮನದೊಳಗೆ ॥೮೨೫॥

ಕೆಳಗಡೆಗೆ ಭೂಪಟದಿ ಚಿತ್ರಿಸಿದ ಪರಿಯಲ್ಲಿ
ಸೊಗಸುತಿಹ ಗಿರಿಗಳನು ತೊರೆಗಳ ಮರಗಳನು
ದಾಂಟುತಲಿ ಗಗನದಲಿ ರಥವದುವೆ ಸಾಗುತಿರೆ
ಋತುಪರ್ಣ ಹೊದೆದಿರುವ ವಸ್ತ್ರವದು ಬೀಳುತಿರೆ ॥೮೨೬॥

ಬಾಹುಕನೆ ರಥವನ್ನು ನಿಲ್ಲಿಪುದು ಈ ಕ್ಷಣದಿ
ಎನ್ನಯಾ ವಸ್ತ್ರವದು ಕೆಳಗಡೆಗೆ ಬಿದ್ದಿಹುದು
ಸೇವಕನು ಸಾಗುತಲಿ ತಹನೆಂದು ನುಡಿಯುತಿರೆ
ನಿಮಿಷದಲಿ ನೂರಾರು ಯೋಜನವ ಬಂದಿಹೆವು ॥೮೨೭॥

ವಸ್ತ್ರವನು ತರುವದದು ದುಸ್ಸಾಧ್ಯವೆನ್ನುತಿರೆ
ಋತುಪರ್ಣ ಬೆರಗಾಗಿ ರಥವನ್ನು ನಡೆಸುವಾ
ನಿನ್ನಯಾ ಕೌಶಲವ ಅಶ್ವದಾ ವಿದ್ಯೆಯನು
ಮೆಚ್ಚಿದೆನು ಎನ್ನುತಲಿ ನುಡಿದಿಹನು ಋತುಪರ್ಣ ॥೮೨೮॥

ಹಯವಿದ್ಯೆ ಪರಿಣತನು ನೀನಿರುವ ಪರಿಯಲ್ಲಿ
ಸಂಖ್ಯೆಯಾ ಶಾಸ್ತ್ರದಲಿ ಕುಶಲಮತಿ ನಾನಿಹೆನು
ಅದೊ ಅಲ್ಲಿ ಕಾಣುತಿಹ ವಿಭೀತಕ ತರುವಿನಲಿ
ಎಲೆ ಎಷ್ಟು ಫಲವೆಷ್ಟು ಸಂಖ್ಯೆಯನು ಹೇಳುವೆನು ॥೮೨೯॥

ಪೂರ್ವದಾ ಶಾಖೆಯಲಿ ಕೋಟ್ಯೆದು ಎಲೆಗಳಿವೆ
ಆರ್ನೂರು ಫಲಗಳಿವೆ ಪಶ್ಚಿಮದ ಟೊಂಗೆಯಲಿ
ಮೂಕೋಟಿ ಎಲೆಗಳಿವ ನೂರೈಮ ಫಲಗಳಿವೆ
ಎನ್ನುತಲಿ ಋತುಪರ್ಣ ಸಂಖ್ಯೆಗಳ ತಿಳಿಸಿಹನು ॥೮೩೦॥

ಎಲೆಗಳನು ಎಣಿಸುವುದು ಅತಿಕಷ್ಟವಿರುತಿರುಹುದು
ಫಲಗಳನು ಎಣಿಸುವುದು ಅತಿಸುಲಭವೆನ್ನುತಲಿ
ಬಾಹುಕನು ಹಣ್ಣುಗಳ ನೊಂದೊಂದನೆಣಿಸುತಿರೆ
ಸರಿಯಾದ ಸಂಖ್ಯೆಯಲಿ ಕಾಣುತಲಿ ಬೆರಗಾದ ॥೮೩೧॥

ಗಣಿತದಾ ಶಾಸ್ತ್ರದಲಿ ಪರಿಣತನು ನಾನಿಹೆನು
ಅಕ್ಷದಾ ವಿದ್ಯೆಯಲಿ ಅತಿನಿಪುಣನೆನಿಸಿಹೆನು
ಎನ್ನುತಲಿ ಋತುಪರ್ಣ ನುಡಿಯುತಿರೆ ಬಾಹುಕನು
ನಿನ್ನಯಾ ಗಣಿತವನು ಮೆಚ್ಚಿಹೆನು ಎಂದಿಹನು ॥೮೩೨॥

ಸಂಖ್ಯೆಯಾ ಶಾಸ್ತ್ರವನು ಅಕ್ಷದಾ ವಿದ್ಯೆಯನು
ಅರಿಯಲಿಕೆ ಆಶೆಯದು ಹಂಬಲವು ಎನಗಿಹುದು
ನೀನೆಗೆ ಕಲಿಸಿದೊಡೆ ಹಯವಿದ್ಯೆ ಗೂಢವನು
ನಾ ನಿನಗೆ ಕಲಿಸುವೆನು ಎಂದಿಹನು ಬಾಹುಕನು ॥೮೩೩॥

ಋತುಪರ್ಣ ಸಮ್ಮತಿಸಿ ಲೆತ್ತದಾ ವಿದ್ಯೆಯನು
ಗುಟ್ಟನ್ನು ಕಲಿಸುತಿರೆ ಬಾಹುಕನ ದೇಹದಲಿ
ಸೇರಿರುವ ಖಳಕಲಿಯು ಕರ್ಕೋಟ ವಿಷಸಹಿತ
ತಳಮಳಿಸಿ ವಾಂತಿಯಲಿ ಕಾರುತಲಿ ಹೊರಬಂದ ॥೮೩೪॥

ನಳವರನು ಕೋಪದಲಿ ಕಲಿಯನ್ನು ನೋಡುತಲಿ
ಎನಗತುಳ ತಾಪವನು ಕಷ್ಟಗಳ ಕೊಟ್ಟಿರುವ
ನಿನಗೀಗ ಶಾಪವನು ಈಯುವೆನು ಎನ್ನುತಲಿ
ನುಡಿಯುತಿರೆ ಖಳಕಲಿಯ ನಡುಗುತಲಿ ಪ್ರಾರ್ಥಿಸಿದ ॥೮೩೫॥

ನೃಪನಳನೆ ಕ್ಷಮಿಸುವುದು ಅಪರಾಧ ಮರೆಯುವುದು
ನಿನಗೊಳ್ಳಿತುಪಕಾರ ಕಾರ್ಯವನು ಮಾಡುವೆನು
ನಿನ್ನಯಾ ಕಥೆಯನ್ನು ಆಲಿಸುವ ನರನನ್ನು
ನಾನೆಂದು ಮುಟ್ಟದಿಹೆ ಕಷ್ಟಗಳ ಕೊಡೆನೆಂದ ॥೮೩೬॥

ನಿನ್ನಕಥೆ ಪುಣ್ಯಕಥೆ ಸುಚರಿತೆಯು ಎನಿಸುತಲಿ
ಭವದುರಿತ ಕಷ್ಟಗಳ ಪಾಪಗಳ ಕಳೆಯುತಲಿ
ಇಹದಲ್ಲಿ ಸೌಖ್ಯವನು ಪರದಲ್ಲಿ ಸದ್ಗತಿಯ
ಈಯುವನು ಎನ್ನುತಲಿ ಖಳಕಲಿಯು ನುಡಿದಿಹನು ॥೮೩೭॥

ಆ ಚಂದ್ರ ಸೂರ್ಯರಾ ಪರ್ಯಂತ ನಿನ್ನಯಾ
ಕೀರ್ತಿಯದು ಬೆಳಗುವುದು ಎನ್ನುತಲಿ ಖಳಕಲಿಯು
ನಳನೃಪನ ಕ್ರೋಧವನು ಶಮನವನು ಗೊಳಿಸುತಲಿ
ಎದುರಿಗಿಹ ವಿಭೀತಕ ತರುವಿನಲಿ ಅಡಗಿವನು ॥೮೩೮॥

ಕಾರ್ಕೋಟಕಾ ವಿಷವು ಖಳಕಲಿಯು
ನಳವರನ ದೇಹವನು ತ್ಯಜಿಸಿದೊಡೆ ಸಹಿತವೂ
ನಳನೃಪನ ದೇಹವದು ಕಪ್ಪನೆ ಕಪ್ಪಾಗಿ
ಕುಂದುತಲಿ ಕುರೂಪದಿ ತೋರುತಲಿ ಇರ್ದಿಹನು ॥೮೩೯॥

ಋತುಪರ್ಣನರಿಯದಾ ಪರಿಯಲ್ಲಿ ಈ ಘಟನೆ
ನಿಮಿಷದಲಿ ನಡೆಯುತಲಿ ಬಾಹುಕನು ರಥವನ್ನು
ಗಗನದಲಿ ವೇಗದಲಿ ಸಾಗಿಸುತ ಬೆಳಗಿನಲಿ
ವಿದರ್ಭದಾ ಹೊರವಲಯ ಕೊಳದೆಡೆಯ ತಲುಪಿದನು ॥೮೪೦॥

ಕುಂಡಿನಾಪುರ ಜನರು ಋತುಪರ್ಣನಾಗಮನ
ವಾರ್ತೆಯನು ಭೀಮದೊರೆಗರುಹುತಿರೆ ತೀವ್ರದಲಿ
ಆನೆಗಳ ಅಂಬಾರಿ ವಾದ್ಯಗಳ ವೈಭವದಿ
ಋತುಪರ್ಣನಾದರದಿ ಸ್ವಾಗತವ ಮಾಡಿಹನು ॥೮೪೧॥

ಪುರದೊಳಗೆ ರಾಜಪಥ ಮಧ್ಯದಲಿ ಬರುತಲಿರೆ
ತಳಿರುಗಳ ತೋರಣ ಪತಾಕೆಗಳ ಸೊಗಸಿನಲಿ
ಸ್ವಯಂವರ ಮಂಟಪದ ವೇದಿಕೆಯ ಬೆಡಗಿನಲಿ
ನೃಪರುಗಳ ಸುಳಿವನ್ನು ಕಾಣದಲೆ ಬೆರಗಾದ ॥೮೪೨॥

ಅರಮನೆಯ ಎದುರಿನಲಿ ಅಂಗಣದಿ ರಥಬರಲು
ದಮಯಂತಿ ನಳನನ್ನು ನೋಡುವಾ ಆತುರದಿ
ನೋಡುತಿರೆ ಋತುಪರ್ಣ ವಾರ್ಷ್ಣೇಯ ಸಾರಥಿಯ
ಕಾಣುತಲಿ ನಳನನ್ನು ನೋಡದಲೆ ನೊಂದಿಹಳು ॥೮೪೩॥

ಭೀಮನೃಪ ಋತುಪರ್ಣ ದೊರೆಯನ್ನು ಸತ್ಕರಿಸಿ
ತಮ್ಮಯಾ ಆಗಮನ ವಿಷಯವನು ಮೊದಲಿಂಗೆ
ತಿಳಿಸುತಲಿ ಇರ್ದೊಡೆಯು ಹೆಚ್ಚಿನಾ ವೈಭವದಿ
ಸತ್ಕಾರ ಗೈಯ್ಯುತಲಿ ಇರ್ದಿಹೆನು ಎಂದಿಹನು ॥೮೪೪॥

ರಾಜ್ಯದಾ ವಿಧವಿಧದ ಹಲವಾರು ಕಾರ್ಯಗಳ
ಗೈಯ್ಯುತಲಿ ದಣಿಯುತಿರೆ ಬೇಸರವ ನೀಗಲಿಕೆ
ಕೆಲವು ದಿನ ವಿಶ್ರಾಂತಿಗೋಸುಗವೆ ಭರದಲ್ಲಿ
ಬಂದಿಹೆನು ಎಂದಿಹನು ಋತುಪರ್ಣ ಭೂಪತಿಯು ॥೮೪೫॥

ಋತುಪರ್ಣ ತನ್ನಯ ಬಿಡಾರಕ್ಕೆ ತೆರಳುತಲಿ
ಮಜ್ಜನದಿ ಭೋಜನದಿ ವಿಶ್ರಾಂತಿ ಗೈಯ್ಯುತಿರೆ
ಬಾಹುಕನು ಹಯಗಳನು ಹಯಶಾಲೆಗಟ್ಟುತಲಿ
ವಿಶ್ರಾಂತಿ ಕೊಳ್ಳಲಿಕೆ ನಿದ್ರೆಯಲಿ ಒರಗಿಹನು ॥೮೪೬॥

ಇತ್ತಲಾ ದಮಯಂತಿ ಕುರೂಪಿಯಾ ಸಾರಥಿಯು
ಖಚಿತದಲಿ ನಳನಲ್ಲ ಸುರತೇಜ ಸುಂದರನು
ಎನ್ನಯಾ ಪತಿವರನು ಅವನಿಂಗೆ ಈ ಪರಿಯ
ಕುರೂಪವು ಎಲ್ಲಿಹುದು ಎನ್ನುತಲಿ ಯೋಚಿಸುತ ॥೮೪೭॥

ನಳನೃಪನ ವಿಷಯವನು ಅರಿಯಲೇ ಬೇಕೆಂದು
ನಿರ್ಧಾರಗೈಯ್ಯುತಲಿ ತನ್ನಯಾ ಜೀವದಾ
ಗೆಳತಿಯನು ಕೇಶಿನಿಯ ಭರದಲ್ಲಿ ಕರೆಸುತಲಿ
ಋತುಪರ್ಣ ಭೂಪತಿಯ ಸಾರಥಿಯ ಬಳಿಯಲ್ಲಿ ॥೮೪೮॥

ತೆರಳುತಲಿ ಎನ್ನಯಾ ಕಷ್ಟದಾ ಕಥೆಯನ್ನು
ವಿಸ್ತರದಿ ಪೇಳುತಲಿ ಅಯೋಧ್ಯೆಯಾ ಪಟ್ಟಣವ
ಬಿಟ್ಟಿರುವ ಸಮಯವನು ತಾವಿಲ್ಲಿ ಬಂದಿರುವ
ಕಾರಣವ ತಿಳಿಸುವುದು ಎನ್ನುತಲಿ ಕೇಳುತಲಿ ॥೮೪೯॥

ಅರಿಯುತಲಿ ನೀ ಬಂದು ಎನಗೊರೆವುದೆನ್ನುತಲಿ
ಕಳುಹುತಿರೆ ಕೇಶಿನಿಯು ಭರದಲ್ಲಿ ಐತಂದು
ಸಾರಥಿಯೆ ಶ್ರೇಷ್ಠನೆ ವಿದರ್ಭದಾ ರಾಜಸುತೆ
ಎನ್ನನ್ನು ಕಳುಹಿದೊಡೆ ನಿಮ್ಮಲ್ಲಿ ಬಂದಿಹೆನು ॥೮೫೦॥

ಅಯೋಧ್ಯೆಯನು ಬಿಟ್ಟಿರುವ ಕಾಲವನು ಮತ್ತೆಯು
ನೀವೆಮ್ಮ ನಗರಕ್ಕೆ ಬಂದಿರುವ ಕಾರಣವ
ಹೇಳುವುದು ಎನ್ನುತಲಿ ನುಡಿಯುತಿರೆ ಕೇಶಿನಿಯು
ನಳನೃಪನು ನುಡಿದಿಹನು ಮನದೊಳಗೆ ನಲಿಯುತಲಿ ॥೮೫೧॥

ನೃಪಸುತೆಯು ವೈತ್ರಿಣಿಯೆ ಕೇಳುವುದು ವಿಪ್ರೋರ್ವ
ನಿನ್ನೆಯೇ ಐತಂದು ನಾಳೆಯೇ ವಿಧರ್ಭದಾ
ರಾಜಸುತೆ ದಮಯಂತಿ ಸ್ವಯಂವರ ನಡೆಯುವದು
ತಾವುಗಳು ಬಹುದೆಂದು ಋತುಪರ್ಣಗುಸುರಿದನು ॥೮೫೨॥

ಬಾಹುಕನು ಎಂಬುವಾ ಸಾರಥಿಯು ನಾನಿಹೆನು
ಎನ್ನನ್ನು ಕರೆಯುತಲಿ ನಾಳೆಯೇ ಬೆಳಗಿನಲಿ
ವಿಧರ್ಭವನು ತಲುಪುವುದು ಬೇಗನೇ ರಥವನ್ನು
ತಹುದೆಂದು ಋತುಪರ್ಣ ಆಜ್ಞೆಯನು ಈಯುತಿರೆ ॥೮೫೩॥

ತಕ್ಷಣದಿ ರಥವನ್ನು ಸಿದ್ಧತೆಯಗೊಳಿಸುತಲಿ
ನೂರಾರು ಯೋಜನದ ದಾರಿಯನು ಕ್ರಮಿಸುತಲಿ
ಬೆಳಗಿನಲಿ ಇಂದಿನಲಿ ವಿಧರ್ಭವನು ತಲುಪಿದೆವು
ಎನ್ನುತಲಿ ನುಡಿಯುತಿರೆ ಕೇಶಿನಿಯು ನುಡಿದಿಹಳು ॥೮೫೪॥

ನೀನೆಂದು ಋತುಪರ್ಣ ನೃಪನಿಂಗೆ ಸಾರಥಿಯು
ಆಗಿರುವೆ ಎನ್ನುತಲಿ ಕೇಶಿನಿಯು ಕೇಳುತಿರೆ
ನಳದೊರೆಯು ರಾಜ್ಯವನು ತೊರೆಯುತಲಿ ತೆರಳುತಿರೆ
ನಳನೃಪನ ಸಾರಥಿಯು ವಾರ್ಷ್ಣೇಯ ನೆಂಬುವನು ॥೮೫೫॥

ಋತುಪರ್ಣ ಭೂಪತಿಯ ಆಶ್ರಯವ ಪಡೆಯುತಲಿ
ಸಾರಥಿಯ ಕಾರ್ಯವನು ಮಾಡುತಲಿ ಇರ್ದಿಹನು
ಎನ್ನಯಾ ಹಯವಿದ್ಯೆಯರಿಯುತಲಿ ಋತುಪರ್ಣ
ಎನ್ನನ್ನು ತನ್ನಯಾ ಸಾರಥಿಯ ಮಾಡಿಹನು ॥೮೫೬॥

ಪಾಕದಾ ಶಾಸ್ತ್ರದಲಿ ಅತಿನಿಪುಣ ನಾನಿಹೆನು
ದಿನನಿತ್ಯ ಪಾಕವನು ಗೈಯ್ಯಲಿಕೆ ನಿಯಮಿಸಿಹ
ನಾಗೈದ ಪಾಕವನು ಋತುಪರ್ಣ ಸೇವಿಪನು
ಎನ್ನುತಿರೆ ಬಾಹುಕನು ಕೇಶಿನಿಯು ನುಡಿದಿಪಳು ॥೮೫೭॥

ಬಾಹುಕನೆ ನಲನೃಪನು ಎಲ್ಲಿಹನು ಹೇಗಿಹನು
ಎಂಬುವಾ ವಿಷಯವನು ವಾರ್ಷ್ಣೇಯನರಿತೊಡೆಯು
ನಿನಗರಿವು ಇರ್ದೊಡೆಯು ತಿಳುಹುವುದು ಎನ್ನುತಲಿ
ಕೇಶಿನಿಯು ಉಸುರುತಿರೆ ಬಾಹುಕನು ನುಡಿದಿಹನು ॥೮೫೮॥

ನಳವರನ ವೃತ್ತಾಂತ ವಾರ್ಷ್ಣೇಯನರಿಯದಿಹ
ಆರಿಗೂ ತಿಳಿಸದಲೆ ಗೂಢದಲಿ ತೆರಳಿದನು
ಜೀವಂತ ಇರುತಿಹನೋ ಇಲ್ಲವೋ ಎಂಬುದನು
ಖಚಿತದಲಿ ಹೇಳಲಿಕೆ ಆಗದದು ಎಂದಿಹನು ॥೮೫೯॥

ತನ್ನನ್ನು ಗುರುತಿಸದ ಪರಿಯಲ್ಲಿ ಗುಪಿತದಲಿ
ವೇಷವನು ಬದಲಿಸುತ ಬೇರೆಯಾ ರೂಪದಲಿ
ಆರಿಗೂ ತನ್ನಯಾ ನಿಜವನ್ನು ತಿಳಿಸದಲೆ
ಚರಿಸುತಿಹ ಎನ್ನುತಲಿ ಬಾಹುಕನು ನುಡಿದಿಹನು ॥೮೬೦॥

ಬಾಹುಕನೆ ಮುನ್ನಿನಲಿ ಪರ್ಣಾದ ಭೂಸುರನು
ಅರಮನೆಯ ಬಳಿಯಲ್ಲಿ ಬಂದಾಗ ನೀ ಪೇಳ್ದ
ನುಡಿಗಳನು ಪೇಳುವುದು ಎನ್ನುತಲಿ ಕೇಶಿನಿಯು
ನುಡಿಯುತಿರೆ ಬಾಹುಕನ ಮುಖತೇಜ ಕುಂದಿಹುದು ॥೮೬೧॥

ಪರ್ಣಾದಗುಸುರಿರುವ ನುಡಿಗಳನು ನೆನೆಯುತಲಿ
ಬಾಹುಕನ ಹೃದಯದಲಿ ದಮಯಂತಿ ಸುವ್ರತೆಯ
ರೂಪವದು ಮೂಡುತಲಿ ದುಃಖವದು ಉಕ್ಕುತಲಿ
ಕಂಗಳಲಿ ಅಶ್ರುಗಳ ಧಾರೆಯನು ಸುರಿದಿಹನು ॥೮೬೨॥

ಕಂಠವದು ಬಿಗಿಯುತಲಿ ಮುಖದಿಂದ ಮಾತುಗಳು
ಹೊರಡದಲೆ ಬಾಹುಕನು ಮೌನದಲಿ ಇರುತಿರಲು
ಕೇಶಿನಿಯು ಸಾಗುತಲಿ ಬಾಹುಕನ ವಿಷಯವನ
ಕಂಬನಿಯ ಸುರಿಸಿದುದ ದಮಯಂತಿಗರುಹಿದಳು ॥೮೬೩॥

ಸಾವಿರದ ಯೋಜನವ ಅತ್ಯಲ್ಪ ಸಮಯದಲಿ
ಕ್ರಮಿಸುವಾ ಕೌಶಲವು ನಳಗೊಬ್ಬಗಿರುತಿಹುದು
ಅನ್ಯರಿಗೆ ಇಲ್ಲೆಂದು ಭಾವಿಸುತ ದಮಯಂತಿ
ಬಾಹುಕನು ನಳನೆಂದು ನಿಶ್ಚಯವ ಮಾಡಿಹಳು ॥೮೬೪॥

ಕೇಶಿನಿಯೆ ಬಾಹುಕನೆ ಪಾಕವನು ಗೈಯ್ಯಲಿಕೆ
ಅಕ್ಕಿಯನು ಬೇಳೆಯನು ಗೋದಿಯನು ಕಡಲೆಯನು
ಆಹಾರ ಸಾಮಗ್ರಿ ಬೆಂಕಿಯನು ನೀರನ್ನು
ಪಾತ್ರೆಗಳನುರುವಲವ ಆವುದನು ಈಯದಿರು ॥೮೬೫॥

ಅಡಿಗೆಯನು ಅವನೆಂತು ಮಾಡುವನು ಎಂಬುದನು
ಅವನಲ್ಲಿ ಮಾನವರ್ಗೆ ಮಿಗಿಲಾದ ಶಕ್ತಿಯದು
ಇರ್ದೊಡೆಯು ಕಂಡೊಡೆಯು ಪರಿಕಿಸುತ ಅರಿಯುತಲಿ
ತಿಳಿಸುವುದು ಎನ್ನುತಲಿ ಕೇಶಿನಿಯ ಕಳುಹಿದಳು ॥೮೬೬॥

ಬಾಹುಕನು ಅಹಾರ ವಸ್ತುಗಳ ಕೇಳುತಿರೆ
ಕೇಶಿನಿಯು ಕೇಳುತಲಿ ಕೇಳದಾ ಪರಿಯಲ್ಲಿ
ಮೌನದಲಿ ನಿಲ್ಲುತಿರೆ ಅಕ್ಕಿಗಳ ಬೇಳೆಗಳ
ಧಾನ್ಯಗಳ ಚೀಲಗಳ ನಿಕರಗಳು ನಿಂದಿಹವು ॥೮೬೭॥

ನೀರನ್ನು ಬೆಂಕಿಯನು ಕೇಳುತಿರೆ ಬಾಹುಕನು
ಕೇಶಿನಿಯು ಈಯದಲೆ ಸುಮ್ಮನೇ ನಿಲ್ಲುತಿರೆ
ನೆಲದಿಂದ ನೀರಿನಾ ಬುಗ್ಗೆಯದು ಆಕ್ಷಣದಿ
ಚಿಮ್ಮುತಲಿ ಪಾತ್ರೆಗಳನೆಲ್ಲವನು ತುಂಬಿದವು ॥೮೬೮॥

ಕಟ್ಟಿಗೆಯ ತುಂಡುಗಳು ಒಲೆಯೊಳಗೆ ಸೇರುತಲಿ
ಜ್ವಾಲೆಯದು ಹೊತ್ತುತಲಿ ಧಗಧಗನೆ ಉರಿದಿಹುದು
ಬಾಹುಕನು ಷಡ್ರಸದ ಪಕ್ವಾನ್ನಗೈಯ್ಯುತಲಿ
ಋತುಪರ್ಣ ಭೂಪತಿಗೆ ಭೋಜನವ ಕಳುಹಿದನು ॥೮೬೯॥

ಕೇಶಿನಿಯು ನೋಡುತಲಿ ಅಚ್ಚರಿಯಗೊಳ್ಳುತಲಿ
ಓಡುತಲಿ ದಮಯಂತಿಗುಸುರಿದಳು ಕೌತುಕವ
ಬಾಹುಕಗೆ ನೀರನ್ನು ನಾಕೊಡದೆ ನಿಂದಿರಲು
ನೀರಿನಾ ಕಾರಂಜಿ ನೆಲದಿಂದ ಪುಟಿದಿಹುದು ॥೮೭೦॥

ಬೆಂಕಿಯನು ಕೊಡದಿರಲು ಬಾಹುಕನು ಕಟ್ಟಿಗೆಯ
ತುಂಡನ್ನು ಸುಮ್ಮನೇ ಕಣ್ಣಿಂದ ನೋಡುತಿರೆ
ಅಗ್ನಿಯದು ಹೊತ್ತುತಲಿ ಧಗಧಗನೆ ಉರಿಯುತಿರೆ
ಬಾಹುಕನು ಪಾಕವನು ಗೈದಿಹನು ನಿಮಿಷದಲಿ ॥೮೭೧॥

ದಮಯಂತಿ ಆಲಿಸುತ ಸಂತಸದಿ ಕೇಶಿನಿಗೆ
ಬಾಹುಕನು ಗೈದಿರುವ ಪಾಕವನು ತಹುದೆಂದು
ನುಡಿಯುತಿರೆ ಬಾಹುಕನು ಗೈದಿರುವ ಅಡಿಗೆಯನು
ಕೊಳ್ಳುತಲಿ ಈಯುತಿರೆ ದಮಯಂತಿ ಸವಿಯುತಲಿ ॥೮೭೨॥

ಇದು ನಳನು ಗೈದಿರುವ ಪಾಕವಿದೆ ಖಚಿತದಲಿ
ಇಷ್ಟುರುಚಿ ಅಡಿಗೆಯನು ಮಾಡಲಿಕೆ ಅನ್ಯರಿಗೆ
ಆರಿಗೂ ಆಗದದು ನಳಗೈದ ಪಾಕದಾ
ಪರಿಯಲ್ಲಿ ಇರುತಿಹುದು ಬಾಹುಕನು ನಳನಿಹನು ॥೮೭೩॥

ನಳನಿಂಗೆ ಕಪ್ಪಾದ ದೇಹವದು ಏಕಿಹುದು
ತಿಳಿಯದದು ಅಚ್ಚರಿಯು ಎನ್ನುತಲಿ ಪರಕಿಸಲು
ತನ್ನಯಾ ಮಕ್ಕಳನು ಕೇಶಿನಿಯ ಜೊತೆಯಲ್ಲಿ
ಬಾಹುಕನ ಬಳಿಯಲ್ಲಿ ದಮಯಂತಿ ಕಳುಹಿದಳು ॥೮೭೪॥

ಮಕ್ಕಳನು ಕಾಣುತಲಿ ದುಃಖದಾ ಸಾಗರವು
ಉಕ್ಕುತಲಿ ಹರಿದಂತೆ ಕಂಬನಿಯು ಸುರಿಸುತಲಿ
ಮಕ್ಕಳುಗಳಪ್ಪುತಲಿ ಮಕ್ಕಳಾ ಪರಿಯಲ್ಲಿ
ನಳನೃಪನು ಅತ್ತಿಹನು ನೋಯುತಲಿ ನವೆಯುತಲಿ ॥೮೭೫॥

ಕೇಶಿನಿಯು ತೆರಳುತಲಿ ಬಾಹುಕನು ಮಕ್ಕಳನು
ಕಾಣುತಲಿ ಅಪ್ಪುತಲಿ ಅತ್ತಿಹನು ಎನ್ನುತಲಿ
ದಮಯಂತಿಗುಸುರುತಿರೆ ತಂದೆಯಾ ಅಪ್ಪಣೆಯ
ಪಡೆಯುತಲಿ ನಳನೃಪನ ಕರೆಸಿದಳು ಭರದಲ್ಲಿ ॥೮೭೬॥

ಬಾಹುಕನು ಬರುತಲಿರೆ ದಮಯಂತಿ ನೋಡುತಲಿ
ಖಚಿತದಲಿ ನಳನಿವನು ಸಂಶಯವು ಏನಿಲ್ಲ
ಈ ಪರಿಯು ಕಪ್ಪಾದ ದೇಹವದು ಏತಕ್ಕೆ
ಎನ್ನುತಲಿ ಚಿಂತಿಸುತ ದುಃಖಾಶ್ರು ಸುರಿಸಿದಳು ॥೮೭೭॥

ಬಾಹುಕನೆ ನಳನಿರುವ ಹಯವಿದ್ಯೆ ನಿಪುಣತೆಯು
ಪಾಕದಾ ಪರಿಣತೆಯು ನಿನ್ನಲ್ಲಿ ಇರುತಿಹುದು
ನಿನ್ನಯಾ ಗುಣಗಳನು ಪರಕಿಸುತ ನೀನೆಯೇ
ನಳನೃಪನು ಎಂಬುದನು ಖಚಿತದಲಿ ಅರಿತಿಹೆನು ॥೮೭೮॥

ನಿನಗೇಕೆ ಈ ಪರಿಯ ಹೀನತರ ರೂಪವದು
ಬಂದಿಹುದು ಎಂಬುದನು ವಿಸ್ತರದಿ ಹೇಳುವುದು
ಎನ್ನೊಳಗೆ ತಪ್ಪಿರ್ದೊಡುಸುರುವದು ಕ್ಷಮಿಸುವುದು
ಎನ್ನುತಲಿ ದಮಯಂತಿ ದೈನ್ಯದಲಿ ನುಡಿದಿಹಳು ॥೮೭೯॥

ಸಾಧ್ವೀಶಿರೋಮಣಿಯೆ ದಮಯಂತಿ ಸದ್ಗುಣಿಯೆ
ನಾನೆಯೇ ನಳನಿಹೆನು ನಿನ್ನೊಳಗೆ ತಪ್ಪಿಲ್ಲ
ಕಷ್ಟಗಳ ನೀಯುತಲಿ ನಿನ್ನನ್ನು ತ್ಯಜಿಸುತಲಿ
ತಪ್ಪುಗಳ ಮಾಡಿಹೆನು ಕ್ಷಮಿಸುವುದು ಎಂದಿಹನು ॥೮೮೦॥

ಖಳಕಲಿಯ ಬಾಧೆಯಲಿ ಈರ್ವರೂ ಅಗಲುತಲಿ
ವಿಧವಿಧದ ಕಷ್ಟದಲಿ ತೊಳಲಿದೆವು ಬಳಲಿದೆವು
ದುರುಳಕಲಿ ಈಗೆನ್ನ ತೊರೆಯುತಲಿ ಹೋಗಿಹನು
ಇನ್ನಾವ ದುಃಖಗಳು ನಮಗಿಲ್ಲ ಎಂದಿಹನು ॥೮೮೧॥

ನಿನ್ನಯಾ ಮಾತಿನಲಿ ಮೊದಲಿನಾ ಪ್ರೀತಿ ಇದೆ
ಆದೊಡೆಯು ಸ್ವಯಂವರದ ಸಿದ್ಧತೆಯ ಮಾಡಿಹುದು
ಮನದೊಳಗೆ ಸಂಶಯವ ದುಗುಡವನು ಮೂಡಿಪುದು
ಎನ್ನುತಲಿ ನಳನುಡಿಯ ದಮಯಂತಿ ನುಡಿದಿಹಳು ॥೮೮೨॥

ಪರ್ಣಾದ ದ್ವಿಜ ಬಂದು ಎನ್ನಯಾ ವಿಷಯದಲಿ
ನೀ ನುಡಿದ ನುಡಿಗಳನು ವಿಶದದಲಿ ತಿಳಿಸುತಿರೆ
ನಿಜವಾಗಿ ನೀನೆಯೇ ನಳನಿರುವೆ ಎನ್ನುತಲಿ
ನಿನ್ನನ್ನು ಕರೆತರಲು ಈತಂತ್ರ ಹೂಡಿಹೆನು ॥೮೮೩॥

ಋತುಪರ್ಣ ನೃಪನುಳಿದು ಅನ್ಯರಿಗೆ ಆರಿಗೂ
ರಾಜರಿಗೆ ಆಮಂತ್ರಣೋಲೆಯನು ಕಳಿಸಿಲ್ಲ
ಇದು ಬರಿಯ ನಾಟಕವು ನಿನ್ನಲ್ಲಿ ಎನ್ನಯಾ
ಪ್ರೀತಿಯದು ಅಚಲವಿದೆ ಎನ್ನುತಲಿ ನುಡಿದಿಹಳು ॥೮೮೪॥

ದಮಯಂತಿ ನಿರ್ಮಲಳು ಸಾಧ್ವಿಶಿರೋಮಣಿಯು
ಸುವ್ರತೆ ಪತಿವ್ರತೆಯು ಸುಶೀಲೆಯಿಹಳೆನ್ನುತಲಿ
ಆಕಾಶವಾಣಿಯದು ಆ ಕ್ಷಣದಿ ನುಡಿಯುತಿರೆ
ನಳನೃಪನ ಮನದೊಳಿಹ ಸಂಶಯವು ತೊಲಗಿಹುದು ॥೮೮೫॥

ಕರ್ಕೋಟಕ ಸರ್ಪವನು ನಳನೃಪನು ನೆನೆಯುತಿರೆ
ಮುನ್ನಿನಾ ಸುಂದರದ ಹೊಳೆಹೊಳೆವ ರೂಪವನು
ತಳೆಯುತಲಿ ಬೆಳಗುತಲಿ ದಮಯಂತಿಯಪ್ಪುತಲಿ
ಸಂತಸದ ಸಾಗರದಿ ಈರ್ವರೂ ಮುಳುಗಿದರು ॥೮೮೬॥

ಬಾಹುಕನು ನಳನಿಹನು ಎಂಬುವಾ ವಾರ್ತೆಯದು
ಸೌಧದಲಿ ಬೀದಿಯಲಿ ನಗರದಲಿ ಪಸರುತಿರೆ
ನಳನೃಪನ ದಮಯಂತಿ ಈರ್ವರಾ ಮಿಲನಕ್ಕೆ
ಸಕಲರೂ ಮುದದಿಂದ ಹರ್ಷದಲಿ ನಲಿದಿಹರು ॥೮೮೭॥

ಋತುಪರ್ಣ ಹರುಷದಲಿ ಭರದಿಂದ ಐತಂದು
ನಳದೊರೆಯೆ ನಿನ್ನನ್ನು ಸಾರಥಿಯ ಮಾಡುತಲಿ
ಕಷ್ಟಗಳನಿತ್ತಿಹೆನು ಎನ್ನಯಾ ತಪ್ಪನ್ನು
ಮನ್ನಿಪುದು ಎನ್ನುತಲಿ ನೋಯುತಲಿ ನುಡಿದಿಹನು ॥೮೮೮॥

ನಿನ್ನಲ್ಲಿ ಆವುದುದು ತಪ್ಪಿಲ್ಲ ಭೂಪತಿಯೆ
ಇದು ಎನ್ನ ಪೂರ್ವದಾ ಕರ್ಮಫಲವಿರುತಿಹುದು
ಮುನ್ನಿನಾ ಪರಿಯಲ್ಲಿ ನೀ ಎನ್ನ ಮಿತ್ರನಿಹೆ
ನೋಯದಿರು ಎನ್ನುತಲಿ ನಳನೃಪನು ನುಡಿದಿಹನು ॥೮೮೯॥

ಎನ್ನಯಾ ಹಯವಿದ್ಯೆ ಮರ್ಮವನು ತಿಳಿಸುವೆನು
ಎನ್ನುತಲಿ ಅಶ್ವದಾ ವಿದ್ಯೆಯನು ಕಲಿಸುತಿರೆ
ಋತುಪರ್ಣ ಭೀಮನೃಪನಪ್ಪಣೆಯ ಪಡೆಯುತಲಿ
ನಳನೃಪಗೆ ನಮಿಸುತಲಿ ನಿಜಪುರಕೆ ತೆರಳಿದನು ॥೮೯೦॥

ಹಲವುದಿನ ಸತಿಸಹಿತ ಮಕ್ಕಳುಗಳೊಡಗೂಡಿ
ನಳನೃಪನು ಸಂತಸದಿ ಕಾಲವನು ಕಳೆಯುತಲಿ
ಅಗಣಿತದ ಧನಕನಕ ಸೈನ್ಯದಾ ಸಹಿತದಲಿ
ಪುಷ್ಕರನ ಗೆಲ್ಲಲಿಕೆ ನಿಷಧಕ್ಕೆ ತೆರಳಿಹನು ॥೮೯೧॥

ಪುಷ್ಕರನೆ ಅಪರಿಮಿತ ಐಶ್ವರ್ಯ ಸೈನ್ಯದಾ
ಸಹಿತದಲಿ ನಿನ್ನೊಡನೆ ದ್ಯೂತಕ್ಕೆ ಬಂದಿಹೆನು
ಸಂಪತ್ತು ಸೈನ್ಯವನು ಸತಿಯನ್ನು ಸಹಿತವು
ಪಣವಾಗಿ ಹಚ್ಚುವೆನು ದ್ಯೂತಕ್ಕೆ ಬಾ ಎಂದ ॥೮೯೨॥

ಇಲ್ಲದಿರೆ ಯುದ್ಧಕ್ಕೆ ಸನ್ನದ್ಧನಾಗುವದು
ನಿನ್ನನ್ನು ಜಯಿಸುತಲಿ ರಾಜ್ಯವನು ಕೊಳ್ಳುವೆನು
ಎನ್ನುತಲಿ ತಮ್ಮನಿಗೆ ಸಂದೇಶ ಕಳಿಸುತಿರೆ
ಪುಷ್ಕರನು ಮನದೊಳಗೆ ಯೋಚಿಸುತ ಹಿಗ್ಗಿದನು ॥೮೯೩॥

ಜೂಜಿನಲಿ ಖಚಿತದಲಿ ನಳನನ್ನು ಜಯಿಸುವೆನು
ದಮಯಂತಿ ಸುಂದರಿಯು ಎನ್ನವಳು ಆಗುವಳು
ಸಂಶಯವು ಇದಕ್ಕಿಲ್ಲ ಎನ್ನುತಲಿ ಸಂತಸದಿ
ಪುಷ್ಕರನು ನಳನೊಡನೆ ಲೆತ್ತವನು ಆಡಿಹನು ॥೮೯೪॥

ಧನಕನಕ ಐಶ್ವರ್ಯ ರಾಜ್ಯವನು ಸಕಲವನು
ಪ್ರಾಣವನು ಸಹಿತವೂ ಪುಷ್ಕರನು ಸೋಲುತಲಿ
ದುಗುಡದಲಿ ಕಳವಳದಿ ಮುಖ ಬಾಡಿಬತ್ತುತಲಿ
ಚಿಂತೆಯಲಿ ಮುಳುಗಿರಲು ನಳನೃಪನು ನುಡಿದಿಹನು ॥೮೯೫॥

ಹೇ ತಮ್ಮ ಪುಷ್ಕರನೆ ಚಿಂತೆಯನು ಮಾಡದಿರು
ನಿನ್ನೊಳಗೆ ತಪ್ಪಿಲ್ಲ ಎನ್ನೊಳಗೆ ಕಲಿಸೇರಿ
ಮುನ್ನಿನಲಿ ಜೂಜಿನಲಿ ಎನ್ನನ್ನು ಸೋಲಿಸುತ
ವಿಧವಿಧದ ಕಷ್ಟಗಳ ಹಿಂಸೆಯನು ಇತ್ತಿಹನು ॥೮೯೬॥

ಖಳಕಲಿಯ ಮನವನ್ನು ಕಲುಷಿತವ ಮಾಡುತಲಿ
ಈರ್ವರಿಗೆ ಈ ಪರಿಯ ದುಃಖಗಳನಿತ್ತಿಹನು
ದುರುಳ ಕಲಿ ಈಗೆನ್ನ ತೊರೆಯುತಲಿ ಹೋಗಿಹನು
ಎಮ್ಮಯಾ ಕಷ್ಟಗಳು ಪರಿಹಾರವಾಗಿಹವು ॥೮೯೭॥

ನಿನ್ನಯಾ ರಾಜ್ಯವನು ಮತ್ತೆ ನಾ ನಿನಗೀವೆ
ಸುಖವಾಗಿ ಬಾಳುವುದು ಎನ್ನುತಲಿ ಪ್ರೀತಿಯಲಿ
ತಮ್ಮನಿಗೆ ರಾಜ್ಯವನು ಈಯುತಿರೆ ಪುಷ್ಕರನು
ಅಣ್ಣನಾ ಚರಣಕ್ಕೆ ಎರಗುತಲಿ ನುಡಿದಿಹನು ॥೮೯೮॥

ಹೇ ಅಣ್ಣ ನಿನ್ನಯಾ ಔದಾರ್ಯ ಕರುಣೆಯನು
ಬಂಧುವಿನ ವಾತ್ಸಲ್ಯ ವರ್ಣಿಸಲು ನಾನರಿಯೆ
ಎನ್ನುತಲಿ ಪುಷ್ಕರನು ನಳನನ್ನು ವರ್ಣಿಸುತ
ತನ್ನಯಾ ರಾಜ್ಯಕ್ಕೆ ತೆರಳಿದನು ಸಂತಸದಿ ॥೯೯॥

ಮತ್ತೆ ನಳ ಸಿಂಹಾಸನೇರುತಲಿ ರಾಜ್ಯವನು
ಆಳುತಿರೆ ಸಕಲ ಪ್ರಜೆ ಸಂತಸದಿ ನಲಿವಿಹುದು
ಯಜ್ಞ ಯಾಗಾದಿಗಳ ಗೈಯ್ಯುತಲಿ ನಳನೃಪನು
ಪ್ರಜೆಗಳನು ತಣಿಸುತಲಿ ಬಹುಕಾಲಪಾಳಿದನು ॥೧೦೦॥

ನಿನ್ನ ಪರಿ ನಳನೃಪನು ದ್ಯೂತವನು ಆಡುತಲಿ
ರಾಜ್ಯವನು ಕಳಕೊಂಡು ಸತಿಯನ್ನು ಅಗಲುತಲಿ
ಆಳಾಗಿ ಸಾರಥಿಯ ಕೆಲಸವನು ಮಾಡುತಲಿ
ನಿನಗಿಂತ ಹೆಚ್ಚಾಗಿ ಕಷ್ಟಗಳ ಪಟ್ಟಿಹನು ॥೧೦೧॥

ಏಕಾಕಿಯಾಗುತಲಿ ನಳದೊರೆಯು ಒಬ್ಬನೇ
ಕಷ್ಟಗಳ ಭೋಗಿಸಿದ ನಿನಗಿಂದು ನಿನ್ನೊಡನೆ
ವೀರರೀ ಸೋದರರು ಹೆಂಡತಿಯು ದ್ರೌಪದಿಯು
ನಿನ್ನೊಡನೆ ಕಷ್ಟದಲಿ ನೆರವಿಂಗೆ ಇರುತಿಹರು ॥೧೦೨॥

ಚಿಂತೆಯನು ಮಾಡದಿರು ನಳನೃಪನು ಕೊನೆಯಲ್ಲಿ
ಬಂದಿರುವ ಅಪರಿಮಿತ ದುರಿತಗಳ ನೀಗುತಲಿ
ರಾಜ್ಯವನು ಪಡೆವಂತೆ ನೀ ಮತ್ತೆ ರಾಜ್ಯವನು
ಪಡೆಯುವದು ಖಚಿತಮಿದು ಎನ್ನುತಲಿ ನುಡಿದಿಹನು ॥೧೦೩॥

ನಳನೃಪನ ಕಥೆಯನ್ನು ಕೇಳ್ದರ್ಗೆ ಪೇಳ್ದರ್ಗೆ
ಇಹದಲ್ಲಿ ಸೌಖ್ಯವದು ಪರದಲ್ಲಿ ಸದ್ಗತಿಯು
ತಪ್ಪದೇ ದೊರೆಯುವದು ಎನ್ನುತಲಿ ಬೃಹದಶ್ವ
ಧರ್ಮಜನ ಹರಸುತಲಿ ನಿಜದೆಡೆಗೆ ತೆರಳಿದನು ॥೧೦೪॥

**ಪರಿವಾರ ಋಷಿವರರ ಸಹಿತದಲಿ ಧರ್ಮಜನು ।**
**ವಿಧವಿಧದ ಕ್ಷೇತ್ರಗಳ ಯಾತ್ರೆಯನು ಗೈದಿಹನು ॥**

ಜನಮೇಜಯ ಕ್ಷಿತಿಪ ಕೇಳುವುದು ಬಳಿಕಿನಲಿ
ಅಗಣಿತದ ಋಷಿವರರು ತಪಸಿಗಳು ಐತಂದು
ಫಲಗುಣನ ಘನಘೋರ ತಪವನ್ನು ತೇಜವನು
ವಿಸ್ತರದಿ ಧರ್ಮಜಗೆ ಪೇಳಿದರು ಹರುಷದಲಿ ॥೧೦೫॥

ಕೇಳುತಲಿ ಪಾಂಡವರು ಸಂತಸವಗೊಳ್ಳುತಲಿ
ಮತ್ತೆ ಆ ನಲ್ಮೆಯಾ ಫಲಗುಣನು ಇಲ್ಲದಿಹ
ಶೂನ್ಯದಾ ಪರಿಯಲ್ಲಿ ತೋರುತಿಹ ಕಾಮ್ಯಕದ
ವನವನ್ನು ನೋಡುತಲಿ ಮನದೊಳಗೆ ನೊಂದಿಹರು ॥೧೦೬॥

ಅನಿತರಲಿ ನಾರದರು ಬರುತಲಿರೆ ಧರ್ಮಜನು
ಸತ್ಕಾರಗೈಯ್ಯುತಿರೆ ಮುಖವೇಕೆ ಬಾಡಿಹುದು
ಮನದೊಳಗೆ ಅವುದಾ ಚಿಂತೆಯದು ಕಾಡುತಿದೆ
ಎನ್ನುತಿರೆ ಸುರಮುನಿಯು ಧರ್ಮಜನು ಉಸುರಿದನು ॥೧೦೭॥

ಘನಮಹಿಮ ಮುನಿವರರೆ ಅರ್ಜುನನು ಇಲ್ಲದಿಹ
ಕಾಮ್ಯಕದ ವನವಿದುವೆ ಶೂನ್ಯದಂತೆಸೆಯುತಿದೆ
ಮನವೆಲ್ಲ ಬೇಸತ್ತು ತೀರ್ಥಗಳ ಯಾತ್ರೆಗಳ
ಗೈಯ್ಯುವಾ ಆಸೆಯದು ಜನಿಸಿಹುದು ಎಂದಿಹನು ॥೧೦೮॥

ವಿಧವಿಧದ ಪುಣ್ಯದಾ ಕ್ಷೇತ್ರಗಳ ವಿಷಯವನು
ತಿಳುಹುವುದು ಎನ್ನುತಿರೆ ನಾರದರು ಹರುಷದಲಿ
ಪುಲಸ್ತ್ಯಋಷಿ ಭೀಷ್ಮಂಗೆ ಅರುಹಿರುವ
ತೀರ್ಥಗಳ ಮಹಿಮೆಯನು ಧರ್ಮಜಗೆ ಉಸುರಿದರು ॥೧೦೯॥

ಒಂದು ದಿನ ವರಭೀಷ್ಮ ಮೇರುವಿನ ಪರ್ವತದಿ
ಪಿತೃಗಳಾ ಕರ್ಮಗಳ ಜಪತಪವ ಗೈಯ್ಯುತಿರೆ
ಪುಲಸ್ತ್ಯ ಮುನಿ ಬರುತಲಿರೆ ಸಾಷ್ಟಾಂಗ ಗೈಯ್ಯುತಲಿ
ಕರಮುಗಿದು ವರಭೀಷ್ಮ ನುಡಿದಿಹನು ನಯದಲ್ಲಿ ॥೧೧೦॥

ಋಷಿವರರೆ ಪುಣ್ಯದಾ ತೀರ್ಥಗಳ ಕ್ಷೇತ್ರಗಳ
ದರ್ಶನವ ಮಾಡಿದೊಡೆ ಪಾವನದ ನದಿಯೊಳಗೆ
ಸ್ನಾನವನು ಗೈದೊಡೆಯು ಆವ ಫಲವಿಹುದೆಂದು
ಪೇಳುವುದು ಎಂದಿಹನು ಧರ್ಮಜ ಪುಲಸ್ತ್ಯಗೆ ॥೧೧೧॥

ಕೇಳುವುದು ಧರ್ಮಜನೆ ಉತ್ತರದಿ ಭವ್ಯದಲಿ
ಹಿಮಲಸಿತ ಉನ್ನತದ ಶಿಖರಗಳ ಶೋಭಿಸುತ
ಮೂಡಣದ ತುದಿಯಿಂದ ಪಡುವಣದ ಪರ್ಯಂತ
ಅಂತೆಗೋಲಾಗುತಲಿ ಹಿಮಗಿರಿಯು ಪಸರಿಹುದು ॥೧೧೨॥

ಮಂದರದ ಪರ್ವತವು ವರಗಂಧ ಮಾದನವು
ಕೀಲಕವು ನಂದನವು ವೈಭ್ರಾಜ ಚೈತ್ರರಥ
ವಿಂಧ್ಯಾದ್ರಿ ಮೊದಲಾದ ಗಗನವನು ಚುಂಬಿಸುವ
ಪರ್ವತಗಳೆಸೆಯುವವು ವರಭರತ ವರುಷದಲಿ ॥೧೧೩॥

ಹಿಮಗಿರಿಯ ಬಸುರಿನಲಿ ಗಂಗೋತ್ರಿ ಬಳಿಯಲ್ಲಿ
ಮೂಲೋಕ ಪಾವನಳು ಪಾಪಗಳ ಸಕಲವನು
ತೊಳೆಯುತಲಿ ಮೋಕ್ಷವನು ಈಯುತಿಹ ವರಗಂಗೆ
ಜನಿಸುತಲಿ ಹರಿಯುತಲಿ ಸಾಗರವ ಸೇರಿಹಳು ॥೧೧೪॥

ವರಯಮುನೆ ಸರಸತಿಯು ಸರಯೂ ಶರದ್ವತುವು
ವರಸಿಂಧು ಚರ್ಮಣ್ವತಿ ದೃಷದ್ವತಿಯು ವೈತರಣಿ
ನರ್ಮದೆಯು ತಾಪಿಯುರು ಗಂಡಕಿಯು ಗೋಮತಿಯು
ಪಾವನದ ಸ್ತ್ರೋತಗಳು ಹರಿಯುತಿವೆ ಉತ್ತರದಿ ॥೯೧೫॥

ಪುಣ್ಯತರ ಪುಷ್ಕರವು ಆ ಪಿಂಗ ಪ್ರಭಾಸವು
ವಿಷ್ಣುವು ಗಯಾತೀರ್ಥ ವರಕೋಟಿ ತೀರ್ಥವು
ಆ ಕಪಿಲೆ ಸೂರ್ಯರಾ ಪಾವನದ ತೀರ್ಥಗಳು
ಅಗಣಿತದ ತೀರ್ಥಗಳು ಉತ್ತರದಿ ಮೆರೆಯುವವು ॥೯೧೬॥

ವರಮಥುರೆ ದ್ವಾರಕೆಯು ಕಾಶೀ ಪ್ರಭಾಸಗಳು
ಗಯಾ ಪ್ರಯಾಗಗಳು ಅಯೋಧ್ಯೆಯು ಹರಿದ್ವಾರ
ಬದರಿ ಕೇದಾರಗಳು ಗಂಗೋತ್ರಿ ಯಮುನೋತ್ರಿ
ಮೋಕ್ಷವನು ಈಯುತಿಹ ಕ್ಷೇತ್ರಗಳು ಮೆರೆಯುತಿವೆ ॥೯೧೭॥

ತಂದುಲಿಕೆಯಾಶ್ರಮವು ಅಗಸ್ತ್ಯ ಋಷಿಯಾಶ್ರಮವು
ವಸಿಷ್ಠ ಕಣ್ವಾದಿಗಳ ಆಂಗಿರಸ ಗೌತಮರ
ದಧೀಚಿ ಭರದ್ವಾಜ ಮೊದಲಾದ ತಪಸಿಗಳ
ಅಗಣಿತದ ಆಶ್ರಮಗಳಲ್ಲಲ್ಲಿ ಶೋಭಿಪವು ॥೯೧೮॥

ಕೋಟಿಗಳ ತೀರ್ಥಗಳ ಕೋಟಿಗಳ ಕ್ಷೇತ್ರಗಳ
ಕೋಟಿಗಳ ಸ್ತ್ರೋತಗಳ ಕೋಟಿಗಳ ಅದ್ರಿಗಳ
ಮುನಿವರರು ಋಷಿವರರು ತಪಗೈವ ಕೋಟಿಗಳ
ಆಶ್ರಮಗಳೆಸೆಯುವವು ಈ ಭರತ ವರುಷದಲಿ ॥೯೧೯॥

ಜಗದೊಳಗೆ ಸಕಲಮೀ ನದಿಗಳಲಿ ಜಾಹ್ನವಿಯು
ಅತಿಶ್ರೇಷ್ಠ ಪಾವನಳು ಪುಣ್ಯತರ ಎನಿಸುವಳು
ಒಂದು ಸಲ ಸ್ನಾನವನು ಗಂಗೆಯಲಿ ಗೈದೊಡೆಯು
ಮರುಜನ್ಮ ಪಡೆಯದಲೆ ಮುಕ್ತಿಯನು ಪಡೆಯುವನು ॥೯೨೦॥

ಜನುಮದಲಿ ತೀರ್ಥಗಳ ಯಾತ್ರೆಯನು ಗೈದೊಡೆಯು
ಹಿಂದಿನಾ ಜನುಮಗಳ ಅಗಣಿತದ ಪಾಪಗಳ
ರಾಶಿಗಳು ತೊಲಗುವವು ಇಲ್ಲದಿರೆ ನಿತ್ಯವೂ
ಕ್ಷೇತ್ರಗಳ ನೆನೆಯುತಲಿ ನಾಮಗಳ ಪಠಿಸುವುದು ॥೯೨೧॥

ಗಂಗೆಯಾ ಜಲದೊಳಗೆ ಅಸ್ಥಿಯ ವಿಸರ್ಜಿಸಲು
ಗಂಗೆಯಲಿ ಅಸ್ಥಿಯದು ಇಹತನಕ ಮನುಜಂಗೆ
ಸ್ವರ್ಗದಲಿ ಸ್ಥಾನವಿದೆ ಸದ್ಗತಿಯು ಇರುತಿಹುದು
ಜಾಹ್ನವಿಗೆ ಮಿಗಿಲಾದ ನದಿಯಿಲ್ಲ ಜಗದೊಳಗೆ ॥೯೨೨॥

ಕ್ಷೇತ್ರಗಳ ತೀರ್ಥಗಳ ಯಾತ್ರೆಯನು ಗೈಯ್ಯುತಲಿ
ಪಾಪಗಳ ನೀಗುತಲಿ ಪುಣ್ಯವನು ಪಡೆಯುವುದು
ಎನ್ನುತಲಿ ಪುಲಸ್ತ್ಯಋಷಿ ಭೀಷ್ಮಂಗೆ ಹೇಳಿರುವ
ಯಾತ್ರೆಗಳ ವಿಷಯವನು ನಾರದರು ಉಸುರಿದರು ॥೯೨೩॥

ಜನಮೇಜಯುವನಿಪನೆ ಕೇಳುವುದು ಈ ಪರಿಯೆ
ವಿಧವಿಧದ ಕ್ಷೇತ್ರಗಳ ವಿಷಯವನು ಅರುಹುತಲಿ
ಲೋಮಶ ಮಹರ್ಷಿಗಳು ನಿನ್ನೆಡೆಗೆ ಬರಲಿಹರು
ನೀನವರ ಜೊತೆಯಲ್ಲಿ ಯಾತ್ರೆಯನು ಗೈಯ್ಯುವುದು ॥೯೨೪॥

ನಾನಿನ್ನು ತೆರಳುವೆನು ಎನ್ನುತಲಿ ನಾರದರು
ಧರ್ಮಜನ ಹರಸುತಲಿ ನಭದೆಡೆಗೆ ತೆರಳಿದರು
ಬಳಿಕಲಾ ಧರ್ಮಜನು ಧೌಮ್ಯರನು ಕರೆಸುತಲಿ
ಸತ್ಕಾರಗೈಯ್ಯುತಲಿ ನಮಿಸುತಲಿ ನುಡಿದಿಹನು ॥೯೨೫॥

ತಪವನ್ನು ಗೈಯ್ಯುತಲಿ ಅಸ್ತ್ರಗಳ ಪಡೆಯಲಿಕೆ
ಕಾನನಕೆ ಸೋದರನ ಪಾರ್ಥನನು ಕಳುಹಿದೆನು
ಫಲಗುಣನು ಇಲ್ಲದಿಹ ಕಾಮ್ಯಕದ ಈ ವನವು
ಮನಸಿಂಗೆ ಸೊಗಸದಿದೆ ಬೇಸರವು ಎನಿಸುತಿದೆ ॥೯೨೬॥

ಈ ವನವ ತೊರೆಯುತಲಿ ತೀರ್ಥಗಳ ಕ್ಷೇತ್ರಗಳ
ಯಾತ್ರೆಯನು ಗೈಯುತಲಿ ಮನವನ್ನು ತಣಿಸುವುದು
ಎಂಬುವಾ ಆಶೆಯದು ಮೂಡಿಹುದು ಎನ್ನುತಲಿ
ನುಡಿದಿಹನು ಧರ್ಮಜನು ಗುರುವರಗೆ ಧೌಮ್ಯನಿಗೆ ॥೯೨೭॥

ಚಿಂತೆಯನು ಮಾಡದಿರು ಕುಂತಿಸುತ ಧರ್ಮಜನೆ
ಹರನಿಂದ ಸುರರಿಂದ ಘನಘೋರ ಅಸ್ತ್ರಗಳ
ಕಲಿಪಾರ್ಥ ಪಡೆಯುತಲಿ ಬೇಗನೇ ಬರಲಿಹನು
ಮುಂದಕ್ಕೆ ಶುಭವಿಹುದು ಎಂದಿಹನು ಗುರುಧೌಮ್ಯ ॥೯೨೮॥

ಉತ್ತರದ ಪುಣ್ಯತರ ಕ್ಷೇತ್ರಗಳ ವಿಷಯವನು
ವಿಸ್ತರದಿ ನಾರದರು ನಿಮಗೆಲ್ಲ ಅರುಹಿದರು
ಈ ಭರತ ವರುಷದಾ ದಕ್ಷಿಣದ ಪಾವನದ
ತೀರ್ಥಗಳ ಕ್ಷೇತ್ರಗಳ ವಿಷಯವನು ತಿಳುಹುವೆನು ॥೯೨೯॥

ತೆಂಕಣದ ಪಡುವಣದ ಕಡಲಿನಾ ಸೀಮೆಯಲಿ
ಸಹ್ಯಾದ್ರಿ ಪರ್ವತವು ಸೊಗಸಿನಲಿ ಶೋಭಿಪುದು
ಮಾಲ್ಯವತ ಅಂಜನವು ಹೇಮಗಿರಿ ನೀಲಗಿರಿ
ಪರ್ವತಗಳೆಸೆಯುವವು ದಂಡಕದ ವನದೊಳಗೆ ॥೯೩೦॥

ದಕ್ಷಿಣದಿ ಪುಣ್ಯತರ ಪಯೋಷ್ಣಿ ಪ್ರವೇಣಿಯು
ಅಶೋಕ ಅಗಸ್ತ್ಯನಾ ತೀರ್ಥಗಳು ಮೆರೆಯುವವು
ಕಾವೇರಿ ತುಂಗೆಯರು ವರಗೋದೆ ಕೃಷ್ಣೆಯರು
ಶರಾವತಿ ಹೇಮವತಿ ಸ್ತೋತ್ರಗಳು ಹರಿಯುತಿವೆ ॥೯೩೧॥

ಸಹ್ಯಾದ್ರಿ ತಪ್ಪಲಲಿ ಪಾವನ ತ್ರಿಯಂಬಕನು
ಮೆರೆಯುತಿಹ ತ್ರಿಯಂಬಕ ಕ್ಷೇತ್ರವದು ಸೊಗಯಿಪುದು
ಪಿತೃವಿನಾ ಆಜ್ಞೆಯಲಿ ಭಾರ್ಗವನು ಶಿರತರಿದ
ರೇಣುಕೆಯ.ದೇವಿಯಾ ಕ್ಷೇತ್ರವದು ಶೋಭಿಪುದು ॥೯೩೨॥

ಭಾರ್ಗವನು ಪಶ್ಚಿಮದ ಸಾಗರದ ತೀರದಲಿ
ದಕ್ಷಿಣದ ಕಾಶಿಯೆಂದೆನಿಸುತಿಹ ಪಾವನದ
ಪಾಪಗಳ ನಶಿಸುವಾ ಮಹಬಲನ ಈಶ್ವರನ
ದಿವ್ಯದಾ ಗೋಕರ್ಣ ಕ್ಷೇತ್ರವದು ಮೆರೆಯುವದು ॥೯೩೩॥

ಕೈಲಾಸ ಪರ್ವತದ ಪರಿಯಲ್ಲಿ ಶೋಭಿಸುವ
ವರಹೇಮ ಕೂಟದಾ ಗಿರಿಯಲ್ಲಿ ಸತಿ ಸಹಿತ
ವಾಸಿಸುವ ಪಂಪಾಪತೀಶ್ವರನ ವರ ಹಂಪೆ
ಕ್ಷೇತ್ರವದು ಶೋಭಿಪುದು ಕಿಷ್ಕಿಂಧೆ ಕಾನನದಿ ॥೯೩೪॥

ಪರ್ವತದ ಶಿಖರವನು ದರ್ಶನವ ಮಾಡಿದೊಡೆ
ಮತ್ತೊಮ್ಮೆ ಜನ್ಮವದು ಇಲ್ಲೆಂದು ಸಾರುತಿಹ
ವರಮಲ್ಲಿಕಾರ್ಜುನನು ನೆಲಸಿರುವ ಪುಣ್ಯದಾ
ಚೆಲುವಿನಾ ಶ್ರೀಶೈಲ ಕ್ಷೇತ್ರವದು ಶೋಭಿಪುದು ॥೯೩೫॥

ಋಷಿಶೃಂಗ ತಪಗೈದ ಪಾಪಗಳ ಕಲ್ಮಷವ
ಭಂಗಿಸುವ ಮಂಗಳದ ಶೃಂಗೇರಿ ಎಸೆಯುವುದು
ಪಾವನ ನಿರಾಕಾರ ಆಕಾಶ ಲಿಂಗದಾ
ಶ್ರೀಕ್ಷೇತ್ರ ಚಿದಂಬರ ಮೆರೆಯುವದು ತೆಂಕಣದಿ ॥೯೩೬॥

ಕಾವೇರಿ ತೀರದಲಿ ನಿದ್ದೆಯನು ಗೈಯ್ಯುತಲಿ
ಒರಗಿರುವ ರಂಗನಾ ಶ್ರೀರಂಗ ಮೆರೆಯುವುದು
ತೆಂಕಣದ ತುದಿಯಲ್ಲಿ ಸಾಗರದ ತ್ರಯುಗಳಾ
ಸಂಗಮದಿ ಕನ್ಯಾಕುಮಾರಿಯುದು ಶೋಭಿಪುದು ॥೯೩೭॥

ದಶಶಿರನ ಕೊಲ್ಲಲಿಕೆ ಸೇತುವೆಯ ಕಟ್ಟುತಲಿ
ಸಾಗರದ ತೀರದಲಿ ಲಿಂಗವನು ಸ್ಥಾಪಿಸುತ
ರಾಘವನು ಪೂಜಿಸಿದ ಅಘನಾಶಿ ತರಿಯುತಿಹ
ರಾಮೇಶ್ವರಾ ಕ್ಷೇತ್ರ ಮೆರೆಯುತಿದೆ ತೆಂಕಣದಿ ॥೯೩೮॥

ಈ ಪರಿಯೆ ನುತ ಧೌಮ್ಯ ಪಾವನದ ತೀರ್ಥಗಳ
ಕ್ಷೇತ್ರಗಳ ವರ್ಣನೆಯ ವಿಶದದಲಿ ಗೈಯ್ಯುತಿರೆ
ಆ ಸಮಯ ಲೋಮಶ ಮಹರ್ಷಿಗಳು ಬರುತಲಿರೆ
ಧರ್ಮಜನು ನಮಿಸುತಲಿ ಸತ್ಕಾರ ಗೈದಿಹನು ॥೯೩೯॥

ನಾವುಗಳು ಮೂಲೋಕ ಸಂಚಾರ ಗೈಯ್ಯುತಲಿ
ಸ್ವರ್ಗಕ್ಕೆ ತೆರಳುತಿರೆ ಇಂದ್ರನಾ ಸನಿಹದಲಿ
ಪಾರ್ಥನನು ಕಾಣುತಿರೆ ಸುರಪತಿಯು ಅರ್ಜುನನ
ವಿಷಯವನು ಅರುಹಿದನು ಎಂದಿಹರು ಲೋಮಶರು ॥೯೪೦॥

ಉಗ್ರತರ ತಪಗೈದು ಫಲುಗುಣನು ಹರನಿಂದ
ಸುರರುಗಳು ಸಾಗರದ ಮಥನವನು ಮಾಡುವಾ
ಸಮಯದಲಿ ದೊರೆತಿರುವ ಮೂಲೋಕ ಸುಡಬಲ್ಲ
ಪಾಶುಪತ ಅಸ್ತ್ರವನು ಪಡೆದಿಹನು ಎಂದಿಹರು ॥೯೪೧॥

ಅರ್ಜುನಗೆ ದೇವೇಂದ್ರ ವಜ್ರಾಸ್ತ್ರವಿತ್ತಿಹನು
ಯಮಧರ್ಮ ಭೀಕರದ ದಂಡಾಯುಧವಿತ್ತಿಹನು
ವರವರುಣ ಪಾಶವನು ಧನಪತಿಯು ಸುರರುಗಳು
ಅಗಣಿತದ ದಿವ್ಯಾಸ್ತ್ರ ಶಸ್ತ್ರಾಸ್ತ್ರ ವಿತ್ತಿಹರು ॥೯೪೨॥

ವೇದಗಳ ಶಾಸ್ತ್ರಗಳ ಸಂಗೀತ ನೃತ್ಯಗಳ
ವಿಧವಿಧದ ಕಲೆಗಳನು ಫಲುಗುಣನು ಕಲಿತಿಹನು
ಬೇಗನೇ ಅರ್ಜುನನು ನಿಮ್ಮೆಡೆಗೆ ಬರಲಿಹನು
ಎನ್ನುತಲಿ ದೇವೇಂದ್ರ ನುಡಿದಿಹನು ಎಂದಿಹರು ॥೯೪೩॥

ಫಲುಗುಣನು ಬಹತನಕ ಪುಣ್ಯದಾ ಕ್ಷೇತ್ರಗಳ
ದರ್ಶನವ ಧರ್ಮಜಗೆ ಮಾಡಿಪುದು ಎನ್ನುತಲಿ
ಧರ್ಮಜಗೆ ಅರ್ಜುನನ ಚಿಂತೆಯನು ಮಾಡದಿರು
ಎನ್ನುತಲಿ ತಿಳುಹುವುದು ಎಂದಿಹನು ದೇವೇಂದ್ರ ॥೯೪೪॥

ಈಪರಿಯೆ ಲೋಮಶರು ನುಡಿಯುತಿರೆ ಧರ್ಮಜನು
ಅರ್ಜುನನು ಬಹನೆಂದು ಸಂತಸದಿ ನಲಿಯುತಲಿ
ಅಗಣಿತದ ಪರಿವಾರವೆಲ್ಲವನು ಹಸ್ತಿನೆಗೆ
ಕಳುಹುತಲಿ ತೀರ್ಥಗಳ ಯಾತ್ರೆಯನು ಗೈಯ್ಯಲಿಕೆ ॥೯೪೫॥

ಧರ್ಮಜನು ಲೋಮಶಮಹರ್ಷಿಗಳ ಧೌಮ್ಯರಾ
ಸೋದರರ ದ್ರೌಪದಿಯ ಸಹಿತದಲಿ ಪಾವನದ
ತೀರ್ಥಗಳ ಕ್ಷೇತ್ರಗಳ ಯಾತ್ರೆಯನು ಗೈಯಲಿಕೆ
ಕಾಮ್ಯಕದ ವನವನ್ನು ತೊರೆಯುತಲಿ ಹೊರಟಿಹನು ॥೯೪೬॥

ವನವನವ ದಾಂಟುತಲಿ ನೈಮಿಶಾರಣ್ಯವನು
ಕನ್ಯಾಶ್ವ ತೀರ್ಥಗಳ ಕೋಟಿಯಾ ತೀರ್ಥವನು
ಗೋತೀರ್ಥ ಪ್ರಯಾಗಗಳ ವರಬ್ರಹ್ಮವೇದಿಯನು
ದಾಂಟುತಲಿ ಅಗಸ್ತ್ಯನಾ ಆಶ್ರಮಕೆ ಬಂದಿಹರು ॥೯೪೭॥

ಸುಂದರದ ತರುಲತೆಯ ಪುಷ್ಪಗಳ ವಿಲಸಿತವ
ಪುಣ್ಯತರ ಆಶ್ರಮವು ಮನವನ್ನು ತಣಿಸುತಿದೆ
ಆವಮುನಿಯಾಶ್ರಮವು ಇದು ಎಂದು ಧರ್ಮಜನು
ಕೇಳುತಿರೆ ಕೌತುಕದಿ ಲೋಮಶರು ನುಡಿದಿಹರು ॥೯೪೮॥

**ವಾತಾಪಿ ಇಲ್ವಲರನು ರಕ್ಕಸರ ನುಂಗುತಲಿ**
**ಅಗಸ್ತ್ಯ ಜೀರ್ಣಿಸಿದ ಕಥೆಯನ್ನು ಹೇಳಿದರು ॥**

ಧರ್ಮಜನೆ ಕೇಳುವುದು ಮುನ್ನಿನಲಿ ಸಾಗರದ
ಆಪೋಶನಂಗೈದ ಘನಮಹಿಮ ಮುನಿವರನ
ಅಗಸ್ತ್ಯನಾ ಆಶ್ರಮವು ಎನ್ನುತಲಿ ಲೋಮಶರು
ವಾತಾಪಿ ಇಲ್ವಲರಾ ಕಥೆಯನ್ನು ಹೇಳಿದರು ॥೯೪೯॥

ಪೂರ್ವದಲಿ ಮಣಿಮತಿಯು ಎಂಬುವಾ ನಗರದಲಿ
ಇಲ್ವಲನು ಎಂಬುವಾ ದಾನವನು ರಾಜ್ಯವನು
ಆಳುತಲಿ ವಿಪ್ರರಾ ಸೇವೆಯನು ಗೈಯ್ಯುತಲಿ
ಇಂದ್ರನಾ ಸರಿಸಮನ ವಿಕ್ರಮನ ಪುತ್ರನನು ॥೯೫೦॥

ಪಡೆಯುವಾ ವರವನ್ನು ಈಯುವುದು ಎನ್ನುತಲಿ
ಬೇಡುತಿರೆ ಆ ವಿಪ್ರ ವರವನ್ನು ಈಯದಿರೆ
ಇಲ್ವಲನು ಕೋಪದಲಿ ಕಿಡಿಕೆಂಡವಾಗುತಲಿ
ಅಗಣಿತದ ದ್ವಿಜರನ್ನು ಸಂಹಾರ ಗೈದಿಹನು ॥೯೫೧॥

ವಾತಾಪಿ ಸೋದರನ ಆಡನ್ನು ಮಾಡುತಲಿ
ಆಡಿನಾ ಮಾಂಸವನು ವಿಪ್ರರಿಗೆ ಉಣಿಸುತಲಿ
ಹೊರಗೆ ಬಾ ವಾತಾಪಿ ಎನ್ನುತಲಿ ಕೂಗುತಿರೆ
ಉದರವನು ಬಗಿಯುತಲಿ ರಕ್ಕಸನು ಬರುತಿರ್ದ ॥೯೫೨॥

ಈ ಪರಿಯೆ ದ್ವಿಜರನ್ನು ಇಲ್ವಲನು ಕೊಲ್ಲುತಿರೆ
ಒಂದು ದಿನ ಅಗಸ್ತ್ಯ ಋಷಿ ವನದೊಳಗೆ ಚರಿಸುತಿರೆ
ತರುಗಳಾ ಟೊಂಗೆಯಲಿ ತನ್ನಯಾ ಪಿತರುಗಳ
ನೇತಾಡುತಿರುವುದನು ನೋಡಿಹರು ಚಕಿತದಲಿ ॥೯೫೩॥

ನೀವಾರು ಪೇಳುವುದು ಎನ್ನುತಲಿ ಕೇಳುತಿರೆ
ನಾವುಗಳು ನಿನ್ನಯಾ ಪಿತೃಪಿತಾಮಹರಿಹೆವು
ನಿನಗೊಬ್ಬ ಮಗನಿರದ ಕಾರಣದಿ ಸದ್ಗತಿಯು
ದೊರೆಯದಲೆ ನೇತಾಡುತಿರುತಿಹೆವು ಎಂದಿಹರು ॥೯೫೪॥

ಅರಿಸುತ ಅಗಸ್ತ್ಯರು ಪುತ್ರನನು ಪಡೆಯುವುದು
ಎನ್ನುತಲಿ ಕನ್ಯೆಯನು ಈಯುವಾ ಫಲವನ್ನು
ಸೃಜಿಸುತಲಿ ವಿಧರ್ಭದಾ ನೃಪವರನ ಸತಿಯಳಿಗೆ
ಈಯುತಿರೆ ರಾಣಿಯಳು ಫಲವನ್ನು ಸವಿಯುತಲಿ ॥೯೫೫॥

ಗರ್ಭವನು ಧರಿಸುತಲಿ ನವಮಾಸ ತುಂಬುತಿರೆ
ಮುದ್ದಾದ ಚೆಲುವಿನಾ ಹೆಣ್ಣು ಶಿಶು ಜನಿಸುತಿರೆ
ವಿಧರ್ಭದೊರೆ ಸಂತಸದಿ ನಲಿಯುತಲಿ ಶಿಶುವಿಂಗೆ
ಲೋಪಾಮುದ್ರೆ ಎನ್ನುತಲಿ ಹೆಸರನ್ನು ಇಟ್ಟಿಹರು ॥೯೫೬॥

ದಿನದಿನದಿ ಬೆಳೆಯುತಲಿ ವರುಷಗಳು ಉರುಳುತಿರೆ
ಯೌವ್ವನದ ಲಾವಣ್ಯ ತನಿರಸವು ಉಕ್ಕುತಲಿ
ಪುತ್ರಿಯಳು ಶೋಭಿಸಲು ಅನುರೂಪ ವರನನ್ನು
ಹುಡುಕುತಲಿ ದೊರೆಯದಲೆ ವಿಧರ್ಭದೊರೆ ಚಿಂತಿಸಿದ ॥೯೫೭॥

ಅಗಸ್ತ್ಯ ಋಷಿ ಅರಿಯುತಲಿ ಐತಂದು
ನೃಪನಿಂಗೆ ನಿನ್ನಯಾ ಮಗಳನ್ನು ಮದುವೆಯಲಿ
ಎನಗೀವುದೆನ್ನುತಲಿ ನುಡಿಯುತಿರೆ ನೃಪವರನು
ಲೋಪಾಮುದ್ರೆಯನು ಅಗಸ್ತ್ಯ ಋಷಿಗಿತ್ತಿಹನು ॥೯೫೮॥

ಅಗಸ್ತ್ಯ ಮುನಿವರನು ಲೋಪಾಮುದ್ರೆಯಳ
ಸಹಿತದಲಿ ಆಶ್ರಮಕೆ ಸಂತಸದಿ ತೆರಳಿದನು
ಬಡತನದಿ ಕಷ್ಟದಲಿ ವರುಷಗಳ ಕಳೆಯುತಿರೆ
ಸತಿಲೋಪಾ ಮುದ್ರೆಯಳು ಗರ್ಭವನು ಧರಿಸಿಹಳು ॥೯೫೯॥

ಪುತ್ರನನು ಪಡೆಯುವಾ ಸಮಯವಿದು ಬಂದಿಹುದು
ಎನ್ನುತಲಿ ಅಗಸ್ತ್ಯ ಮುನಿ ನುಡಿಯುತಿರೆ ವರಸತಿಯು
ಎಮ್ಮಲ್ಲಿ ಧನವಿಲ್ಲ ಶಿಶುವನ್ನು ಪೋಷಿಪುದು
ಕಷ್ಟಕರವೆನ್ನುತಲಿ ಕಣ್ಣೀರ ಸುರಿಸಿದಳು ॥೯೬೦॥

ಹೇ ಸತಿಯೆ ಧನಕಾಗಿ ಚಿಂತೆಯನು ಮಾಡದಿರು
ದಾನವನ ಇಲ್ವಲನ ಬಳಿಯಲ್ಲಿ ಅಗಣಿತದ
ಧನರಾಶಿ ಇರುತಿಹುದು ಅವನಲ್ಲಿ ಬೇಡುತಲಿ
ಧನವನ್ನು ತಹೆನೆಂದು ಅಗಸ್ತ್ಯ ಋಷಿ ನುಡಿದಿಹರು ॥೯೬೧॥

ಇಲ್ವಲನ ಬಳಿಯಲ್ಲಿ ಮುನಿವರನು ತೆರಳುತಿರೆ
ಆದರದಿ ದಾನವನು ಸತ್ಕಾರ ಗೈಯ್ಯುತಲಿ
ವಾತಾಪಿ ಸೋದರನ ಆಡನ್ನು ಗೈಯ್ಯುತಲಿ
ಆಡಿನಾ ಮಾಂಸದಾ ಭೋಜನವ ನಿತ್ತಿಹನು ॥೯೬೨॥

ಅಗಸ್ತ್ಯಮುನಿ ಭೋಜನವ ಗೈಯುತಿರೆ ಇಲ್ವಲನು
ಹೊರಗೆ ಬಾ ವಾತಾಪಿ ಎನ್ನುತಲಿ ಕೂಗುತಿರೆ
ವಾತಾಪಿ ಜೀರ್ಣಾಗು ಎನ್ನುತಲಿ ಉದರದಲಿ
ಕೈಯನ್ನು ಆಡಿಸುತ ಮುನಿವರನು ನುಡಿದಿಹನು ||೯೬೩||

ವಾತಾಪಿ ಅಗಸ್ತ್ಯನಾ ಉದರದಲಿ ಜೀರ್ಣಾಗಿ
ಹೊರಗಡೆಗೆ ಬಾರದಿರೆ ಇಲ್ವಲನು ಭಯದಿಂದ
ಮುನಿವರನ ಚರಣಕ್ಕೆ ಎರಗುತಲಿ ದೈನ್ಯದಲಿ
ಎನ್ನಯಾ ತಪ್ಪನ್ನು ಕ್ಷಮಿಸುವುದು ಎಂದಿಹನು ||೯೬೪||

ತಾವುಗಳು ಬಂದಿರುವ ಕಾರಣವ ತಿಳುಹುವುದು
ಎನ್ನುತಿರೆ ನಿನ್ನಲ್ಲಿ ಅಗಣಿತದ ಧನವಿಹುದು
ಎನ್ನುತಲಿ ಕೇಳುತಲಿ ನಾವುಗಳು ಬಂದಿಹೆವು
ಧನಕನಕ ನೀಯುವುದು ಎಂದಿಹನು ಋಷಿವರನು ||೯೬೫||

ಮುತ್ತುಗಳ ರತ್ನಗಳ ವಜ್ರಗಳ ಧನಕನಕ
ಅಗಣಿತದ ಕುಂಭದಲಿ ತುಂಬುತಲಿ ಇಲ್ವಲನು
ದಾನವನು ಈಯುತಿರೆ ಅಗಸ್ತ್ಯಋುಷಿ ಪರಸುತಲಿ
ಆಶ್ರಮಕೆ ತೆರಳಿದರು ಧನಸಿರಿಯ ಸಹಿತದಲಿ ||೯೬೬||

ಕೆಲವು ದಿನ ಕಳೆಯುತಿರೆ ವರಲೋಪಾ ಮುದ್ರೆಯಳು
ಮುದ್ದಾದ ಗಂಡುಮಗು ಎರಡನ್ನು ಹೆತ್ತಿಹಳು
ಧೃಡಸ್ಯ ಇದ್ಮವಾಹ ಎಂಬುವಾ ಹೆಸರುಗಳ
ಇಟ್ಟಿಹರು ಶಿಶುಗಳಿಗೆ ಅಗಸ್ತ್ಯಋುಷಿ ಹರುಷದಲಿ ||೯೬೭||

ಪಿತೃಗಳಾ ಇಚ್ಛೆಯದು ಫಲಿಸುತಲಿ ಸಕಲರೂ
ಸದ್ಗತಿಯ ಪಡೆಯುತಲಿ ಸ್ವರ್ಗಕ್ಕೆ ತೆರಳಿದರು
ವಾತಾಪಿ ರಕ್ಕಸನ ಉದರದಲಿ ಜೀರ್ಣಸಿದ
ಅಗಸ್ತ್ಯನಾ ಆಶ್ರಮವು ಇದು ಎಂದು ನುಡಿದಿಹನು ||೯೬೮||

ಮುಂದಕ್ಕೆ ಸಾಗುತಲಿ ಭೃಗುತೀರ್ಥ ಬಳಿಯಲ್ಲ
ಬರುತಿರಲು ಇಲ್ಲಿಯೇ ಆ ಭಾರ್ಗವ ರಾಮನು
ಸ್ನಾನವನು ಮಾಡುತಲಿ ಕ್ಷೀಣಿಸಿದ ಶಕ್ತಿಯನು
ತೇಜವನು ಪಡೆದಿಹನು ಎಂದಿಹನು ಲೋಮಶರು ||೯೬೯||

ಸಾಕೇತ ರಾಮನಾ ಕೀರ್ತಿಯನು ಕೇಳುತಲಿ
ಏಕವಿಂಶತಿ ಸಲ ಕ್ಷತ್ರಿಯರ ನಾಶವನು
ಗೈದಿರುವ ಕೊಡಲಿಧರ ಭಾರ್ಗವನು ಕೋಪದಲಿ
ರಾಘವನ ಶಕ್ತಿಯನು ಪರಕಿಸಲು ನಡೆದಿಹನು ||೯೭೦||

ಪರಶುಧರ ಆ ರಾಮ ಪರಕಿಸಲು ಬಹನೆಂದು
ಅರಿಯುತಲಿ ದಶರಥನು ರಾಘವಗೆ ದ್ವಾರಕೆಗೆ
ತೆರಳಲಿಕೆ ತಿಳಿಸುತಿರೆ ರಾಘವನು ಭರದಲ್ಲಿ
ದ್ವಾರಕೆಗೆ ತೆರಳುತಲಿ ಭಾರ್ಗವನ ತಡೆದಿಹನು ||೯೭೦||

ಆಗಲಾ ಭಾರ್ಗವನು ಎನ್ನಯಾ ಧನುವಿಂಗೆ
ಹೆದೆಯನ್ನು ಏರಿಪುದು ಎನ್ನುತಲಿ ನುಡಿಯುತಿರೆ
ನಿಮಿಷದಲಿ ಹೆದೆಯನ್ನು ಏರಿಸುತ ರಾಘವನು
ಇನ್ನಾವ ಕಾರ್ಯವಿದೆ ಎನ್ನುತಲಿ ನುಡಿದಿಹನು ||೯೭೨||

ಬಿಲ್ಲಿನಲಿ ಭಾರಿಯಾ ದಿವ್ಯಾಸ್ತ್ರವಿರಿಸುತಲಿ
ಶಿಂಜಿನಿಯ ಎಳೆ ಎಂದು ಭಾರ್ಗವನು ನುಡಿಯುತಿರೆ
ನಾನಾರು ಎಂಬುದನು ನೀನರಿಯೆ ಎನ್ನುತಲಿ
ಶ್ರೀ ರಾಮ ದಿವ್ಯದಾ ದೃಷ್ಟಿಯನು ಈಯುತಲಿ ||೯೭೩||

ಸಾವಿರದ ಶಿರಸುಗಳ ಸಾವಿರದ ನಯನಗಳ
ಸಾವಿರದ ಬಾಹುಗಳ ವಿರಾಟದ ರೂಪದಲಿ
ಸೂರ್ಯಚಂದ್ರಾದಿಗಳು ಅಷ್ಟವಸು ರುದ್ರರುಗಳು
ನವಗ್ರಹವು ತಾರೆಗಳು ನದಿ ಪರ್ವತಾದಿಗಳು ||೯೭೪||

ಸುರರುಗಳು ಗಂಧರ್ವ ಕಿನ್ನರರು ಖೇಚರರು
ಮೂಲೋಕವೆಸೆಯುತಿಹ ವರವಿಶ್ವರೂಪವನು
ತೋರಿಸುತ ರಾಘವನು ದಿವ್ಯಾಸ್ತ್ರ ಆಳವಡಿಸಿ
ಧನುವನು ಜಗ್ಗುತಲಿ ಭಾರ್ಗವಗೆ ಬಿಟ್ಟಿಹನು ||೯೭೫||

ಗ್ರಹತಾರೆ ನಡುಗಿದವು ನಕ್ಷತ್ರ ಕೆಡುಹಿದವು
ಭೂಮಿಯದು ಕಂಪಿಸಿತು ಪರ್ವತಗಳುರುಳಿದವು
ಸಾಗರವು ಉಕ್ಕಿದುದು ಉಲ್ಕೆಗಳು ಉರುಳಿದವು
ಪ್ರಳಯವೇ ಸನ್ನಿಹಿತವಾದಂತೆ ತೋರಿಹುದು ||೯೭೬||

ಪ್ರಜ್ಞೆಯನು ತೊರೆಯುತಲಿ ಪರಶುಧರ ಭಾರ್ಗವನು
ಧರೆಗುರುಳಿ ಬೀಳುತಿರೆ ದಿವ್ಯಾಸ್ತ್ರ ಮರಳುತಲಿ
ರಾಘವನ ಬತ್ತಳಿಕೆ ಸೇರುತಿರೆ ಭಾರ್ಗವನು
ಎಚ್ಚತ್ತು ರಾಮನೇ ಮಹವಿಷ್ಣು ಎನ್ನುತಲಿ

ರಾಮನಿಗೆ ನಮಿಸುತಲಿ ಮಹೇಂದ್ರ ಪರ್ವತಕೆ
ಭಾರ್ಗವನು ತೆರಳುತಲಿ ಶಕ್ತಿ ಪ್ರತಾಪಗಳು
ತೇಜವದು ತೊಲಗುತಲಿ ವರುಷವೊಂದು ಕಳೆಯುತಲಿ
ಭೃಗುತೀರ್ಥ ಸರಸಿಯಲಿ ಸ್ನಾನದನು ಗೈಯ್ಯುತಲಿ

ಮೊದಲಿನಾ ತೇಜವನು ಶಕ್ತಿಯನು ಪಡೆದಿಹನು
ನೀನು ಸಹ ಇಲ್ಲಿಯೇ ಸ್ನಾನವನು ಗೈಯ್ಯುವುದು
ತೊಲಗಿರುವ ತೇಜವನು ಶಕ್ತಿಯನು ನೀ ಪಡೆವೆ
ಎನ್ನುತಲಿ ಲೋಮಶರು ಧರ್ಮಜಗೆ ನುಡಿದಿಹನು ॥೯೭೯॥

ಧರ್ಮಜನು ತೀರ್ಥದಲಿ ಸ್ನಾನವನು ಗೈಯ್ಯುತಲಿ
ದ್ಯೂತವನು ಆಡುತಲಿ ತಾ ಕಳೆದುಕೊಂಡಿರುವ
ತೇಜವನು ಬಲವನ್ನು ಶೌರ್ಯವನು ಪಡೆಯುತಲಿ
ದಿವ್ಯ ಪ್ರಕಾಶದಲಿ ತೊಳತೊಳಗಿ ಬೆಳಗಿದನು ॥೯೮೦॥

**ಅಗಸ್ತ್ಯ ಸಾಗರವ ಕುಡಿದಿರುವ ಕಥೆಯನ್ನು ।**
**ಲೋಮಶರು ವಿಸ್ತರದಿ ಧರ್ಮಜಗೆ ಅರುಹಿದರು**

ಲೋಮಶ ಮಹರ್ಷಿಗಳು ಅಗಸ್ತ್ಯರಾ ಚರಿತೆಯನು
ಇನ್ನಷ್ಟು ವಿಸ್ತರದಿ ಹೇಳುವುದು ಎನ್ನುತಲಿ
ಧರ್ಮಜನು ಕೇಳುತಿರೆ ಅಗಸ್ತ್ಯ ಋಷಿವರನು
ಸಾಗರವ ಕುಡಿದಿರುವ ವೃತ್ತಾಂತವರುಹಿದರು ॥೯೮೧॥

ಕೇಳುವುದು ಧರ್ಮಜನೆ ಕೃತಯುಗದ ಕಾಲದಲಿ
ಕಾಲೇಯ ರಕ್ಕಸರ ಅಧಿಪತಿಯು ಖಳವೃತ್ರ
ಸ್ವರ್ಗವನು ಮುತ್ತುತಲಿ ದೇವೇಂದ್ರ ದಿವಿಜರಿಗೆ
ಅತುಳದಲಿ ಹಿಂಸೆಯನು ಕಷ್ಟವನು ಇತ್ತಿಹನು ॥೯೮೨॥

ದೇವೇಂದ್ರ ಸಕಲರಾ ಸುರರುಗಳ ಸಹಿತದಲಿ
ಬ್ರಹ್ಮನೆಡೆ ತೆರಳುತಲಿ ಸಾಷ್ಟಾಂಗ ಗೈಯ್ಯುತಲಿ
ವೃತ್ರಾಸುರ ದೈತ್ಯ ಈಯುತಿಹ ಹಿಂಸೆಯನು
ವಿವರಿಸುತ ಪ್ರಾರ್ಥಿಸಲು ಕಮಲಜನು ನುಡಿದಿಹನು ॥೯೮೩॥

ಮುನಿವರನ ದಧೀಚಿಯೆಡೆ ತೆರಳುತಲಿ ಪ್ರಾರ್ಥಿಸುತ
ಮೂಳೆಯನು ಕೊಳ್ಳುತಲಿ ವಜ್ರದಾ ಆಯುಧವ
ಗೈಯ್ಯುತಲಿ ದೇವೇಂದ್ರ ವೃತ್ರನನು ಕೊಲ್ಲುವುದು
ಎನ್ನುತಲಿ ವರಬ್ರಹ್ಮ ಸುರರಿಂಗೆ ನುಡಿದಿಹನು ॥೯೮೪॥

ಸುರಪತಿಯು ಸುರನಿಕರ ಹರಿಸಹಿತ ನಮಿಸುತಲಿ
ದಧೀಚಿ ಮುನಿವರನ ಕಾಣುತಲಿ ನಮಿಸುತಲಿ
ವೃತ್ರನಾ ದೈತ್ಯನನು ಸಂಹಾರ ಗೈಯ್ಯಲಿಕೆ
ಅಸ್ಥಿಯನು ಈಯುವುದು ಎನ್ನುತಲಿ ಬೇಡಿದರು ॥೯೮೫॥

ಪರರಿಂಗೆ ಉಪಕಾರ ಗೈಯ್ಯಲಿಕೆ ದೇಹವಿದೆ
ದೈತ್ಯನನು ಕೊಲ್ಲುತಲಿ ದಿವಿಜರನು ರಕ್ಷಿಸಲು
ಅಸ್ಥಿಯನು ದಾನವನು ಈಯುವೆನು ಎನ್ನುತಲಿ
ಪ್ರಾಣವನು ತ್ಯಜಿಸುತಲಿ ಅಸ್ಥಿಯನು ಇತ್ತಿಹನು ॥೯೮೬॥

ಸುರಶಿಲ್ಪಿ ವರತ್ವಷ್ಟೃ ಘೋರ ವಜ್ರಾಯುಧವ
ಗೈಯ್ಯುತಿರೆ ದೇವೇಂದ್ರ ವೃತ್ರನಾ ದೈತ್ಯನನು
ಯುದ್ಧವನು ಗೈಯ್ಯುತಲಿ ಸಂಹಾರ ಗೈಯ್ಯುತಲಿ
ಭೂಮಿಯನು ಸ್ವರ್ಗವನು ಸಕಲವನು ಜಯಿಸಿದನು ॥೯೮೭॥

ಕಾಲೇಯ ರಕ್ಕಸರು ಭಯಭೀತರಾಗುತಲಿ
ಸಾಗರದ ತಳವನ್ನು ಸೇರುತಲಿ ಅಡಗಿದರು
ತಪಸಿಗಳು ಯಜ್ಞದಲಿ ಅರ್ಪಿಸುವ ಹವಿಸನ್ನು
ಸವಿಯುತಲಿ ಸುರರುಗಳು ಬಲವಾಗಿ ಕೊಬ್ಬಿಹರು ॥೯೮೮॥

ತಪಸಿಗಳ ಮುನಿಗಳನು ನಾಶವನು ಗೈಯ್ಯುವುದು
ಎನ್ನುತಲಿ ಕಾಲೇಯ ರಾಕ್ಷಸರು ರಾತ್ರಿಯಲಿ
ಹೊರಬಂದು ಋಷಿಗಳನು ಕೊಲ್ಲುತಲಿ ಭಕ್ಷಿಸುತ
ಮತ್ತೆ ಆ ಸಾಗರದಿ ಅಡಗುತಲಿ ಇರ್ದಿಹರು ॥೯೮೯॥

ಮುನಿನಿಕರ ವಿಷ್ಣುವಿನ ಬಳಿಯಲ್ಲಿ ತೆರಳುತಲಿ
ದೈನ್ಯದಲಿ ಪ್ರಾರ್ಥಿಸುತ ಕಾಲೇಯ ರಕ್ಕಸರ
ಹಿಂಸೆಯನು ವಿವರಿಸುತ ತಪಸಿಗಳ ಸಲಹುವುದು
ಎನ್ನುತಲಿ ಮೊರೆಯಿಡಲು ವರವಿಷ್ಣು ನುಡಿದಿಹನು ॥೯೯೦॥

ಕಡಲನ್ನು ಬತ್ತಿಸುತ ಬರಿದಾಗಿ ಮಾಡಿದೊಡೆ
ಕಾಲೇಯ ದೈತ್ಯರನು ಕೊಲ್ಲುವುದು ಸಾಧ್ಯವಿದೆ
ಜಗದೊಳಗೆ ಸಾಗರವ ಕುಡಿಯುತಲಿ ಬತ್ತಿಸಲು
ಅಗಸ್ತ್ಯ ಮುನಿವರನು ಒಬ್ಬನೇ ಸಮರ್ಥನಿಹ ॥೯೯೧॥

ಎನ್ನುತಲಿ ನರಯಣನು ನುಡಿಯುತಿರೆ ಸಕಲರೂ
ಮುನಿವರ ಅಗಸ್ತ್ಯನೆಡೆ ಐತಂದು ನಮಿಸುತಲಿ
ಪರಮೈತ್ರ ವರಣಿಯೆ ಘನಮಹಿಮಗಸ್ತ್ಯನೆ
ಎಮ್ಮನ್ನು ರಕ್ಷಿಪುದು ಎನ್ನುತಲಿ ನುಡಿದಿಹರು ॥೯೯೨॥

ಕಾಲೇಯ ರಕ್ಕಸರು ಋಷಿನಿಕರವೆಲ್ಲವನು
ಕ್ರೌರ್ಯದಲಿ ಹಿಂಸಿಸುತ ಭಕ್ಷಿಸುತಲಿರುತಿಹರು
ವಿಂಧ್ಯದಾ ಗರ್ವವನು ಮುರಿದಿರುವ ಘನಋಷಿಯೆ
ಎಮ್ಮನ್ನು ರಕ್ಷಿಪುದು ಎಂದಿಹರು ಮುನಿವರರು ॥೯೯೩॥

ಧರ್ಮಜನು ಕೇಳುತಲಿ ಆವಪರಿ ಅಗಸ್ತ್ಯನು
ವಿಂಧ್ಯದಾ ಗರ್ವವನು ಮುರಿದಿಹನು ಎನ್ನುತಲಿ
ಕೇಳುತಿರೆ ಲೋಮಶರು ಪರ್ವತದ
ಬೆಳವಣಿಗೆ ತಡೆದಿರುವ ವೃತ್ತಾಂತವನರುಹಿದನು ॥೯೯೪॥

ಮೇರುವಿನ ಪರ್ವತದ ಎತ್ತರಕೆ ಮಿಗಿಲಾಗಿ
ವರ್ಧಿಪೆನು ಎನ್ನುತಲಿ ವಿಂಧ್ಯಾದ್ರಿ ಸೊಕ್ಕಿನಲಿ
ಮುಗಿಲನ್ನು ಮುಟ್ಟುವಾ ಪರಿಯಲ್ಲಿ ಬೆಳೆಯುತಿರೆ
ಸ್ವರ್ಗದಾ ಸುರರುಗಳು ಕಳವಳವಗೊಳ್ಳುತಲಿ ॥೯೯೫॥

ಅಗಸ್ತ್ಯ ಋಷಿವರನ ಬಳಿಯಲ್ಲಿ ಧಾವಿಸುತ
ವಿಂಧ್ಯದಾ ವರ್ಧನೆಯ ವಿಷಯವದು ಅರುಹುತಿರೆ
ಅಗಸ್ತ್ಯ ಸತಿಲೋಪಾ ಮುದ್ರೆಯಳ ಸಹಿತದಲಿ
ವಿಂಧ್ಯಾದ್ರಿ ಬಳಿಬಂದು ನುಡಿದಿಹನು ನಯದಿಂದ ॥೯೯೬॥

ಸತಿಸಹಿತ ತೆಂಕಣಕೆ ಯಾತ್ರೆಯನು ಗೈಯ್ಯಲಿಕೆ
ಹೊರಟಿಹೆನು ನೀನೀಗ ದಾರಿಯನು ಈಯುವುದು
ಯಾತ್ರೆಯನು ಗೈಯ್ಯುತಲಿ ನಾವುಗಳು ಮರಳುವೆವು
ಆ ಕಾಲ ಪರ್ಯಂತ ಬೆಳೆಯುವದ ನಿಲ್ಲಿಪುದು ॥೯೯೭॥

ಎನ್ನುತಲಿ ಅಗಸ್ತ್ಯ ನುಡಿಯುತಿರೆ ವಿಂಧ್ಯಾದ್ರಿ
ಗಾತ್ರವನು ತಗ್ಗಿಸುತ ಮಾರ್ಗವನು ಈಯುತಿರೆ
ಅಗಸ್ತ್ಯ ದಾಂಟುತಲಿ ದಕ್ಷಿಣಕೆ ತೆರಳುತಲಿ
ಶಾಶ್ವತದಿ ನೆಲಸಿದನು ಉತ್ತರಕೆ ಮರುಳದಲೆ ॥೯೯೮॥

ಈ ಪರಿಯೇ ವಿಂಧ್ಯದಾ ಗರ್ವವದು ಮುರಿದಿಹುದು
ಎನ್ನುತಲಿ ಪೇಳುತಲಿ ಸುರರುಗಳೆ ನೀವುಗಳು
ಬಂದಿರುವ ಕಾರಣವ ಅರುಹುವುದು ಎನ್ನುತಲಿ
ಅಗಸ್ತ್ಯ ನುಡಿಯುತಿರೆ ಸುರರುಗಳು ನುಡಿದಿಹರು ॥೯೯೯॥

ಸಾಗರದ ತಳದಲ್ಲಿ ವಾಸಿಸುವ ಕಾಲೇಯ
ದಾನವರ ಕೊಲ್ಲಲಿಕೆ ಕಡಲಿನಾ ನೀರನ್ನು
ಕುಡಿಯುತಲಿ ಬತ್ತಿಪುದು ನಾವುಗಳ ರಕ್ಕಸರ
ಸಂಹಾರ ಗೈಯ್ಯುವೆವು ಎಂದಿಹರು ಸುರರುಗಳು ॥೧೦೦೦॥

ಗಂಧರ್ವ ಸುರರುಗಳ ಸಂಗಡದಿ ಅಗಸ್ತ್ಯರು
ಕಡಲಿನಾ ತೀರದಲಿ ಐತಂದು ಮಂಡಿಸುತ
ಶ್ವಾಸವನು ಎಳೆಯುತಲಿ ಒಕ್ಕುಡಿತೆ ಕುಡಿತಿಯಲಿ
ಒಂದು ಹನಿತೊರೆಯದಲೆ ಸಾಗರವನೀಂಟಿಹರು ॥೧೦೦೧॥

ಸಾಗರವು ಬತ್ತುತಿರೆ ಸುರರುಗಳು ಮುತ್ತುತಲಿ
ಯುದ್ಧವನು ಗೈಯ್ಯುತಲಿ ಅಗಣಿತದ ಕಾಲೇಯ
ದೈತ್ಯರನು ಸನಹಾರ ಗೈಯ್ಯುತಿರೆ ಕೆಲರುಗಳು
ರಕ್ಕಸರು ಪಾತಾಳಲೋಕವನು ಸೇರಿದರು ॥೧೦೦೨॥

ಅರ್ಣವವು ಬತ್ತುತಿರೆ ಕಾಣುತಲಿ ಸುರರುಗಳು
ಅಗಸ್ತ್ಯನೆಡೆ ಐತಂದು ಕುಡಿದಿರುವ ಜಲವನ್ನು
ಮರಳಿ ಈ ಕಡಲಿನಲಿ ಸುರಿಸುತಲಿ ತುಂಬಿಪುದು
ಎನ್ನುತಲಿ ಪ್ರಾರ್ಥಿಸಲು ಋಷಿವರನು ನುಡಿದಿಹನು ॥೧೦೦೩॥

ಒಡಲಿನಲಿ ಕುಡಿದಿರುವ ಕಡಲಿನಾ ಜಲವೆಲ್ಲ
ಜೀರ್ಣಾಗಿ ಹೋಗಿಹುದು ಸಾಗರವ ತುಂಬಲಿಕೆ
ಆ ಸೃಷ್ಟಿಕರ್ತನಾ ಬ್ರಹ್ಮನನು ಕೇಳುವುದು
ಎನ್ನುತಲಿ ಸರ್ವರನು ದಿವಿಜರನು ಕಳುಹಿದನು ॥೧೦೦೪॥

ಸುರರುಗಳ ಬ್ರಹ್ಮನಾ ಬಳಿಬಂದು ದೈನ್ಯದಲಿ
ಸಾಗರವು ಬರಿದಾದ ವೃತ್ತಾಂತ ವರುಹುತಲಿ
ಮತ್ತೆ ಆ ಸಾಗರವು ಜಲದಿಂದ ತುಂಬುವಾ
ಪರಿಯಲ್ಲಿ ಕರುಣಿಪುದು ಎನ್ನುತಲಿ ನುಡಿದಿಹರು ॥೧೦೦೫॥

ಮುಂದಕ್ಕೆ ಭಗೀರಥ ಮಹಾನೃಪ ತಪಸಿನಲಿ
ಹರನನ್ನು ಒಲಿಸುತಲಿ ಗಂಗೆಯನು ಧರೆಗಿಳಿಸಿ
ಸಾಗರವ ತುಂಬುವನು ಚಿಂತೆಯನು ಮಾಡದಿರಿ
ಎನ್ನುತಲಿ ದಿವಿಜರನು ಕಳುಹಿದನು ಕಮಲಜನು ॥೧೦೦೬॥

**ನೃಪವರನ ಭಗೀರಥನ ಹರನನ್ನು ಒಲಿಸುತಲಿ ।**
**ಪಾವನಳ ಗಂಗೆಯನು ಧರೆಗಿಳಿಸಿ ತಂದಿಹನು ॥**

ಈ ಪರಿಯೆ ಲೋಮಶರು ನುಡಿಯುತಿರೆ ಧರ್ಮಜನು
ಭಗೀರಥ ಗಂಗೆಯನು ಧರೆಗಿಳಿಸಿ ತಂದಿರುವ
ವೃತ್ತಾಂತವರುಹುವುದು ಎನ್ನುತಲಿ ನುಡಿಯುತಿರೆ
ಲೋಮಶರು ಭಗೀರಥ ಯತ್ನವನು ಅರುಹಿದರು ॥೧೦೦೭॥

ಆಲಿಪುದು ಧರ್ಮಜನೆ ಖ್ಯಾತಮಿಹ ರವಿಕುಲದಿ
ಇಕ್ಷ್ವಾಕುವಂಶದಲಿ ವರಸಗರ ನೃಪನಿಂಗೆ
ವೈದರ್ಭ ರಾಜಸುತೆ ಶೈಬ್ಯನಾ ಪುತ್ರಿಯಳು
ಸತಿಯೀರ್ವರಿರುತಿರಲು ಪರಶಿವನ ಕರುಣೆಯಲಿ ॥೧೦೦೮॥

ಶೈಬ್ಯಳಾ ಉದರದಲಿ ಸುತನೋರ್ವ ಜನಿಸಿಹನು
ವೈದರ್ಭ ಕುವರಿಯಲಿ ರೈಯ್ಯೆಂಟ ಬಲಿಷ್ಠರು
ಅತಿಕ್ರೂರ ಕರ್ಮಿಗಳು ಮಾನವರ ದಾನವರ
ಸುರರುಗಳನೆಲ್ಲರನು ಹಿಂಸಿಸುತಲಿರ್ದಿಹರು ॥೧೦೦೯॥

ಸಗರನೃಪ ವರಅಶ್ವಮೇಧದಾ ಯಾಗವನು
ಮಾಡಲಿಕೆ ಅರವತ್ತು ಸಾವಿರದ ಸುತರೊಡನೆ
ಅಶ್ವವನು ಬಿಡುತಲಿಕೆ ದೇಶಗಳ ಚರಿಸುತಲಿ
ಕಾಡಿನಲಿ ಒಂದಿರುಳು ಮಲಗಿರಲು ಸಕಲರೂ ॥೧೦೧೦॥

ನೂರಕ್ಕೆ ಒಂದೂನ ಯಾಗವನು ಮಾಡುತಿಹ
ಸಗರನಾ ಆಶ್ವವನು ದೇವೇಂದ್ರ ರಾತ್ರಿಯಲಿ
ಅಪಹರಿಸಿ ಪಾತಾಳ ಲೋಕಕ್ಕೆ ಸಾಗುತಲಿ
ತಪಗೈವ ಕಪಿಲಋುಷಿ ಬಳಿಯಲ್ಲಿ ಕಟ್ಟಿದನು ॥೧೦೧೧॥

ಸಗರನಾ ಸುತರುಗಳು ಕುದುರೆಯನು ಕಾಣದಲೆ
ಬತ್ತಿರುವ ಸಾಗರದ ಬಳಿಯಲ್ಲಿ ಬರುತಲಿರೆ
ತಳದಲ್ಲಿ ಗವಿಯೊಂದ ಕಾಣುತಲಿ ಸಾಗುತಲಿ
ಪಾತಾಳ ಲೋಕದಲಿ ಅಶ್ವವವನು ಕಂಡಿಹರು ॥೧೦೧೨॥

ಈ ಋುಷಿಯು ಅಶ್ವವನು ಕದ್ದಿಹನು ಎನ್ನುತಲಿ
ಮುತ್ತುತಿರೆ ಕಪಿಲಮುನಿ ಕಣ್ತೆರೆದು ಕೋಪದಲಿ
ಕೆಂಡಗಳ ಸೂಸುತಲಿ ಅರವತ್ತು ಸಾವಿರದ
ಸಗರನಾ ತನಯರನು ಭಸ್ಮವನು ಮಾಡಿಹನು ॥೧೦೧೩॥

ನಾರದರು ಅರಿಯುತಲಿ ಸಗರನಿಗೆ ತಿಳಿಸುತಿರೆ
ಪೌತ್ರನನು ವರಅಂಶುಮಂತನನು ಕಳಿಸುತಿರೆ
ಕಪಿಲಋುಷಿ ಬಳಿಯಲ್ಲಿ ಐತಂದು ನಮಿಸುತಿರೆ
ಋುಷಿವರನು ಸಂಪ್ರೀತನಾಗುತಲಿ ನುಡಿದಿಹನು ॥೧೦೧೪॥

ನಿನಗಾವುದಿಷ್ಟವಿದೆ ವರವನ್ನು ಬೇಡುವುದು
ಎನ್ನುತಿರೆ ಕಪಿಲಮುನಿ ವರಅಶ್ವಮೇಧವನು
ಎನ್ನಯಾ ಪಿತಗೈಯ್ಯುತಿರುತಿಹನು ಅಶ್ವವನು
ಈಯುವುದು ಎಂದಿಹನು ವರಅಂಶುಮಂತನು ॥೧೦೧೫॥

ಭಸ್ಮವನು ಗೈದಿರುವ ಎನ್ನಯಾ ಪಿತರುಗಳ
ಬದುಕಿಪುದು ಎನ್ನುತಲಿ ಅಂಶುಮಂತುಸುರುತಿರೆ
ನಿನ್ನಜ್ಜ ಸಗರನಾ ಯಾಗದಾ ಕುದುರೆಯನು
ಕೊಳ್ಳುವುದು ಎಂದಿಹನು ಕಪಿಲಮುನಿ ಕರುಣೆಯಲಿ ॥೧೦೧೬॥

ಮುಂದಕ್ಕೆ ನಿನ್ನಯಾ ಶ್ರೇಷ್ಠನಿಹ ಮೊಮ್ಮಗನು
ಹರನನ್ನು ಒಲಿಸುತಲಿ ಗಂಗೆಯನು ಧರೆಗಿಳಿಸಿ
ನಿನ್ನಯಾ ಪಿತೃಗಳನು ಉದ್ಧಾರ ಗೈಯುವನು
ಎನ್ನುತಲಿ ಅಶ್ವವನು ಈಯುತಲಿ ಕಳುಹಿದನು ॥೧೦೧೭॥

ವರಅಂಶುಮಂತನು ಯಜ್ಞದಾ ಅಶ್ವವನು
ತರುತಲಿರೆ ಸಗರನೃಪ ಸಂತಸದಿ ಯಾಗವನು
ಗೈಯ್ಯುತಲಿ ಧರ್ಮದಲಿ ರಾಜ್ಯವನು ಆಳಿಹನು
ಬಳಿಕಿನಲಿ ಪಟ್ಟವನು ಅಂಶುಮಂತೇರಿದನು ॥೧೦೧೮॥

ನೃಪನಂಶುಮಂತನು ಮರಣವನು ಅಪ್ಪುತಿರೆ
ಪುತ್ರನಾ ಭಗೀರಥನು ರಾಜ್ಯವನು ಆಳುತಿರೆ
ತನ್ನಯಾ ಪಿತರುಗಳು ಭಸ್ಮವದು ಆಗಿರುವ
ವೃತ್ತಾಂತವರಿಯುತಲಿ ಕಳವಳವ ಗೊಂಡಿಹನು ॥೧೦೧೯॥

ಪಾಪಗಳ ಪರಿಹರಿಪ ಪಾವನಳ ಗಂಗೆಯನು
ಭೂಲೋಕಕಿಳಿಸುತಲಿ ಎನ್ನಯಾ ಪಿತರುಗಳ
ಉದ್ಧಾರ ಗೈಯ್ಯುವುದು ಎನ್ನುತಲಿ ಯೋಚಿಸುತ
ಹಿಮಗಿರಿಗೆ ತೆರಳುತಲಿ ಗಂಗೆಯನು ಭಜಿಸಿದನು ॥೧೦೨೦॥

ವರಗಂಗೆ ದರ್ಶನವನೀಯುತಲಿ ನೃಪವರನೆ
ನಿನ್ನಯಾ ಇಷ್ಟವನು ಹೇಳುವುದೇ ಎನ್ನುತಿರೆ
ಎನ್ನಯಾ ಪಿತರುಗಳ ಪಾಪಗಳ ಪರಿಹರಿಸಿ
ಉದ್ಧಾರ ಗೈಯ್ಯುವುದು ಎಂದಿಹನು ಭಗೀರಥ ॥೧೦೨೧॥

ಧರೆಗಿಳಿದು ನಾ ಬಹೆನು ಭಾರವನು ವೇಗವನು
ಧರಿಸುತಲಿ ತಡೆಯಲಿಕೆ ಭೂದೇವಿಗಸದಳವು
ಹರನೋರ್ವ ಎನ್ನನ್ನು ಧರಿಸಲಿಕೆ ಶಕ್ತನಿಹ
ಎನ್ನುತಿರೆ ಭಗೀರಥ ಶಿವನನ್ನು ಭಜಿಸಿದನು ॥೧೦೨೨॥

ಉಗ್ರತರ ತಪಗೈದು ಪರಶಿವನ ಒಲಿಸುತಲಿ
ಧರೆಗಿಳಿವ ಗಂಗೆಯನು ಶಿರದೊಳಗೆ ಧರಿಸುವುದು
ಎನ್ನುತಲಿ ನುಡಿಯುತಿರೆ ಪರಶಿವನು ಮೊಗವೆತ್ತಿ
ಧೃಢವಾಗಿ ನಿಂದಿಹನು ಹಿಮಗಿರಿಯ ಶಿಖರದಲಿ ॥೧೦೨೩॥

ಸಾಗರದ ತೆರೆಗಳಾ ಪರಿಯಲ್ಲಿ ಮೊರೆಯುತಲಿ
ಆರ್ಭಟಿಸಿ ಭೋರ್ಗರೆದು ಧುಮುಕುತಲಿ ವರಗಂಗೆ
ಶಿರವೆತ್ತಿ ನಿಂದಿರುವ ಮೂಲೋಕದಧಿದೈವ
ಪರಶಿವನ ಜಡೆಯಲ್ಲಿ ರಭಸದಲಿ ಇಳಿದಿಹಳು ॥೧೦೨೪॥

ಜಡೆಯೊಂದ ಕೂದಲೆಳೆ ಸರಿಸುತಿರೆ ವರಮೃಡನು
ಸ್ವರ್ಗದಾ ಸ್ರೋತವೇ ಧರೆಗಿಳಿದು ಬರುತಿಹುದೊ
ಎಂಬಂತೆ ವರಗಂಗೆ ಅದ್ಭುತ ಪ್ರಪಾತದಲಿ
ಭೂಮಿಯನು ಅಪ್ಪಳಿಸೆ ಜಗವೆಲ್ಲ ಕಂಪಿಸಿತು ॥೧೦೨೫॥

ಹೇ ಭಗೀರಥ ಶ್ರೇಷ್ಠ ಮಾರ್ಗವನು ತೋರುವುದು
ಎನ್ನುತಿರೆ ಜಾಹ್ನವಿಯು ಭಗೀರಥನು ಭರದಲ್ಲಿ
ಮುಂದಕ್ಕೆ ಸಾಗುತಲಿ ಮಾರ್ಗವನು ತೋರುತಲಿ
ಬತ್ತಿರುವ ಸಾಗರದ ಬಳಿಯಲ್ಲಿ ಬಂದಿಹನು ॥೧೦೨೬॥

ವರಗಂಗೆ ಧಾವಿಸುತ ಸಾಗರವ ತುಂಬುತಿರೆ
ಜಾಹ್ನವಿಯು ಪಾವನದ ಜಲಸ್ಪರ್ಶವಾಗುತಿರೆ
ಭಗೀರಥ ನೃಪವರನ ಪಿತರುಗಳು ಪಾಪವದು
ಪರಿಹಾರವಾಗುತಲಿ ಸದ್ಗತಿಯ ಪಡೆದಿಹರು ॥೧೦೨೭॥

ಈ ಪರಿಯೆ ಭಗೀರಥ ಗಂಗೆಯನು ಭೂಮಿಯಲಿ
ತಂದಿರುವ ಕಾರಣದಿ ಪಾವನಳ ಜಾಹ್ನವಿಗೆ
ಭಾಗೀರಥೀ ಎಂಬ ಹೆಸರಾಯ್ತು ಜಗದೊಳಗೆ
ಎನ್ನುತಲಿ ಧರ್ಮಜಗೆ ಲೋಮಶರು ನುಡಿದಿಹರು ॥೧೦೨೮॥

ಮುಂದಕ್ಕೆ ಯಾತ್ರೆಯಲಿ ಸಾಗುತಲಿ ನಂದೆಯಲಿ
ವರಅಪರ ನಂದಿಯಲಿ ನದಿಗಳಲಿ ಮೀಯುತಲಿ
ಹೇಮಾದ್ರಿ ವೃಷಭಾದ್ರಿ ಮೊದಲಾದ ಗಿರಿಗಳನು
ದಾಂಟುತಲಿ ಕೌಶಿಕದ ನದಿತಟಕೆ ಬಂದಿಹರು ॥೧೦೨೯॥

**ಲೋಮಶರು ವರಋಷಿ ಶೃಂಗನಾ ಕಥೆಯನ್ನು ।**
**ಧರ್ಮಜಗೆ ಸರಸದಲಿ ವಿಸ್ತರದಿ ಹೇಳಿದನು ॥**

ತೀರದಲಿ ಶೋಭಿಸುವ ಕೌಶಿಕರ ಆಶ್ರಮವ
ಕಾಣುತಲಿ ಸಂತಸವ ಗೊಳ್ಳುತಲಿ ನಡೆಯುತಲಿ
ವರಮುನಿ ವಿಭಾಂಡಕನ ವರಋಷ್ಯ ಶೃಂಗನಾ
ಆಶ್ರಮಕೆ ಬರುತಿರಲು ಲೋಮಶರು ನುಡಿದಿಹರು ॥೧೯೩೦॥

ಇದು ವಿಭಾಂಡಕ ಮುನಿಯು ವರಋಷ್ಯ ಶೃಂಗನು
ತಪಗೈದ ಪಾವನದ ಆಶ್ರಮವು ಇರುತಿಹುದು
ಶೃಂಗಮುನಿ ಚರಿತೆಯದು ಕೌತುಕವು ಸೋಜಿಗವು
ವಿವರಿಸುವೆ ಕೇಳುವುದು ಎಂದಿಹರು ಲೋಮಶರು ॥೧೦೩೧॥

ಒಂದುದಿನ ನದಿಯಲ್ಲಿ ಋಷಿವರ ವಿಭಾಂಡಕನು
ಸ್ನಾನವನು ಗೈಯ್ಯುತಿರೆ ಗಗನದಲಿ ಚರಿಸುತಿಹ
ಸುರಲೋಕದಪ್ಸರೆಯು ಊರ್ವಶಿಯು ನೋಡುತಿರೆ
ವೀರ್ಯವದು ಸ್ಖಲಿಸುತಲಿ ಜಲದೊಳಗೆ ಬಿದ್ದಿಹುದು ॥೧೦೩೨॥

ಅನಿತರಲಿ ಜಿಂಕೆಯದು ನೀರಡಿಸಿ ಬಳಲುತಲಿ
ವೀರ್ಯದಾ ಸಹಿತಲಿದ ನೀರನ್ನು ಕುಡಿಯುತಿರೆ
ಜಿಂಕೆಯದು ಗರ್ಭವನು ಧರಿಸುತಲಿ ಶೃಂಗಗಾ
ಶಿರಸಹಿತ ಶಿಶುವೊಂದ ಹೆತ್ತಿಹುದು ॥೧೦೩೩॥

ಶೃಂಗದಾ ಸಹಿತದಲಿ ಶೋಭಿಸುವ ಶಿಶುವಿಂಗೆ
ಋಷ್ಯ ಶೃಂಗನೆಂಬುವಾ ಹೆಸರನ್ನು ಇಟ್ಟಿಹರು
ಆಶ್ರಮದಿ ಬೆಳೆಯುತಲಿ ಎಂದಿಗೂ ಸ್ತ್ರೀಯರನು
ನೋಡದಲೆ ಸತತವೂ ತಪಗೈಯ್ಯುತಿರುತಿಹನು ॥೧೦೩೪॥

ಧರ್ಮಸುತ ಕೇಳುವುದು ದಶರಥನ ಸ್ನೇಹಿತನು
ಲೋಮಪದ ನೃಪವರನು ದ್ವಿಜನಿಂಗೆ ದಾನವನು
ಈಯುವೆನು ಎನ್ನುತಲಿ ಬೇಡುವುದು ಎನ್ನುತಿರೆ
ಧನಕನಕ ವಸ್ತ್ರಗಳ ವಿಪ್ರವರ ಬೇಡಿದನು ॥೧೦೩೫॥

ದಾನವನು ನಾನೀಯೆ ವಚನವನು ಕೊಟ್ಟಿಲ್ಲ
ಎನ್ನುತಲಿ ಲೋಮಪದ ಅನೃತವನು ನುಡಿಯುತಿರೆ
ಕೋಪದಲಿ ನಿನ್ನಯಾ ರಾಜ್ಯವದು ಕ್ಷಾಮದಲಿ
ನಶಿಸುವುದು ಎನ್ನುತಲಿ ಭೂಸುರನು ಶಪಿಸಿದನು ॥೧೦೩೬॥

ಮಳೆಬೆಳೆಯು ಇಲ್ಲದೆಯೆ ಆಹಾರವಿಲ್ಲದೆಯೆ
ಕ್ಷಾಮದಲಿ ಸಕಲ ಪ್ರಜೆ ಪ್ರಾಣಿಗಳು ಬಳಲುತಿರೆ
ಸಕಲರೂ ಲೋಮಪದ ನೃಪನೆಡೆಗೆ ಐತಂದು
ಕಳವಳದಿ ಮೊರೆಯಿಡುತ ರೋದನವ ಗೈದಿಹರು ॥೧೦೩೭॥

ವರಋಷ್ಯ ಶೃಂಗನು ವಾಸಿಸುವ ತಾಣದಲಿ
ಮಳೆಬೆಳೆಯು ಸುಖಶಾಂತಿ ಇಹುದೆಂದು ಎಂಬುವರು
ಋಷಿವರನ ಕರೆಸಿದೊಡೆ ಪರ್ಜನ್ಯ ವೃಷ್ಟಿಯದು
ಧಾರೆಯಲಿ ಸುರಿಯುವುದು ಎಂದಿಹರು ಸಕಲ ಪ್ರಜೆ ॥೧೦೩೮॥

ಮುನಿವರನ ಕರೆತರಲು ಅರಮನೆಯ ಚೆಲುವೆಯರ
ನಾರಿಯರ ನಿಕರವನು ಆಶ್ರಮಕೆ ಕಳುಹಿದನು
ಹಾವದಲಿ ಭಾವದಲಿ ಸಂಗೀತ ನೃತ್ಯದಲಿ
ಮುನಿವರನ ಮನವನ್ನು ಚಂಚಲವ ಗೊಳಿಸಿದರು ॥೧೦೩೯॥

ಎಂದಿಗೂ ನಾರಿಯರ ಕಾಣದಿಹ ಮುನಿವರನು
ಹೊಚ್ಚಹೊಸ ಯೌವ್ವನದ ತನಿರಸದ ಲಾವಣ್ಯ
ಸೌಂದರ್ಯ ಪೂರಿತದ ಚೆಲುವೆಯರ ಕಾಣುತಲಿ
ಮೋಹದಾ ಬಲೆಯೊಳಗೆ ಮನಮೃಗವು ಸಿಲುಕಿಹುದು ॥೧೦೪೦॥

ಮಧುರೋಕ್ತಿ ವಿಲಾಸದಲಿ ಹಾಸ್ಯದಲಿ ಲಾಸ್ಯದಲಿ
ಸಲ್ ಬೆರಳ ಸೋಂಕಿನಲಿ ಮುನಿವರನ ಒಲಿಸುತಲಿ
ರಾಜ್ಯದಲಿ ಕರೆತರಲು ಲೋಮಪದ ನೃಪವರನು
ಆದರದಿ ಪೂಜಿಸುತ ಸತ್ಕಾರ ಗೈದಿಹನು ॥೧೦೪೧॥

ಭರದಲ್ಲಿ ಗಗನದಲಿ ಮೇಘಗಳ ಮಾಲೆಗಳು
ಬೀಸುತಲಿ ಗಜಗಾತ್ರ ಧಾರೆಯಲಿ ಜಲವನ್ನು
ಪ್ರಳಯದಾ ಮಳೆಯಂತೆ ಸುರಿಸುತಿರೆ ಭರದಲ್ಲಿ
ಸಕಲ ಪ್ರಜೆ ಸಂತಸದಿ ನಲಿದಿಹರು ಸಂಭ್ರಮದಿ ॥೧೦೪೨॥

ಆ ಲೋಮ ಪಾದನೃಪ ಸಂತಸದಿ ಶಿವಾಂಶಗೆ
ವರಋುಷ್ಯ ಶೃಂಗನಿಗೆ ನಿಜಸುತೆಯ ಶಾಂತೆಯನು
ಈಯುತಲಿ ವೈವಾಹದುತ್ಸವವ ಗೈಯ್ಯುತಿರೆ
ಸಕಲ ಪ್ರಜೆ ಸಂತಸದ ಸಾಗರದಿ ಮುಳುಗಿದರು ॥೧೦೪೩॥

ಅತ್ತಲಾ ವಿಭಾಂಡಕ ಆಶ್ರಮಕೆ ಬರುತಿರಲು
ಸುತಋುಷ್ಯ ಶೃಂಗನನು ಕಾಣದಲೆ ಚಿಂತಿಸುತ
ಒಳಗಿನಾ ದೃಷ್ಟಿಯಲಿ ಇದು ಲೋಮಪಾದನಾ
ತಂತ್ರವಿದೆ ಎನ್ನುತಲಿ ಕಿಡಿಕಂಡ ಕಾರುತಲಿ ॥೧೦೪೪॥

ಆ ಲೋಮ ಪಾದನಾ ಅರಮನೆಗೆ ಬರುತಿರಲು
ನೃಪವರನು ಸತ್ಕಾರ ಗೈಯ್ಯುತಲಿ ನಮಿಸುತಿರೆ
ಸುತ ಋುಷ್ಯ ಶೃಂಗಮುನಿ ಸೊಸೆ ಶಾಂತೆ ಐತರುತ
ವಿಭಾಂಡಕನ ಚರಣಕ್ಕೆ ಸಾಷ್ಟಾಂಗವೆರಗಿದರು ॥೧೦೪೫॥

ಸುತನನ್ನು ಸೊಸೆಯನ್ನು ಕಾಣುತಲಿ ಋುಷಿವರನು
ಕೋಪವದು ತೊಲಗುತಲಿ ಹರುಷದಲಿ ತನಯಂಗೆ
ಶಿಶುವೊಂದು ಜನಿಸುತಿರೆ ಸತಿಸಹಿತ ಆಶ್ರಮಕೆ
ಮರಳುವುದು ಎನ್ನುತಲಿ ಹರಸುತಲಿ ತೆರಳಿದನು ॥೧೦೪೬॥

ಮಾಸಗಳು ಉರುಳುತಿರೆ ಶಿಶುವೊಂದು ಜನಿಸುತಿರೆ
ಶಿಶುವನ್ನು ಲೋಮಪದ ನೃಪನಿಂಗೆ ಈಯುತಲಿ
ವರಋುಷ್ಯ ಶೃಂಗಮುನಿ ಸತಿಶಾಂತಿ ಸಹಿತದಲಿ
ತಪಸಿಂಗೆ ತನ್ನಯಾ ಆಶ್ರಮಕೆ ತೆರಳಿದನು ॥೧೦೪೭॥

ಆ ವಿಭಾಂಡಕ ಮುನಿಯು ಶೃಂಗಋುಷಿ ತಪಗೈದ
ಪಾವನದ ಆಶ್ರಮವು ಇದು ಎಂದು ನುಡಿಯುತಲಿ
ಯಾತ್ರೆಯಲಿ ಸಾಗುತಲಿ ನಡುವನವ ದಾಂಟುತಲಿ
ಪಾವನದ ಮಹೇಂದ್ರ ಪರ್ವತಕೆ ಬಂದಿಹರು ॥೧೦೪೮॥

ಅಲ್ಲಿರ್ದ ಅಕೃತವ್ರಣ ಎಂಬುವಾ ಋುಷಿವರನು
ನಾಳೆಯೆ ಚತುರ್ದಶಿಯು ದಿನದಂದು ಎಮ್ಮಗುರು
ಘನ ಪರಶುರಾಮನು ಇಲ್ಲಿಗೇ ಬರುತಿಹನು
ಎನ್ನುತಲಿ ನುಡಿಯುತಿರೆ ಧರ್ಮಜನು ನುಡಿದಿಹನು ॥೧೦೪೯॥

**ತಾಯಿಯಾ ಶಿರತರಿದ ಆ ಪರಶುರಾಮನಾ**
**ಚರಿತೆಯನು ಧರ್ಮಜಗೆ ಸರಸದಲಿ ಅರುಹಿದನು!!**

ಪಾವನನ ವರಪರಶುರಾಮನಾ ಚರಿತೆಯನು
ಪೇಳುವುದು ಎನ್ನುತಲಿ ಧರ್ಮಜನು ನುಡಿಯುತಿರೆ
ನಿನ್ನಯಾ ಬರವನ್ನು ಮೊದಲಿಂಗೆ ಅರಿಯುತಲಿ
ಕೊಡಲಿಧರ ನಾಳೆಯೇ ಬಹನೆಂದು ನುಡಿದಿಹನು ॥೧೦೫೦॥

ಕೇಳುವುದು ಧರ್ಮಜನೆ ಭೃಗುಕುಲದಿ ಜನಿಸಿರುವ
ವೇದಗಳ ಶಾಸ್ತ್ರಗಳ ಧನುರ್ವೇದ ಕೋವಿದನು
ಜಮದಗ್ನಿ ಮುನಿವರನು ಪ್ರಸೇನಸುತೆ ಶೀಲೆಯನು
ಚೆಲುವೆಯನು ರೇಣುಕೆಯ ವರಿಸಿಹನು ಒಲವಿನಲಿ ॥೧೦೫೧॥

ಒಂದುದಿನ ಸಾಧ್ವೀ ಶಿರೋಮಣಿಯು ರೇಣುಕೆಯು
ಜಲವನ್ನು ತರಲಿಕ್ಕೆ ನದಿತಟಕೆ ಬರುತಿರಲು
ಚಿತ್ರರಥ ನೃಪವರನು ರಾಣಿಯರ ಸಹಿತದಲಿ
ನದಿಯೊಳಗೆ ಜಲಕ್ರೀಡೆಯಾಡುವುದ ಕಂಡಿಹಳು ॥೧೦೫೨॥

ಬಲ್ಮೊಲೆಯ ಸೊಂಕಿನಲಿ ನಲ್ದೋಳ ಬಂಧನದಿ
ಸರಸದಲಿ ವಿಧವಿಧದ ಶೃಂಗಾರ ಚೇಷ್ಟೆಯಲಿ
ಜಲಕ್ರೀಡೆಯಾಡುವುದು ಕಾಣುತಲಿ ರೇಣುಕೆಯು
ಚಿತ್ತವದು ಕಾಮದಲಿ ಚಲಿಸಿದುದು ಕಲುಷಿತದಿ ॥೧೦೫೩॥

ಜಲಕ್ರೀಡೆಯಾಡುವಾ ಆಸೆಯದು ಜನಿಸುತಲಿ
ರೇಣುಕೆಯು ಮನವೆಲ್ಲ ಕಲ್ಮಷದಿ ತುಳುಕುತಲಿ
ಜಲವವನ್ನು ಕುಂಭದಲಿ ಕೊಳ್ಳುತಲಿ ಬರುತಲಿರೆ
ಜಮದಗ್ನಿ ಮುನಿವರನು ಜ್ಞಾನದಲಿ ಅರಿತಿಹನು ॥೧೦೫೪॥

ಅಗ್ನಿಯಾ ಕೋಪದಲಿ ಜಮದಗ್ನಿ ಮುನಿವರನು
ಕಾಮದಾ ವಾಸನೆಯು ಮಲಿನದಾ ದೇಹದಲಿ
ತಂದಿರುವ ಜಲದಿಂದ ಎನ್ನಯಾ ಜಪತಪವ
ಕೆಡಿಸಿರುವೆ ದುಷ್ಟಾತ್ಮೆ ಪಾತಕಿಯೆ ಎನ್ನುತಲಿ ॥೧೦೫೫॥

ಹೇ ವಸುವೆ ರುಮಣ್ವಂತ ವಿಶ್ವವಸು ಸುಶೇಕ್ಷಣಸೇ
ಹೀನಳೀ ರೇಣುಕೆಯ ಶಿರವನ್ನು ತರಿಯುವುದು
ಎನ್ನುತಲಿ ಸುತರಿಂಗೆ ಅಜ್ಞೆಯನು ಈಯುತಿರೆ
ಇಬ್ಬರೂ ಒಪ್ಪದಿರೆ ಶಾಪವನು ಇತ್ತಿಹನು ॥೧೦೫೬॥

ಬಳಿಕಲಾ ಕೊಡಲಿಧರ ವರಪರಶುರಾಮನು
ಪಿತೃವಚನ ವೇದನುಡಿ ಎನ್ನುತಲಿ ತಾಯಿಯಾ
ರೇಣುಕೆಯ ಶಿರವನ್ನು ತರಿಯುತಿರೆ ಜಮದಗ್ನಿ
ಸಂಪ್ರೀತನಾಗುತಲಿ ರಾಮಂಗೆ ನುಡಿದಿಹನು ॥೧೦೫೭॥

ಭಾರ್ಗವನೆ ಬೇಕಾದ ವರವನ್ನು ಬೇಡುವುದು
ಎನ್ನುತಿರೆ ಸೋದರರ ಶಾಪವನು ಕಳೆಯುವುದು
ತಾಯಿಯಾ ರೇಣುಕೆಯು ಬದುಕಿಪುದು ಮತ್ತೆನಗೆ
ಅಮರತ್ವ ನೀಡುವುದು ಎಂದಿಹನು ಆ ರಾಮ ॥೧೦೫೮॥

ನಿನ್ನಯಾ ಸೋದರರ ಶಾಪವದು ಹಿಂಗಿದುದು
ಸಾಧ್ವಿಯಾ ರೇಣುಕೆಯು ಸಪ್ರಾಣಳಾಗಿಹಳು
ಜಗದೊಳಗೆ ಅಜೇಯನೆಂದೆನಿಸುತಲಿ ಶಾಶ್ವತದಿ
ಚಿರಜೀವಿ ನೀನಾಗು ಎಂದಿಹನು ಜಮದಗ್ನಿ ॥೧೦೫೯॥

ಭಾರ್ಗವನು ಆ ರಾಮ ಸೋದರರ ಸಹಿತದಲಿ
ತಾಯಿಯಾ ರೇಣುಕೆಯು ಜಮದಗ್ನಿ ಋಷಿವರನ
ಚರಣಕ್ಕೆ ಸಾಷ್ಟಾಂಗ ಗೈಯ್ಯುತಿರೆ ಹರುಷದಲಿ
ಶುಭವಾಗಲೆನ್ನುತಲಿ ಮುನಿವರನು ಹರಸಿದನು ॥೧೦೬೦॥

**ಸುರಧೇನು ಪಹರಿಸೆ ಕಾರ್ತವೀರ್ಯಾರ್ಜುನನ ।**
**ಭಾರ್ಗವನು ಕೋಪದಲಿ ಸಂಹಾರ ಗೈದಿಹನು ॥**

ಇಂತಿರಲು ವರುಷಗಳು ಉರುಳುತಿರೆ ಒಂದುದಿನ
ರೇಣುಕೆಯು ಜಲವನ್ನು ಸುತರುಗಳು ಪುಷ್ಪಗಳ
ತರಲೆಂದು ವನದೊಳಗೆ ತೆರಳುತಿರೆ ಆಶ್ರಮದಿ
ಜಮದಗ್ನಿ ಓರ್ವನೇ ಧ್ಯಾನದಲಿ ಇರುತಿರಲು ॥೧೦೬೧॥

ಹೈಹಯದ ದೇಶದಾ ಸಾವಿರದ ತೋಳುಗಳ
ಗಂಧರ್ವ ಯಕ್ಷರನು ಸುರರನ್ನು ಜಯಿಸಿರುವ
ಅದ್ಭುತ ಪರಾಕ್ರಮಿಯು ಕಾರ್ತಾವೀರ್ಯಾರ್ಜುನನು
ಆಶ್ರಮವ ಮುತ್ತುತಲಿ ನಾಶವನು ಗೈಯ್ಯುತಲಿ ॥೧೦೬೨॥

ಯಜ್ಞದಾ ಧೇನುವನು ಅಪಹರಣ ಗೈಯ್ಯುತಿರೆ
ಕೊಡಲಿಧರ ಭಾರ್ಗವನು ಬರುತಲಿರೆ ಕಾಣುತಲಿ
ಕ್ರೋಧದಲಿ ನಖಶಿಖಿದಿ ಉರಿಯುತಲಿ ಧನುವನ್ನು
ಕೊಳ್ಳುತಲಿ ಧಾವಿಸುತ ಕಾರ್ತಾವೀರ್ಯಾರ್ಜುನನ ॥೧೦೬೩॥

ಅಡ್ಡೈಸಿ ಘನಘೋರ ಯುದ್ಧವನು ಗೈಯ್ಯುತಲಿ
ಎಳೆತರುವ ಟೊಂಗೆಗಳ ಸರಸರನೆ ತರಿವಂತೆ
ಕಾರ್ತಾವೀರ್ಯಾರ್ಜುನನ ಕರಗಳನು ತರಿಯುತಲಿ
ಶಿರವನ್ನು ಕೊಡಲಿಯಲಿ ಕಡಿಯುತಲಿ ಕೆಡುಹಿದನು ॥೧೦೬೪॥

ಭೂಪತಿಯ ಸುತರುಗಳು ಭಯಭೀತರಾಗುತಲಿ
ಪ್ರಾಣದಾ ಭಯದಲ್ಲಿ ದಿಕ್ಕೆಟ್ಟು ಚದುರಿದರು
ತಂದೆಯನು ಕೊಂದಿರುವ ಸೇಡನ್ನು ತೀರಿಪುದು
ಎನ್ನುತಲಿ ಅರ್ಜುನನ ಸುತರುಗಳು ನೆನೆದಿಹರು ॥೧೦೬೫॥

ಒಂದುದಿನ ಆಶ್ರಮದಿ ಭಾರ್ಗವನು ಇಲ್ಲದಿಹ
ಸಮಯವನು ಸಾಧಿಸುತ ಸುತರುಗಳು ಧಾವಿಸುತ
ಧ್ಯಾನದಲಿ ಕುಳಿತಿರ್ದ ಜಮದಗ್ನಿ ಮುನಿವರನ
ವಧೆಯನ್ನು ಗೈದಿಹರು ಮೋಸದಲಿ ಹೇಸದಲೆ ॥೧೦೬೬॥

ಪರಶುಧರ ಭಾರ್ಗವನು ಆ ರಾಮನೈತಂದು
ರಕುತದಲಿ ಮುಳುಗಿರ್ದ ತಂದೆಯಾ ದೇಹವನು
ಧರೆಯೊಳಗೆ ಬಿದ್ದಿರುವ ಶಿರವನ್ನು ನೋಡುತಲಿ
ರಕುತವದು ಕುದಿಯುತಲಿ ತಳಮಳವಗೊಂಡಿಹನು ॥೧೦೬೭॥

ಇದು ದುಷ್ಟ ಅರ್ಜುನನ ಸುತರುಗಳು ಗೈದಿರುವ
ಘನಘೋರ ಪಾಪದಾ ದುಷ್ಕೃತ್ಯವೆನ್ನುತಲಿ
ಅರ್ಜುನನ ಸುತರುಗಳ ರುಂಡಗಳ ಮಾಲೆಯನು
ಗಗನಕ್ಕೆ ಕಟ್ಟುವೆನು ಎನ್ನುತಲಿ ಗರ್ಜಿಸುತ ॥೧೦೬೮॥

ಕೊಡಲಿಯನು ಎತ್ತುತಲಿ ಭರಭರನೆ ತಿರುಹುತಲಿ
ಕ್ಷತ್ರಿಯರ ಕುಲವನ್ನು ನಿರ್ಮೂಲ ಮಾಡುವೆನು
ನಿಕ್ಷತ್ರ ಪೃಥ್ವಿಯನು ಮಾಡುವೆನು ಎನ್ನುತಲಿ
ಘೋರ ಪ್ರತಿಜ್ಞೆಯನು ಮಾಡಿಹನು ಭಾರ್ಗವನು ॥೧೦೬೯॥

ಸಾಗುತಲಿ ಮೊದಲಿಂಗೆ ಕಾರ್ತವೀರ್ಯಾರ್ಜುನನ
ತನಯರನು ಸಕಲರನು ತರಗೆಲೆಯ ತರಿದಂತೆ
ಶಿರಗಳನು ತರಿಯುತಲಿ ಇಪ್ಪತ್ತು ಮೇಲೊಂದು
ಬಾರಿಯಲಿ ಕ್ಷತ್ರಿಯರ ಸಂಹಾರ ಗೈದಿಹನು ॥೧೦೭೦॥

ಕೋಪದಲಿ ಸಮಂತಕ ಪಂಚಕದ ಎಡೆಯಲ್ಲಿ
ರಕ್ತದಾ ಕೊಳಗಳನು ಐಯ್ದನ್ನು ನಿರ್ಮಿಸುತ
ಅಗಣಿತದ ಕೋಟಿಗಳ ಕ್ಷತ್ರಿಯರ ಕೊಲ್ಲುತಲಿ
ರಕ್ತದಾ ತರ್ಪಣವ ಪಿತನಿಂಗೆ ಇತ್ತಿಹನು ॥೧೦೭೧॥

ಘನಮಹಿಮ ಋಚೀಕನು ಮುನಿವರನು ಐತಂದು
ಉಪದೇಶಗೈಯ್ಯುತಲಿ ಸಾಂತ್ವನವಗೊಳಿಸುತಿರೆ
ಭಾರ್ಗವನು ಆ ರಾಮ ತಪವನ್ನು ಗೈಯ್ಯುತಲಿ
ಮಹೇಂದ್ರ ಪರ್ವತದಿ ವಾಸಿಸುತಲಿರುತಿಹನು ॥೧೦೭೨॥

ಈ ತೆರದಿ ಅಕೃತವ್ರಣ ಮುನಿವರನು ನುಡಿಯುತಿರೆ
ಮರುದಿವಸ ಭಾರ್ಗವನು ಪರರಾಮ ಬರುತಿರಲು
ಸಕಲರೂ ಸಾಷ್ಟಾಂಗವೆರಗುತಲಿ ಪೂಜಿಸುತ
ಸಾಗುತಲಿ ಅಗಸ್ತ್ಯ ತೀರ್ಥದೆಡೆ ಬಂದಿಹರು ॥೧೦೭೩॥

**ಪ್ರಭಾಸದಿ ಕೃಷ್ಣನನು ಕಾಣುತಲಿ ಧರ್ಮಜನು ।**
**ವರಗಂಧಮಾಸಕೆ ಬಂದಿಹನು ಯಾತ್ರೆಯಲಿ ॥**

ಕೇಳುವುದು ಪಾರಿಕ್ಷಿತವನೀಶ ಪಾಂಡವರು
ತೀರ್ಥದಲಿ ಮೀಯುತಲಿ ಮುಂದಕ್ಕೆ ಸಾಗುತಲಿ
ಪಶ್ಚಿಮದ ಕಡಲಿನಾ ತೀರದಲಿ ಶೋಭಿಸುವ
ಪಾವನ ಪ್ರಭಾಸದಾ ಕ್ಷೇತ್ರಕ್ಕೆ ಬಂದಿಹರು ॥೧೦೭೪॥

ಪವಿತ್ರಮಿಹ ಕ್ಷೇತ್ರದಲಿ ಸ್ನಾನವನು ಗೈಯ್ಯುತಲಿ
ಕಾಲವನು ಕಳೆಯುತಿರೆ ಶ್ರೀಕೃಷ್ಣ ಬಲರಾಮ
ಅರಿಯುತಲಿ ಬರುತಲಿರೆ ಧರ್ಮಜನು ಆದರದಿ
ಸತ್ಕಾರ ಗೈಯ್ಯುತಲಿ ಸಂತಸದಿ ನಲಿದಿಹನು ॥೧೦೭೫॥

ಹೇ ಕೃಷ್ಣ ಧರ್ಮದಲಿ ನಡೆಯುತಿಹ ಪಾಂಡವರ್ಗೆ
ವನವಾಸ ಕಷ್ಟವನು ಭೋಗಿಸುವ ಗತಿಯಾಯ್ತು
ದುಷ್ಕೃತ್ಯ ಗೈಯ್ಯುತಿಹ ಕೌರವಗೆ ಐಶ್ವರ್ಯ
ಸೌಖ್ಯವದು ದೊರೆತಿಹುದು ಎಂದಿಹನು ಬಲರಾಮ ॥೧೦೭೬॥

ಧರ್ಮದಲಿ ನಡೆವರ್ಗೆ ಕಷ್ಟವದು ತಪ್ಪದಿದೆ
ಅಧರ್ಮವನು ಗೈವರ್ಗೆ ಸುಖಭಾಗ್ಯ ದೊರೆಯುವುದು
ಎಂಬುದನು ಜನರುಗಳು ನುಡಿಯುವುದು ನಿಜವಿಹುದು
ಎನ್ನುತಿರೆ ಬಲರಾಮ ಶ್ರೀ ಕೃಷ್ಣ ನುಡಿದಿಹನು ॥೧೦೭೭॥

ಮೊದಲಿಂಗೆ ಧರ್ಮವದು ದುಃಖವನು ಈಯುವುದು
ಕೊನೆಯಲ್ಲಿ ಶಾಶ್ವತದ ಸೌಖ್ಯವನು ಈಯುವುದು
ಅಧರ್ಮವದು ಮೊದಲಿಂಗೆ ಸೌಖ್ಯವನು ಈಯುತಲಿ
ದುಃಖವದು ಈಯುವುದು ಎಂದಿಹನು ಕೊನೆಯಲ್ಲಿ ॥೧೦೭೮॥

ಆಗಲಾ ಸಾತ್ಯಕಿಯು ಹೇ ಕೃಷ್ಣ ಬಲರಾಮ
ಪ್ರದ್ಯುಮ್ನ ಅನಿರುದ್ಧ ಮತ್ತೆ ನಾ ಮೂವರೂ
ಕೌರವರ ಕೊಲ್ಲುತಲಿ ಹಸ್ತಿನೆಯ ರಾಜ್ಯವನು
ಪಾಂಡವರಿಗೀಯುವೆವು ಎನ್ನುತಲಿ ನುಡಿದಿಹನು ॥೧೦೭೯॥

ನೀವುಗಳು ಶಕ್ತರಿಹರೆಂಬುದನು ನಾ ಬಲ್ಲೆ
ಪರರುಗಳು ಗೆದ್ದಿರುವ ರಾಜ್ಯವನು ಧರ್ಮಜನು
ಎಂದಿಗೂ ಸ್ವೀಕಾರ ಮಾಡದಿಹ ನಿಜಬಲದಿ
ತಾನೆಯೇ ಜಯಿಸುವನು ಎಂದಿಹನು ಮಾಧವನು ॥೧೦೮೦॥

ಅಹುದಹುದು ಕೃಷ್ಣನಾ ನುಡಿಯದುವೆ ನಿಜವಿಹುದು
ಬೇಗನೇ ಯುದ್ಧದಾ ಕಾಲವದು ಬರಲಿಹುದು
ನೀವುಗಳು ಯಾದವರು ಯುದ್ಧದಲಿ ನೆರವನ್ನು
ನಮಗೀವುದೆನ್ನುತಲಿ ಧರ್ಮಜನು ನುಡಿದಿಹನು ॥೧೦೮೧॥

ಹದಿಮೂರು ವರ್ಷಗಳ ವನವಾಸ ಕಳೆಯುತಿರೆ
ಕೌರವರು ನಮ್ಮಯಾ ರಾಜ್ಯವನು ಸ್ನೇಹದಲಿ
ನಮಗೀಯದಿದ್ದೊಡೆಯು ಘೋರತರ ಸಂಗ್ರಾಮ
ಸಂಭವಿಪುದೆನ್ನುತಲಿ ಧರ್ಮಜನು ನುಡಿದಿಹನು ॥೧೦೮೨॥

ಅಂಧಕರು ವೃಷ್ಣಿಗಳು ಶ್ರೀಕೃಷ್ಣ ಬಲರಾಮ
ಯಾದವರು ಸಕಲರೂ ನೀವುಗಳು ಯುದ್ಧದಲಿ
ಸೈನ್ಯದಾ ಸಹಿತದಲಿ ನೆರವನ್ನು ಈಯುವದು
ಎನ್ನುತಲಿ ಧರ್ಮಜನು ಸಾತ್ಯಕಿಗೆ ನುಡಿದಿಹನು ॥೧೦೮೩॥

ಕೆಲವುದಿನ ಶ್ರೀಕೃಷ್ಣ ಬಲರಾಮ ಸಹಿತದಲಿ
ಸಂತಸದಿ ಕಾಲವನು ಕಳೆಯುತಲಿ ದ್ವಾರಕೆಗೆ
ತೆರಳಲಿಕೆ ಅಣಿಯಾಗುತಿರುತಿಲಿಲು ಧರ್ಮಜನು
ಸೋದರರ ಸಹಿತದಲಿ ಸಾಷ್ಟಾಂಗವೆರಗುತಲಿ ॥೧೦೮೪॥

ನಿಮ್ಮಯಾ ಕರುಣೆಯಲಿ ಅಗಣಿತದ ಕಷ್ಟಗಳ
ಕಳೆದಿಹೆವು ನಿಮ್ಮಯಾ ಕರುಣೆಯಾ ಕವಚವದು
ಸತತವೂ ನಮಗಿರಲಿ ಎನ್ನುತಲಿ ನುಡಿಯುತಿರೆ
ಶ್ರೀಕೃಷ್ಣ ಪಾಂಡವರ ತೆಗೆತೆಗೆದು ಅಪ್ಪಿದನು ॥೧೦೮೫॥

ಆ ಕ್ಷಣದಿ ದ್ರೌಪದಿಯು ಧಾವಿಸುತ ಐತಂದು
ಮುರಹರನ ಚರಣದಲಿ ಮೈಯನ್ನು ಇಕ್ಕುತಲಿ
ದ್ವಾರಕೆಯ ಪುರದಲ್ಲಿ ಮತ್ತಲ್ಲಿ ಇದ್ದೊಡೆಯು
ಎಮ್ಮನ್ನು ರಕ್ಷಿಸುವ ಭಾರವದು ನಿನ್ನದಿದೆ ॥೧೦೮೬॥

ಎನ್ನುತಲಿ ದೃಗುಜಲದ ಧಾರೆಯನು ಸುರಿಸುತಲಿ
ದೈನ್ಯದಲಿ ನುಡಿಯುತಿರೆ ಎನ್ನಯಾ ಪ್ರಾಣಗಳ
ಪರಿಯಲ್ಲಿ ಇರುತಿರುವ ನಿಮ್ಮನ್ನು ರಕ್ಷಿಪೆನು
ಎನ್ನುತಲಿ ಹರಸುತಲಿ ಶ್ರೀಕೃಷ್ಣ ತೆರಳಿದನು ॥೧೦೮೭॥

ಬಳಿಕಲಾ ಧರ್ಮಜನು ಯಾತ್ರೆಯಲಿ ಸಾಗುತಲಿ
ಪಾವನ ಪಯೋಷ್ಣಿಯಾ ತೀರ್ಥ ಬಳಿ ಬರುತಿರಲು
ಗಯನೃಪನು ಯಾಗವನು ಮಾಡುತಲಿ ಧನಕನಕ
ದಾನವನು ಇತ್ತಿರುವ ಪಾವನದ ತಾಣವಿದು ॥೧೦೮೮॥

ಪುಣ್ಯಮೀ ತೀರ್ಥದಲಿ ಸ್ನಾನವನು ಗೈಯ್ಯುತಲಿ
ಪಿತೃಗಳಿಗೆ ಪಿಂಡವನು ಇತ್ತೊಡೆಯು ಪರದಲ್ಲಿ
ಸದ್ಗತಿಯು ದೊರೆಯುವುದು ಎನ್ನುತಿರೆ ಲೋಮಶರು
ಧರ್ಮಜನು ಮೀಯುತಲಿ ಪಿಂಡವನು ಇತ್ತಿಹನು ॥೧೦೮೯॥

ಪಯಣವನು ಬೆಳೆಸುತಲಿ ವೈಡೂರ್ಯಗಿರಿ ದಾಂಟಿ
ನರ್ಮದೆಯ ತೀರದಲಿ ಶೋಭಿಸುವ ಖ್ಯಾತರಾ
ಭೃಗುಸುತನ ಚ್ಯವನರಾ ಆಶ್ರಮಕೆ ಬರುತಿರಲು
ಇದುಆರ ಆಶ್ರಮವು ಎಂದಿಹನು ಧರ್ಮಜನು ॥೧೦೯೦॥

ಆವೃದ್ಧ ಚ್ಯವನಋಷಿ ಯೌವ್ವನವ ಪಡೆಯುತಲಿ
ಸುಕನ್ಯೆಯನು ಎಂಬುವಾ ಕನ್ಯೆಯನು ವರಿಸುತಲಿ
ಸುರಪತಿಯ ಗರ್ವವನು ಮುರಿದಿರುವ ಚ್ಯವನರಾ
ಚರಿತೆಯನು ಧರ್ಮಜಗೆ ಲೋಮಶರು ಪೇಳಿದರು ॥೧೦೯೧॥

ಇದುಪುಣ್ಯ ಚ್ಯವನರಾ ತೀರ್ಥವಿದೆ ಎನ್ನುತಲಿ
ಪಾಂಡವರು ಸ್ನಾನವನು ಗೈಯ್ಯುತಲಿ ನಡೆಯುತಲಿ
ಪಾವನದ ಯಮುನೆಯಾ ತೀರಕ್ಕೆ ಬರುತಿರಲು
ಮಾಂಧಾತೃನೃಪವರನ ಚರಿತೆಯನು ಪೇಳಿದರು ॥೧೦೯೨॥

ಇಕ್ಷ್ವಾಕು ಕುಲನೃಪನು ವರಯೌವ್ವನಾಶ್ವನು
ಸಾವಿರದ ಅಶ್ವಮೇಧ ಯಾಗಗಳಗೈದರೂ
ಬಹುವರುಷ ಕಳೆದರೂ ಮಕ್ಕಳುಗಳಾಗದಿರೆ
ತಪವನ್ನು ಗೈಯ್ಯಲಿಕೆ ಕಾನನಕೆ ತೆರಳಿದನು ॥೧೦೯೩॥

ಒಂದು ದಿನ ಅಡವಿಯಲಿ ಅಲೆಯುತಲಿ ರಾತ್ರಿಯಲಿ
ನೀರಡಿಸಿ ಚ್ಯುವನರಾ ಆಶ್ರಮಕೆ ಬರುತಿರಲು
ಎಲ್ಲರೂ ಮಲಗಿರಲು ಕುಂಭದಲಿ ಇರಿಸಿರ್ದ
ಮಂತ್ರಿಸಿದ ಜಲವನ್ನು ಕುಡಿದಿಹನು ನೃಪವರನು ॥೧೦೯೪॥

ಚ್ಯವನಋಷಿ ಬೆಳಗಿನಲಿ ಬರಿದಾದ ಕುಂಭವನು
ನೋಡುತಿರೆ ಧರಣಿಪನು ತಾ ಕುಡಿದೆನೆನ್ನುತಿರೆ
ಈ ಜಲವ ನಿನ್ನಯಾ ಸತಿಗೀಯಲೋಸುಗವೆ
ಕುಂಭದಲಿ ಇರಿಸಿರ್ದೆ ಎಂದಿಹನು ಋಷಿವರನು ॥೧೦೯೫॥

ನಿನ್ನಯಾ ಉದರದಲಿ ಗರ್ಭವದು ಬೆಳೆಯುತಲಿ
ಶ್ರೇಷ್ಠನಾಸುತನನ್ನು ನೀ ಪಡೆವೆ ಎಂದಿಹರು
ದಿನಗಳೆಯೆ ನೃಪವರನು ಗರ್ಭವನು ಧರಿಸುತಲಿ
ವರುಷಗಳ ನೂರನ್ನು ಕಳೆದಿಹನು ಸರಸದಲಿ ॥೧೦೯೬॥

ಬಳಿಕೊಂದು ದಿನದಲ್ಲಿ ಉದರವನು ಬಗಿಯುತಲಿ
ತೇಜದಲಿ ಬೆಳಗುತಿಹ ಶಿಶುವೊಂದು ಜನಿಸುತಲಿ
ಆ ಕ್ಷಣದಿ ಬೆಳಗುತಲಿ ಯೌವ್ವನದಿ ತೊಳಗುತಲಿ
ಮಾಂಧಾತೃ ಎಂಬುವಾ ಹೆಸರಿನಲಿ ಮೆರೆದಿಹನು ॥೧೦೯೭॥

ಜನಿಸಿದಾ ಕ್ಷಣದಲ್ಲಿ ವೇದಗಳ ಶಾಸ್ತ್ರಗಳ
ಶಸ್ತ್ರಾಸ್ತ್ರ ಧನುರ್ವಿದ್ಯೆ ಪರಿಣಿತನು ಎನಿಸುತಲಿ
ಜಗದೊಳಗೆ ಶಕ್ತಿಯಲಿ ಶೌರ್ಯಪ್ರತಾಪದಲಿ
ಅಪ್ರತಿಮನೆನಿಸಿಹನು ಮಾಂಧಾತೃ ನೃಪವರನು ॥೧೦೯೮॥

ದೇವೇಂದ್ರನೈತಂದು ಪಟ್ಟವನು ಕಟ್ಟುತಿರೆ
ಜಗಚಕ್ರವರ್ತಿಯೆಂದೆನಿಸುತಲಿ ಮೆರೆದಿಹನು
ಮಹನೃಪನು ಮಾಂಧಾತೃ ಯಾಗವನು ಗೈದಿರುವ
ತಾಣವಿದು ಎನ್ನುತಲಿ ಲೋಮಶರು ನುಡಿದಿಹರು ॥೧೦೯೯॥

ಮುಂದಕ್ಕೆ ಸಾಗುತಲಿ ಸೋಮಕನ ಆಶ್ರಮವ
ಕಾಣುತಲಿ ಸೋಮಕನ ಕಥೆಯನ್ನು ಪೇಳಿದರು
ಸ್ವರ್ಗದಾ ದ್ವಾರವದು ಎಂದೆನಿಪ ಯಯಾತಿನೃಪ
ಯಜ್ಞವನು ಗೈದಿರುವ ತಾಣಕ್ಕೆ ಬಂದಿಹರು ॥೧೧೦೦॥

ಸನಿಹದಲಿ ಹರಿಯುತಿಹ ವಿಪಾಶದ ನದಿಯಲ್ಲಿ
ಸ್ನಾನವನು ಗೈಯ್ಯುತಲಿ ಮಾನಸ ಸರೋವರಕೆ
ದ್ವಾರವೆಂದೆನಿಸುತಿಹ ನಂದನದ ಪರಿಯಲ್ಲಿ
ಶೋಭಿಸುವ ಕಾಶ್ಮೀರ ಮಂಡಲಕೆ ಬಂದಿಹರು ॥೧೧೦೧॥

ನಂತರದಿ ಪರಜಲಾ ಉಪಜಲಾ ಎಂಬುವಾ
ನದಿಗಳಾ ತೀರದಲಿ ಬರುತಲಿರೆ ಇಲ್ಲಿಯೇ
ಉಶೀನರನೃಪನು ಯಾಗವನು ಮಾಡಿಹನು
ಇದು ಪುಣ್ಯ ಸ್ಥಳವೆಂದು ಲೋಮಶರು ನುಡಿದಿಹರು ॥೧೧೦೨॥

ಉಶೀನರ ನರಪತಿಯ ಸುತನಾದ ಶಿಬಿನೃಪನ
ವೃತ್ತಾಂತ ಸೋಜಿಗವು ಕೌತುಕವು ಎನಿಸುವುದು
ದಾನದಲಿ ಧರ್ಮದಲಿ ಔದಾರ್ಯ ಸದ್ಗುಣದಿ
ಶಿಬಿನೃಪನು ಜಗದೊಳಗೆ ಮೆರೆಯುತಲಿ ಇರ್ದಿಹನು ॥೧೧೦೩॥

ಒಂದುದಿನ ದೇವೇಂದ್ರ ವರಅಗ್ನಿ ಶಿಬಿಯನ್ನು
ಪರಿಕಿಸಲು ಗಿಡುಗಗಾ ಕಪೋತದ ರೂಪಗಳ
ಧರಿಸುತಲಿ ಕಪೋತವು ಓಡುತಲಿ ಐತಂದು
ಶಿಬಿಚಕ್ರವರ್ತಿಯನು ದೈನ್ಯದಲಿ ಪ್ರಾರ್ಥಿಸಿತು ॥೧೧೦೪॥

ಈ ಗಿಡುಗ ಎನ್ನನ್ನು ತಿನ್ನಲಿಕ್ಕೆ ಬೆನ್ನಟ್ಟಿ
ಬಂದಿಹುದು ಎನ್ನುತಲಿ ಮೊರೆ ಹೋಗುತಿರಲು
ಎನ್ನಯಾ ಆಹಾರ ಆ ಪಾರಿವಾಳವನು
ಎನಗೀವುದೆನ್ನುತಲಿ ಆ ಗಿಡುಗ ನುಡಿದಿಹುದು ॥೧೧೦೫॥

ಶರಣಾಗಿ ಬಂದವರ ರಕ್ಷಿಪುದು ಧರ್ಮವದು
ನಾ ಕೊಡೆನು ಎನ್ನುತಲಿ ಶಿಬಿನೃಪನು ನುಡಿಯುತಿರೆ
ದಾನದಲಿ ಧರ್ಮದಲಿ ನೀ ಶ್ರೇಷ್ಠನೆನ್ನುತಲಿ
ಜಗವೆಲ್ಲ ನಿನ್ನಯಾ ಕೀರ್ತಿಯನು ಹೊಗಳುತಿರೆ ॥೧೧೦೬॥

ಎನ್ನಯಾ ಅನ್ನವನು ನೀ ಕಸಿದುಕೊಳ್ಳುವುದು
ಪಾಪಕರ ಎನಿಸುತಿಹ ಇದು ನಿನಗೆ ಭೂಷಣವೆ
ಆಹಾರವಿಲ್ಲದೆಯೆ ನಾನಿಲ್ಲಿ ಸಾಯುವೆನು
ನರಕದಲಿ ನೀ ಬೀಳ್ವೆ ಎಂದಿಹುದು ಆ ಗಿಡುಗ ॥೧೧೦೭॥

ಬೇರೊಂದು ಆಹಾರ ನೀ ಕೊಳ್ವುದುಚಿತವದು
ಎನ್ನಯಾ ಐಶ್ವರ್ಯ ರಾಜ್ಯವನು ನಿನಗೀವೆ
ಮೊರೆಹೊಕ್ಕ ಹಕ್ಕಿಯನು ನಾನೆಂದು ಕೊಡೆನೆಂದು
ಶಿಬಿನೃಪನು ನುಡಿಯುತಿರೆ ಗಿಡುಗವದು ನುಡಿದಿಹುದು ॥೧೧೦೮॥

ನಾನೀಗ ಹಸಿವೆಯಲಿ ಬಾಧೆಯನು ಬಳಲುತಿಹೆ
ಆಹಾರವಿಲ್ಲದೆಯೆ ಕ್ಷಣವೊಂದು ನಾ ಬದುಕೆ
ಆ ಪಾರಿವಾಳದಾ ತೂಕದಾ ಮಿತಿಯಷ್ಟು
ನಿನ್ನಯಾ ಮಾಂಸವನು ನನಗೀವುದೆಂದಿಹುದು ॥೧೧೦೯॥

ಆಗಲಾ ಶಿಬಿನೃಪನು ತನ್ನಯಾ ತೊಡೆಯನ್ನು
ಕೊಯ್ಯುತಲಿ ಮಾಂಸವನು ತಕ್ಕಡಿಯೊಳಿರಿಸುತಲಿ
ತೂಗುತಿರೆ ಪರಡಿಯದು ಮೇಲಕ್ಕೆ ಏಳದಿರೆ
ದೇಹದಾ ಅಂಗಾಂಗ ಕಡಿಯುತಲಿ ಒಕ್ಕಿದನು ॥೧೧೧೦॥

ಕೊನೆಯಲ್ಲಿ ಪರಡಿಯದು ಮಿಸುಕದಿರೆ ಶಿಬಿನೃಪನು
ತನುವಿನಾ ಸರ್ವಸ್ವ ಮಾಂಸವನು ಅರ್ಪಿಸಲು
ಪರಡಿಯಲಿ ಕೂಡ್ರುತಿರೆ ದೇವೇಂದ್ರ ವರಅಗ್ನಿ
ಪ್ರತ್ಯಕ್ಷರಾಗುತಲಿ ಶಿಬಿನೃಪನ ಹರಸಿದರು ॥೧೧೧೧॥

ನಿನ್ನಯಾ ದಾನಗಳ ಔದಾರ್ಯ ಗುಣಗಳನು
ಪರಿಕಿಸಲು ವೇಷದಲಿ ನಾವುಗಳು ಬಂದಿಹೆವು
ನಿನ್ನಯಾ ಕೀರ್ತಿಯದು ಚಂದ್ರಾರ್ಕ ಪರ್ಯಂತ
ಬೆಳಗುವುದು ಎನ್ನುತಲಿ ಹರಸುತಲಿ ತೆರಳಿದರು ॥೧೧೧೨॥

ಇಲ್ಲಿಯೇ ಶಿಬಿನೃಪನು ತಪವನ್ನು ಗೈದಿಹನು
ಇದು ಪುಣ್ಯ ತಾಣವಿದೆ ಇಲ್ಲಿಯೇ ಸನಿಹದಲಿ
ಉದ್ದಾಲಕ ಋಷಿವರನ ಸುತ ಶ್ವೇತಕೇತುವಿನ
ಆಶ್ರಮಗಳಿರುತಿಹವು ಎಂದಿಹರು ಲೋಮಶರು ॥೧೧೧೩॥

ಮುಂದಕ್ಕೆ ಸಾಗುತಲಿ ಉದ್ದಾಲಕ ಋಷಿವರನ
ಮತ್ತೆ ಆ ಪುತ್ರನಾ ವರಶ್ವೇತಕೇತುವಿನ
ಆಶ್ರಮಕೆ ಬರುತಿರಲು ಧರ್ಮಜನು ಕೌತುಕದಿ
ಚರಿತೆಯನು ಪೇಳುವುದು ಎನ್ನುತಲಿ ನುಡಿದಿಹನು ॥೧೧೧೪॥

ಕೇಳುವುದು ಧರ್ಮಜನೆ ಉಪನಿಷದ ಮಂತ್ರಗಳ
ದೃಷ್ಟಾರ ಎನಿಸರ್ದ ಉದ್ದಾಲಕ ಮುನಿಯಲ್ಲಿ
ಕಹೋಡನೆಂಬುವಾ ಋಷಿವರನು ವೇದಗಳ ಶಾಸ್ತ್ರಗಳ
ಅಧ್ಯಯನ ಗೈಯ್ಯುತಲಿ ಪರಿಣತನು ಎನಿಸಿಹನು ॥೧೧೧೫॥

ಉದ್ದಾಲ ಮುನಿವರನು ಮುದದಿಂದ ಕಹೋಡಗೆ
ನಿಜಸುತ ಸುಜಾತೆಯನು ಈಯುತಲಿ ಮದುವೆಯನು
ಸಂಭ್ರಮದಿ ಗೈಯ್ಯುತಿರೆ ವರುಷಗಳು ಉರುಳುತಿರೆ
ಗರ್ಭವನು ಧರಿಸುತಲಿ ಸುಜಾತೆಯು ಬೆಳಗಿದಳು ॥೧೧೧೬॥

ಒಂದುದಿನ ರಾತ್ರಿಯಲಿ ಕಹೋಡ ಮುನಿವರನು
ವೇದಗಳ ಮಂತ್ರಗಳ ಪಠಿಸುತಲಿ ಇರುತಿರಲು
ಸುಜಾತೆಯಾ ಗರ್ಭದಲಿ ಇರುತಿರುವ ಭ್ರೂಣವದು
ಮಂತ್ರಗಳ ಪಠಣದಲಿ ದೋಷವಿದೆ ಎಂದಿಹುದು ॥೧೧೧೭॥

ಮಂತ್ರಗಳ ತಪ್ಪಾಗಿ ಉಚ್ಚಾರ ಗೈಯ್ಯುತಿಹೆ
ವಿಪರೀತ ಅರ್ಥಗಳ ನೀಯುವುದು ಎನ್ನುತಿರೆ
ಕೋಪದಲಿ ಕಹೋಡನು ಅಂಕುಡೊಂಕಾಗುತಲಿ
ನೀಜನಿಸು ಎನ್ನುತಲಿ ಶಾಪವನು ಇತ್ತಿಹನು ॥೧೧೧೮॥

ಗರ್ಭಿಣಿ ಸುಜಾತೆಯು ಗಂಡಂಗೆ ಕಹೋಡಾಗೆ
ಮುಂದಕ್ಕೆ ಜನಿಸುವಾ ಶಿಶುವನ್ನು ಪೋಷಿಸಲು
ಧನವಿಲ್ಲ ಎನ್ನುತಿರೆ ಆಸ್ಥಾನ ಪಂಡಿತನ
ಜಯಿಸುತಲಿ ಧನವನ್ನು ತಹೆನೆಂದು ನುಡಿದಿಹನು ॥೧೧೧೯॥

ಜನಕನೃಪ ನೆಡೆಯಲ್ಲಿ ಸಾಗುತಲಿ ಐತಂದು
ವಂದಿಯಾ ಪಂಡಿತನ ಜೊತೆಯಲ್ಲಿ ವಾದದಲಿ
ಸೋಲುತಿರೆ ಕಹೋಡನಾ ಕೈಕಾಲು ಕಟ್ಟುತಲಿ
ಕಡಲಿನಲಿ ಎಸೆದಿಹನು ಆ ವಂದಿ ಪಂಡಿತನು , ॥೧೧೨೦॥

ನವಮಾಸ ತುಂಬುತಿರೆ ವರಸುದತಿ ಸುಜಾತೆ
ಎಂಟುಕಡೆ ಡೊಂಕಾದ ವಕ್ರಾದ ದೇಹದಲಿ
ಶಿಶುವೊಂದು ಜನಿಸುತಿರೆ ಅಷ್ಟಾವಕ್ರನೆನ್ನುತಲಿ
ಹೆಸರನ್ನು ಇಡುತಲಿರೆ ದಿನದಿನದಿ ಬೆಳೆದಿಹನು ॥೧೧೨೧॥

ಉದ್ದಾಲಕ ಋಷಿವರನು ಅಳಿಯನಾ ವೃತ್ತಾಂತ
ಅರಿಯುತಲಿ ದುಃಖದಲಿ ಸುಜಾತೆ ತನಯಳಿಗೆ
ವಿಷಯವನು ತಿಳಿಸುತಲಿ ಮಗುವಿಂಗೆ ಎಂದಿಗೂ
ಈ ವಿಷಯ ಅರುಹದಿರು ಎನ್ನುತಲಿ ನುಡಿದಿಹನು ॥೧೧೨೨॥

ಮಗುವಿನಾ ಚೌಲೋಪನಯನಾದಿ ಕಾರ್ಯಗಳ
ಉದ್ದಾಲಕ ಗೈಯುತಿರೆ ಅಷ್ಟವಕ್ರನು ವರ್ಧಿಸುತ
ಹನ್ನೆರಡು ವರುಷಗಳು ತುಂಬುತಿರೆ ತಾಯಿಯನು
ತನ್ನಯಾ ಪಿತನಾರು ಎನ್ನುತಲಿ ಕೇಳಿದನು ॥೧೧೨೩॥

ನಿನ್ನಯಾ ತಂದೆಯನು ವಾದದಲಿ ಗೆಲ್ಲುತಲಿ
ಆ ವಂದಿ ಕೊಂದಿಹನು ಎನ್ನುತಲಿ ತಿಳಿಸುತಿರೆ
ಅಷ್ಟಾವಕ್ರನು ಕೋಪದಲಿ ವಂದಿಯನು ಜಯಿಸುತಲಿ
ವಧಿಸುವೆನು ಎನ್ನುತಲಿ ನಿಶ್ಚಯವ ಮಾಡಿಹನು ॥೧೧೨೪॥

ಮಾತುಲನ ವರಶ್ವೇತಕೇತುವಿನ ಜೊತೆಯಲ್ಲಿ
ಜನಕನಾ ಪಟ್ಟಣಕೆ ಭರದಲ್ಲಿ ಐತಂದು
ಅರಮನೆಯ ದ್ವಾರದಾ ಬಳಿಯಲ್ಲಿ ಬರುತಿರಲು
ಆ ದ್ವಾರಪಾಲಕನು ತಡೆಯುತಲಿ ನುಡಿದಿಹನು ॥೧೧೨೫॥

ಬಂದಿರುವ ಕಾರ್ಯವನು ಹೇಳೆಂದು ನುಡಿಯುತಿರೆ
ವಂದಿಯನು ಗೆಲ್ಲಲಿಕೆ ಬಂದಿಹೆನು ಒಳಬಿಡು
ಎನ್ನುತಿರೆ ನೀನಿನ್ನು ಚಿಕ್ಕವನು ಅಲ್ಪಮತಿ
ವೇದಾಂತ ತತ್ವವನು ನೀನೆಂತು ಅರಿತಿರುವೆ ॥೧೧೨೬॥

ಮೊದಲಿಂಗೆ ಎನ್ನಯಾ ಪ್ರಶ್ನೆಯನು ಉತ್ತರಿಸು
ಓಂಕಾರ ದಕ್ಷರದ ಪರಬ್ರಹ್ಮ ತತ್ವವನು
ರಹಸ್ಯವನು ಉಸುರುವುದು ಇಲ್ಲದಿರೆ ನಿನ್ನನ್ನು
ಒಳಗಡೆಗೆ ಬಿಡೆನೆಂದು ಸೇವಕನು ನುಡಿದಿಹನು ॥೧೧೨೭॥

ಅ ಉ ಮಗಳಕ್ಷರದ ಓಂಕಾರದಕ್ಷಯದ
ಸೃಷ್ಟಿಸ್ಥಿತಿ ಲಯಾದಿಗಳ ಪರಬ್ರಹ್ಮ ತತ್ವವನು
ಅಷ್ಟಾವಕ್ರ ಸರಸದಲಿ ಹೇಳುತಿರೆ ಆ ಸಮಯ
ಜನಕನೃಪ ನೈತ್ರತರುತ ಕೇಳುತಲಿ ನುಡಿದಿಹನು ॥೧೧೨೮॥

ನೀನಿನ್ನು ಬಾಲಕನು ಬುದ್ಧಿಯದು ಬೆಳೆಯದಿದೆ
ಮೊದಲಿಂಗೆ ನೀ ಎನ್ನ ಪ್ರಶ್ನೆಗಳನುತ್ತರಿಸು
ನಂತರದಿ ವಂದಿಯನು ವಾದವನು ಗೈಯ್ಯುತಲಿ
ಜಯಿಸುವುದು ಎನ್ನುತಲಿ ಜನಕನೃಪ ನುಡಿದಿಹನು ॥೧೧೨೯॥

ವೇದಾಂತ ಶಾಸ್ತ್ರಗಳ ಅತಿಗಹನ ಪ್ರಶ್ನೆಗಳ
ಘನಜ್ಞಾನಿ ಜನಕನೃಪ ಕೇಳುತಿರೆ ಮುನಿಸುತನು
ಉತ್ತರವ ನೀಯುತಿರೆ ವಂದಿಯಾ ಜೊತೆಯಲಿ
ವಾದವನು ಮಾಡಲಿಕೆ ಅನುಮತಿಯ ನಿತ್ತಿಹನು ॥೧೧೩೦॥

ಮೊದಲಿಂಗೆ ಆ ವಂದಿ ಪಂಡಿತನು ಒಂದಂಕಿ
ವಿಷಯಗಳ ತತ್ವಗಳ ನುಸುರುವೆನು ಎನ್ನುತಲಿ
ಆದಿತ್ಯನೋರ್ವನೇ ಲೋಕವನು ಬೆಳಗುವನು
ಓರ್ವನೇ ವರಅಗ್ನಿ ವಿವಿಧಪರಿ ಉರಿಯುವನು ॥೧೧೩೧॥

ಓರ್ವನೇ ವಿಕ್ರಮನು ಅಗಣಿತರ ಕೊಲ್ಲುವನು
ಓರ್ವನೇ ಯಮಧರ್ಮ ವಿಶ್ವವನು ನಿಗ್ರಹಿಪ
ನೀನೆರಡು ಸಂಖ್ಯೆಯಾ ತತ್ವವನು ಉಸುರುವುದು
ಎನ್ನುತಲಿ ಆ ವಂದಿ ಮುನಿಸುತಗೆ ನುಡಿದಿಹನು ॥೧೧೩೨॥

ಅಶ್ವನೀ ದೇವತೆಗಳ ವರೀರ್ವರಿರುತಿಹರು
ರಥಕೆರಡು ಚಕ್ರಗಳು ಚಲಿಸಲಿಕೆ ಇರುತಿಹವು
ಸತಿಪತಿಗಳೀರ್ವರೂ ದಂಪತಿಗಳಿರುತಿಹರು
ಮೂರಂಕಿ ನೀನುಸಿರು ಎಂದಿಹನು ಮುನಿಸುತನು ॥೧೧೩೩॥

ಈ ಪರಿಯೆ ವಾದವದು ಈರ್ವರಲಿ ನಡೆಯುತಿರೆ
ಹದಿಮೂರು ಅಂಕಿಗಳ ತತ್ವಗಳ ವಿಷಯಗಳ
ಆ ವಂದಿ ಹೇಳಲಿಕೆ ಅಸಮರ್ಥನಾಗಿರಲು
ಋಷಿಸುತನು ಹೇಳುತಲಿ ವಂದಿಯನು ಜಯಿಸಿದನು ॥೧೧೩೪॥

ಋಷಿಸುತಗೆ ಜಯಜಯವು ಎನ್ನುತಲಿ ಸಕಲರೂ
ಕಲಕಲದ ನಾದವನು ಜಯಘೋಷ ಗೈಯ್ಯುತಿರೆ
ವಂದಿಯಾ ಮುಖಬಾಡಿ ನಿಸ್ತೇಜವಾಗುತಿರೆ
ಆ ಕ್ಷಣದಿ ಜನಕಂಗೆ ಅಷ್ಟಾವಕ್ರ ನುಡಿದಿಹನು ॥೧೧೩೫॥

ಮುನ್ನಿನಲಿ ಈ ವಂದಿ ಪಂಡಿತರ ಜಯಿಸುತಲಿ
ಕೈಕಾಲ ಕಟ್ಟುತಲಿ ಕಡಲಿನಲಿ ಎಸೆದಂತೆ
ಸೋತಿರುವ ವಂದಿಯನು ಕಟ್ಟುತಲಿ ಸಾಗರದಿ
ಎಸೆಯುವುದು ಎನ್ನುತಲಿ ಅಷ್ಟಾವಕ್ರ ನುಡಿದಿಹನು ॥೧೧೩೬॥

ವರುಣನಾ ಪುತ್ರನಿಹೆ ನಾನಾರ ಕೊಂದಿಲ್ಲ
ಎನ್ನಯಾ ಪಿತವರುಣ ಯಜ್ಞವನು ಮಾಡುತಿಹ
ಯಾಗದಾ ಕಾರ್ಯಕ್ಕೆ ಋತ್ವಿಜರ ಗೈಯ್ಯುತಲಿ
ವರುಣನೆಡೆ ಕಳುಹಿದೆನು ಎಂದಿಹನು ಆ ವಂದಿ ॥೧೧೩೭॥

ಸಕಲರೂ ದ್ವಿಜರುಗಳು ಪಂಡಿತರು ಬರುತಿಹರು
ನಿನ್ನಯಾ ವರಪಿತನು ಕಹೋಡನು ಬರುತಿಹನು
ಎನ್ನುತಲಿ ಆ ವಂದಿ ನುಡಿಯುತಿರೆ ಆ ಕ್ಷಣದಿ
ಕಹೋಡನ ಸಹಿತದಲಿ ಸಕಲರೂ ಬಂದಿಹರು ॥೧೧೩೮॥

ಬಂದಿರುವ ತಂದೆಯನು ಕಹೋಡನನು ಕಾಣುತಲಿ
ಸುತ ಅಷ್ಟಾವಕ್ರನು ಸಂತಸದಿ ನಮಿಸುತಿರೆ
ಹರುಷದಲಿ ಮಗನನ್ನು ಗಾಢದಲಿ ಅಪ್ಪುತಲಿ
ಶಿರವನ್ನು ಮೂಸುತಲಿ ಕಹೋಡ ನುಡಿದಿಹನು ॥೧೧೩೯॥

ಹೇ ಸುತನೆ ಈಗಲೇ ತೆರಳುತಲಿ ಸನಿಹದಲಿ
ಹರಿಯುತಿಹ ಪಾವನದ ಸಮಂಗದಾ ಸ್ರೋತ್ರದಲಿ
ಸ್ನಾನವನು ಗೈಯ್ಯುತಲಿ ನೀ ಬಹುದು ಎನ್ನುತಿರೆ
ಸುತ ಅಷ್ಟಾವಕ್ರನು ನದಿಯೆಡೆಗೆ ನಡೆದಿಹನು ॥೧೧೪೦॥

ಮುನಿಸುತನು ನದಿಯೊಳಗೆ ಮೀಯುತಿರೆ ತಕ್ಷಣದಿ
ಡೊಂಕಾಗಿ ಬಾಗಿರುವ ಅಂಗಾಂಗವೆಲ್ಲವೂ
ನೀಟಾಗಿ ಸರಳಾಗಿ ಹೊಳೆಯುತಲಿ ಶೋಭಿಸಲು
ಸತಿಸಹಿತ ಕಹೋಡನು ಆಶ್ರಮಕೆ ತೆರಳಿದನು ॥೧೧೪೧॥

ದಿವ್ಯದಾ ಸುಂದರದ ದೇಹದಾ ಸುತನೊಡನೆ
ಕಹೋಡನು ಆಶ್ರಮಕೆ ಬರುತಲಿರೆ ಸುಜಾತೆಯು
ಪತಿಚರಣಕೆರಗುತಲಿ ಸುತಅಷ್ಟ ವಕ್ರನನು
ಅಪ್ಪುತಲಿ ಹರ್ಷದಲಿ ಸಂತಸದಿ ನಲಿದಿಹಳು ॥೧೧೪೨॥

ಇಂತಿರ್ಪ ಪುಣ್ಯಮೀ ಪಾವನ ಸಮಂಗದಾ
ನದಿಯೊಳಗೆ ಸ್ನಾನವನು ಗೈದೊಡೆಯು ಶಕ್ತಿಯದು
ತೇಜವದು ಲಭಿಸುವುದು ನೀವುಗಳು ನದಿಯೊಳಗೆ
ಸ್ನಾನವನು ಗೈಯ್ಯುವುದು ಎಂದಿಹರು ಲೋಮಶರು ॥೧೧೪೩॥

ಸಕಲರೂ ಪಾಂಡವರು ಸಮಂಗದಾ ಸ್ರೋತ್ರದಲಿ
ಸ್ನಾನವನು ಗೈಯ್ಯುತಲಿ ಮುಂದಕ್ಕೆ ಚರಿಸುತಲಿ
ಪಾವನಳ ಉಷ್ಣಿಯಲಿ ಗಂಗೆಯಲಿ ಮೀಯುತಲಿ
ಸಾಗುತಲಿ ರೈಭ್ಯರಾ ಆಶ್ರಮಕೆ ಬಂದಿಹರು ॥೧೧೪೪॥

ವರರೈಭ್ಯ ಭರದ್ವಾಜ ಯವಕ್ರಿತರ ವೃತ್ತಾಂತ
ಲೋಮಶರು ಧರ್ಮಜನೆ ವಿಶದದಲಿ ವಿವರಿಸುತ
ಹನ್ನೆರಡು ತಿಂಗಳಲಿ ಫಲಪುಷ್ಪ ಶೋಭಿತದ
ರೈಭ್ಯರಾ ಆಶ್ರಮವು ಎಂದಿಹರು ಲೋಮಶರು ॥೧೧೪೫॥

ಪಯಣವನು ಬೆಳೆಸುತಲಿ ಪಾಂಡವರು ಸಕಲರೂ
ಮೈನಾಕ ಶ್ವೇತದಾ ಪರ್ವತವ ದಾಂಟುತಲಿ
ಧನಪತಿಯು ಕುಬೇರನು ವಾಸಿಸುವ ಸುಂದರದ
ಮಂದರದ ಪರ್ವತದ ಬಳಿಯಲ್ಲಿ ಬಂದಿಹರು ॥೧೧೪೬॥

ಪರ್ವತವನೇರಲಿಕೆ ಸಕಲರೂ ಜಪತಪವ
ಮಾಡುವುದು ಇಲ್ಲದಿರೆ ಏರಲಿಕೆ ಆಗದದು
ಎನ್ನುತಲಿ ಲೋಮಶರು ನುಡಿಯುತಿರೆ ಸಕಲರೂ
ಗಂಗೆಯಲಿ ಮೀಯುತಲಿ ಜಪತಪವ ಗೈದಿಹರು ॥೧೧೪೭॥

ಪರ್ವತವ ನೇರುತಲಿ ಪಾಂಡವರು ಎಲ್ಲೆಡೆಗೆ
ಬಿದ್ದಿರುವ ಮೂಳೆಗಳ ರಾಶಿಗಳ ಕಾಣುತಲಿ
ದುರುಳನಾ ರಾಕ್ಷಸನ ನರಕನಾ ಎಲುವುಗಳ
ರಾಶಿಗಳು ಎನ್ನುತಲಿ ಲೋಮಶರು ನುಡಿವಿಹರು ॥೧೧೪೮॥

ಮುನ್ನಿನಲಿ ಆ ನರಕ ದಾನವನು ಸ್ವರ್ಗವನು
ಜಯಿಸುವಾ ಆಶೆಯಲಿ ಸಾವಿರದ ವರ್ಷಗಳ
ಉಗ್ರತಪ ಗೈಯ್ಯುತಲಿ ಅದ್ಭುತದ ಶಕ್ತಿಯನು
ಪಡೆಯುತಲಿ ಸುರಪತಿಗೆ ಹಿಂಸೆಯನು ಇತ್ತಿಹನು ॥೧೧೪೯॥

ದೇವೇಂದ್ರ ವಿಷ್ಣುವನು ದೈನ್ಯದಲಿ ಪ್ರಾರ್ಥಿಸಲು
ವರವಿಷ್ಣು ನರಕನನು ಇಲ್ಲಿಯೇ ಕೊಲ್ಲುತಿರೆ
ನರಕನಾ ಮೂಳೆಗಳ ರಾಶಿಗಳು ಬಿದ್ದಿಹವು
ಎನ್ನುತಲಿ ಲೋಮಶರು ಧರ್ಮಜಗೆ ಹೇಳಿಹರು ॥೧೧೫೦॥

ಈ ಪರಿಯ ನರಕನಾ ಕಥೆಯನ್ನು ಕೇಳುತಲಿ
ಸಾಗುತಲಿ ಪಾಂಡವರು ಸುಂದರದ ಸೊಬಗಿನಲಿ
ಶೋಭಿಸುವ ಮನತಣಿಪ ಸೌಗಂಧಪಸರಿರುವ
ವರಗಂಧಮಾದನದ ಪರ್ವತಕೆ ಬಂದಿಹರು ॥೧೧೫೧॥

ಅನಿತರಲಿ ಭೀಕರದ ಬಿರುಗಾಳಿ ಬೀಸುತಿರೆ
ಅದ್ರಿಗಳ ಕಲ್ಬಂಡೆ ಉರುಳುತಲಿ ಬಿದ್ದಿಹವು
ತರುನಿಕರ ಬೇರುಗಳು ಕೀಳುತಲಿ ಕೆಡಹಿದವು
ಭೂಮಿಯದು ಕಂಪಿಸಿತು ದಿಗ್ದಂತಿ ನಡುಗಿದವು ॥೧೧೫೨॥

ಪ್ರಳಯದಾ ಕಾಲವದು ಸನ್ನಿಹಿತವಾಗಿಹುದೊ
ಎಂಬಂತೆ ಮೇಘಗಳ ಮಾಲೆಗಳು ಬೀಸುತಲಿ
ಗುಡುಗಿನಲಿ ಮಿಂಚಿನಲಿ ಸಿಡಿಲಿನಾ ಆರ್ಭಟದಿ
ಆನೆಯಾ ಸೊಂಡಿಲಿನ ಮಳೆಧಾರೆ ಸುರಿದಿಹುದು ॥೧೧೫೩॥

ಸೂರ್ಯಾಸ್ತವಾಗುತಿರೆ ಗಾಢಾಂಧಕಾರವದು
ಕವಿಯುತಿರೆ ಚಂಡದಾ ಮಾರುತವು ಬೀಸುತಿರೆ
ಒಬ್ಬೊಬ್ಬರಗುಲುತಲಿ ಪಾಂಡವರು ಕಾನನದಿ
ದೆಸೆದೆಸೆಗೆ ಕಂಗೆಟ್ಟು ಕಳವಳದಿ ಚದುರಿದರು ॥೧೧೫೪॥

ಹೇ ಮಂಗ ಸುಮ್ಮನೇ ಕಾಲವನು ಕಳೆಯದಿರು
ಕಾಲಿನಲಿ ಒದ್ದೊಡೆಯು ಗಿರಿಶಿಖರ ಉರುಳುವವು
ಎನ್ನಯಾ ಶಕ್ತಿಯನು ಅರಿಯದೆಯೆ ನುಡಿಯದಿರು
ಮಾರ್ಗವನು ಬಿಡು ಎಂದು ಮರುತಜನು ನುಡಿದಿಹನು ॥೧೧೮೭॥

ನಿನ್ನಯಾ ಬಲವನ್ನು ಚನ್ನಾಗಿ ಅರಿತಿಹೆನು
ನಿನ್ನಯಾ ಗರ್ಜನೆಗೆ ವನ್ಯಮೃಗ ಸಕಲವೂ
ಪ್ರಾಣದಾ ಭಯದಲ್ಲಿ ದಿಕ್ಕೆಟ್ಟು ಓಡಿದವು
ಭೂಮಿಯದು ಕಂಪಿಸಿತು ಕಲ್ಬಂಡೆ ಉರುಳಿದವು ॥೧೧೮೮॥

ಆದೊಡೆಯು ನಾವೀಗ ವೃದ್ಧರುಗಳಾಗಿಹೆವು
ತ್ರಾಣವದು ಕುಂಠಿಹುದು ದೇಹವದು ಸಡಲಿಹುದು
ಎಮ್ಮಯಾ ಬಾಲವನು ನಾವುಗಳು ಅಲುಗಿಸಲು
ಅತ್ತಿತ್ತ ಸರಿಸಲಿಕೆ ಅಸಮರ್ಥರಾಗಿಹೆವು ॥೧೧೮೯॥

ನೀವೆಯೇ ಬಾಲವನು ಸರಿಸುತಲಿ ಸಾಗುವುದು
ಎನ್ನುತಿರೆ ಕಪಿವರನು ಅಹುದಹುದು ನಿಜವಿಹುದು
ನೀ ಮುದುಕನಾಗಿರುವೆ ನಾನೆಯೇ ಸರಿಸುವೆನು
ಎನ್ನುತಲಿ ಮರುತಜನು ಯತ್ನವನು ಗೈದಿಹನು ॥೧೧೯೦॥

ಬಾಲದಾ ಕೆಳಗಡೆಗೆ ಕರವೆರಡು ಇಕ್ಕುತಲಿ
ಎತ್ತಲಿಕೆ ಯತ್ನಿಸಲು ಪರ್ವತದ ಪರಿಯಲ್ಲಿ
ಕೂದಲೆಳೆ ಮಿಸುಕದಿರೆ ಉಸಿರು ಮೇಲ್ಕೆಳಗಾಗಿ
ಮರುತಜನು ಬೆವರುತಲಿ ಬೆಂಡಾಗಿ ಬಳಲಿದನು ॥೧೧೯೧॥

ಇವಮಂಗನಿಹನಿಲ್ಲ ಸಾಮಾನ್ಯ ಕಪಿಯಲ್ಲ
ಮುನ್ನಿನಲಿ ತ್ರೇತೆಯಲಿ ಸಾಗರವ ದಾಂಟುತಲಿ
ಲಂಕೆಯನು ದಹಿಸಿರುವ ದಾನವರ ವಧಿಸಿರುವ
ಮಹಕಪಿಯು ಇವನಿಹನೆ ಎನ್ನುತಲಿ ಚಿಂತಿಸಿದ ॥೧೧೯೨॥

ಹೇ ಕಪಿಯೆ ಸಾಮಾನ್ಯ ನಾಡಕಪಿ ನೀನಲ್ಲ
ಮಂದರದ ಪರ್ವತವ ಎತ್ತುತಲಿ ಬಿಸಾಡುವಾ
ಸಾಮರ್ಥ್ಯವೆನಗಿಹುದು ನಿನ್ನಯಾ ಬಾಲವನು
ಎತ್ತಲಿಕೆ ಆಗದಿದೆ ನೀನಾರು ಹೇಳೆಂದ ॥೧೧೯೩॥

ನಾವುಗಳು ವನದೊಳಗೆ ಗಿಡಗಿಡವ ಹಾರುತಲಿ
ಹೂಹಣ್ಣು ಕಾಯಿಗಳ ಎಲೆಗಳನು ತರಿಯುತಲಿ
ತಿನ್ನುತಲಿ ಗಿರಿಗುಹೆಯು ಗುಂಹ್ವರದಿ ವಾಸಿಸುವ
ಬಡಹೀನ ಮಂಗನಿಹೆ ಎಂದಿಹನು ಪವನಜನು ॥೧೧೯೪॥

ಇಂದಿನೀ ಕಾಲದಲಿ ಹಳಬರುಗಳಾಗಿಹೆವು
ನೀವುಗಳು ಹೊಸ ಯೌವ್ವನದ ತರುಣರಿರೆ
ನೀವಾರು ಇರುತಿಹಿರು ಏತಕ್ಕೆ ಬಂದಿಹಿರಿ
ಎಂಬುದನು ಪೇಳುವದು ಎಂದಿಹನು ಮಾರುತಿಯು ॥೧೧೯೫॥

ಕೇಳುವುದು ಜಗದೊಳಗೆ ಖ್ಯಾತಮಿಹ ಕುರುಕುಲವ
ಶ್ರೇಷ್ಠನೃಪ ಪಾಂಡುವಿನ ಸುತರೈವರಿರುತಿಹೆವು
ಕುಂತಿಯಾ ಉದರದಲಿ ಯಮನಿಂಗೆ ಧರ್ಮಜನು
ಪವನಜಗೆ ಕಲಿಭೀಮ ಸುರಪತಿಗೆ ಅರ್ಜುನನು ॥೧೧೯೬॥

ಅಶ್ವಿನೀ ಕುವರರಿಗೆ ಪರನಕುಲ ಸಹದೇವ
ನಾವುಗಳು ಐವರೂ ಪಾಂಡವರು ಜನಿಸಿಹೆವು
ನಾನೆಯೇ ಪವನಜಗೆ ಜನಿಸಿರುವ ಕಲಿಭೀಮ
ಎಮ್ಮೈವರರಸಿಯೇ ದ್ರೌಪದಿಯು ಎಂದಿಹನು ॥೧೧೯೭॥

ದಾಯಾದಿ ದ್ವೇಷದಲಿ ದ್ಯೂತವಾ ಕೇಳಿಯಲಿ
ರಾಜ್ಯವನು ಐಶ್ವರ್ಯವೆಲ್ಲವನು ಸೋಲುತಲಿ
ಸತಿಸಹಿತ ಕಾನನಕೆ ಸೇರುತಲಿ ಚರಿಸುತಲಿ
ನಾವಿಲ್ಲಿ ಬಂದಿಹೆವು ಎಂದಿಹನು ಮರುತಜನು ॥೧೧೯೮॥

ಎಮ್ಮಯಾ ಭಾಮಿನಿಗೆ ಸೌಗಂಧ ಪುಷ್ಪದಾ
ಆಶೆಯದು ಮೊಳೆಯುತಿರೆ ಕುಸುಮವನು ಅರಸುತಲಿ
ವನವನವನಲೆಯುತಲಿ ಬರುತಲಿರೆ ಘನಮಹಿಮ
ನಿನ್ನನ್ನು ಕಂಡಿಹೆನು ನೀನಾರು ಹೇಳೆಂದ ॥೧೧೯೯॥

ಮುನ್ನಿನಲಿ ತ್ರೇತೆಯಲಿ ಶ್ರೀರಾಮ ಚಂದ್ರನಾ
ಸೇವೆಯನು ಗೈದಿರುವ ಸೇವಕನು ನಾನಿಹೆನು
ಲಂಕೆಯಾ ದಾನವರ ಗಂಟಲವ ಮುರಿದಿರುವ
ಎಂಟೆದೆಯ ಬಂಟನಿಹೆ ಎಂದಿಹನು ಹನುಮಂತ ॥೧೨೦೦॥

ಪವನಜಗೆ ಅಂಜನೆಯ ಗರ್ಭದಲಿ ಜನಿಸುತಲಿ
ಹುಟ್ಟಿದಾಕ್ಷಣದಲ್ಲಿ ಬಾಲರವಿ ಮಂಡಲವ
ಫಲವೆಂದು ಭಾವಿಸುತ ಮುಗಿಲಿಂಗೆ ನೆಗೆದಿರುವ
ಆಂಜನೆಯನಿಹನಿಂದು ಮಾರುತಿಯು ನುಡಿದಿಹನು ॥೧೨೦೧॥

ಸಾಗರವಲಂಘಿಸುತ ಲಂಕೆಯನು ದಹಿಸುತಲಿ
ಅಗಣಿತದ ರಾಕ್ಷಸರ ಸಂಹಾರ ಗೈಯ್ಯುತಲಿ
ರಾಘವನ ಸೇವೆಯನು ಮಾಡುತಲಿ ದಣಿಯುತಲಿ
ಶ್ರೀರಾಮ ಎನ್ನುತಲಿ ಹಾಯಾಗಿ ಕುಳಿತಿಹೆವು ॥೧೨೦೨॥

ಅಂದಿನಲಿ ಗೈದಿರುವ ಅದ್ಭುತದ ಶಕ್ತಿಯದು
ಇಂದೆಮಗೆ ಉಳಿದಿಲ್ಲ ಕಂದಿಹುದು ಕುಂದಿಹುದು
ಕಣ್ಣುಗಳು ಕಾಣದಿವೆ ಕಿವಿಗಳವು ಕೇಳಿಸವು
ನಮ್ಮಯಾ ಬಾಲವನು ನಾವುಗಳು ಅಲುಗಿಸೆವು ॥೧೨೦೩॥

ನೀವೆಯೇ ಬಾಲವನು ಸರಿಸುತಲಿ ತೆರಳಿದೊಡೆ
ನಮ್ಮಯಾ ಅಡ್ಡಿಯದು ಏನಿಲ್ಲ ಎನ್ನುತಲಿ
ಮಾರುತಿಯು ನಸುನಗೆಯ ಬೀರುತಲಿ ನುಡಿಯುತಿರೆ
ಕಲಿಭೀಮ ಸಾಷ್ಟಾಂಗವೆರಗುತಲಿ ನುಡಿದಿಹನು ॥೧೨೦೪॥

ನಿಮ್ಮನ್ನು ಅರಿಯದಲೆ ನಿಂದ್ಯನುಡಿ ನುಡಿದಿಹೆನು
ದುರುಳರಾ ದಾನವರ ಸಂಹಾರಗೈಯ್ಯುತಲಿ
ಶ್ರೀರಾಮಚಂದ್ರನಾ ಸೇವಿಸಿದ ವಂದ್ಯನಿಹೆ
ಎನ್ನನ್ನು ಕ್ಷಮಿಸುವುದು ಎಂದಿಹನು ಕಲಿಭೀಮ ॥೧೨೦೫॥

ಏಳೆನ್ನ ತಮ್ಮನೇ ಕಲಿಭೀಮ ಸೋದರನೆ
ಪವನನಿಗೆ ಅಂಜನೆಯು ಉದರದಲಿ ಜನಿಸಿಹೆನು
ಪವನನಿಗೆ ಕುಂತಿಯಾ ಜಠರದಲಿ ಜನಿಸಿರುವ
ನೀ ಎನ್ನ ತಮ್ಮನಿಹೆ ಎಂದಿಹನು ಮಾರುತಿಯು ॥೧೨೦೬॥

ಎನ್ನಯಾ ಮಾತೆಯಾ ಅಂಜನೆಯು ಪರಿಯಲ್ಲಿ
ವರಕುಂತಿ ದೇವಿಯರು ಮಹಮಾತೆ ಎಮಗಾಯ್ತು
ಮನದೊಳಿಹ ದುಗುಡವನು ಬಿಡು ಎಂದು ಮಾರುತಿಯ
ಭೀಮನನು ತೆಗೆತೆಗೆದು ಅಪ್ಪಿದನು ಹರುಷದಲಿ ॥೧೨೦೭॥

ಎತ್ತಣದ ಸೌಗಂಧ ಪುಷ್ಪದಾ ಬಯಕೆಯದು
ಎತ್ತಣದ ಕಾನನವು ಎಲ್ಲಿಯದು ಸಬಂಧ
ನಿಮ್ಮಯಾ ದರುಶನವು ಎಮಗಿಂದು ಲಭಿಸಿಹುದು
ನಾ ಧನ್ಯನಾಗಿಹೆನು ಎಂದಿಹನು ಕಲಿಭೀಮ ॥೧೨೦೮

ರಾಜ್ಯವನು ಕಳಕೊಂಡ ದುಃಖವದು ತೊಲಗಿಹುದು
ವನದೊಳಗೆ ಅಲೆಯುತಲಿ ಅಗಣಿತದ ಕಷ್ಟಗಳ
ಭೋಗಿಸಿದ ದುಃಖವದು ಸಕಲವೂ ಚಿಂತೆಯದು
ನಿಮ್ಮಯಾ ದರುಶನದಿ ಅಳಿದಿಹುದು ಎಂದಿಹನು ॥೧೨೦೯॥

ಪಾಂಡುವಿನ ಪರಿಯಲ್ಲಿ ನೀ ಎನಗೆ ತಂದೆಯಿಹೆ
ಧರ್ಮಜನ ಪರಿಯಲ್ಲಿ ನೀ ಎನಗೆ ಅಣ್ಣನಿಹೆ
ವರಬಾದರಾಯಣನ ಪರಿಯಲ್ಲಿ ಗುರುವಿರುವೆ
ಎನ್ನಯಾ ಭಾಗ್ಯಕ್ಕೆ ಎಣೆಯಿಲ್ಲ ಎಂದಿಹನು ॥೧೨೧೦॥

ಶಶಿಕುಲದ ಶ್ರೇಷ್ಠತರ ನೃಪರುಗಳು ನೀವಿಹಿರಿ
ಎಂದಿಗೂ ಸತ್ಯದಲಿ ಧರ್ಮದಲಿ ನಡೆಯುವಿರಿ
ನಿಮ್ಮಯಾ ಶತ್ರುಗಳು ನಿರ್ನಾಮರಾಗುತಲಿ
ಜಯಸಿರಿಯ ಪಡೆಯುವಿರಿ ಎಂದಿಹನು ಮಾರುತಿಯು ॥೧೨೧೧॥

ನಾವುಗಳು ರಾಮನಾ ಸೇವೆಯನು ಗೈದಿಹೆವು
ರಾಮನೇ ಕೃಷ್ಣನಾ ರೂಪದಲಿ ಜನಿಸಿಹನು
ಕೃಷ್ಣನನು ನಂಬುತಲಿ ಭಜಿಸುವಿರಿ ಅನವರತ
ಎಂದಿಗೂ ರಕ್ಷಿಪನು ಎಂದಿಹನು ಮಾರುತಿಯು ॥೧೨೧೨॥

ಹೇ ತಮ್ಮ ಕಲಿಭೀಮ ನಿನಗಿಷ್ಟವಾದುದನು
ಬೇಡುವುದು ಈಯುವೆನು ಎನ್ನುತಿರೆ ಕಲಿಹನುಮ
ಕಡಲನ್ನು ದಾಂಟಿರುವ ನಿನ್ನಯಾ ಅದ್ಭುತದ
ರೂಪವನು ತೋರುವುದು ಎಂದಿಹನು ಕಲಿಭೀಮ ॥೧೨೧೩॥

ಕೃತಯುಗದ ಜನಕಿಂತ ತ್ರೇತೆಯಾ ಯುಗದವರು
ದ್ವಾಪರದ ಯುಗದವರು ತ್ರೇತೆಯಾ ಜನಕಿಂತ
ಕಲಿಯುಗದ ನರರುಗಳು ದ್ವಾಪರದ ಜನಕಿಂತ
ನಿರ್ಬಲರು ನಿಸ್ಸತ್ವರೆಂದಿಹನು ಮರುತಜನು ॥೧೨೧೪॥

ತ್ರೇತೆಯಾ ಎನ್ನಯಾ ಅದ್ಭುತದ ರೂಪವನು
ದ್ವಾಪರದ ಮಾನಿಸರು ನೋಡುವದು ಕಷ್ಟಕರ
ಎನ್ನುತಿರೆ ಮಾರುತಿಯು ಕಲಿಭೀಮ ನಮಿಸುತಲಿ
ಆ ದಿವ್ಯ ರೂಪವನು ತೋರುವುದು ಎಂದಿಹನು ॥೧೨೧೫॥

ಪುಟವಿಟ್ಟ ಕಾಂಚನದ ಕಮನೀಯ ಕಾಂತಿಯಲಿ
ಹೊಳೆಯುತಿಹ ಕಾಯದಲಿ ಪರ್ವತದ ಪರಿಯಲ್ಲಿ
ನೆಲಮುಗಿಲಿನೆತ್ತರದಿ ತೊಳತೊಳಗಿ ಬೆಳಗುತಲಿ
ಬಲವಂತ ಹನುಮಂತ ಧೀಮಂತ ನಿಂತಿಹನು ॥೧೨೧೬॥

ಅಗ್ನಿಸಮ ಬೆಳಗುತಿಹ ಉಜ್ವಲದ ನಯನಗಳ
ಬಾಲರವಿಯಾರಕ್ತ ವಿಲಸಿತ ಕಪೋಲಗಳ
ಆನೆಗಳ ಸೊಂಡಿಲುಗಳಂತೆಸೆವ ಬಾಹುಗಳ
ಮಾರುತಿಯು ತ್ರಿವಿಕ್ರಮನ ರೂಪದಲಿ ನಿಂದಿಹನು ॥೧೨೧೭॥

ರೋಮಗಳು ನಿಮಿರುತಲಿ ಬಾಲವದು ಬೆಳೆಯುತಲಿ
ಮೇರುವಿನ ಪರ್ವತದ ಶಿಖರದಲಿ ಬಾನಿನಲಿ
ಮೂಡಿರುವ ಕಾಮನಾ ಬಿಲ್ಲಿನಾ ಪರಿಯಲ್ಲಿ
ಮಾರುತಿಯ ಶಿರದಲ್ಲಿ ಶೋಭಿಸುತಲಿರ್ದಿಹುದು ॥೧೨೧೮॥

ಸೂರ್ಯನೇ ಧರೆಗಿಳಿದು ಬಂದಿಹನೊ ಎಂಬಂತೆ
ಕೋಟಿಗಳ ಕಿರಣಗಳ ತೇಜದಲಿ ಹೊಳೆಯುತಿಹ
ಮಾರುತಿಯ ಆ ದಿವ್ಯ ರೂಪವನು ನೋಡುತಲಿ
ಕಂಗಳನು ಮುಚ್ಚುತಲಿ ಕಲಿಭೀಮ ನಮಿಸಿದನು ॥೧೨೧೯॥

ನಿನ್ನಯಾ ಅದ್ಭುತದ ರೂಪವನು ನೋಡಲಿಕೆ
ಕಣ್ಣುಗಳು ಅಸಮರ್ಥವಾಗಿಹವು ಅಂಜುವೆನು
ಮುನ್ನಿನಾ ರೂಪವನು ತೋರುವುದು ಎನ್ನುತಲಿ
ಕಲಿಭೀಮ ಸಾಷ್ಟಾಂಗ ನಮಿಸಿದನು ವಿನಯದಲಿ ॥೧೨೨೦॥

ಮಾರುತಿಯು ಸೌಮ್ಯದಾ ರೂಪವನು ಧರಿಸುತಲಿ
ಹೇ ತಮ್ಮ ಕಲಿಭೀಮ ನಿನ್ನ ನಡೆ ನುಡಿಗಳನು
ಮೆಚ್ಚಿಹೆನು ನಿನಗಿಷ್ಟವಾದುದನು ಬೇಡುವುದು
ನೀಡುವೆನು ಎನ್ನುತಲಿ ನುಡಿದಿಹನು ಸಂತಸದಿ ॥೧೨೨೧॥

ಹೇ ಅಣ್ಣ ಕಪಿವರನೆ ಎನ್ನಯಾ ಮಾತನ್ನು
ಸಲಿಸುವೊಡೆ ನೀವೆನ್ನ ಸೋದರನ ಅರ್ಜುನನ
ರಥದಗ್ರ ಭಾಗದಲಿ ಮಂಡಿಸುತ ಯುದ್ಧದಲಿ
ಜಯಲಕ್ಷ್ಮಿಯೊಲಿವಂತೆ ಕರುಣಿಪುದು ಎಂದಿಹನು ॥೧೨೨೨॥

ಹೇ ತಮ್ಮ ನಿನ್ನಯಾ ಇಚ್ಛೆಯನು ಸಲಿಸುವೆನು
ಪಾರ್ಥನ ರಥಾಗ್ರದಲಿ ಮಂಡಿಸುತ ಗರ್ಜಿಸಲು
ಸಾವಿರದ ಸೈನಿಕರು ಭಯದಲ್ಲಿ ಸಾಯುವರು
ಜಯಲಕ್ಷ್ಮಿ ನಿಮಗೊಲಿವಳೆಂದಿಹನು ಮಾರುತಿಯು ॥೧೨೨೩॥

ಕೃಷ್ಣನಾ ಕರುಣೆಯಾ ಕವಚವದು ನಿಮಗಿಹುದು ।
ಬೇಗನೇ ಫಲುಗುಣನ ಕಾಣುವಿರಿ ಹರುಷದಲಿ
ನಿಮ್ಮಯಾ ಕಷ್ಟಗಳು ತೊಲಗುವವು ಎನ್ನುತಲಿ
ಮರುತಜನು ಪವನಜನ ಹರಸುತಲಿ ಕಳುಹಿದನು ॥೧೨೨೪॥

**ಯಕ್ಷದಾ ಸೈನಿಕರ ಸಂಹಾರ ಗೈಯ್ಯುತಲಿ ।**
**ಕಲಿಭೀಮ ಸೌಗಂಧ ಪುಷ್ಪವನು ಕೊಂಡಿಹನು ।**

ಆತ್ತಲಾ ದ್ರೌಪದಿಯು ಎನ್ನಯಾ ದಾರಿಯನು
ಕಾಯುತಲಿ ತಡವೇಕೆ ಮಾಡಿಹನು ಎನ್ನುತಲಿ
ಎನ್ನನ್ನು ಚಿಂತಿಸುತಲಿರುತಿಹಳು ಎನ್ನುತಲಿ
ಬಿರುಗಾಳಿ ವೇಗದಲಿ ಕಲಿಭೀಮ ಚರಿಸಿಹನು ॥೧೨೨೫॥

ಗಾಳಿಯಲಿ ತೇಲಿಬಹ ಪರಿಮಳದ ಮಾರ್ಗವನು
ಹಿಡಿಯುತಲಿ ಪವನಜನು ಭರದಲ್ಲಿ ಧಾವಿಸುತ
ಸೌಗಂಧ ಸೂಸುತಿಹ ಸಾವಿರದ ದಳಗಳಾ
ಕಮಲಗಳ ಶೋಭಿತದ ಸರಸಿಯನು ಕಂಡಿಹನು ॥೧೨೨೬॥

ಸೌಗಂಧ ಪಸರುತಿಹ ಮಾರುತನ ಸ್ಪರ್ಶದಲಿ
ತನುಬೆವರು ತೊಲಗುತಲಿ ದಾರಿಶ್ರಮವಳಿಯುತಲಿ
ರೋಮಗಳು ನಿಮಿರುತಲಿ ತನುಪುಳಕಗೊಳ್ಳುತಲಿ
ಪವನಜನ ಹೃದಯದಾ ಕಮಲವದು ಅರಳಿಹುದು ॥೧೨೨೭॥

ವರಹಂಸ ಕಾರಂಡ ಬಕ ಚಕ್ರವಾಕಗಳು
ನೀರ್ವಕ್ಕಿ ಕೊಳವಕ್ಕಿ ಸರಸದಲಿ ಕ್ರೀಡಿಸುವ
ಅಂಬುಜದ ಪರಿಮಳವ ಸವಿಯುತಲಿ ಹಾಡುತಿಹ
ದುಂಬಿಗಳು ಸೊಗಯಿಸುವ ಸರಸಿಯನು ಕಂಡಿಹನು ॥೧೨೨೮॥

ಉದಯರವಿ ಬೀರುತಿಹ ಸಾವಿರದ ಕಿರಣಗಳ
ಆರಕ್ತವರ್ಣದಲಿ ನಳನಳಿಪ ತೇಜದಲಿ
ಬೆಳಗುತಿಹ ಸಾವಿರದ ದಳಗಳಲಿ ಸೊಗಯಿಸುವ
ಸೌಗಂಧ ಪುಷ್ಪಗಳ ನಿಕರಗಳ ಕಂಡಿಹನು ॥೧೨೨೯॥

ಭಾಮಿನಿಯ ಬಯಕೆಯದು ಈಡೇರಿತೆನ್ನುತಲಿ
ಕಲಿಭೀಮನುಬ್ಬುತಲಿ ಕುಣಿಯುತಲಿ ನೆಗೆಯುತಲಿ
ಸರಸಿ ಬಳಿ ಬರುತಿರಲು ರಕ್ಷಿಸುತ ನಿಂತಿರ್ದ
ಕಿನ್ನರರ ಯಕ್ಷರನು ಕಂಡಿಹನು ಕಲಿಭೀಮ ॥೧೨೩೦॥

ನೀನಾರು ಇರುತಿರುವೆ ಇಲ್ಲೇಕೆ ಬಂದಿರುವೆ
ಯಕ್ಷದಾ ತಾಣವಿದು ಧನಪತಿಯ ವನವಿಹುದು
ಗಂಧರ್ವ ಕಿನ್ನರರು ವಿಹರಿಸುವ ಎಡೆಯಿಹುದು
ಮರ್ತ್ಯನಿಗೆ ಅವಕಾಶ ಇಲ್ಲೆಂದರಾಭಟರು ॥೧೨೩೧॥

ಅನ್ಯರನು ಆರನನ್ನು ಈ ವನದಿ ಬಿಡದಿರಲು
ಕುಬೇರನ ಕಟ್ಟಾಜ್ಞೆ ಶಾಸನವು ಇರುತಿಹುದು
ಪ್ರಾಣದಾ ಆಸೆಯದು ನಿನಗಿರ್ದುದಾದೊಡೆಯು
ಸುಮ್ಮನೇ ಮರಳುವುದು ಎನ್ನುತಿರೆ ಕಿನ್ನರರು ॥೧೨೩೨॥

ಕಿನ್ನರರೆ ಕೇಳುವುದು ಕುರುಕುಲದ ಖ್ಯಾತನಾ
ಪಾಂಡುವಿನ ಪುತ್ರರುಗಳಾಗಿಹೆವು ಪಾಂಡವರು
ಎಮ್ಮಯಾ ವರಸತಿಯು ಸೌಗಂಧ ಪುಷ್ಪವನು
ಬಯಸುತಿರೆ ನಾವಿಲ್ಲಿ ಬಂದಿಹೆವು ಎಂದಿಹನು ॥೧೨೩೩॥

ನಿಮ್ಮಯಾ ಸತಿಯಿಚ್ಛೆ ಇರ್ದೊಡೆಯು ನೀವುಗಳು
ಧನಪತಿಯ ಬಳಿಯಲ್ಲಿ ಸಾಗುತಲಿ ಬೇಡುವುದು
ಅನುಮತಿಯ ನಿತ್ತೊಡೆಯು ಸೌಗಂಧ ಕುಸುಮವನು
ಕೊಳ್ಳುವುದು ಎಂದಿಹರು ಕಾವಲಿನ ಭಟರುಗಳು ॥೧೨೩೪॥

ಬೇಡುವುದು ಗೊತ್ತಿಲ್ಲ ಕ್ಷತ್ರಿಯರು ನಾವಿಹೆವು
ಅನ್ಯರಿಗೆ ಬೇಡಿದುದ ನೀಯುದೆವು ನಾವುಗಳು
ಕೈಯ್ಯೊಡ್ಡಿ ಬೇಡುವವ ನಾನಲ್ಲ ಶೌರ್ಯದಲಿ
ಯುದ್ಧವನು ಗೈಯ್ಯುತಲಿ ಪದ್ಮವನು ಕೊಳ್ಳುವೆನು ॥೧೨೩೫॥

ಎನ್ನುತಲಿ ಕಲಿಭೀಮ ಗದೆಯನ್ನು ಸರಸಿಯಲಿ
ಬೀಸುತಿರೆ ಯಕ್ಷರಾ ಸೈನಿಕರು ಕ್ರೋಧದಲಿ ಗರ್ಜಿಸುತ
ಹಿಡಿಹಿಡಿರಿ ಬಡಿಬಡಿರಿ ಕಡಿಕಡಿರಿ ಕಳ್ಳನನು
ಎನ್ನುತಲಿ ಕೂಗುತಲಿ ಭೀಮನನು ಮುತ್ತಿದರು ॥೧೨೩೬॥

ಹೊಳೆಯುತಿಹ ಖಡ್ಗಗಳ ಶಕ್ತಿಗಳ ಶೂಲಗಳ
ವಿಧವಿಧದ ಆಯುಧವ ಕೊಳ್ಳುತಲಿ ಯಕ್ಷರರು
ಮುತ್ತುತಿರೆ ಕಲಿಭೀಮ ಗದೆಯನ್ನು ಎತ್ತುತಲಿ
ಸುತ್ತಲೂ ಭರಭರನೆ ತಿರ್ರನೇ ತಿರುಹಿದನು ॥೧೨೩೭॥

ದೀಪವನು ಮುತ್ತಿರುವ ಹುಳುನಿಕರ ಸಾಯುತಲಿ
ಬೀಳ್ವಂತೆ ಭಟರುಗಳು ಅಸುನೀಗಿ ಬಿದ್ದಿಹರು
ಬಿರುಗಾಳಿ ಬೀಸುತಿರೆ ಮೇಘಗಳು ಚದುರುವಾ
ಪರಿಯಲ್ಲಿ ಕೆಲಕೆಲರು ದೆಸೆಗೆಟ್ಟು ಓಡಿದರು ॥೧೨೩೮॥

ಕೆಲರುಗಳು ಸೈನಿಕರು ಧಾವಿಸುತ ಭರದಲ್ಲಿ
ಮರ್ತ್ಯದಾ ನರನೋರ್ವ ಭಟರುಗಳ ಕೊಲ್ಲುತಲಿ
ಸೌಗಂಧ ಪುಷ್ಪಗಳ ಕೊಂಡಿಹನು ಎನ್ನುತಲಿ
ಧನಪತಿಗೆ ನುಡಿದಿಹರು ಗದ್ಗದದ ಕಂಠದಲಿ ॥೧೨೩೯॥

ಸಾಮಾನ್ಯ ನರನಲ್ಲ ಬಲಭೀಮ ವಿಕ್ರಮನು
ತಡೆಯದಿರಿ ಎನ್ನುತಲಿ ಧನಪತಿಯು ನುಡಿದಿಹನು
ಕಲಿಭೀಮ ಸಾವಿರದ ದಳಗಳಾ ಕಮಲಗಳ
ಕುಸುಮಗಳ ಅಗಣಿತವ ಕೊಂಡಿಹನು ಹರುಷದಲಿ ॥೧೨೪೦॥

ಇತ್ತಲಾ ಧರ್ಮಜನು ಆಶ್ರಮಕೆ ಐತರುತ
ಮರುತಜನ ಕಾಣದಲೆ ದ್ರೌಪದಿಯ ಕೇಳುತಿರೆ
ಸೌಗಂಧ ಪುಷ್ಪವನು ತರಲೆಂದು ತೆರಳಿದನು
ಎನ್ನುತಲಿ ನುಡಿಯುತಿರೆ ಧರ್ಮಜನು ಚಿಂತಿಸಿದ ॥೧೨೪೧॥

ಹಗಲಿನಲಿ ತಾರೆಗಳು ಮುಗಿಲಿನಲಿ ಮಿನುಗಿಹವು
ಉಲ್ಕೆಗಳು ಉರಿಯುತಲಿ ಧರೆಗುರುಳಿ ಬಿದ್ದಿಹವು
ಕಲ್ಲುಗಳು ಮಾಂಸಗಳು ರಕುತವದು ಸುರಿದಿಹವು
ಘೋರತರ ಕತ್ತಲೆಯು ಎಲ್ಲೆಡೆಗೆ ಪಸರಿಹುದು ॥೧೨೪೨॥

ಬಿರುಗಾಳಿ ಬೀಸುತಲಿ ತರುಲತೆಗಳುರುಳುತಲಿ
ಗುಡುಗಿನಲಿ ಸಿಡಿಲಿನಲಿ ಮಿಂಚಿನದಿ ಆರ್ಭಟದಿ
ಪ್ರಳಯದಾ ಮಳೆಯಂತೆ ಜಲಧಾರೆ ಸುರಿಯುತಿರೆ
ಧರ್ಮಜನು ಅತುಳದಲಿ ಕಳವಳದ ಗೊಂಡಿಹನು ॥೧೨೪೩॥

ಅತ್ತಲಾ ಫಲುಗುಣನು ಯಾತ್ರೆಯಲಿ ತೆರಳಿದನು
ಇತ್ತಲೀ ಪವನಜನು ಕಾನನದಿ ತೆರಳಿದನು
ಆವುದೋ ಭೀಕರದ ಆಪತ್ತು ಕಷ್ಟವದು
ಬರಲಿಹುದು ಎನ್ನುತಲಿ ಧರ್ಮಜನು ಚಿಂತಿಸುತ ॥೧೨೪೪॥

ಕುವರನ ಘಟೋತ್ಕಚನ ಕರೆಯುತಲಿ ಆಕ್ಷಣದಿ
ಈಗಲೇ ಭೀಮನನು ಅರಸುತಲಿ ಕಾಣುವುದು
ಎನ್ನುತಿರೆ ಘಟೋತ್ಕಚನು ಪಾಂಡವರೆಲ್ಲರನು
ಹೆಗಲಿನಲಿ ಕೊಳ್ಳುತಲಿ ಗಗನದಲಿ ನಡೆದಿಹನು ॥೧೨೪೫॥

ಮರುತಜನ ಅರಸುತಲಿ ಗಂಧರ್ವ ಸರಸಿಯೆಡೆ
ಬರುತಲಿರೆ ರಕುತದಲಿ ಆರಕ್ತ ವರ್ಣದಲಿ
ಯಮಧರ್ಮನಂತೆಸೆವ ಭೀಕರದ ರೂಪದಾ
ಭೀಮನನು ಕಾಣುತಲಿ ಧರ್ಮಜನು ಬೆರಗಾದ ॥೧೨೪೬॥

ತೊಲಗಿದಾ ಪ್ರಾಣವದು ಬಂದಂತೆ ಯಮಸುತನು
ಅನಿಲಜನ ತೆಗೆತೆಗೆದು ಅಪ್ಪುತಲಿ ಸಂತಸದಿ
ಈ ಪರಿಯ ರೌದ್ರದಾ ರೂಪವದು ಏತಕ್ಕೆ
ಆವುದಾ ಕಷ್ಟವದು ಎನ್ನುತಲಿ ನುಡಿದಿಹನು ॥೧೨೪೭॥

ಸೌಗಂಧ ಪುಷ್ಪಗಳ ಕೀಳುತಲಿ ಕೊಳ್ಳುತಿರೆ
ಯಕ್ಷರುಗಳಗಣಿತರು ಮುತ್ತುತಿರೆ ಕ್ರೋಧದಲಿ
ಗದೆಯಿಂದ ಅಪ್ಪಳಿಸಿ ರುಂಡಗಳ ಚೆಂಡಾಡಿ
ರಕುತದಾ ಓಕುಳಿಯನಾಡಿಹೆನು ಎನ್ನುತಲಿ ॥೧೨೪೮॥

ಕಲಿಭೀಮ ಸಾವಿರದ ಸೌಗಂಧ ಕುಸುಮಗಳ
ಈಯುತಿರೆ ಸಕಲರೂ ಸಂತಸದಿ ನಲಿದಿಹರು
ದ್ರೌಪದಿಯು ಕುಸುಮದಾ ಸಿರಿಗಂಧ ಮೂಸುತಲಿ
ತನುಪುಳಕ ಪೂರದಲಿ ಹರುಷದಲಿ ಹಿಗ್ಗಿದಳು ॥೧೨೪೯॥

ಮಾರ್ಗದಾ ಮಧ್ಯದಲಿ ಮಾರುತಿಯ ದರ್ಶನವು
ಲಭಿಸಿರುವ ವೃತ್ತಾಂತವರುಹುತಿರೆ ವಿಶದದಲಿ
ಧರ್ಮಜನು ಆನಂದ ಭಾಷ್ಪಗಳ ಸುರಿಸುತಲಿ
ಪವನಜನೆ ನೀ ಧನ್ಯ ಧನ್ಯನಿಹೆ ಎಂದಿಹನು ॥೧೨೫೦॥

ವರಗಂಧ ಮಾದನದ ಸೀಮೆಯಲಿ ಧರ್ಮಜನು
ಕೆಲದಿನವು ಮುದದಿಂದ ಕಾಲವನು ಕಳೆಯುತಿರೆ
ಪಾವನರ ಸಿದ್ಧರನು ಕಾಣುವಾ ಆಸೆಯದು
ಜನಿಸಿಹುದು ಎನ್ನುತಲಿ ಪವನಜಗೆ ನುಡಿದಿಹನು ॥೧೨೫೧॥

ಮುಂದಕ್ಕೆ ಹೋಗದಿದು ಗಂಧರ್ವ ಸೀಮೆಯಿದೆ
ಯಕ್ಷದಾ ರಾಕ್ಷಸರ ಕಿನ್ನರರ ಸೈನ್ಯವದು
ನಿಮ್ಮನ್ನು ವಧಿಸುವರು ಬದರಿಕೆಯ ಆಶ್ರಮಕೆ
ಮರುಳುವುದು ಎನ್ನುತಲಿ ನಭವಾಣಿ ಮೊಳಗಿಹುದು ॥೧೨೫೨॥

ಬದರಿಯನು ದಾಂಟುತಲಿ ವೃಷಪರ್ವನಾಶ್ರಮವ
ಅಷ್ಟಿರ್ಕ್ಷೇಣ ಮುನಿವರನ ಆಶ್ರಮವ ಕಳೆಯುತಲಿ
ಮುಂದಕ್ಕೆ ತೆರಳಿದೊಡೆ ತೇಜದಲಿ ಮೆರೆಯುತಿಹ
ಕುಬೇರನ ಭವನವದು ಕಾಣುವಿರಿ ಎಂದಿಹುದು ॥೧೨೫೩॥

ಅಶರೀರವಾಣಿಯನು ಕೇಳುತಲಿ ಯಮಸುತನು
ಧೌಮ್ಯರಾ ನುಡಿಯಂತೆ ವರ ಬದರಿಕಾಶ್ರಮಕೆ
ಪರಿವಾರ ಸಹಿತದಲಿ ತಾ ಮತ್ತೆ ಮರಳುತಲಿ
ಪೌರಾಣ ಕಥೆಗಳಾ ಶ್ರವಣದಲಿ ರಮಿಸಿದನು ॥೧೨೫೪॥

ಭೀಮಸುತ ಘಟೋತ್ಕಜ ಯಮಸುತಗೆ ಎರಗುತಲಿ
ಕಷ್ಟದಲಿ ಆಪತ್ತೊಳೆನ್ನನ್ನು ನೆನೆಯುವುದು
ತಪ್ಪದೆಯೆ ಐತಂದು ಪರಿಹಾರ ಗೈಯ್ಯುವೆನು
ಎನ್ನುತಲಿ ದಾನವರ ಸಹಿತದಲಿ ತೆರಳಿದನು ॥೧೨೫೫॥

**ದ್ರೌಪದಿಯ ಕೊಂಡೊಯ್ದ ಅಸುರನನ ಜಟನನ್ನು**
**ಕಲಿಭೀಮ ಕಾದುತಲಿ ಕೊಂದಿಹನು ವಿಕ್ರಮದಿ॥**

ಇಂತಿರಲು ಒಂದು ದಿನ ಪವನಜನು ಕಾನನದಿ
ಬೇಂಟೆಯಲಿ ತೆರಳಿರಲು ಜಟಾಸುರ ದೈತ್ಯನು
ವಿಪ್ರನಾ ವೇಷದಲಿ ಐತಂದು ಧರ್ಮಜನ
ಯಮರಳನು ದ್ರೌಪದಿಯ ಭಕ್ಷಿಸಲು ಕೊಂಡೊಯ್ಯೆ ॥೧೨೫೬॥

ಎಲವೆಲವೊ ರಕ್ಕಸನೆ ಕಪಟಿಯೇ ಪಾತಕಿಯೆ
ನಿನ್ನಯಾ ಪ್ರಾಣವದು ಖಚಿತದಲಿ ತೊಲಗುವುದು
ಎನ್ನುತಲಿ ಯೋಗದಾ ಶಕ್ತಿಯಾ ಭಾರವನು
ಧರ್ಮಜನು ಹೇರುತಿರೆ ರಕ್ಕಸನು ನಿಂದಿಹನು ॥೧೨೫೭॥

ಸ್ತಂಭದಾಪರಿಯಲ್ಲಿ ದಾನವನು ನಿಲ್ಲುತಿರೆ
ಸಹದೇವ ಕೊಸರುತಲಿ ಜಾರುತಲಿ ಧಾವಿಸುತ
ಭೀಮಂಗೆ ಉಸುರುತಿರೆ ಕೆಂಡಗಳ ಕಾರುತಲಿ
ಗದೆಯನ್ನು ತಿರುಹುತಲಿ ಕಲಿಭೀಮ ಬಂದಿಹನು ॥೧೨೫೮॥

ಹೇ ಭೀಮ ನೀ ಬಂದುದೊಳ್ಳೆಯದು ಎನಗಾಯ್ತು
ಎನ್ನೊಡನೆ ಯುದ್ಧಕ್ಕೆ ಇವರತುಳ ನಿರ್ಬಲರು
ನೀನೆನಗೆ ಸಮಸಾಟಿ ನಿನ್ನೊಡನೆ ಕಾದುವೆನು
ಎನ್ನುತಲಿ ರಕ್ಕಸನು ಮರುತಜನ ಮುತ್ತಿದನು ॥೧೨೫೯॥

ಮೋಸದಲಿ ಸತಿಸಹಿತ ಸೋದರರ ಕೊಂಡೊಯ್ದ
ಮಹಪಾಪಿ ಖೂಳನೇ ಹೇ ಜಟನೆ ದೈತ್ಯನೇ
ನಿನ್ನನ್ನು ಯಮಲೋಕಕಟ್ಟುವೆನು ಎನ್ನುತಲಿ
ಕ್ರೋಧದಲಿ ಕಲಿಭೀಮ ರಕ್ಕಸನ ಮುತ್ತಿದನು ॥೧೨೬೦॥

ಸಿಂಹವದು ಮೊಲವನ್ನು ಎರಗುವಾ ಪರಿಯಲ್ಲಿ
ಬರಸಿಡಿಲು ಪರ್ವತವ ತಾಗುವಾ ಪರಿಯಲ್ಲಿ
ಮರುತಜನು ಅಸುರನಾ ಮೇಲ್ಹಾಯ್ದು ಬೀಳುತಲಿ
ಬಲವಾಗಿ ಮುಷ್ಟಿಪ್ರಹಾರವನು ಗೈದಿಹನು ॥೧೨೬೧॥

ವ್ಯಾಘ್ರಗಳು ಎರಡುಗಳು ಕಾದುವಾ ಪರಿಯಲ್ಲಿ
ಪರ್ವತಗಳೆರಡೆದ್ದು ತಾಗುವಾ ಪರಿಯಲ್ಲಿ
ಸಮದಂಡಿ ಭುಜಬಲರು ಸಮಶಕ್ತಿ ಈರ್ವರು
ಮಲ್ಲದಲಿ ಯುದ್ಧದಲಿ ಸೆಣಸುತಲಿ ಹೆಣಗಿದರು ॥೧೨೬೨॥

ತೋಳುಗಳ ಬಂಧನದಿ ಒತ್ತೊತ್ತಿ ಹಿಡಿಯುತಲಿ
ಕೊಸರುತಲಿ ಜಾರುತಲಿ ಎತ್ತೆತ್ತಿ ಒಗೆಯುತಲಿ
ತೊಡೆಗಳನು ಚಪ್ಪರಿಸಿ ಓಡೋಡಿ ಧಾವಿಸುತ
ಮುಷ್ಟಿ ಪ್ರಹಾರದಲಿ ಕಾದಿದರು ಅದ್ಭುತದಿ ॥೧೨೬೩॥

ದುರುಳನಾ ದೇಹವನು ಕಲಿಭೀಮ ಕೆಡುಹುತಲಿ
ಕಾಲಿನಲಿ ದೈತ್ಯನನು ಮೆಟ್ಟುತಲಿ ವೃಕ್ಷದಲಿ
ಒಲವಾಗಿ ಮುಷ್ಟಿಪ್ರಹಾರವನು ಗೈಯ್ಯುತಿರೆ
ರಕುತವನು ಕಾರುತಲಿ ಪ್ರಾಣವನು ಬಿಟ್ಟಿಹನು ॥೧೨೬೪॥

ನಭಬಿರಿವ ತೆರದಲ್ಲಿ ಚೀರುತಲಿ ಒದರುತಲಿ
ದುರುಳನಾ ದಾನವನು ಪ್ರಾಣವನು ತೊರೆಯುತಿರೆ
ಧರ್ಮಜನು ಭೀಮನನು ತೆಗೆತೆಗೆದು ಅಪ್ಪಿದನು
ಸಕಲಜನ ಪರಿವಾರ ಸಂತಸದಿ ನಲಿದಿಹುದು ॥೧೧೬೫॥

ಬಳಿಕಲಾ ಧರ್ಮಜನು ಋಷಿಗಡಣ ಸಹಿತದಲಿ
ಪಯಣವನು ಬೆಳೆಸುತಲಿ ವೃಷಪರ್ವನಾಶ್ರಮಕೆ
ಬರುತಿರಲು ರಾಜರ್ಷಿ ವೃಷಪರ್ವಗೆರಗುತಲಿ
ದಿನಗಳನು ಏಳನ್ನು ಕಳೆದಿಹನು ಹರುಷದಲಿ ॥೧೨೬೬॥

ಮುಂದಕ್ಕೆ ಸಾಗುತಲಿ ಹಿಮಶುಭ್ರ ತೇಜದಲಿ
ಹೊಳೆಹೊಳೆವ ವರಶ್ವೇತ ಪರ್ವತಕೆ ನಡೆತಿರಲು
ಸುಂದರದ ವಿಲಸಿತದ ಕುಸುಮಗಳ ಶೋಭಿತದ
ಫಲಭರಿತ ದ್ರುಮಗಳನು ನೋಡುತಲಿ ತಣಿದಿಹನು ॥೧೨೬೭॥

ಮಲ್ಲಿಗೆಯ ಜಾಜಿಗೆಯ ಸಂಪಗೆಯ ಕೇದಗೆಯ
ಮಂದಾರ ಬಕುಲಗಳ ವರ ಪಾರಿಜಾತಗಳ
ಕಿಂಶುಕದ ಶಿಂಶುಪದ ವರಕರ್ಣಿಕಾರಗಳ
ಪುಷ್ಪಗಳು ಸೊಗಯಿಸುವ ತರುನಿಕರ ಕಂಡಿಹನು ॥೧೨೬೮॥

ಶುಕಪಿಕದ ರಾಜಾಣ ಭರದ್ವಾಜ ಗುಬ್ಬಕ್ಕಿ
ವಿಧವಿಧದ ಪಕ್ಷಿಗಳ ನಿಕರಗಳು ವಿಹರಿಸುವ
ವರಹಂಸ ಬಕಕುರರ ಆ ಚಕ್ರವಾಕಗಳ
ಹಿಂಡುಗಳು ಕ್ರೀಡಿಸುವ ಸರಸಿಯನು ಕಂಡಿಹನು ॥೧೨೬೯॥

ಅರಳಿರುವ ಕಮಲಗಳ ಮಕರಂದ ಸವಿಯುತಲಿ
ಮಧುರತರ ಸರದಲ್ಲಿ ಝೇಂಕಾರ ಗೈಯ್ಯುತಿಹ
ದುಂಬಿಗಳ ವೃಂದಗಳ ಸೊಗಯಿಸುವ ಸುಂದರದ
ತಾಣವನು ನೋಡುತಲಿ ಧರ್ಮಜನು ತಣಿದಿಹನು ॥೧೨೭೦॥

ಅಲ್ಲಿಯೇ ಧರ್ಮಜನು ವರ ಅರ್ಷ್ಟಿಷೇಣರಾ
ಆಶ್ರಮಕೆ ಬರುತಿರಲು ಋಷಿವರನ ಚರಣಕ್ಕೆ
ಹರುಷದಲಿ ಎರಗುತಲಿ ಫಲಪುಷ್ಪ ನೀಡುತಿರೆ
ಮುನಿವರನು ಧರ್ಮಜನ ಹರಸುತಲಿ ನುಡಿದಿಹನು ॥೧೨೭೧॥

ಪಿತೃಮಾತೃ ಅಗ್ನಿಯನು ಗುರುವನ್ನು ಆತ್ಮನನು
ಐಯ್ದನ್ನು ದೇವರುಗಳೆನ್ನುತಲಿ ಪೂಜಿಸಲು
ಇಹದಲ್ಲಿ ಸೌಖ್ಯವದು ಪರದಲ್ಲಿ ಮೋಕ್ಷವದು
ತಪ್ಪದೇ ದೊರೆಯುವುದು ಎಂದಿಹನು ಮುನಿವರನು ॥೧೨೭೨॥

ಗಂಧರ್ವ ಕಿನ್ನರರು ಕಿಂಪುರುಷ ಯಕ್ಷರರು
ಸುಖದೊಳಗೆ ವಿಹರಿಸುವ ಸುಂದರದ ತಾಣವಿದು
ಮುಂದಕ್ಕೆ ತೆರಳುವುದು ದುಸ್ಸಾಧ್ಯವಿರುತಿಹುದು
ನೀವಿಲ್ಲಿ ವಾಸಿಪುದು ಎಂದಿಹನು ಮುನಿವರನು ॥೧೨೭೩॥

ಫಲುಗುಣನು ಈ ಎಡೆಗೆ ಬರಲಿಹನು ನೀವುಗಳು
ಇಲ್ಲಿಯೇ ವಾಸ್ತವ್ಯ ಗೈಯ್ಯುವುದು ಎನ್ನುತಿರೆ
ಪಾಂಡವರು ಪಾರ್ಥನಾ ಬರಹನ್ನು ಕಾಯುತಲಿ
ಅಲ್ಲಿಯೇ ಐದನೆಯ ವರುಷವನು ಕಳೆದಿಹರು ॥೧೨೭೪॥

**ಧನಪತಿಯ ಮಿತ್ರನಾ ಬಲವಂತ ಮಣಿಮಾನ ।**
**ದಾನವನ ಕಲಿಭೀಮ ಸಂಹಾರ ಗೈದಿಹನು ॥**

ಒಂದುದಿನ ವನದೊಳಗೆ ವರ ವೈನತೇಯನು
ಭೂಮಿಯಲಿ ಬದ್ದಿರುವ ಹೆಬ್ಬಾವನೆತ್ತುತಲಿ
ನಭದೆಡೆಗೆ ರಭಸದಲಿ ಕೊಂಡೊಯ್ಯುತಿರುತಿರಲು
ತರುನಿಕರವಲುಗುತಲಿ ಅಲರುಗಳು ಉದುರಿದವು ॥೧೨೭೫॥

ಪರಿಮಳವ ಪಸರುತಿಹ ಪಂಚಕದ ವರ್ಣಗಳ
ಸುಂದರದ ಕುಸುಮಗಳು ಗಾಳಿಯಲಿ ತೇಲುತಲಿ
ಬರುತಲಾ ದ್ರೌಪದಿಯ ಬಳಿಯಲ್ಲಿ ಬೀಳುತಿರೆ
ಪುಷ್ಪಗಳ ನೋಡುತಲಿ ಕೌತುಕದಿ ಧಾವಿಸುತ ॥೧೨೭೬॥

ಭೀಮನೆಡೆ ಐತಂದು ಈ ಪರಿಯ ಚೆಲುವಿನಾ
ಕುಸುಮಗಳ ಕಂಡಿಲ್ಲ ಮುಡಿಯೊಳಗೆ ಮುಡಿಯುವಾ
ಆಸೆಯದು ಮೂಡಿಹುದು ತಂದೀವುದೆನ್ನುತಲಿ
ದ್ರೌಪದಿಯು ನುಡಿಯುತಿರೆ ಕಲಿಭೀಮ ಹೊರಟಿಹನು ॥೧೨೭೭॥

ಪರಿಮಳದ ಪಥವಿಡಿದು ಪುಷ್ಪವನು ಅರಸುತಲಿ
ಪವನಜನು ವನದೊಳಗೆ ಭರದಲ್ಲಿ ನಡೆದಿರಲು
ಹೆಜ್ಜೆಗಳ ಗೆಜ್ಜೆಗಳ ನರ್ತನದ ಗಾಯನದ
ಸ್ವರವನ್ನು ಕೇಳುತಲಿ ಅಚ್ಚರಿಯ ಗೊಂಡಿಹನು ॥೧೨೭೮॥

ವಿಪಿನದಲಿ ಎತ್ತಣದ ಗಾಯನದ ನರ್ತನದ
ಸವಿಜೇನ ಸುಸ್ವರವು ಕೇಳುತಿದೆ ಎನ್ನುತಲಿ
ಮುಂದಕ್ಕೆ ಬರುತಲಿರೆ ಮುಗಿಲನ್ನು ಮುದ್ದಿಡುವ
ಗೋಪುರದ ಧನಪತಿಯ ಅರಮನೆಯ ಕಂಡಿಹನು ॥೧೨೭೯॥

ವಜ್ರಗಳ ವೈಡೂರ್ಯ ಗೋಮೇದಿಕಾದಿಗಳ
ರತ್ನಗಳ ಕೆತ್ತಿರುವ ಹೊಳೆಹೊಳೆವ ಸೌಧದಲಿ
ವೀಣೆಯಾ ನಾದದಲಿ ಸುಮಧುರವ ಗಾಯನದಿ
ನರ್ತಿಸುವ ಅಪ್ಸರೆಯ ವೃಂದವನು ಕಂಡಿಹನು ॥೧೨೮೦॥

ಅರಮನೆಯ ಸುಂದರದ ಉದ್ಯಾನ ಬಳಿ ಬರಲು
ಕಾವಲಿನ ಪಟುಭಟರು ಆಯುಧಗಳೆತ್ತುತಲಿ
ಹೇಮರ್ತ್ಯ ನೀನಾರು ಪತಕ್ಕೆ ಬಂದಿರುವೆ
ಸುಮ್ಮನೇ ಮರುಳುವುದು ಎನ್ನುತಲಿ ನುಡಿದಿಹರು ॥೧೨೮೧॥

ಕಲಿಭೀಮ ಕ್ರೋಧದಲಿ ರೌದ್ರದಲಿ ಗರ್ಜಿಸುತ
ಅಗಣಿತದ ಕಾವಲಿನ ಯೋಧರನು ವಧಿಸುತಿರೆ
ಧನಪತಿಯ ಮಿತ್ರನಾ ಬಲವಂತ ಮಣಿಮಂತ
ದಾನವನು ಧಾವಿಸುತ ಯುದ್ಧಕ್ಕೆ ಬಂದಿಹನು ॥೧೨೮೨॥

ಗಿರಿಯೆರಡು ತಾಗುತಲಿ ಬಾಗುತಲಿ ಹೊಯ್ದಾಡಿ
ಧಿಕ್ಕಿಯನು ಹೊಡೆವಂತೆ ಜಗಜಟ್ಟಿ ಈರ್ವರೂ
ಎರಗುತಲಿ ಮಲ್ಲದಲಿ ಒಗೆಯುತಲಿ ಸೆಣಸುತಿರೆ
ಭೂಮಿಯದು ನೆಗ್ಗಿಮದು ಪದಹತಿಗೆ ಹೋರಟೆಗೆ ॥೧೨೮೩॥

ಮಣಿಮಾನನೆತ್ತುತಲಿ ಗರಗರನೆ ತಿರುಗಿಸುತ
ತೂರುತಲಿ ಎಸೆಯುತಲಿ ಧಾವಿಸುತ ಕಲಿಭೀಮ
ದಾನವನ ಎದೆಯನ್ನು ಮೆಟ್ಟುತಲಿ ಕುಟ್ಟುತಲಿ
ಬಲವಾಗಿ ಮುಷ್ಟಿ ಪ್ರಹಾರವನು ಗೈಯ್ಯುತಿರೆ ॥೧೨೮೪॥

ರಕ್ಕಸನ ವಕ್ಷವದು ಭರದಲ್ಲಿ ಬಿರಿಯುತಲಿ
ರಕುತದಾ ಬುಗ್ಗೆಯದು ಘಳಘಳಿಲು ಚಿಮ್ಮುತಿರೆ
ದೆಸೆದೆಸೆಯು ಬಿರಿವಂತೆ ಚೀತ್ಕಾರ ಗೈಯ್ಯುತಲಿ
ರಕುತವನು ಕಾರುತಲಿ ಪ್ರಾಣವನು ಬಿಟ್ಟಿಹನು ॥೧೨೮೫॥

ಆ ಕ್ಷಣದಿ ದಾನವನ ದೇಹವನು ತ್ಯಜಿಸುತಲಿ
ಹೊಳೆಹೊಳೆವ ರತುನಗಳ ವಜ್ರಗಳ ಹಾರಗಳ
ಥಳಥಳಿಪ ಪೀತಾಂಬರಾದಿಗಳ ಧರಿಸುತಲಿ
ಮಣಿಮಂತ ದಿವ್ಯದಾ ರೂಪವನು ತಳೆದಿಹನು ॥೧೨೮೬॥

ಧರ್ಮಜನು ಪವನಜನ ಗರ್ಜನೆಯ ಕೇಳುತಲಿ
ಭೀಕರದ ಯುದ್ಧವದು ನಡೆದಿಹುದು ಎನ್ನುತಲಿ
ಭೀಮನಾ ಗತಿಯದುವೆ ಏನಹುದೊ ಎಂತಹುದೊ
ಎನ್ನುತಲಿ ಚಿಂತಿಸುತ ಸಕಲರೂ ಬಂದಿಹರು ॥೧೨೮೭॥

ರುದ್ರನಾ ಪರಿಯಲ್ಲಿ ರೌದ್ರದಲಿ ನಿಂತಿರುವ
ಸೋದರನ ಭೀಮಸನು ಧರ್ಮಜನು ಅಪ್ಪುತಲಿ
ಈ ಪರಿಯ ಘೋರತರ ಸಂಗ್ರಾಮ ಗೈಯ್ಯುತಲಿ
ಯಕ್ಷರನು ಜಯಿಸಿರುವ ಬಲಿಭಾವು ಎಂದಿಹನು ॥೧೨೮೮॥

ಅತ್ತಲಾ ಸೈನಿಕರು ಧನಪತಿಯ ಬಳಿಬಂದು
ಆವನೋ ನರನೊಬ್ಬನೈತಂದು ಕಾವಲಿನ
ಯೋಧರನು ಸಕಲರನು ಮಣಿಮಂತ ಸಹಿತದಲಿ
ಸಂಹಾರ ಗೈದಿಹನು ಎನ್ನುತಲಿ ನುಡಿದಿಹರು ॥೧೨೮೯॥

ಯಕ್ಷರನು ಕೊಲ್ಲುವಾ ಅದ್ಭುತ ಪರಾಕ್ರಮದ
ನರನಾವ ನಿರುತಿಹನು ಎನ್ನುತಲಿ ಕುಬೇರನು
ಶಸ್ತ್ರಾಸ್ತ್ರ ಕೊಳ್ಳುತಲಿ ವರರಥವ ನೇರುತಲಿ
ಅಪರಿಮಿತ ಸೈನ್ಯದಾ ಸಹಿತದಲಿ ಬಂದಿಹನು ॥೧೨೯೦॥

ಸಮಿಪದಲಿ ಬರುತಲಿರೆ ಧರ್ಮಜನ ಮಾದ್ರಿಜರ
ಗದೆಯನ್ನು ಎತ್ತುತಲಿ ನಿಂತಿರುವ ಭೀಮನನು
ಕಾಣುತಲಿ ಧನಪತಿಯು ಕ್ರೋಧವದು ತೊಲಗುತಲಿ
ಚಕಿತದಲಿ ಹರುಷದಲಿ ನಸುನಗುತ ನುಡಿದಿಹನು ॥೧೨೯೧॥

ಧರ್ಮಜನೆ ನೀವುಗಳು ಸತ್ಯದಲಿ ಧರ್ಮದಲಿ
ನಡೆವವರು ನಮ್ಮೊಡನೆ ಯುದ್ಧವದು ಏತಕ್ಕೆ
ನೀವೆಮ್ಮ ಸೋದರರ ಪರಿಯಲ್ಲಿ ಒಲುಮೆಯರು
ಕ್ರೋಧವನು ತ್ಯಜಿಸುವುದು ಎಂದಿಹನು ಧನಪತಿಯು ॥೧೨೯೨॥

ಹೇ ಭೀಮ ನಿನ್ನಯಾ ವಿಕ್ರಮವ ಮೆಚ್ಚಿಹೆನು
ಹೊಚ್ಚ ಹೊಸಯೌವ್ವನದ ಉತ್ಸಾಹ ಶಕ್ತಿಯಲಿ
ಗರ್ವದಲಿ ಯೋಚಿಸದೆ ಕಾರ್ಯವನು ಗೈಯ್ಯದಿರು
ಅಸ್ತ್ರವನು ಬಿಸುಡುವುದು ಎಂದಿಹನು ಯಕ್ಷದೊರೆ ॥೧೨೯೩॥

ಪೂರ್ವದಲಿ ನಾಗೈದ ಪಾಪಕ್ಕೆ ಅಗಸ್ತ್ಯರು
ಶಾಪವನು ಇತ್ತಿರುವ ಕಾರಣದಿ ನೀನೀಗ
ಎಮ್ಮನ್ನು ಜಯಿಸಿರುವೆ ಇಂದಿನಲಿ ಶಾಪವದು
ತೊಲಗಿದುದು ಎನ್ನುತಲಿ ಯಕ್ಷಪತಿ ನುಡಿದಿಹನು ॥೧೨೯೪॥

ಶಾಪದಾ ವೃತ್ತಾಂತವರುಹುವುದು ಎನ್ನುತಲಿ
ಯಮಸುತನು ಕೇಳುತಿರೆ ಧನಪತಿಯು ನುಡಿದಿಹನು
ಮುನ್ನಿನಲಿ ಒಂದುದಿನ ಕುಶಲಮತಿ ತಾಣದಲಿ
ಗಗನದಲಿ ಮಣಿಮಾನ ಸಖನೊಡನೆ ಚರಿಸುತಿರೆ ॥೧೨೯೫॥

ಮಣಿಮಾನ ಕೆಳಗಡೆಗೆ ಉಗುಳುತಿರೆ ಅರಿಯದಲೆ
ಅಗಸ್ತ್ಯರಾ ಶಿರದಲ್ಲಿ ಬೀಳುತಿರೆ ಮುನಿವರನು
ಎನ್ನಯಾ ಎದುರಿನಲಿ ನಿನಮಿತ್ರ ಈ ಪರಿಯ
ಪಾಪದಾ ದುಷ್ಕೃತ್ಯ ಗೈದಿಹನು ಎನ್ನುತಲಿ ॥೧೨೯೬॥

ಮರ್ತ್ಯದಾ ನರನೋರ್ವ ನಿನ್ನಯಾ ಮಿತ್ರನನು
ಸೈನ್ಯದಾ ಸಹಿತದಲಿ ಸಂಹಾರ ಗೈಯ್ಯುವನು
ಆ ನರನು ಕಾಣುತಿರೆ ಶಾಪವದು ಅಳಿಯುವುದು
ಎನ್ನುತಲಿ ಕೋಪದಲಿ ಶಾಪವನು ಇತ್ತಿಹರು ॥೧೨೯೭॥

ಕಾರಣದಿ ಮಣಿಮಾನ ಸೈನಿಕರು ಸಕಲರೂ
ಪ್ರಾಣವನು ನೀಗಿದರು ಭೀಕರದ ಯುದ್ಧದಲಿ
ನಿಮ್ಮನ್ನು ಕಾಣುತಲಿ ಶಾಪವದು ಹಿಂಗಿದುದು
ಮಣಿಮಾನ ದಿವ್ಯದಾ ರೂಪವನು ತಳೆದಿಹನು ॥೧೨೯೮॥

ಧರ್ಮಜನೆ ಕಲಿಭೀಮ ಅತಿಬಲನು ಸಾಹಸಿಯು
ಅತಿಗರ್ವಿ ಕೋಪಿಷ್ಠ ದುಡುಕುವ ಸ್ವಭಾವವು
ಮುಂದಣದ ಯೋಚಿಸದೆ ಕಾರ್ಯವನು ಗೈಯ್ಯುವದು
ಭೀಮನನು ನಿಗ್ರಹವ ಗೈಯ್ಯುವುದು ಎಂದಿಹನು ॥೧೨೯೯॥

ನೀವಿಲ್ಲಿ ಹರ್ಷದಲಿ ಸುಖವಾಗಿ ವಾಸಿಪುದು
ಯಕ್ಷರುಗಳೆಲ್ಲರೂ ನೆರವನ್ನು ಈಯುವರು
ಫಲುಗುಣನು ಸ್ವರ್ಗದಲಿ ದಿವ್ಯಾಸ್ತ್ರ ಪಡೆಯುತಲಿ
ಬೇಗನೇ ಬರಲಿಹನು ಎಂದಿಹನು ಧನಪತಿಯು ॥೧೩೦೦॥

ಪವನಜನು ಕೇಳುತಲಿ ಸಂತಸವು ಉಕ್ಕುತಲಿ
ಗದೆಯನ್ನು ಬಿಸುಡುತಲಿ ಶಿರಬಾಗಿ ನಮಿಸಿದನು
ಧನಪತಿಯು ಸಕಲರನು ಅಭಯದಲಿ ಹರಸುತಲಿ
ಸೈನ್ಯದಾ ಸಹಿತದಲಿ ನಿಜ ಸೌಧಕೈದಿದನು ॥೧೩೦೧॥

**ಅರ್ಜುನನು ಐತಂದು ಹರನನ್ನು ಒಲಿಸುತಲಿ ।**
**ಪಾಶುಪತ ಪಡೆದಿರುವ ವೃತ್ತಾಂತವರುಹಿದನು ॥**

ಜನಮೇಜಯಧಿಪತಿಯೆ ಕೇಳುವುದು ಧರ್ಮಜನು
ಅರ್ಜುನನು ಬೇಗನೇ ಬಾರದಿರೆ ದುಗುಡದಲಿ
ಸ್ವರ್ಗದಾ ವೈಭವದ ಸೌಖ್ಯವನು ಸವಿಯುತಲಿ
ಎಮ್ಮನ್ನು ಮರೆತಿಹನು ಎನ್ನುತಲಿ ಚಿಂತಿಸಿದ ॥೧೩೦೨॥

ಆ ಕ್ಷಣದಿ ಯಮಸುತನ ಬಲನಯನ ಅಲುಗಿದುದು
ಭೀಮಂಗೆ ಬಲಭುಜವು ಸ್ಫುರಿಸಿದುದು ಪುಳಕದಲಿ
ಯಮಳರಾ ಬಲಗಣ್ಣು ಹಾರುತಲಿ ದ್ರೌಪದಿಗೆ
ಎಡನಯನ ಅಲುಗುತಲಿ ಶುಭಶಕುನವಾಗಿಹವು ॥೧೩೦೩॥

ತರುಲತೆಯು ಎಳತಳಿರ ಪುಷ್ಪಗಳ ತಳೆದಿಹವು
ಶುಕಪಿಕಗಳುಲಿದಿಹವು ಹಂಸಗಳು ನಲಿದಿಹವು
ನವಿಲುಗಳು ಗರಿಗೆದರಿ ನರ್ತನವ ಗೈದಿಹವು
ಫಲುಗುಣನು ಬಹನೆಂದು ಶುಭಶಕುನವಾಗಿಹವು ॥೧೩೦೪॥

ದೇವೇಂದ್ರ ಮೂಲೋಕ ವಿರಂಗೆ ಅರ್ಜುನಗೆ
ಬ್ರಹ್ಮಾಸ್ತ್ರ ಆಗ್ನೇಯ ವಾಯುವ್ಯ ವೈಷ್ಣವವ
ಇಂದ್ರಾಸ್ತ್ರ ಮೊದಲಾದ ದಿವ್ಯಾಸ್ತ್ರವೆಲ್ಲವನು
ಮಂತ್ರಗಳ ಸಹಿತದಲಿ ಕಲಿಸಿದನು ವಿಶದದಲಿ ॥೧೩೦೫॥

ಮೂಜಗದಿ ನಿನ್ನನ್ನು ಜಯಿಸುವವರಾರಿಲ್ಲ
ಬಿಲ್ಲಿನಲಿ ನಿನ್ನಸಮ ವಿಕ್ರಮನು ಆರಿಲ್ಲ
ರಣದೊಳಗೆ ಶತ್ರುಗಳು ನಿರ್ನಾಮವಾಗುತಲಿ
ಜಯವಧುವು ನಿನ್ನನ್ನುವರಿಸುವಳು ಎಂದಿಹನು ॥೧೩೦೬॥

ಧರ್ಮಜನು ಸೋದರರು ನಿನ್ನನ್ನು ನೆನೆಯುತಲಿ
ಕಾಣವಲೆ ದಿನದಿನವು ಚಿಂತಿಸುತ ಇರುತಿಹರು
ನೀನಿನ್ನು ತೆರಳುತಲಿ ಬಂಧುಗಳ ಜೊತೆಯಲ್ಲಿ
ಕಾಲವನು ಕಳೆಯುವುದು ಎನ್ನುತಲಿ ನುಡಿದಿಹನು ॥೧೩೦೭॥

ಮಾತಲಿಯು ಹೊಳೆ ಯೊಳೆವ ದಿವ್ಯದಾ ರಥವನ್ನು
ತರುತಲಿರೆ ಅರ್ಜುನನು ರಥವೇರಿ ಕೂಡ್ರುತಿರೆ
ದೇವೇಂದ್ರ ಶುಭಕರವು ಮಂಗಲವು ನಿನಗೆಂದು
ಹರಸುತಲಿ ಕಳುಹಿದನು ಉಡುಗೊರೆಯ ಸಹಿತದಲಿ ॥೧೩೦೮॥

ಮುಗಿಲಿನಲಿ ಕೋಟಿಗಳ ಕೋಲ್ಮಿಂಚಿನಂತೆಸೆವ
ಶುಭ್ರದಾ ತೇಜದಲಿ ನಿರ್ಮಳ ಪ್ರಕಾಶದಲಿ
ಹೊಳೆ ಹೊಳೆವ ಸ್ಫಟಿಕದಾ ಕಾಂತಿಯಲಿ ಬೆಳಗುತಿಹ
ಥಳ ಥಳಿಪ ದಿವ್ಯರಥ ಕಂಡಿಹನು ಹರುಷದಲಿ ॥೧೩೦೯॥

ಅಗಣಿತದ ನಕ್ಷತ್ರ ಪುಂಜಗಳು ಮಿರುಗುತಿಹ
ಆಕಾಶ ಗಂಗೆಯದು ಧರೆಗಿಳಿದು ಬರುತಿಹುದೊ
ಎಂಬಂತೆ ಥಳಥಳಿಪ ದಿವ್ಯದಾ ವರರಥವು
ಇಳಿಯುತಲಿ ಧರ್ಮಜನ ಎದುರಿನಲಿ ನಿಂದಿಹುದು ॥೧೩೧೦॥

ಧರ್ಮಜನ ಮನೋರಥ ಫಲಿಸಿತೋ ಎಂಬಂತೆ
ಪಾರ್ಥನತಿ ಸಂಭ್ರಮದಿ ರಥದಿಂದ ಇಳಿಯುತಲಿ
ಗುರುಧೌಮ್ಯ ಧರ್ಮಜನ ಭೀಮನಾ ಚರಣಕ್ಕೆ
ಸಾಷ್ಟಾಂಗ ಗೈಯ್ಯುತಲಿ ಹರ್ಷಾಶ್ರು ಸುರಿಸಿಹನು ॥೧೩೧೧॥

ಧರ್ಮಜನ ಪವನಜನ ಯಮಳರನು ಅಪ್ಪುತಲಿ
ಭಾಮಿನಿಯ ದ್ರೌಪದಿಯ ಸಂತೈಸುತರ್ಜುನನು
ದೇವೇಂದ್ರ ನಿತ್ತಿರುವ ರತ್ನಗಳ ವಜ್ರಗಳ
ಪೀತಾಂಬರಾದಿಗಳ ಉಡುಗೊರೆಯನಿತ್ತಿಹನು ॥೧೩೧೨॥

ಯಮಸುತಗೆ ಭೀಮನಿಗೆ ಯಮಳರಿಗೆ ಅಂಗದಲಿ
ಹೊಳೆಹೊಳೆವ ನಿಲುವಂಗಿ ಕನಕಾಂಬರಾದಿಗಳ
ಮುತ್ತುಗಳ ರತ್ನಗಳ ವಿಲಸಿತದ ಹಾರಗಳ
ವಜ್ರಗಳ ಉಂಗುರವ ತೊಡಿಸಿದನು ಅರ್ಜುನನು ॥೧೩೧೩॥

ದ್ರೌಪದಿಯ ಮಸ್ತಕದಿ ವರಶಿರೋ ರತ್ನವನು
ಕಿವಿಗಳಲಿ ಥಳಥಳಿಪ ವಜ್ರಗಳ ಓಲೆಗಳ
ನಡುವಿಂಗೆ ಒಡ್ಯಾಣ ಚರಣದಲಿ ನೂಪುರುವ
ಬೆರಳಿನಲಿ ಉಂಗುರವ ತೊಡಿಸಿಹನು ಫಲುಗುಣನು ॥೧೩೧೪॥

ಕಮಲದೇಳ ಕಾಂತಿಯಲಿ ಸ್ವರ್ಗ ಸುರತೇಜದಲಿ
ಅಪ್ರತಿಮ ಸೌಂದರ್ಯ ಪ್ರಭೆಯಲ್ಲಿ ಶೋಭಿಸುವ
ದ್ರೌಪದಿಯ ನೋಡುತಲಿ ನಿನ್ನ ಸಮ ಸುಂದರಿಯ
ಜಗದೊಳಗೆ ನಾ ಕಾಣೆ ಎಂದಿಹನು ಅರ್ಜುನನು ||೧೩.೧೫||

ಅಂದಿನಾ ರಾತ್ರಿಯನು ಕಳೆಯುತಿರೆ ಬೆಳಗಿನಲಿ
ರವಿಕಿರಣ ಧರೆಗಿಳಿದು ಬರುತಿಹುದೊ ಎಂಬಂತೆ
ದಿವ್ಯ ಪ್ರಕಾಶದಲಿ ದೇವೇಂದ್ರನೈತರಲು
ಧರ್ಮಜನು ಆದರದಿ ಸತ್ಕಾರ ಗೈದಿಹನು ||೧೩.೧೬||

ಧರ್ಮಜನೆ ಅಸಮಬಲ ವಿಕ್ರಮರ ಶೂರರಿಹ
ಸೋದರರ ಪಡೆದಿರುವ ನೀ ಧನ್ಯನಿರುತಿರುವೆ
ಲೋಕವನು ಲಯಗೈವ ಭೀಕರದ ಬ್ರಹ್ಮಾಸ್ತ್ರ
ವೈಷ್ಣವವ ಅಸ್ತ್ರಗಳ ಅರ್ಜುನಗೆ ಇತ್ತಿಹೆನು

ಮೇಲಾಗಿ ಪರಶಿವನ ಒಲಿಸುತಲಿ ಕರುಣೆಯಲಿ
ಪ್ರಳಯವನು ಗೈಯ್ಯುವಾ ಪಾಶುಪತ ಪಡೆದಿಹನು
ನಿನ್ನಯಾ ಶತೃಗಳು ನಿರ್ನಾಮವಾಗುತಲಿ
ರಾಜ್ಯವನು ಖಚಿತದಲಿ ನೀ ಪಡೆವೆ ಎಂದಿಹನು ||೧೩.೧೮||

ಸತ್ಯದಲಿ ಧರ್ಮದಲಿ ರಾಜ್ಯವನು ಆಳುತಲಿ
ನಿನ್ನಯಾ ಕೀರ್ತಿಯನು ಜಗದೊಳಗೆ ಮೆರೆಯುವದು
ನಿಮಗೆಲ್ಲ ಶುಭವಾಗಲೆನ್ನುತಲಿ ಸುರಪತಿಯು
ಸಕಲರನು ಹರಸುತಲಿ ಸ್ವರ್ಗಕ್ಕೆ ತೆರಳಿಹನು ||೧೩.೧೯||

ಆಗಲಾ ಯಮಸುತನು ಫಲುಗುಣನ ಕರೆಯುತಲಿ
ಸ್ವರ್ಗದಲಿ ವರುಷಗಳ ಐದನ್ನು ನೀನೆಂತು
ಕಳೆದಿರುವೆ ಎಂಬುವಾ ವಿಷಯವನು ಕೇಳುವಾ
ಆಸೆಯದು ಎಮಗಿಹುದು ಹೇಳುವುದು ಎಂದಿಹನು ||೧೩.೨೦||

ಹೇ ಅಣ್ಣ ಧರ್ಮಜನೆ ಹೇಳುವೆನು ಕೇಳುವುದು
ಇಲ್ಲಿಂದ ವರ ಇಂದ್ರ ಕೀಲದಾ ಪರ್ವತಕೆ
ತೆರಳುತಲಿ ಆಹಾರ ನೀರನ್ನು ತ್ಯಜಿಸುತಲಿ
ಪರಶಿವನ ಭಜಿಸುತಲಿ ಘೋರತಪ ಗೈದಿಹೆನು ||೧೩.೨೧||

ಒಂದುದಿನ ಹಂದಿಯದು ತಪವನ್ನು ಕೆಡಿಸುತಿರೆ
ಕೋಪದಲಿ ಬಾಣವನು ಹೂಡುತಲಿ ಬಿಡುತಲಿರೆ
ಆ ಕ್ಷಣದಿ ಬೇಡನೋರ್ವ ಶರವನು ಎಸೆಯುತಿರೆ
ಶರವೆರಡು ತಾಗುತಿರೆ ಸೂಕರವು ಸತ್ತಿಹುದು ||೧೩.೨೨||

ಭರದಲ್ಲಿ ಆ ಬೇಡ ಐತಂದು ಹಂದಿಯದು
ತನ್ನಯಾ ಬಾಣದಲಿ ಸತ್ತಿರುವ ಕಾರಣದಿ
ತನ್ನದಿದೆ ಎನ್ನುತಿರೆ ಈರ್ವರೂ ಕ್ರೋಧದಲಿ
ಭೀಕರದ ಯುದ್ಧವನು ಬಹುಕಾಲ ಗೈದಿಹವು ||೧೩.೨೩||

ಆ ಬೇಡ ಎನ್ನನ್ನು ಸೋಲಿಸಲು ಚಿಂತೆಯಲಿ
ಪರಶಿವಗೆ ಗಂಧವನು ಪುಷ್ಪವನು ಬಿಲ್ವವನು
ಅರ್ಪಿಸುತ ಪೂಜಿಸಲು ಆ ಗಂಧ ಪುಷ್ಪಗಳು
ಬೇಡನಾ ಶಿರದಲ್ಲಿ ಶೋಭಿಸುತಲಿರುತಿರಲು ||೧೩.೨೪||

ಪರಶಿವನೆ ಸಾಕ್ಷಾತ್ತು ಬೇಡನಾ ರೂಪದಲಿ
ಎನ್ನನ್ನು ಪರಿಕಿಸಲು ಬಂದಿಹನು ಎನ್ನುತಲಿ
ಸಾಷ್ಟಾಂಗವೆರಗುತಿರೆ ಮೂಲೋಕದಧಿದೈವ
ಮುಕ್ಕಣ್ಣ ಶಂಕರನು ನಿಜರೂಪ ತೋರಿಹನು ||೧೩.೨೫||

ಕೆಂಜೆಡೆಯ ಶಶಿಕಳೆಯ ಭಸ್ಮಾಂಗ ಭೂಷಿತನು
ರುದ್ರಾಕ್ಷಿ ಮಾಲೆಗಳ ನಾಗೇಂದ್ರ ಹಾರಗಳ
ಡಮರುಗ ತ್ರಿಶೂಲದಲಿ ಶೋಭಿಸುವ ಪರಶಿವನು
ಪಾರ್ವತಿಯ ಸಹಿತದಲಿ ಪ್ರತ್ಯಕ್ಷನಾಗಿಹನು ||೧೩.೨೬||

ಹೇ ಭಕುತ ಶ್ರೇಷ್ಠನೇ ನಿನ್ನ ತಪ ಮೆಚ್ಚಿಹೆನು
ಇಷ್ಟವರ ಬೇಡುವುದು ಎನ್ನುತಿರೆ ಶಂಕರನು
ಶತ್ರುಗಳ ಜಯಿಸುವಾ ಅಜೇಯ ಅಸ್ತ್ರವನು
ಕರುಣಿಪುದು ಎನ್ನುತಲಿ ಪ್ರಾರ್ಥಿಸುತ ನುಡಿದಿಹೆನು ||೧೩.೨೭||

ನಿಮಿಷದಲಿ ಮೂಲೋಕ ಭಸ್ಮವನು ಮಾಡುವಾ
ಪ್ರಳಯದಾ ಭೀಕರದ ಪಾಶುಪತ ಅಸ್ತ್ರವದು
ಪ್ರಾಣಕ್ಕೆ ಭೀತಿಯದು ಬಂದೊಡೆಯು ಮಾತ್ರವೆ
ಪಾಶುಪತ ಅಸ್ತ್ರ ಪ್ರಯೋಗವನು ಗೈಯ್ಯುವುದು ||೧೩.೨೮||

ಮೋಜಿಂಗೆ ಸರಸಕ್ಕೆ ಆಟಕ್ಕೆ ಎನ್ನುತಲಿ
ಎಂದಿಗೂ ಪಾಶುಪತ ಅಸ್ತ್ರವನು ಬಿಡದಿಹುದು
ಎನ್ನುತಲಿ ಅಸ್ತ್ರದಾ ಅಭಿಮಾನ ದೇವತೆಯು
ಮಂತ್ರವನು ಅರುಹುತಲಿ ಪುರಹರನು ತೆರಳಿಹನು ||೧೩.೨೯||

ಪಾಶುಪತ ಅಸ್ತ್ರವನು ಪಡೆಯುತಲಿ ಪರಶಿವನ
ಪ್ರತ್ಯಕ್ಷ ಕಂಡಿರುವ ಫಲುಗುಣನೆ ಧನ್ಯನಿಹೆ
ಶಶಿಕುಲದಿ ನಿನ್ನ ಸಮ ಭಾಗ್ಯಶಾಲಿಗಳಾರನು
ನಾ ಕಾಣೆ ಎಂದಿಹನು ಯಮಸುತನು ಹರುಷದಿ ||೧೩.೩೦||

ಕೇಳುವುದು ವರಅಗ್ನಿ ಯಮ ವರುಣ ಕುಬೇರರು
ಗಂಧರ್ವ ಕಿನ್ನರರು ದಿವ್ಯಾಸ್ತ್ರ ವಿತ್ತಿಹರು
ಆಗಲಾ ದೇವೇಂದ್ರ ಐತಂದು ಹರಸುತಲಿ
ಸ್ವರ್ಗಕ್ಕೆ ಬರಲಿಕ್ಕೆ ಆಮಂತ್ರಣಿತ್ತಿಹನು ॥೧೩೩೧॥

ಹೊಳೆಹೊಳೆವ ರಥಸಹಿತ ಮಾತಲಿಯು ಬರುತಲಿರೆ
ಸ್ವರ್ಗಕ್ಕೆ ತೆರಳುತಲಿ ಸರ್ವವಿಧ ಸಂಪದದ
ಸೌಖ್ಯದಾ ಸಾಗರದ ಆನಂದದಾಗರದ
ದಿವ್ಯ ಅಮರಾವತಿಯ ನಗರವನು ಕಂಡಿಹೆನು ॥೧೩೩೨॥

ಕಲ್ಪತರು ಐರಾವತಾದಿಗಳ ಅಷ್ಟಸಿರಿ
ಐಶ್ವರ್ಯ ಸಂಪದದ ವೈಭವವ ನೋಡಿಹೆನು
ಕಳವಳವು ಚಿಂತೆಯದು ವಾರ್ಧಕ್ಯ ದುಗುಡಗಳು
ಒಂದಿಲ್ಲ ಸ್ವರ್ಗದಲಿ ಸಕಲಪರಿ ಸುಖವಿಹುದು ॥೧೩೩೩॥

ಇಂದ್ರನಾ ಮಿತ್ರನಿಹ ವರಚಿತ್ರ ಸೇನನು
ಗಂಧರ್ವ ವಿದ್ಯೆಯನು ಸಕಲವನು ಕಲಿಸಿಹನು
ಸಂಗೀತ ನೃತ್ಯದಲಿ ನಾಟ್ಯದಲಿ ಮೊದಲಾದ
ಷೋಡಶದ ಕಲೆಗಳಲಿ ಪರಿಣತನು ಎನಿಸಿಹೆನು ॥೧೩೩೪॥

ಈ ಪರಿಯೇ ಸ್ವರ್ಗದಲಿ ಸೌಖ್ಯವನು ಸವಿಯುತಿರೆ
ಸುರಲಲನೆ ಸುಂದರಿಯು ಅಪ್ಸರೆಯು ಊರ್ವಶಿಯು
ಎನ್ನನ್ನು ಮೋಹಿಸುತ ಕಾಮದಲಿ ಐತಂದು
ಪ್ರೇಮದಲಿ ಒಲಿಸಲಿಕೆ ಯತ್ನವನು ಗೈದಿಹಳು ॥೧೩೩೫॥

ಘೋರತರ ಕಾಮದಾ ಸಂಗ್ರಾಮ ಮಸಗುತಲಿ
ಇಂದ್ರಿಯವ ನಿಗ್ರಹವ ಗೈಯ್ಯುತಲಿ ಸೋಲದಿರೆ
ಕೋಪದಲಿ ಊರ್ವಶಿಯು ನಾಗಿಣಿಯ ತೆರದಲ್ಲಿ
ಫೂತ್ಕರಿಸಿ ಕಂಪಿಸುತ ಶಾಪವನು ಇತ್ತಿಹಳು ॥೧೩೩೬॥

ವೀರ್ಯವನು ಇಲ್ಲದಾ ಗಂಡುತನ ನಿನಗೇಕೆ
ದುರ್ಬಲನು ಹೀನನಿಹ ನಪುಂಸಕನು ನೀನಿರುವೆ
ವರುಷೊಂದು ಕಾಲವನು ನಪುಂಸಕತನದೊಳಗೆ
ಎನ್ನುತಲಿ ಮುನಿಯುತಲಿ ಶಾಪವನು ಇತ್ತಿಹಳು ॥೧೩೩೭॥

ಅದದ್ದು ಒಳಿತಾಯ್ತು ವರುಷವೊಂದು ಕಾಲವನು
ಅಜ್ಞಾತವಾಸದಲಿ ಗುಪಿತದಲಿ ಕಳೆಯಲಿಕೆ
ನೆರವಾಯ್ತು ಮಹಾತಾಯಿ ಊರ್ವಶಿಯು ಇತ್ತಿರುವ
ಶಾಪವದು ವರವಾಯ್ತು ಎಂದಿಹನು ಅರ್ಜುನನು ॥೧೩೩೮॥

**ದುಷ್ಟನ ನಿವಾತರನು ರಕ್ಕಸರ ಕಿರಿದಿರುವ ।**
**ವೃತ್ತಾಂತ ಆ ಪಾರ್ಥ ವಿಸ್ತರದಿ ವಿವರಿಸಿದ ॥**

ಬಳಿಕಲಾ ಸುರಪತಿಯು ಬ್ರಹ್ಮಾಸ್ತ್ರ ವೈಷ್ಣವವ
ಇಂದ್ರಾಸ್ತ್ರ ಆಗ್ನೇಯ ಮೊದಲಾದ ಅಮೋಘದ
ಭಸ್ಮವನು ಗೈಯ್ಯುವಾ ಭೀಕರದ ಅಸ್ತ್ರಗಳ
ವಿದ್ಯೆಯನು ಮಂತ್ರಗಳ ಸಹಿತದಲಿ ಕಲಿಸಿಹನು ॥೧೩೩೯॥

ಶಸ್ತ್ರಾಸ್ತ್ರ ವಿದ್ಯೆಯನು ನಿಮ್ಮಿಂದ ಅರಿಯುತಲಿ
ಉಪಕೃತನು ನಾನಿಹೆನು ಚಿರಋಣಿಯು ಆಗಿಹೆನು
ನೀವೆಮ್ಮ ಗುರುವಿಹಿರಿ ನಿಮಗಾವ ಪರಿಯಲ್ಲಿ
ಗುರುದಕ್ಷಿಣೇಯುವುದು ಎನ್ನುತಲಿ ನುಡಿದಿಹೆನು ॥೧೩೪೦॥

ಕೇಳುವುದು ಫಲುಗುಣನೆ ಗುರುದಕ್ಷಿಣೇಯುವೊಡೆ
ಸುರರನ್ನು ಜಯಿಸುತಲಿ ಸಾಗರದ ಮಧ್ಯದಲಿ
ವಾಸಿಸುವ ಅದ್ಭುತ ಪರಾಕ್ರಮದ ರಕ್ಕಸರ
ಮೂರ್ಕೋಟಿ ನಿವಾತಕವಚರನು ಕೊಲ್ಲುವುದು ॥೧೩೪೧॥

ದುರುಳರಾ ದಾನವರ ನಿವಾತಕವಚರನು
ವಧಿಸುತಲಿ ಜಲಧಿಯಾ ಮಧ್ಯದಲಿ ಮೆರೆಯುತಿಹ
ನಗರವನು ನಮಗಿತ್ತುದಾದೊಡೆಯು ಅದುವೆಮಗೆ
ಗುರುದಕ್ಷಿಣೆನ್ನುತಲಿ ಸುರಪತಿಯು ನುಡಿದಿಹನು ॥೧೩೪೨॥

ಸುರಪತಿಯು ತನ್ನಯಾ ಹೊಳೆಹೊಳೆವ ರಥವನ್ನು
ಸಾರಥಿಯ ಮಾತಲಿಯ ಸಹಿತದಲಿ ಇತ್ತಿಹನು
ಕಡಲಿನಲಿ ಹುಟ್ಟಿರುವ ದಿವ್ಯದಾ ಶಂಖವನು
ವರದೇವ ದತ್ತವನು ಸುರರುಗಳು ಇತ್ತಿಹರು ॥೧೩೪೩॥

ವಾರಿಧಿಯ ಮಧ್ಯದಲಿ ವಾಸಿಸುವ ದಾನವರ
ಪುರದೆಡೆಗೆ ಸಾಗುತಲಿ ವರದೇವ ದತ್ತವನು
ಶಂಖವನು ಊದುತಿರೆ ನಿವಾತ ಕವಚಸುರರು
ಅಗಣಿತದ ರಕ್ಕಸರ ಸಹಿತದಲಿ ಬಂದಿಹರು ॥೧೩೪೪॥

ಮಾತಲಿಯ ರಥವನ್ನು ನೋಡುತಲಿ ಎನ್ನನ್ನು
ದೇವೇಂದ್ರ ಬಂದಿಹನು ಎನ್ನುತಲಿ ಭಾವಿಸುತ
ಹಿಂದಿನಾ ಸೋಲನ್ನು ಮರೆಯುತಲಿ ಮತ್ತೆ ನೀ
ಯುದ್ಧಕ್ಕೆ ಬಂದಿಹೆಯಾ ಎನ್ನುತಲಿ ಮುತ್ತಿದರು ॥೧೩೪೫॥

ಸೈನ್ಯದಾ ಮಧ್ಯದಲಿ ಮಾತಲಿಯು ರಥವನ್ನು
ಎಲ್ಲೆಡೆಗೆ ಸುತ್ತಲೂ ಓಡಿಸುತ ಬಿಡುತಲಿರೆ
ಬಾಣಗಳ ಸುರಿಮಳೆಯ ಸುರಿಸುತಲಿ ಅಪರಿಮಿತ
ದಾನವರ ಶಿರಗಳನು ತರಿಯುತಲಿ ಕೆಡುಹಿದೆನು ॥೧೩೪೬॥

ಪಾತಾಳದೊಳಗಿರ್ದ ರಕ್ಕಸರ ನಿಕರಗಳು
ಧೂಳಿಯನು ಧೂಸರನು ಕಲ್ಬಂಡೆ ಶಿಲೆಗಳನು
ಸುರಿಸುತಿರೆ ಶರಗಳನು ಎಸೆಯುತಲಿ ಸಕಲವನು
ಪುಡಿಪುಡಿಯ ಗೈಯ್ಯುತಲಿ ಕೆಡಹಿದೆನು ಕ್ಷಣದಲ್ಲಿ ॥೧೩೪೭॥

ಧಗಧಗಿಪ ಅಗ್ನಿಯಾ ಮಳೆಯನ್ನು ಸುರಿಸುತ
ವರುಣಾಸ್ತ್ರವೆಸೆಯುತಲಿ ಜ್ವಾಲೆಯನು ನಂದಿಸಿದೆ
ಫೂತ್ಕರಿಪ ಸಾವಿರದ ಸರ್ಪಗಳ ಸುರಿಸುತಿರೆ
ಗರುಡಾಸ್ತ್ರವೆಚ್ಚುತಲಿ ನಾಶವನು ಗೈದಿಹನು ॥೧೩೪೮॥

ಕಣ್ಣಿಂಗೆ ಕಾಣಿಸದೆ ಮರೆಯಲ್ಲಿ ನಿಲ್ಲುತಲಿ
ಮಾಯೆಯಾ ಯುದ್ಧವನು ದಾನವರು ಗೈಯ್ಯುತಿರೆ
ಅದೃಶ್ಯದಾ ಶರಗಳನು ಎಸೆಯುತಲಿ ಅಡಗಿರ್ದ
ಅಸುರರಾ ಶಿರಗಳನು ತರಿಯುತಲಿ ಕೆಡುಹಿದೆನು ॥೧೩೪೯॥

ಬಳಿಕಲಾ ದಾನವರು ಎಮ್ಮಯಾ ಸುತ್ತಣದಿ
ಮಾಯೆಯಲಿ ಕಲ್ಲಿನಾ ಕೋಟೆಯನು ಕಟ್ಟುತಲಿ
ಮಧ್ಯದಲಿ ಸಿಲುಕಿಸುತ ಗಾಢಾಂಧಕಾರವನು
ಪಸರಿಸುತ ಘೋರತರ ಯುದ್ಧವನು ಗೈದಿಹರು ॥೧೩೫೦॥

ಆಗಲಾ ಮಾತಲಿಯು ದಾನವರು ಕಪಟಿಗಳು
ಹೀನದಲಿ ಮೋಸದಲಿ ಯುದ್ಧವನು ಗೈಯ್ಯುವರು
ತಳುವದಲೆ ಉಗ್ರತರ ವಜ್ರಾಸ್ತ್ರವೆಸೆಯುತಲಿ
ಅಸುರರನು ಸಂಹಾರ ಗೈಯ್ಯುವುದು ಎಂದಿಹನು ॥೧೩೫೧॥

ಹೊಳೆಹೊಳೆವ ದಿವ್ಯದಾ ವಜ್ರಾಸ್ತ್ರ ತೆಗೆಯುತಲಿ
ಬಿಡುತಲಿರೆ ಒಂದೆರಡು ನಾಲ್ಕಾಗಿ ಹತ್ತಾಗಿ
ಸಾವಿರದ ವಜ್ರಾಸ್ತ್ರವಾಗುತಲಿ ಕೋಟಿಗಳ
ದಾನವರ ಶಿರಗಳನು ಕತ್ತರಿಸಿ ಕೆಡುಹಿದುದು ॥೧೩೫೨॥

ಈ ಪರಿಯ ಯುದ್ಧವನು ಗೈಯ್ಯುತಲಿ ಮೂರ್ಕೋಟಿ
ನಿವಾತಕವಚರನು ಸಂಹಾರ ಗೈಯ್ಯುತಿರೆ
ದಾನವರ ಸತಿನಿವಹ ನಭಬಿರಿವ ಪರಿಯಲ್ಲಿ
ರೋದನವ ಗೈದಿಹರು ದಶದಿಶೆಯ ಪಸರಿಸುತ ॥೧೩೫೩॥

ಅಳುತಲಿಹ ಅಸುರರಾ ಸತಿಯರನು ಸಂತೈಸಿ
ರಥದೊಳಗೆ ಸಾಗುತಲಿ ದಿವ್ಯ ಅಮರಾವತಿಯ
ಪುರದಂತೆ ಪ್ರಭೆಯಲ್ಲಿ ಹೊಳೆಹೊಳೆವ ಸುಂದರದ
ನಗರವನು ಸಾಗರದ ಮಧ್ಯದಲಿ ಕಂಡಿಹೆನು ॥೧೩೫೪॥

ಗಗನವನು ಚುಂಬಿಸುವ ಹೊಳೆಹೊಳೆವ ಗೋಪುರದ
ರತ್ನಗಳ ಸ್ತಂಭಗಳ ಮುತ್ತುಗಳ ತೋರಣದ
ಸೌಧಗಳ ಶ್ರೇಣಿಗಳ ಇಂದ್ರನಮರಾವತಿಯ
ಪರಿಯಲ್ಲಿ ಶೋಭಿಸುವ ನಗರವನು ನೋಡಿಹೆನು ॥೧೩೫೫॥

ನಂದನದ ಪರಿಯಲ್ಲಿ ಸಂತಸವ ನೀಯುತಿಹ
ಸುಂದರದ ಈ ಪುರದಿ ಸುರಪತಿಯು ವಾಸಿಸಲಾ
ಯೋಗ್ಯಮಿಹ ತಾಣವಿದು ಎನ್ನುತಲಿ ನುಡಿಯುತಿರೆ
ಇಂದ್ರನಾ ಸ್ಥಾನಮಿದು ಎಂದಿಹನು ಮಾತಲಿಯು ॥೧೩೫೬॥

ಮುನ್ನಿನಲಿ ಸುರರುಗಳು ಇಲ್ಲಿಯೇ ಇರುತಿರಲು
ನಿವಾತ ಕವಚರು ಬ್ರಹ್ಮನನು ಭಜಿಸುತಲಿ
ವರವನ್ನು ಪಡೆಯುತಲಿ ಯುದ್ಧವನು ಗೈಯ್ಯುತಲಿ
ಜಯಿಸುತಲಿ ದಿವಿಜರನು ಹಿಂಸಿಸುತ ಅಟ್ಟಿದರು ॥೧೩೫೭॥

ಕಾರಣದಿ ನಿವಾತಕವಚರನು ಕೊಲ್ಲಲಿಕೆ
ಸುರರುಗಳು ಶಂಖವನು ಶಸ್ತ್ರಗಳನಿತ್ತಿಹರು
ದುರುಳರಾ ದಾನವರ ವಧಿಸುತಲಿ ನಗರವನು
ನಿಷ್ಕಂಟಕಾಗುತಲಿ ಮಾಡಿರುವೆ ಎಂದಿಹನು ॥೧೩೫೮॥

ಈ ತೆರದಿ ಮಾತಲಿಯು ನುಡಿಯುತಲಿ ಬಳಿಕಿನಲಿ
ದಾನವರ ಹಿಂಸೆಯದು ತೊಲಗಿರುವ ನಗರವನು
ದೇವೇಂದ್ರಗೀಯಲಿಕೆ ಶುಭವಾರ್ತೆಯರುಹಲಿಕೆ
ಸ್ವರ್ಗಕ್ಕೆ ರಥವನ್ನು ಭರದಲ್ಲಿ ಬಿಟ್ಟಿಹನು ॥೧೩೫೯॥

ನಭದಲ್ಲಿ ಸಾಗಿರಲು ಮಾರ್ಗದಾ ಮಧ್ಯದಲಿ
ಫಲಪುಷ್ಪ ಶೋಭಿತದ ತರುನಿಕರ ಸೊಗಯಿಸುವ
ಉಲಿಯುತಿಹ ವಿಹಗಗಳ ಉದ್ಯಾನ ಸರಸಿಗಳ
ಮನತಣಿಪ ಸುಂದರದ ನಗರವನು ಕಂಡಿಹನು ॥೧೩೬೦॥

ಬೀದಿಯಲಿ ಅಲೆಯುತಿಹ ರಕ್ಕಸರ ಕಾಣುತಲಿ
ಅಚ್ಚರಿಯಗೊಳ್ಳುತಲಿ ಈ ಪರಿಯ ಸುಂದರದ
ನಗರದಲಿ ದುರುಳರಾ ದಾನವರು ವಾಸಿಪುದು
ಕೌತುಕವು ಎನ್ನುತಿರೆ ಮಾತಲಿಯು ನುಡಿದಿಹನು ॥೧೩೬೧॥

ಪೂರ್ವದಲಿ ದೈತ್ಯರಾ ಪುತ್ರಿಯರು ಈರ್ವರು
ಪುಲೋಮೆ ಕಾಲಕಿಯು ಎಂಬುವರು ಕಾನನದಿ
ಬ್ರಹ್ಮನನು ನೆನೆಯುತಲಿ ಸಾವಿರದ ವರುಷಗಳ
ಉಗ್ರತಪ ಗೈಯ್ಯುತಲಿ ವರವನ್ನು ಪಡೆಯುತಲಿ ॥೧೩೬೨॥

ಗಂಧರ್ವ ಕಿನ್ನರರು ಕಿಂಪುರುಷ ಯಕ್ಷರುರು
ಪನ್ನಗರು ಸುರರುಗಳು ಆರಿಗೂ ಜಯಿಸಲಿಕೆ
ಸಾಧ್ಯವದು ಆಗದಿಹ ಸಕಲ ಸುಖ ಸಂಪದದ
ದುಃಖವದು ಇಲ್ಲದಾ ನಗರವನು ಪಡೆದಿಹರು ॥೧೩೬೩॥

ಕಾಲಕಿಯ ಸುತರುಗಳು ಆ ಕಾಲಿಕಂಜರು
ಕಷ್ಟಗಳು ತಾಪಗಳು ರೋಗಗಳು ಇಲ್ಲದಾ
ಇಷ್ಟಾರ್ಥವೆಲ್ಲವನು ಪೂರ್ಣವನು ಗೈಯ್ಯುವಾ
ಸೌಖ್ಯವನು ಈಯುವಾ ಈ ನಗರ ಪಡೆದಿಹರು ॥೧೩೬೪॥

ಬ್ರಹ್ಮನೇ ನಿರ್ಮಿಸಿದ ರಮ್ಯವೀ ನಗರದೆಡೆ
ಸುರರುಗಳು ಬರಲಿಕ್ಕೆ ಸುಳಿಯಲಿಕೆ ಅಂಜುವರು
ಹಿರಣ್ಯದಂತೆಸೆಯುತಲಿ ಥಳಥಳಿಸಿ ಹೊಳೆಯುತಿಹ
ಹೈರಣ್ಯ ಪುರವೆಂಬ ಹೆಸರಿನಲಿ ಮೆರೆಯುತಿದೆ ॥೧೩೬೫॥

ಇದರೊಳಗೆ ಪುಲೋಮೆಯ ಸುತರುಗಳು ಪೌಲೋಮರು
ಕಾಲಕಿಯ ಕುವರರರು ಆ ಕಾಲಕುಂಜರು
ಅತಿಬಲರು ರಕ್ಕಸರು ಇದರೊಳಗೆ ವಾಸಿಪರು
ಅವರನ್ನು ಜಗದೊಳಗೆ ಜಯಸುವರಾರಿಲ್ಲ ॥೧೩೬೬॥

ನೀನೋರ್ವ ಅವರನ್ನು ವಧಿಸಲಿಕೆ ಶಕ್ತನಿಹೆ
ದುರುಳರಾ ದಾನವರ ಸಂಹಾರ ಗೈಯ್ಯುತಲಿ
ದಿವಿಜರಿಗೆ ರಕ್ಕಸರುಪದ್ರವನು ತಪ್ಪಿಪುದು
ಎನ್ನುತಲಿ ಮಾತಲಿಯು ನುಡಿಯುತಿರೆ ನುಡಿದಿಹನು ॥೧೩೬೭॥

ಈಗಲೇ ಪಟ್ಟಣದಿ ರಥವನ್ನು ಸಾಗಿಪುದು
ಆ ಕಾಲಕುಂಜರನು ಪೌಲೋಮರಿರಿಯುವೆನು
ಎನ್ನುತಿರೆ ಮಾತಲಿಯು ರಥವನ್ನು ಸಾಗಿಸುತ
ಸ್ವರ್ಣಪುರ ಹೊರವಲಯ ಬಳಿಯಲ್ಲಿ ಬಂದಿಹನು ॥೧೩೬೮॥

ವರದೇವ ದತ್ತವನು ಊದುತಿರೆ ನಾದವದು
ಆ ಕಾಲಕೇಯರಾ ಪೌಲೋಮ ದಾನವರ
ಕರ್ಣಗಳ ಬೇಧಿಸಲು ಸೈನ್ಯದಾ ಸಹಿತದಲಿ
ಐತಂದು ಘೋರತರ ಯುದ್ಧವನು ಗೈದಿಹರು ॥೧೩೬೯॥

ವಿಷಮುಗುಳ್ವ ಸರ್ಪಾಸ್ತ್ರ ಬಿಡುತಲಿರೆ ರಕ್ಕಸರು
ಗರುಡಾಸ್ತ್ರ ವೆಸೆಯುತಲಿ ಕಡಿಕಡಿದು ಕೆಡಹಿದೆನು
ಕೆಂಡಗಳ ಕಾರುತಿಹ ಆಗ್ನೇಯಸ್ತ್ರ ವೆಚ್ಚುತಿರೆ
ವರುಣಾಸ್ತ್ರ ವೆಸೆಯುತಲಿ ಜ್ವಾಲೆಯನು ನಂದಿಸಿದೆ ॥೧೩೭೦॥

ಈ ಪರಿಯ ಯುದ್ಧವನು ಬಹುಕಾಲ ಗೈಯ್ಯುತಿರೆ
ದಾನವರು ಸೋಲದಿರೆ ರುದ್ರನನು ನೆನೆಯುತಲಿ
ರೌದ್ರಾಸ್ತ್ರ ಬಿಡುತಲಿರೆ ಹುಲಿಕರಡಿ ಸಿಂಹಗಳು
ಆನೆಗಳು ತೋಳಗಳು ರಣಹದ್ದು ಗಿಡಗಗಳು ॥೧೩೭೧॥

ಸರ್ಪಗಳು ಭೂತಗಳು ಅಗಣಿತದ ಸಂಖ್ಯೆಯಲಿ
ಶರದಿಂದ ಜನಿಸುತಲಿ ದೈತ್ಯರನು ಮುತ್ತುತಲಿ
ಕಡಿಯುತಲಿ ಕಚ್ಚುತಲಿ ಕೊಚ್ಚುತಲಿ ಹೆಚ್ಚುತಲಿ
ಸಕಲರನು ಕೊಲ್ಲುತಲಿ ದೆಸೆದೆಸಗೆ ಎಸೆದಿಹವು ॥೧೩೭೨॥

ಭಲೆಭಾಪು ಫಲುಗುಣನೆ ಸುರರಿಂಗೆ ಅಸದಳವು
ಕಷ್ಟತರ ಎನಿಸಿರುವ ಕಾರ್ಯವನು ಗೈದಿರುವೆ
ದೇವೇಂದ್ರ ಸುರನಿಕರ ನಿನ್ನಯಾ ಶೌರ್ಯವನು
ಹೊಗಳುವರು ಎನ್ನುತಲಿ ಮಾತಲಿಯು ನುಡಿದಿಹನು ॥೧೩೭೩॥

ರಮ್ಯದಾ ಅಮರಪುರ ಒಳಿಯಲ್ಲಿ ಬರುತಿರಲು
ದೇವೇಂದ್ರ ಎನ್ನನ್ನು ಅಪ್ಪುತಿರೆ ಮಾತಲಿಯು
ಆ ನಿವಾತಕವಚರನು ಪೌಲೋಮ ಕಾಲೇಯ
ದೈತ್ಯನನು ವಧಿಸಿರುವ ವೃತ್ತಾಂತವರುಹಿದನು ॥೧೩೭೪॥

ಸುರಪತಿಯು ಸುರರುಗಳು ಕೇಳುತಲಿ ಸಂತಸದಿ
ಆನಂದ ಸಾಗರವು ಉಕ್ಕುತಲಿ ಮಿಕ್ಕುತಿರೆ
ಅರಮನೆಯ ಲಲನೆಯರು ಸ್ವರ್ಣದಾ ಆರತಿಯ
ಎತ್ತುತಲಿ ಬೆಳಗಿದರು ಮಂಗಲದ ಗೀತದಲಿ ॥೧೩೭೫॥

ಸುರರುಗಳು ಪುಷ್ಪಗಳ ವೃಷ್ಟಿಯನು ಗೈದಿಹರು
ಋಷಿವರರು ಅಕ್ಷತೆಯ ನೆರಚುತಲಿ ಹರಸಿದರು
ಸವಿರಸದ ಭೋಜನದಿ ಸಂಗೀತ ನೃತ್ಯದಲಿ
ಸುರನಿಕರ ಸಂತಸದ ಸಾಗರದಿ ನಲಿದಿಹರು ॥೧೩೭೬॥

ಕೆಲವುದಿನ ಕಳೆಯುತಿರೆ ಸುರಪತಿಯು ಎನ್ನನ್ನು
ಕರೆಯುತಲಿ ಅದ್ಭುತದ ಅಸ್ತ್ರಗಳ ಪಡೆದಿರುವೆ
ಮೂಜಗದಿ ನಿನ್ನನ್ನು ಜಯಿಸುವವರಾರಿಲ್ಲ
ಮೂಲೋಕ ಗಂಡನಿಹೆ ವೀರನಿಹೆ ಎಂದಿಹನು ॥೧೩೭೭॥

ನಿನ್ನಯಾ ಶತ್ರುಗಳು ಗುರುದ್ರೋಣ ಭೀಷ್ಮರು
ಅಕ್ಷೋಹಿಣೀ ಸೈನ್ಯ ಜಯಿಸಲಿಕೆ ಅಸದಳವು
ಅವರುಗಳ ಶಕ್ತಿಯದು ಹದಿನಾರೊಳೊಂದಂಶ
ಇರುತಿಹುದು ಎನ್ನುತಲಿ ದೇವೇಂದ್ರ ನುಡಿಯುತಲಿ ॥೧೩೭೮॥

ದಿವ್ಯ ಪ್ರಕಾಶದಲಿ ಹೊಳೆಹೊಳೆವ ಸ್ವರ್ಣದಾ
ರತ್ನಗಳ ಮಾಲೆಯನು ಕೊರಳೊಳಗೆ ಹಾಕುತಲಿ
ಇದು ಮಾಲೆ ಸಾವಿರದ ಅಸ್ತ್ರಗಳು ಭೇದಿಸದ
ಕವಚವು ಕಿರೀಟವನು ಈಯುವೆನು ಎಂದಿಹನು ॥೧೩೭೯॥

ಹೇ ಪಾರ್ಥ ನಿನ್ನನ್ನು ಬಹಳ ದಿನ ಕಾಣದಲೆ
ಧರ್ಮಜನು ಕಳವಳದಿ ಚಿಂತೆಯಲಿ ಮುಳುಗಿಹನು
ನೀನೀಗ ತೆರಳುತಲಿ ಸಂತೈಪುದೆನ್ನುತಲಿ
ಉಡುಗೊರೆಗಳೀಯುತಲಿ ಹರಸುತಲಿ ಕಳುಹಿದನು ॥೧೩೮೦॥

ಮಾತಲಿಯು ಸಹಿತದಲಿ ರಥದೊಳಗೆ ಐತಂದು
ನಿಮ್ಮನ್ನು ಕಾಣುತಲಿ ಸಂತಸವಗೊಂಡಿಹೆನು
ಎನ್ನುತಲಿ ಫಲುಗುಣನು ನುಡಿಯುತಿರೆ ಧರ್ಮಜನು
ಅರ್ಜುನನ ತೆಗೆತೆಗೆದು ಗಾಢದಲಿ ಅಪ್ಪಿದನು ॥೧೩೮೧॥

ಪರಶಿವನ ಕಾಣುತಲಿ ಪಾಶುಪತ ಪಡೆಯುತಲಿ
ಸಶರೀರ ಸ್ವರ್ಗಕ್ಕೆ ತೆರಳಿರುವ ಧನ್ಯನಿಹೆ
ಕುರುಕುಲದಿ ನಿನ್ನಸಮ ಆರಿಲ್ಲ ಎನ್ನುತಲಿ
ಧರ್ಮಜನು ಆನಂದ ಬಾಷ್ಪಗಳ ಸುರಿದಿಹನು ॥೧೩೮೨॥

ಹೇ ಪಾರ್ಥ ವೀರರಾ ನಿವಾತಕವಚರನು
ಕಾಲೇಯ ದೈತ್ಯರನು ಕೊಂದಿರುವ ಭೀಕರದ
ಬ್ರಹ್ಮಾಸ್ತ್ರ ಪಾಶುಪತ ಅಸ್ತ್ರ ಪ್ರಯೋಗವನು
ನಾಂಬುವಾ ತವಕವಿದೆ ತೋರಿಪುದು ಎಂದಿಹನು ॥೧೩೮೩॥

ಮರುದಿವಸ ಮೂಡಣದಿ ಬಾಲರವಿ ಮೂಡುತಿರೆ
ಸರಸಿಯಲಿ ಮೀಯುತಲಿ ಶುದ್ಧದಲಿ ಫಲಗುಣನು
ಹೊಳೆಹೊಳೆವ ಗಾಂಡಿವವ ತೆಗೆಯುತಲಿ ಝಾಡಿಸುತ
ಘೋರತರ ಬ್ರಹ್ಮಾಸ್ತ್ರ ಶಿಂಜಿನಿಯೊಳಳವಡಿಸಿ ॥೧೩೮೪॥

ತೂಗುತಲಿ ಜಗ್ಗುತರ ಶಿರವನ್ನು ಎಸೆಯಲಿಕೆ
ಸನ್ನದ್ಧನಾಗಿರಲು ಧರೆನಡುಗಿ ಬಿರಿದಿಹುದು
ಗಿರಿಶಿಖರ ಉರುಳಿದವು ಸಾಗರಗಳುಕ್ಕಿದವು
ದಿಗ್ದಂತಿ ನಡುಗಿಹವು ಪಶುಪಕ್ಷಿ ಓಡಿಹವು ॥೧೩೮೫॥

ಸುತ್ತಲೂ ಗಾಢಾಂಧಕಾರವದು ಕವಿಯುತಿರೆ
ತಾರೆಗಳು ಮಿನುಗುತಿರೆ ಮಾರುತನು ನಿಲ್ಲುತಿರೆ
ಪ್ರಳಯವೇ ಸನ್ನಿಹಿತವಾಗಿಹುದೊ ಎನ್ನುತಲಿ
ಸಕಲರೂ ಭೀತಿಯಲಿ ಕಳವಳವಗೊಂಡಿಹರು ॥೧೩೮೬॥

ಗಂಧರ್ವ ಕಿನ್ನರರು ಚಾರಣರು ಪನ್ನಗರು
ಸುರಮುನಿಯು ನಾರದರ ಸಹಿತದಲಿ ಐತಂದು
ಫಲುಗುಣನೆ ಲಕ್ಷ್ಯವದು ಇಲ್ಲದೆಯೆ ಸುಮ್ಮನೆಯೆ
ಬ್ರಹ್ಮಾಸ್ತ್ರ ಬಿಡುವದಿದು ಸಲ್ಲದು ಎಂದಿಹನು ॥೧೩೮೭॥

ನಿನ್ನಯಾ ಪ್ರಾಣಕ್ಕೆ ಘೋರತರ ಆಪತ್ತು
ಸಂಕಟವು ಬಂದಿರುವ ಸಮಯದಲಿ ಮಾತ್ರವೇ
ಲೋಕವನು ಲಯಗೈವ ಬ್ರಹ್ಮಾಸ್ತ್ರವೆಸೆಯುವುದು
ಮಕ್ಕಳಾ ಆಟಿಕೆಯು ಇದು ಅಲ್ಲ ಎಂದಿಹರು ॥೧೩೮೮॥

ಧರ್ಮಜನೆ ಅಸ್ತ್ರಪ್ರಯೋಗವನು ಮಾಡಲಿಕೆ
ಕಾಲವದು ಬಂದಿಲ್ಲ ಮುಂದಕ್ಕೆ ಸಂಭವಿಪ
ಘನಘೋರ ಯುದ್ಧದಲಿ ಅಸ್ತ್ರಗಳ ಶಕ್ತಿಯನು
ಕೌಶಲವ ನೋಡುವುದು ಎಂದಿಹರು ಸಕಲರು ॥೧೩೮೯॥

ಆ ಸೃಷ್ಟಿಕರ್ತನೇ ವರ ಬ್ರಹ್ಮದೇವನು
ಬ್ರಹ್ಮಾಸ್ತ್ರ ಬಿಡದಿರಲು ನಿಲ್ಲಿಸಲು ಹೇಳಿದನು
ಎನ್ನುತಿರೆ ಸಕಲರೂ ಕಲಿಪಾರ್ಥ ಅಸ್ತ್ರವನು
ಬತ್ತಳಿಕೆಯೊಳಗಿರಿಸಿ ಸುರಮುನಿಗೆ ನಮಿಸಿದನು ॥೧೩೯೦॥

ಧರ್ಮಜನು ಸೋದರರ ಸಹಿತದಲಿ ನಮಿಸುತಿರೆ
ಸುರರುಗಳು ಸಹಿತದಲಿ ಋಷಿವರರು ನಾರದರು
ಹರಸುತಲಿ ಸ್ವರ್ಗಕ್ಕೆ ತೆರಳುತಿರೆ ಪಾಂಡವರು
ಧನಪತಿಯ ಭವನದಲಿ ಹರುಷದಲಿ ಇರ್ದಿಹರು ॥೧೩೯೧॥

ಹನ್ನೆರಡು ವರುಷಗಳ ಕಾಲವದು ಸವೆಯುತಿರೆ
ವನವಾಸದಾರೆರಡು ವರುಷಗಳು ಉರುಳುತಿರೆ
ಅಜ್ಞಾತವಾಸದಾ ಸಮಯವದು ಬರುತಲಿರೆ
ಮರುತಜನು ಧರ್ಮಜಗೆ ನುಡಿದಿಹನು ಗುಪಿತದಲಿ ॥೧೩೯೨॥

ಇಲ್ಲಿಯು ಗಜಪುರದ ಸನಿಹದಲಿ ಇರ್ದೊಡೆಯು
ಕೌರವನು ಗುಪಿತದಲಿ ಚರರನ್ನು ಕಳಿಸುತಲಿ
ಎಮ್ಮಯಾ ಸುಳಿವನ್ನು ಅರಿಯುತಲಿ ಮತ್ತೊಮ್ಮೆ
ಹದಿಮೂರು ವರುಷಗಳ ವನವಾಸಕಟ್ಟುವನು ॥೧೩೯೩॥

ನಾವುಗಳು ಇಲ್ಲಿಂದ ಬಹುದೂರ ಸಾಗುತಲಿ
ಅರಿಯದಾ ಸ್ಥಳದಲ್ಲಿ ಬೇರೆಯಾ ವೇಷದಲಿ
ವಾಸಿಸುತ ಅಜ್ಞಾತವಾಸವನು ಕಳೆಯುವುದು
ಎನ್ನುತಿರೆ ಮರುತಜನು ಧರ್ಮಜನು ಒಪ್ಪಿದನು ॥೧೩೯೪॥

ಬಳಿಕಲಾ ಬದರಿಕೆಯ ಆಶ್ರಮಕೆ ಐತಂದು
ಕೆಲವು ದಿನ ಕಳೆಯುತಲಿ ಶಬರನಾ ರಾಜ್ಯಕ್ಕೆ
ಬರುತಲಿರೆ ಸುಬಾಹು ನೃಪನನ್ನು ಕಾಣುತಲಿ
ಸಾಗುತಲಿ ಸುಂದರದ ಯೂಪವನಕೈದಿದರು ||೧೩೯೫||

**ಘಟಸರ್ಪ ಭೀಮನನು ಬಂಧನದಿ ಬಿಗಿದಿರಲು |**
**ಧರ್ಮಜನು ಬಿಡಿಸಿದನು ನಹುಷನನು ಒಲಿಸುತಲಿ ||**

ಅಲ್ಲಿಯೇ ಚೆಲುವಿನಾ ಆಶ್ರಮವ ರಚಿಸುತಲಿ
ವರುಷವೊಂದರ ಕಾಲವನು ಸರಸದಲಿ ಕಳೆಯುತಿರೆ
ಒಂದುದಿನ ಕಲಿಭೀಮ ಬೇಟೆಯನು ಆಡಲಿಕೆ
ಬೇಡರಾ ಸಹಿತದಲಿ ಕಾನನಕೆ ನಡೆದಿಹನು ||೧೩೯೬||

ಜಡೆಯೊಳಗೆ ಹೂಮಾಲೆ ನವಿಲುಗರಿ ಶೋಭಿಸುವ
ಕೊರಳೊಳಗೆ ಕರಿಮಣಿಯ ಹಾರಗಳು ಎಸೆಯುತಿಹ
ಕರ್ರನೇ ಮಿಂಚುತಿಹ ಕರಿದಾದ ತನುವಿನಲಿ
ತುಂಡಿನಾ ವಸ್ತ್ರದಲಿ ಬೇಡರುಗಳೆಸೆದಿಹರು ||೧೩೯೭||

ಹೆಗಲಿನಲಿ ಬಿಲ್ಲನ್ನು ಬಾಣಗಳ ಧರಿಸುತಲಿ
ಕರದೊಳಗೆ ಬಲೆಗಳನು ಕವಣೆಗಳ ಹಿಡಿಯುತಲಿ
ಬೊಗಳುತಿಹ ಬೇಟೆಯಾ ನಾಯಿಗಳ ಸಹಿತದಲಿ
ಬೇಡರುಗಳಗಣಿತರು ಅಡವಿಯಲಿ ನಡೆದಿಹರು ||೧೩೯೮||

ಕಲಿಭೀಮ ರಭಸದಲಿ ಹೆಜ್ಜೆಯನು ಇಡುತಲಿರೆ
ಪದಹತಿಗೆ ಭೂಮಿಯದು ಕಂಪಿಸುತ ಬಿರಿದಿಹುದು
ಗಿರಿಶಿಖರ ಉರುಳಿಹವು ದಿಗ್ಗಜಗಳಲುಗಿದವು
ಸಾಗರಗಳುಕ್ಕಿದವು ಪವನಜನ ಘಟ್ಟಣೆಗೆ ||೧೩೯೯||

ಬೇಡರಾ ತಂಡಗಳು ಕಳಕಳವ ಗೈಯ್ಯುತಿರೆ
ಕಲಿಭೀಮ ಘೋರತರ ಗರ್ಜನೆಯ ಗೈಯ್ಯುತಿರೆ
ಹುಲಿ ಕರಡಿ ಸಿಂಹಗಳು ದೆಸೆಗೆಟ್ಟು ಓಡಿಹವು
ಪಶುಪಕ್ಷಿ ಪ್ರಾಣಿಗಳು ಚೀತ್ಕಾರ ಗೈದಿಹವು ||೧೪೦೦||

ಭೀಮನಾ ಗರ್ಜನೆಗೆ ಕಾನನವು ನಡುಗಿತಲಿ
ಮಾರ್ದನಿಯ ಗೈಯ್ಯುತಿರೆ ಬಿಲದೊಳಗೆ ಮಲಗಿರ್ದ
ಘಟಸರ್ಪ ಎಚ್ಚರವಗೊಳ್ಳುತಲಿ ಭಯದಿಂದ
ಹೊರವಂಟು ತರಗೆಲೆಯ ಮಧ್ಯದಲಿ ಸುಳಿದಿಹುದು ||೧೪೦೧||

ಬಿರುಗಾಳಿ ವೇಗದಲಿ ಮರುತಜನು ಭರದಲ್ಲಿ
ಬರುತಲಿರೆ ತರುವಿನೆಡೆ ತರಗೆಲೆಯ ಮಧ್ಯದಲಿ
ಹರಿಯುತಿಹ ಅಜಗರನ ವಿಸ್ತರದ ಹೆಡೆಯಲ್ಲಿ
ಗಿರಿಯ ಸಮ ಭಾರವಿಹ ಚರಣವನು ಇಟ್ಟಿಹನು ||೧೪೦೨||

ಘಟಸರ್ಪ ಕ್ರೋಧದಲಿ ಕೊಸರುತಲಿ ಹೆಡೆಯೆತ್ತಿ
ಫೂತ್ಕರಿಸಿ ವಿಷವನ್ನು ಕಾರುತಲಿ ಅಪ್ಪಳಿಸಿ
ತರುವನ್ನು ಬಳಸುವಾ ಲತೆಯಂತೆ ಮರುತಜನ
ಕಾಲ್ಗಳನು ಸುತ್ತುತಲಿ ದೃಢವಾಗಿ ಬಂಧಿಸಿತು ||೧೪೦೩||

ಗದೆಯಿಂದ ಫಣೆಯನ್ನು ನೂಕುತಲಿ ತಳ್ಳುತಲಿ
ಕಾಲ್ಗಳನು ಝಾಡಿಸಲು ಪುನರಪಿಯು ಫಣಿಪತಿಯು
ಬಲವಾಗಿ ಸುತ್ತುತಲಿ ನಡುವಿನಾ ಪರ್ಯಂತ
ನಾಭಿಯನು ಬಳಸುತಲಿ ಬಂಧನವ ಗೈಯ್ಯುತಲಿ ||೧೪೦೪||

ಸರಸರನೆ ಉದರವನು ವಕ್ಷವನು ಕೊರಲನ್ನು
ಸುತ್ತುತಲಿ ಬಿಗಿಯುತಲಿ ಕಟ್ಟುತಲಿ ಬಂಧಿಸುತ
ಶಿರದಲ್ಲಿ ಹೆಡೆಯೆತ್ತಿ ನಾಲಗೆಯ ಚಾಚುತಲಿ
ವಿಷವನ್ನು ಕಾರುತಲಿ ಬಿಸಿಯುಸಿರ ಸೂಸಿಹುದು ||೧೪೦೫||

ಶ್ವಾಸವನು ಕೊಳ್ಳುತಲಿ ಮೈಯನ್ನು ಹಿಗ್ಗಿಸುತ
ತೋಳ್ಗಳನು ಅಲುಗಿಸುತ ಕಾಲ್ಗಳನು ಝಾಡಿಸುತ
ಸರ್ಪದಾ ಮುರಿಗೆಯನು ಮುರಿಯಲಿಕೆ ಯತ್ನಿಸುತ
ಕಲಿಭೀಮ ಕಸವಿಸಿಯಗೊಳ್ಳುತಲಿ ಬಸವಳಿದ ||೧೪೦೬||

ಕಬ್ಬಿನಾ ರಸವನ್ನು ಹೀರಿರುವ ಸಿಪ್ಪೆಯಾ
ಪರಿಯಲ್ಲಿ ಪವನಜನ ಬಲವೆಲ್ಲ ಅಳಿದಿಹುದು
ಸಾವಿರದ ಗಜಶಕ್ತಿ ಕುಂದುತಲಿ ಕುಸಿಯುತಲಿ
ಅಜಗರನ ಬಂಧನದಿ ಬಳಲುತಲಿ ಬೆಂಡಾದ ||೧೪೦೭||

ಸಾಗರದ ಮಥನದಲಿ ಮಂದರದ ಪರ್ವತವ
ಸುತ್ತಿರುವ ವರಆದಿಶೇಷನಾ ಪರಿಯಲ್ಲಿ
ಪರ್ವತದ ಕಾಯದನ ಭೀಮನಾ ದೇಹವನು
ಬಿಗಿಯುತಲಿ ಸುತ್ತಿರುವ ಫಣಿಪತಿಯು ಎಸೆದಿಹನು ||೧೪೦೮||

ಇಂದಿನಾ ಪರ್ಯಂತ ಲೋಕದಲಿ ಎನ್ನನ್ನು
ಜಯಿಸಿರುವ ಬಲಶಾಲಿ ಒಬ್ಬನೂ ಇಲ್ಲದಿರೆ
ಈ ಹುಳುಜಂತು ಹಾವಿಂದ ಹಿಂಸೆಯನು
ಅನುಭವಿಪ ವಿಧಿಯಾಯ್ತೆ ಎನ್ನುತಲಿ ಚಿಂತಿಸುತ ||೧೪೦೯||

ಅಜಗರನೆ ಜಗದೊಳಗೆ ಎನ್ನಸಮ ಬಲಯುತರು
ಸಾಮರ್ಥ್ಯವುಳ್ಳವರು ಒಬ್ಬರನು ನಾ ಕಾಣೆ
ಎನ್ನನ್ನು ಸುತ್ತುತಲಿ ನಿರ್ವಿಣ್ಣ ಮಾಡಿರುವ
ನೀನಾರು ಇರುತಿರುವೆ ಹೇಳೆಂದ ಮರುತಜನು ||೧೪೧೦||

ಕಾನನದಿ ವಾಸಿಸುವ ಸಾಮಾನ್ಯ ಫಣಿಯಲ್ಲ
ಫಣಿವೇಷ ಧರಿಸಿರುವ ದಾನವನೊ ದೈತ್ಯನೋ
ಗಂಧರ್ವ ಕಿನ್ನರನೊ ಖೇಚರನೊ ಯಕ್ಷನೋ
ನೀನಾರು ಇರುತಿರುವೆ ಎಂದಿಹನು ಪವನಜನು ॥೧೪೧೧॥

ನಾನಾರು ಇರ್ದೊಡೆಯು ನೀನೇನು ಮಾಡುವುದು
ಗಾಳಿಯನು ಸೇವಿಸುತ ಬಹುಕಾಲ ಕಳೆದಿಹೆನು
ಇಂದೆನ್ನ ಆಹಾರಕೋಸುಗವೆ ಆ ದೇವ
ನಿನ್ನನ್ನು ಕಳಿಸಿಹನು ತಿನ್ನುವೆನು ಎಂದಿಹುದು ॥೧೪೧೨॥

ಇತ್ತಲಾ ಆಶ್ರಮದಿ ಘೋರತರ ಉತ್ಪಾತ
ಅಪಶಕುನವಾಗುತಿರೆ ಧರ್ಮಜನು ಚಿಂತಿಸುತ
ಧೌಮ್ಯರನು ಕರೆಸುತಲಿ ದುಷ್ಟಮೀ ಅಪಶಕುನ
ಭೀಕರದ ಕಷ್ಟಗಳ ಸೂಚಿಪವು ಎಂದಿಹನು ॥೧೪೧೩॥

ಬೇಂಟೆಯನು ಆಡಲಿಕೆ ಮರುತಜನು ತೆರಳಿದನು
ಕಲಿಭೀಮ ಸಂಕಟದಿ ಸಿಲುಕಿಹನೆ ಎನ್ನುತಲಿ
ಕಳವಳವಗೊಂಡಿಹೆನು ಉಪಾಯವ ಸೂಚಿಪುದು
ಎನ್ನುತಲಿ ದೈನ್ಯದಲಿ ಧರ್ಮಜನು ನುಡಿದಿಹನು ॥೧೪೧೪॥

ಗುರುಧೌಮ್ಯ ದಿವ್ಯದಾ ಜ್ಞಾನದಲಿ ಅರಿಯುತಲಿ
ಕಲಿಭೀಮ ಸಂಕಟದಿ ಸಿಲುಕಿಹನು ಎನ್ನುತಿರೆ
ಧರ್ಮಜನು ಗುರುಧೌಮ್ಯ ಸೋದರರ ಸಹಿತದಲಿ
ಪವನಜನ ಅರಸುತಲಿ ಕಾನನದಿ ನಡೆದಿಹನು ॥೧೪೧೫॥

ಭೂಮಿಯಲಿ ಮೂಡಿರುವ ಭೀಮನಾ ಹೆಜ್ಜೆಯಲಿ
ನಡೆಯುತಲಿ ಯಮಸುತನು ಅರಸುತಲಿ ಬರುತಲಿರೆ
ಭೀಕರದ ಘಟಸರ್ಪ ಬಲವಾಗಿ ಬಿಗಿಯುತಲಿ
ಸುತ್ತಿರುವ ಸೋದರನ ಭೀಮನನು ಕಂಡಿಹನು ॥೧೪೧೬॥

ಅಕಟಕಟ ಮುನ್ನಿನಲಿ ಭೋಗಿಸಿದ ಕಷ್ಟಗಳ
ಮೀರಿರುವ ಸಂಕಟದಿ ಕಲಿಭೀಮ ಸಿಲುಕಿಹನು
ಅಜಗರನ ಬಂಧನದಿ ಭೀಮನಾ ಬಲವೆಲ್ಲ
ಕುಂದಿಹುದು ಎನ್ನುತಲಿ ಧರ್ಮಜನು ನೊಂದಿಹನು ॥೧೪೧೭॥

ದೈವವೇ ಮುನಿದಿರಲು ನೆಲವೆದ್ದು ಒಡಿಯುವುದು
ಎಂಬುವಾ ಪರಿಯಲ್ಲಿ ಸರ್ಪದಾ ದರ್ಪದಲಿ
ಭೀಮನಾ ಗಜಶಕ್ತಿ ಕುಂದಿಹುದು ಕುಂದಿಹುದು
ಎನ್ನುತಲಿ ಧರ್ಮಜನು ಚಿಂತೆಯಲಿ ಮುಳುಗಿದನು ॥೧೪೧೮॥

ಹೇ ಭೀಮ ಹುಲಿಕರಡಿ ಸಿಂಹಗಳ ನೊರಸಿರುವ
ನೀನಿಂತು ಹುಳುಜಂತು ಸರ್ಪದಾ ಬಂಧನದಿ
ವಿನೋದದಿ ಆಟವನು ಆಡುವೆಯಾ ಇಲ್ಲದಿರೆ
ಅಜಗರನು ನಿಜವಾಗಿ ಹಿಂಸಿಪನೆ ಎಂದಿಹನು ॥೧೪೧೯॥

ಈ ಪರಿಯ ಭೀಕರದ ದಾರುಣದ ದೃಶ್ಯವನು
ನೀ ಪಡುವ ಯಾತನೆಯ ಕಷ್ಟವದು ನೋಡುವುದು
ಎನ್ನಿಂದ ಆಗದದು ನಾಗೈವ ಕಾರ್ಯವನು
ಪೇಳುವುದು ಎಂದಿಹನು ಧರ್ಮಜನು ನೋಯುತಲಿ ॥೧೪೨೦॥

ಫಣಿಪತಿಯು ಕೊರಲನ್ನು ಬಿಗಿಯಾಗಿ ಬಿಗಿದಿರಲು
ನುಡಿಯಲಿಕೆ ಆಗದಿದೆ ಬೆರಳಿನಾ ಸನ್ನೆಯಲಿ
ಅಜಗರನ ಕೇಳುವುದು ಎನ್ನುತಿರೆ ಮರುತಜನು
ದೈನ್ಯದಲಿ ಯಮಸುತನು ಫಣಿಪತಿಗೆ ನುಡಿದಿಹನು ॥೧೪೨೧॥

ಫಣಿರಾಜ ಈ ಪರಿಯ ಹಿಂಸೆಯನು ಈಯಲಿಕೆ
ಇವನಾವ ಅಪರಾಧ ಗೈದಿಹನು ಪೇಳುವುದು
ಪರರನ್ನು ಸುಮ್ಮನೇ ಪೀಡಿಪುದು ಮಹಪಾಪ
ಧರ್ಮಕ್ಕೆ ವಿಪರೀತ ಎಂದಿಹನು ಧರ್ಮಜನು ॥೧೪೨೨॥

ಪೂರ್ವದಲಿ ದುಷ್ಕೃತ್ಯ ಗೈಯ್ಯುತಲಿ ಪಾಪದಲಿ
ನೀನೀಗ ಸರ್ಪದಾ ಜನ್ಮವನು ಪಡೆದಿರುವೆ
ಪುಣ್ಯದಾ ಕಾರ್ಯಗಳ ಗೈದೊಡೆಯು ಮುಂದಕ್ಕೆ
ಉತ್ತಮದ ಜನ್ಮವನು ನೀ ಪಡೆವೆ ಎಂದಿಹನು ॥೧೪೨೩॥

ಗಂಧರ್ವ ಕಿನ್ನರನೊ ಖೇಚರನೊ ಯಕ್ಷನೊ
ಸರ್ಪದಾ ವೇಷವನು ಧರಿಸಿರುವ ರಕ್ಕಸನೊ
ನೀನಾರು ಇರುತಿರುವೆ ಎನ್ನುತಿರೆ ಧರ್ಮಜನು
ಹೆಡೆಯೆತ್ತಿ ಕ್ರೋಧದಲಿ ಅಜಗರನು ನುಡಿದಿಹನು ॥೧೪೨೪॥

ಇವನಿಂಗೆ ನಿನಗಾವ ಸಂಬಂಧ ನಂಟಿಹುದು
ಬಂಧನವ ಬಿಡಿಸಲಿಕೆ ನೀನೇಕೆ ಯತ್ನಿಸುವೆ
ನೀನಾರು ಇರುತಿರುವೆ ವನಕೇಕೆ ಬಂದಿರುವೆ
ಎನ್ನುತಿರೆ ಫಣಿಪತಿಯು ಯಮಸುತಗೆ ನುಡಿದಿಹನು ॥೧೪೨೫॥

ಜಗದೊಳಗೆ ಖ್ಯಾತಮಿಹ ಕುರುಕುಲದ ನೃಪವರಗೆ
ಪಾಂಡುವಿಗೆ ಜನಿಸಿರುವ ಧರ್ಮಜನು ನಾನಿಹೆನು
ಈತನೇ ಕಲಿಭೀಮ ಫಲ್ಗುಣನು ವರನಕುಲ
ಸಹದೇವರೆನ್ನಯಾ ಸೋದರರು ಇರುತಿಹರು ॥೧೪೨೬॥

ದಾಯಾದಿ ಕೌರವರು ಮೋಸದಾ ದ್ಯೂತದಲಿ
ಎಮ್ಮನ್ನು ಸೋಲಿಸುತ ರಾಜ್ಯವನು ಕೊಳ್ಳುತಲಿ
ವನವಾಸಕಟ್ಟುತಿರೆ ಸೋದರರ ಸಹಿತದಲಿ
ಕಾನನದಿ ಚರಿಸುತಲಿ ನಾವಿಲ್ಲಿ ಬಂದಿಹೆವು ॥೧೪೨೭॥

ಬೇಟೆಯಲಿ ಈ ಭೀಮ ಅಲೆಯುತಲಿ ಬರುತಲಿರೆ
ಬಂಧಿಸುತ ಬಿಗಿಯುತಲಿ ಹಿಂಸೆಯನು ಈಯುತಿಹೆ
ದುಷ್ಟರುಗಳಾವಲ್ಲ ಶಿಷ್ಟನುಗಳಾವಿಹೆವು
ಬಿಟ್ಟುಬಿಡು ಎನ್ನಯಾ ಸೋದರನ ಎಂದಿಹನು ॥೧೪೨೮॥

ಕಾರಣವು ಇಲ್ಲದೆಯೆ ಪರರನ್ನು ಪೀಡಿಪುದು
ಪಾಪವದು ಎನಿಸುವುದು ಧರ್ಮಕ್ಕೆ ವಿಪರೀತ
ಸಾಧುಗಳ ಸಜ್ಜನರ ಹಿಂಸೆಯನು ಗೈಯ್ಯುವುದು
ನಾಶಕ್ಕೆ ಮೂಲವದು ಎಂದಿಹನು ಧರ್ಮಜನು ॥೧೪೨೯॥

**ಧರ್ಮಜನು ಅಧ್ಯಾತ್ಮವಿದ್ಯೆಯನು ಅರಹುತಲಿ।**
**ಘಟಸರ್ಪನಿಗೆ ನೃಪನ ಉದ್ಧಾರ ಗೈದಿಹನು॥**

ಧರ್ಮಜನೆ ಧರ್ಮದಾ ನಾಮವದು ನಿನಗಿಹುದು
ಧರ್ಮವನು ಅರಿತಿರುವೆ ಧರ್ಮವನು ನೀನುಡಿವೆ
ನಿನ್ನಯಾ ಸೋದರನ ಬಂಧನವ ಬಿಡಿಸಲಿಕೆ
ಧರ್ಮದ ರಹಸ್ಯವನು ಹೇಳುವುದು ಎಂದಿಹನು ॥೧೪೩೦॥

ಎನ್ನಯಾ ಧರ್ಮದಾ ಪ್ರಶ್ನೆಗಳನುತ್ತರಿಸಿ
ಮನದೊಳಿಹ ಶಂಕೆಯನು ಕಲ್ಮಷವ ತೊಳೆಹೊಡೆಯು
ನಿನ್ನಯಾ ತಮ್ಮನನು ಮುಕ್ತನನು ಮಾಡುವೆನು
ಎನ್ನುತಿರೆ ಫಣಿಪತಿಯು ಯಮಸುತನು ನುಡಿದಿಹನು ॥೧೪೩೧॥

ವೇದಗಳ ಶಾಸ್ತ್ರಗಳ ಅಧ್ಯಯನ ಗೈದಿರುವ
ವಿಪ್ರರಾ ಮತಿಗಹುದು ಎನಿಸುವಾ ಪರಿಯಲ್ಲಿ
ನಿನ್ನಯಾ ಪ್ರಶ್ನೆಗಳನುತ್ತರಿಪೆ ಎನ್ನುತಲಿ
ಧರ್ಮಸುತ ನುಡಿಯುತಿರೆ ಫಣಿಪತಿಯು ನುಡಿದಿಹನು ॥೧೪೩೨॥

ವೇದಗಳನರಿತಿರುವ ವಿಪ್ರರುಗಳೆನ್ನುತಿಹೆ
ಆರನ್ನು ನಿಜವಾದ ವಿಪ್ರರುಗಳೆಂಬುವರು
ವಿಪ್ರರಾ ನಡತೆಯನು ಬುದ್ಧಿಯನು ಮಹಿಮೆಯನು
ಹೇಳುವುದು ಎನ್ನುತಲಿ ಫಣಿರಾಯ ಕೇಳಿದನು ॥೧೪೩೩॥

ಅಜಗರನೆ ಕೇಳುವುದು ಪ್ರತಿನಿತ್ಯ ತಪ್ಪದೆಯೆ
ಬ್ರಾಹ್ಮೀ ಮುಹೂರ್ತದಲಿ ಎಚ್ಚರವಗೊಳ್ಳುತಲಿ
ಸ್ನಾನ ಸಂಧ್ಯಾದಿಗಳ ಜಪತಪವ ಮೌನವನು
ಧ್ಯಾನವನು ಗೈಯ್ಯುವವ ವರವಿಪ್ರನೆನಿಸುವನು ॥೧೪೩೪॥

ಅಗ್ನಿಹೋತ್ರಾದಿಗಳ ಅತಿಥಿ ಸತ್ಕಾರಗಳ
ವೇದೋಕ್ತ ಕರ್ಮಗಳ ಪಿತೃಮಾತೃ ಸೇವೆಯನು
ಗೈಯ್ಯುತಲಿ ಅನವರತ ಸ್ವಾಧ್ಯಾಯ ನಿರತನಿಹ
ಬ್ರಹ್ಮನನ ನೆನೆಯುವವ ವರವಿಪ್ರನೆನಿಸುವನು ॥೧೪೩೫॥

ಇಂದ್ರಿಯಗಳೆಲ್ಲವನು ನಿಗ್ರಹವ ಗೈಯ್ಯುತಲಿ
ಏಕಾಗ್ರಚಿತ್ತದಲಿ ಭ್ರೂಲತೆಯ ಮಧ್ಯದಲಿ
ಇರುತಿರುವ ಬಹ್ಮನಲಿ ಮನವಿರಿಸಿ ರಮಿಸುತಿಹ
ವರಬ್ರಹ್ಮಜ್ಞಾನಿಯೇ ಬ್ರಾಹ್ಮಣನು ಎನಿಸುವನು ॥೧೪೩೬॥

ಧನಕನಕ ಗೌರವವ ಕೀರ್ತಿಯನು ಆಶಿಸದೆ
ಭೌತಿಕದ ವಿಷಯಗಳ ಮೋಹವನು ತೊರೆಯುತಲಿ
ದೊರೆತಿರುವ ಧನದಲ್ಲಿ ಸಂತಸದಿ ಸುಖಿಸುತಲಿ
ಪರಬ್ರಹ್ಮ ನೆನೆಪವನು ವರವಿಪ್ರ ಕೇಳೆಂದ ॥೧೪೩೭॥

ವಿಪ್ರರಲಿ ಜನಿಸಿದೊಡೆ ವಿಪ್ರನೆಂದೆನಿಸದಿಹ
ಸಂಸ್ಕಾರ ಪಡೆಯುತಲಿ।ಸತ್ಕರ್ಮ ಗೈಯ್ಯುತಲಿ
ಸತ್ಯದಿ ಅಹಿಂಸೆಯಲಿ ಕ್ಷಮೆದಾನ ಶೀಲದಲಿ
ನಡೆವವಗೆ ವರವಿಪ್ರನೆನಿಸುವನು ಕೇಳೆಂದ ॥೧೪೩೮॥

ಜಗದೊಳಿಹ ಪಶುಪಕ್ಷಿ ಪ್ರಾಣಿಗಳ ಜೀವಿಗಳ
ಕೋಟಿಗಳ ರಾಶಿಯನು ಭೇದವನು ಮಾಡದಲೆ
ಸಕಲರಾ ಸುಖಶಾಂತಿ ಕ್ಷೇಮವನು ವೃದ್ಧಿಯನು
ಬಯಸುವವ ಬ್ರಾಹ್ಮಣನು ಎನಿಸುವನು ಕೇಳೆಂದ ॥೧೪೩೯॥

ಆರನ್ನು ಧೀರನಿಹನೆನ್ನುವರು ಎನ್ನುತಿರೆ
ನಾರಿಯರ ಮೋಹದಾ ಜಾಲದಲಿ ಸಿಲುಕದಲೆ
ಮೃತ್ಯುವನು ಅಂಜದಲೆ ನಸುನಗುತ ಅಪ್ಪುವವ
ಧೀರನೆಂದೆನಿಸುವನು ಎಂದಿಹನು ಧರ್ಮಜನು ॥೧೪೪೦॥

ಆರನ್ನು ಶೂರರೆಂದೆನ್ನುವರು ಎನ್ನುತಿರೆ
ಮಹಿಳೆಯರ ದುರ್ಬಲರ ವಿಪ್ರರನು ರಕ್ಷಿಸುವ
ರಣದೊಳಗೆ ಹಿಂದಕ್ಕೆ ಸರಿಯದಲೆ ಕಾದುತಲಿ
ಪ್ರಾಣವನು ತೊರೆಯುವವ ಕ್ಷಾತ್ರನೆಂದೆನ್ನುವರು ॥೧೪೪೧॥

ಅತಿಲಾಭಗಳಿಸದಲೆ ಆಹಾರ ಧಾನ್ಯವನು
ವಿತರಿಸುತ ಋಜುವಾದ ಸತ್ಯದಲಿ
ಗಳಿಸಿರುವ ಧನವನ್ನು ಧರ್ಮದಲಿ ಕ್ಷಾಮದಲಿ
ದಾನವನು ಗೈಯ್ಯುವವ ವರವೈಶ್ಯ ಕೇಳೆಂದ ॥೧೪೪೨॥

ಆರನ್ನು ಒಡೆಯನನು ಸೇವಕರು ಎನ್ನುವರು
ಎನ್ನುತಿರೆ ಸ್ನೇಹದಲಿ ಸೇವಕನ ಸೇವೆಯನು
ಕೊಳ್ಳುತಲಿ ಸಂಕಟದ ಸಮಯದಲಿ ಭೃತ್ಯನಿಗೆ
ಧನವಿತ್ತು ಸಲುಹುವವ ಒಡೆಯನೆಂದೆನಿಸುವನು ॥೧೪೪೩॥

ಅನ್ನವಸ್ತ್ರಾದಿಗಳ ಈಯುತಲಿ ರಕ್ಷಿಸುವ
ತನ್ನಯಾ ಒಡೆಯಂಗೆ ಪ್ರಾಣದಾ ಸಂಕಷ್ಟ
ಒದಗಿರಲು ತನ್ನಯಾ ಪ್ರಾಣವನು ಅರ್ಪಿಸುತ
ರಕ್ಷಿಸುವ ಸೇವಕನು ಸೇವಕನು ಎನಿಸುವನು ॥೧೪೪೪॥

ಧರ್ಮಜನು ವಿದ್ಯೆಯನದಾವುದನು ಅರಿತೊಡೆಯು
ಜಗವಖಿಲ ವಿದ್ಯೆಗಳ ಅರಿತಂತೆ ಎನಿಸುವುದು
ಲೋಕದಲಿ ಅತಿಶ್ರೇಷ್ಠ ವಿದ್ಯೆಯದು ಅವುದಿದೆ
ಎಂಬುದನು ಪೇಳುವುದು ಎಂದಿಹನು ಅಜಗರನು ॥೧೪೪೫॥

ಫಣಿಪತಿಯೆ ಕೇಳುವುದು ಜಗದೊಳಗೆ ಶ್ರೇಷ್ಠ ಮಿಹ
ಆತ್ಮಾನಾತ್ಮ ವಿವೇಕದಾ ಬ್ರಹ್ಮಾತ್ಮ ವಿದ್ಯೆಯನು
ಅರಿತೊಡೆಯು ಜಗದೊಳಿಹ ವಿದ್ಯೆಗಳ ಸರ್ವವನು
ಅರಿತಂತೆ ಎನಿಸುವುದು ಎಂದಿಹನು ಧರ್ಮಜನು ॥೧೪೪೬॥

ವಿಶ್ವವಿದು ಈಶ್ವರನ ವಾಸದಾ ಮನೆಯಿಹುದು
ಸಕಲ ಸಚರಾಚರದ ವಸ್ತುಗಳ ವ್ಯಾಪಿಸುತ
ಕೋಟಿಗಳ ಜೀವಿಗಳ ಪ್ರಾಣಿಗಳ ಹೃದಯದಲಿ
ಆತ್ಮಸ್ವರೂಪದಲಿ ಈಶ್ವರನು ವಾಸಿಪನು ॥೧೪೪೭॥

ರವಿಚಂದ್ರ ತಾರೆಗಳ ಭೂವ್ಯೋಮ ಬ್ರಹ್ಮಾಂಡ
ಕೋಟಿಗಳ ಭೂತಗಳ ಪ್ರಾಣಿಗಳ ಸೃಜಿಸುತಲಿ
ಜಂಗಮದಿ ಸ್ಥಾವರದಿ ಚೈತನ್ಯರೂಪದಲಿ
ಪರಬ್ರಹ್ಮ ಪರಮಾತ್ಮ ರೂಪದಲಿ ವಾಸಿಪನು ॥೧೪೪೮॥

ಚೈತನ್ಯರೂಪದಾ ಆತ್ಮವೊಂದುಳಿಯುತಲಿ
ಜಗದೊಳಿಹ ಮಿಕ್ಕಿರುವ ವಸ್ತುಗಳ ಎಲ್ಲವೂ
ನಶ್ವರವು ಮಾಯೆಯದು ಅನಾತ್ಮವೆಂದೆನಿಸುವುದು
ಸಕಲವೂ ಪ್ರಳಯದಲಿ ನಾಶವನು ಹೊಂದುವುದು ॥೧೪೪೮॥

ಪೃಥ್ವಿಜಲ ತೇಜಗಳ ಆಗಸದ ವಾಯುವಿನ
ಪಂಚಭೂತಂಗಳೀ ನಶ್ವರದ ದೇಹದಲಿ
ಆತ್ಮಸ್ವರೂಪದಲಿ ಅಂಗುಷ್ಠ ಮಿತಿಯಲ್ಲಿ
ವಾಸಿಸುತ ವ್ಯವಹರಣೆ ಸಕಲವನು ಗೈಯ್ಯುವನು ॥೧೪೪೯॥

ಪಂಚೇಂದ್ರಿಯಂಗಳಲಿ ಮನಸಿನಾ ಕಾರಣದಿ
ಶಬ್ದ ರಸ ರೂಪಗಳ ಸ್ಪರ್ಶ ಗಂಧಾದಿಗಳ
ಸುಖ ದುಃಖವೆಲ್ಲವನು ದೇಹವಿದು ಭೋಗಿಪುದು
ಒಳಗಿರುವ ಆತ್ಮವದು ನಿರ್ಲಿಪ್ತವಿರುತಿಹುದು ॥೧೪೫೦॥

ರಾಗಗಳು ದ್ವೇಷಗಳು ಶೀತೋಷ್ಣ ಸುಖ ದುಃಖ
ದ್ವಂದ್ವಗಳು ಆತ್ಮಂಗೆ ಎಂದಿಗೂ ಸೋಂಕದಿವೆ
ನಿರ್ಮಲನು ಶುದ್ಧನಿಹ ನಿರ್ದ್ವಂದ್ವ ನಿತ್ಯನಿಹ
ಆತ್ಮನೀ ಆನಂದ ರೂಪನಿಹ ಎಂದಿಹನು ॥೧೪೫೧॥

ಜೀವಾತ್ಮ ಪರಮಾತ್ಮ ಎಂಬೆರಡು ಪಕ್ಷಿಗಳು
ದೇಹದಲಿ ವೃಕ್ಷವನು ಆಶ್ರಯಿಸಿ ಕುಳಿತಿಹವು
ಜೀವಾತ್ಮ ಪಕ್ಷಿಯದು ಸುಖದುಃಖ ಭೋಗಿಪುದು
ಪರಮಾತ್ಮ ಪಕ್ಷಿಯದು ಸುಮ್ಮನೇ ನೋಡುವುದು ॥೧೪೫೨॥

ಧರ್ಮಜನೆ ಮರಣವನು ಅಪ್ಪುತಿರೆ ದೇಹವಿದು
ಅಗ್ನಿಯಲಿ ಬೀಳುತಲಿ ಭಸ್ಮವದು ಆಗುವದು
ಒಳಗಿರುವ ಆತ್ಮವದು ಆವುದನು ಸೇರುವುದು
ಎಂಬುದನು ಪೇಳುವುದು ಎಂದಿಹನು ಅಜಗರನು ॥೧೪೫೩॥

ಪನ್ನಗನೆ ಕೇಳುವುದು ಮಾನವರು ಪ್ರಾಣಿಗಳು
ತಾವುಗಳು ಗೈದಿರುವ ಪಾಪಗಳ ಪುಣ್ಯಗಳ
ಫಲಗಳಿಗೆ ಅನುಗುಣದಿ ಜನ್ಮಗಳ ಪಡೆಯುತಲಿ
ಜನನಗಳ ಮರಣಗಳ ಚಕ್ರದಲಿ ಸುಳಿಯುವರು

ಪರಬ್ರಹ್ಮ ಸೃಜಿಸಿರುವ ಸಕಲಮೀ ವಿಶ್ವವನು
ತನ್ನೊಳಿಹ ಪರಬ್ರಹ್ಮ ಒಂದೆ ಇಹುದೆನ್ನುತಲಿ
ಸಕಲವೂ ಬ್ರಹ್ಮನಿಗೆ ಅರ್ಪಿತವು ಎನ್ನುತಲಿ
ಕರ್ಮಗಳ ಗೈಯ್ಯುವವ ಮುಕ್ತಿಯನು ಪಡೆಯುವನು

ಪರ್ವತದ ಶಿಖರದಲಿ ಸಾಗರದ ತಳದಲ್ಲಿ
ಸಕಲಮೀ ವಿಶ್ವವವನು ವ್ಯಾಪಿಸಿಹ ಬ್ರಹ್ಮನನು
ಹೃದಯಸ್ಥ ಆತ್ಮನಲಿ ನೆನೆಯುತಲಿ ಧ್ಯಾನದಲಿ
ಬ್ರಹ್ಮಾತ್ಮ ಐಕ್ಯವನು ಹೊಂದುವುದು ಎಂದಿಹನು

ಧರ್ಮಜನೆ ಬ್ರಹ್ಮಾತ್ಮ ವಿದ್ಯೆಯನು ಅರುಹುತಲಿ
ಎನ್ನಯಾ ಸಂಶಯಗಳೆಲ್ಲವನು ಕಳೆದಿಯೀ
ಬ್ರಹ್ಮಬಲ ಕ್ಷಾತ್ರಬಲ ಎರಡರಲಿ ಶ್ರೇಷ್ಠತರ
ಆವುದಿದೆ ಪೇಳುವುದು ಎಂದಿಹನು ಪನ್ನಗನು

ಜಗದೊಳಗೆ ಬ್ರಹ್ಮಬಲ ಕ್ಷಾತ್ರಬಲಕಿಂತಲೂ
ಶ್ರೇಷ್ಠತರ ಶ್ರೇಯತರ ಶೌರ್ಯತರ ಉತ್ತಮವು
ಮೂಜಗವ ಜಯಿಸುವಾ ಕ್ಷಾತ್ರ ಬಲಕಿಂತಲೂ
ಬ್ರಹ್ಮಬಲ ಬಲವೆ ಬಲ ಎಂದಿಹನು ಧರ್ಮಜನು ॥೧೪೫೮॥

ಮುನ್ನಿನಲಿ ಕೌಶಿಕನು ಕ್ಷಾತ್ರದಾ ಶೌರ್ಯದಲಿ
ಬ್ರಹ್ಮರ್ಷಿ ವಸಿಷ್ಠನನು ಕೆಣಕುತಲಿ ಸೋಲುತಲಿ
ಬ್ರಹ್ಮತೇಜೋ ಬಲಂ ಬಲಂ ಎನ್ನುತಲಿ ತಪಗೈದು
ಬ್ರಹ್ಮರ್ಷಿ ಪದವಿಯನು ಪಡೆದಿಹನು ಎಂದಿಹನು ॥೧೪೫೯॥

ಅಹುದಹುದು ಧರ್ಮಜನೆ ಬ್ರಹ್ಮವಿದ ವಿಪ್ರರನು
ಋಷಿವರರ ಸೇವಿಸುತ ನೀ ಧನ್ಯನಾಗಿರುವೆ
ನಾ ಪಾಪಿ ವಿಪ್ರರನು ಹಿಂಸಿಸುತ ಶಾಪದಲಿ
ಈ ಪರಿಯ ಸರ್ಪದಾ ಜನ್ಮವನು ತಳೆದಿಹನು ॥೧೪೬೦॥

ಮುನ್ನಿನಲಿ ಘನಮಹಿಮ ಶ್ರೇಷ್ಠರಾ ಋಷಿವರರ
ಹಿಂಸೆಯನು ಗೈಯ್ಯುತಿರೆ ಕೋಪದಲಿ ತಾಪದಲಿ
ಸರ್ಪದಾ ಜನ್ಮವನು ತಾಳುತಲಿ ಭೋಗಿಪುದು
ಎನ್ನುತಲಿ ಘೋರತರ ಶಾಪವನು ಈಯುತಿರೆ ॥೧೪೬೧॥

ಅಜಗರನ ಜನ್ಮವನು ತಾಳುತಲಿ ಬಿದ್ದಿಹೆನು
ಎನ್ನುತಲಿ ನುಡಿಯುತಿರೆ ಧರ್ಮಜನು ಕೌತುಕದಿ
ಫಣಿಪತಿಯೆ ನೀನಾರು ನಿನ್ನಯಾ ವೃತ್ತಾಂತ
ಅರುಹುವುದು ವಿಶದದಲಿ ಎಂದಿಹನು ಧರ್ಮಜನು ॥೧೪೬೨॥

ಧರ್ಮಸುತ ಕೇಳುವುದು ಲೋಕದಲಿ ಖ್ಯಾತಮಿಹ
ಸೋಮಕುಲದರಸುಗಳ ದಿವ್ಯ ಪಾರಂಪರೆಯು
ಪೂರೂರವ ನೃಪವರನ ತನಯನಾ ಆಯುವಿನ
ಉದರದಲಿ ಜನಿಸಿರುವ ನಹುಷನಿಹೆನೆಂದ ॥೧೪೬೩॥

ನಾ ನಿಮಗೆ ಪೂರ್ವಜನು ನೀವೆಮಗೆ ಅನ್ಯರೇ
ನೀವೆಮ್ಮ ವಂಶದಲಿ ಜನಿಸಿರುವ ಬಂಧುಗಳು
ನಾಗೈದ ಪಾಪದಾ ಫಲವನ್ನು ಭೋಗಿಪೆನು
ಎನ್ನಯಾ ವೃತ್ತಾಂತವರುಹುವೆನು ಕೇಳೆಂದ ॥೧೪೬೪॥

ಶತಯಜ್ಞ ಗೈಯ್ಯುತಲಿ ಇಂದ್ರಪದ ಪಡೆಯುತಲಿ
ಸ್ವರ್ಗದಾ ಸಿಂಹಾಸನೇರುತಲಿ ಸೊಕ್ಕಿನಲಿ
ಗಂಧರ್ವ ಯಕ್ಷರನು ಸುರರುಗಳನೆಲ್ಲರನು
ಹಿಂಸಿಸುತ ಮದದಿಂದ ಮೆರೆಯುತಲಿ ಇರ್ದಿಹೆನು ॥೧೪೬೫॥

ವರರಂಭೆ ಊರ್ವಶಿಯು ಮೇನಕೆ ತಿಲೋತ್ತಮೆಯು
ಘೃತಾಚಿ ಸುಕೇಶಿ ಮೊದಲಾದ ಅಪ್ರತಿಮ
ಅಪ್ಸರೆಯರಗಣಿತರು ಲಕ್ಷೋಪಲಕ್ಷದಾ
ಸುಂದರಿಯರೆನ್ನಯಾ ದಾಸಿಯರು ಆಗಿಹರು ॥೧೪೬೬॥

ಅರಮನೆಯೊಳೀ ಪರಿಯ ಅಪರಿಮಿತ ಲಾವಣ್ಯ
ಚೆಲುವಿನಲಿ ಶೋಭಿಸುವ ಲಲನೆಯರು ಇರ್ದೊಡೆಯು
ವಿನಾಶದ ಕಾಲದಲಿ ವಿಪರೀತ ಬುದ್ಧಿಯದು
ಎನುವಂತೆ ಇಂದ್ರನಾ ಸತಿಯನ್ನು ಮೋಹಿಸಿದೆ ॥೧೪೬೭॥

ಶಚಿದೇವಿ ಸಾಧ್ವಿಯಾ ಸೌಂದರ್ಯ ರೂಪಕ್ಕೆ
ಮರುಳಾಗಿ ಮನಸೋಲ್ದು ಕಾಮದಾ ಚಿತ್ತದಲಿ
ಚಿತ್ತವದು ಚಂಚಲಿಸಿ ಮತಿಭ್ರಂಶವಾಗುತಲಿ
ಸಪ್ತರ್ಷಿ ಶ್ರೇಷ್ಠರನು ಕರೆಸುತಲಿ ನುಡಿದಿಹೆನು ॥೧೪೬೮॥

ಸ್ವರ್ಣದಾ ಪಲ್ಲಕ್ಕಿಯೊಳಗೆನ್ನ ಕೂಡಿಸುತ
ಹೆಗಲಿನಲಿ ಧರಿಸುತಲಿ ಶಚಿದೇವಿಯರ ಮನೆಗೆ
ಶೀಘ್ರದಲಿ ತೀವ್ರದಲಿ ಕೊಂಡೊಯ್ಯುದೆನ್ನುತಲಿ
ಮತ್ತದಲಿ ಜಡಿಯುತಲಿ ಕಟ್ಟಾಜ್ಞೆ ಇತ್ತಿಹೆನು ॥೧೪೬೯॥

ಸಪ್ತರ್ಷಿ ಋಷಿವರರು ಪಲ್ಲಕ್ಕಿಯೊಳಗೆನ್ನ
ಕೊಳ್ಳುತಲಿ ಮಂದದಲಿ ಸಾಗುತಿರೆ ಕೋಪದಲಿ
ಕಾಮದಾ ತಾಪವನು ತಾಳದಲೆ ದರ್ಪದಲಿ
ಸರ್ಪ ಸರ್ಪೆನ್ನುತಲಿ ಪಾದದಿಂದೊದೆಯುತಲಿ ॥೧೪೭೦॥

ಗರ್ಜಿಸುತ ನುಡಿಯುತಿರೆ ಎನ್ನಯಾ ಪಾದವದು
ಘನಮಹಿಮಾಗಸ್ತ್ಯದಾ ಮಸ್ತಕವ ತಾಗುತಿರೆ
ಕೋಪದಲಿ ಸರ್ಪ ನೀನಾಗುತಲಿ ಭೂಮಿಯೊಳು
ಬೀಳುವುದು ಎನ್ನುತಲಿ ಶಾಪವನು ಇತ್ತಿಹರು ॥೧೪೭೧॥

ಎನ್ನಯಾ ತಪ್ಪನ್ನು ಮನ್ನಿಪುದು ಎನ್ನುತಲಿ
ಮುನಿವರನ ಚರಣಕ್ಕೆ ಎರಗುತಲಿ ಪ್ರಾರ್ಥಿಸಲು
ಧರ್ಮಜನು ಧರ್ಮದ ರಹಸ್ಯವನು ತಿಳುಹುತಿರೆ
ಶಾಪವದು ತೊಲಗುವದು ಎನ್ನುತಲಿ ನುಡಿದಿಹರು ॥೧೪೭೨॥

ನಿನ್ನಯಾ ದರುಶನದಿ ಧರ್ಮದಾ ಶ್ರವಣದಲಿ
ಎನ್ನಯಾ ಶಾಪದಾ ಬಂಧನವು ಕಳಚಿಹುದು
ಎನ್ನುತಲಿ ಸರ್ಪದಾ ರೂಪವನು ತ್ಯಜಿಸುತಲಿ
ಹೊಳೆಹೊಳೆವ ದಿವ್ಯದಾ ಸುರರೂಪ ತಳೆದಿಹನು ॥೧೪೭೩॥

ಧರ್ಮಜನೆ ನಿನ್ನಯಾ ತಮ್ಮನನು ಕೊಳ್ಳುವುದು
ಚಿಂತೆಯನು ಮಾಡದಿರು ಸುಕ್ಷೇಮ ಕುಶಲನಿಹ
ಎನ್ನುತಲಿ ಭೀಮನನು ಧರ್ಮಜನಿಗೊಪ್ಪಿಸುತ
ಮಂಗಲವು ನಿಮಗಾಗಲೆನ್ನುತಲಿ ಹರಸುತಲಿ ॥೧೪೭೪॥

ಮಿರುಗುತಿಹ ಕಾಂಚನ ವಿಮಾನವನುಏರುತಲಿ
ಸ್ವರ್ಗಕ್ಕೆ ತೆರಳುತಿರೆ ಧರ್ಮಜನು ಪ್ರೇಮದಲಿ
ಪ್ರೀತಿಯಾ ರಸಬುಗ್ಗೆ ಚಿಮ್ಮುತಿರೆ ಭೀಮನನು
ಗಾಢದಲಿ ಅಪ್ಪುತಲಿ ಹರ್ಷಾಶ್ರು ಸುರಿಸಿಹನು ॥೧೪೭೫॥

ಹೇ ತಮ್ಮ ಕಲಿಭೀಮ ಸುಮ್ಮನೇ ನವೆಯದಿರು
ಎಮ್ಮಯಾ ಪೂರ್ವಜಗೆ ಮಾನ್ಯನಿಹ ಶ್ರೇಷ್ಠಂಗೆ
ಆ ನಹುಷ ನೃಪನಿಂಗೆ ಈ ಪರಿಯ ಕಷ್ಟವದು
ಬಂದಿರಲು ಎಮ್ಮಯಾ ಪಾಡೇನು ಎಂದಿಹನು ॥೧೪೭೬॥

ಹೇ ಭೀಮ ನಿನ್ನಯಾ ಸಾಮರ್ಥ್ಯ ಶಕ್ತಿಯಲಿ
ನಹುಷನಾ ಶಾಪವದು ಕಷ್ಟವದು ಹಿಂಗಿದುದು
ನಿನ್ನಯಾ ಶೌರ್ಯಕ್ಕೆ ಎಂದಿಗೂ ಕುಂದಿಲ್ಲ
ಎನ್ನುತಲಿ ಮರುತಜನ ಸಾಂತ್ವನವಗೋಳಿಸುತಲಿ ॥೧೪೭೭॥

ಸಕಲರಾ ಋಷಿವರರ ಸಹಿತದಲಿ ಧರ್ಮಜನು
ಆಶ್ರಮಕೆ ಐತಂದು ಘಟಸರ್ಪ ಭೀಮನನು
ಬಂಧಿಸಿದ ವಿಷಯವನು ವಿಶದದಲಿ ವಿವರಿಸಲು
ದ್ರೌಪದಿಯು ದುಗುಡದಲಿ ನೋಯುತಲಿ ನೊಂದಿಹಳು ॥೧೪೭೮॥

ಹೇ ಸತಿಯ ದ್ರೌಪದಿಯೆ ಭೀಮಾರ್ಜುನಾದಿಗಳೆ
ಈ ಪರಿಯ ಸಾವಿರದ ಕಷ್ಟಗಳು ಮುತ್ತಿದೊಡೆ
ದ್ವಾರಕಾಧೀಶನಾ ಕೃಷ್ಣನಾ ಕರುಣೆಯಲಿ
ಸಕಲವೂ ತೊಲಗುವವು ಎಂದಿಹನು ಧರ್ಮಜನು ॥೧೪೭೯॥

ಜನಮೇಜಯ ನೃಪವರನೆ ಕೇಳುವುದು ಬಳಿಕಿನಲಿ
ಘೋರತರ ಜಲಧಾರೆ ಅಬ್ಬರದ ಗುಡುಗುಗಳ
ಮಳೆಗಾಲ ಕಳೆಯುತಿರೆ ಸಂತಸವ ನೀಯುತಿಹ
ಆಹ್ಲಾದಕರವೆನಿಪ ಶರದೃತುವು ಬಂದಿಹುದು ॥೧೪೮೦॥

ನೀಲಿಯಾ ಆಗಸದಿ ಆರಕ್ತ ವರ್ಣದಲಿ
ಕೋಟಿಗಳ ಕಿರಣದಲಿ ರವಿತೊಳಗಿ ಬೆಳಗಿಹನು
ಕೊಳಗಳಲಿ ನಳನಳಿಪ ನಳಿನಗಳು ಅರಳುತಲಿ
ಸೊಗಯಿಸುತ ಸೌರಭವ ದೆಸೆದೆಸೆಗೆ ಸೂಸಿಹವು ॥೧೪೮೧॥

ದುಂಬಿಗಳು ಕಮಲಗಳ ಗಂಧವನು ಸವಿಯುತಲಿ
ಸುಮಧುರದ ಝೇಂಕಾರ ರವದಲ್ಲಿ ಮೊರೆಯುತಿವೆ
ಕುರಪಿರದ ಹಂಸಗಳ ವಿಹಗತತಿ ಉಲಿಯುತಿವೆ
ಮನತಣಿಪ ಸುಂದರ ಶರದೃತುವು ಬಂದಿಹುದು ॥೧೪೮೨॥

ಈ ವನದೊಳಿರುತಿರುವ ವೃಕ್ಷಲತೆ ಎಲ್ಲವೂ
ಫಲಗಳನು ಈಯದಲೆ ಬರಡಾಗಿ ನಿಂತಿಹವು
ಎಮ್ಮಯಾ ಪರಿವಾರದಾಹಾರ ಕೋಸುಗವೆ
ಬೇರೆಯಾ ವನವನ್ನು ಆಶ್ರಯಿಪುದೆನ್ನುತಲಿ ॥೧೪೮೩॥

ಯೋಚಿಸುತ ಧರ್ಮಜನು ಮುನ್ನಿನಲಿ ವಾಸಿಸಿದ
ಕಾಮ್ಯಕದ ವನವೆಮಗೆ ಲೇಸೆಂದು ಬಗೆಯುತಲಿ
ಪಯಣದ ಸಾಗುತಲಿ ಕಾಮ್ಯಕದ ಕಾನನಕೆ
ಐತಂದು ಸಂತಸದಿ ವಾಸ್ತವ್ಯಗೈದಿಹನು ॥೧೪೮೪॥

**ಶ್ರೀಕೃಷ್ಣ ಕಾಮ್ಯಕದ ಕಾನನಕೆ ಐತಂದು ।**
**ಪಾಂಡವರ ಸಾಂತ್ವನವಗೋಳಿಸಿದನು ಕರುಣೆಯಲಿ ॥**

ಶುಭವನ್ನು ಸೂಚಿಪವೊ ಎಂಬಂತೆ ಧರ್ಮಜಗೆ
ಬಲಗಣ್ಣು ಅಲುಗಿಹುದು ಎಡಭುಜವು ಸ್ಫುರಿಸಿದುದು
ಶುಕಪಿಕಗಳುಲಿದಿಹವು ನವಿಲುಗಳು ಕುಣಿದಿಹವು
ಸುತ್ತಲೂ ಮಂಗಲನ ಶುಭಶಕುನವಾಗಿಹವು ॥೧೪೮೫॥

ಅನಿತರಲಿ ಓರ್ವನಾ ಸೇವಕನು ಐತಂದು
ಧರ್ಮಸುತಗೆರಗುತಲಿ ನಿಮ್ಮನ್ನು ಕಾಣಲಿಕೆ
ಶ್ರೀಕೃಷ್ಣ ಬರುತಿಹನು ಎನ್ನುತಲಿ ನುಡಿಯುತಿರೆ
ಧರ್ಮಜನು ಪರಿವಾರ ಸಹಿತದಲಿ ಹೊರಟಿಹನು ॥೧೪೮೬॥

ಸಾವಿರದ ವರುಷಗಳ ತಪಸಿಂಗೆ ಕಾಣದಿಹ
ಶ್ರುತಿಸ್ಮೃತಿಗೆ ನಿಲುಕದಿಹ ದೇವಾಧಿದೇವನೇ
ಎನ್ನನ್ನು ಕಾಣಲಿಕೆ ತಾನೆಯೇ ಬರುತಿಹನು
ಎನ್ನುತಲಿ ಧರ್ಮಜನು ತನುಪುಳಕಗೊಂಡಿಹನು ॥೧೪೮೭॥

ಮುರಹರನ ಬಳಿಯಲ್ಲಿ ಐತಂದು ಧರ್ಮಜನು
ಸೋದರರ ಸಹಿತದಲಿ ಸಾಷ್ಟಾಂಗ ಗೈಯುತಿರೆ
ಒಬ್ಬೊಬ್ಬರೊಬ್ಬರರನಪ್ಪಿದನು ಹರುಷದಲಿ
ಕೃಷ್ಣನಾ ಪಾಂಡವರ ಪ್ರೇಮವದು ಎಂತಹುದೊ ॥೧೪೮೮॥

ಎಳಮಗುವು ತಂದೆಯಾ ಬಳಿಯಲ್ಲಿ ಧಾವಿಸುತ
ಬರುವಂತೆ ದ್ರೌಪದಿಯು ಕಾತರದಿ ಧಾವಿಸುತ
ಐತಂದು ಕೃಷ್ಣನಾ ಚರಣದಲಿ ಎರಗುತಲಿ
ಹರ್ಷಾಶ್ರು ಪೂರದಲಿ ಪಾದಗಳ ತೊಳೆದಿಹಳು ॥೧೪೮೯॥

ಇದುಗಂಗೆ ಜನಿಸಿರುವ ಪಾವನದ ಪಾದವಿದು
ಬಲಿಯನ್ನು ತಳಕಿಕ್ಕಿ ಮೆಟ್ಟಿರುವ ಪಾದವಿದು
ಇದು ಎನ್ನಮಾನವನು ಕಾಯ್ದಿರುವ ಪಾದವಿದು
ಎನ್ನುತಲಿ ದೃಗುಜಲದಿ ಚರಣಗಳ ತೊಳೆದಿಹಳು ॥೧೪೯೦॥

ಏಳಿನ್ನ ತಂಗಿಯೇ ಸೋದರಿಯೆ ದ್ರೌಪದಿಯೆ
ನಿನ್ನಯಾ ಮನದೊಳಿಹ ದುಗುಡವನು ನಾ ಬಲ್ಲೆ
ಚಿಂತೆಯನು ಮಾಡದಿರು ಎನ್ನುತಲಿ ಸೆರಗಿನಲಿ
ಕಂಬನಿಯನೊರೆಸುತಲಿ ಸಂತ್ವನವ ಗೈದಿಹನು ||೧೪೯೧||

ಶ್ರೀಕೃಷ್ಣ ನೊಲವಿನಲಿ ಆದರದಿ ಸತ್ಕರಿಸಿ
ಪೂಜೆಯನು ಗೈಯುತ ಸಾಷ್ಟಾಂಗ ನಮಿಸುತಲಿ
ನಿಮ್ಮಯೂ ದರುಶನದಿ ನಾವುಗಳು ಕೃತಾರ್ಥರು
ಧನ್ಯರುಗಳಾಗಿಹೆವು ಎಂದಿಹನು ಧರ್ಮಜನು ||೧೪೯೨||

ವನವನಗಳಲೆಯುತಲಿ ಕಷ್ಟದಲಿ ಬಳಲಿದೆವು
ಫಲಗುಣನು ಉಗ್ರತಪ ಗೈಯ್ಯುತಲಿ ಪರಶಿವನ
ಕರುಣೆಯಲಿ ವೈರಿಗಳ ಸಕಲರನು ಸಂಹರಿಪ
ದಿವ್ಯಶರ ಪಾಶುಪತ ಪಡೆದಿಹನು ಎಂದಿಹನು ||೧೪೯೩||

ಇಂದ್ರನಾ ಇಚ್ಛೆಯಲಿ ಸ್ವರ್ಗಕ್ಕೆ ತೆರಳುತಲಿ
ನಿವಾತಕವಚರನು ರಕ್ಕಸರ ವಧಿಸುತಿರೆ
ದೇವೇಂದ್ರ ಯಮವರುಣ ಪಾವಕನು ಕುಬೇರನು
ದಿವ್ಯಾಸ್ತ್ರವಗಣಿತವ ಇತ್ತಿಹರು ಎಂದಿಹನು ||೧೪೯೪||

ವನದೊಳಗೆ ಅಜಗರನು ಮರುತಜನ ಬಂಧಿಸುತ
ಬಿಗಿಯುತಲಿ ಹಿಂಸೆಯನು ಕಷ್ಟವನು ಈಯುತಿರೆ
ಧರ್ಮದಾ ಶ್ರವಣದಲಿ ಶಾಪವದು ಹಿಂಗುತಲಿ
ನಹುಷನಾರೂಪವನು ತಳೆಯುತಲಿ ತೆರಳಿದನು ||೧೪೯೫||

ಈ ಪರಿಯ ನೂರಾರು ಕಷ್ಟಗಳ ಸಹಿಸೆದವು
ನಿನ್ನಯಾ ಕರುಣೆಯಲಿ ಪರಿಹಾರವಾಗಿಹವು
ನಿನ್ನನ್ನು ಎಂದಿಗೂ ನಂಬಿಹೆವು ನೆಚ್ಚಿಹೆವು
ರಕ್ಷಿಸುವ ಭಾರವದು ನಿನ್ನದಿದೆ ಎಂದಿಹನು ||೧೪೯೬||

ಧರ್ಮಜನೆ ನೀವುಗಳು ಎಂದಿಗೂ ಸತ್ಯದಲಿ
ಧರ್ಮದಲಿ ಶೀಲದಲಿ ತಪ್ಪದೆಯೆ ನಡೆವವರು
ವನವಾಸದವಧಿಯದು ತೀರಲು ಸಮೀಪಿಸಿದೆ
ಶುಭಸಮಯ ಬೇಗನೇ ಬರಲಿಹುದು ಎಂದಿಹನು ||೧೪೯೭||

ಪರಶಿವನ ಕರುಣೆಯಲಿ ಪಾಶುಪತ ಪಡೆದಿಹಿರಿ
ನೆರವಿಂಗೆ ಎಮ್ಮಯ ಸುದರ್ಶನ ಚಕ್ರವಿದೆ
ಯುದ್ಧದಲಿ ಎರಡುಗಳು ಶತ್ರುಗಳ ಕೋಟಿಯನು
ನಿರ್ನಾಮಗೈಯ್ಯುವವು ಎಂದಿಹನು ಶ್ರೀಕೃಷ್ಣ ||೧೪೯೮||

ಕೌರವರ ಕುಲವನ್ನು ನಿರ್ಮೂಲ ಗೈಯ್ಯುತಲಿ
ಬೇಗನೆಯೆ ಹಸ್ತಿನೆಯ ಸಿಂಹಾಸನೇರುತಲಿ
ಪಟ್ಟಾಭಿಷೇಕದಲಿ ಚಕ್ರಾಧಿಪತಿಯಾಗಿ
ನೀ ಮೆರೆವೆ ಎಂದಿಹನು ಮುರಹರನು ಹರಸುತಲಿ ||೧೪೯೯||

**ಅಧ್ಯಾತ್ಮ ಜ್ಞಾನದಲಿ ಧರ್ಮಜನ ಮುಕ್ತದೊಳಿಹ ।**
**ಅಜ್ಞಾನಕತ್ತಲೆಯ ಕಳೆದಿಹನು ಮಾರ್ಕಂಡೇಯ ॥**

ಆ ಸಮಯ ನಾರದರು ಮಾರ್ಕಂಡೇಯ ಮುನಿವರರು
ನಭದಿಂದ ಇಳಿತಂದು ಪಾಂಡವರ ಮಧ್ಯದಲಿ
ಶೋಭಿಸುತ ಕುಳಿತಿರ್ದ ಮುರಹರನ ಕಾಣುತಲಿ
ಸಂತಸದಿ ಮೈಯಿಕ್ಕಿ ಸಾಷ್ಟಾಂಗವೆರಗಿದರು ||೧೫೦೦||

ಇವನಲೇ ಪದಿನಾಲ್ಕು ಲೋಕಗಳ ರಕ್ಷಿಸುವ
ಶ್ರೀಮನ್ನರಯಣನು ದೇವಾಧಿದೇವನಿಹ
ತನ್ನನ್ನು ನಂಬಿರುವ ಪಾಂಡವರ ಸಲುಹುವಾ
ಕರುಣೆಯದು ಎಂತುಟವೊ ಎಂದಿಹರು ಮುನಿವರರು ||೧೫೦೧||

ಧರ್ಮಜನೆ ಹದಿನಾರ ವಯಸಿನಲಿ ಮೃತ್ಯುವನು
ಜಯಿಸಿರುವ ಘನಮುನಿಯು ಮಾರ್ಕಂಡೇಯನೀತನಿಹ
ಮೃತ್ಯುಂಜಯನ ಕರಣೆಯಲಿ ಮೃತ್ಯುವನು ಜಯಿಸುತಲಿ
ಚಿರಜೀವಿಯಾಗಿಹನು ಎಂದಿಹನು ಮುರಹರನು ||೧೫೦೨||

ವೇದಗಳ ಶಾಸ್ತ್ರಗಳ ಧರ್ಮದ ರಹಸ್ಯವನು
ಅರಿತಿರುವ ಪರಿಣತನು ಘನಜ್ಞಾನಿ ಎನಿಸಿಹನು
ಎನ್ನುತಿರೆ ಶ್ರೀಕೃಷ್ಣ ಧರ್ಮಜನು ಮುನಿವರರ
ಅರ್ಘ್ಯಪಾದ್ಯಾದಿಗಳ ನೀಯುತಲಿ ಪೂಜಿಸಿದ ||೧೫೦೩||

ಮಾರ್ಕಂಡೇಯ ಮುನಿವರರೆ ಅತಿಗೂಢವಾಗಿರುವ
ವೇದಾಂತ ತತ್ವಗಳ ಸೃಷ್ಟಿಸ್ಥಿತಿ ಲಯಾದಿಗಳ
ಪಾಪಗಳ ಪುಣ್ಯಗಳ ಧರ್ಮಗಳ ಮೋಕ್ಷಗಳ
ರಹಸ್ಯವನು ತಿಳುಹುವುದು ಎಂದಿಹನು ಧರ್ಮಜನು ||೧೫೦೪||

ಕೇಳುವುದು ಧರ್ಮಜನೆ ಜಗದಾದಿ ಸೃಷ್ಟಿಯಲಿ
ಜಗವೆಲ್ಲ ಜಲಮಯವು ಬರಿಜಲವೆ ಇರುತಿರಲು
ಗಾಢಾಂಧಕಾರವದು ಸುತ್ತಲೂ ಪಸರಿರಲು
ಚೈತನ್ಯರೂಪದಾ ಪರಬ್ರಹ್ಮ ಬೆಳಗಿಹುದು ||೧೫೦೫||

ಸುತ್ತಲೂ ಸ್ತಬ್ಧತೆಯು ಶಾಂತತೆಯ ನೀರವದಿ
ಏಕಮೇವಾದ್ವಿತಿಯನಿಹ ನಿತ್ಯನು ಸನಾತನನು
ಏಕೈಕನಿರುತಿರ್ಪ ಆ ಪರಾತ್ಪರ ಬ್ರಹ್ಮನು
ತನ್ನಯಾ ಲೀಲೆಯಲಿ ಸೃಷ್ಟಿಯನು ಸೃಜಿಸಿದನು ||೧೫೦೬||

ಸೂರ್ಯ ಚಂದ್ರಾದಿಗಳ ನವಗ್ರಹದ ಮಾಲೆಗಳ
ಲಕ್ಷೋಪಲಕ್ಷಗಳ ನಕ್ಷತ್ರ ಮಂಡಲವ
ಭೂವ್ಯೋಮ ವಾಯುವನು ಅಗ್ನಿಯನು ವರುಣನನ
ತೇಜವದು ಆ ಪಂಚಭೂತಗಳನು ಸೃಜಿಸಿದನು ॥೧೫೦೭॥

ತನ್ನಯ ವಿನೋದದಲಿ ಆಟವನು ಆಡಲಿಕೆ
ಗಿರಿಗಳನು ಬೆಟ್ಟಗಳ ಪರ್ವತವ ಮೇರುವನು
ಸಾಗರವ ಸಪ್ತಗಳ ನದಿತರುವನಗಣಿತದ
ಹದಿನಾಲ್ಕು ಲೋಕಗಳ ಸೃಷ್ಟಿಯನು ಗೈದಿಹನು ॥೧೫೦೮॥

ರಜೋಗುಣದ ರೂಪದಾ ಬ್ರಹ್ಮನನು ಸೃಜಿಸುತಲಿ
ಪ್ರಜೆಗಳಾ ಉತ್ಪತ್ತಿ ಕಾರ್ಯವನು ನಿಯಮಿಸಿದ
ಸತ್ವಗುಣ ಪೂರಿತನ ವಿಷ್ಣುವನು ಸೃಷ್ಟಿಸುತ
ಲೋಕಗಳ ರಕ್ಷಿಸುವ ಭಾರವನು ವಹಿಸಿದನು ॥೧೫೦೯॥

ತಮೋಗುಣ ಪೂರಿತನ ರುದ್ರನನು ಸೃಜಿಸುತಲಿ
ಲೋಕಗಳ ಲಯಗೈವ ಕಾರ್ಯವನು ಇತ್ತಿಹನು
ಅಷ್ಟದಿಕ್ಪಾಲಕರ ಅಷ್ಟವಸು ಸೃಜಿಸುತಲಿ
ಲೋಕಗಳ ಪಾಲಿಸುವ ಭಾರವನು ವಹಿಸಿದನು ॥೧೫೧೦॥

ಪರಬ್ರಹ್ಮನಾಜ್ಞೆಯಲಿ ರವಿಚಂದ್ರ ಬೆಳಗುವರು
ಮೇಘಗಳು ಮಳೆಗರೆದು ಬೆಳೆಸಸ್ಯ ಬೆಳೆಯುವವು
ಅಯನಗಳು ವರ್ಷಗಳು ಕಲ್ಪಗಳು ಉರುಳುವವು
ಜೀವದಾ ರಾಶಿಗಳು ಬೆಳೆಯುವವು ಅಳಿಯುವವು ॥೧೫೧೧॥

ಆದಿಯಲಿ ಜಲರಾಶಿ ಮಧ್ಯದಲಿ ಆಲದಲಿ
ಶ್ರೀ ವಿಷ್ಣು ಶಿಶುವಿನಾ ರೂಪದಲಿ ಮಲಗಿರಲು
ಪರಬ್ರಹ್ಮ ನೋಡುತಲಿ ಬೆರಗಾಗಿ ಕೌತುಕದಿ
ನೀನಾರು ಎನ್ನುತಿರೆ ನರಯಣನು ನುಡಿದಿಹನು ॥೧೫೧೨॥

ಎನ್ನಯಾ ಉದರದಲಿ ಹದಿನಾಲ್ಕು ಲೋಕಗಳ
ಧರಿಸುತಲಿ ಪೊರೆಯುತಿಹ ಶ್ರೀ ವಿಷ್ಣು ನಾನಿಹೆನು
ಎನ್ನುತಿರೆ ಶ್ರೀವಿಷ್ಣು ಇದು ಮಿಥ್ಯವಿರುತಿಹುದು
ಈರೇಳು ಭುವನಗಳ ನೀನೆಂತು ಧರಿಸಿರುವೆ ॥೧೫೧೩॥

ಪರಿಕಿಸುವೆ ಎನ್ನುತಲಿ ಪರಬ್ರಹ್ಮ ನರಯಣನ
ಗಂಟಲೊಳು ಇಳಿಯುತಲಿ ಉದರವ ಪ್ರವೇಶಿಸುತ
ತನ್ನಯಾ ಸಹಿತದಲಿ ಹದಿನಾಲ್ಕು ಲೋಕಗಳ
ನರಯಣನ ಉದರದಲಿ ಕಂಡಿಹನು ಚಕಿತದಲಿ ॥೧೫೧೪॥

ಸೂರ್ಯ ಚಂದ್ರಾದಿಗಳ ದ್ವಾದಶಾದಿತ್ಯರನು
ಏಕಾದಶ ರುದ್ರರನು ಅಣಿಮಾದಿ ಅಷ್ಟವಸು
ಭೂವ್ಯೋಮ ಪಾತಾಳ ಸ್ವರ್ಗಗಳ ಲೋಕಗಳ
ಬ್ರಹ್ಮಾಂಡ ಸಕಲವನು ಕಂಡಿಹನು ಬೆರಗಿನಲಿ ॥೧೫೧೫॥

ನೋಡುತಲಿ ಕಂಗಳಿವೆ ಮುಚ್ಚುತಲಿ ಕಳವಳದಿ
ಬಸವಳಿದು ಬೆಂಡಾಗಿ ಹೊರಬರಲು ಯತ್ನಿಸುತಲಿ
ಹೆಣಗಾಡಿ ವೇದಗಳ ಪಠಿಸುತಲಿ ಸ್ತುತಿಸುತಲಿ
ದೈನ್ಯದಲಿ ನರಯಣನ ಪ್ರಾರ್ಥನೆಯ ಗೈಯ್ಯುತಿರೆ ॥೧೫೧೬॥

ನರಯಣನ ನಾಭಿಯನು ಬಗೆಯುತಲಿ ಕಮಲಭವ
ನಾಲ್ಮೊಗದ ಸಹಿತದಲಿ ಮೇಲಕ್ಕೆ ನೆಗೆಯುತಿರೆ
ಹರುಷದಲಿ ನರಯಣನ ಸ್ತುತಿಸುತಲಿ ಅಂದಿನಲಿ
ಕಮಲಭವನೆನಿಸಿದನು ಆ ಬ್ರಹ್ಮದೇವನು ॥೧೫೧೭॥

ಅಂದಿನಲಿ ಜಲರಾಶಿ ಮಧ್ಯದಲಿ ಆಲದಲಿ
ಮಲಗಿರುವ ಮುದ್ದುಶಿಶು ಶ್ರೀಮನ್ನರಯಣನು
ಕೃಷ್ಣನಾ ರೂಪವನು ತಾಳಿರುವ ಈತನಿಹ
ಎನ್ನುತಿರೆ ಸಕಲರೂ ನಮಿಸಿವರು ಭಕುತಿಯಲಿ ॥೧೫೧೮॥

ಬ್ರಹ್ಮನಾ ಮುಖದಿಂದ ದ್ವಿಜರುಗಳು ಜನಿಸಿಹರು
ಭುಜದಿಂದ ವೀರರಾ ಕ್ಷತ್ರಿಯರು ಜನಿಸಿದರು
ತೊಡೆಯಿಂದ ವೈಶ್ಯರರು ಪಾದದಲಿ ಶೂದ್ರರು
ಕೋಟಿಗಳು ಜನಿಸಿಹರು ಬ್ರಹ್ಮನಾ ದೇಹದಲಿ ॥೧೫೧೯॥

ಪಂಚಭೂತಂಗಳೆಸೆಯುತಿಹ ದೇಹಗಳ
ಪ್ರಾಣಿಗಳ ಜೀವಿಗಳ ನರರುಗಳ ಸೃಜಿಸುತಲಿ
ಪಶುಪಕ್ಷಿ ಕ್ರಿಮಿಕೀಟಕಾದಿಗಳ ಮೃಗಗಳಾ
ಎಂಭತ್ತು ನಾಲ್ಕು ಕೋಟಿಗಳ ಜೀವಿಗಳ ॥೧೫೨೦॥

ಸೃಜಿಸುತಲಿ ಸಕಲರಾ ಜೀವಿಗಳ ಹೃದಯದಲಿ
ಅಂಗುಷ್ಠ ಮಿತಿಯಲ್ಲಿ ವ್ಯಾಪಿಸುತ ತಾನೆಯೇ
ಕಾರ್ಯಗಳನೆಲ್ಲವನು ಗೈಯ್ಯುತಲಿ ಕೊನೆಯಲ್ಲಿ
ತನ್ನಲ್ಲಿ ಸಕಲವೂ ಲಯವನ್ನು ಹೊಂದುವುದು ॥೧೫೨೧॥

ಗಿರಿಯಲ್ಲಿ ಪರ್ವತದಿ ನದಿಯಲ್ಲಿ ಸಾಗರದಿ
ಹುಲಿಯಲ್ಲಿ ಕರಡಿಯಲಿ ಪಶುಪಕ್ಷಿ ಪ್ರಾಣಿಯಲಿ
ಜಗದೊಳಗೆ ತೋರುದೀ ಜಂಗಮದಿ ಸ್ಥಾವರದಿ
ಒಳಹೊರಗೆ ವ್ಯಾಪಿಸಿಹ ಪರಬ್ರಹ್ಮ ಪರಾತ್ಪರನು ॥೧೫೨೨॥

ಈ ಜಗವು ಈಶಮಯ ಈಶನಾ ಮನೆಯಿಹುದು
ಈಶನೇ ಜಗವೆಲ್ಲ ಒಳಹೊರಗು ವ್ಯಾಪಿಸಿಹ
ಈಶಗಿಲ್ಲದಾ ವಸ್ತುವದು ಒಂದಿಲ್ಲ
ಎನ್ನೊಳಗೆ ನಿನ್ನೊಳಗೆ ಎಲ್ಲರಲಿ ಈಶನಿಹ ॥೧೫೨೩॥

ಕೋಟಿಗಳವದನಗಳ ಕೋಟಿಗಳ ನಯನಗಳ
ಕೋಟಿಗಳ ಬಾಹುಗಳ ಕೋಟಿಗಳ ಪಾದಗಳ
ವೈರಾಟ ಪುರುಷನೀ ವಿಶ್ವವನು ವ್ಯಾಪಿಸುತ
ಹತ್ತಂಗುಲ ಮೀರುತಲಿ ನಿಂತಿಹನು ಭವ್ಯದಲಿ ॥೧೫೨೪॥

ಆಕಾಶವದನದಲಿ ರವಿಶಶಿಯ ನಯನದಲಿ
ದಶದಿಶೆಯ ಬಾಹುಗಳ ಅಂತರಿಕ್ಷದ ಹೃದಯದಲಿ
ಪಾತಾಳ ಪಾದದಲಿ ಬ್ರಹ್ಮಾಂಡವೆಲ್ಲವನು
ಭವ್ಯಮೀ ವೈರಾಟ ಪುರುಷನವ ವ್ಯಾಪಿಸಿಹ ॥೧೫೨೫॥

ಕಾಮಗಳ ಕ್ರೋಧಗಳ ಮದಮತ್ಸರಾದಿಗಳ
ಷಡ್ವರ್ಗ ರಿಪುಗಳನು ದುಷ್ಟತರ ಶಕ್ತಿಗಳನು
ಶಮದಮೆಯ ಶಾಂತಿಯಾ ಶಿಷ್ಟತರ ಶಕ್ತಿಗಳ
ಸುರಅಸುರ ಶಕ್ತಿಗಳ ದ್ವಂದ್ವಗಳ ಸೃಜಿಸಿದನು ॥೧೫೨೬॥

ಕಾಮಗಳ ಕ್ರೋಧಗಳ ಮೋಹಗಳ ಜಾಲದಲಿ
ಜೀವಿಗಳು ಸಿಲುಕುತಲಿ ದುಷ್ಟತರ ಕಾರ್ಯಗಳ
ಗೈಯುತಲಿ ಘೋರತರ ನರಕವನು ಅನುಭವಿಸಿ
ಜನನಗಳ ಮರಣಗಳ ಚಕ್ರದಲಿ ತೊಳಲುವರು ॥೧೫೨೭॥

ಸುಖ ದುಃಖ ಶೀತೋಷ್ಣ ನೋವುಗಳು ನಲಿವುಗಳು
ಸಕಲವೂ ದೇಹಕ್ಕೆ ಸೋಂಕುವ ವಿಕಾರಗಳು
ಹೃದಯಸ್ಥನಾಗಿರುವ ಚಿದಾನಂದರೂಪದಾ
ಚಿನ್ಮಯನು ಆತ್ಮನವ ನಿರ್ಲೇಪನಿಹನೆಂದ ॥೧೫೨೮॥

ಪಂಚೇಂದ್ರಿಯಂಗಳನು ನಿಗ್ರಹವ ಗೈಯ್ಯುತಲಿ
ವೈರಾಗ್ಯ ಭಾವದಲಿ ಶಾಂತದಾ ಚಿತ್ತದಲಿ
ಮೌನದಲಿ ಧ್ಯಾನದಲಿ ಬ್ರಹ್ಮನನು ನೆನೆಯುತಲಿ
ಜ್ಞಾನಿಗಳು ಮುನಿವರರು ಮುಕ್ತಿಯನು ಪಡೆಯುವರು ॥೧೫೨೯॥

ಪಂಚಭೂತಂಗಳೀ ಜಡದೇಹ ತ್ಯಜಿಸುತಲಿ
ಚೈತನ್ಯ ಪ್ರಸರಣನು ಜೀವಾತ್ಮ ತೆರಳುತಿರೆ
ತಾಗೈದ ಪಾಪಗಳು ಪುಣ್ಯಗಳು ಒಳಗಿರುವ
ಸೂಕ್ಷ್ಮದಾ ಶರೀರದಲಿ ಆಶ್ರಯವ ಪಡೆಯುತಲಿ ॥೧೫೩೦॥

ಸಂಚಿತದ ಪಾಪಗಳ ಪುಣ್ಯಗಳ ಫಲವಾಗಿ
ಅನುಗುಣದ ಉತ್ತಮದ ಹೀನತರ ಜೀವಿಗಳ
ಮಾನವರ ಕ್ರಿಮಿಕೀಟಕಾದಿಗಳ ಜಂತುಗಳ
ಜನುಮಗಳ ತಳೆಯುತಲಿ ಚಿರಕಾಲ ತೊಳಲುವರು ॥೧೫೩೧॥

ಶಾಂತಿಯನು ದಯೆಯನ್ನು ಕ್ಷಮೆಯನ್ನು ನೀಡುತಲಿ
ಲೋಕದಾ ಸಕಲರನು ಸಮತೆಯಲಿ ನೋಡುತಲಿ
ತನ್ನಂತೆ ಪರರನ್ನು ಬಗೆಯುತಲಿ ಪರಹಿತದ
ಕಾರ್ಯಗಳ ಗೈಯ್ಯುವವ ಶಿಷ್ಯವವನೆನಿಸುವನು ॥೧೫೩೨॥

ಕೋಪದಲಿ ಕೊಲೆಸುಲಿಗೆ ಹಿಂಸೆಯನು ಗೈಯ್ಯುತಲಿ
ಸ್ವಾರ್ಥದಾ ಲಾಭದಲಿ ಪರರನ್ನು ಪೀಡಿಸುವ
ಉಪಕಾರ ಗೈದವಗೆ ಅಪಕಾರ ಗೈಯ್ಯುವವ
ಕೃತಘ್ನರು ದುಷ್ಟರುಗಳೆನಿಸುವರು ಕೇಳೆಂದ ॥೧೫೩೩॥

ಬಾಲ್ಯದಲಿ ಉಪನಯನ ಸಂಸ್ಕಾರ ಪಡೆಯುತಲಿ
ಗುರುಕುಲದಿ ಋಷಿಗಳಾ ಸೇವೆಯನು ಮಾಡುತಲಿ
ವೇದಗಳ ಶಾಸ್ತ್ರಗಳ ಅಧ್ಯಯನ ಗೈಯ್ಯುವುದು
ಬ್ರಹ್ಮಚರ್ಯಾಶ್ರಮವು ಎನಿಸುವುದು ಕೇಳೆಂದ ॥೧೫೩೪॥

ಹರೆಯದಲಿ ಸರಸದಲಿ ದಾಂಪತ್ಯ ಜೀವನದಿ
ಧರ್ಮದಾ ಮಾರ್ಗದಲಿ ಧನವನ್ನು ಗಳಿಸುತಲಿ
ಪುತ್ರರನು ಪಡೆಯುತಲಿ ದಾನಗಳ ಧರ್ಮಗಳ
ಗೈಯ್ಯುವುದು ಗೃಹಸ್ಥಾಶ್ರಮವು ಎನಿಸುವುದು ॥೧೫೩೫॥

ವೃದ್ಧಾಪ್ಯ ಬರುತಿರಲು ಸಂಸಾರ ಮೋಹವನು
ತ್ಯಜಿಸುತಲಿ ಆಸ್ತಿಯನು ಪುತ್ರನಿಗೆ ಒಪ್ಪಿಸುತ
ಸತಿಸಹಿತ ಕಾನನದಿ ಜಪತಪದಿ ಧ್ಯಾನದಲಿ
ವಾಸಿಪುದು ವಾನಪ್ರಸ್ಥಾಶ್ರಮವು ಎನಿಸುವುದು ॥೧೫೩೬॥

ಕೈಹಿಡಿದ ಪತಿಯೊಡನೆ ಸಿರಿತನದಿ ಬಡತನದಿ
ಸುಖ ದುಃಖವೆಲ್ಲರಲಿ ಸಹಭಾಗಿಯಾಗಿಯಾಗುತಲಿ
ಪತಿಯನ್ನು ಸೇವಿಸುತ ಅನುಕೂಲೆಯಾಗಿರ್ಪ
ಸತಿಯವಳೆ ವರ ಸಾಧ್ವಿ ಪತಿವ್ರತೆ ಎನಿಸುವಳು ॥೧೫೩೭॥

ಪರಸ್ತ್ರೀಯ ಕಣ್ಣೆತ್ತಿ ಎಂದಿಗೂ ನೋಡದಿಹ
ಅಗ್ನಿಯಾ ಸಾಕ್ಷಿಯಲಿ ಕೈಹಿಡಿದ ಸತಿಯನ್ನು
ಅನವರತ ರಕ್ಷಿಸುವ ಏಕಪತ್ನೀವ್ರತನು
ಸಚ್ಚರಿತ ಪುರುಷನೇ ಪತಿ ಎನಿಪ ಕೇಳೆಂದ ॥೧೫೩೮॥

ದ್ವಿಜರುಗಳು ಕ್ಷತ್ರಿಯರು ವೈಶ್ಯರರು ಶೂದ್ರರರು
ಎನ್ನುತಲಿ ಆರನ್ನು ಕರೆಯುವರು ಪೇಳುವುದು
ಅವರವರ ಕರ್ತವ್ಯ ಕರ್ಮಗಳ ಚರಿತೆಯನು
ಪೇಳುವುದು ಎನ್ನುತಲಿ ಧರ್ಮಜನು ನುಡಿದಿಹನು ॥೧೫೩೯॥

ಕೇಳುವುದು ಧರ್ಮಜನೆ ಬ್ರಾಹ್ಮೀ ಮುಹೂರ್ತದಲಿ
ನಿತ್ಯದಲಿ ಏಳುತಲಿ ಸ್ನಾನವನು ಗೈಯ್ಯುತಲಿ
ಶುದ್ಧದಲಿ ಸಂಧ್ಯಾದಿ ಜಪತಪದ ಕರ್ಮಗಳ
ಬಿಡದಲೆ ಗೈಯ್ಯುವವ ವರವಿಪ್ರನೆನಿಸುವನು ॥೧೫೪೦॥

ವೇದಗಳ ಶಾಸ್ತ್ರಗಳ ಸ್ವಾಧ್ಯಾಯ ಗೈಯ್ಯುತಲಿ
ಅಗ್ನಿಹೋತ್ರಾದಿ ವೇದೋಕ್ತ ಕರ್ಮಗಳ
ಗೈಯ್ಯುತಲಿ ಅತಿಥಿಸತ್ಕಾರ ಮಾಡುತಲಿ
ದಾನಗಳ ಗೈಯ್ಯುವವ ವರವಿಪ್ರನೆನಿಸುವನು ॥೧೫೪೧॥

ಪಂಚೇಂದ್ರಿಯಂಗಳನು ವಶಪಡಿಸಿಕೊಳ್ಳುತಲಿ
ಧ್ಯಾನದಲಿ ಚಿತ್ತವನು ಏಕಾಗ್ರಗೊಳಿಸುತಲಿ
ತನ್ನಾತ್ಮದೊಳಗಿರ್ಪ ಬ್ರಹ್ಮನನು ಅರಿತಿರುವ
ವಿಪ್ರನೇ ಬ್ರಾಹ್ಮಣನು ಎನಿಸುವನು ಕೇಳೆಂದ ॥೧೫೪೨

ತನ್ನಾತ್ಮದಂತೆಯೇ ಸರ್ವರನು ಬಗೆಯುತಲಿ
ಶಾಂತಿಯಲಿ ದಯೆಯಲ್ಲಿ ಕ್ಷಮೆಯಲ್ಲಿ ಪ್ರೀತಿಯಲಿ
ಜಗದೊಳಿಹ ಸಕಲರಾ ಸುಖಶಾಂತಿ ವೃದ್ಧಿಯನು
ಬಯಸುವವ ನಿಜವಾದ ವಿಪ್ರನವ ಕೇಳೆಂದ ॥೧೫೪೩॥

ತನ್ನೊಳಗೆ ಬ್ರಹ್ಮನಿಹ ದೇವನಿಹ ಎಂಬಂತೆ
ಚರರಲ್ಲಿ ಸಕಲರೂ ಹೃದಯದಲಿ ಬ್ರಹ್ಮನಿಹ
ವಿಶ್ವವೆಲ್ಲವೂ ಬ್ರಹ್ಮಮಯವಾಗಿದೆ ಎನ್ನುತಲಿ
ಸಮತೆಯಲಿ ನೋಡುವವ ವರವಿಪ್ರ ಕೇಳೆಂದ ॥೧೫೪೪॥

ವೇದೋಕ್ತ ಕರ್ಮಗಳ ಮಾರ್ಗವನು ತ್ಯಜಿಸುತಲಿ
ಮಾಂಸವನು ತಿನ್ನುತಲಿ ಮದ್ಯವನು ಕುಡಿಯುತಲಿ
ಕೊಲೆಸುಲಿಗೆ ಪಾಪದಾ ಕಾರ್ಯಗಳ ಗೈಯ್ಯುತಿಹ
ವಿಪ್ರನವ ಶೂದ್ರನೆಂದೆನಿಸುವನು ಕೇಳೆಂದ ॥೧೫೪೫॥

ಉತ್ತಮರ ಕುಲದಲ್ಲಿ ಜನಿಸುತಲಿ ಬೆಳೆದೊಡೆಯು
ಉತ್ತಮನು ಎನಿಸದಿಹ ಉತ್ತಮದ ಕಾರ್ಯಗಳ
ಶೀಲದಲಿ ಸದ್ಗುಣದ ಚರಿತೆಯಲಿ ನುಡಿಯಲ್ಲಿ
ಉತ್ತಮನು ಇರ್ದೊಡೆಯು ವಿಪ್ರನವನೆನಿಸುವನು ॥೧೫೪೬॥

ಶೂದ್ರರಾ ಕುಲದಲ್ಲಿ ಜನಿಸುತಲಿ ಶ್ರೇಷ್ಠತರ
ನಡತೆಯಲಿ ಗುಣದಲ್ಲಿ ನುಡಿಯಲ್ಲಿ ಶೀಲದಲಿ
ಧರ್ಮದಾ ಪುಣ್ಯಗಳ ಕಾರ್ಯಗಳ ಗೈಯ್ಯುತಿಹ
ಶೂದ್ರನವ ವರವಿಪ್ರನೆನಿಸುವನು ಕೇಳೆಂದ ॥೧೫೪೭॥

ಕ್ಷತ್ರಿಯರಿಗುಚಿತಮಿಹ ಧನುರ್ವಿದ್ಯೆ ಕಲಿಯುತಲಿ
ಯುದ್ಧದಲಿ ಉತ್ಸಾಹ ಶೌರ್ಯದಲಿ ನುಗ್ಗುತಲಿ
ಶತ್ರುಗಳ ರುಂಡಗಳ ಚೆಂಡಾಡಿ ಉರುಳಿಸುವ
ಧೀರನವ ಕ್ಷತ್ರಿಯನು ಎನಿಸುವನು ಕೇಳೆಂದ ॥೧೫೪೮॥

ಪ್ರಾಣದಾ ಆಸೆಯನು ತೊರೆಯುತಲಿ ರಣದೊಳಗೆ
ಸತ್ತರೇ ಸ್ವರ್ಗವನು ಇದ್ದರೇ ರಾಜ್ಯವನು
ಭೋಗಿಸುವೆ ಎನ್ನುತಲಿ ಜೀವದಾ ಹಂಗನ್ನು
ತೊರೆಯುತಲಿ ಸಂಗ್ರಾಮ ಗೈಯ್ಯುವನು ಕ್ಷತ್ರಿಯನು ॥೧೫೪೯॥

ಅಬಲೆಯರ ಅನಾಥರನು ವೃದ್ಧರನು ಮಕ್ಕಳನು
ದ್ವಿಜರನ್ನು ಗೋವುಗಳ ದೀನರನು ದುರ್ಬಲರ
ರಕ್ಷಿಸುವ ಕಾರ್ಯದಲಿ ಹೋರಾಡಿ ಪ್ರಾಣವನು
ಕೊಡುವವನೆ ವರವೀರ ಕ್ಷತ್ರಿಯನು ಕೇಳೆಂದ ॥೧೫೫೦॥

ಸರಕುಗಳ ಖರೀದಿಯು ಮಾರಾಟ ಮಾಡುವವ
ವಾಣಿಜ್ಯ ವ್ಯವಹಾರ ಲೆಕ್ಕದಲಿ ತೂಕದಲಿ
ಗಣಿತದಲಿ ಅಂಕಿಯಲಿ ಕುಶಲಮತಿ ಇರುತಿರುವ
ವಣಿಕನೇ ವರವೈಶ್ಯ ನೆನಿಸುವನು ಕೇಳೆಂದ ॥೧೫೫೧॥

ಲಾಭದಾ ಆಸೆಯಲ್ಲಿ ಹೆಚ್ಚಿನಾ ಬೆಲೆಯಲ್ಲಿ
ಮೀರದಲೆ ಮಿತಿಯಾದ ಲಾಭವನು ಗಳಿಸುತಲಿ
ದಾನದಲಿ ಧರ್ಮದಲಿ ಪುಣ್ಯದಾ ಕಾರ್ಯದಲಿ
ವಿತ್ತವನು ವ್ಯಯಮಾಳ್ಪ ವೈಶ್ಯನೇ ವೈಶ್ಯನಿಹ ॥೧೫೫೨॥

ಕೃಷಿಕೆಲಸ ದನಕರುವ ರಕ್ಷಿಸುವ ಕಾರ್ಯವನು
ಒಡೆಯನಾ ಸೇವೆಯನು ಮನಸಾರೆ ಗೈಯ್ಯುತಲಿ
ಒಡೆಯನಾ ರಕ್ಷಣೆಗೆ ತನ್ನಯಾ ಪ್ರಾಣವನು
ಕೊಡುವವನೆ ವರಶೂದ್ರನೆನಿಸುವನು ಕೇಳೆಂದ ॥೧೫೫೩॥

ತನ್ನಯಾ ಮಗನಂತೆ ಸೇವಕನ ನೋಡುತಲಿ
ಒಲುಮೆಯಲಿ ಪ್ರೀತಿಯಲಿ ಧನಕನಕ ವೀಯುತಲಿ
ಸಂಕಷ್ಟ ಸಮಯದಲಿ ಸೇವಕನ ಸಲುಹುವವ
ಒಡೆಯನೇ ನಿಜಒಡೆಯ ನೆನಿಸುವನು ಕೇಳೆಂದ ॥೧೫೫೪॥

ಮಾಂಸವನು ತಿನ್ನದಲೆ ಮದ್ಯವನು ಕುಡಿಯದಲೆ
ಸದ್ಗುಣದ ಶೀಲದಲಿ ನುಡಿಯಲ್ಲಿ ನಡೆಯಲ್ಲಿ
ಸತ್ಯದಲಿ ನಡೆಯುತಿಹ ನುತಚರಿತ ಶೂದ್ರನವ
ಶ್ರೇಷ್ಠತರ ವಿಪ್ರನೆಂದೆನಿಸುವನು ಕೇಳೆಂದ ॥೧೫೫೫॥

**ವರಧರ್ಮ ವ್ಯಾಧನಾ ಕಥೆಯನ್ನು ಹೇಳುತಲಿ**
**ಧರ್ಮದ ರಹಸ್ಯವನು ಅರುಹಿದನು ಮುನಿವರನು**

ಮುನ್ನಿನಲಿ ವೃತ್ತಿಯಲಿ ಮಾಂಸವನು ಮಾರುತಲಿ
ಮನೆಯಲ್ಲಿ ಪಿತೃಮಾತೃ ಸೇವೆಯನು ಮಾಡುತಲಿ
ವಿಪ್ರಂಗೆ ಶ್ರೇಷ್ಠನೆಂದೆನಿಸಿರುವ ಶೂದ್ರನಾ
ಆ ಧರ್ಮ ವ್ಯಾಧನಾ ಕಥೆಯನ್ನು ಕೇಳೆಂದ ॥೧೫೫೬॥

ಧರ್ಮಜನೆ ನೃಪವರನೆ ಮುನ್ನಿನಲಿ ಕಾನನದಿ
ಮೌದ್ಗಲ್ಯ ವಂಶದಲಿ ಜನಿಸಿರುವ ಪರವಿಪ್ರ
ನಿತ್ಯವೂ ವೇದಗಳ ಶಾಸ್ತ್ರಗಳ ಪಠಿಸುತಲಿ
ಅಧ್ಯಯನ ಗೈಯ್ಯುತಲಿ ಜಪತಪದೊಳಿರುತಿರಲು ॥೧೫೫೭॥

ಒಂದುದಿನ ಮರದಡಿಯ ಧ್ಯಾನದೊಳು ಇರುತಿರಲು
ಮರದಲ್ಲಿ ಕುಳಿತಿರ್ದ ಕಾಗೆಯಾ ಹೇಸಿಗೆಯು
ಶಿರದಲ್ಲಿ ಬೀಳುತಿರೆ ವರವಿಪ್ರ ಕೋಪದಲಿ
ದುರುದುರುನೆ ಉರಿಯುತಲಿ ಕೆಂಡವನು ಕಾರುತಲಿ ॥೧೫೫೮॥

ಮೇಲಕ್ಕೆ ನೋಡುತಿರೆ ಕಾಗೆಯದು ಕಳವಳದಿ
ಭಯದಿಂದ ತತ್ತರಿಸಿ ಮರದಿಂದ ಉರುಳುತಲಿ
ಗಿರಗಿರನೆ ತಿರುಗುತಲಿ ಧರೆಯಲ್ಲಿ ಬೀಳುತಲಿ
ಚೀರುತಲಿ ಕೂಗುತಲಿ ಪ್ರಾಣವನು ತೆತ್ತಿಹುದು ॥೧೫೫೯॥

ತನ್ನಯಾ ತಪಬಲದಿ ಆ ಕಾಗೆ ಸತ್ತಿಹುದು
ಎನ್ನುತಲಿ ಗರ್ವದಲಿ ಉಬ್ಬುತಲಿ ಪರವಿಪ್ರ
ಭಿಕ್ಷೆಯನು ಬೇಡುತಲಿ ಬ್ರಾಹ್ಮಣರ ಕೇರಿಯಲಿ
ಬರುತಲಿರೆ ಮನೆಯೊಂದ ಬಾಗಿಲಲಿ ನಿಲ್ಲುತಲಿ ॥೧೫೬೦॥

ಭವತಿ ಭಿಕ್ಷಾಂದೇಹಿ ಎನ್ನುತಲಿ ನುಡಿಯುತಿರೆ
ಒಳಗಿರ್ದ ಸುವ್ರತೆಯುನೋಡುತಲಿ ತೆರಳುತಲಿ
ಪತಿಸೇವೆ ಗೈಯ್ಯುತಲಿ ಕೆಲಸಮಯನಂತರದಿ
ಐತಂದು ಭಿಕ್ಷೆಯನು ವರವಿಪ್ರಗಿತ್ತಿಹಳು ॥೧೫೬೧॥

ಬಾಗಿಲಲಿ ಕಾಯುತಲಿ ಬೇಸತ್ತು ನಿಂತಿರ್ದ
ಆ ದ್ವಿಜನು ಸಾಧ್ವಿಯನು ಕಣ್ಣುಗಳ ನರಳಿಸುತ
ಕ್ರೋಧದಲಿ ನೋಡುತಿರೆ ಅಂದಿನಲಿ ಮರದೊಳಗೆ
ಕುಳಿತಿರ್ದ ಪಕ್ಷಿಯದು ತಾನಲ್ಲ ವೆಂದಿಹಳು ॥೧೫೬೨॥

ಕಾನನದ ವಿಹಗದಾ ವಿಷಯವನು ಇವಳೆಂತು
ಅರಿತಿಹಳು ಎನ್ನುತಲಿ ಚಕಿತದಲಿ ವರವಿಪ್ರ
ನೀನೆಂತು ಆ ಪಕ್ಷಿ ವಿಷಯವನು ಅರಿತಿರುವೆ
ಎನ್ನುತಲಿ ಕೇಳುತಿರೆ ಸುವ್ರತೆಯು ನುಡಿದಿಹಳು ॥೧೫೬೩॥

ಹೇ ವಿಪ್ರ ಸತಿಯರಿಗೆ ಪತಿಯವನೆ ಪರದೈವ
ಪತಿಯನ್ನು ಉಳಿದಾವ ದೈವವದು ಸತಿಗಿಲ್ಲ
ಮೊದಲಿಂಗೆ ಪತಿಸೇವೆಗೈಯುತಲಿ ನಂತರದಿ
ಐತಂದು ಭಿಕ್ಷಯನು ತಡವಾಗಿ ಇತ್ತಿಹೆನು ॥೧೫೬೪॥

ಅಪರವರಿಗುಚಿತವಿಹ ಧರ್ಮಗಳ ಕರ್ಮಗಳ
ವ್ರತಗಳನು ಗೈದೊಡೆಯು ಆತ್ಮಬಲ ದೊರೆಯುವುದು
ಎನ್ನಯಾ ಒಳಗಿರುವ ಜ್ಞಾನದಾ ದೃಷ್ಟಿಯಲಿ
ಕಾಗೆಯಾವೃತ್ತಾಂತವರಿತಿಹೆನು ಎಂದಿಹಳು ॥೧೫೬೫॥

ಕೇಳುತಲಿ ವರವಿಪ್ರ ವಿಸ್ಮಯವ ಗೊಳ್ಳುತಲಿ
ಈ ಪರಿಯು ಆತ್ಮದಾ ಜ್ಞಾನವನು ಬಲವನ್ನು
ಪಡೆಯಲಿಕೆ ಧರ್ಮಗಳ ಕರ್ಮಗಳ ರಹಸ್ಯವನು
ತಿಳಿಸುವುದು ಎನ್ನುತಿರೆ ವರಸಾಧ್ವಿ ನುಡಿದಿಹಳು ॥೧೫೬೬॥

ಸನಿಹದಲಿ ನುತಚರಿತ ಧರ್ಮದಲಿ ನಿರತನಿಹ
ವರಧರ್ಮ ವ್ಯಾಧನೆಂದೆಂಬುವಾ ವ್ಯಾಧನಿಹ
ಕರ್ಮಗಳ ವೃತ್ತಿಗಳ ಧರ್ಮದ ರಹಸ್ಯವನು
ಅರುಹುವನು ಅವವನಲ್ಲಿ ತೆರಳುವುದು ಎಂದಿಹಳು . ॥೧೫೬೭॥

ಊರ ಹೊರವಳಯದಲಿ ಬೇಡರಾ ಬೀದಿಯಲಿ
ವ್ಯಾಧನನು ಅರಸುತಲಿ ವರವಿಪ್ರ ಬರುತಲಿರೆ
ಎಮ್ಮೆಗಳ ಕೋಣಗಳ ಹುಲಿಸಿಂಹ ಚಿರತೆಗಳ
ಎಲುವುಗಳ ಹಂದಿರದ ರಾಶಿಗಳ ಕಂಡಿಹನು ॥೧೫೬೮॥

ಇಳಬಿಟ್ಟ ಪ್ರಾಣಿಗಳ ಕರುಳಗಳ ಮಾಲೆಗಳ
ಕಟ್ಟುತಲಿ ತೂಗುತಿಹ ಮೀನುಗಳ ಹಾರಗಳ
ಒಟ್ಟಿರುವ ಮಾಂಸಗಳ ಮುದ್ದೆಗಳ ರಾಶಿಗಳ
ಮಾಂಸದಾ ಅಂಗಡಿಗಳಕ್ಕಲದಿ ಕಂಡಿಹನು ॥೧೫೬೯॥

ದುರ್ಗಂಧ ವಾಸನೆಯು ನಾಸಿಕಕೆ ಅಡರುತಿರೆ
ವಸ್ತ್ರದಲಿ ಮುಚ್ಚುತಲಿ ಎಲವುಗಳ ಎಡುಹುತಲಿ
ಮಾಂಸಗಳ ತುಳಿಯುತಲಿ ಇದು ನರಕವೆನ್ನುತಲಿ
ಮನದೊಳಗೆ ನೋಯುತಲಿ ನವೆಯುತಲಿ ನಡೆದಿಹನು ॥೧೫೭೦॥

ಮುಂದಕ್ಕೆ ಬರುತಲಿರೆ ವರಧರ್ಮವ್ಯಾಧನು
ವಿಪ್ರನನು ನೋಡುತಲಿ ಅಕಟಕಟ ನಿಮ್ಮಂಥ
ಮಡಿವಂತ ಶುಚಿಯುಳ್ಳ ಶ್ರೇಷ್ಠರಾ ವಿಪ್ರರನು
ವ್ಯಾಧರಾ ಕೇರಿಂಗೆ ಕಳುಹಿದಳೆ ಎಂದಿಹನು ॥೧೫೭೧॥

ಬೆರಗಿನಲಿ ವರವಿಪ್ರ ಸಾಧ್ವಿಯನು ನೀನೆಂತು
ಅರಿತಿರುವೆ ಎನ್ನುತಿರೆ ವರವ್ಯಾಧ ನುಡಿದಿಹನು
ಈ ಸ್ಥಳಕೆ ನೀವುಗಳು ಬರುವದದು ಅನುಚಿತವು
ಎನ್ನಯಾ ನಿಯಮದಲಿ ಅರುಹುವೆನು ಎನ್ನುತಲಿ ॥೧೫೭೨॥

ವಿಪ್ರನನು ತನ್ನಯಾ ಗುಡಿಸಲಿಗೆ ಕರೆದೊಯ್ಯೆ
ಮೈಯಲ್ಲಿ ಹನಿರಕುತವಿಲ್ಲದಾ ಒಣಗಿರುವ
ಎಲುವಿನಾ ಹಂದರದಿ ಕುಟುಕುಟುನೆ ಪ್ರಾಣವನು
ಹಿಡಿದಿರುವ ವೃದ್ಧರನು ವರವಿಪ್ರ ಕಂಡಿಹನು ॥೧೫೭೩॥

ಇವರೆನ್ನ ತಾಯ್ತಂದೆ ಇವಳೆನ್ನ ಹೆಂಡತಿಯು
ಇವನೆನ್ನ ಮಗನಿಹನು ಇವರುಗಳ ಪೋಷಣೆಗೆ
ಬೇಟೆಯನು ಆಡುತಲಿ ಪ್ರಾಣಿಗಳ ಮಾಂಸವನು
ಮಾರಾಟ ಮಾಡುತಲಿ ಹಣವನ್ನು ಗಳಿಸುವೆನು ॥೧೫೭೪॥

ಧನಗಳಿಸುವಾಸೆಯಲಿ ಅತಿಲಾಭ ಮೋಹದಲಿ
ಪ್ರಾಣಿಗಳ ವಧೆಯನ್ನು ನಾ ಎಂದು ಗೈಯ್ಯದಿಹೆ
ಬೇಟೆಯನು ಆಡುವುದು ಮಾಂಸವನು ಮಾರುವುದು
ತಮ್ಮಯಾ ಕುಲಧರ್ಮವಿರುತಿಹುದು ಎಂದಿಹುದು ॥೧೫೭೫॥

ವಂಶಾನುವಂಶದಲಿ ಪಾರಂಪರೆಯು ಬಂದಿರುವ
ಬೇಟೆಯನು ಆಡುವುದು ಪ್ರಾಣಿಗಳ ಕೊಲ್ಲುವುದು
ರೂಢಿಯಲಿ ವ್ಯಾಧರಾ ಸ್ವಧರ್ಮವೆನಿಸುವುದು
ಕಾರಣದಿ ಪಾಪವದು ಎಮಗೆನಿತು ಸೋಂಕದದು ॥೧೫೭೬॥

ಸತತವೂ ತಾಯ್ತಂದೆ ಸೇವೆಯನು ಮಾಡುತಲಿ
ದೊರೆತಿರುವ ಧನದಲ್ಲಿ ಸಂಸಾರ ಪೊರೆಯುತಲಿ
ಕಾಮಗಳ ಕ್ರೋಧಗಳ ಮದಮತ್ಸರಾದಿಗಳ
ತ್ಯಜಿಸುತಲಿ ಸಂತಸದಿ ವಾಸಿಸುತಲಿಹೆನೆಂದ ॥೧೫೭೭॥

ಅವರವರಿಗುಚಿತಮಿಹ ವಿಧಿಸಿರುವ ಕರ್ಮಗಳ
ಗೈಯ್ಯುತಲಿ ಧರ್ಮದಾ ಮಾರ್ಗದಲಿ ನಡೆಯುತಲಿ
ಸಕಲರನು ತನ್ನಂತೆ ಪ್ರೇಮದಲಿ ನೋಡುವವ
ಸುಖಶಾಂತಿ ಮೋಕ್ಷವನು ಪಡೆಯುವನು ಎಂದಿಹನು ॥೧೫೭೮॥

ನಿತ್ಯವೂ ಬ್ರಾಹ್ಮೀ ಮುಹೂರ್ತದಲಿ ಏಳುತಲಿ
ಸ್ನಾನವನು ಜಪತಪವ ಧ್ಯಾನವನು ಗೈಯ್ಯುತಲಿ
ವೇದಗಳ ಶಾಸ್ತ್ರಗಳ ಅಧ್ಯಯನ ಗೈಯ್ಯುತಲಿ
ಬ್ರಹ್ಮನನು ಅರಿತವನೆ ಬ್ರಾಹ್ಮಣನು ಎನಿಸುವನು ॥೧೫೭೯॥

ಇಂದ್ರಿಯವ ನಿಗ್ರಹಿಸಿ ವಿಷಯಗಳ ಮೋಹವನು
ಭೌತಿಕದ ಸುಖವನ್ನು ಭೋಗವನು ಬಯಸದಲೆ
ಕೋಪವನು ಗರ್ವವನು ತ್ಯಜಿಸುತಲಿ ಸಕಲರಾ
ಕ್ಷೇಮವನು ಬಯಸುವವ ವರವಿಪ್ರ ಕೇಳೆಂದ ॥೧೫೮೦॥

ಕೋಪವದು ತಾಪಕ್ಕೆ ಮೂಲವದು ಎಂಬಂತೆ
ಕೋಪವದು ಸರ್ವಸ್ವ ನಾಶವನು ಗೈಯ್ಯುವುದು
ಕುಲವಿದ್ಯೆ ಗರ್ವದಲಿ ಕೋಪವನು ತಾಳುವುದು
ನಿಜವಾದ ವಿಪ್ರರಿಗೆ ಶೋಭಿಸದು ಎಂದಿಹನು ॥೧೫೮೧॥

ತನ್ನಯಾ ಧರ್ಮದಲಿ ವೇದೋಕ್ತ ಕರ್ಮಗಳ
ಶ್ರದ್ಧೆಯಲಿ ಗೈಯ್ಯುತಲಿ ಸತ್ಯದಲಿ ನಡೆಯುತಲಿ
ಸತ್ಯವನು ನುಡಿಯುತಲಿ ಸ್ವಧರ್ಮವ ಪಾಲಿಸುತ
ಪ್ರಾಣವನು ತೊರೆಯುವವ ವರವಿಪ್ರ ಕೇಳೆಂದ ॥೧೫೮೨॥

ವೇದೋಕ್ತ ಕರ್ಮಗಳ ತ್ಯಜಿಸುತಲಿ ಸ್ವೇಚ್ಛೆಯಲಿ
ಮಾಂಸವನು ತಿನ್ನುತಲಿ ಮದ್ಯವನು ಕುಡಿಯುತಲಿ
ಕೊಲೆಸುಲಿಗೆ ಹಿಂಸೆಯನು ಮಾಡುತಲಿ ಪಾಪದಾ
ಕಾರ್ಯಗಳ ಗೈಯ್ಯುವವ ದ್ವಿಜನಲ್ಲವೆಂದಿಹನು ॥೧೫೮೩॥

ಸ್ವಧರ್ಮದಾ ಕಾರ್ಯಗಳ ಶ್ರದ್ಧೆಯಲಿ ಗೈದೊಡೆಯು
ಆತ್ಮಬಲ ದೊರೆಯುತಲಿ ಜ್ಞಾನವದು ವೃದ್ಧಿಪುದು
ಆತ್ಮಬಲ ಪಡೆಯುತಲಿ ನಿರ್ಭೀತನಾಗುತಲಿ
ಮೃತ್ಯುವಿಗೆ ಅಂಜದಲೆ ಸಂತಸದಿ ಅಪ್ಪುವನು ॥೧೫೮೪॥

ಪರಧರ್ಮ ಪರರನ್ನು ನಿಂದಿಸದೆ ದ್ವೇಷಿಸದೆ
ಸ್ವಧರ್ಮದ ಕರ್ಮಗಳ ನಿಷ್ಠೆಯಲಿ ಗೈಯ್ಯುತಲಿ
ಸ್ವಧರ್ಮದಿ ಮರಣವನು ಅಪ್ಪುವದು
ಮೋಕ್ಷವನು ಈಯುವುದು ಶ್ರೇಯವದು ಎಂದಿಹನು ॥೧೫೮೫॥

ಈ ಪರಿಯ ಆ ಧರ್ಮ ವ್ಯಾಧನವ ನುಡಿಯುತಿರೆ
ಧರ್ಮದ ರಹಸ್ಯವನು ಸತ್ಯವನು ಅರುಹುತಲಿ
ನೀ ಎನ್ನ ಅಜ್ಞಾನ ಕತ್ತಲೆಯ ಕಳೆದಿರುವೆ
ಪರಮಗುರು ಎನ್ನುತಲಿ ಆ ವಿಪ್ರ ತೆರಳಿಹನು ॥೧೫೮೬॥

ರ್ಮಜನೆ ಧರ್ಮದ ರಹಸ್ಯವನು ಅರುಹಿದೆನು
ೀವುಗಳು ಮುನಿವರರ ವಿಪ್ರರರನು ಸೇವಿಸುತ
ರ್ಮದಲಿ ಸತ್ಯದಲಿ ವಚನವನು ಪಾಲಿಸುತ
ನವಾಸದವಧಿಯನು ಕಷ್ಟದಲಿ ಕಳೆದಿಹಿರಿ ॥೧೫೮೭॥

ಈಗಲಾ ನಿಮ್ಮಯಾ ಶತ್ರುಗಳ ಮೆಟ್ಟುತಲಿ
ಳಕೊಂಡ ರಾಜ್ಯವನು ಪಡೆಯುತಲಿ ಸುಖಿಸುವಾ
ಮಯವದು ಬಂದಿಹುದು ಕೃಷ್ಣನಾ ಕಾರುಣ್ಯ
ವಚವದು ಇರುತಿರಲು ನಿಮಗಾವುದರಿದೆಂದ ॥೧೫೮೮॥

ವೇಗನೇ ಸಿಂಹಾಸನೇರುತಲಿ ಮೆರೆಯುತಿರೆ
ನ್ನಯಾ ಕೀರ್ತಿಯದು ಜಗದೊಳಗೆ ಬೆಳಗುವುದು
ಎನ್ನುತಲಿ ಮಾರ್ಕಂಡೇಯ ಪಾಂಡವರ ಹರಸುತಲಿ
ನಾರದರ ಸಹಿತದಲಿ ಸ್ವರ್ಗಕ್ಕೆ ತೆರಳಿದನು ॥೧೫೮೯॥

**ವರಸತ್ಯಭಾಮೆಯುಳು ದ್ರೌಪದಿಯು ಸರಸದಲಿ ।**
**ಮಧುರೋಕ್ತಿ ವಚನದಲಿ ಕಾಲವನು ಕಳೆದಿಹರು ॥**

ಇತ್ತಲಾ ದ್ರೌಪದಿಯು ವರಸತ್ಯ ಭಾಮೆಯಾ
ಜೊತೆಯಲ್ಲಿ ಸರಸದಲಿ ಸಲ್ಲಾಪ ಕಥನದಲಿ
ಮಧುರೋಕ್ತಿ ವಚನದಲಿ ಹಾಸ್ಯದಲಿ ಸಂತಸದಿ
ಕಾಲವನು ಕಳೆಯುತಿರೆ ಭಾಮೆಯಳು ನುಡಿದಿಹಳು ॥೧೫೯೦॥

ದ್ರೌಪದಿಯೆ ನೀನತಿಯ ಕುಶಲಮತಿ ಜಾಣೆಯಿಹ
ಜಗದೊಳಗೆ ಒಬ್ಬನಾ ಗಂಡನನು ಒಲಿಸುವುದು
ಅತಿಕಷ್ಟವಿರುತಿರಲು ಐವರಾ ಪತಿಯರನು
ನೀನೆಂತು ಒಲಿಸಿರುವೆ ಎನ್ನುತಲಿ ನುಡಿದಿಹಳು ॥೧೫೯೧॥

ಹದಿನಾರು ಸಾವಿರದ ಪತ್ನಿಯರು ನಾವುಗಳು
ಕೃಷ್ಣನನು ಒಲಿಸಲಿಕೆ ಅಸಮರ್ಥರಾಗಿಹೆವು
ಪತಿಗಳನು ವಶಗೈವ ನೀನಾವ ವಿದ್ಯೆಯನು
ತಂತ್ರವನು ಅರಿತಿರುವೆ ಅರುಹುವುದು ಎಂದಿಹಳು ॥೧೫೯೨॥

ದೇವಿಯರೆ ನಾನತಿಯ ಮುಗ್ಧಳಿಹೆ ಶುದ್ಧಳಿಹೆ
ಆವುದೇ ವಶಗೈವ ವಿದ್ಯೆಯನು ಮಂತ್ರವನು
ಮಾಟವನು ತಂತ್ರವನು ನಾನೊಂದು ಅರಿತಿಲ್ಲ
ನಿರ್ಮಲದ ಮನಸಿನಲಿ ಪತಿಗಳನು ಸೇವಿಪೆನು ॥೧೫೯೩॥

ಪತಿಯರುಗಳುಸುರಿರುವ ಪರಿಯಲ್ಲಿ ನಡೆಯುತಲಿ
ಅವರುಗಳು ನಡೆದಿರುವ ಮಾರ್ಗದಲಿ ನಡೆಯುತಲಿ
ಸುಖದುಃಖವೆಲ್ಲರಲಿ ಸಮಪಾಲಾಗಿಯಾಗುತಲಿ
ನೆರಳಂತೆ ಪತಿಗಳಾ ಬೆನ್ನಿನಲಿ ನಡೆಯುಪೆನು ॥೧೫೯೪॥

ಪತಿಗಳಾ ಒಲವನ್ನು ಅರಿಯುತಲಿ ಹತ್ತುವುದು
ಅವರುಗಳ ಇಚ್ಛೆಯಲಿ ರಮಿಸುವುದು ಸುಖಿಸುವುದು
ನಗೆಯಲ್ಲಿ ಹೊಗೆಯಲ್ಲಿ ಮುನಿಸಿನಲಿ ಮುದದಲ್ಲಿ
ಸಮತೆಯಲಿ ಪತಿಯರನು ಸತತವೂ ಸೇವಿಪೆನು ॥೧೫೯೫॥

ಕೋಪದಲಿ ಪತಿನುಡಿಯೆ ಸಹನೆಯಲಿ ತಾಳುತಲಿ
ಪ್ರತಿನುಡಿಯು ನುಡಿಯದಲೆ ಮೌನವನು ತಾಳುವೆನು
ಮನೆಯೊಳಿಹ ಕಷ್ಟಗಳ ಕಲಹಗಳ ವಿಷಯವನು
ಪರರಿಂಗೆ ಎಂದಿಗೂ ಉಸುರದಿಹೆ ಎಂದಿಹಳು ॥೧೫೯೬॥

ಪ್ರಾಣಗಳು ಐದಿಹವು ದೇಹವದು ಒಂದಿಹುದು
ಎಂಬಂತೆ ಪತಿಗಳನು ಐವರನು ಎನ್ನಯಾ
ಪಂಚಗಳ ಪ್ರಾಣಗಳು ಎನ್ನುತಲಿ ಭಾವಿಸುತ
ಹಗಲಿರುಳು ಪತಿಗಳಾ ಸೇವೆಯನು ಗೈಯ್ಯುವೆನು ॥೧೫೯೭॥

ಪತಿಗಳನು ದೇವರುಗಳೆನ್ನುತಲಿ ಭಾವಿಸುತ
ಸತತವೂ ಸಂತಸದಿ ಸೇವೆಯನು ಗೈಯ್ಯುವೆನು
ಸತಿಯಳಿಗೆ ಪತಿಯವನೆ ದೈವನಿಹನಲ್ಲದೇ
ಬೇರಾವ ದೇವರುಗಳಿಲ್ಲೆಂದು ನುಡಿದಿಹಳು ॥೧೫೯೮॥

ಇವುಗಳಲಿ ಆವುದೇ ವಶಗೈವ ವಿದ್ಯೆಯದು
ಮಾಟವದು ಮಂತ್ರವದು ಮಾಯೆಯದು ಒಂದಿಲ್ಲ
ಪತಿಗಳಾ ಮನಸನ್ನು ನೋಯಿಸುವ ಕಾರ್ಯವನು
ನಾನೆಂದು ಮಾಡದಿಹೆ ಎಂದಿಹಳು ದ್ರೌಪದಿಯು ॥೧೫೯೯॥

ದೇವಿಯರೆ ನೀವುಗಳು ಹದಿನಾರು ಸಾವಿರದ
ಸತಿಯರಲಿ ಕಡುಚೆಲುವೆ ಸುಂದರಿಯರೆನಿಸಿಹಿರಿ
ಎಲ್ಲರಿಗೂ ಮಿಗಿಲಾಗಿ ರುಕ್ಮಿಣಿಗೆ ಹೆಚ್ಚಾಗಿ
ತೂಕೊಂಡು ಶ್ರೀಕೃಷ್ಣ ನಿಮ್ಮನ್ನು ಪ್ರೀತಿಪನು ॥೧೬೦೦॥

ಹದಿನಾಲ್ಕು ಲೋಕಗಳ ರಕ್ಷಿಸುವ ಭಾರವನು
ಹದಿನಾರು ಸಾವಿರದ ಪತ್ನಿಯರ ಕ್ಷೇಮವನು
ಅಗಣಿತದ ಭಕ್ತರಾ ರಕ್ಷಣೆಯ ಭಾರವನು
ಹೊತ್ತಿರುವ ಶ್ರೀಕೃಷ್ಣನರಸಿಯರು ನೀವಿಹಿರಿ ॥೧೬೦೧॥

ನೀವುಗಳು ರೂಪದಲಿ ಮಾತಿನಲಿ ಚದುರೆಯರು
ಸರಸದಲಿ ಸಲ್ಲಾಪ ಕಥನದಲಿ ನಿಪುಣೆಯರು
ರತಿಪತಿಯ ಮನ್ಮಥನ ಚಿತ್ತವನ್ನು ವಶಗೈದ
ರೂಪವತಿ ನೀವಿಹಿರಿ ಎಂದಿಹಳು ದ್ರೌಪದಿಯು ॥೧೬೦೨॥

ದ್ರೌಪದಿಯೆ ನೀನುಡಿದ ನುಡಿಗಳವು ನಿಜವಿಹುದು
ಆದೊಡೆಯು ತನ್ನನ್ನು ನಂಬಿರುವ ಭಕುತರಲಿ
ಒಲುಮೆಯದು ತೂಕೊಂದು ಹೆಚ್ಚಾಗಿ ಇರುತಿಹುದು
ಭಕುತರಾ ಕಾರ್ಯದಲಿ ಬಾಂಧವರ ತೊರೆಯುವನು ॥೧೬೦೩॥

ತನ್ನನ್ನು ನಂಬಿರುವ ಭಕುತಜನ ನೋಯುತಿರೆ
ಕಷ್ಟದಲಿ ನವೆಯುತಿರೆ ಆರ್ತದಲಿ ಕೂಗುತಿರೆ
ಪತ್ನಿಯರ ಪುತ್ರರನು ತೊರೆಯುತಲಿ ಭಕುತರನು
ರಕ್ಷಿಸಲು ಧಾವಿಪನು ಎಂದಿಹಳು ಭಾಮೆಯಳು ॥೧೬೦೪॥

ಇತ್ತಲಾ ಯಾದವನು ಧರ್ಮಜನ ಬಳಿಬಂದು
ನಾವುಗಳು ಐತಂದು ಬಹುದಿನಗಳಾಗಿಹವು
ಅತ್ತಲಾ ವಸುದೇವ ದೇವಕಿಯ ಕ್ಷೇಮದಾ
ದ್ವಾರಕೆಯ ಸ್ಥಿತಿಗತಿಯು ಎನ್ನನ್ನು ಬಾಧಿಪುದು ॥೧೬೦೫॥

ಬಲರಾಮ ಯಾದವರು ವಿಷಯೋಪ ಭೋಗಿಗಳು
ಮದ್ಯವನು ಕುಡಿಯುತಲಿ ನಿಶೆಯಲ್ಲಿ ರಮಿಸುವರು
ಸಮಯವನು ಸಾಧಿಸುವ ಶತ್ರುಗಳು ದ್ವಾರಕೆಯ
ಮೋಸದಲಿ ಮುತ್ತಲಿಕೆ ಯತ್ನವನು ಮಾಡುವರು ॥೧೬೦೬॥

ನಾವುಗಳು ಈಗಲೇ ದ್ವಾರಕೆಗೆ ತೆರಳುವೆವು
ವನವಾಸದವಧಿಯದು ತೀರಲಿಕೆ ಬಂದಿಹುದು
ಕೌರವರ ನಿರ್ನಾಮ ಗೈಯ್ಯುತಲಿ ರಾಜ್ಯದನು
ಪಡೆಯುವಾ ಕಾಲವದು ಸನ್ನಿಹಿತವಾಗಿಹುದು ॥೧೬೦೭॥

ಹರನಿತ್ತ ಪಾಶುಪತ ಎನ್ನಯ ಸುದರ್ಶನವು
ಅಹಿತರಾ ರುಂಡಗಳ ಚೆಂಡಾಡಿ ಕೆಡುಹುವವು
ರಾಜ್ಯಾಭಿಷೇಕದಲಿ ನಿನ್ನಯಾ ಕೀರ್ತಿಯದು
ಮೂಜಗದಿ ಬೆಳಗುವದು ಎಂದಿಹನು ಯಾದವನು ॥೧೬೦೮॥

ಎನ್ನೈವರಾ ಪಾಂಡವರ ಪ್ರಾಣಗಳ ರಕ್ಷಿಪುದು
ಭಾರವದು ನಿನ್ನದಿದೆ ಎನ್ನುತಲಿ ದ್ರೌಪದಿಯು
ಕಂಬನಿಯ ಧಾರೆಯನು ಸುರಿಸುತಲಿ ಯಾದವನ
ಪಾದಗಳ ತೊಳೆಯುತಿರೆ ಶ್ರೀಕೃಷ್ಣನೆಬ್ಬಿಸುತ ॥೧೬೦೯॥

ಹೇತಂಗಿ ದ್ರೌಪದಿಯೆ ನಾನಿರುವ ಪರ್ಯಂತ
ಐವರಾ ಪತಿಗಳಾ ಕೂದಲೆಳೆ ಕೊಂಕದದು
ನಿನ್ನಯಾ ಕಷ್ಟಗಳು ಬೇಗನೇ ತೊಲಗುವವು
ಎನ್ನುತಲಿ ದ್ರೌಪದಿಯ ಕಂಬನಿಯನೊರೆಸಿದನು ॥೧೬೧೦॥

ಕಷ್ಟಗಳು ದುಃಖಗಳು ಮುತ್ತಿದೊಡೆ ಮನದಲ್ಲಿ
ಎನ್ನನ್ನು ನೆನೆಯುವುದು ತಕ್ಷಣದಿ ಐತಂದ
ನಿಮ್ಮಯಾ ಸಂಕಷ್ಟವೆಲ್ಲವನು ಪರಿಹರಿಪೆ
ಎನ್ನುತಲಿ ಅಭಯದಲಿ ಸಂತೈಸಿ ಹರಸಿದನು ॥೧೬೧೧॥

ಧರ್ಮಜನು ಕೃಷ್ಣಂಗೆ ಯಾದವರ್ಗೆ ಉಚಿತದಲಿ
ವಸ್ತ್ರಗಳ ಒಡವೆಗಳ ಉಡುಗೊರೆಯನಿತ್ತಿಹನು
ದ್ರೌಪದಿಯು ಸತ್ಯಳಿಗೆ ಬಾಂಧವರ್ಗೆ ಲಲನೆಯರ್ಗೆ
ಕುಂಕುಮದ ಸಹಿತದಲಿ ಉಡುಗೊರೆಯನಿತ್ತಿಹಳು ॥೧೬೧೨॥

ಬಳಿಕಲಾ ಶ್ರೀಕೃಷ್ಣ ರಥವೇರಿ ಕೂಡ್ರುತಿರೆ
ಪಾಂಡವರು ನಮಿಸುತಿರೆ ಸಕಲರಿಗೆ ಕೈ ಬೀಸಿ
ಹರಸುತಲಿ ಪರಿವಾರ ಸಹಿತದಲಿ ವಾದ್ಯದಲಿ
ದ್ವಾರಕಾಪುರಧೀಶ ದ್ವಾರಕೆಗೆ ಸಾಗಿದನು ॥೧೬೧೩॥

ಊರ ಹೊರವಳಯದಲಿ ಕೊಳದ ಬಳಿ ಬರುತಿರಲು
ಮಾಧವನ ಬೀಳ್ಕೊಂಡು ಧರ್ಮಜನು ಮನದೊಳಗೆ
ಕೃಷ್ಣನಾ ಕರುಣೆಯದು ಎಂತುಟವೊ ಎನ್ನುತಲಿ
ದ್ವಾರಕಾಧೀಶನನ ನೆನೆಯುತಲಿ ಮರಳಿದನು ॥೧೬೧೪॥

**ದ್ರೌಪದಿಯು ಸ್ತುತಿಸುತಿರೆ ವರದ್ವಾರಕಾಧೀಶ ।**
**ದೂರ್ವಾಸ ಮುನಿವರನ ಕೋಪವನು ತೊಲಗಿಸಿದ ॥**

ಜನಮೇಜಯ ನೃಪವರನೆ ಕೇಳುವುದು ಬಳಿಕಿನಲಿ
ಪಾಂಡವರು ಅಲ್ಲಿಯೇ ವಾಸ್ತವ್ಯ ಗೈಯ್ಯುತಿರೆ
ಸುತ್ತಣದ ಋಷಿವರರು ಮುನಿವರರು ದ್ವಿಜರುಗಳು
ಅಗಣಿತದಿ ಪಾಂಡವರ ನೋಡಲಿಕೆ ಬಂದಿಹರು ॥೧೬೧೫॥

ಅವರೊಳಗೆ ದ್ವಿಜನೋರ್ವ ತೆರಳದಲೆ ಹಲವುದಿನ
ಗುಪಿತದಲಿ ವಾಸಿಸುತ ಪಾಂಡವರ ವಿಷಯವನು
ಅರಿಯುತಲಿ ಹಸ್ತಿನೆಯ ನಗರಕ್ಕೆ ಐತಂದು
ಧೃತರಾಷ್ಟ್ರ ಭೂಪತಿಗೆ ವಿಸ್ತರದಿ ಅರುಹಿದನು ॥೧೬೧೬॥

ಭೂಪತಿಯೆ ಪಾಂಡವರು ವಿಪಿನದಲಿ ಕಷ್ಟದಲಿ
ತೊಳಲುತಲಿ ಬಳಲುತಲಿ ಕಡ್ಡಿಯಲಿ ಸೊರಗಿಹರು
ವಲ್ಕಲವ ಧರಿಸುತಲಿ ಕಂದಮೂಲಾದಿಗಳ
ತಿನ್ನುತಲಿ ಮರದಡಿಯೆ ಮಲಗುವರು ಎಂದಿಹನು ॥೧೬೧೭॥

ಕೇಶಗಳ ಬಿಟ್ಟಿರುವ ಕಣ್ಣುಗಳು ನಟ್ಟಿರುವ
ಮಲಿನದಾ ವಸ್ತ್ರವನು ಚಿಂದಿಯನು ತೊಟ್ಟಿರುವ
ಬಾಡಿರುವ ಬತ್ತಿರುವ ಕುಂದಿರುವ ವದನದಾ
ದ್ರೌಪದಿಯ ಬವಣೆಯನು ನಾನುಸುರನೆಂದಿಹನು ॥೧೬೧೮॥

ಫಲುಗುಣನು ಪರಶಿವನ ಒಲಿಸುತಲಿ ಘೋರತರ
ಜಗನಾಶ ಗೈಯ್ಯುವಾ ಪಾಶುಪತ ಪಡೆದಿಹನು
ಸ್ವರ್ಗಕ್ಕೆ ತೆರಳುತಲಿ ದೇವೇಂದ್ರ ಯಮ ಅಗ್ನಿ
ವರುಣಾದಿ ಸುರರುಗಳ ದಿವ್ಯಾಸ್ತ್ರ ಪಡೆದಿಹನು ॥೧೬೯॥

ಶ್ರೀಕೃಷ್ಣ ಯಾದವರ ಸಹಿತದಲಿ ಐತಂದು
ಪಾಂಡವರ ಕಾಣುತಲಿ ರಾಜ್ಯವನು ಕೊಡಿಸುವೆನು
ಎನ್ನುತಲಿ ಪಾಂಡವರ್ಗೆ ಭರವಸೆಯ ನಿತ್ತಿಹನು
ಎನ್ನುತಲಿ ವರವಿಪ್ರ ಗುಪ್ತಚರ ನುಡಿದಿಹನು ॥೧೭೦॥

ಧೃತರಾಷ್ಟ್ರ ಭೂಪತಿಯು ಕೇಳುತಲಿ ಕಳವಳದಿ
ಭೀಮನಾ ಅದ್ಭುತದ ಬಲಶಕ್ತಿ ಸಾಹಸದಿ
ಅರ್ಜುನನ ಅಸ್ತ್ರ ಪ್ರವೀಣತೆಯ ಶೌರ್ಯದಲಿ
ಕೌರವರು ಸಾಯುವರು ಎನ್ನುತಲಿ ಚಿಂತಿಸಿದ ॥೧೭೧॥

ಬಳಿ ಇರ್ದ ಆ ಶಕುನಿ ಕೇಳುತಲಿ ಆ ಕ್ಷಣದಿ
ಭೀಮನಾ ಸಾಹಸವ ಫಲುಗುಣನು ಪಾಶುಪತ
ಶರವನ್ನು ಪಡೆದುದನು ಸ್ವರ್ಗಕ್ಕೆ ತೆರಳಿರ್ದ
ವೃತ್ತಾಂತವೆಲ್ಲವನು ದುರ್ಯೋಧನಂಗೊರೆದ ॥೧೭೨॥

ದುರ್ಯೋಧನಾಲಿಸುತ ಕಡು ಖಿನ್ನನಾಗುತಲಿ
ವಿಷಣ್ಣದ ವದನದಲಿ ಕುಳಿತಿರಲು ಕಲಿಕರ್ಣ
ಪಾಂಡವರನೆಲ್ಲರನು ನಾನೊರ್ವ ವಧಿಸುವೆನು
ಚಿಂತೆಯನು ಮಾಡದಿರು ಕೌರವನೆ ಎಂದಿಹನು ॥೧೭೩॥

ಭೀಮನಾ ಗದೆಯಿರಲಿ ಅರ್ಜುನನ ಶರವಿರಲಿ
ಹರನಿತ್ತ ಪಾಶುಪತ ಅಸ್ತ್ರವೇ ಇರುತಿರಲಿ
ಎಲ್ಲವನು ಪುಡಿಗೈದು ಪಾಂಡವರ ವಧಿಸುವೆನು
ಎನ್ನುತಲಿ ಕೌರವಗೆ ಭರವಸೆಯ ನಿತ್ತಿಹನು ॥೧೭೪॥

ಆ ಸಮಯ ದೂರ್ವಾಸ ಮುನಿವರನು ತನ್ನಯಾ
ಈರೈದು ಸುವಿರದ ಶಿಷ್ಯರಾ ಸಹಿತದಲಿ
ಅರಮನೆಗೆ ಬರುತಿರಲು ಧೃತರಾಷ್ಟ್ರ ನೃಪವರನು
ಋಷಿವರನ ಆದರದಿ ಸ್ವಾಗತವ ಗೈದಿಹನು ॥೧೭೫॥

ರತ್ನಗಳ ವಜ್ರಗಳ ಖಚಿತದಲಿ ಶೋಭಿತದ
ಸಿಂಹದಾ ಪೀಠದಲಿ ಕೂಡ್ರಿಸುತ ವಿನಯದಲಿ
ಅರ್ಘ್ಯಪಾದ್ಯಾದಿಯ ಮಧುಪರ್ಕ ಪೂಜೆಯಲಿ
ದೂರ್ವಾಸ ಮುನಿವರನ ಸತ್ಕಾರ ಗೈದಿಹನು ॥೧೭೬॥

ಆ ಶಕುನಿ ಕಲಿಕರ್ಣ ದುರ್ಯೋಧನಾದಿಗಳು
ಸೇರುತಲಿ ದೂರ್ವಾಸ ಮುನಿವರನ ಕೋಪದಲಿ
ಪಾಂಡವರ ನಾಶವನು ಮಾಡಿವುದು ಎನ್ನುತಲಿ
ದೂರ್ವಾಸ ಮುನಿವರನ ಸೇವೆಯನು ಗೈದಿಹರು ॥೧೭೭॥

ಕೆಲವುದಿನ ಕಳೆಯುತಿರೆ ದೂರ್ವಾಸ ಮುನಿವರನು
ಕೌರವನ ಕರೆಯುತಲಿ ನೀವೆಮ್ಮ ಸೇವೆಯನು
ಅದ್ಭುತದಿ ಗೈದಿಹಿರಿ ಸಂತುಷ್ಟರಾಗಿಹೆವು
ಬೇಕಾದ ವರವನ್ನು ಬೇಡುವುದು ಎಂದಿಹನು ॥೧೭೮॥

ಋಷಿವರರೆ ನೀವುಗಳು ವರವನ್ನು ಈಯುವೊಡೆ
ನಿಮ್ಮಯಾ ಈರೈದು ಶಿಷ್ಯರಾ ಸಹಿತದಲಿ
ಪಾಂಡವರ ಬಳಿಯಲ್ಲಿ ತೆರಳುತಲಿ ರಾತ್ರಿಯಲಿ
ಭೋಜನವ ಬೇಡುವುದು ಎಂದಿಹನು ಕೌರವನು ॥೧೭೯॥

ಸಾಕ್ಷಾತ್ತು ಶಿವನಿರ್ಪ ದೂರ್ವಾಸ ಮುನಿವರನು
ಮನದೊಳಗೆ ಕೌರವನ ಕುಹಕವನು ಅರಿಯುತಲಿ
ದುಷ್ಟರಾ ಮನೆಯನ್ನು ಉಂಡುದಕೆ ಹಂಗಾಗಿ
ಪಾಪವನು ಗೈಯ್ಯುವಾ ಗತಿಯಾಯ್ತು ಎಂದಿಹನು ॥೧೮೦॥

ಕೌರವನೆ ನಿನ್ನಯಾ ಮನೆಯನ್ನ ಉಂಡಿಹೆನು
ಇಲ್ಲೆಂದು ನಾ ನುಡಿಯೆ ಒಪ್ಪಿದೆನು ಎನ್ನುತಲಿ
ದೂರ್ವಾಸ ಋಷಿವರನು ಶಿಷ್ಯರಸಮೇತದಲಿ
ಪಾಂಡವರು ವಾಸಿಸುವ ತಾಣಕ್ಕೆ ತೆರಳಿದರು ॥೧೮೧॥

ವರಭೀಷ್ಮ ಗುರುದ್ರೋಣ ಅಶ್ವತ್ಥ ಕೃಪರುಗಳು
ವರವಿದುರ ಅರಿಯುತಲಿ ದೂರ್ವಾಸ ಮುನಿವರನ
ಕೋಪದಲಿ ಪಾಂಡವರು ಭಸ್ಮವದು ಆಗುವರು
ಎನ್ನುತಲಿ ಚಿಂತಿಸುತ ಕಳವಳವಗೊಂಡಿಹರು ॥೧೮೨॥

ಅಸ್ತಮಯ ಸಮಯದಲಿ ದೂರ್ವಾಸ ಮುನಿವರನು
ಶಿಷ್ಯರ ಸಮೇತದಲಿ ಬರುತಲಿರೆ ಧರ್ಮಜನು
ಸಾಷ್ಟಾಂಗ ವೆರಗುತಲಿ ಧರ್ಭಾಸನೀಯುತಲಿ
ಅರ್ಘಪಾದ್ಯಾದಿಯಲಿ ಪೂಜೆಯನು ಗೈದಿಹನು ॥೧೮೩॥

ಹುಲ್ಲಿನಾ ಗುಡಿಸಲವು ಎಮ್ಮಯಾ ಅರಮನೆಯು
ಪಲಾಶ ಪತ್ರವಿದು ಚಿನ್ನದಾ ಪಾತ್ರೆಯಿದೆ
ಇದುಧರ್ಭಾಸನವು ಸಿಂಹಾಸನಿರುತಿಹುದು
ಈ ವನವೆ ಎಮ್ಮಯಾ ಸಾಮ್ರಾಜ್ಯ ವಿರುಶಿಹುದು ॥೧೮೪॥

ರಾಜರಾ ವೈಭವದಿ ನಿಮ್ಮನ್ನು ಸತ್ಕರಿಪ
ಭಾಗ್ಯವದು ಎಮಗಿಲ್ಲ ಕೋಪಿಸದೆ ಎಮ್ಮಯಾ
ಬಡತನದ ಆತಿಥ್ಯ ಸ್ವಿಕರಿಪುದೆನ್ನುತಲಿ
ಕಂದಮೂಲಾದಿಗಳ ಧರ್ಮಜನು ಇತ್ತಿಹನು ॥೧೬೩೫॥

ಧರ್ಮಜನೆ ನಾವುಗಳು ಶಿಷ್ಯರುಗಳೆಲ್ಲರೂ
ಬಹುದೂರ ಪಯಣದಲಿ ನಡೆಯುತಲಿ ದಣಿದಿಹೆವು
ಬಹಳಷ್ಟು ಹಸಿದಿಹೆವು ಸುಗ್ರಾಸ ಭೋಜನದ
ಸಿದ್ಧತೆಯ ಗೈಯ್ಯುವುದು ಎಂದಿಹನು ಋಷಿವರನು ॥೧೬೩೬॥

ಈಗಲೇ ನದಿಯಲ್ಲಿ ಸ್ನಾನವನು ಮಾಡುತಲಿ
ಸಂಧ್ಯಾದಿ ಕರ್ಮಗಳ ಗೈಯ್ಯುತಲಿ ನಾವುಗಳು
ಮರಳುವೆವು ನಮಗತಿಯ ರುಚಿಯಾದ ಷಡ್ರಸದ
ಪಕ್ವಾನ್ನದೂಟವನು ಸಿದ್ಧತೆಯ ಗೊಳಿಸುವುದು ॥೧೬೩೭॥

ಎನ್ನುತಲಿ ದೂರ್ವಾಸ ಮುನಿವರನು ನುಡಿಯುತಲಿ
ಶಿಷ್ಯರ ಸಮೇತದಲಿ ಸ್ನಾನಕ್ಕೆ ತೆರಳುತಿರೆ
ಧರ್ಮಜನು ಕಳವಳದಿ ದ್ರೌಪದಿಯ ಕರೆಯುತಿರೆ
ಉಂಡಿರುವ ತೇಗಿನಲಿ ತೇಗುತಲಿ ಬಂದಿಹಳು ॥೧೬೩೮॥

ಸತಿಯಳಾ ಭೋಜನವು ಮುಗಿದಿಹುದು ಮತ್ತೆಯು
ಮುನಿವರಗೆ ಶಿಷ್ಯರಿಗೆ ಇನ್ನೆಂತು ಭೋಜನವ
ಈಯುವುದು ಎನ್ನುತಲಿ ಶಿರದಲ್ಲಿ ಆಕಾಶ
ಬಿದ್ದಂತೆ ಚಿಂತೆಯನು ಗೈದಿಹನು ಧರ್ಮಜನು ॥೧೬೩೯॥

ಅನ್ನವನು ಈಯದಿರೆ ದೂರ್ವಾಸ ಕ್ರೋಧದಲಿ
ಜಡೆಯನ್ನು ಅಪ್ಪಳಿಸಿ ಕೆಂಡವನು ಕಾರುತಲಿ
ಶಾಪವನು ಈಯುತಲಿ ಭಸ್ಮವನು ಮಾಡುವನು
ಎನ್ನುತಲಿ ಯಮಸುತನು ಭಯಗ್ರಸ್ತನಾಗುತಲಿ ॥೧೬೪೦॥

ಧೌಮ್ಯರಿಗೆ ನಮಿಸುತಲಿ ಈ ಕಷ್ಟ ತೊಲಗಲಿಕೆ
ಪರಿಹಾರ ಸೂಚಿಪುದು ಎನ್ನುತಲಿ ನುಡಿಯುತಿರೆ
ಮುನ್ನಿನಲಿ ಕಷ್ಟದಲಿ ರಕ್ಷಿಸಿದ ಘನಮಹಿಮ
ದೇವನನ ಮರೆತಿಹಿರಿ ಎಂದಿಹನು ಗುರುಧೌಮ್ಯ ॥೧೬೪೧॥

ವಿಷದಲ್ಲಿ ಉರಿಯಲ್ಲಿ ವನದಲ್ಲಿ ಸಲುಹಿರುವ
ಸಭೆಯಲ್ಲಿ ಮಾನಿನಿಯ ಮಾನವನು ಕಾಯ್ದಿರುವ
ಕರುಣಾಳು ದೇವನನ ಕೃಷ್ಣನನು ಮರೆಯುತಲಿ
ಸುಮ್ಮನೇ ಚಿಂತಿಸುವೆ ಎಂದಿಹನು ಗುರುಧೌಮ್ಯ ॥೧೬೪೨॥

ಕಷ್ಟಗಳು ಮುತ್ತುತಿರೆ ಮನದೊಳಗೆ ನೆನೆಯುತಿರೆ
ಆ ಕ್ಷಣದಿ ಧಾವಿಸುತ ಸಲಹುವೆನು ಎನ್ನುತಲಿ
ಅಭಯವನು ಇತ್ತಿರುವ ಕೃಷ್ಣನಾ ನುಡಿಗಳನು
ಇಷ್ಟರಲಿ ಮರೆತಿಹೆಯಾ ಎಂದಿಹನು ಗುರುಧೌಮ್ಯ ॥೧೬೪೩॥

ದೇವನನು ಮರೆಯುವದೆ ಕಷ್ಟಕ್ಕೆ ಮೂಲವದು
ಅನವರತ ದೇವನನು ಮನದೊಳಗೆ ನೆನೆವಂಗೆ
ಭವದೊಳಿಹ ಕಷ್ಟಗಳ ದುಃಖಗಳ ತಾಪವದು
ಭೀತಿಯದು ಸೋಂಕದದು ಎಂದಿಹನು ಗುರುಧೌಮ್ಯ ॥೧೬೪೪॥

**ದ್ರೌಪದಿಯು ಆರ್ತದಲಿ ದ್ವಾರಕಾಧೀಶನನ**
**ಕೃಷ್ಣನನ ಸ್ತುತಿಸಿದಳು ದೈನ್ಯದಿಂ ಭಕುತಿಯಲಿ**

ದ್ರೌಪದಿಯ ಆರ್ತದಾ ನಾದವನು ಕೇಳುತಲಿ
ಶ್ರೀಕೃಷ್ಣ ಎಲ್ಲಿಯೇ ಇರ್ದರೂ ಧಾವಿಸುತ
ಐತಂದು ರಕ್ಷಿಪನು ಬೇಗನೇ ದ್ರೌಪದಿಯು
ಕೃಷ್ಣನನು ಪ್ರಾರ್ಥಿಪುದು ಎಂದಿಹನು ಗುರುಧೌಮ್ಯ ॥೧೬೪೫॥

ಧರ್ಮಜನು ಭರದಲ್ಲಿ ದ್ರೌಪದಿಗೆ ಕೃಷ್ಣನನು
ಭಕುತಿಯಲಿ ಸ್ತುತಿಸುವುದು ಎನ್ನುತಲಿ ನುಡಿಯುತಿರೆ
ದ್ವಾರಕಾಧೀಶನನ ಕೃಷ್ಣನನ ಮನದೊಳಗೆ
ನೆನೆಯುತಲಿ ದ್ರೌಪದಿಯು ಪ್ರಾರ್ಥನೆಯ ಗೈದಿಹಳು ॥೧೬೪೬॥

ಹೇ ಕೃಷ್ಣ ಕೇಶವನೆ ಮಾಧವ ಜನಾರ್ದನನೆ
ವಾಮನ ತ್ರಿವಿಕ್ರಮನೆ ಅಚ್ಯುತನೆ ನರಯಣನೆ
ಶಕಟನನ ಧೇನುಕನ ಚಾಣೂರ ಮುಷ್ಟಿಯನು
ಕಂಸನನು ವಧಿಸಿರುವ ಶ್ರೀ ಕೃಷ್ಣ ರಕ್ಷಿಪುದು ॥೧೬೪೭॥

ವಸುದೇವ ಸುತಶೌರಿ ಅಸುರಾರಿ ಮುರವೈರಿ
ಶಿಶುಪಾಲ ನರಕಾದಿ ಅಸುರರಾ ಸಂಹಾರಿ
ಭವದುಃಖ ಪರಿಹಾರಿ ಭಕುತಜನ ಕೈವಾರಿ
ಗಿರಿಧಾರಿ ಮುರಾರಿಯೇ ಶ್ರೀಹರಿಯೆ ರಕ್ಷಿಪುದು ॥೧೬೪೮॥

ಗೋವರ್ಧನಾ ಗಿರಿಯ ಬೆರಳಿನಲಿ ಎತ್ತುತಲಿ
ಗೋವುಗಳ ರಕ್ಷಿಸಿದ ಗೋಪಾಲ ಕೃಷ್ಣನೇ
ದೇವಕೀ ನಂದನನೆ ಯಶೋದೆಯಾ ಕಂದನೇ
ನಂದನಾ ಕಂದನನೆ ಶ್ರೀಕೃಷ್ಣ ರಕ್ಷಿಪುದು ॥೧೬೪೯॥

ವೇದಗಳ ಶಾಸ್ತ್ರಗಳ ನಾನೊಂದು ಅರಿಯದಿಹೆ
ನಿನ್ನನ್ನು ಸ್ತುತಿಸಲಿಕೆ ಅಸಮರ್ಥಳಾಗಿಹೆನು
ನೀ ಎನ್ನ ದೈವವಿಹೆ ನಿನ್ನನ್ನು ನಂಬಿಹೆನು
ಕರುಣೆಯಲಿ ನೀ ಎನ್ನ ರಕ್ಷಿಪುದು ಎಂದಹಳು ॥೧೬೫೦॥

ಮುನ್ನಿನಲಿ ಸಭೆಯಲ್ಲಿ ಅಕ್ಷಯದ ಸೀರೆಯನು
ಈಯುತಲಿ ಎನ್ನಯಾ ಮಾನವನು ಕಾಯ್ದಂತೆ
ಈಗೆನ್ನ ಐವರಾ ಪತಿಗಳಾ ಮಾನವನು
ಬಿಡದಲೇ ಕಾಯುವುದು ಎಂದಿಹಳು ದ್ರೌಪದಿಯು ॥೧೬೫೧॥

ಇಲ್ಲದಿರೆ ಪರಶಿವನ ಅವತಾರ ಎನಿಸಿರುವ
ದೂರ್ವಾಸ ಮುನಿವರನ ಉಗ್ರತರ ಕೋಪದಾ
ಜ್ವಾಲೆಯಲಿ ಐವರೂ ಗಂಡಂದಿರಳಿಯುವರು
ನಾನು ಸಹ ಅಗ್ನಿಯಲಿ ಧುಮುಕುವೆನು ಎಂದಿಹಳು ॥೧೬೫೨॥

ಕಾನನದಿ ನಾರಾಯಣೆನ್ನುತಲಿ ಆರ್ತದಲಿ
ಕೂಗುತಿಹ ಒರಲುತಿಹ ಧ್ರುವಶಿಶುವ ರಕ್ಷಿಸಿದೆ
ನರಸಿಂಹ ರೂಪದಲಿ ಕಂಭದಲಿ ಮೂಡುತಲಿ
ಪ್ರಹ್ಲಾದ ಬಾಲಕನ ಕರುಣೆಯಲಿ ರಕ್ಷಿಸಿದೆ ॥೧೬೫೩॥

ಸಾಯುವಾ ಸಮಯದಲಿ ನಾರಾಯಣೆನ್ನುತಲಿ
ಕೂಗುತಿರೆ ಅಜಮಿಳನ ಕರುಣೆಯಲಿ ರಕ್ಷಿಸಿದೆ
ಮೊಸಳೆಯದು ಕಾಲನ್ನು ಹಿಡಿದಿರ್ದ ಗಜೇಂದ್ರನು
ಕಮಲವನು ಅರ್ಪಿಸಲು ಕಾಯ್ದಿರುವೆ ಎಂದಿಹಳು ॥೧೬೫೪॥

ಮುನ್ನಿನಲಿ ದೂರ್ವಾಸ ಮುನಿವರನು ಕೋಪದಲಿ
ಶಾಪವನು ಈಯಲಿಕೆ ಸನ್ನದ್ಧನಾಗಿರಲು
ಅಂಬರಿಷ ನೃಪವರನು ಹದಿನಾಲ್ಕು ಲೋಕಗಳ
ಸುತ್ತುತಿರೆ ದೂರ್ವಾಸ ಬೆಂಬತ್ತಿ ಪರಿಭ್ರಮಿಸೆ ॥೧೬೫೫॥

ಪರಭಕುತ ಅಂಬರಿಷ ಹೇವಿಷ್ಣು ಶ್ರೀಹರಿಯೆ
ಗೋವಿಂದ ನರಯಣನೆ ರಕ್ಷಿಪುದು ರಕ್ಷಿಪುದು
ಎನ್ನುತಲಿ ಪ್ರಾರ್ಥಿಸಲು ಸುದರ್ಶನ ಚಕ್ರವನು
ಎಸೆಯುತಿರೆ ಅಂಬರಿಷ ನೃಪವರನು ಸುತ್ತಲೂ ॥೧೬೫೬॥

ತಿರುಗುತಲಿ ರಕ್ಷಿಸಲು ಕಿಡಿಕೆಂಡವಾಗಿರ್ದ
ದೂರ್ವಾಸ ಶೀತಲನು ಚಂದ್ರಮನು ಆಗಿಹನು
ಅಂಬರಿಷ ಭಕುತನನು ಸಲುಹಿದಾ ಪರಿಯಲ್ಲಿ
ಎಮ್ಮನ್ನು ರಕ್ಷಿಪುದು ಎಂದಿಹಳು ದ್ರೌಪದಿಯು ॥೧೬೫೭॥

ವಿಷದೊಳಗೆ ರಕ್ಷಿಸಿದೆ ಉರಿಯೊಳಗೆ ಸಲುಹಿರುವೆ
ಸಭೆಯೊಳಗೆ ವನದೊಳಗೆ ಕಷ್ಟದಲಿ ಸಲುಹಿರುವೆ
ನೀ ಕಾಯದಿರ್ದೊಡೆಯು ಖಚಿತದಲಿ ಸಾಯುವೆವು
ಬೇಗನೇ ರಕ್ಷಿಪುದು ಎಂದಿಹಳು ಲಲಿತಾಂಗಿ ॥೧೬೫೮॥

ಪರಶಿವನೆ ಎಮ್ಮನ್ನು ಪರಿಕಿಸಲು ಬಂದಿರಲು
ನೀನಲ್ಲದಿನ್ನಾರು ಎಮ್ಮನ್ನು ಕಾಯುವರು
ಹಣೆಗಣ್ಣ ಜ್ವಾಲೆಯಲಿ ಕಾಮನನು ಸುಟ್ಟಂತೆ
ಎಮ್ಮನ್ನು ಭಸ್ಮವನು ಮಾಡುವನು ಎಂದಿಹಳು ॥೧೬೫೯॥

ಮಮಪ್ರಾಣ ಪಾಂಡವರು ಎಂಬುವಾ ಬಿರುದನ್ನು
ಹೊತ್ತಿರುವ ನಿನ್ನಯಾ ಪ್ರಾಣಗಳು ಐಯ್ದುಗಳು
ನೋಯುತಿರೆ ಸುಮ್ಮನೇ ಇರುತಿಹುದು ಯೋಗ್ಯವೇ
ಬೇಗನೇ ಬಾ ಎಂದು ಆರ್ತದಲಿ ಕೂಗಿದಳು ॥೧೬೬೦॥

ಎನ್ನಯಾ ಪ್ರಾರ್ಥನೆಯು ಆರ್ತದಾ ನಾದವಿದು
ನಿನ್ನಯಾ ಹೃದಯಕ್ಕೆ ತಾಗದೇ ಇರುತಿಹುದೆ
ನಿನ್ನನ್ನು ನಂಬಿಹೆವು ಧೃಢವಾಗಿ ನೆಚ್ಚಿಹೆವು
ನೀನೆಮಗೆ ಒಬ್ಬನೇ ಗತಿಮತಿಯು ಎಂದಿಹಳು ॥೧೬೬೧॥

ಹೇ ಅಣ್ಣ ಹೇ ಕೃಷ್ಣ ಬೇಗನೇ ಬಾ ಎಂದು
ಗಗನವದು ಭೇದಿಸುವ ಸ್ವರದಲ್ಲಿ ಕೂಗುತಿರೆ
ನಾದವದು ಇರುಳಿನಲಿ ತೀವ್ರದಲಿ ಸಾಗುತಲಿ
ದ್ವಾರಕೆಯ ಕೃಷ್ಣನಾ ಹೃದಯವನು ತಾಗಿದುದು ॥೧೬೬೨॥

ರಾತ್ರಿಯಲಿ ಪರಿಸತ್ಯ ಭಾಮೆಯಾ ಸಹಿತದಲಿ
ಸರಸದಲಿ ಸಲ್ಲಾಪ ಕಥನದಲಿ ತೊಡಗಿರ್ದ
ಕೃಷ್ಣನಾ ಹೃದಯವನು ಬರಸಿಡಿಲು ಎರಗಿದಾ
ಪರಿಯಲ್ಲಿ ದ್ರೌಪದಿಯು ಸ್ವರವದುವೆ ತಾಗಿದುದು ॥೧೬೬೩॥

ಭರದಲ್ಲಿ ಶ್ರೀ ಕೃಷ್ಣ ಕೇಳುತಲಿ ಏಳುತಲಿ
ಹೊರಡಲಿಕೆ ಸನ್ನದ್ಧನಾಗಿರಲು ಭಾಮೆಯುಳು
ಈ ಪರಿಯ ರಾತ್ರಿಯಲಿ ನೀವೆತ್ತ ಹೊರಡುವುದು
ರಾತ್ರಿಯಲಿ ಪಯಣವದು ಲೇಸಲ್ಲ ಎಂದಿಹಳು ॥೧೬೬೪॥

ಹೇ ಭಾಮೆ ಎನ್ನಯಾ ಪ್ರಾಣಗಳು ಪಾಂಡವರು
ಕಷ್ಟದಲಿ ಸಿಲುಕಿಹರು ದ್ರೌಪದಿಯು ಎನ್ನನ್ನು
ಆರ್ತದಲಿ ಕೂಗುವಳು ಭಕುತರನು ರಕ್ಷಿಸಲು
ಸಮಯಾ ಸಮಯವುಂಟೇ ಎನ್ನುತಲಿ ಹೊರಟಿಹನು ॥೧೬೬೫॥

ಪುರಮಥನ ರಥವನ್ನು ಏರುತಲಿ ವೇಗದಲಿ
ಸಾಗುತಲಿ ಕಾಮ್ಯಕದ ವನದಲ್ಲಿ ಬರುತಿರಲು
ರಾತ್ರಿಯಲಿ ರವಿಯುದಯ ವಾದಂತೆ ದಿವ್ಯದಾ
ಕೋಟಿ ಪ್ರಕಾಶವನು ಧರ್ಮಜನು ಕಂಡಿಹನು ॥೧೬೬೬॥

ರಥವಿಳಿದು ಮುರಮಥನ ಎದುರಿನಲಿ ಬರುತಿರಲು
ತನ್ನಯ ಮನೋರಥವು ಫಲಿಸಿತೋ ಎಂಬಂತೆ
ಸಂತಸದ ಸಾಗರವು ಉಕ್ಕುತಲಿ ಮಿಕ್ಕುತಲಿ
ಸೋದರರ ಸಹಿತದಲಿ ಸಾಷ್ಟಾಂಗವೆರಗಿದನು ||೧೬೬೭||

ಮುರಹರನು ಪಾಂಡವರ ತೆಗೆತೆಗೆದು ಅಪ್ಪುತಲಿ
ಧೌಮ್ಯಾದಿ ಗುರುವರರು ಮುನಿಜನರು ವಿಪ್ರರರು
ಯಾದವ ಕುಲೇಂದುವನು ಶ್ರೀಕೃಷ್ಣರಾಯನನು
ಸ್ತುತಿಸುತಲಿ ಚರಣದಲಿ ಸಾಷ್ಟಾಂಗವೆರಗಿದರು ||೧೬೬೮||

ಶ್ರೀಕೃಷ್ಣ ಸಕಲರನು ಹರಸುತಲಿ ಭರದಲ್ಲಿ
ಸಾಗುತಲಿ ಧ್ಯಾನದಲಿ ಮುಳುಗಿರ್ದ ದ್ರೌಪದಿಯ
ಬಳಿಯಲ್ಲಿ ಐತಂದು ಹೇ ತಂಗಿ ದ್ರೌಪದಿಯೆ
ನಿನ್ನಣ್ಣ ಶ್ರೀಕೃಷ್ಣ ಬಂದಿಹೆನು ನೋಡೆಂದ ||೧೬೬೯||

ಕೃಷ್ಣನಾ ನುಡಿಗಳನು ಕೇಳುತಲಿ ಆ ಕೃಷ್ಣೆ
ಕಣ್ತೆರೆದು ನೋಡುತಿರೆ ಶ್ಯಾಮಲನ ಕೋಮಲನ
ಕಮನೀಯ ಗಾತ್ರನಾ ಕಮಲಾಕ್ಷ ಕೃಷ್ಣನನು
ಕಾಣುತಲಿ ಚರಣದಲಿ ಮೈಯ್ಯನ್ನು ಇಕ್ಕಿದಳು ||೧೬೭೦||

ದ್ರೌಪದಿಯು ಆನಂದ ಭಾಷ್ಪಗಳ ಸುರಿಸುತಲಿ
ಯಾದವನ ಪಾದಗಳ ತೊಳೆಯುತಿರೆ ಶ್ರೀಕೃಷ್ಣ
ಹೃದಯವದು ಕರಗುತಲಿ ಏಳೆನ್ನ ತಂಗಿಯೇ
ಎನ್ನುತಲಿ ಎಬ್ಬಿಸುತ ದೃಗುಜಲವನೊರೆಸಿದನು ||೧೬೭೧||

ನೀ ಎನ್ನ ಆರ್ತದಲಿ ಕೂಗುತಿರೆ ಕಳವಳದಿ
ಎನ್ನಯಾ ಹೃದಯವದು ತಳಮಳವಗೊಳ್ಳುತಲಿ
ಸಕಲವನು ತೊರೆಯುತಲಿ ಧಾವಿಸುತ ಬಂದಿಹೆನು
ಕೂಗಿರುವ ಕಾರಣವ ಬೇಗನೇ ಹೇಳೆಂದ ||೧೬೭೨||

ಸಕಲ ಸಚರಾಚರವ ವಿಶ್ವವನು ಎಲ್ಲವನು
ಹದಿನಾಲ್ಕು ಲೋಕಗಳ ಒಳಹೊರಗು ವ್ಯಾಪಿಸುತ
ನೀನರಿಯದಾ ವಿಷಯುವದು ವಸ್ತುವದು ಆವುದಿದೆ
ಸುಮ್ಮನೇ ನಾಟಕದ ದಾತುಗಳನಾಡುತಿಹೆ ||೧೬೭೩||

ಸಾಕ್ಷಾತ್ತು ಪರಶಿವನು ದೂರ್ವಾಸ ಮುನಿವರನು
ಈರೈದು ಸಾವಿರದ ಶಿಷ್ಯರಾ ಸಹಿತದಲಿ
ಎಮ್ಮನ್ನು ಪರಿಕಿಸಲು ರಾತ್ರಿಯಾ ಸಮಯದಲಿ
ಭೋಜನಕೆ ಎಮ್ಮಯಾ ಆಶ್ರಮಕೆ ಬಂದಿಹನು ||೧೬೭೪||

ಎನ್ನಯಾ ಭೋಜನದ ನಂತರದಿ ರಾತ್ರಿಯಲಿ
ಅಕ್ಷಯದ ಪಾತ್ರೆಯದು ಅನ್ನವನು ಈಯದದು
ರಾತ್ರಿಯಲಿ ಈ ಸಮಯ ದೂರ್ವಾಸ ಮುನಿವರಗೆ
ಭೋಜನವ ನಾವೆಂತು ಈಯುವುದು ಎಂದಿಹಳು

ಅನ್ನವನು ಈಯದಿರೆ ಉಗ್ರಮುನಿ ದೂರ್ವಾಸ
ಹರನಂತೆ ಪ್ರಳಯದ್ವಾಕ್ರೋಪದಲಿ ಶಾಪವನು
ಈಯುತಲಿ ನಮ್ಮನ್ನು ಭಸ್ಮವನು ಮಾಡುವನು
ನೀ ಎಮ್ಮ ರಕ್ಷಿಪುದು ಎಂದಿಹಳು ಪಾಂಚಾಲಿ

ಹೇ ತಂಗಿ ದ್ರೌಪದಿಯೆ ನಾವೀಗ ದೂರದಾ
ದ್ವಾರಕೆಯ ಪುರದಿಂದ ಐತಂದು ಬಳಲಿಹೆವು
ಎನ್ನಯಾ ಹೊಟ್ಟೆಯದು ಹಸಿದಿಹುದು ಮೊದಲಿಂಗೆ
ತಿನ್ನಲಿಕೆ ಏನಾದರೀಯುವುದು ಎಂದಿಹನು ||೧೬೭೭||

ನಾವುಗಳು ಹಸಿವೆಯಲಿ ಬಂದಿರಲು ನೀವುಗಳು
ನಿಮ್ಮಯಾ ಕಷ್ಟಗಳ ಹೇಳುವುದು ಯೋಗ್ಯವೇ
ಪಾತ್ರೆಯಲಿ ಶೇಷಾನ್ನವಿರ್ದೊಡೆಯು ನೋಡುವೆನು
ಪಾತ್ರೆಯನು ಕೊಂಡು ಬಾ ಎಂದಿಹನು ಮುರಹರನು ||೧೬೭೮||

ದ್ರೌಪದಿಯು ಆ ಸೂರ್ಯ ಪಾತ್ರೆಯನು ಕೊಳ್ಳುತಲಿ
ಐತಂದು ಕೃಷ್ಣನಾ ಕೈಯ್ಯೊಳಗೆ ಇರಿಸುತಿರೆ
ಕೃಷ್ಣನಾ ಕಣ್ಣೊಳಿಹ ಸೂರ್ಯನಾ ಕಿರಣವದು
ಪಾತ್ರೆಯಲಿ ಬೀಳುತಿರೆ ಅಗಳನ್ನ ಕಂಡಿಹನು ||೧೬೭೯||

ಪಾತ್ರೆಯಲಿ ಅಂಟಿರ್ದ ಒಂದಗಳು ಅನ್ನವನು
ಕೊಳ್ಳುತಲಿ ಶ್ರೀಕೃಷ್ಣ ಬಾಯೊಳಗೆ ಇರಿಸುತಲಿ
ಹೇ ತಂಗಿ ದ್ರೌಪದಿಯೆ ಅನ್ನವದು ಇಲ್ಲೆಂದು
ಸುಮ್ಮನೇ ಸುಳ್ಳನ್ನು ನುಡಿದಿರುವೆ ಎಂದಿಹನು ||೧೬೮೧||

ಒಂದಗಳು ಅನ್ನವನು ಶ್ರೀಕೃಷ್ಣ ನರಯಣನು
ಸೇವಿಸಲು ಜಠರದಾ ಹದಿನಾಲ್ಕು ಲೋಕಗಳ
ಪ್ರಾಣಿಗಳು ಜೀವಿಗಳು ಹಸಿವೆಯದು ತೊಲಗುತಲಿ
ಸುಗ್ರಾಸ ಭೋಜನದ ತೃಪ್ತಿಯಲಿ ತೇಗಿದವು ||೧೬೯೦||

ನದಿಯೊಳಗೆ ಮುಳುಗಿರ್ದ ದೂರ್ವಾಸ ಮುನಿವರನು
ಈರೈದು ಸಾವಿರದ ಶಿಷ್ಯರುಗಳೆಲ್ಲರೂ
ಪಂಚಪಕ್ವಾನ್ನಗಳ ಭೋಜನವ ಸವಿದಂತೆ
ಜಠರಗಳು ತುಂಬುತಲಿ ತೃಪ್ತಿಯಲಿ ತೇಗಿದರು ||೧೬೮೨||

ಗುರುವರರೆ ಎಮ್ಮಯಾ ಹೊಟ್ಟೆಗಳು ತುಂಬಿಹವು
ಒಂದುಹನಿ ನೀರದಾವೆ ಗಂಟಲೊಳು ಇಳಿಯದಿದೆ
ಇನ್ನೆಂತು ಧರ್ಮಜನ ಭೋಜನವ ಗೈಯ್ಯುವುದು
ಎನ್ನುತಲಿ ನುಡಿಯುತಿಹೆ ದೂರ್ವಾಸ ನುಡಿದಿಹನು ॥೧೬೮೩॥

ಪಾಂಡವರು ಕೃಷ್ಣನಾ ಭಕ್ತರುಗಳಿರುತಿಹರು
ಕೃಷ್ಣನಾ ಮಹಿಮೆಯಲಿ ಈ ಪರಿಯ ನಡೆದಿಹುದು
ಪಾಂಡವರ ಕೆಣಕಿದೊಡೆ ಕಷ್ಟವದು ತಪ್ಪದದು
ಎನ್ನುತಲಿ ದೂರ್ವಾಸ ಶಿಷ್ಯರಿಗೆ ನುಡಿದಿಹನು ॥೧೬೮೪॥

ಶಿಷ್ಯರ ಸಮೇತದಲಿ ದೂರ್ವಾಸ ಋಷಿವರನು
ಆಶ್ರಮಕೆ ಬರುತಿರಲು ಶ್ರೀಕೃಷ್ಣ ನೋಡುತಲಿ
ಪರಶಿವನ ಎತ್ತಣಿಂದ ಬರವಿದಾವುದು ಎನ್ನುತಲಿ
ಮುರಹರನು ವ್ಯಾಡನನ್ನು ಬಲವಾಗಿ ಅಪ್ಪಿದನು ॥೧೬೮೫॥

ಕುಹಕನಾ ಕೌರವನ ಮನೆಯನ್ನೆ ಉಣ್ಣುತಲಿ
ಈ ಪರಿಯ ನಾಟಕವ ನಾಡಿಹೆವು ಹಂಗಿನಲಿ
ನಿನ್ನಯಾ ಭಕುತರನು ಪೀಡಿಸುವ ಇಚ್ಛೆಯದು
ಎಳ್ಳನಿತು ಎಮಗಿಲ್ಲ ಎಂದಿಹನು ದೂರ್ವಾಸ ॥೧೬೮೬॥

ಹರಿಭಕುತ ಹರಭಕುತ ಇವರೊಳಗೆ ಭೇದವದು
ಎನಿತಿಲ್ಲ ಇಬ್ಬರೂ ಒಂದೆ ಸಮ ಎಮಗಿಹರು
ಹರಿಹರರ ಭೇದವನು ಮಾಡುವಾ ನರರುಗಳು
ನರಕದಲಿ ಶಾಶ್ವತದಿ ನರಳುವರು ಎಂದಿಹನು ॥೧೬೮೭॥

ನಿನ್ನಯಾ ಕರುಣೆಯಲಿ ಪಾಂಡವರು ಶತ್ರುಗಳ
ವಧಿಸುತಲಿ ರಾಜ್ಯವನು ಪಡೆಯುತಲಿ ಮೆರೆಯುವರು
ಹೋಗಿ ಬಹೆವೆನ್ನುತಲಿ ಪಾಂಡವರ ಹರಸುತಲಿ
ವರಹರನು ದೂರ್ವಾಸ ಮುನಿವರನು ತೆರಳಿದನು ॥೧೬೮೮॥

ಬಳಿಕಲಾ ಯಾದವನು ಧರ್ಮಜನೆ ಕೇಳುವುದು
ವನವಾಸದವಧಿಯದು ಮುಗಿಯಲಿಕೆ ಬಂದಿಹುದು
ಅಜ್ಞಾತವಾಸದಲಿ ಕೌರವನು ಜಾಲವನು
ಮತ್ತೆ ಈ ವನವಾಸ ಕಟ್ಟುವನು ಬೀಸುತಲಿ ॥೧೬೮೯॥

ಗುಪಿತದಲಿ ವೇಷವನು ಬದಲಿಸುತ ವಾಸಿಪುದು
ದುರುಳನಾ ಕೌರವನು ಜಾಲವನು ಬೀಸುತಲಿ
ವಿಧವಿಧದ ಕಷ್ಟಗಳ ನೀಡುಲಿಕೆ ಯುತ್ನಿಪನು
ನೀವುಗಳು ಎಚ್ಚರದೊಳಿಹುದೆಂದು ನುಡಿದಿಹನು ॥೧೬೯೦॥

ಮತ್ತೊಮ್ಮೆ ಕಷ್ಟಗಳು ಬಂದೊಡೆಯು ಎನ್ನನ್ನು
ನೆನೆಯುವುದು ನಾಬಹೆನು ಎನ್ನುತಲೆ ಪಾಂಡವರ
ಹರಸುತಲಿ ದ್ರೌಪದಿಯ ಸಾಂತ್ವನವಗೊಳಿಸುತಲಿ
ದ್ವಾರಕಾಪುರಧೀಶ ದ್ವಾರಕೆಗೆ ತೆರಳಿದನು ॥೧೬೯೧॥

ತನ್ನನ್ನು ನಂಬಿರುವ ಭಕುತರನು ಕೈಬಿಡದೆ
ಅನವರತ ಸಲುಹುವಾ ಶ್ರೀಕೃಷ್ಣ ರಾಯನಾ
ಕರುಣೆಯದು ಎರತುಂಟವೊ ಎನ್ನುತಲಿ ಧರ್ಮಜನು
ದ್ವಾರಕಾಧೀಶನನ ನೆನೆಯುತಲಿ ಇರ್ದಿಹನು ॥೧೬೯೨॥

**ಪಾಂಡವರ ನೋಯಿಸಲು ದುರುಳ ದುರ್ಯೋಧನನು ।**
**ಆಘೋಷ ಯಾತ್ರೆಯನು ಕೈಕೊಂಡು ನರಳಿದನು ॥**

ಕೇಳುವುದು ಜನಮೆಜಯ ನೃಪವರನೆ ಬಳಿಕಿನಲಿ
ಧರ್ಮಜನು ಕಾಮ್ಯಕದಿ ಹಲವುದಿನ ಕಳೆಯುತಿರೆ
ವೃಕ್ಷಗಳು ಬರಡಾಗಿ ಫಲಗಳನು ಈಯದಿರೆ
ಕಂದಮೂಲಾದಿಗಳು ದೊರೆಯದಿರೆ ನುಡಿದಿಹನು ॥೧೬೯೩॥

ಸೋದರರೆ ಈ ವನದಿ ನದಿಕೊಳವು ಬತ್ತಿಹವು
ತರುಲತೆಗಳೊಣಗುತಲಿ ಫಲಗುಣನು ಈಯದಿವೆ
ಬೇರೆಡೆಗೆ ತೆರಳುವುದು ಎನ್ನುತಲಿ ನುಡಿಯುತಲಿ
ಪರಿವಾರ ಸಹಿತದಲಿ ದ್ವೈತವನ ಕೈದಿದನು ॥೧೬೯೪॥

ಸುತ್ತಣದಿ ವಾಸಿಸುತಿಹ ಋಷಿವರರು ತಾಪಸರು
ದ್ವಿಜರುಗಳು ಪಾಂಡವರ ನೋಡಲಿಕೆ ಬಂದಿಹರು
ದ್ವಿಜನೋರ್ವ ವಾಸಿಸುತ ಗುಪಿತದಲಿ ಪಾಂಡವರ
ವಿಷಯವನು ಸಕಲವನು ಕೇಳುತಲಿ ಅರಿಯುತಲಿ ॥೧೬೯೫॥

ಗಜಪುರಕೆ ಐತಂದು ಧೃತರಾಷ್ಟ್ರ ಭೂಪತಿಗೆ
ದೂರ್ವಾಸ ಮುನಿವರನ ಬವಣೆಯನು ಕಷ್ಟವನು
ಕೃಷ್ಣನ ಸಹಾಯವನು ವಿಶದದಲಿ ತಿಳಿಸುತಿರೆ
ಭೂಪತಿಯು ಮನದೊಳಗೆ ಮಿಡುಕುತಲಿ ನೊಂದಿಹನು ॥೧೬೯೬॥

ಅಕಟಕಟ ಮಕ್ಕಳಿವು ಪಾಪಿಗಳು ಕೇಡಿಗಳು
ಸುಮ್ಮನೇ ಪಾಂಡವರ ಹಿಂಸಿಸುತಲಿರುತಿಹರು
ಸತತವೂ ಶ್ರೀಕೃಷ್ಣ ರಕ್ಷಿಸುವ ಪಾಂಡವರ
ಕೂದಲೆಳೆ ಕೊಂಕದದು ಮಿಸುಕದದು ಎಂದಿಹನು ॥೧೬೯೭॥

ದುಷ್ಟರಾ ಮಾತುಗಳ ಕೇಳುತಲಿ ಕೌರವನು
ಪಾಂಡವರ ದ್ವೇಷಿಸುತ ಪೀಡಿಸುತಲಿರುತಿಹನು
ದ್ವೇಷಾಗ್ನಿ ಹೊತ್ತುತಲಿ ಕೌರವರ ಕುಲವನವ
ಭಸ್ಮವನು ಮಾಡುವುದು ಎಂದಿಹನು ಧೃತರಾಷ್ಟ್ರ ॥೧೬೯೮॥

ಧರ್ಮಜನ ದುಃಖವನು ಭೀಮನಾ ಕೋಪವನು
ಅರ್ಜುನನ ತಾಪವನು ಮಾದ್ರಿಜರ ಕಳವಳವ
ಮಾನಿನಿಯ ದ್ರೌಪದಿಯ ತಳಮಳವ ನೆನೆಯುತಲಿ
ಕೌರವರ ಶ್ರೀಕೃಷ ವಧಿಸುವನು ಎಂದಿಹನು ॥೧೬೯೯॥

ಎನ್ನಯಾ ಮಕ್ಕಳಿಗೆ ಉಳಿಗಾಲವಿನ್ನಿಲ್ಲ
ದೀಪವನು ಮುತ್ತಿರುವ ಹುಳುಗಳಾ ಪರಿಯಲ್ಲಿ
ಪಾಂಡವರ ಮುತ್ತಿರುವ ನೂರ್ವರೀ ನೊರಜುಗಳು
ಉರಿಯುತಲಿ ಪಟಪಟನೆ ಬೀಳ್ವವು ಎಂದಿಹನು ॥೧೭೦೦॥

ಸನಿಹದಲಿ ಕುಳಿತಿರ್ದ ಆ ಶಕುನಿ ಖಳಕರ್ಣ
ಕೇಳುತಲಿ ಕೌರವನ ಬಳಿಯಲ್ಲಿ ತೆರಳುತಲಿ
ದೂರ್ವಾಸ ವೃತ್ತಾಂತವರುಹುತಿರೆ ವಿಶದದಲಿ
ಕೌರವನು ಮನದೊಳಗೆ ತಳಮಳದಿ ಕುದಿದಿಹನು ॥೧೭೦೧॥

ಆ ಕಳ್ಳ ಕಪಟಿಯಾ ಕೃಷ್ಣನಾ ಕಾರಣದಿ
ಎನ್ನಯಾ ಯತ್ನಗಳು ವ್ಯರ್ಥಗಳು ಆಗಿಹವು
ಆವಪರಿ ಪಾಂಡವರ ಜಯಿಸುವುದು ಎನ್ನುತಲಿ
ಕೌರವನು ಚಿಂತೆಯಾ ಸಾಗರದಿ ಮುಳುಗಿಹನು ॥೧೦೦೨॥

ಚಿಂತೆಯನು ಮಾಡದಿರು ಕೌರವನೆ ನೀನೀಗ
ಗಜ ತುರಗ ಕಾಲಾಳು ಸೈನ್ಯದಾ ಸಹಿತದಲಿ
ವೈಭವದಿ ತೆರಳುತಲಿ ಪಾಂಡವರ್ಗೆ ನಿನ್ನಯಾ
ಐಶ್ವರ್ಯ ತೋರಿಪುದು ಎಂದಿಹನು ಆ ಶಕುನಿ ॥೧೭೦೩॥

ಬಡತನದಿ ಗುಡಿಸಲಲಿ ವಾಸಿಸುವ ಪಾಂಡವರು
ನಿನ್ನಯಾ ಧನಕನಕ ಮುತ್ತುಗಳ ರತ್ನಗಳ
ವಜ್ರಗಳ ಹಾರಗಳ ಕಿರೀಟದ ವೈಭವವ
ನೋಡುತಲಿ ಕಸಿವಿಸಿಯಗೊಳ್ಳುವರು ಎಂದಿಹನು ॥೧೭೦೪॥

ತಮ್ಮಯಾ ದಾರಿದ್ರ್ಯ ಹೀನಸ್ಥಿತಿ ನೆನೆಯುತಲಿ
ಸಹಿಸದಲೆ ತಳಮಳಿಸಿ ಪ್ರಾಣಗಳ ತ್ಯಜಿಸುವರು
ಶತ್ರುಗಳು ನಿಶ್ಯಕ್ತರಾಗಿರಲು ಶೌರ್ಯವನು
ವೈಭವವ ತೋರುವುದು ನೃಪನೀತಿ ಎಂದಿಹನು ॥೧೭೦೫॥

ನಿನ್ನಯಾ ಸಾಮ್ರಾಜ್ಞಿ ಭಾನುಮತಿ ದೇವಿಯರು
ಥಳಥಳಿಪ ದಿವ್ಯದಾ ವಸ್ತ್ರಗಳ ಧರಿಸುತಲಿ
ಸ್ವರ್ಣದಾಭರಣಗಳು ರತ್ನದ ಕಿರೀಟದಲಿ
ಶೋಭಿಸುತ ದ್ರೌಪದಿಯ ಬಳಿಯಲ್ಲಿ ಸುಳಿಯುತಿರೆ ॥೧೭೦೬॥

ಮಲಿನದಾ ಚಿಂದಿಯಾ ಬಟ್ಟೆಯನು ತೊಟ್ಟಿರುವ
ಕೆದರಿರುವ ಕೇಶಗಳ ಬತ್ತಿರುಖ ಬಾಡಿರುವ
ನಿಸ್ತೇಜ ವದನದಾ ದ್ರೌಪದಿಯು ನೋಡುತಲಿ
ಮನದೊಳಗೆ ತಳಮಳವ ಗೊಳ್ಳುತಲಿ ನವೆಯುವಳು ॥೧೭೦೭॥

ಹೇ ಮಾವ ನೀ ನುಡಿದ ನುಡಿಗಳಿವು ನಿಜವಿಹವು
ಆದೊಡೆಯು ಪಾಂಡವರ ವಾಸಿಸುವ ತಾಣಕ್ಕೆ
ಸುಮ್ಮನೇ ನಾವೆಂತು ತೆರಳುವುದು ಎನ್ನುತಲಿ
ದುರ್ಯೋಧನುಸುರುತಿರೆ ಖಳಕರ್ಣ ನುಡಿದಿಹನು ॥೧೭೦೮॥

ಆ ದ್ವೈತ ವನದೊಳಗೆ ಎಮ್ಮಯಾ ದಡ್ಡಿಯಲಿ
ಇರುತಿರುವ ಗೋವುಗಳ ನೋಡುವಾ ನೆವದಲ್ಲಿ
ಪರಘೋಷ ಯಾತ್ರೆಯನು ಕೈಕೊಂಡು ನಮ್ಮಯಾ
ವೈಭವವ ಪಾಂಡವರ್ಗೆ ತೋರಿಪುದು ಎಂದಿಹನು ॥೧೭೦೯॥

ಅಹುದಹುದು ಕರ್ಣ ನೀ ನುಡಿದಿರುವ ನುಡಿಗಳಿವು
ಯೋಗ್ಯವಿವೆ ಎಮ್ಮಯಾ ಐಶ್ವರ್ಯ ಪಾಂಡವರ್ಗೆ
ತೋರಿಪುದು ಆದೊಡೆಯು ಎಮ್ಮಯಾ ಬೊಪ್ಪನವ
ಇದಕೊಪ್ಪನೆನ್ನುತಲಿ ಕೌರವನು ನುಡಿದಿಹನು ॥೧೭೧೦॥

ನಿನ್ನಯಾ ಬೊಪ್ಪನನು ಒಪ್ಪಿಪೆವು ಎನ್ನುತಲಿ
ಆ ಶಕುನಿ ಖಳಕರ್ಣ ಕೌರವನ ಸಹಿತದಲಿ
ಧೃತರಾಷ್ಟ್ರ ಭೂಪತಿಯ ಬಳಿಯಲ್ಲಿ ಐತಂದು
ಸಾಷ್ಟಾಂಗ ಗೈಯ್ಯುತಿರೆ ಅಂಧನೃಪ ನುಡಿದಿಹನು ॥೧೭೧೧॥

ನೀವುಗಳು ಬಂದಿರುವ ಕಾರಣವನುಸುರುವುದು
ಕಾರ್ಯವದು ಆವುದಿದೆ ಎನ್ನುತಲಿ ನುಡಿಯುತಿರೆ
ನೃಪವರರೆ ನೀವುಗಳು ಆವುದೋ ಚಿಂತೆಯಲಿ
ಖೇದದಲಿ ಮುಳುಗಿದುದ ಕೇಳುತಲಿ ಬಂದಿಹೆವು ॥೧೭೧೨॥

ನಿಮ್ಮಯಾ ಚಿಂತೆಯನು ಪರಿಹಾರ ಗೈಯ್ಯುವೆವು
ಪೇಳುವುದು ಎನ್ನುತಲಿ ಖಳಕರ್ಣ ನುಡಿಯುತಿರೆ
ಏನೆಂದು ಹೇಳುವೆನು ಸೋದರನ ಸುತರುಗಳು
ಪಾಂಡವರು ವನದಲ್ಲಿ ತೊಳಲುತಿಹರೆಂದಿಹನು ॥೧೭೧೩॥

ನಾವಿಲ್ಲಿ ಅರಮನೆಯ ವೈಭವದ ಭೋಗದಲಿ
ಪಂಚಪಕ್ವಾನ್ನಗಳ ಭೋಜನದಿ ಸುಖಿಸುವವ
ಪಾಂಡವರು ಹಸಿವೆಯಲಿ ಗಡ್ಡೆಗಳ ಗೆಣಸುಗಳ
ತಿನ್ನುತಲಿ ಕಷ್ಟವನು ಭೋಗಿಸು[illegible]ತಿಹರು ಎಂದಿಹನು ॥೧೭೧೪॥

ಸ್ವರ್ಗದೊಳು ವಾಸಿಸುವ ಎನ್ನಯಾ ಸೋದರನು
ಆ ಪಾಂಡು ಎನ್ನನ್ನು ಶಪಿಸದೇ ಇರುತಿಹನೆ
ದುರುಳರೀ ಮಕ್ಕಳುಗಳಾಡುವಾ ಆಟಕ್ಕೆ
ಎನ್ನಮನ ನೊಂದಿಹುದು ಎಂದಿಹನು ಅಂಧನೃಪ ॥೧೭೧೫॥

ಕೌರವನು ಕೇಳುತಲಿ ಕೋಪದಲಿ ಭೂಪತಿಗೆ
ಹೇ ಬೊಪ್ಪ ನಿಮ್ಮಯಾ ಸೋದರನ ಪಾಂಡುವಿನ
ಮಕ್ಕಳಲಿ ಪ್ರೀತಿಯದು ಹಿರಿದಾಗಿ ಇರುತಿಹುದು
ನೀವುಗಳು ವಿಪಿನದಲಿ ಅವರೊಡನೆ ವಾಸಿಪುದು ॥೧೭೧೬॥

ನಾವುಗಳು ದುರ್ಜನರು ಪಾಪಿಗಳು ಕೇಡಿಗಳು
ಕುಲವನ್ನು ನಾಶವನು ಮಾಡುವಾ ಘಾತುಕರು
ಎಮ್ಮಯಾ ಸಹವಾಸ ತೊರೆಯುತಲಿ ಪಾಂಡವರ
ಜೊತೆಯಲ್ಲಿ ಕಾನನದಿ ಸುಖಿಸುವುದು ಎಂದಿಹನು ॥೧೭೧೭॥

ಇಲ್ಲದಿರೆ ನಾವುಗಳು ನೂರ್ವರೀ ಕೌರವರು
ಕಾನನವ ಸೇರುತಲಿ ಪ್ರಾಣಗಳ ತ್ಯಜಿಸುವೆವು
ನಿಮ್ಮಯಾ ಸಜ್ಜನನ ಧರ್ಮಜನ ಕರೆಸುತಲಿ
ಪಟ್ಟವನು ಕಟ್ಟುತಲಿ ಸುಖಿಸುವುದು ಎಂದಿಹನು ॥೧೭೧೮॥

ಆಗಲಾ ಅಂಧನೃಪ ಪುತ್ರನಾ ನುಡಿಗೇಳ್ದು
ಮನದೊಳಗೆ ಮರುಗುತಲಿ ವಾತ್ಸಲ್ಯ ಉಕ್ಕುತಲಿ
ಸುತಮೋಹ ಜಾಲದಲಿ ಸಿಲುಕುತಲಿ ತೊಳಲುತಲಿ
ನಯವಾಗಿ ಉಚಿತಮಿಹ ಹಿತವಚನ ನುಡಿದಿಹನು ॥೧೭೧೯॥

ಬಿಡುಮಗನೆ ಕೇಡಿನಾ ನುಡಿಗಳನು ನುಡಿಯುತಲಿ
ಎನ್ನಯಾ ಮನವನ್ನು ತಳಮಳವ ಗೊಳಿಸದಿರು
ನಿನ್ನಯಾ ಬಂಧುಗಳು ಪಾಂಡವರು ಹಕ್ಕಿನಲಿ
ಸರಿಅರ್ಧ ರಾಜ್ಯಕ್ಕೆ ಭಾಗಿಗಳು ಆಗಿಹರು ॥೧೭೨೦॥

ದ್ವೇಷವನು ತ್ಯಜಿಸುತಲಿ ಪಾಂಡವರ ಕರೆಸುತಲಿ
ಸರಿಅರ್ಧ ರಾಜ್ಯವನು ನೀನಿತ್ತುದಾದೊಡೆಯು
ನಿನ್ನಯಾ ಕೀರ್ತಿಯದು ಚಂದ್ರಾರ್ಕ ಪರ್ಯಂತ
ಜಗದೊಳಗೆ ಮೆರೆಯುವದು ಎಂದಿಹನು ಧೃತರಾಷ್ಟ್ರ ॥೧೭೨೧॥

ಆಗಲಾ ಖಳಶಕುನಿ ಭೂಪತಿಯೆ ಮುಪ್ಪಿನಲಿ
ಮುದಿಹುಚ್ಚು ಹಿಡಿದಿಹುದು ಬುದ್ಧಿ ಮಂಕಾಗಿಹುದು
ಸುತರುಗಳ ವೈಭವವ ನೋಡುತಲಿ ಹಿಗ್ಗದೆಯೆ
ಹೀನರಾ ಪಾಂಡವರ ನೆನೆಯುತಲಿ ಮರುಗುವಿರಿ ॥೧೭೨೨॥

ಜೂಜಿನಾ ಲಂಪಟನು ಧರ್ಮಜನು ಮೋಜಿನಲಿ
ದ್ಯೂತದಲಿ ರಾಜ್ಯವನು ಸೋದರರ ಸಹಿತದಲಿ
ಸತಿಯನ್ನು ಪಣವಾಗಿ ಒಡ್ಡುತಲಿ ಸೋತಿಹನು
ಇದರೊಳಗೆ ಎಮ್ಮಯಾ ತಪ್ಪೇನಿತು ಇಲ್ಲೆಂದ ॥೧೭೨೩॥

ಪಾಂಡವರು ಆಕಳ ಸ್ವಭಾವದಾ ಸಜ್ಜನರು
ನಿನ್ನಯಾ ಸುತರುಗಳು ದುರ್ಜನರು ಎನ್ನುತಿಹೆ
ವನವಾಸದವಧಿಯದು ಮುಗಿಯುತಿರೆ ಸಜ್ಜನರ
ಪಾಂಡವರ ಸಜ್ಜನಿಕೆ ಸದ್ಗುಣವ ನೋಡುವುದು ॥೧೭೨೪॥

ಬಲೆಯೊಳಗೆ ಸಿಲುಕಿರುವ ಕ್ರೂರಹುಲಿ ಹೊರಬರಲು
ಸಿಕ್ಕಿರುವ ಪ್ರಾಣಿಗಳ ತಿನ್ನುವಾ ಪರಿಯಲ್ಲಿ
ಪರೆಯನ್ನು ತೊರೆದಿರುವ ಸರ್ಪವದು ಫೂತ್ಕರಿಸಿ
ಹೆಡೆಯನ್ನು ಅಪ್ಪಳಿಸಿ ಕಚ್ಚುವಾ ಪರಿಯಲ್ಲಿ ॥೧೭೨೫॥

ಪಾಂಡವರು ವನವಾಸ ಸಮಯವದು ತೀರುತಿರೆ
ಹದಿನಾಲ್ಕು ವರುಷಗಳ ಕಾಲವದು ಸವೆಯುತಿರೆ
ಕೋಪದಲಿ ಕೌರವರ ನೂರ್ವರಾ ಶಿರಗಳನು
ತರಿಯದೇ ಇರುತಿಹರೆ ಎಂದಿಹನು ಆ ಶಕುನಿ ॥೧೮೨೬॥

ಸಭೆಯೊಳಗೆ ಆ ಭೀಮ ಅರ್ಜುನನು ಯಮಳರು
ಗೈದಿರುವ ಘೋರ ಪ್ರತಿಜ್ಞೆಗಳ ಮರೆತಿಹೆಯಾ
ನಿನ್ನಯಾ ಸುತಶತರ ರುಂಡಗಳ ತೆಗೆಯುತಲಿ
ಪಾಂಡವರು ರಾಜ್ಯವನು ಕೊಳ್ಳುವರು ಎಂದಿಹನು ॥೧೭೨೭॥

ಪಾಂಡವರ ನೀಗಲೇ ನಿಗ್ರಹವ ಗೈಯ್ಯುವುದು
ಇಲ್ಲದಿರೆ ಮುಂದಕ್ಕೆ ನಿಮಗೆಲ್ಲ ಕೇಡಹುದು
ಹಾವಿನಾ ಮರಿಯದುವೆ ಚಿಕ್ಕದಿದೆ ಎನ್ನುತಲಿ
ಬಿಟ್ಟೊಡೆಯೆ ಬೆಳೆಯುತಲಿ ಕಚ್ಚುವುದು ಎಂದಿಹನು ॥೧೭೨೮॥

ಅಹುದಹುದು ಸೌಬಲನ ನುಡಿಗಳಿವು ನಿಜವಿಹುದು
ಅರ್ಜುನನು ತಪಗೈದು ಪಾಶುಪತ ಶರವನ್ನು
ಯಮ ವರುಣ ದೇವೇಂದ್ರ ಮೊದಲಾದ ಸುರರಿಂದ
ದಿವ್ಯಾಸ್ತ್ರ ಪಡೆದಿಹನು ಎಂದಿಹನು ಕೌರವನು ॥೧೭೨೯॥

ನಾಗರದ ಹಾವಿನಾ ಪರಿಯಲ್ಲಿ ಮಾರುತಜನ
ರೋಷವದು ಶತವರುಷ ಪರ್ಯಂತವಿರುತಿಹುದು
ದ್ರೌಪದಿಯ ಕೋಪದಾ ಜ್ವಾಲೆಯಲಿ ಮಾರುತಜನ
ಗಾಳಿಯದು ಸೇರುತಲಿ ಕುರುಕುಲವ ದಹಿಸುವುದು ॥೧೭೩೦॥

ನಿನ್ನಯಾ ಮಕ್ಕಳನು ಕೌರವರ ನೂರ್ವರನು
ಬಲಿಕೊಟ್ಟು ಪಾಂಡವರ ಪಕ್ಷವನು ಹಿಡಿಯುವುದು
ಇಲ್ಲದಿರೆ ಎಮ್ಮಯಾ ಪಕ್ಷವನು ವಹಿಸುವುದು
ಎನ್ನುತಲಿ ದುರ್ಯೋಧನುಸುರಿದನು ಭೂಪತಿಗೆ ॥೧೭೩೧॥

ಅಹುದಹುದು ಕೌರವನು ನಿಜವನ್ನು ನುಡಿದಿಹನು
ಪಾಂಡವರು ಕೌರವರ ನಿರ್ಮೂಲ ಗೈಯ್ಯುವರು
ಪಾಂಡವರ ಮೋಹವನು ತ್ಯಜಿಸುತಲಿ ನಿನ್ನಯಾ
ಮಕ್ಕಳನು ನಂಬುವುದು ಎಂದಿಹನು ಖಳಕರ್ಣ ॥೧೭೩೨॥

ಹೋಗಲಾ ಮುಂದಣದ ಕಥೆ ಏಕೆ ಮಾತೇಕೆ
ಈಗಳಿನ ನಿಮ್ಮಯ ವಿಚಾರವನು ಕಾರ್ಯವನು
ತಿಳುಹುವುದು ಎನ್ನುತಲಿ ಧೃತರಾಷ್ಟ್ರ ಭೂಪತಿಯು
ನುಡಿಯುತಿರೆ ದುರ್ಯೋಧನುಸುರಿದನು ಧರಣಿಪಗೆ ॥೧೭೩೩॥

ಶತ್ರುಗಳು ನಿರ್ಬಲರು ನಿರ್ವಿಣ್ಣರಾಗಿರಲು
ಶೌರ್ಯವನು ದರ್ಪವನು ತೋರುವುದು ನೃಪನೀತಿ
ಕಾನನದಿ ಬಳಲುತಿಹ ಪಾಂಡವರ ಎದುರಿನಲಿ
ಎಮ್ಮಯಾ ವೈಭವವ ತೋರಿಪುದು ಎಂದಿಹನು ॥೧೭೩೪॥

ಹೇ ಮಗನೆ ಪಾಂಡವರು ವಿಪಿನದಲಿ ವಿಧವಿಧದ
ಕಷ್ಟಗಳ ಸಹಿಸುತಲಿ ನೊಂದಿಹರು ಬೆಂದಿಹರು
ಹುಣ್ಣನಲಿ ಬರೆಯನ್ನು ಎಳೆದಂತೆ ನಿಮ್ಮಯಾ
ವೈಭವವ ತೋರದಿರು ಎಂದಿಹನು ಧೃತರಾಷ್ಟ್ರ ॥೧೭೩೫॥

ಆ ಭೀಮ ಕೋಪದಲಿ ರೌದ್ರದಲಿ ಎದ್ದೊಡೆಯು
ಪ್ರಳಯದಾ ರುದ್ರನಾ ಪರಿಯಲ್ಲಿ ನೂರ್ವರನು
ಗದೆಯಿಂದ ಅಪ್ಪಳಿಸಿ ಯಮಸದನಕಟ್ಟುವನು
ಪಾಂಡವರುಸಾಬರಿಯ ಬಿಡು ಎಂದನಂಧನೃಪ ॥೧೭೩೬॥

ನಾವುಗಳು ಪಾಂಡವರ ಬಳಿಯಲ್ಲಿ ಸುಳಿಯದಲೆ
ದ್ವೈತವನ ದಡ್ಡಿಯಲಿ ಇರುತಿರುವ ನಮ್ಮಯಾ
ಗೋವುಗಳ ನೋಡುತಲಿ ಬಹೆವೆಂದು ನುಡಿಯುತಲಿ
ಕೌರವನು ಧೃತರಾಷ್ಟ್ರನೊಪ್ಪಿಗೆಯ ಪಡೆದಿಹನು ॥೧೭೩೭॥

ಆ ಘೋಷಯಾತ್ರೆಯಾ ವಾರ್ತೆಯದು ಪಸರುತಲಿ
ಗಾಂಗೇಯ ವರವಿದುರ ಗುರುಕೃಪರು ಕೇಳುತಲಿ
ಇದು ಘೋರ ಅನ್ಯಾಯ ಪಾಪದಾ ದುಷ್ಕೃತ್ಯ
ಎನ್ನುತಲಿ ಕಳವಳದಿ ಕೌರವಗೆ ನುಡಿದಿಹರು ॥೧೭೩೮॥

ನಿಮ್ಮಯಾ ಮೆರವಣಿಗೆ ಉರುವಣಿಗೆ ವೈಭವವ
ನೋಡುತಲಿ ಆ ಭೀಮ ವ್ಯಾಘ್ರದಾ ಕೋಪದಲಿ
ನೆಗೆಯುತಲಿ ನಿಮ್ಮನ್ನು ಹರಿಯುತಲಿ ತಿನ್ನುವನು
ಹೋಗದಿರಿ ಎನ್ನುತಲಿ ಗಾಂಗೇಯ ನುಡಿದಿಹನು ॥೧೭೩೯॥

ಎಮ್ಮಯಾ ಅಕ್ಷೋಹಿಣೀ ಸೈನ್ಯ ನೋಡುತಲಿ
ಆ ಭೀಮ ಅಂಜುತಲಿ ಎಮ್ಮನ್ನು ಕೆಣಕದಿಹ
ನಾವುಗಳು ಪಾಂಡವರು ಕೋಪಿಸುವ ಆವುದೇ
ಕಾರ್ಯವನು ಮಾಡದಿಹೆವೆಂದಿಹನು ಕೌರವನು ॥೧೭೪೦॥

ನಾವುಗಳು ನಿನ್ನಯಾ ಹಿತಕಾಗಿ ನುಡಿದಿಹೆವು
ಆವುದೇ ಕಾರಣದಿ ದ್ವೇಷದಾ ಕಿಡಿಹೊತ್ತಿ
ಸಂಗ್ರಾಮ ಸಂಭವಿಸಿ ಕಷ್ಟದಲಿ ತೊಳಲುವಿರಿ
ನಾವುಗಳು ಬಾರದಿಹೆವೆಂದಿಹನು ನದಿಸುತನು ॥೧೭೪೧॥

ಈ ಪರಿಯ ನುಡಿಯುತಲಿ ಗಾಂಗೇಯ ವರವಿದುರ
ಗುರುದ್ರೋಣ ಕೃಪರುಗಳು ತೆರಳುತಿರೆ ಕೌರವನು
ಮಂತ್ರಿಗಳ ಕರೆಸುತಲಿ ಆ ಘೋಷಯಾತ್ರೆಯಾ
ಸಿದ್ಧತೆಯ ಬೇಗನೇ ಗೈಯ್ಯಲಿಕೆ ತಿಳಿಸಿದನು ॥೧೭೪೨॥

**ಕೌರವನು ಪರಿವಾರ ಸೈನ್ಯದಾ ಸಹಿತದಲಿ ।**
**ವೈಭವದಿ ಪಾಂಡವರ ಸನ್ನಿಹದಲಿ ಬಂದಿಹನು ॥**

ರಾಜಭಂಡಾರವನು ಒಡೆಯುತಲಿ ಹೊಳೆಹೊಳೆವ
ಮುತ್ತುಗಳ ರತ್ನಗಳ ಗೋಮೇದಿಕಾಗಳ
ಸ್ವರ್ಣದಾಭರಣಗಳ ಪೀತಾಂಬರಾದಿಗಳ
ಅರಮನೆಯ ಗಣಿಕೆಯರ್ಗೆ ದಾಸಿಯರ್ಗೆ ಇತ್ತಿತನು ॥೧೭೪೩॥

ಕೌರವನು ಮಿರಮಿರನೆ ಮಿಂಚುತಿಹ ರೇಶಿಮೆಯ
ವಸ್ತ್ರಗಳ ಧರಿಸುತಲಿ ರತ್ನಗಳ ವಜ್ರಗಳ
ಮೌಕ್ತಿಕದ ಹಾರಗಳ ಕೊರಳೊಳಗೆ ಧರಿಸುತಲಿ
ಮಸ್ತಕದಿ ರತ್ನದ ಕಿರೀಟದಲಿ ಮೆರೆದಿಹನು ॥೧೭೪೪॥

ಸೌಬಲನು ಖಳಕರ್ಣ ದುಶ್ಯಾಸನಾದಿಗಳು
ಹೊಳೆಹೊಳೆವ ಪೀತಾಂಬರಾದಿಗಳ ವಸ್ತ್ರಗಳ
ಥಳಥಳಿಪ ರತ್ನಗಳ ವಜ್ರಗಳ ಮಾಲೆಗಳ
ಸ್ವರ್ಣದಾಭರಣಗಳ ಧರಿಸುತಲಿ ಮೆರೆದಿಹರು ॥೧೭೪೫॥

ಭಾನುಮತಿ ಮೊದಲಾದ ರಾಣಿಯರು ಚೆಲುವೆಯರು
ದಿವ್ಯಾಂಬರಾಭರಣ ರತ್ನಗಳ ವಜ್ರಗಳ
ವಿಲಸಿತದ ಹಾರಗಳ ಒಡ್ಯಾಣನೂಪುರವ
ಧರಿಸುತಲಿ ಸೌಂದರ್ಯ ಸೊಬಗಿನಲಿ ಮೆರೆದಿಹರು ॥೧೭೪೬॥

ಕೌರವನು ಸೌಬಲನು ಕರ್ಣ ದುಶ್ಶಾಸನರು
ಬಂಧುಗಳು ಬಾಂಧವರು ಸೈನ್ಯದಧಿಕಾರಿಗಳು
ಮಂತ್ರಿಗಳು ಮೊದಲಾದ ಗಣ್ಯರುಗಳೊಡಗೂಡಿ
ವಾದ್ಯಗಳು ಮೊಳಗುತಿರೆ ಪಯಣವನು ಬೆಳಸಿದನು ॥೧೭೪೭॥

ಈರೈದು ಸಾವಿರದ ಗಜನಿಕರ ಸಹಿತದಲಿ
ಹದಿನೈದು ಸಾವಿರದ ಶುಭ್ರದಾ ತುರಗಗಳ
ಇಪ್ಪತ್ತು ಸಾವಿರದ ರಥರಥಿಕರೊತಗೂಡಿ
ಅಗಣಿತದ ಸೈನ್ಯದಾ ಸಹಿತದಲಿ ಹೊರಟಿಹನು ॥೧೭೪೮॥

ಭಾನುಮತಿ ಮೊದಲಾದ ಅರಸಿಯರು ಬೆಡಗಿನಲಿ
ಆ ರಾಣಿವಾಸದಾ ಸಖಿಯರಾ ಮೇಳದಲಿ
ಮನ್ಮಥನ ಮದ್ದಾನೆ ಸೈನ್ಯವದು ಹೊರಟಿಹುದೊ
ಎಂಬಂತೆ ವೈಭವದಿ ಸೊಗಸಿನಲಿ ನಡೆದಿಹುದು ॥೧೭೪೯॥

ದ್ವಿಜರುಗಳು ಪಂಡಿತರು ಕವಿಗಮಕಿ ವಾಗ್ಮಿಗಳು
ಗಾಯಕರು ನರ್ತಕರು ವಾದ್ಯಗಳ ಪರಿಣತರು
ಕೀರ್ತನ ವಿಶಾರದರು ನಾಟಕದ ತಂಡಗಳು
ಪುರಜನರು ನಡೆದಿಹರು ಆ ಘೋಷಯಾತ್ರೆಯಲಿ ॥೧೭೫೦॥

ಗಿರಿವನವ ಕೆರೆ ತೊರೆಯ ಸರಸಿಗಳ ದಾಂಟುತಲಿ
ಪಯಣದಲಿ ಸಾಗುತಲಿ ಪಾಂಡವರು ವಾಸಿಸುವ
ದ್ವೈತವನ ಸನಿಹದಲಿ ವಿಸ್ತರದ ಬಯಲಿನಲಿ
ಬಲಸಹಿತ ಬಿಡಾರ ಹೂಡಿಹನು ಕೌರವನು ॥೧೭೫೧॥

ಸಚಿವರನು ಸೈನ್ಯದಧಿಕಾರಿಗಳ ಕರೆಸುತಲಿ
ಅವರವರಿಗುಚಿತದಲಿ ವಸತಿಗಳ ನಿಲಯಗಳ
ನಿರ್ಮಿಸುತ ಮಜ್ಜನದ ಭೋಜನದ ಸೌಕರ್ಯ
ಎಲ್ಲವನು ಮಾಡಲಿಕೆ ಕೌರವನು ನುಡಿದಿಹನು ॥೧೭೫೨॥

ಸಚಿವರಿಗೆ ಅಧಿಕಾರಿ ವರ್ಗಕ್ಕೆ ನಿಲಯಗಳ
ಗಾಯಕರು ನರ್ತಕರು ದ್ವಿಜರಿಂಗೆ ವಸತಿಗಳ
ಗಜಶಾಲೆ ಹಯಶಾಲೆ ಶಸ್ತ್ರಾಸ್ತ್ರ ರಥಶಾಲೆ
ಅಗಣಿತದ ಸಂಖ್ಯೆಯಲಿ ರಚಿಸಿದರು ಭರದಲ್ಲಿ ॥೧೭೫೩॥

ಕೌರವನು ಗೋವುಗಳ ಹಟ್ಟಿಯಲಿ ಸಾಗುತಲಿ
ದಷ್ಟಪುಷ್ಟಾಗಿರುವ ಹೋರಿಗಳ ಗೋವುಗಳ
ಬಾಲಗಳ ಮೇಲಕ್ಕೆ ಎತ್ತುತಲಿ ನೆಗೆಯುತಿಹ
ಸುಂದರದ ಹಸುಗಳಾ ಮರಿಗಳನು ವೀಕ್ಷಿಸಿದ ॥೧೭೫೪॥

ವಿಪ್ರರಿಗೆ ಗೋವುಗಳ ದಾನಗಳ ನಿತ್ತಿಹನು
ಅಧಿಕಾರಿ ವರ್ಗಕ್ಕೆ ಉಡುಗೊರೆಗಳಿತ್ತಿಹನು
ಗಾಯಕರು ನರ್ತಕರು ನಾಟಕದ ಪರಿಣತರು
ಕವಿಗಮಕಿ ಎಲ್ಲರಿಗೆ ಧನಕನಕವಿತ್ತಿಹನು ॥೧೭೫೫॥

ಇತ್ತಲಾ ಅರಮನೆಯ ವನಿತೆಯರ ವೃಂದಗಳು
ವನದೊಳಗೆ ತಂಡದಲಿ ತೆರಳುತಲಿ ನುಗ್ಗುತಲಿ
ಹೂಗಳನು ಹಣ್ಣುಗಳ ತರಿಯುತ ವಿನೋದದಲಿ
ಚೆಲ್ಲುತಲಿ ಧ್ವಂಸವನು ಮಾಡುತಲಿ ನಡೆದಿಹರು ॥೧೭೫೬॥

ಕೊಳದೊಳಗೆ ಧುಮುಕುತಲಿ ಅರಳಿರುವ ಕಮಲಗಳ
ಕುಸುಮಗಳ ತರಿಯುತಲಿ ಹರಿಹರಿದು ಎಸೆಯುತಲಿ
ನೀರನ್ನುಕಲಕುತಲಿ ಚೆಲ್ಲಾಟವಾಡುತಲಿ
ಕಲಕಲನೆ ನಾದವನು ಗೈದಿಹರು ಲಲನೆಯರು ॥೧೭೫೭॥

ಧ್ಯಾನದಲಿ ಕುಳಿತಿರ್ದ ತಪಸಿಗಳ ಜಡೆಯನ್ನು
ಗಡ್ಡವನು ಜಗ್ಗುತಲಿ ತಪಸನ್ನು ಕೆಡಿಸಿಹರು
ಋಷಿವರರು ಗೈಯ್ಯುತಿಹ ಯಜ್ಞದಾ ಕುಂಡದಲಿ
ನೀರನ್ನು ಹೊಯ್ಯುತಲಿ ಯಜ್ಞವನು ಕೆಡಿಸಿಹರು ॥೧೭೫೮॥

ಆಶ್ರಮದ ವಟುಗಳಾ ಜನಿವಾರ ಚಂಡಿಕೆಯ
ಎಳೆಯುತಲಿ ಜಗ್ಗುತಲಿ ಬೋಳಾದ ತಲೆಗಳಲಿ
ಕೈಬೆರಳ ನಾಡಿಸುತ ವಿಧವಿಧದ ಚೇಷ್ಟೆಗಳ
ಗೈದಿಹರು ವನಿತೆಯರು ಗಹಗಹಿಸಿ ನಗುನಗುತ ॥೧೭೫೯॥

ಇದು ದ್ವೈತವನವಿಹುದು ಪಾಂಡವರು ವಾಸಿಪರು
ನಿಮ್ಮಯಾ ಚೇಷ್ಟೆಗಳ ದುಷ್ಕೃತ್ಯ ಕಾರ್ಯಗಳ
ಅರುಹುತಲಿ ನಿಮ್ಮನ್ನು ಶಿಕ್ಷಿಪೆವು ಎನ್ನುತಲಿ
ತಪಸಿಗಳು ನುಡಿಯುತಿರೆ ಲಲನೆಯರು ನುಡಿದಿಹರು ॥೧೭೬೦॥

ಇದು ನಮ್ಮ ಹಸ್ತಿನೆಯ ಪುರದರಸು ಕೌರವನ
ವನವಿಹುದು ಪಾಂಡವರು ಕೌರವನ ಸೇವಕರು
ಈಗವರು ಕೌರವರ ಮನೆ ಕಸವ ಗುಡಿಸುವಾ
ಹೀನರಾ ಭೃತ್ಯರುಗಳೆಂದಿಹರು ವನಿತೆಯರು ॥೧೭೬೦॥

ಬೇಕಾದೊಡೀಗಲೇ ಪಾಂಡವರ್ಗೆ ತಿಳಿಸುತಲಿ
ಯುದ್ಧಕ್ಕೆ ಬರಹೇಳಿ ಬೇಗನೇ ಕರೆತಹುದು
ಚತುರಂಗ ಬಲಸಹಿತ ನಿಮ್ಮಯಾ ಪಾಂಡವರ
ಸಂಹಾರ ಗೈಯ್ಯುವರು ಎಂದಿಹರು ಲಲನೆಯರು ॥೧೭೬೨॥

ಆ ಕ್ಷಣದಿ ಋಷಿವರರು ತಪಸಿಗಳು ಧಾವಿಸುತ
ಧರ್ಮಜನ ಬಳಿಯಲ್ಲಿ ತೆರಳುತಲಿ ಕೆಳವಳದಿ
ಸಾಷ್ಟಾಂಗ ಗೈಯ್ಯುತಲಿ ಕೌರವನ ವನಿತೆಯರು
ಇತ್ತಿರುವ ಹಿಂಸೆಯನು ವಿಶದದಲಿ ಅರುಹಿದರು ॥೧೭೭೩॥

ಕಲಿಭೀಮ ಕೇಳುತಲಿ ಕೋಪವದು ಉಕ್ಕುತಲಿ
ರೋಮಗಳು ನಿಮಿರುತಲಿ ತನುರಕುತ ಕುದಿಯುತಲಿ
ಕಣ್ಣುಗಳು ಕಿಡಿಕೆಂಡ ಕಾರುತಲಿ ರೌದ್ರದಲಿ
ಗದೆಯನ್ನು ತಿರುಹುತಲಿ ಮೇಲಕ್ಕೆ ಎದ್ದಿಹನು ॥೧೭೭೪॥

ವನದೊಳಗೆ ಬಡತನದಿ ಕಷ್ಟಗಳ ಭೋಗಿಸುವ
ನಮ್ಮಯಾ ಎದುರಿನಲಿ ತಮ್ಮಯಾ ವೈಭವವ
ತೋರಿಸಲು ಬಂದಿರುವ ಕೌರವರ ನೂರ್ವರನು
ಸಂಹಾರ ಗೈಯ್ಯುವೆನು ಎಂದಿಹನು ಕಲಿಭೀಮ ॥೧೭೭೫॥

ಧರ್ಮಜನು ನೋಡುತಲಿ ಮರುತಜನೆ ಸುಮ್ಮನಿರು
ತಾಳ್ಮೆಯನು ತಾಳುವುದು ಸಹನೆಯನು ಮೀರದಿರು
ಕೋಪಕಿದು ಹೊತ್ತಲ್ಲ ಸಮಯವನು ಅರಿಯುತಲಿ
ಉಚಿತದಲಿ ವರ್ತಿಪುದು ಜಾಣತನವೆಂದಿಹನು ॥೧೭೭೬॥

ಕೌರವನು ಈ ವನಕೆ ಅಧಿಪತಿಯು ಇರುತಿಹನು
ದೊಡ್ಡಿಗಳ ಗೋವುಗಳ ನೋಡಲಿಕೆ ಬಂದಿಹನು
ಮೇಲಾಗಿ ಕೌರವರು ಎಮ್ಮಯಾ ಬಂಧುಗಳು
ಕ್ರೋಧದಲಿ ದುಡುಕದಿರು ಎಂದಿಹನು ಧರ್ಮಜನು ॥೧೭೭೭॥

ಆಗಲಾ ಕೌರವನು ಜಲಕೇಳಿಕೋಸುಗವೆ
ತೆರಳುವುದು ಎನ್ನುತಲಿ ನುಡಿಯುತಿರೆ ಬಂಧುಗಳ
ಮಂತ್ರಿಗಳು ಅಧಿಕಾರಿ ವರ್ಗಗಳು ಲಲನೆಯರ ಸಹಿತಲಿ
ಸಕಲರೂ ಗಂಧರ್ವದುದ್ಯಾನಕೈದಿದರು ॥೧೭೭೮॥

ತೋಟವನು ರಕ್ಷಿಸುವ ಗಂಧರ್ವ ಭಟರುಗಳು
ಬಾಗಿಲಲಿ ತಡೆಯುತಲಿ ಇದು ಚಿತ್ರಸೇನನಾ
ಗಂಧರ್ವನುದ್ಯಾನವಿರುತಿಹುದು ಮರ್ತ್ಯರಿಗೆ
ಪ್ರವೇಶಕನುಮತಿಯು ಇಲ್ಲೆಂದು ನುಡಿದಿಹರು ॥೧೭೭೯॥

ಇದು ನಮ್ಮ ಹಸ್ತಿನೆಯ ಪುರದರಸು ಕೌರವನ
ವಶದೊಳಗೆ ಇರುತಿರುವ ತಾಣದಾ ವನವಿಹುದು
ಜಲಕೇಳಿಗೋಸುಗವೆ ನಾವಿಲ್ಲಿ ಬಂದಿಹೆವು
ಕೌರವರ ಬಳಗವನು ತಡೆಯದಿರಿ ಎಂದಿಹರು ॥೧೭೮೦॥

ನಾವುಗಳು ಕುರುಪತಿಯ ಸುತರುಗಳು ಮಂತ್ರಿಗಳು
ಬಂಧುಗಳು ಬಾಂಧವರು ಅರಮನೆಯ ವನಿತೆಯರು
ಸರಸಿಯಲಿ ಜಲಕ್ರೀಡೆಗೋಸುಗವೆ ಬಂದಿಹೆವು
ಬಾಗಿಲನು ತೆರೆಯುವುದು ಎನ್ನುತಲಿ ನುಡಿದಿಹರು ॥೧೭೮೧॥

ನರರುಗಳು ಪ್ರವೇಶಿಸಲು ನಿರ್ಬಂಧವಿರುತಿಹುದು
ಜಲಕ್ರೀಡೆಯಾಡಲಿಕೆ ಬೇರೆಯಾವನದೊಳಗೆ
ತೆರಳುವುದು ಆರನ್ನು ಬಿಡದಿರಲು ಆಜ್ಞೆಯಿದೆ
ಎನ್ನುತಲಿ ಉದ್ಯಾನ ರಕ್ಷಕರು ನುಡಿದಿಹರು ॥೧೭೮೨॥

ಕೇಳುತಲಿ ಸಕಲರೂ ಕೋಪದಲಿ ಭರದಲ್ಲಿ
ತೋಟದಾ ಬಾಗಿಲವ ನೊದೆಯುತಲಿ ಮುರಿಯುತಲಿ
ಬಾಳೆಗಳ ತೆಂಗುಗಳ ದಾಳಿಂಬೆ ದ್ರಾಕ್ಷಿಗಳ
ಫಲಭರಿತ ವೃಕ್ಷಗಳ ಕೊಚ್ಚುತಲಿ ಕೆಡಹಿದರು ॥೧೭೮೩॥

ಮಲ್ಲಿಗೆಯ ಜಾಜಿಗೆಯ ಕೇದಗೆಯಶೋಕಗಳ
ವರಪಾರಿಜಾತಗಳ ವೃಕ್ಷಗಳ ಕೆಡಹಿದರು
ಸರಸಿಯಲಿ ಅರಳಿರುವ ಕಮಲಗಳ ಕುಸುಮಗಳ
ಕಿತ್ತೆಸೆದು ನೀರಾಟ ಚೆಲ್ಲಾಟ ವಾಡಿದರು ॥೧೭೮೪॥

ಗಂಧರ್ವ ಸೈನಿಕರು ನೋಡುತಲಿ ಕ್ರೋಧದಲಿ
ಖಡ್ಗಗಳ ಹಿರಿಯುತಲಿ ತಿರುಹುತಲಿ ಮುತ್ತುತಲಿ
ಕೌರವನ ಸೈನಿಕರ ಶಿರಗಳನು ತರಿಯುತಲಿ
ರಕುತದಾ ಕೋಡಿಯನು ಹರಸಿದರು ವನದೊಳಗೆ ॥೧೭೮೫॥

ಜಲಕೇಳಿಗೋಸುವೆ ನೀವುಗಳು ಬಂದಿಹಿರೊ
ರಕುತದಾ ಓಕುಳಿಯ ಆಟಕ್ಕೆ ಬಂದಿಹಿರೊ
ಎನ್ನುತಲಿ ಕೌರವನ ಸೈನಿಕರ ನಿರಿಯುತಿರೆ
ಸಕಲರೂ ದಿಕ್ಕೆಟ್ಟು ದೆಸೆದೆಸೆಗೆ ಓಡಿದರು ॥೧೭೮೬॥

ಕೌರವನ ಸುತರುಗಳು ಅರಮನೆಯ ನಾರಿಯರು
ಸಕಲರೂ ಎತ್ತಣದ ಜಲಕೇಳಿ ಎನ್ನುತಲಿ
ಭೀತಿಯಲಿ ದೆಸೆದೆಸೆಗೆ ಚದುರುತಲಿ ಧಾವಿಸುತ
ಕೌರವಗೆ ವೃತ್ತಾಂತವರುಹಿದರು ವಿಶದದಲಿ ॥೧೭೮೭॥

ಕೌರವನು ಕೇಳುತಲಿ ಕಿಡಿಕೆಂಡವಾಗುತಲಿ
ಸೇನಾಧಿಕಾರಿಗಳ ಕರೆಸುತಲಿ ಆ ಕ್ಷಣದಿ
ಗಜತುರಗ ಕಾಲಾಳು ಚತುರಂಗ ಬಲಸಹಿತ
ಅಕ್ಷೋಹಿಣಿ ಸೈನ್ಯವನು ಕಳುಹಿದನು ಶಿಕ್ಷಿಸಲು ॥೧೭೮೮॥

ಕೌರವನ ಸೈನಿಕರು ಉದ್ಯಾನ ರಕ್ಷಕರ
ಯಕ್ಷರನು ವಧಿಸುತಲಿ ವನದೊಳಗೆ ನುಗ್ಗುತಲಿ
ಫಲಪುಷ್ಪ ವೃಕ್ಷಗಳ ಕೊಚ್ಚುತಲಿ ಕೆಡುಹುತಿರೆ
ಯಕ್ಷರುಗಳರುಹಿದರು ಆ ಚಿತ್ರಸೇನಂಗೆ ॥೧೭೭೯॥

ವರಚಿತ್ರಸೇನ ನೃಪ ಕೇಳುತಲಿ ಕೋಪದಲಿ
ಅಗಣಿತದ ಗಂಧರ್ವ ಸೈನ್ಯವನು ಕಳುಹುತಿರೆ
ವ್ಯಾಘ್ರಗಳು ಚಿಗರೆಗಳ ಮುತ್ತುವಾ ಪರಿಯಲ್ಲಿ
ಕೌರವನ ಸೈನ್ಯವನು ಮುತ್ತುತಲಿ ತರಿದಿಹರು ॥೧೭೮೦॥

ಖೇಚರನ ಸೈನಿಕರು ಕೌರವನ ಯೋಧರನು
ಶಿರಗಳನು ತರಿಯುತಲಿ ಸಂಹಾರ ಗೈಯ್ಯುತಿರೆ
ಕೌರವನು ಕೇಳುತಲಿ ದಿಗ್ಭ್ರಮೆಯ ಗೊಳ್ಳುತಲಿ
ಚಿಂತೆಯಲಿ ಮುಳುಗುತಲಿ ಹೌಹಾರಿ ಕುಳಿತಿಹನು ॥೧೭೮೧॥

ಕುರುಪತಿಯೆ ಚಿಂತೆಯನು ಮಾಡದಿರು ನೀನೀಗ
ಎನಗಾಜ್ಞೆ ಈಯುವುದು ಗಂಧರ್ವ ಸೈನಿಕರ
ನಿಮಿಷದಲಿ ಸಂಹಾರ ಗೈಯ್ಯುವೆನು ನಂಬುವುದು
ಎನ್ನುತಲಿ ಖಳಕರ್ಣ ಕುರುಪತಿಗೆ ನುಡಿದಿಹನು ॥೧೭೮೨॥

ಅಹುದಹುದು ಕರ್ಣ ನೀ ನುಡಿದನುಡಿ ನಿಜವಿಹುದು
ನಿನ್ನಯಾ ಶೌರ್ಯವನು ಶಕ್ತಿಯನು ಅರಿತಿರುವೆ
ಯುದ್ಧವನು ಗೈಯ್ಯಲಿಕೆ ಸಮರ್ಥನಿಹೆ ಎನ್ನುತಲಿ
ಕೌರವನು ಬಲಸಹಿತ ಕರ್ಣನನು ಕಳುಹಿದನು ॥೧೭೮೩॥

ಸೌಬಲನು ಬಾಹ್ಲಿಕನು ದುಶ್ಶಾಸನಾದಿಗಳು
ಶಲ್ಯನಾ ಸುತರುಗಳು ಸೋಮದತ್ತಾದಿಗಳು
ಅಪರಿಮಿತ ಕಾಲಾಳು ರಥರಥಿಕರೊಡಗೂಡಿ
ಸೈನ್ಯದಾ ಸಹಿತದಲಿ ಯುದ್ಧಕ್ಕೆ ತೆರಳಿದರು ॥೧೭೮೪॥

ಆ ಭಾನು ನಂದನನು ಭಾನುವಿನ ಪರಿಯಲ್ಲಿ
ತೊಳತೊಳಗಿ ಬೆಳಗುತಲಿ ರಥವನ್ನು ಸಾಗಿಸುತ
ಗಂಧರ್ವ ಸೇನೆಯಲಿ ನುಗ್ಗುತಲಿ ಸಾಗುತಲಿ
ಸಾವಿರದ ಶತ್ರುಗಳ ಶಿರಗಳನು ತರಿದಿಹನು ॥೧೭೮೫॥

ಬಾಣಗಳ ಮಳೆಯನ್ನು ಸುರಿಸುತಲಿ ಕಲಿಕರ್ಣ
ಲಕ್ಷೋಪಲಕ್ಷದಾ ಗಂಧರ್ವ ಸೈನಿಕರ
ರುಂಡಗಳ ಮುಂಡಗಳ ಕೆಡಹುತಲಿ ರಕುತದಾ
ಕೋಡಿಯನು ಹರಸಿದನು ಕಲಿಕರ್ಣ ರಣದೊಳಗೆ ॥೧೭೮೬॥

ಕುರುಬಲದ ಭಟರುಗಳು ಖೇಚರರ ಸೈನಿಕರ
ಕಡಿಯುತಲಿ ಕೊಚ್ಚುತಲಿ ಸಂಹಾರ ಗೈಯ್ಯುತಿರೆ
ಉದ್ಯಾನಗೊಡವೆಯದು ನಮಗೇಕೆ ಎನ್ನುತಲಿ
ಗಂಧರ್ವ ಸೈನಿಕರು ದಿಕ್ಕೆಟ್ಟು ಓಡಿವರು ॥೧೭೮೭॥

ಅಂಜದಿರಿ ಅಳುಕದಿರಿ ಹಿಂದಕ್ಕೆ ಓಡದಿರಿ
ಹುಲುನರರಿಗಂಜುತಲಿ ಹೇಡಿಗಳ ಪರಿಯಲ್ಲಿ
ಓಡುವದು ಗಂಧರ್ವ ವೀರರಿಗೆ ಸಲ್ಲದಿದು
ಎನ್ನುತಲಿ ಮತ್ತೆ ಆ ಖೇಚರರು ಮುತ್ತಿದರು ॥೧೭೮೮॥

ಸರದಿಂದ ಸೋಲುತಲಿ ಬದುಕಿರುವಕಿಂತಲೂ
ಸಾಯುವುದು ಲೇಸೆಂದು ಗಂಧರ್ವ ಭಟರುಗಳು
ಪ್ರಾಣದಾ ಹಂಗನ್ನು ತೊರೆಯುತಲಿ ಕಾದುತಲಿ
ಸ್ವರ್ಗದಾ ಸುಂದರಿಯರಪ್ಪಿದರು ತೋಳಿನಲಿ ॥೧೭೮೯॥

ಮರ್ತ್ಯರಲಿ ಈ ಪರಿಯ ವೀರರನು ಕಂಡಿಲ್ಲ
ಮಾನವನು ಇವನಲ್ಲ ಆ ಕಾಲ ಯಮನಿಹನು
ಎಮ್ಮನ್ನು ಯಮಸದನಕಟ್ಟುವನು ಎನ್ನುತಲಿ
ಓಡುತಲಿ ವರಚಿತ್ರಸೇನಂಗೆ ಅರುಹಿದರು ॥೧೭೯೦॥

ಆ ಮರ್ತ್ಯಲೋಕದಾ ಹುಳು ಜಂತು ಹುಲುನರರನು
ಗಂಧರ್ವ ಸುರರುಗಳು ಎಮ್ಮನ್ನು ಸೋಲಿಪುದು
ಗಂಧರ್ವ ಕುಲಕಿದುವೆ ಹೀನತರ ಅಪಮಾನ
ಎನ್ನುತಲಿ ಆ ಚಿತ್ರಸೇನನೃಪ ಖತಿಗೊಂಡ ॥೧೭೯೧॥

ಹೊಳೆಹೊಳೆವ ಧನುವನ್ನು ಶರಗಳನು ಕೊಳ್ಳುತಲಿ
ಶುಭ್ರದಾ ಅಶ್ವಗಳ ಹೂಡಿರುವ ರಥವನ್ನು
ಏರುತಲಿ ಆ ಚಿತ್ರಸೇನನೃಪ ಭರದಲ್ಲಿ
ಗಜತುರಗ ಚತುರಂಗ ಬಲಸಹಿತ ಬಂದಿವನು ॥೧೭೯೨॥

ಕುದುರೆಗಳು ಕುದುರೆಗಳ ಆನೆಗಳು ಆನೆಗಳ
ರಾವುತರು ರಾವುತರ ಮಾವುತರು ಮಾವುತರ
ರಥಿಕರರು ರಥಿಕರರ ಬೆನ್ನಟ್ಟಿ ತಾಗುತಲಿ
ಭೀಕರದ ಘನಘೋರ ಯುದ್ಧವನು ಗೈದಿವರು ॥೧೭೯೩॥

ಕೇಳುವುದು ಜನಮೆಜಯ ನೃಪವರನೆ ಆ ಕ್ಷಣದಿ
ಲಕ್ಷೋಪಲಕ್ಷದಾ ಗಂಧರ್ವ ಸೈನಿಕರು
ಕೌರವನ ಬಲದೊಳಗೆ ನುಗ್ಗುತಲಿ ತರಗೆಲೆಯು
ತರಿವಂತೆ ಅರಿಗಳಾ ಶಿರಗಳನು ತರಿದಿಹರು ॥೧೭೯೪॥

ಕೌರವನ ಸೈನಿಕರು ಗಂಧರ್ವ ಬಲವನ್ನು
ಮುತ್ತುತಲಿ ರೋಷದಲಿ ರುಂಡಗಳನುರುಳಿಸಲು
ಗಂಧರ್ವ ಸೈನ್ಯವದು ಪ್ರಾಣದಾ ಭಯದಲ್ಲಿ
ದೆಸೆದೆಸೆಗೆ ಓಡಿದುದಾ ಬೆದರುತಲಿ ಚದುರಿದುದು ॥೧೭೯೫॥

ಆ ಚಿತ್ರಸೇನನೃಪ ನೋಡುತಲಿ ಕ್ರೋಧದಲಿ
ಎನ್ನಯಾ ವನವನ್ನು ಧ್ವಂಸವನು ಮಾಡಿಹರು
ಹುಲುನರಗಿನಿತೊಂದು ಧೈರ್ಯವೇ ಎನ್ನುತಲಿ
ಬಾಣಗಳ ಮಳೆಯನ್ನು ಧಾರಿಯಲಿ ಸುರಿದಿಹನು ॥೧೭೯೬॥

ಕೌರವನ ಸೈನಿಕರು ದಿಕ್ಕೆಟ್ಟು ಓಡುತಿರೆ
ಅಂಜದಿರಿ ಅಂಜದಿರಿ ಎನ್ನುತಲಿ ಕಲಿಕರ್ಣ
ಈಗೆನ್ನ ಶೌರ್ಯವನು ನೋಡುವುದು ಎನ್ನುತಲಿ
ಆ ಚಿತ್ರಸೇನಂಗೆ ಎದುರಾಗಿ ಬಂದಿಹನು ॥೧೭೯೭॥

ಎಲವೆಲವೊ ಹುಳುಜಂತು ಹುಲುನರನು ನೀನಿರುವೆ
ಗಂಧರ್ವನೆನ್ನೊಡನೆ ನಿನ್ನಯಾ ಶೌರ್ಯವನು
ತೋರಲಿಕೆ ಬಂದಿಹೆಯಾ ನಿನ್ನನ್ನು ನಿಮಿಷದಲಿ
ವಧಿಸುತಲಿ ದಿಗುಬಲಿಯ ನೀಯುವೆನು ಎಂದಿಹನು ॥೧೭೯೮॥

ಶೂರರುಗಳೆಂದಿಗೂ ತಮ್ಮಯಾ ಶೌರ್ಯವನು
ಹೊಗಳದೆಯೆ ಶೌರ್ಯವನು ಶರದೊಳಗೆ ತೋರಿಪರೂ
ನಿನ್ನಯಾ ಶೌರ್ಯವನು ಬಾಣದಲಿ ತೋರುವುದು
ಸುಮ್ಮನೇ ಬೊಗಳದಿರು ಎಂದಿಹನು ಕಲಿಕರ್ಣ ॥೧೭೯೯॥

ಗಂಧರ್ವ ಕ್ರೋಧದಲಿ ಅಗಣಿತದ ಬಾಣಗಳ
ಮಳೆಯನ್ನು ಸುರಿಸುತಲಿ ಶರಜಾಲ ರಚಿಸುತಲಿ
ಕರ್ಣನನು ಮುಸುಕುತಲಿ ಮುಚ್ಚುತಿರೆ ಸುತ್ತಲೂ
ಘೋರತರ ಗಾಢಾಂಧಕಾರವದು ಕವಿದಿಹುದು ॥೧೮೦೦॥

ಕಲಿಕರ್ಣ ಸಾವಿರದ ಶರಗಳನು ಎಸೆಯುತಲಿ
ಶರಗಳಾ ಜಾಲವನು ತರಿಯುತಲಿ ಬಿಸುಡುತಿರೆ
ಮೇಘವದು ಬಗಿಯುತಲಿ ಹೊಳೆಹೊಳೆವ ರವಿಯಂತೆ
ರವಿಸುತನು ಕಲಿಕರ್ಣ ತೊಳಗುತಲಿ ಬೆಳಗಿದನು ॥೧೮೦೧॥

ಭಲೆ ಭಾಪು ಭಲೆ ಭಾಪು ಈ ಪರಿಯ ವೀರರನು
ಸುರನರರೊಳೆಂದಿನೀ ಪರ್ಯಂತ ಕಂಡಿಲ್ಲ
ನಿನ್ನಯಾ ಶೌರ್ಯಕ್ಕೆ ಸಾಹಸಕೆ ವಿಕ್ರಮಕೆ
ಮೆಚ್ಚಿಹೆನು ಎಂದಿಹನು ಆ ಚಿತ್ರಸೇನನೃಪ ॥೧೮೦೨॥

ಹೊಗಳಿಕೆಗೆ ತೆಗಳಿಕೆಗೆ ಯುದ್ಧದಲಿ ಸ್ಥಾನಿಲ್ಲ
ಬಿಲ್ಲುಗಳ ಬಾಣಗಳ ಕೌಶಲದ ಪರಿಣತೆಯ
ದರ್ಶನವ ತೋರಿಸುವ ರಣಭೂಮಿ ಇರುತಿಹುದು
ಶೌರ್ಯವನು ತೋರಿಪುದು ಎಂದಿಹನು ಕಲಿಕರ್ಣ ॥೧೮೦೩॥

ಈ ಸರ್ಪಾಸ್ತ್ರ ಗರುಡಾಸ್ತ್ರ ಅಗ್ನ್ಯಾಸ್ತ್ರ ವರುಣಾಸ್ತ್ರ
ವಾಯವ್ಯ ಕೌಬೇರ ಮೊದಲಾದ ಭೀಕರದ
ದಿವ್ಯಾಸ್ತ್ರ ಪ್ರತ್ಯಾಸ್ತ್ರ ವೆಸೆಯುತಲಿ ಖಂಡಿಸುತ
ಈರ್ವರೂ ಘನಘೋರ ಯುದ್ಧವನು ಗೈದಿಹರು ॥೧೮೦೪॥

ಧರ್ಮಜನು ಮರುತಜನು ಅರ್ಜುನನು ಮಾದ್ರಿಜನು
ಋಷಿವರರು ತಪಸಿಗಳು ತರುದಿಬ್ಬವೇರುತಲಿ
ಆ ಚಿತ್ರಸೇನ ನೃಪ ಕಲಿಕರ್ಣ ರೀರ್ವರಾ
ಯುದ್ಧವನು ಕೌತುಕದಿ ನೋಡುತಲಿ ಇರ್ದಿಹರು ॥೧೮೦೫॥

ಕಲಿಕರ್ಣ ಗಂಧರ್ವ ಬಲಜಲಧಿ ಕಲಕುತಲಿ
ನುಗ್ಗುತಲಿ ಬಾಣಗಳ ಮಳೆಗಳನು ಸುರಿಸುತಲಿ
ಗಂಧರ್ವರಗಣಿತರ ಶಿರಗಳನು ತರಿಯುತಿರೆ
ದಿಕ್ಕೆಟ್ಟು ದೆಸೆದೆಸೆಗೆ ಖೇಚರರು ತೆರಳಿದರು ॥೧೮೦೬॥

ಹುಳುಜಂತು ನರರಿಂಗೆ ಇನಿತೊಂದು ಗರ್ವವೇ
ಹೇ ನೊರಜೆ ಉಬ್ಬದಿರು ಉಬ್ಬಸವ ಮಾಡುವೆನು
ಎನ್ನೊಡನೆ ನಿನ್ನಯಾ ಶೌರ್ಯವನು ತೋರುವುದು
ಎನ್ನುತಲಿ ವರಚಿತ್ರ ಸೇನನೃಪ ನೈತಂದ ॥೧೮೦೭॥

ಮರ್ತ್ಯರಲಿ ಈ ಪರಿಯ ದನುರ್ವಿದ್ಯೆ ಪರಿಣತನು
ಎನಿಸಿರುವ ಕಲಿಕರ್ಣ ಕೌರವನ ಮಿತ್ರನಿಹ
ಈತನಾ ಗರ್ವವನು ಮುರಿಯುವೆನು ಎನ್ನುತಲಿ
ಶರಬಿಡುತ ಕರ್ಣನಾ ಧನುವನ್ನು ಖಂಡಿಸಿದ ॥೧೮೦೮॥

ಕೋಪದಲಿ ಕಲಿಕರ್ಣ ಹೊಸಚಾಪ ಕೊಳ್ಳುತಲಿ
ಮರ್ತ್ಯರಾ ಬಾಣಗಳ ಸವಿಯನ್ನು ನೋಡುವುದು
ಎನ್ನುತಲಿ ಧಾರೆಯಲಿ ಶರವೃಷ್ಟಿಗೈಯ್ಯುತಲಿ
ಗಂಧರ್ವರಗಣಿತದ ಶಿರಗಳನು ತರಿದಿಹನು ॥೧೮೦೯॥

ಕಿನ್ನರರು ಕಿಂಪುರುಷ ಯಕ್ಷರರು ರಾಕ್ಷಸರು
ಸೈನ್ಯದಾ ಸಾಗರವು ಕರ್ಣನನು ಮುತ್ತುತಿರೆ
ಕೌರವನು ಸೌಬಲನು ದುಶ್ಯಾಸನಾದಿಗಳು
ಸಕಲಬಲ ಸಹಿತದಲಿ ಧಾವಿಸುತ ಬಂದಿಹರು ॥೧೮೧೦॥

ಅಂಜದಿರಿ ಅಳುಕದಿರಿ ಕೌರವರ ಸೈನಿಕರೆ
ಮಿನುಗುತಿಹ ಹುಳುಗಳಿಗೆ ಭಾನು ತಾನಂಜುವನೆ
ಎನ್ನುತಲಿ ಕಲಿಕರ್ಣ ಬಾಣಗಳ ನೆಸೆಯುತಲಿ
ಗಂಧರ್ವ ಸೈನಿಕರ ತರಿದಿಹನು ನಿಮಿಷದಲಿ ॥೧೮೧೧॥

ಕಳಿತ ಫಲ ನಿಕರಗಳು ಕಳಚುತಲಿ ಬೀಳ್ವಂತೆ
ಗಂಧರ್ವ ಸೈನಿಕರ ಶಿರನಿಕರ ಬಿದ್ದಿಹವು
ಬಿರುಗಾಳಿ ಬೀಸುತಿರೆ ಮೇಘಗಳು ಚದುರ್ವಂತೆ
ಗಂಧರ್ವ ಸೈನಿಕರು ದೆಸೆದೆಸೆಗೆ ಓಡಿಹರು ॥೧೮೧೨॥

ಪುನರಪಿಯು ಗಂಧರ್ವರಗಣಿತದ ಭಟರುಗಳು
ಗಜತುರಗ ಕಾಲಾಳು ರಥರಥಿಕ ಸಹಿತದಲಿ
ಕ್ರೋಧದಲಿ ಧಾವಿಸುತ ಐತಂದು ಕರ್ಣನಾ
ರಥವನ್ನು ಮುತ್ತುತಲಿ ಸುತ್ತಲೂ ನಿಂದಿಹರು ॥೧೮೧೩॥

ಆ ಕ್ಷಣದಿ ಕುರುಪತಿಯು ನೋಡುತಲಿ ಭರದಲ್ಲಿ
ಚತುರಂಗ ಬಲಸಹಿತ ವೇಗದಲಿ ಬರುತಲಿರೆ
ಗಂಧರ್ವ ಕೌರವರ ಸೈನ್ಯಗಳು ಎರಡುಗಳು
ಎದುರಾಗಿ ಭೀಕರದ ಯುದ್ಧವನು ಗೈದಿಹವು ॥೧೮೧೪॥

ಪರಶುಗಳ ಪಾಶಗಳ ಖಡ್ಗಗಳ ಕತ್ತಿಗಳ
ಭಲ್ಲೆಗಳ ಬರ್ಚಿಗಳ ಗದೆಗಳಾ ಚಕ್ರಗಳ
ವಿಧವಿಧದ ಆಯುಧವ ಕೊಳ್ಳುತಲಿ ಭಟರುಗಳು
ಕಾದಿದರು ನೆತ್ತರದ ಹೊನಲನ್ನು ಹರಿಸುತಲಿ ॥೧೮೧೫॥

**ಆ ಚಿತ್ರಸೇನ ನೃಪ ಕಾದುತಲಿ ಕೌರವನ ।**
**ಬಂಧಿಸುತ ಧರ್ಮಜನ ಚರಣದಲಿ ಕೆಡಹಿದನು ॥**

ಕುರುಪತಿಯು ಬಾಣಗಳ ಮಳೆಗಳನು ಸುರಿಸುತಲಿ
ಕರ್ಣನನು ಮುಸುಕಿರುವ ಶರಜಾಲ ಕಡಿಯುತಿರೆ
ಮೇಘವನು ಬಗಿಯುತಲಿ ತೊಳತೊಳಗಿ ಬೆಳಗುತಿಹ
ರವಿಯಂತೆ ರವಿಸುತನು ತೇಜದಲಿ ಹೊಳೆದಿಹನು ॥೧೮೧೬॥

ಭರದಲ್ಲಿ ಇನಸುತನು ಧನುವನ್ನು ಕೊಳ್ಳುತಲಿ
ಎಲವೆಲವೊ ಗಂಧರ್ವ ನಿನ್ನನ್ನು ವಧಿಸುವೆನು
ಎನ್ನುತಲಿ ಕ್ರೋಧದಲಿ ನಿಶಿತಶರ ವಿರಿಸುತಲಿ
ಟಂಕಾರ ಗೈಯ್ಯುತಲಿ ಗುರಿಯಿಡುತಲೆಸೆದಿಹನು ॥೧೮೧೭॥

ಮತ್ತೆ ಆ ಕುರುಬಲವು ಚೇತರಿಸಿ ಕೊಳ್ಳುತಲಿ
ಉತ್ಸಾಹಗೊಳ್ಳುತಲಿ ಉಕ್ಕುತಿಹ ಶೌರ್ಯದಲಿ
ಗದೆಗಳನು ತಿರುಹುತಲಿ ಖಡ್ಗಗಳ ಝಳಪಿಸುತ
ಗಂಧರ್ವರಗಣಿತರ ಯೋಧರನು ಕೊಂದಿಹರು ॥೧೮೧೮॥

ಅಕಟಕಟ ಮರ್ತ್ಯರೀ ಹುಳುಜಂತು ನರರಗಳು
ಎಮ್ಮನ್ನು ಸೋಲಿಪುದು ಅಪಮಾನ ವಿರುತಿಹುದು
ಸುರರುಗಳು ನೋಡುತಲಿ ಉಪಹಾಸ ಗೈಯ್ಯುವರು
ಲಜ್ಜೆಯಾ ವಿಷಯವಿದು ಎನ್ನುತಲಿ ಕ್ರೋಧದಲಿ ॥೧೮೧೯॥

ಗಿಡುಗಗಳು ಗಿಳಿಗಳನು ಮುತ್ತುವಾ ಪರಿಯಲ್ಲಿ
ಕೌರವನ ಸೈನ್ಯವನು ಸುತ್ತಲೂ ಮುತ್ತುತಲಿ
ಗಂಧರ್ವ ಸೈನಿಕರು ತರಗೆಲೆಯ ತರಿವಂತೆ
ಕುರುಬಲದ ಭಟರುಗಳ ತಲೆಗಳನು ತಂದಿಹರು ॥೧೮೨೦॥

ಹೇ ಮೂರ್ಖ ಕೌರವನೆ ಗಂಧರ್ವನಂಘ್ರಿಗಳ
ಹಿಡಿಯುತಲಿ ನಮಿಸುತಲಿ ಕ್ಷಮೆಯನ್ನು ಕೇಳುವುದು
ಇಲ್ಲದಿರೆ ನಿನ್ನನ್ನು ಯಮಸದನಕಟ್ಟುವನು
ಎನ್ನುತಲಿ ಗಂಧರ್ವ ಸೈನಿಕರು ನುಡಿದಿಹರು ॥೧೮೨೧॥

ಕಲಿಕರ್ಣ ಕೇಳುತಲಿ ಕಿಡಿಕೆಂಡವಾಗುತಲಿ
ಹೊಳೆಹೊಳೆವ ಆಗ್ನೇಯ ಅಸ್ತ್ರವನು ಬಿಡುತಲಿರೆ
ಆ ಚಿತ್ರಸೇನನೃಪ ವಾರುಣದ ಅಸ್ತ್ರವನು
ಎಸೆಯುತಲಿ ಕಡಿಯುತಲಿ ಪುಡಿಪುಡಿಯ ಗೈದಿಹನು ॥೧೮೨೨॥

ಮತ್ತೆ ಆ ಕಲಿಕರ್ಣ ಪರ್ವತದ ಘೋರಾಸ್ತ್ರ
ಬಿಡುತಲಿರೆ ಗಂಧರ್ವ ವಜ್ರಾಸ್ತ್ರವೆಸೆಯುತಲಿ
ಪರ್ವತವ ಹುಡಿಗೈದು ಧೂಳೀಪಟ ಮಾಡುತಲಿ
ಬಾಣಗಳ ಮಳೆಗಳನು ಸುರಿಸಿಹನು ಗಂಧರ್ವ ॥೧೮೨೩॥

ಸರ್ಪಾಸ್ತ್ರ ಗರುಡಾಸ್ತ್ರ ತಿಮಿರಾಸ್ತ್ರ ರವಿಯಸ್ತ್ರ
ನೈಋತ್ಯ ವಾಯವ್ಯ ಆಗ್ನೇಯ ಮೊದಲಾದ
ದಿವ್ಯಾಸ್ತ್ರ ಪ್ರತ್ಯಸ್ತ್ರವೆಸೆಯುತಲಿ ಘೋರದಲಿ
ಸಮದಂಡಿ ವೀರರುಗಳೀರ್ವರು ಕಾದಿದರು ॥೧೮೨೪॥

ಕರ್ಣನಾ ಬತ್ತಳಿಕೆಯೊಳಗಿರ್ದ ಬಾಣಗಳು
ತೀರುತಿರೆ ಆ ಚಿತ್ರಸೇನನೃಪ ಭರದಲ್ಲಿ
ಹರಿತಶರವೆಸೆಯುತಲಿ ಕಲಿಕರ್ಣ ಧರಿಸಿರ್ದ
ಕವಚವನು ಕಡಿಯುತಲಿ ಕೊಸರುತಲಿ ಕೆಡಹಿದನು ॥೧೮೨೫॥

ಶರವೆರಡವೆಸೆಯುತಲಿ ಕುದುರೆಗಳನಿರಿಯುತಲಿ
ಕರ್ಣನಾ ರಥವನ್ನು ಪುಡಿಪುಡಿಯ ಗೈದಿಹನು
ಮತ್ತೊಂದಾ ಶರವನ್ನು ಎಚ್ಚುತಲಿ ಕರ್ಣನಾ
ಕರದೊಳಿಹ ಧನುವನ್ನು ಖಂಡಿಸುತ ಕೆಡಹಿದನು ॥೧೮೨೬॥

ಮುನ್ನಿನಲಿ ದುಷ್ಟರಾ ದಾನವರು ಎಮ್ಮನ್ನು
ಹಿಂಸೆಯನು ಗೋಳಿಸಿದಾ ಪರಿಯಲ್ಲಿ ಹುಲುನರರು
ಹೀನರೀ ಮಾನವರು ಎಮ್ಮನ್ನು ಹಿಂಸಿಪರು
ಎನ್ನುತಲಿ ಚಿಂತಿಸುತ ಗಂಧರ್ವ ಕ್ರೋಧದಲಿ ॥೧೮೨೮॥

ಹೊಳೆಹೊಳೆವ ದಿವ್ಯದಾ ಆಗ್ನೇಯ ಅಸ್ತ್ರವನು
ತೆಗೆಯುತಲಿ ಬಿಲ್ಲಿನಲಿ ಅಳವಡಿಸಿ ತೂರುತಲಿ
ಬಿಡುತಲಿರೆ ಪ್ರಳಯದಾ ಜ್ವಾಲೆಯನು ಉಗುಳುತಲಿ
ಕರ್ಣನನು ದಹಿಸಲಿಕೆ ವೇಗದಲಿ ಬರುತಲಿರೆ ॥೧೮೨೯॥

ಹಾಹಾರಿ ಬೆರಗಾಗಿ ಬೆಪ್ಪಾಗಿ ಕಲಿಕರ್ಣ
ನಿಲ್ಲುತಿರೆ ಆ ಕ್ಷಣದಿ ವಿಕರ್ಣನೀಕ್ಷಿಸುತ
ಭರದಲ್ಲಿ ಧಾವಿಸುತ ತನ್ನಯಾ ರಥದೊಳಗೆ
ಕರ್ಣನನು ಕುಳ್ಳಿರಿಸಿ ಸಾಂತ್ವನವ ಗೈದಿಹನು ॥೧೮೩೦॥

ಇತ್ತಲಾ ದಿಬ್ಬದಲಿ ನಿಲ್ಲುತಲಿ ನೋಡುತಿಹ
ಪವನಜನು ಅರ್ಜುನನು ಮಾದ್ರಿಜರು
ಮುನಿವೃಂದ ಕರ್ಣನಾ ಪರಿಭವವ ಕಾಣುತಲಿ
ಹರ್ಷದಲಿ ಕೇಕೆಯಲಿ ಕುಣಿಕುಣಿದು ನಲಿದಿಹರು ॥೧೮೩೦॥

ಕರ್ಣನಾ ದುರ್ಗತಿಯ ಕಾಣುತಲಿ ಕುರುಬಲವು
ಅದ್ಭುತ ಪರಾಕ್ರಮಿಯು ಭಂಗವನು ಪಟ್ಟಿರಲು
ನಿರ್ಬಲರ ನಮ್ಮಯಾ ಪಾಡೇನು ಎನ್ನುತಲಿ
ದಿಕ್ಕೆಟ್ಟು ದೆಸೆದೆಸೆಗೆ ಭಯದಲ್ಲಿ ಚದುರಿದುವು ॥೧೮೩೧॥

ಕುರುಪತಿಯು ನೋಡುತಲಿ ಕರವನ್ನು ಎತ್ತುತಲಿ
ಅಂಜದಿರಿ ಹೆದರದಿರಿ ಅನುಜರೊಡಗೂಡಿ
ನಾವುಗಳು ನೂರ್ವರೂ ಚತುರಂಗ ಬಲಸಹಿತ
ಗಂಧರ್ವ ನೃಪನನ್ನು ಸಂಹಾರ ಗೈಯ್ಯುವೆವು ॥೧೮೩೨॥

ಸಮರದಲಿ ಸೋಲುವುದು ಗೆಲ್ಲುವುದು ಸಹಜವಿದು
ಹೊಚ್ಚ ಹೊಸ ಉತ್ಸಾಹ ಶೌರ್ಯದಲಿ ನುಗ್ಗುತಲಿ
ಯುದ್ಧವನು ಗೈಯ್ಯುತಲಿ ರಿಪುಬಲವ ತರಿಯುವುದು
ಎನ್ನುತಲಿ ಭಟರಿಂಗೆ ಧೈರ್ಯವನು ಇತ್ತಿಹನು ॥೧೮೩೩॥

ಕುರುಪತಿಯ ಸೋದರನು ದುಶ್ಯಾಸನಾದಿಗಳು
ಅಗಣಿತದ ಕರಿತುರಗ ರಥರಥಿಕ ಸೈನ್ಯದಲಿ
ಚತುರಂಗ ಬಲಸಹಿತ ಧಾವಿಸುತ ನುಗ್ಗುತಲಿ
ಗಂಧರ್ವ ಸೈನ್ಯವನು ಕೊಚ್ಚುತಲಿ ಕೆಡಹಿದರು ॥೧೮೩೪॥

ನೀವುಗಳು ಕೌರವನ ಸೋದರುಗಳಿರುತಿಹಿರಿ
ಎಮ್ಮಯಾ ತಾಣದಲಿ ಐತಂದು ಎಮ್ಮೆದುರು
ದರ್ಪವನು ಗರ್ವವವನು ತೋರುತಿಹ ನಿಮ್ಮನ್ನು
ಸರ್ವರನು ಯಮಲೋಕ ಕಟ್ಟುವೆವು ಎನ್ನುತಲಿ ॥೧೮೩೫॥

ಗಂಧರ್ವ ಸೈನಿಕರು ಸೇನಾಧಿಕಾರಿಗಳು
ಕುರುಬಲವ ಕಬ್ಬನ್ನು ಕೊಚ್ಚುವಾ ಪರಿಯಲ್ಲಿ
ರುಂಡಗಳ ಮುಂಡಗಳ ಕೊಚ್ಚುತಲಿ ಕೆಡಹುತಲಿ
ರಕ್ತದಾ ಹೊಳೆಯೊಳಗೆ ಕುರುಬಲವ ನೆನೆಸಿದರು ॥೧೮೩೬॥

ಗಂಧರ್ವ ನೃಪವರನು ವರಚಿತ್ರ ಸೇನನು
ಕ್ರೋಧದಲಿ ಶರಗಳನು ಎಸೆಯುತಲಿ ಕೌರವನ
ಅನುಜರನು ನೋಯಿಸುತ ಗಾಯವನು ಗೊಳಿಸುತಲಿ
ಪಾಶದಲಿ ಹೆಡೆಮುರಿಗೆ ಕಟ್ಟುತಲಿ ಒಗೆದಿಹನು ॥೧೮೩೭॥

ದುರುಳನಾ ಕೌರವನ ಬಂಧಿಪುದು ಎನ್ನುತಲಿ
ಸಾಗರದ ತೆರೆಗಳಾ ಪರಿಯಲ್ಲಿ ಅಗಣಿತದ
ಸೈನಿಕರ ಕೊಳ್ಳುತಲಿ ಗಂಧರ್ವ ನೃಪವರನು
ಕೌರವನ ಸಮ್ಮುಖಕೆ ರಥವನ್ನು ಬಿಟ್ಟಿಹನು ॥೧೮೩೮॥

ಕೋಟಿಯಾ ಸಂಖ್ಯೆಯಲಿ ಗಂಧರ್ವ ಭಟರುಗಳು
ಮಿಂಚಿನಾ ವೇಗದಲಿ ನುಗ್ಗುತಲಿ ಭರದಲ್ಲಿ
ಕೌರವನ ಮುತ್ತುತಲಿ ಸುತ್ತಲೂ ಭದ್ರಮಿಹ
ಸೈನ್ಯದಾ ಕೋಟೆಯನು ನಿರ್ಮಿಸುತ ನಿಂದಿಹರು ॥೧೮೩೯॥

ಹೊಳೆಹೊಳೆವ ಖಡ್ಗಗಳ ಹಿರಿಯುತಲಿ ಝಳಪಿಸುತ
ಭಲ್ಲೆಗಳ ಬರ್ಚಿಗಳ ಗದೆಗಳನು ಕೊಡಲಿಗಳ
ಹಿಡಿಯುತಲಿ ಸೈನಿಕರು ನಿಲ್ಲುತಿರೆ ಕೌರವನು
ಪಂಜರದ ಹುಲಿಯಂತೆ ಭಯಭೀತನಾಗಿಹನು ॥೧೮೪೦॥

ಆಗಲಾ ಗಂಧರ್ವ ನೃಪವರನು ಐತಂದು
ಜಲಕೇಳಿಗೋಸುಗವೆ ಬಂದಿರುವ ಕಡುಮೂರ್ಖ
ಕುರುಪತಿಯೆ ನಿನ್ನನ್ನು ರಕುತದಾ ಕೇಳಿಯಲಿ
ರಮಿಸಲಿಕೆ ನರಕಕ್ಕೆ ಅಟ್ಟುವೆನು ಎಂದಿದನು ॥೧೮೪೧॥

ಕುದುರೆಗಳ ಕಡಿವಾಣ ಕೊಳ್ಳುತಲಿ ಗಂಧರ್ವ
ಕೌರವನ ಹೆಡೆಮುರಿಗೆ ಬಿಗಿಯುತಲಿ ಕಟ್ಟುತಲಿ
ದುಷ್ಟನಿಗೆ ಶಿಕ್ಷೆಯನು ಈಯುವುದು ಎನ್ನುತಲಿ
ದರದರನೆ ಎಳೆತಂದು ರಥದೊಳಗೆ ಒಗೆದಿಹನು ॥೧೮೪೨॥

ಕರ್ಣಂಗೆ ಕೌರವಗೆ ಒದಗಿರುವ ದುರ್ಗತಿಯ
ಕಾಣುತಲಿ ಕುರುಸೈನ್ಯ ಪ್ರಾಣದಾ ಭಯದಲ್ಲಿ
ಬಿಲ್ಲುಗಳ ಬಾಣಗಳ ಶಸ್ತ್ರಾಸ್ತ್ರ ಚೆಲ್ಲುತಲಿ
ಗಂಧರ್ವ ನೃಪನಿಂಗೆ ಸಾಷ್ಟಾಂಗವೆರಗಿದರು ॥೧೮೪೩॥

ಇತ್ತಲಾ ದಿಬ್ಬಗಳ ಮರಗಳನು ಏರುತಲಿ
ಕುಳಿತಿರ್ದ ಪಾಂಡವರು ಮುನಿವರರು ಋಷಿವೃಂದ
ದುರುಳನಾ ಕೌರವನ ದುರ್ದಸೆಯ ನೋಡುತಲಿ
ಸಂತಸದ ಸಾಗರದಿ ಹರ್ಷದಲಿ ನಲಿದಿಹರು ॥೧೮೪೪॥

ಪವನಜನು ಕೇಕೆಯನು ಹಾಕುತಲಿ ಕುಣಿದಿಹನು
ಮಾದ್ರಿಜರು ಮುದದಿಂದ ಉಬ್ಬುತಲಿ ನಲಿದಿಹರು
ಆದೊಡಾ ಫಲಗುಣನು ವ್ಯಾಕುಲವ ಗೊಂಡಿಹನು
ದ್ರೌಪದಿಯು ಆನಂದ ಸಾಗರದಿ ತೇಲಿದಳು ॥೧೮೪೫॥

ವನವಾಸದೊಳಗಿರ್ದ ದಾರಿದ್ರ್ಯಗೊಳಗಾದ
ನಮ್ಮೆದುರು ತನ್ನಯಾ ವೈಭವದ ಗರ್ವದಲಿ
ತೋರಲಿಕೆ ಬಂದಿರುವ ದುರುಳನಾ ಕೌರವಗೆ
ಸರಿಯಾದ ಶಿಕ್ಷೆಯದು ಆಯ್ತೆಂದು ಹಿಗ್ಗಿದಳು ॥೧೮೪೬॥

ಅಕಟಕಟ ಕೌರವನು ಎಮ್ಮಯಾ ಬಂಧುವಿಹ
ಪರಕೀಯ ಗಂಧರ್ವ ಗೈದಿರು ಅಪಮಾನ
ಎಮ್ಮಯಾ ಹೀನತರ ಅಪಮಾನ ಎನ್ನುತಲಿ
ಆಧರ್ಮನಂದನನು ನೊಂದಿಹನು ಕುಂದಿಹನು ॥೧೮೪೭॥

ನಳನಹುಷ ವರಭರತ ಮಾಂಧಾತ ವರನೃಪರ
ಪುಣ್ಯತರ ವಂಶದಲಿ ಜನಿಸಿರುವ ನಮಗಿಂದು
ಈ ಪರಿಯ ಪರಿಭವವು ಉಂಟಾಯ್ತೆ ಎನ್ನುತಲಿ
ಧರ್ಮವೇ ಮೈವೆತ್ತ ಧರ್ಮಜನು ನೊಂದಿಹನು ॥೧೮೪೮॥

ಕುರುಕುಲದ ಕೀರ್ತಿಯಾ ಕಳಶವದು ಕಳಚುತಲಿ
ಧರೆಗುರುಳಿ ಬೀಳುತಲಿ ಮಣ್ಣನ್ನು ಮುಕ್ಕಿದುದೆ
ಎನ್ನುತಲಿ ಧರ್ಮಜನು ನೋಯುತಲಿ ಮನದೊಳಗೆ
ಶ್ರೀವೀರ ನರಯಣನ ನೆನೆಯುತಲಿ ಇರ್ದಿಹನು ॥೧೮೪೯॥

ಚಂದ್ರಕುಲ ನೃಪವರನೆ ಜನಮೇಜಯಾಲಿಪುದು
ಅತ್ತಲಾ ಗಂಧರ್ವ ಕುರುಪತಿಯ ಬಂಧಿಸುತ
ಎಳೆದೊಯ್ಯುತಿರುತಿರಲು ಕುರುಸೇನೆ ದಿಕ್ಕೆಟ್ಟು
ಬಾಯ್ಬಿಡುತ ಕೂಗುತಲಿ ದೆಸೆದೆಸೆಗೆ ಹರಿದಿಹುದು ॥೧೮೫೦॥

ಕುದುರೆಗಳು ಹೇಂಕಾರ ಗೈಯ್ಯುತಲಿ ಚದುರಿದವು
ಆನೆಗಳು ಘೀಳಿಸುತ ಕಿರಚುತಲಿ ಓಡಿಪವು
ರಾವುತರು ಮಾವುತರು ಪದಾತಿ ಸೈನ್ಯಗಳು
ಪ್ರಾಣದಾ ಭಯದಲ್ಲಿ ಪಲಾಯನ ಗೈದಿಹರು ॥೧೮೫೧॥

**ಭಾನುಮತಿ ಕುರುಪತಿಯ ಬಂಧನವ ಬಿಡಿಸಲಿಕೆ ।**
**ದೈನ್ಯದಲಿ ಧರ್ಮಜನ ಪ್ರಾರ್ಥನೆಯ ಗೈದಿಹಳು ॥**

ಇತ್ತಲಾ ಕೌರವನ ರಾಣಿಯಳು ಭಾನುಮತಿ
ದುಶ್ಶಾಸನಾದಿಗಳ ಸತಿನಿಕರ ಸಹಿತದಲಿ
ಅರಮನೆಯ ನಾರಿಯರ ಸಖಿವೃಂದವೆರಸುತಲಿ
ಕಳವಳದಿ ರೋದಿಸುತ ಚೀರುತಲಿ ನಡೆದಿಹಳು ॥೧೮೫೨॥

ಕಾರುಣ್ಯ ಸಿಂಧುವಿನ ಆಧರ್ಮನಂದನನ
ಪಾಂಡವರ ಆಶ್ರಮವು ಎಲ್ಲಿಹುದು ಎನ್ನುತಲಿ
ಕಾನನದಿ ಕಲ್ಮುಳ್ಳು ತುಳಿಯುತಲಿ ನಡೆಯುತಲಿ
ಅರಸುತಲಿ ಧರ್ಮಜನ ಆಶ್ರಮಕೆ ಬಂದಿಹಳು ॥೧೮೫೩॥

ಧರ್ಮವೇ ಮೈವೆತ್ತಿ ನಿಂತಿರುವ ಕರುಣಾಳು
ಧರ್ಮಜನ ಚರಣದಲಿ ಬೀಳುತಲಿ ಹೊರಳುತಲಿ
ಶಿರವನ್ನು ಇಕ್ಕುತಲಿ ಕಂಬನಿಯ ಸುರಿಸುತಲಿ
ರಕ್ಷಿಪುದು ಎನ್ನುತಲಿ ರೋದನವ ಗೈದಿಹಳು ॥೧೮೫೪॥

ದೃಗುಜಲದ ಧಾರೆಯನು ಸಂತಸದಿ ಸುರಿಸುತಲಿ
ನೊಸಲಿನಾ ಕುಂಕುಮದ ಸಹಿತದಲಿ ಧರ್ಮಜನ
ಚರಣಗಳ ತೊಳೆಯುತಿರೆ ಬೈತಲೆಯ ಮುತ್ತುಗಳ
ಕೊರಲಸರ ರತುನಗಳ ಅಕ್ಷತೆಗಳುದುರಿದವು ॥೧೮೫೫॥

ಚಂದ್ರಕುಲ ನೃಪಶ್ರೇಷ್ಠ ಕರುಣಾಳು ಧರ್ಮಜನೆ
ಎನ್ನಯಾ ಭಾವಯ್ಯ ನಾವುಗಳು ಗೈದಿರುವ
ಅಪರಾಧ ದುಷ್ಕೃತ್ಯ ಮರೆಯುತಲಿ ಕರುಣೆಯಲಿ
ಎಮ್ಮನ್ನು ರಕ್ಷಿಪುದು ಎಂದಿಹಳು ಭಾನುಮತಿ ॥೧೮೫೬॥

ಹಿರಿಯಣ್ಣ ಪಿತೃಸಮನು ಎನ್ನುವರು ವಿದಿತವಿದೆ
ಎನ್ನಯಾ ಗಂಡಂಗೆ ತಂದೆಸಮ ನೀನಿರುವೆ
ನೀವೆಮ್ಮ ಮಾವಯ್ಯ ನಿಮ್ಮಯಾ ಸೊಸೆಯಿಹೆನು
ನೀವೆಮ್ಮ ಸಲಹುವುದು ಎಂದಿಹಳು ಭಾನುಮತಿ ॥೧೮೫೭॥

ಹೇ ಅಕ್ಕ ಹೇತಾಯಿ ದ್ರೌಪದಿಯೆ ದೇವಿಯರೆ
ಎನ್ನಯಾ ಪತಿರಾಯ ನಿಮ್ಮಯಾ ಮೈದುನನು
ನಿಮ್ಮನ್ನು ಅತುಳದಲಿ ಹಿಂಸಿಸುತ ನೋಯಿಸುತ
ಅಗಣಿತದ ಕಷ್ಟಗಳ ನಿತ್ತುದದ ಬಲ್ಲಿಹೆನು ॥೧೮೫೮॥

ಈಗಳಿನ ಸಮಯದಲಿ ಅವುಗಳನು ನೆನೆಯದಲೆ
ನಿಮ್ಮಯಾ ಮೈದುನನ ಕುರುಪತಿಯು ಬಂಧನವ
ಬಿಡಿಸಲಿಕೆ ನಿಮ್ಮಯಾ ಪತಿರಾಯ ಧರ್ಮಜಗೆ
ಹೇಳುವುದು ಎನ್ನುತಲಿ ದೈನ್ಯದಲಿ ನುಡಿದಿಹಳು ॥೧೮೫೯॥

ಹಸ್ತಿನೆಯ ಸಾಮ್ರಾಜ್ಞಿ ಭಾನುಮತಿ ದೇವಿಯರೆ
ಅಂದಿನಾ ಸಭೆಯೊಳಗೆ ನಿಮ್ಮಯಾ ಮೈದುನನು
ಸೀರೆಯನು ಸೆಳೆಯುತಿರೆ ದೈನ್ಯದಲಿ ಪ್ರಾರ್ಥಿಸಲು
ಗಾಂಧಾರಿ ಧೃತರಾಷ್ಟ್ರ ಗುರುದ್ರೋಣ ಭೀಷ್ಮರು ॥೧೮೬೦॥

ನಿಮ್ಮಯಾ ಪತಿರಾಯ ಸಕಲರೂ ಸುಮ್ಮನಿರೆ
ಎಮ್ಮಯಾ ಪತಿಗಳನು ಪ್ರಾರ್ಥಿಸಲು ದೈನ್ಯದಲಿ
ಐವರೂ ಮುಖಗಳನು ಕೆಳಗಡೆಗೆ ಮಾಡುತಲಿ
ನೆಲವನ್ನು ನೋಡುತಲಿ ಕುಳಿತುದದ ಕಂಡಿರಿ ॥೧೮೬೧॥

ಎಮ್ಮಯಾ ಮಾತುಗಳ ಆಲಿಸರು ಪಾಲಿಸರು
ನೀವೆಯೇ ದೈನ್ಯದಲಿ ಪಾಂಡವರ ಪ್ರಾರ್ಥಿಪುದು
ಕೌರವನ ಬಿಡಿಸಲಿಕೆ ಭೀಮಂಗೆ ಬೇಡುವುದು
ಎನ್ನುತಲಿ ವ್ಯಂಗ್ಯದಲಿ ನುಡಿದಿಹಳು ದ್ರೌಪದಿಯು ॥೧೮೬೨॥

ಭಾನುಮತಿ ಮನದೊಳಗೆ ನೋಯುತಲಿ ನವೆಯುತಲಿ
ಕಳವಳದಿ ಚಿಂತಿಸುತ ಶೋಕವದು ಉಕ್ಕುತಲಿ
ರೋದಿಸುತ ಚೀರುತಲಿ ಧರ್ಮಜನ ಚರಣದಲಿ
ಬೀಳುತಲಿ ಆಕ್ರೋಶ ಗೈದಿಹಳು ಭಾನುಮತಿ ॥೧೮೬೩॥

**ಧರ್ಮಜನ ಆಜ್ಞೆಯಲಿ ಯುದ್ಧವನು ಗೈಯ್ಯುತಲಿ**
**ಫಲ್ಗುಣನು ಆ ಚಿತ್ರಸೇನನ ಸೋಲಿಸಿದ ॥**

ಆಗಲಾ ಧರ್ಮಜನ ಹೃದಯವದು ಕರಗುತಲಿ
ನೀರಾಗಿ ಮನದೊಳಗೆ ಕಡುನೊಂದು ನೋಯುತಲಿ
ಹಸ್ತಿನೆಯ ಸಾಮ್ರಾಜ್ಞಿಗೀಪರಿಯ ದುಃಖವದು
ಬಂದಿಹುದೆ ಎನ್ನುತಲಿ ಮರುಗುತಲಿ ನುಡಿದಿಹನು ॥೧೮೬೪॥

ಭಾನುಮತಿ ದೇವಿಯರೆ ನೀವೆಮಗೆ ಅನ್ಯಳೇ
ಎಮ್ಮಯಾ ಸೋದರನ ಕುರುಪತಿಯ ಸತಿಯಿರುವೆ
ನಿಮ್ಮನ್ನು ರಕ್ಷಿಪುದು ಎಮ್ಮಯಾ ಕರ್ತವ್ಯ
ವಿಳುವುದು ಎನ್ನುತಲಿ ಧರ್ಮಜನು ನುಡಿದಿಹನು ॥೧೮೬೫॥

ಮಾನನಿಧಿ ಕೌರವನ ರಕ್ಷಿಸದೆ ಇರ್ದೊಡೆಯು
ದೊಡ್ಡಪ್ಪ ಧೃತರಾಷ್ಟ್ರ ದೊಡ್ಡವ್ವ ಗಾಂಧಾರಿ
ಕೇಳುತಲಿ ಎಮ್ಮನ್ನು ಶಪಿಸದೇ ಇರುತಿಹರೆ
ಶೋಕವನು ಮಾಡದಿರು ಎಂದಿಹನು ಧರ್ಮಜನು ॥೧೮೬೬॥

ಬಾ ಭೀಮ ವಿಕ್ರಮನೆ ಉದ್ದಾಮ ವೀರನೇ
ಕುರುವನದ ಕೇಸರಿಯೆ ಈಕ್ಷಣದಿ ತೆರಳುತಲಿ
ಗಂಧರ್ವ ನೃಪನನ್ನು ಜಯಿಸುತಲಿ ಕೌರವನ
ಸೆರೆಯನ್ನು ಬಿಡಿಸುತಲಿ ಕರೆತಹುದು ಎಂದಿಹನು ॥೧೮೬೭॥

ಆಗಲಾ ಪವನಜನು ಧರ್ಮಜಗೆ ಕರಮುಗಿದು
ನೀವುಗಳು ನೀತಿಗಳ ಶಾಸ್ತ್ರಗಳ ಪರಿಣತರು
ಧರ್ಮಾಧರ್ಮಗಳ ಯೋಚಿಸುತ ಯೋಗ್ಯಮಿಹ
ಕಾರ್ಯಗಳನುಸುರಿದೊಡೆ ಗೈಯ್ಯುವೆನು ಎಂದಿಹನು ॥೧೮೬೮॥

ಮೋಸದಲಿ ಹೇಸದಲೆ ಕಪಟದಾ ದ್ಯೂತದಲಿ
ರಾಜ್ಯವನು ಕೊಳ್ಳುತಲಿ ಸತಿಯಳಾ ದ್ರೌಪದಿಯ
ಮಾನವನು ಕಳೆದಿರುವ ದುರುಳನಾ ಕೌರವನ
ಸೆರೆಯನ್ನು ಬಿಡಿಸುವುದು ಯೋಗ್ಯವೇ ಹೇಳೆಂದ ॥೧೮೬೯॥

ಹೊರಗಡೆಗೆ ಬಂದಿರುವ ಹೆಮ್ಮಾರಿ ಭೂತವದು
ಹೊರಗಡೆಗೆ ತಾನೆಯೇ ಸುಲಭದಲಿ ಹೋಗಿಹುದು
ಹೋಗಿರುವ ಮಾರಿಯನು ಕರೆಯುತಲಿ ಮನೆಯೊಳಗೆ
ಸತ್ಕಾರ ಗೈಯ್ಯುವುದು ಯೋಗ್ಯವೇ ಹೇಳೆಂದ ॥೧೮೭೦॥

ನಾಗರದ ಹಾವಿಂಗೆ ಹಾಲನ್ನು ಇಕ್ಕಿದೊಡೆ
ಕುಡಿಯುತಲಿ ವಿಷವಾಗಿ ಕಚ್ಚದೇ ಇರುತಿಹುದೆ
ಕರುಣೆಯಲಿ ಶತ್ರುಗಳ ರಕ್ಷಣೆಯ ಗೈದೊಡೆಯು
ಸಮಯದಲಿ ಮೋಸದಲಿ ಕೊಲ್ಲದೇ ಇರುತಿಹುದೆ ॥೧೮೭೧॥

ಎಮ್ಮನ್ನು ಹಂಗಿಸಲು ಬಂದಿರುವ ಕೌರವನು
ತನ್ನಯಾ ಕುಹಕದಾ ದುಷ್ಕೃತ್ಯ ಕಾರಣದಿ
ಬಂಧನದಿ ಸಿಲುಕುತಿರೆ ನಾವೇಕೆ ಚಿಂತಿಪುದು
ತಮ್ಮಯಾ ಕರ್ಮಫಲ ಭೋಗಿಪರು ಎಂದಿಹನು ॥೧೮೭೨॥

ಪರ್ವತವ ಕೀಳುತಲಿ ತಹುದೆಂದು ನುಡಿದೊಡೆಯು
ತಾರೆಗಳ ಕಳಚುತಲಿ ತಹುದೆಂದು ನುಡಿದೊಡೆಯು
ಅಮೃತವನು ತಹುದೆಂದು ನುಡಿದೊಡೆಯು ಗೈಯ್ಯುವೆನು
ಆದೊಡೆಯು ಕೌರವನ ನಾ ಬಿಡಿಸೆನೆಂದಿಹನು ॥೧೮೭೩॥

ನಿಮ್ಮಯಾ ಬುದ್ಧಿಯದು ಕೆಟ್ಟಿಹುದೊ ಭ್ರಮೆಯಾಯ್ತೊ
ಅರಳಿನಾ ಮರಳಿನಾ ಮುದಿಹುಚ್ಚು ಹಿಡಿದಿಹುದೊ
ನಿಮ್ಮನ್ನು ವನವಾಸಕಟ್ಟಿರುವ ದುಷ್ಟನಾ
ಬಂಧವಹನೆಂದಿಗೂ ನಾ ಬಿಡಿಸೆನೆಂದಿಹನು ॥೧೮೭೪॥

ಈಗಲಾ ಕೌರವನ ಸೆರೆಯನ್ನು ಬಿಡಿಸಿದೊಡೆ
ಮುಂದಕ್ಕೆ ಎಮ್ಮನ್ನು ಸೆರೆಹಿಡಿದು ಹಿಂಸಿಪನು
ಉಪಕಾರ ಗೈದವರ ಅಪಕಾರ ಗೈಯ್ಯುವಾ
ಕೃತಘ್ನ ಕೌರವನ ನಾ ಬಿಡಿಸೆನೆಂದಿಹನು ॥೧೮೭೫॥

ಹೇ ಭೀಮ ಆರಿಂಗೆ ಆರುಗಳು ಅಪಕಾರಿ
ಅವರವರು ಪೂರ್ವಕೃತ ದುಷ್ಕರ್ಮ ಭೋಗಿಪರು
ನಾವುಗಳು ಹಿಂದಣದ ಜನ್ಮದಲಿ ಗೈದಿರುವ
ಪಾಪದಾ ಫಲವನ್ನು ಭೋಗಿಸುತಲಿರುತಿಹೆವು ॥೧೮೭೬॥

ಚಿತ್ತದಾ ಸಮತೆಯಲಿ ಶಾಂತಿಯಲಿ ಯೋಚಿಪುದು
ದೈವವೇ ಎಮ್ಮನ್ನು ಜೂಜನ್ನು ಆಡಲಿಕೆ
ಪ್ರೇರಣೆಯ ನೀಡುತಲಿ ಕಷ್ಟಗಳ ನಿತ್ತಿಹುದು
ಕೌರವನು ಕಾರಣನು ಇದಕಲ್ಲ ಎಂದಿಹನು ॥೧೮೭೭॥

ಮಾನನಿಧಿ ಕುರುಪತಿಯು ಎಮ್ಮಯಾ ತಮ್ಮನಿಹ
ಪರರುಗಳು ಕಲಹಕ್ಕೆ ಬಂದೊಡೆಯು ನಾವುಗಳು
ನೂರೈವರಿರುತಿಹೆವು ನಮ್ಮೊಳಗೆ ಜಗಳಕ್ಕೆ
ನಾವುಗಳು ಐವರೂ ನೂರ್ವರುಗಳವರೆಂದ ॥೧೮೭೮॥

ನಿಮ್ಮಯಾ ನಯನೀತಿ ಶಾಸ್ತ್ರವ ಪುರಾಣವನು
ಆ ಗೊಡ್ಡು ಧರ್ಮವನು ಕೊಂಬುವನು ನಾನಲ್ಲ
ದುಷ್ಟರಿಗೆ ಶಿಕ್ಷೆಯನು ವಿಧಿಸುವದು ಯೋಗ್ಯವದು
ಕೌರವನ ನಾ ಬಿಡಿಸೆನೆಂದಿಹನು ಕಲಿಭೀಮ ॥೧೮೭೯॥

ಹಿಂದಣದಿ ಕೌರವನು ಗೈದಿರುವ ಕಪಟದಾ
ಹೀನತರ ಕಾರ್ಯಗಳ ನೆನೆಯುತಲಿ ದ್ವೇಷದಲಿ
ಕೈಕಟ್ಟಿ ಕೂಡ್ರುವಾ ಹೊತ್ತಲ್ಲ ಎನ್ನುತಲಿ
ಯಮಸುತನು ಅರ್ಜುನನ ನೋಡುತಲಿ ನುಡಿದಿಹನು ॥೧೮೮೦॥

ಚಂದ್ರಕುಲ ನೃಪರುಗಳ ಮಸ್ತಕ ಕಿರೀಟವೆ
ತ್ರೈಲೋಕ್ಯ ವೀರನೇ ಫಲುಗುಣನೆ ಕಿರೀಟಿಯೆ
ಈಗಲೇ ಗಂಧರ್ವ ಪತಿಯನ್ನು ಜಯಿಸುತಲಿ
ಕೌರವನ ಸೆರೆಯನ್ನು ಬಿಡಿಸುತಲಿ ತಹುದೆಂದ ॥೧೮೮೧॥

ಅಣ್ಣನಾ ಆಜ್ಞೆಯದು ವೇದದಾ ವಾಕ್ಯವಿದೆ
ತಪ್ಪಿದೆಯೊ ಒಪ್ಪಿದೆಯೊ ನಾಕಾಣೆ ಅಲಂಘ್ಯವು
ಭೀಮನಾ ಪರಿಯಲ್ಲಿ ನಿನ್ನಯಾ ನುಡಿಗಳಿಗೆ
ಎದುರಾಗಿ ಇಲ್ಲೆಂದು ಹುಚ್ಚಿನಲಿ ನಾನುಡಿಯೆ ॥೧೮೮೨॥

ಈ ಕ್ಷಣದಿ ಖೇಚರನ ನುಚ್ಚುನುರಿ ಮಾಡುತಲಿ
ಕೌರವರ ನಿಕರವನು ಬಿಡಿಸುತಲಿ ಕೊಳ್ಳುತಲಿ
ನಿನ್ನಯಾ ಚರಣದಲಿ ಇರಿಸುವೆನು ಎನ್ನುತಲಿ
ಯುದ್ಧಕ್ಕೆ ಸಿದ್ಧತೆಯ ಗೈಯ್ಯುತಲಿ ಭರದಲ್ಲಿ ॥೧೮೮೩॥

ಬಾಣಗಳ ಬತ್ತಳಿಕೆ ಬೆನ್ನಿನಲಿ ಬಿಗಿಯುತಲಿ
ಗಾಂಡೀವ ಧನುವನ್ನು ಕೊಳ್ಳುತಲಿ ಗಾಂಡೀವಿ
ಧರ್ಮಜನ ಚರಣಕ್ಕೆ ಎರಗುತಲಿ ಸಾಗುತಿರೆ
ಪವನಜನು ಮಾದ್ರಿಜರು ಬೆನ್ನಿನಲಿ ನಡೆದಿಹರು ॥೧೮೮೪॥

ಚತುರಂಗ ಕುರುಸೇನೆ ಪುನರಪಿಯು ಒಗ್ಗೂಡಿ
ಫಲುಗುಣನ ಜೊತೆಯಲ್ಲಿ ಯುದ್ಧಕ್ಕೆ ಸಾಗುತಲಿ
ಭೋರ್ಗರೆವ ಸಾಗರದ ಅಲೆಗಳಾ ಪರಿಯಲಿ
ಕಳಕಳದ ನಾದದಲಿ ಖೇಚರರ ಮುತ್ತಿದುದು ॥೧೮೮೫॥

ಕಬ್ಬುಗಳ ಗಣೆಗಳನು ಕೊಚ್ಚುವಾ ಪರಿಯಲ್ಲಿ
ತರೆಗೆಲೆಯ ಭರಭರನೆ ತರಿಯುವಾ ಪರಿಯಲ್ಲಿ
ಗಂಧರ್ವ ಸೈನಿಕರ ತಲೆಗಳನು ತರಿಯುತಲಿ
ರಕುತದಾ ಹೊನಲಿನಲಿ ಕೆಡುಹಿದರು ಉರುಳಿಸುತ ॥೧೮೮೬॥

ಖೇಚರನೆ ಬಂಧಿಸಿದ ಕೌರವನ ಬಿಟ್ಟುಬಿಡು
ಇಲ್ಲದಿರೆ ಗಂಧರ್ವಲೋಕವನು ದಹಿಸುವೆನು
ನಿನ್ನಯಾ ಉಸಿರನ್ನು ಬಿಡಿಸುವೆನು ಎನ್ನುತಲಿ
ಅರ್ಜುನನು ಬಾಣಗಳ ವೃಷ್ಟಿಯನು ಕರೆದಿಹನು ॥೧೮೮೭॥

ನಿಶಿತಶರವಗಣಿತವು ಖೇಚರರನಿರಿಯುತಲಿ
ರುಂಡಗಳ ಮುಂಡಗಳ ಪರ್ವತವನೊಕ್ಕಿದವು
ಕಿಡಿಕೆಂಡ ಕಾರುತಲಿ ಜ್ವಾಲೆಯನು ಉಗುಳುತಲಿ
ಗಂಧರ್ವ ಸೈನ್ಯವನು ಭಸ್ಮವನು ಮಾಡಿಹವು ॥೧೮೮೮॥

ಕುರುಪತಿಯ ಸೆರೆಹಿಡಿದ ಆ ಹೇಡಿ ಗಂಧರ್ವ
ಆವೆಡೆಯೊಳಿರುತಿಹನು ತಲೆಮರೆಸಿ ಕುಳಿತಿಹನು
ಈಗಲೇ ಹೆಡೆಮುರಿಗೆ ಕಟ್ಟುತಲಿ ತಹೆನೆಂದು
ಕಲಿಪಾರ್ಥ ರಥವನ್ನು ವೇಗದಲಿ ಬಿಟ್ಟಿಹನು ॥೧೮೮೯॥

ರಣದೊಳಗೆ ಭಾರಿರಥ ರಭಸದಲಿ ಸಾಗುತಿರೆ
ಆನೆಗಳ ಕಾಲುಗಳ ತುಳಿತಕ್ಕೆ ಸಿಕ್ಕಿರುವ
ಕಮಲಗಳು ಗಿಜಿಗಿಜಿಯು ಆಗುವಾ ಪರಿಯಲ್ಲಿ
ಚಕ್ರಗಳ ಹತಿಯಲ್ಲಿ ಖೇಚರರು ಅಳಿದಿಹರು ॥೧೮೯೦॥

ಗಂಧರ್ವ ಸೈನ್ಯದಲಿ ಕಲಿಪಾರ್ಥ ನುಗ್ಗುತಲಿ
ರಥವನ್ನು ಚಿತ್ರರಥನೆದುರಿನಲಿ ನಿಲ್ಲಿಸುತ
ಎಲವೆಲವೊ ಗಂಧರ್ವ ಕೌರವನ ಬಿಟ್ಟುಬಿಡು
ಇಲ್ಲದಿರೆ ನಿನ್ನನ್ನು ಯಮಲೋಕಕಟ್ಟುವೆನು ॥೧೮೯೧॥

ಏವ್ಮೊಡನೆ ನಿಮ್ಮಯಾ ಸರಸಾಟ ಸಲ್ಲದದು
ಆ ಸುರೆಯ ಪಾನದಲಿ ಸುರಮೋಹನಾಂಗಿಯರ
ಮಧ್ಯದಲಿ ನಿಮ್ಮಯಾ ಶೌರ್ಯವನು ತೋರುವುದು
ಎನ್ನುತಲಿ ಶರಗಳನು ಎಚ್ಚಿದದು ಕಲಿಪಾರ್ಥ ॥೧೮೯೨॥

ನರಲೋಕ ನರನಿಂಗೆ ಈ ಪರಿಯ ಗರ್ವವೆ
ನರಜಂತು ಹುಳುವಿನಾ ನುಡಿಗಳನು ನಾ ಸಹಿಸೆ
ಎನ್ನುತಲಿ ಗಂಧರ್ವ ಹೊಳೆಹೊಳೆವ ದಿವ್ಯಾಸ್ತ್ರ
ತೆಗೆಯುತಲಿ ಹೂಡುತಲಿ ಅರ್ಜುನನಿಗೆಸೆದಿಹನು ॥೧೮೯೩॥

ಫಲುಗುಣನು ಕೋಪದಲಿ ಸಾವಿರದ ಶರಗಳನು
ಎಚ್ಚುತಲಿ ಖೇಚರನ ಮುಚ್ಚುತಲಿ ಮುಸುಕುತಿರೆ
ಗಂಧರ್ವ ಬಾಣಗಳ ಮಳೆಗರೆದು ಶರಮುಸುಕ
ಕಡಿಯುತಲಿ ಪುಡಿಪುಡಿಯ ಗೈಯ್ಯುತಲಿ ತೆಗೆದಿಹನು ॥೧೮೯೪॥

ಅರ್ಜುನನು ಕ್ರೋಧದಲಿ ಬಾಣಗಳನಳವಡಿಸಿ
ಗುರಿಯಿಡುತ ತೂಗುತಲಿ ಖೇಚರನ ಕುದುರೆಗಳ
ಇರಿಯುತಲಿ ಕೆಡುಹುತಲಿ ರಥವನ್ನು ಪುಡಿಗೈದು
ನಾಶವನು ಗೈಯ್ಯುತಿರೆ ಗಂಧರ್ವ ಬೆರಗಾದ ॥೧೮೯೫॥

ಧೂಮಿಯಲಿ ಯುದ್ಧವನು ಗೈದೊಡೆಯು ಕಲಿಪಾರ್ಥ
ಎನ್ನನ್ನು ಸೋಲಿಪನು ಎನ್ನುತಲಿ ಗಂಧರ್ವ
ನಭದೊಳಗೆ ನಿಲ್ಲುತಲಿ ಯುದ್ಧವನು ಗೈಯ್ಯುವುದು
ಎನ್ನುತಲಿ ಗಗನಕ್ಕೆ ಏರುತಲಿ ಭರದಲ್ಲಿ ॥೧೮೯೬॥

ಬಾಣಗಳ ಮಳೆಯನ್ನು ಧಾರೆಯಲಿ ಸುರಿಸುತಿರೆ
ಗಾಢಾಂಧಕಾರವದು ಕವಿಯುತಲಿ ಫಲುಗುಣನು
ಶರಗಳನು ಎಸೆಯುತಲಿ ಶರಜಾಲ ಕಡಿಯುತಿರೆ
ರವಿತೊಳಗಿ ಬೆಳಗುತಲಿ ದೆಸೆಯೆಲ್ಲ ಬೆಳಗಿದುದು ॥೧೮೯೭॥

ತ್ರೈಲೋಕ್ಯ ವೀರನಾ ಕಲಿಪಾರ್ಥ ಭರದಲ್ಲಿ
ರಥವನ್ನು ಮುಗಿಲಿಂಗೆ ಏರಿಸುತ ಕೋಪದಲಿ
ಎಲವೆಲವೊ ಗಂಧರ್ವ ಸ್ವರ್ಗವನು ಮರ್ತ್ಯವನು
ಪಾತಾಳ ಲೋಕಗಳ ಹೊಕ್ಕೊಡೆಯು ಬಿಡೆನೆಂದ ॥೧೮೯೮॥

ಅಜಹರಿಯ ರುದ್ರಾದಿ ದೇವರಾ ಮೊರೆಯನ್ನು
ಹೊಕ್ಕೊಡೆಯು ನಿನ್ನನ್ನು ನಾ ಬಿಡೆನು ಎನ್ನುತಲಿ
ಅಗಣಿತದ ಸಾಸಿರದ ಬಾಣಗಳ ನೆಚ್ಚುತಲಿ
ಮುಗಿಲನ್ನು ಮುಚ್ಚಿದನು ಶರಗಳಾ ಮುಸುಕಿನಲಿ ॥೧೮೯೯॥

ನಭದೊಳಗೆ ನೋಡುತಲಿ ನೆರೆದಿರ್ದ ಸುರರುಗಳು
ದಿಗ್ಭ್ರಾಂತರಾಗುತಲಿ ದೆಸೆದೆಸೆಗೆ ಚದುರಿದರು
ಗಂಧರ್ವ ಕೋಪದಲಿ ಅಂಬುಗಳ ನೆಚ್ಚುತಲಿ
ಅಂಬರದ ಮುಸುಕನ್ನು ಕಡಿಯುತಲಿ ನುಡಿದಿಹನು ॥೧೯೦೦॥

ಹೇ ಪಾರ್ಥ ಮುನ್ನಿನಲಿ ನಿವಾತಕವಚಾದಿಗಳ
ವಧಿಸಿರುವ ನಿನ್ನಯಾ ಶಕ್ತಿಯನು ನಾಬಲ್ಲೆ
ಏನೊಂದು ಅರಿಯದಲೆ ಯುದ್ಧವನು ಗೈಯ್ಯುತಲಿ
ಸುಮ್ಮನೇ ಏತಕ್ಕೆ ದಣಿಯುತಿಹೆ ಎಂದಿಹನು ॥೧೯೦೧॥

ಎನ್ನಯಾ ನುಡಿಗಳನು ಮನಗೊಟ್ಟು ಕೇಳುವುದು
ಧನವನ್ನು ಇಳುಹುತಲಿ ಯುದ್ಧವನು ನಿಲ್ಲಿಪುದು
ನಿಮ್ಮನ್ನು ಹಿಂಸಿಸಲು ಬಂದಿರುವ ಕೌರವನ
ಬಂಧಿಸಲು ನಿಮಗಾವ ತೊಂದರೆಯು ಆಯ್ತೆಂದ ॥೧೯೦೨॥

ಹುಲಿಯನ್ನು ಕೊಂದೊಡೆಯು ಪಶುಕುಲವೆ ಚಿಂತಿಪುದೆ
ಮನೆಯೊಳಗೆ ಸಿಕ್ಕಿರುವ ಮಾರಿಯನು ಹೊರಗಡೆಗೆ
ಇಕ್ಕಿದೊಡೆ ಕರೆಯುತಲಿ ಸತ್ಕರಿಪರಿರುತಿಹರೆ
ಜಗದೊಳಗೆ ನಿಮ್ಮಂಥ ಮೂರ್ಖರುಗಳಾರಿಲ್ಲ ॥೧೯೦೩॥

ಹದಿನಾಲ್ಕು ವರುಷಗಳ ವನವಾಸಕಟ್ಟಿರುವ
ದುರುಳನೀ ಕೌರವನ ಬಿಡಿಸಲಿಕೆ ಬಂದಿರುವ
ನಿಮ್ಮಗಳ ಮೂರ್ಖತನ ಭೋಳೆತವೇನೆಂಬೆ
ನಿಮ್ಮಂಥ ಹುಚ್ಚರನು ನಾಕಾಣೆ ಎಂದಿಹನು ॥೧೯೦೪॥

ಘೋರ ಹಾಲಾಹಲವ ಹಾಲೆಂದು ಕುಡಿಯುವರೆ
ಬೆಂಕಿಯನು ಬಂಗಾರವೆನ್ನುತಲಿ ಅಪ್ಪುವರೆ
ದ್ವೇಷದಾ ವಿಷತುಂಬಿ ತುಳುಕುತಿಹ ಕೌರವನ
ನಂಬುತಲಿ ನೀವುಗಳು ಕೆಟ್ಟಿಹಿರಿ ಎಂದಿಹನು ॥೧೯೦೫॥

ನಿಮ್ಮಯಾ ಶತ್ರುವನು ಬಂಧಿಸುತ ಕಟ್ಟಿದೊಡೆ
ಹರುಷದಲಿ ಹಿಗ್ಗದಲೆ ಸಂತಸವ ತಾಳದಲೆ
ಚಿಂತಿಸುತ ಕಳವಳದಿ ನಿಮಗಾವ ತಲೆಶೂಲೆ
ಹೊಟ್ಟೆಯಾ ನೋವಾಯ್ತು ಎಂದಿಹನು ಗಂಧರ್ವ ॥೧೯೦೬॥

ಯುದ್ಧವನು ಮಾಡುವಾ ತಿಂಡಿಯದು ಉಂಟಾಯ್ತು
ಎನ್ನುತಲಿ ಎನ್ನೊಡನೆ ಕದನಕ್ಕೆ ಬಾದಿಹೆಯಾ
ಉಪಕಾರ ಗೈದವಗೆ ಅಪಕಾರ ಗೈಯ್ಯುವದು
ಸಲ್ಲದಿದು ಸುಜನರಿಗೆ ಮರುಳುವುದು ಎಂದಿಹನು ॥೧೯೦೭॥

ಗಂಧರ್ವ ಸುರರುಗಳು ಸಂಗೀತ ನೃತ್ಯದಲಿ
ಚತುರೋಕ್ತಿ ನಾಟಕದಿ ಪರಿಣತರು ಬಲ್ಲಿದೆನು
ನಾಟಕದ ಮಾತುಗಳನಾಡುತಲಿ ನಮ್ಮನ್ನು
ಮರುಳಾಗಿ ಮಾಡದಿರು ಎಂದಿಹನು ಅರ್ಜುನನು ॥೧೯೦೮॥

ನಿಮ್ಮಯಾ ಸವಿನುಡಿಗೆ ಮರುಳಾಗಿ ಮಾಬ್ಬಾಗಿ
ಬರಿಗೈಲೆ ಆಶ್ರಮಕೆ ನಾ ಮರುಳಲಾರೆ
ಕೌರವನ ಬಿಡಿಸುತಲಿ ತಹುದೆಂದು ಎಮ್ಮಯಾ
ಅಣ್ಣನಾ ಕಟ್ಟಾಜ್ಞೆ ಇರುತಿಪುದು ಎಂದಿಹನು ॥೧೯೦೯॥

ಸೋದರನ ವಾಕ್ಯವದು ವೇದದಾ ವಾಕ್ಯವಿದೆ
ಸರಿ ಇದೆಯೊ ತಪ್ಪಿದೆಯೊ ಧರ್ಮವೊ ಅಧರ್ಮವೊ
ನಾನೊಂದ ತಿಳಿಯದಿಹೆ ಅಣ್ಣನಾ ಆಜ್ಞೆಯನು
ಪಾಲಿಪುದು ಎಮ್ಮಯಾ ಕರ್ತವ್ಯವಿರುತಿಹುದು ॥೧೯೧೦॥

ಕೌರವನ ಬಿಡಿಸದಲೆ ನಾ ಮರಳಿ ಹೋಗದಿಹೆ
ಬಿಟ್ಟುಬಿಡು ಕೌರವನ ಇಲ್ಲದಿರೆ ನಿನ್ನಯಾ
ಪ್ರಾಣವನು ಬಿಡಿಸುವೆನು ಎನ್ನುತಲಿ ಫಲುಗುಣನು
ಬಿಲ್ಲಿನಲಿ ಬಾಣಗಳನಳವಡಿಸಿ ನಿಂದಿಹನು ॥೧೯೧೧॥

ಹೇ ಮರುಳೆ ಅರ್ಜುನನೆ ಯುದ್ಧದಾ ಪಿತ್ತವದು
ತಲೆಗೇರಿ ಮತ್ತದಲಿ ನೀ ನುಡಿಯುತಿರುತಿರುವೆ
ಎನ್ನಯಾ ಮಾತುಗಳ ಚಿತ್ತದಲಿ ಆಲಿಪುದು
ಸುಮ್ಮನೇ ಬಾಣಗಳ ಕೆಡಿಸದಿರು ಎಂದಿಹನು ॥೧೯೧೨॥

ಎಮ್ಮೊಡೆಯ ದೇವೇಂದ್ರ ಕೌರವನ ಬಂಧಿಸುತ
ತಹುದೆಂದು ಎಮಗಾಜ್ಞೆ ಇತ್ತಿಹನು ಕಾರಣದಿ
ಕೌರವನ ಕಟ್ಟಿಹೆನು ಬಿಡಿಸಲಿಕೆ ಇಂದ್ರನಾ
ಅನುಮತಿಯು ಬೇಕೆಂದು ಗಂಧರ್ವ ನುಡಿದಿಹನು ॥೧೯೧೩॥

ನಿಮ್ಮೊಡೆಯ ನಾಜ್ಞೆಯನು ನೀವುಗಳು ಪಾಲಿಪೊಲು
ನಾವುಗಳ ನಮ್ಮಣ್ಣ ನಾಜ್ಞೆಯನು ಪಾಲಿಸದೆ
ಬರಿಗೈಲೆ ತೆರಳುತಲಿ ಎಮ್ಮಣ್ಣ ದೇವನನು
ಕಾಣುವುದು ನಮ್ಮಯಾ ಶೌರ್ಯಕ್ಕೆ ಕುಂದಿಹುದು ॥೧೯೧೪॥

ಒಳ್ಳೆಯಾ ಮಾತಿನಲಿ ಕೌರವನ ಬಿಟ್ಟುಬಿಡು
ಇಲ್ಲದಿರೆ ನಿನ್ನಯಾ ಉಸುರನ್ನು ಬಿಡಿಸುವೆನು
ಎನ್ನುತಲಿ ಹೊಳೆಹೊಳೆವ ಹರಿತ ಶರಗಣೆತವ
ತೂಗುತಲಿ ಫಲುಗುಣನು ಗಂಧರ್ವಗೆಚ್ಚಿಹನು ॥೧೯೧೫॥

ಸುರಿಯುತಿಹ ಶರಗಳನು ಗಂಧರ್ವ ಕಡಿಯುತಲಿ
ಇನಿತೊಂದು ಕೋಪವದು ಏತಕ್ಕೆ ಅರ್ಜುನನೆ
ಹೇ ಮರುಳೆ ಎಮ್ಮಯಾ ಮಾತುಗಳು ರುಚಿಸದಿವೆ
ನಿಮ್ಮಯಾ ಹಿತಕಾಗಿ ನುಡಿದಿಹೆನು ಎಂದಿಹನು ॥೧೯೧೬॥

ಎಮ್ಮೊಡನೆ ಯುದ್ಧವನು ಏತಕ್ಕೆ ಗೈಯ್ಯುವುದು
ನಿಮ್ಮೊಡನೆ ಎಮ್ಮಯಾ ವೈರವದು ಎನಿತಿಲ್ಲ
ನಿಮ್ಮಣ್ಣ ನೆದುರಿನಲಿ ಕೌರವನ ಬಿಡಿಸುವೆನು
ನಿಮ್ಮನ್ನು ನೋಯಿಸೆನು ನಡೆ ಎಂದು ನುಡಿದಿಹನು ॥೧೯೧೭॥

**ಆ ಚಿತ್ರಸೇನನೃಪ ಕೌರವನ ಸೆರೆಸಹಿತ ।**
**ಐತಂದು ಧರ್ಮಜನ ಚರಣದಲಿ ಕೆಡಹಿದನು ॥**

ಗಂಧರ್ವ ಕೌರವರ ಸೆರೆಸಹಿತ ಐತಂದು
ಧರ್ಮಜನೆ ನಿಮ್ಮಯಾ ಸೋದರನು ಅರ್ಜುನನು
ಅದ್ಭುತ ಪರಾಕ್ರಮಿಯು ಮೂಲೋಕ ವೀರನಿಹ
ಎಮ್ಮನ್ನು ಯುದ್ಧದಲಿ ಸೋಲಿಸಿದನೆಂದಿಹನು ॥೧೯೧೮॥

ಪವನಜನು ಅರ್ಜುನನು ಮಾದ್ರಿಜರು ಸಕಲರೂ
ಎಮ್ಮಯಾ ಸೈನ್ಯವನು ಸಂಹಾರಗೈದಿಹರು
ದ್ವಾರಕಾಧೀಶನಾ ಶ್ರೀಕೃಷ್ಣ ನರಯಣನ
ಕರುಣೆಯದು ನಿಮಗುಂಟು ಎಂದಿಹನು ಗಂಧರ್ವ ॥೧೯೧೯॥

ಜನಮೇಜಯಧಿಪತಿಯೆ ಆಲಿಪುದು ಫಲುಗುಣನು
ಧೃಡವಾಗಿ ಹೆಡೆಮುರಿಗೆ ಕಟ್ಟಿರುವ ಕೌರವನ
ದುಃಶ್ಯಾಸನಾದಿಗಳ ಅನುಜರಾ ಸಹಿತದಲಿ
ಎಳೆತಂದು ಧರ್ಮಜನ ಚರಣದಲಿ ಕೆಡಹಿದನು ॥೧೯೨೦॥

ಧರ್ಮಜನೆ ಧರ್ಮವೇ ವೈವೆತ್ತ ಪರಿಯಲ್ಲಿ
ನೀವುಗಳು ಧರ್ಮದಾ ಪಾವನದ ಪುತ್ಥಳಿಯು-
ಕಪಟವದು ಮೋಸವದು ನಿಮಗೊಂದು ತಿಳಿಯದಿದೆ
ಭೋಳೆಯರು ನೀವಿಹಿರಿ ಎಂದಿಹನು ಗಂಧರ್ವ ॥೧೯೨೧॥

ದುಷ್ಟನೀ ಕೌರವನು ಗರ್ವದಲಿ ಸೊಕ್ಕಿನಲಿ
ತನ್ನಯಾ ವೈಭವವ ನಿಮ್ಮೆದುರು ಮೆರೆಸಲಿಕೆ
ಬಂದುದನು ಅರಿಯುತಲಿ ದೇವೇಂದ್ರ ನಿಮ್ಮನ್ನು
ನೋಯಿಸದೆ ಕೌರವನ ಬಂಧಿಪುದು ಎಂದಿಹನು ॥೧೯೨೨॥

ಕಾರಣದಿ ಕುರುಪತಿಯ ಬಂಧಿಸಿದೆ ಇದರೊಳಗೆ
ಎಮ್ಮಯಾ ತಪ್ಪಿಲ್ಲ ಕೌರವನ ಸುಮ್ಮನೇ
ಬಿಟ್ಟೊಡೆಯು ನಿಮಗೆಲ್ಲ ಮುಂದಕ್ಕೆ ಕೇಡಹುದು
ಕೌರವನು ದುಷ್ಟಗುಣ ಎಂದಿಗೂ ಬಿಡಸೆಂದ ॥೧೯೨೩॥

ನಾಗರದ ಹಾವಿಂಗೆ ಹಾಲನ್ನು ಇಕ್ಕಿದೊಡೆ
ವಿಷವಾಗಿ ಕಕ್ಕುತಲಿ ಕಚ್ಚದೇ ಇರುತಿಹುದೆ
ದುಷ್ಟರಿಗೆ ಶಿಕ್ಷೆಯನು ವಿಧಿಸುವುದು ಯೋಗ್ಯವದು
ಇಲ್ಲದಿರೆ ಕಷ್ಟವದು ಕಟ್ಟಿಹುದು ಎಂದಿಹನು ॥೧೯೨೪॥

ಗಂಧರ್ವ ನೃಪವರನೆ ಶತ್ರುಗಳು ದೈನ್ಯದಲಿ
ಎಮ್ಮನ್ನು ಮೊರೆಯನ್ನು ಹೊಕ್ಕೊಡೆಯು ರಕ್ಷಿಪುದು
ಕ್ಷತ್ರಿಯರ ಧರ್ಮವಿದೆ ಮೇಲಾಗಿ ಕೌರವನು
ಎಮ್ಮಯಾ ತಮ್ಮನಿಹ ಎಂದಿಹನು ಯಮಸುತನು ॥೧೯೨೫॥

ಕೌರವನ ರಕ್ಷಿಸದೆ ಇರ್ದೊಡೆಯು ಧೃತರಾಷ್ಟ್ರ
ಗಾಂಧಾರಿ ಎಮ್ಮಯಾ ತಾಯ್ತಂದೆ ಎಮ್ಮನ್ನು
ಶಪಿಸದೇ ಇರುತಿಹರೆ ಜಗವೆಲ್ಲ ನಮ್ಮನ್ನು
ನೀಚರುಗಳೆನ್ನುತಲಿ ನಿಂದಿಪುದು ಎಂದಿಹನು ॥೧೯೨೬॥

ನೀವುಗಳು ಕೌರವರು ಬಂಧುಗಳು ಬಾಂಧವರು
ಪರಕೀಯರಾವುಗಳು ನಮಗೇಕೆ ಈ ತೊಡಕು
ನಾವುಗಳು ತೆರಳುವೆವು ಎನ್ನುತಲಿ ಗಂಧರ್ವ
ಹೊರಡಲಿಕೆ ಸಿದ್ಧನಿರೆ ಧರ್ಮಜನು ನುಡಿದಿಹನು ॥೧೯೨೭॥

ಗಂಧರ್ವ ನೃಪವರನೆ ನೀನೆಮಗೆ ಅನ್ಯನೇ
ಎಮ್ಮಯಾ ಬಂಧುವಿಹ ದೇವೇಂದ್ರನೊಲುಮೆಯಾ
ಸಖನಿರುವೆ ಎನ್ನುತಲಿ ಧರ್ಮಜನು ಆದರದಿ
ಸತ್ಕರಿಸಿ ಕಳುಹಿದನು ಉಡುಗೊರೆಯ ಸಹಿತದಲಿ ॥೧೯೨೮॥

ಯಮಸುತನು ದ್ರೌಪದಿಯ ಕರೆಸುತಿರೆ ಭರದಲ್ಲಿ
ದ್ರೌಪದಿಯು ಐತಂದು ಕೈಕಾಲ ತೊಳ್ಗಳನು
ಹೆಡಮುರಿಗೆ ಕಟ್ಟಿರುವ ನೆಲದೊಳಗೆ ಬಿದ್ದಿರುವ
ಬತ್ತಿರುವ ಬಾಡಿರುವ ಕೌರವನ ಕಂಡಿತಳು ॥೧೯೨೯॥

ಅಕಟಕಟ ರತ್ನದಾ ತಲ್ಪದಲಿ ಮಲಗುತಿಹ
ಹಸ್ತಿನಾ ಪುರದರಸು ಕುರುಸಾರ್ವಭೌಮಂಗೆ
ಕಲ್ಮುಳ್ಳು ಚುಚ್ಚುತಲಿ ನೆಲದೊಳಗೆ ಒರಗುವಾ
ವಿಧಿಯಾಯ್ತೆ ಎನ್ನುತಲಿ ದ್ರೌಪದಿಯು ನುಡಿದಿಹಳು ॥೧೯೩೦॥

ನಾವುಗಳು ಧರ್ಮಜರಿಲಿ ಎಮ್ಮಯಾ ರಾಜ್ಯವನು
ದ್ಯೂತದಲಿ ಸೋಗಾಡಿ ವನರಾಜ್ಯ ಕೊಂಡಿಹೆವು
ಹುಲಿಕರಡಿ ಸಿಂಹಗಳ ಗಜತುರಗ ನಿಕರಗಳು
ಎಮ್ಮಯಾ ಚತುರಂಗ-ಬಲವೆಂದು ನುಡಿದಿಹಳು ॥೧೯೩೧॥

ಈ ಶಿಲೆಯ ಆಸನವು ರತ್ನ ಸಿಂಹಾಸನವು
ತರುಗಳಾ ಶಾಖೆಗಳು ಸೀಗುರಿ ಪತಾಕೆಗಳು
ನಳನಳಿಪ ನವಚೂತ ಪಲ್ಲವದ ನಿಕರಗಳು
ನೆಳಲನ್ನು ಈಯುತಿಹ ಸತ್ತಿಗೆಯು ಎಂದಿಹಳು ॥೧೯೩೨॥

ನರಿಗಳೇ ಮಂತ್ರಿಗಳು ನವಿಲುಗಳು ನರ್ತಕರು
ಶುಕಪಿಕದ ಸಂಕುಲವು ಆಸ್ಥಾನ ಗಾಯಕರು
ಮಕರಂದ ಸವಿಯುತಲಿ ಝೇಂಕಾರ ಗೈಯ್ಯುತಿಹ
ದುಂಬಿಗಳು ಎಮ್ಮಯಾ ಸ್ತುತಿಗೈವ ಪಾಠಕರು ॥೧೯೩೩॥

ಗಡ್ಡೆಗೆಣಸುಗಳೆಮ್ಮ ಸವಿರಸದ ಪಕ್ವಾನ್ನ
ಮುತ್ತಲದ ಎಲೆ ಎಮಗೆ ಸ್ವರ್ಣದಾ ತಟ್ಟೆಯದು
ನೀರನ್ನು ಕುಡಿಯಲಿಕೆ ಪರ್ಣಗಳ ದೊನ್ನೆಯಿದೆ
ಇದು ಎಮ್ಮ ವೈಭವವು ಸಂಪತ್ತು ಎಂದಿಹಳು ॥೧೯೩೪॥

ಮಣ್ಣಿನಲಿ ಮುಳ್ಳಿನಲಿ ಹಾಸಿರುವ ಹುಲ್ಲಿನಾ
ಚಾಪೆಯದು ವರಹಂಸ ತೂಲಿಕಾ ತಲ್ಪವಿದೆ
ಈ ಪರಿಯ ಕಾನನದ ಸಾಮ್ರಾಜ್ಯ ವೈಭವವು
ನಿಮ್ಮಯಾ ದಯೆಯಿಂದ ದೊರಕಿಹುದು ಎಂದಿಹಳು ॥೧೯೩೫॥

ಈ ಪರಿಯ ಸಂಪತ್ತು ಪಾತ್ರೆಗಳು ಇರುತಿರಲು
ನಿಮ್ಮನ್ನು ಅರಮನೆಯ ರಾಜೋಪಚಾರದಲಿ
ಸವಿರಸದ ಪಕ್ವಾನ್ನದೂಟದಲಿ ಸರಸದಲಿ
ಶೂಶ್ರೂಷೆ ಗೈಯ್ಯಲಿಕೆ ಅಸಮರ್ಥರೆಂದಿಹಳು ॥೧೯೩೬॥

ಜಲಕ್ರೀಡೆಗೋಸುಗವೆ ಬಂದಿರುವ ನಿಮಗದುವೆ
ರಕುತದಾ ಓಕುಳಿಯ ಆಟವದು ನಿಮಗಾಯ್ತು
ಗಂಧರ್ವ ನಿಮ್ಮನ್ನು ಸೆರೆಯಲ್ಲಿ ಬಂಧಿಸುತ
ಆತುದಲಿ ಹಿಂಸೆಯನು ಗೈದಿಹನು ಎಂದಿಹಳು ॥೧೯೩೭॥

ಹಸ್ತಿನೆಯ ಸಾಮ್ರಾಜ್ಯದಧಿ ಪತಿಯ ಮಾನನಿಧಿ
ಕೌರವನ ಮಾನವದು ಮಣ್ಣನ್ನು ಮುಕ್ಕಿಹುದೆ
ಗಂಧರ್ವ ನೃಪನನ್ನು ಶಿಕ್ಷಿಸದೆ [illegible]
ತಪ್ಪೆಂದು ನುಡಿದಿಹಳು ವ್ಯಂಗ್ಯ[illegible] ॥೧೯೩೮॥

ಭಾವಯ್ಯ ನೀವುಗಳು ಬಂಧನದಿ ಬಹು ಸಮಯ
ಬಳಲುತಲಿ ಬೆಂಡಾಗಿ ನೋವಾಗಿ ನೊಂದಿಹಿರಿ
ಈಗಲೇ ನಿಮ್ಮಯಾ ಸೆರೆಯನ್ನು ಬಿಡಿಸುವೆನು
ಚಿಂತೆಯದು ಮಾಡದಿರಿ ಎಂದಿಹಳು ದ್ರೌಪದಿಯು ॥೧೯೩೯॥

ಆಗಲಾ ಕೌರವನ ರಕುತವದು ಕುದಿಯುತಲಿ
ದುಷ್ಟಳೀ ದ್ರೌಪದಿಯ ಮಾತುಗಳ ಹರಿತದಾ
ಅಲಗಗಳು ಸಾವಿರವು ಹೃದಯವನು ಇರಿಯುತಲಿ
ಸಾವಿನಾ ನೋವನ್ನು ಈಯುತಿವೆ ಎಂದಿಹನು ॥೧೯೪೦॥

ಕೋಪದಾ ಜ್ವಾಲೆಯದು ಒಳಗೊಳಗೆ ಉರಿಯುತಿರೆ
ಕ್ರೋಧಕಿದು ಹೊತ್ತಲ್ಲ ಮುಂದಕ್ಕೆ ಸೇಡನ್ನು
ಕೊಳ್ಳುವೆನು ಎನ್ನುತಲಿ ಮನದೊಳಗೆ ಯೋಚಿಸುತ
ದುಗುಡದಲಿ ಮೌನದಲಿ ಕೌರವನು ಇರ್ದಿಹನು ॥೧೯೪೧॥

ನಿಮ್ಮಂಥ ಹೀನರನು ಕೈಯಿಂದ ಮುಟ್ಟುವುದು
ಅನುಚಿತವು ಆದರೂ ವಿಧಿಯಿಲ್ಲ ಎನ್ನುತಲಿ
ಕೌರವನ ದುಶ್ಶಾಸನನ ಮೋರೆಗಳ ಬಾಹುಗಳ
ಸೆರೆಗಳನು ಛೇದಿಸುತ ಬಿಡಿಸಿದಳು ದ್ರೌಪದಿಯು ॥೧೯೪೨॥

ಪಾಶಗಳು ಸಡಿಲುತಿರೆ ಕೌರವನು ಏಳುತಲಿ
ಧರ್ಮಜನ ಚರಣಕ್ಕೆ ಸಾಷ್ಟಾಂಗವೆರಗುತಲಿ
ಬಂಧನವ ಬಿಡಿಸುತಲಿ ನೀವೆಮ್ಮ ಸಲುಹಿದಿರಿ
ನಾ ನಿಮಗೆ ಚಿರಋಣಿಯು ಕೃತಜ್ಞನೆಂದಿಹನು ॥೧೯೪೩॥

ನಿಮ್ಮಯಾ ಉಪಕಾರ ಆಜನ್ಮ ಮರೆಯದಿಹೆ
ನೀವುಗಳು ಧರ್ಮದಾ ಮೂರ್ತಿಯೇ ಇರುತಿಹಿರಿ
ಎಮ್ಮಯಾ ತಪ್ಪನ್ನು ಮರೆಯುತಲಿ ಕ್ಷಮಿಸುವುದು
ಎನ್ನುತಲಿ ಕೌರವನು ಧರ್ಮಜಗೆ ನುಡಿದಿಹನು ॥೧೯೪೪॥

ನಿನ್ನಯಾ ತಾಯ್ತಂದೆ ಗಾಂಧಾರಿ ಧೃತರಾಷ್ಟ್ರ
ಹಸ್ತಿನಾಪುರದಲ್ಲಿ ದೂರದಲಿ ಇರುತಿಹರು
ನಿಮ್ಮನ್ನು ಸಲಹುವುದು ಎಮ್ಮಯಾ ಕರ್ತವ್ಯ
ನಿಮ್ಮಯಾ ಕಷ್ಟವನು ನೋಡುತಲಿ ನೊಂದಿಹೆನು ॥೧೯೪೫॥

ಗುರುದ್ರೋಣ ಭೀಷ್ಮಾದಿ ಹಿರಿಯರಾ ಹಿತವಚನ
ವಿಷವಾಗಿ ಕೇಳದೆಯೆ ಈ ಪರಿಯ ದುಷ್ಕಾರ್ಯ
ಗೈಯ್ಯುತಲಿ ಕಷ್ಟದಲಿ ಸಿಲುಕುತಲಿ ನರಳುತಿಹೆ
ಮುಂದಕ್ಕೆ ಮಾಡದಿರು ಎಂದಿಹನು ಧರ್ಮಜನು ॥೧೯೪೬॥

ಆಗಲಾ ಭಾನುಮತಿ ದ್ರೌಪದಿಯ ಪಾದಕ್ಕೆ
ಎರಗುತಲಿ ನೀವೆಮ್ಮ ಪತಿವರನ ಕುರುಪತಿಯ
ಪ್ರಾಣವನು ಉಳಿಸದಿರಿ ನಿಮ್ಮಯಾ ಉಪಕಾರ
ನಾವುಗಳು ಎಂದಿಗೂ ಮರೆಯದಿಹೆ ವೆಂದಿಹಳು ॥೧೯೪೭॥

ಭಾನುಮತಿ ದೇವಿಯರೆ ನೀವೆಮಗೆ ಬೇರೆಯೇ
ಒಂದೆಕುಲ ಬಳ್ಳಿಗಳು ಭಾವಯ್ಯನರಸಿಯರು
ಗಾಂಧಾರಿ ದೇವಿಯರ ಸಮ್ಮೀರ್ವರತ್ತೆಯರು
ನಿಮ್ಮಯಾ ಕಷ್ಟಗಳು ನಮ್ಮವುಗಳಿರುತಿಹವು ॥೧೯೪೮॥

ಕೌರವನ ಬಂಧನದ ಬಿಡುಗಡೆಯ ವಾರ್ತೆಯದು
ಭರದಲ್ಲಿ ಪಸರುತಿರೆ ಬಂಧುಗಳು ಬಾಂಧವರು
ರಾಣಿಯರು ಸಖಿಜನರು ಅರಮನೆಯ ನಾರಿಯರು
ಆ ಶಕುನಿ ಕಲಿಕರ್ಣ ಸುತ್ತಲೂ ನಿಂದಿಹರು ॥೧೯೪೯॥

ಗಜತುರಗ ಕಾಲಾಳು ಚತುರಂಗ ಬಲಸಹಿತ
ಕಹಳೆಗಳ ಕೊಂಬುಗಳ ನಾದವದು ಇಲ್ಲದೆಯೆ
ಕೌರವನು ಮೌನದಲಿ ಪಯಣದಲಿ ನಡೆಯುತಲಿ
ಖಿನ್ನದಲಿ ಬಂದಿಹನು ಹಸ್ತಿನೆಯ ಪುರಬಳಿಯೆ ॥೧೯೫೦॥

ರಾಣಿಯರ ಸಖಿಜನರ ಅರಮನೆಯ ನಾರಿಯರ
ಕಲಿಕರ್ಣ ಸೌಬಲನ ಬಂಧುಗಳ ಬಾಂಧವರ
ದುಶ್ಶಾಸನಾದಿಗಳ ಅನುಜರನು ಸಕಲರನು
ಚತುರಂಗ ಸೈನ್ಯವನು ಪುರದೊಳಗೆ ಕಳುಹಿಸುತ ॥೧೯೫೧॥

**ಕೌರವನು ಪ್ರಾಯೋಪವೇಶನವ ಕೈಕೊಳಲು ।**
**ದೈತ್ಯರುಗಳೈತಂದು ಸಾಂತ್ವನವ ಗೋಳಿಸಿದರು ॥**

ಗಂಗೆಯಾ ತೀರಕ್ಕೆ ಐತಂದು ಭವ್ಯದಲಿ
ವಿಸ್ತೃತದಿ ಹಬ್ಬಿರುವ ಆಲದಾ ಮರದಡಿಯೆ
ತಂಪಾದ ನೆರಳಿನಲಿ ಹುಲ್ಲನ್ನು ಹರಿಸುತಲಿ
ಗುಡಿಸಲನು ಒಂದನ್ನು ಕಟ್ಟಿಸಿದ ಕೌರವನು ॥೧೯೫೨॥

ಗೋಮಯವ ತರಿಸುತಲಿ ನೆಲವನ್ನು ಸಾರಿಸುತ
ಶುದ್ಧಿಯನು ಗೊಳಿಸುತಲಿ ಗಂಗೆಯಲಿ ಮೀಯುತಲಿ
ದರ್ಭೆಯನು ಹಾಸುತಲಿ ಮಂತ್ರಗಳ ಪಠಿಸುತಲಿ
ನಿರಶನ ವ್ರತವೆಂದು ಸಂಕಲ್ಪ ಗೈದಿಹನು ॥೧೯೫೩॥

ಆ ಕರ್ಣ ಶಕುನಿಗಳ ದುಶ್ಶಾಸನಾನುಜರನು
ಒಬ್ಬರನು ಒಳಗಡೆಗೆ ಬಿಡದಿರಲು ದೂತರಿಗೆ
ಸೂಚಿಸುತ ಅನ್ನವನು ನೀರನ್ನು ತ್ಯಜಿಸುತಲಿ
ಪ್ರಾಯೋಪವೇಶನದಿ ಕೌರವನು ಕುಳಿತಿಹನು ॥೧೯೫೪॥

ಕೌರವನು ನಿರಶನವ್ರತವನ್ನು ಕೈಕೊಂಡ
ನೆಂಬುವಾ ವಾರ್ತೆಯದು ಪುರದೊಳಗೆ ಹರಡಿಸುತ
ಅರಮನೆಯ ತಲುಪುತಿರೆ ಭಾನುಮತಿ ಕಳವಳದಿ
ಆಳುಕೆಯರ ಸಹಿತದಲಿ ಭರದಲ್ಲಿ ಬಂದಿಹಳು ॥೧೯೫೫॥

ಒಳಗಡೆಗೆ ಬಿಡದಿರಲು ಅಜ್ಞೆಯಿದೆ ಎನ್ನುತಲಿ
ದೂತರುಗಳುಸುರುತಿರೆ ಗಂಡನನು ನೋಡಲಿಕೆ
ಹೆಂಡತಿಗೆ ಎಲ್ಲಿಯದು ಅನುಮತಿಯು ಎನ್ನುತಲಿ
ಭೃತ್ಯರನು ತಳ್ಳುತಲಿ ಒಳಗಡೆಗೆ ನಡೆದಿಹಳು ॥೧೯೫೬॥

ಜಡೆಯನ್ನು ಬಿಟ್ಟಿರುವ ನೊಸಲಿಂಗೆ ತನುವಿಂಗೆ
ಭಸ್ಮವನು ಹಚ್ಚಿರುವ ದರ್ಭೆಯಲಿ ಕುಳಿತಿರುವ
ಸನ್ಯಾಸಿಯಂತೆಸೆವ ಹಸ್ತಿನಾಪುರದರಸು
ಕೌರವ ಮಹೀಪತಿಯ ನಿಜಪತಿಯ ಕಂಡಿಹಳು ॥೧೯೫೭॥

ಭಾನುಮತಿ ಮನದೊಳಗೆ ಚಿಂತಿಸುತ ಕಳವಳದಿ
ಹೇನಾಥ ನಿಮ್ಮಯಾ ಈ ಪರಿಯ ಘೋರತರ
ನಿರಶನದ ವ್ರತಕೇನು ಕಾರಣವು ಇರುತಿಹುದು
ನಿಮಗಾವ ಕಷ್ಟವದು ಬಂದಿಹುದು ಎಂದಿಹಳು ॥೧೯೫೮॥

ಆಹಾರ ನೀರನ್ನು ತ್ಯಜಿಸುತಲಿ ಪ್ರಾಣವನು
ಕೊರಗಿಸುತ ಸೊರಗಿಸುತ ಸಾಯುವದಕಿಂತಲೂ
ವಿಷವನ್ನು ಕುಡಿಯುತಲಿ ನದಿಯೊಳಗೆ ಬೀಳುತಲಿ
ಬೆಂಕಿಯಲಿ ಧುಮುಕುತಲಿ ಸಾಯುವುದು ಲೇಸಹುದು ॥೧೯೫೯॥

ಹೇ ಸತಿಯೆ ನೀ ಪೇಳ್ದ ಮಾರ್ಗಗಳು ಸಲಹೆಗಳು
ರದುರ್ಮರಣವೆನಿಸುವವು ನಿರಶನದ ವ್ರತದೊಳಗೆ
ಸಾಯುವುದು ಸಾಧುಗಳ ಸಜ್ಜನರ ತ್ಯಾಗಿಗಳ
ಶ್ರೇಷ್ಠತರ ಮರಣವದು ಎಂದಿಹನು ಕೌರವನು ॥೧೯೬೦॥

ಹಸ್ತಿನೆಯ ಸಾಮ್ರಾಜ್ಯದಧಿಪತಿಯು ನೀನಿರುವೆ
ಅಪರಿಮಿತ ಐಶ್ವರ್ಯ ಸಂಪತ್ತು ನಿನಗಿಹುದು
ಸಾಯಲಿಕೆ ನಿನಗಾವ ಕಷ್ಟವದು ಒದಗಿಹುದು
ಮುಚ್ಚುಮರೆಯಿಲ್ಲದೆಯೇ ಉಸುರುವುದು ಎಂದಿಹಳು ॥೧೯೬೧॥

ಭಾನುಮತಿ ನೀನರಿತು ಮತ್ತೆ ನೀ ಎನ್ನನ್ನು
ಕೆಣಕುತಲಿ ಕೇಳುವೆಯಾ ಅಂದಿನಲಿ ಬಂಧನದಿ
ಭೀಮಾರ್ಜುನೀರ್ವರೂ ದ್ರೌಪದಿಯು ಮೊದಲಿಸಿ
ಎನ್ನನ್ನು ಬಿಡಿಸಿದುದ ಅರಿಯೆಯಾ ಎಂದಿಹನು ॥೧೯೬೨॥

ಈ ಪರಿಯ ಭಂಗವನು ಪಟ್ಟಿರುವ ಹೀನತರ
ನಾರುತಿಹ ದೇಹವನು ಧರಿಸುತಲಿ ಜೀವಿಸೆನು
ನಿರಶನದ ವ್ರತದೊಳಗೆ ದೇಹವನು ದಂಡಿಸುತ
ಸೊರಗಿಸುತ ಸಾಯುವೆನು ಎಂದಿಹನು ಕೌರವನು ॥೧೯೬೩॥

ಕೈಲಾಗದವರಂತೆ ಹೇಡಿಯಾ ಪರಿಯಲ್ಲಿ
ಸಾಯುವುದು ಕ್ಷತ್ರಿಯರ್ಗೆ ಎಂದಿಗೂ ಶೋಭಿಸದು
ಯುದ್ಧವನು ಗೈಯ್ಯುತಲಿ ಸಮರದಲಿ ಮಡಿಯುತಲಿ
ಸ್ವರ್ಗವನು ಪಡೆಯುವದು ಶ್ರೇಯುವದು ಎಂದಿಹಳು ॥೧೯೬೪॥

ಹೇ ಸತಿಯೇ ಭೀಮಾರ್ಜುನೀರ್ವರೂ ವಿಕ್ರಮರು
ಮೂಜಗದಿ ಅವರನ್ನು ಜಯಿಸುವವರಾರಿಲ್ಲ
ಮೇಲಾಗಿ ಆ ಕಳ್ಳ ಶ್ರೀಕೃಷ್ಣ ಕಪಟದಲಿ
ನೆರವನ್ನು ಈಯುತಲಿ ಗೆಲಿಸುವನು ಎಂದಿಹನು ॥೧೯೬೫॥

ಆ ಪರಿಯ ಇರ್ದೊಡೆಯು ಮಾತೊಂದು ಹೇಳುವೆನು
ಎನ್ನನ್ನು ಹೆಂಗುಸಳು ಹೆಣ್ಣಿನಾ ಬುದ್ಧಿಯಳು
ಎನ್ನುತಲಿ ಗುರುದ್ರೋಣ ಭೀಷ್ಮರಾ ಮಾತುಗಳು
ಪರಿಯಲ್ಲಿ ಉಪೇಕ್ಷೆಯ ಮಾಡದಿರು ಎಂದಿಹಳು ॥೧೯೬೬॥

ನಾವುಗಳು ಕೊಟ್ಟಿರುವ ಕಷ್ಟಗಳ ನಷ್ಟಗಳ
ಅಪಮಾನವೆಲ್ಲವನು ಸಹಿಸುತಲಿ ಮರೆಯುತಲಿ
ಬಂಧನದಿ ಸಿಲುಕಿರುವ ನಿಮ್ಮನ್ನು ಬಿಡಿಸುತಲಿ
ಉಪಕಾರ ಗೈದಿಹರು ಪಾಂಡವರು ಎಂದಿಹಳು ॥೧೯೬೭॥

ನೀವುಗಳು ಈಗಲಾ ಪಾಂಡವರ ಕರೆಸುತಲಿ
ಸರಿಅರ್ಧ ರಾಜ್ಯವನು ಇತ್ತೊಡೆಯು ಜಗವೆಲ್ಲ
ಜೀವವನು ಉಳಿಸಿರುವ ಪಾಂಡವರ್ಗೆ ಕೌರವನು
ಪ್ರತಿಯಾಗಿ ಉಪಕಾರ ಗೈದಿಹನು ಎಂಬುವುದು ॥೧೯೬೮॥

ಕರೆಸಿದೊಡೆ ಪಾಂಡವರು ಬಾರದವರೆಂದಿಗೂ
ವಚನಕ್ಕೆ ಸರಿಯಾಗಿ ಹದಿಮೂರು ವರುಷಗಳ
ಕಳೆಯುತಲಿ ಈ ನೆಲವ ಮೆಟ್ಟುತಲಿ ಎಮ್ಮನ್ನು
ಯಮಸದನ ಕಟ್ಟುವರು ಎಂದಿಹನು ಕೌರವನು ॥೧೯೬೯॥

ವನವಾಸದವಧಿಯದು ಸವೆಯುದಾ ಮುನ್ನವೇ
ಪಾಂಡವರ ಕರೆಸುತಲಿ ರಾಜ್ಯವನು ಇತ್ತೊಡೆಯು
ಮೂರಲೋಕ ನಿನ್ನನ್ನು ಹೊಗಳುವುದು ಸ್ತುತಿಸುವದು
ನಿಮ್ಮಯಾ ಕೀರ್ತಿಯದು ಬೆಳಗುವುದು ಎಂದಿಹಳು ॥೧೯೭೦॥

ಸುಲಭದಲಿ ಪುರೆಯುವಾ ದ್ವೇಷವದು ತಾನಲ್ಲ
ಪಾಂಡವರು ಸಮ್ಮತಿಯ ನಿತ್ತರೂ ಆ ದುಷ್ಟೆ
ಅಗ್ನಿಯಾ ಪರಿಯಲ್ಲಿ ಉರಿಯುತಿಹ ದ್ರೌಪದಿಯು
ಎಂದಿಗೂ ಒಪ್ಪಿಗೆಯ ಕೊಡಲಾರಳೆಂದಿಹನು ॥೧೯೭೦॥

ಮೂದಲಿಸಿ ನುಡಿದಿರುವ ದ್ರೌಪದಿಯ ನುಡಿಯಲಗು
ಎನ್ನಯಾ ಹೃದಯವನು ಇರಿಯುತಲಿ ಕೊರೆಯುತಲಿ
ಕ್ಷಣಕ್ಷಣವು ಹಿಂಸೆಯನು ನೋವನ್ನು ಈಯುತಲಿ
ಕಷ್ಟವನು ಕೊಡುತಲಿದೆ ಎಂದಿಹನು ಕೌರವನು ॥೧೯೭೧॥

ಈ ಪರಿಯ ಅಪಮಾನ ಸಹಿಸುತಲಿ ಜಗದೊಳಗೆ
ಜೀವಂತ ಹೆಣವಾಗಿ ಬದುಕುವುದಕಿಂತಲೂ
ಸಾಯುವುದೆ ಲೇಸಹುದು ನಾನಿನ್ನು ಸಾಯುವೆನು
ಎನ್ನಯಾ ಆಸೆಯನು ತ್ಯಜಿಸುವುದು ಎಂದಿಹನು ॥೧೯೭೨॥

ಹೇ ಸತಿಯೆ ಭಾನುಮತಿ ಚಿಂತೆಯನು ಮಾಡದಿರು
ನಿನ್ನಯಾ ಮಗನಿಂಗೆ ಪಟ್ಟವನು ಕಟ್ಟುತಲಿ
ಹಸ್ತಿನೆಯ ಸಾಮ್ರಾಜ್ಯವಾಳುವುದು ಸಂತಸದಿ
ನಾವುಗಳು ಪರಲೋಕ ಸಾಮ್ರಾಜ್ಯವಾಳುವೆವು ॥೧೯೭೩॥

ನೀ ಇನ್ನು ನಮ್ಮನ್ನು ಸುಮ್ಮನೇ ಕಾಡದಿರು
ಸುಖವಾಗಿ ಸಾಯಲಿಕೆ ಎಮ್ಮನ್ನು ಬಿಟ್ಟುಬಿಡು
ಸುಮ್ಮನೇ ನುಡಿಯುತಲಿ ಎನ್ನಯಾ ತಲೆಯನ್ನು
ಕೆಡಿಸದಿರು ಎಂದಿಹನು ಕೋಪದಲಿ ಕೌರವನು ॥೧೯೭೪॥

ಹೆಣ್ಣನಾ ಬುದ್ಧಿಯಲಿ ಪೊಳೆದಿರುವ ಮಾತುಗಳ
ಹಿತವಚನ ಹೇಳಿದೆನು ಆ ರಾಜಕಾರ್ಯದಾ
ತೊಡಕುಗಳು ಗುಟ್ಟುಗಳು ನಮಗೇಕೆ ಎನ್ನುತಲಿ
ಭಾನುಮತಿ ಮೌನವನು ತಾಳುತಲಿ ಕುಳಿತಿಹಳು ॥೧೯೭೫॥

ಆ ಸಮಯ ಗಾಂಧಾರಿ ಸೊಸೆವೃಂದ ಸಹಿತದಲಿ
ಐತಂದು ಕಳವಳಡಿ ಹುಲ್ಲಿನಾ ಗುಡಿಸಲಲಿ
ಧರ್ಭೆಯಾ ಹಾಸಿನಲಿ ಜಡೆಯನ್ನು ಬಿಟ್ಟಿರುವ
ಭಸ್ಮಾಂಗ ಭೂಷಿತನ ಕೌರವನ ಕಂಡಿಹಳು ॥೧೯೭೬॥

ಅಕಟಕಟ ರತ್ನದಾ ಸಿಂಹಾಸನೇರುತಲಿ
ಶೋಭಿಸುವ ಹಸ್ತಿನೆಯ ಸಾಮ್ರಾಜ್ಯದಧಿಪತಿಗೆ
ಈ ಪರಿಯ ಹುಲ್ಲಿನಾ ಆಸನದಿ ಒರಗುವಾ
ವಿಧಿಯಾಯ್ತೆ ಎನ್ನುತಲಿ ನೊಂದಿಹಳು ಕುಂದಿಹಳು ॥೧೯೭೭॥

ಹೇಮಾಗನೆ ನಿರಶನದ ವ್ರತಕೇನು ಕಾರಣವು
ತಾಯಿಯನು ತಂದೆಯನು ಕೇಳದೆಯೆ ಘೋರತರ
ಕಾರ್ಯವನು ಏತಕ್ಕೆ ಗೈಯುತಿಹೆ ಎಂಬುದನು
ಮನಬಿಚ್ಚಿ ಹೇಳುವುದು ಎಂದಿಹಳು ಗಾಂಧಾರಿ ॥೧೯೭೮॥

ಹೇ ತಾಯೇ ಗಾಂಧಾರಿ ಮೊದಲಿಂಗೆ ನಿನ್ನಯಾ
ಉದರದಲಿ ಜನಿಸುತಲಿ ನಾ ಬಂದೆ ಧರೆಯೊಳಗೆ
ಗಂಧರ್ವ ಬಂಧಿಸಲು ಧರ್ಮಜನ ಕಿಹರದಲಿ
ಮತ್ತೊಮ್ಮೆ ನಾ ಜನಿಸಿ ಬಂದಿಹೆನು ಎಂದಿಹನು ॥೧೯೭೯॥

ಧರ್ಮಜನು ಇತ್ತಿರುವ ಈ ಹೇಸಿ ದೇಹವನು
ಧರಿಸುತಲಿ ಜಗದೊಳಗೆ ನಾ ಜೀವಿಸಿರಲಾರೆ
ನಿರಶನದವ್ರತದೊಳಗೆ ದೇಹವನು ನೂಕುತಲಿ
ಮುಕ್ತಿಯನು ನಾ ಪಡೆವೆ ಎಂದಿಹನು ಕೌರವನು ॥೧೯೮೦॥

ಕುಲಬೇರ ಕೊಯ್ಯುವಾ ಕಡುಪಾಪಿ ಕೊಲೆಗಡುಕ
ಕುಲವನ್ನು ನರಕದೊಳು ಅದ್ದುವಾ ಪಾತಕಿಯು
ಎನ್ನುತಲಿ ಜಗವೆಲ್ಲ ನನ್ನನ್ನು ತೆಗಳುವುದು
ತಪ್ಪುವುದು ಎನ್ನುತಲಿ ಕೌರವನು ನುಡಿದನು ॥೧೯೮೧॥

ನೂರುಗಳ ನಿನ್ನಯಾ ಮಕ್ಕಳಲಿ ನಾ ಒಬ್ಬ
ಕಡಿಮೆಯದು ಆದೊಡೆಯು ನಿನಗಾವ ಕೊರತೆಯದು
ಎನ್ನಿಂದ ನಿಮಗೆ ಬಹ ಅಪಕೀರ್ತಿ ತಪ್ಪುವುದು
ಎನ್ನುತಲಿ ಕೌರವನು ಗಾಂಧಾರಿಗುಸುರಿದನು ॥೧೯೮೨॥

ಹೆತ್ತೊಡಲ ಉರಿಸದಿರು ಕರುಳನ್ನು ಕುದಿಸದಿರು
ಜಗದೊಳಗೆ ದುಷ್ಟಮಗ ಹುಟ್ಟುವುದು ಸಾಧ್ಯವಿದೆ
ದುಷ್ಟಳಾ ತಾಯಿಯಳು ಹುಟ್ಟಳವಳೆಂದಿಗೂ
ಎಂದಿಗೂ ನೀ ಎನ್ನ ಮಗನಿರುವೆ ಎಂದಿಹಳು ॥೧೯೮೩॥

ಅಹುದಹುದು ದುಷ್ಟಮಗ ನಾನಿಹೆನು ಸತ್ಯವಿದು
ನಾನಳಿದನಾದೊಡು ವಂಶಕ್ಕೆ ಲೇಸಹುದು
ಹೇ ತಾಯೆ ಎನ್ನನ್ನು ಹಡೆದಿರುವ ನಿಸ್ನೊಳಗೆ
ಅವುದೂ ತಪ್ಪಿಲ್ಲ ಎಂದಿಹನು ಕೌರವನು ॥೧೯೮೪॥

ಎನ್ನಯಾ ಕರ್ಮಫಲ ಭೋಗಿಸುತಲಿರುತಿಹೆನು
ದುಶ್ಯಾಸನನುಜಂಗೆ ಪಟ್ಟವನು ಕಟ್ಟುತಲಿ
ಚಿಂತೆಯನು ತೊರೆಯುತಲಿ ಸಂತಸದಿ ಜೀವಿಪುದು
ನೀವಿನ್ನು ತೆರಳುವುದು ಎಂದಿಹನು ಕೌರವನು ॥೧೯೮೫॥

ಆಗಲಾ ಅಂಧನೃಪ ಧೃತರಾಷ್ಟ್ರ ದುಗುಡದಲಿ
ವಿದುರನಾ ಸಹಿತದಲಿ ಕಳವಳದಿ ಐತಂದು
ಹೇ ಮಗನೆ ಹಟವನ್ನು ತ್ಯಜಿಸುತಲಿ ಈ ಕ್ಷಣದಿ
ನಿರಶನದ ವ್ರತವನ್ನು ತೊರೆಯುವುದು ಎಂದಿಹನು ॥೧೯೮೭॥

ಹೇ ಮಗನೆ ಪಾಂಡವರು ನಿನಗನ್ಯರಿರುತಿಹರೆ
ನಿನ್ನಯಾ ಸೋದರರು ಪ್ರಾಣವನು ಸಲುಹಿವರು
ಕರೆಸುತಲಿ ಅವರೊಡನೆ ಸರಸಾಗಿ ಬಾಳುವುದು
ಶ್ರೇಯುವದು ಕೇಡನ್ನು ಬಯಸದಿರು ಎಂದಿಹನು ॥೧೯೮೮॥

ಹೇ ತಂದೆ ಎನ್ನಯಾ ಅರ್ಧದಾ ಆಯುಷ್ಯ
ಸವೆದಿಹುದು ಇನ್ನುಳಿದು ಜೀವಿಸುತ ಫಲವೇನು
ಪಾಂಡವರು ನಿನ್ನಯಾ ಸೋದರನ ಸುತರಿಹರು
ಮೇಲಾಗಿ ಸಜ್ಜನರು ಸದ್ಗುಣಿಗಳಿರುತಿಹರು ! ॥೧೯೮೯॥

ಪಾಂಡವರ ಕರೆಸುತಲಿ ಅರ್ಧದಾ ರಾಜ್ಯವನು
ಈಯುತಲಿ ಅರ್ಧವನು ದುಶ್ಯಾಸನಂಗಿತ್ತು
ನೀವುಗಳು ಸಂತಸದಿ ಸುಖವಾಗಿ ಇರುತಿಹುದು
ನಮ್ಮಯಾ ವ್ರತವನ್ನು ನಾವುಗಳು ಬಿಡೆವೆಂದ ॥೧೯೯೦॥

ಹೇ ಸುತನೆ ಹಸ್ತಿನೆಯ ಪಟ್ಟಕ್ಕೆ ನೀನಲ್ಲದೆ
ಇನ್ನಾರು ಅಧಿಪತಿಯು ಬೇರಿಲ್ಲ ತಿಳಿಯುವುದು
ಸೋದರರು ತಮ್ಮೊಳಗೆ ಕಲಹವನು ಮಾಡುವರು
ಮತ್ತೆ ತಾವ್ ಕೂಡುವರು ಪ್ರೀತಿಯಲಿ ಎಂದಿಹನು ॥೧೯೯೧

ಅಹುದಹುದು ಧರ್ಮಜನು ಸೋದರನ ಪ್ರೇಮದಲಿ
ಎನ್ನಯಾ ಸೆರೆಯನ್ನು ಬಿಡಿಸಿದನು ಬಲ್ಲಿಹೆನು
ಅವನಲ್ಲಿ ಅವುದೂ ತಪ್ಪಿಲ್ಲ ಅವನೊಡನೆ
ನೀವುಗಳು ಸುಖವಾಗಿ ಜೀವಿಪುದು ಎಂದಿಹನು ॥೧೯೯೨॥

ಅಂದಿನಲಿ ಗಂಧರ್ವ ಬಂಧಿಸಿದ ಎನ್ನನ್ನು
ಭೀಮಾರ್ಜುನೀರ್ವರು ಎನ್ನನ್ನು ದರದರನೆ
ಎಳೆತಂದು ಧರ್ಮಜನ ಚರಣದಲಿ
ಧೊಪ್ಪನೇ ಒಗೆಯುತಿರೆ ಆ ದುಷ್ಟೆ ದ್ರೌಪದಿಯು ॥೧೯೯೩॥

ಎನ್ನನ್ನು ಹಂಗಿಸುತ ಮೂದಲಿಸಿ ನಗುನಗುತ
ಭಾವಯ್ಯ ನೋಡಯ್ಯ ಬಂಧನದಿ ಬಳಲಿದಿರ
ಎನ್ನುತಲಿ ವ್ಯಂಗೋಕ್ತಿ ನುಡಿಯುತಲಿ ಬಿಡಿಸಿದುದು
ನಾನೆಂತು ಮರೆದಪೆನು ಎಂದಿಹನು ಕೌರವನು ॥೧೯೯೪॥

ಈ ಹೊಲಸು ದೇಹವನು ನಿರಶನದಿ ನೀಗುತಲಿ
ಮುಕ್ತಿಯನು ಶಾಂತಿಯನು ನಾ ಪಡೆವೆ ಪರದಲ್ಲಿ
ದುಶ್ಯಾಸನನುಜಂಗೆ ಪಟ್ಟವನು ಈಯುವುದು
ಎಮ್ಮಯಾ ಆಸೆಯನು ತ್ಯಜಿಸುವುದು ಎಂದಿಹನು ॥೧೯೯೫॥

ಹೇ ಸತಿಯೆ ಗಾಂಧಾರಿ ಜನಿಸಿದಾಕ್ಷಣದಲ್ಲಿ
ಈತನಾ ಪಿಂಡವನು ಅಂದಿನಲಿ ತಿಪ್ಪೆಯಲಿ
ಎಸೆಯದೇ ಇರ್ದುದಕೆ ಈ ಪರಿಯ ಕಷ್ಟವನು
ಭೋಗಿಪುದು ಬಂದಿಹುದು ಎಂದಿಹನು ಅಂಧನೃಪ ॥೧೯೯೬॥

ಕುಲನಾಶಗೈಯ್ಯುವೀ ಕಂಟಕನ ಹಡೆಯುತಲಿ
ನೀಕೆಟ್ಟೆ ಎನ್ನುತಲಿ ಗಾಂಧಾರಿ ಭಾನುಮತಿ
ಮೊದಲಾದ ನಾರಿಯರ ಅರಮನೆಗೆ ಕಳುಹಿಸುತ
ಕೋಪದಲಿ ಉರಿಯುತಲಿ ಧೃತರಾಷ್ಟ್ರ ಮರಳಿದನು ॥೧೯೯೭॥

ಆಗಲಾ ಹಿರಿಯಯ್ಯ ಮುತ್ತಯ್ಯ ವರಭೀಷ್ಮ
ಗುರುದ್ರೋಣ ಅಶ್ವತ್ಥ ಕೃಪರೊಡನೆ ಐತಂದು
ಹಸ್ತಿನೆಯ ಪುರದರಸು ಈ ಪರಿಯ ನಿರಶನದ
ವ್ರತಕೇನು ಕಾರಣವನುಸುರುವುದು ಎಂದಿಹನು ॥೧೯೯೮॥

ಅಂದಿನಲಿ ಎಮ್ಮಯಾ ಹಿತವಚನ ಮೀರುತಲಿ
ಆ ಘೋಷಯಾತ್ರೆಯನು ಕೈಕೊಂಡ ಕಾರಣದಿ
ಗಂಧರ್ವ ನಿಮ್ಮನ್ನು ಅಪಮಾನಗೊಳಿಸುತಿರೆ
ಈ ಪರಿಯ ಕಷ್ಟವದು ಒದಗಿಹುದು ಎಂದಿಹರು ॥೧೯೯೯॥

ಹೇಡಿಯಾ ಪರಿಯಲ್ಲಿ ನಿರಶನ ವ್ರತದಿಂದ
ಪ್ರಾಣವನು ತ್ಯಜಿಸುವುದು ಕ್ಷತ್ರಿಯರಿಗನುಚಿತವು
ಯುದ್ಧವನು ಗೈಯ್ಯುತಲಿ ರಣದೊಳಗೆ ಮಡಿಯುವುದು
ಕ್ಷತ್ರಿಯರ ಧರ್ಮವದು ಎನ್ನುತಲಿ ನುಡಿದಿಹರು ॥೨೦೦೦॥

ಖೇಚರನ ಬಂಧಿಸುತ ಪಾಂಡವರ ಕರೆಸುತಲಿ
ನಿನ್ನಯಾ ಮನೆಯೊಳಗೆ ಊಳಿಗಕೆ ಇರಿಸುವೆನು
ಏಳು ನೀ ಹಸ್ತಿನೆಯ ಸಿಂಹಾಸನೇರುತಲಿ
ವೈಭವದಿ ಮೆರೆಯುವುದು ಎನ್ನುತಲಿ ನುಡಿದಿಹರು ॥೨೦೦೧॥

ಮುತ್ತಯ್ಯ ವರಭೀಷ್ಮ ಗುರುದ್ರೋಣ ಕೃಪವರರೆ
ಈಸುದಿನ ಸಾಮ್ರಾಜ್ಯ ವೈಭವವ ಭೋಗಿಸಿದೆ
ಈಗೆನಗೆ ರಾಜೋಪ ಭೋಗದಲಿ ವಿಷಯದಲಿ
ಲವಲೇಶ ಮನಸಿಲ್ಲ ವೈರಾಗ್ಯ ತಾಳಿಹೆವು ॥೨೦೦೨॥

ಪಾಂಡವರೊಳೆನ್ನಯಾ ದ್ವೇಷವದು ಎನಿತಿಲ್ಲ
ರಾಜ್ಯದಾ ಮೋಹವದು ಎಳ್ಳಷ್ಟು ಎನಗಿಲ್ಲ
ಪಾಂಡವರ ಕರೆಸುತಲಿ ರಾಜ್ಯವನು ಈಯುತಲಿ
ನೀವುಗಳು ಸಂತಸದಿ ಬಾಳುವುದು ಎಂದಿಹನು ॥೨೦೦೩॥

ಅಪಮಾನಕೋಸುಗವೆ ಹೇಡಿಯಾ ಪರಿಯಲ್ಲಿ
ನಿರಶನದ ವ್ರತವನ್ನು ನಾಕೊಳ್ಳೆನೆಂದಿಗೂ
ರಾಜ್ಯದಾ ಭೋಗದಲಿ ವೈರಾಗ್ಯ ಮೂಡುತಲಿ
ನಿರಶನದಿ ದೇಹವನು ನೀಗುವೆನು ಎಂದಿಹನು ॥೨೦೦೪॥

ಈ ತೆರನ ದುರ್ಮರಣವಪ್ಪುವದು ಕ್ಷತ್ರಿಯರ್ಗೆ
ಶೋಭಿಸದು ಕುಲಕದುವೆ ಅಪಕೀರ್ತಿ ತರುತಿಹುದು
ಶೌರ್ಯದಲಿ ಯುದ್ಧವನು ಗೈಯ್ಯುತಲಿ ರಣದೊಳಗೆ
ಮಡಿಯುವದು ಕುರುಕುಲದ ನೃಪರಿಂಗೆ ಭೂಷಣವು ॥೨೦೦೫॥

ನಾವುಗಳು ನಿಮ್ಮಮನೆ ಅನ್ನವನು ಉಂಡಿಹೆವು
ಹಂಗಿಗರು ನಿಮಗಿಹೆವು ನಿಮ್ಮಯಾ ಹಿತಕಾಗಿ
ನಿಮ್ಮಯಾ ರಕ್ಷಣೆಗೆ ಎಮ್ಮಯಾ ಪ್ರಾಣಗಳ
ನೀಡಲಿಕೆ ಸಿದ್ಧರಿವೆ ಎನ್ನುತಲಿ ನುಡಿದಿಹರು ॥೨೦೦೬॥

ನಾವುಗಳು ನಿಮ್ಮಮನೆ ಆಳುಗಳು ಸೇವಕರು
ಎಮ್ಮಯಾ ಮಾತುಗಳು ರುಚಿಸದೇ ಇರ್ದೊಡೆಯು
ನಿಮ್ಮಯಾ ಜೀವದಾ ಓಲುಮೆಯಾ ಮಿತ್ರರಿಹ
ಆ ಕರ್ಣ ಶಕುನಿಗಳು ಹೇಳುವಾ ಮಾತುಗಳು ॥೨೦೦೭॥

ಎಮ್ಮಯಾ ನುಡಿಯಂತೆ ಇರ್ದೊಡೆಯು ಸರಸದಲಿ
ನಿರಶನದ ವ್ರತವನ್ನು ತೊರೆಯುತಲಿ ಹಸ್ತನಕೆ
ಮರಳುತಲಿ ಸಾಮ್ರಾಜ್ಯವಾಳುವುದು ಎನ್ನುತಲಿ
ವರಭೀಷ್ಮ ಗುರುದ್ರೋಣ ನುಡಿದಿಹರು ವಿನಯದಲಿ ॥೨೦೦೮॥

ನಿಮ್ಮಯಾ ಮೂತುಗಳು ಎನಗೊಂದು ರುಚಿಸದಿವೆ
ಎನ್ನನ್ನು ಸುಖವಾಗಿ ಸಾಯಲಿಕೆ ತ್ಯಜಿಸುವುದು
ನೀವುಗಳು ನಿಶ್ಚಿಂತರಾಗುತಲಿ ನಿಮಯಾ
ನಿಲಯಕ್ಕೆ ತೆರಳುವುದು ಎಂದಿಹನು ಕೌರವನು ॥೨೧೦೯॥

ವಿಧಿಲಖಿತ ತಪ್ಪಿಸುವರಾರಿಲ್ಲ ಎನ್ನುತಲಿ
ಗುರುದ್ರೋಣ ಭೀಷ್ಮಾದಿ ಸಕಲರೂ ತೆರಳುತಿರೆ
ಆ ಶಕುನಿ ಕಲಿಕರ್ಣ ಖಳರುಗಳು ಒಗ್ಗೂಡಿ
ಕೌರವನ ಬಳಿಯಲ್ಲಿ ಭರದಲ್ಲಿ ಬಂದಿಹರು ॥೨೦೧೦॥

ಹುಲ್ಲಿನಾ ಗುಡಿಸಲಿನ ಒಳಗಡೆಗೆ ತೆರಳುತಲಿ
ರತ್ನಗಳ ವಜ್ರಗಳ ತಲ್ಪದಲಿ ಪವಡಿಸುವ
ಹಸ್ತಿನೆಯ ಸಾಮ್ರಾಜ್ಯದಧಿಪತಿಯು ಗುಡಿಸಲಲಿ
ಧರ್ಭೆಯಲಿ ಮಂಡಿಪುದು ಯೋಗ್ಯವೇ ಎಂದಿಹರು ॥೨೦೧೧॥

ಪ್ರಜ್ವಲಿಪ ಸೂರ್ಯನಾ ಮಂಡಲವು ಹಿಮದಂತೆ
ಶೀತಲವು ಆದಂತೆ ಛಲದಂಕಮಲ್ಲರಿಹ
ತಾವುಗಳು ಕ್ಷತ್ರಿಯರ ಧರ್ಮವನು ತೊರೆಯುತಲಿ
ಸನ್ಯಾಸಿಯಾಗುವುದು ಯೋಗ್ಯವೇ ಎಂದಿಹರು ॥೨೦೧೨॥

ಪಾಂಡವರಿಗಂಜುತಲಿ ನಪುಂಸಕನ ಪರಿಯಲ್ಲಿ
ಈ ತೆರದಿ ಸಾಯುವುದು ಶೂರರಿಗೆ ಸಲ್ಲದದು
ಈಗಲೇ ಗಂಧರ್ವ ಸಹಿತದಲಿ ಪಾಂಡವರ
ನಾಶವನು ಗೈಯ್ಯುವೆನು ಎಂದಿಹನು ಕಲಿಕರ್ಣ ॥೨೦೧೩॥

ಹೇ ಕರ್ಣ ನಿಮ್ಮಯಾ ಮಾತುಗಳ ಕೇಳುತಲಿ
ಮುನ್ನಿನಲಿ ಆ ಘೋಷಯಾತ್ರೆಯನು ಕೈಕೊಂಡು
ಭಂಗವನು ಪಟ್ಟುದುದ ಒಳಲಿದುದ ಅರಿಯೆಯಾ
ಎನ್ನುತಲಿ ಕೌರವನು ಕರ್ಣನಿಗೆ ನುಡಿದಿಹನು ॥೨೦೧೪॥

ಕೌರವನೆ ನಿನ್ನಯಾ ಅನ್ನವನು ಉಂಡಿಹೆನು
ನಿನಗಾಗಿ ಎನ್ನಯಾ ಪ್ರಾಣವನು ಈಯುವೆನು
ನಿನ್ನೊಡನೆ ಬಾವಿಯಲಿ ಬೆಂಕಿಯಲಿ ಬೀಳುತಲಿ
ನಿನ್ನೊಡನೆ ಸಾಯುವೆನು ಎಂದಿಹನು ಖಳಕರ್ಣ ॥೨೦೧೫॥

ಏಳು ನೀ ಕೌರವನೆ ಹಸ್ತಿನೆಯ ಸಾಮ್ರಾಜ್ಯ
ಸಿಂಹಾಸನೇರುತಲಿ ವೈಭವದಿ ಮೆರೆಯುವುದು
ಇಲ್ಲದಿರೆ ಯುದ್ಧವನು ಶೌರ್ಯದಲಿ ಗೈಯ್ಯುತಲಿ
ಸಾಯುವುದು ಕ್ಷತ್ರಿಯರಿಗುಚಿತವದು ಎಂದಿಹನು ॥೨೦೧೬॥

ಆ ರಾಜ್ಯ ವೈಭವವು ಸಂಪತ್ತು ಬೇಡೆನಗೆ
ಆ ರಾಜ್ಯವೆಲ್ಲವನು ಪಾಂಡವರಿಗೀಯುವುದು
ನಿಜವಾಗಿ ಭೋಗದಲಿ ವೈರಾಗ್ಯ ಮೂಡಿಹುದು
ಈ ದೇಹ ತ್ಯಜಿಸುವೆನು ಎಂದಿಹನು ಕೌರವನು ॥೨೦೧೭॥

ನಿಮ್ಮಯಾ ಮಾತುಗಳು ಸೊಗಸದಿವೆ ರುಚಿಸದಿವೆ
ನಿಮ್ಮಯಾ ನಿಲಯಕ್ಕೆ ತೆರಳುವುದು ಎನ್ನುತಿರೆ
ಕೌರವಗೆ ಮತಿಭ್ರಮೆಯು ಆಗಿಹುದು ಎನ್ನುತಲಿ
ಆ ಶಕುನಿ ಕಲಿಕರ್ಣ ಖಳರುಗಳು ಮರಳಿದರು ॥೨೦೧೮॥

ಬಳಿಕಲಾ ದುಶ್ಯಾಸನಾಖಳನು ಕಳವಳದಿ
ಚಿಂತಿಸುತ ದುಗುಡದಲಿ ಪರಿವಾರ ಸಹಿಸದಲಿ
ಒತ್ತೊತ್ತಿ ಉಕ್ಕಿ ಬಹ ದುಃಖವನು ಅದುಮುಕಲಿ
ಬಂದು ಕೌರವನ ಚರಣದಲಿ ಬಿದ್ದಿಹನು ॥೨೦೧೯॥

ಗದ್ಗದದ ಕಂಠದಲಿ ರೋದನವ ಗೈಯ್ಯುತಲಿ
ಅಶ್ರುಗಳ ಧಾರೆಯಲಿ ಚರಣಗಳ ತೊಳೆಯುತಿರೆ
ತಮ್ಮನಾ ಕಣ್ಣೀರ ಕಾಣುತಲಿ ಕೌರವನು
ಕರಗುತಲಿ ಕರವಿಡಿದು ಮೇಲಕ್ಕೆ ಎಬ್ಬಿಸಿದ ॥೨೦೨೦॥

ಪ್ರೀತಿರಸ ಉಕ್ಕುತಲಿ ಬಿಗಿದಪ್ಪಿಕೊಳ್ಳುತಲಿ
ಕಂಬನಿಯನೊರೆಸುತಲಿ ಶಿರವನ್ನು ಸವರುತಲಿ
ದುಶ್ಯಾಸನನುಜನೇ ಕುರುಕುಲದ ವೀರನಿಹೆ
ದುಃಖಿತನು ತ್ಯಜಿಸುವುದು ಎಂದಿಹನು ಕೌರವನು ॥೨೦೨೧॥

ನೀನೀಗ ಹಸ್ತಿನೆಯ ಸಾಮ್ರಾಜ್ಯದಧಿಪತಿಯು
ಹೇಡಿಯಾ ಪರಿಯಲ್ಲಿ ರೋದನವ ಗೈಯದಿರು
ಎನ್ನಯಾ ನಂತರದಿ ಪಾಂಡವರು ನಿನ್ನಿಂದ
ರಾಜ್ಯವನು ಅಪಹರಣ ಗೈಯ್ಯದೇ ಇರುತಿಹರೇ ॥೨೦೨೨॥

ಚತುರಂಗ ಬಲಸಹಿತ ಸಾಮ್ರಾಜ್ಯವೆಲ್ಲವನು
ನಿನಗೊಸೆದು ಒಲುಮೆಯಲಿ ಇತ್ತಿಹೆನು ಕೊಳ್ಳುವುದು
ಪಟ್ಟವನು ಏರುತಲಿ ಕೀರ್ತಿಯಲಿ ಮೆರೆಯುವುದು
ಕೇಳುತಲಿ ಸಂತಸದಿ ಸಾಯುವೆನು ಎಂದಿಹನು ॥೨೦೨೩॥

ಹೇ ಅಣ್ಣ ನಿನ ಮರಣ ನಂತರದಿ ಜಗವೆಲ್ಲ
ಶೂನ್ಯವದು ಎನಿಸುವುದು ನಾನು ಸಹ ಸಾಯುವೆನು
ರಾಜ್ಯವನು ಬಯಸುತಿಹ ಹೀನನಲ್ಲ ನಾನಲ್ಲ
ನೀನಿರದ ಸಾಮ್ರಾಜ್ಯ ನರಕಸಮವೆಂದಿಹನು ॥೨೦೨೪॥

ಹೇ ಅಣ್ಣ ಈ ಪರಿಯ ಖಿನ್ನದಲಿ ವಿಷಣ್ಣದಿ
ಬಲಹೀನನಾಗುತಲಿ ಕೈಕಟ್ಟಿ ಕುಳಿತಿಹುದು
ಶೋಭಿಸದು ಚತುರಂಗ ಬಲಸಹಿತ ಸಾಗುತಲಿ
ಮುತ್ತುತಲಿ ಪಾಂಡವರ ಜಯಿಸುವುದು ಎಂದಿಹನು ॥೨೦೨೫॥

ದುಶ್ಯಾಸನನುಜನೇ ನೀ ಮರುಳು ತಿಳಿಯದಿಹೆ
ವರಭೀಷ್ಮ ಗುರುದ್ರೋಣ ವಿದುರಾದಿ ಬಾಂಧವರು
ಪಾಂಡವರ ಜೊತೆಯಲ್ಲಿ ಯುದ್ಧವನು ಮಾಡಲಿಕೆ
ಸಮ್ಮತಿಯನೀಯರವರೆಂದಿಗೂ ಎಂದಿಹನು ॥೨೦೨೬॥

ರಾಜ್ಯದಾ ಆಸೆಯಲಿ ನೃಪರುಗಳು ತಮ್ಮಯಾ
ತಂದೆಯನು ಮಕ್ಕಳನು ಅಣ್ಣನನು ತಮ್ಮನನು
ನಿರ್ದಯದಿ ಕೊಲ್ಲುವುದು ನೃಪನೀತಿ ಇರುತಿಹುದು
ಅದೋಷಯು ನಿನಗೊಲಿದು ರಾಜ್ಯವನು ಇತ್ತಿಹೆನು ॥೨೦೨೭॥

ನೀನೀಗ ತೆರಳುತಲಿ ಸಿಂಹಾಸನೇರುತಲಿ
ಧೃತರಾಷ್ಟ್ರ ಗಾಂಧಾರಿಯೊಡಗೂಡಿ ಸಂತಸದಿ
ರಾಜ್ಯವನು ಆಳುವುದು ಪ್ರಾಯೋಪವೇಶನವ
ನಾ ಬಿಡೆನು ಎಂದಿಗೂ ಎಂದಿಹನು ಕೌರವನು ॥೨೦೨೮॥

ಸುಡಲಿ ಆ ನಿನ್ನಯಾ ಸಾಮ್ರಾಜ್ಯ ಸಂಪತ್ತು
ನಿನ್ನೊಡನೆ ಹುಟ್ಟಿರುವೆ ನಿನ್ನೊಡನೆ ಸಾಯುವೆನು
ನಿನ್ನಯಾ ನಂತರದಿ ಪರಲೋಕ ಸಾಮ್ರಾಜ್ಯ
ಆಳುವೆನು ಎಂದಿಹನು ದುಶ್ಯಾಸನಾ ಖಳನು ॥೨೦೨೯॥

ಅಣ್ಣನಾ ಬವಣೆಯನು ನೋಡುತಲಿ ಆ ಖಳನು
ನಲಿಯುತಲಿ ಈ ಸ್ಥಿತಿಗೆ ತಂದಿರುವ ಪಾಂಡವರ
ಪ್ರಾಣವನು ತೆಗೆಯುವೆನು ಎನ್ನುತಲಿ ಮನದೊಳಗೆ
ಯೋಚಿಸುತ ದುಗುಡದಲಿ ನಿಲಯಕ್ಕೆ ನಡೆತಂದ ॥೨೦೩೦॥

ಕೇಳುವುದು ಜನಮೆಜಯ ನೃಪವರನೆ ಬಳಿಕಿನಲಿ
ಮಂತ್ರಿಗಳು ನಾಯಕರು ಸೇನಾಧಿಕಾರಿಗಳು
ಗಜಪುರದ ಜನರುಗಳು ಆಬಾಲವೃದ್ಧರೂ
ತಂಡದಲಿ ಕೌರವನ ಬಳಿಯಲ್ಲಿ ಬಂದಿಹರು ॥೨೦೩೧॥

ನಗರಕ್ಕೆ ಐತಂದು ಸಿಂಹಾಸನೇರುತಲಿ
ಎಮ್ಮನ್ನು ತೊರೆಯದಲೆ ಕರುಣೆಯಲಿ ರಕ್ಷಿಪುದು
ಇಲ್ಲದಿರೆ ಎಮ್ಮನ್ನು ಅಡವಿಯೊಳು ನೂಕುವುದು
ಗಂಗೆಯಲಿ ತಳ್ಳುವುದು ಎಂದಿಹರು ಪುರಜನರು ॥೨೦೩೨॥

ಆಗಲಾ ಪುರಜನರ ಹಿರಿಯರನು ಕರೆಸುತಲಿ
ದುಶ್ಯಾಸನನುಜಂಗೆ ಹಸ್ತಿನೆಯ ಸಾಮ್ರಾಜ್ಯ
ಎಲ್ಲವನು ಇತ್ತಿಹೆನು ಆತನೇ ರಾಜ್ಯವನು
ಆಳುತಲಿ ನಿಮ್ಮನ್ನು ರಕ್ಷಿಪನು ಎಂದಿಹನು ॥೨೦೩೩॥

ಈ ಪರಿಯ ಪುರಜನರ ಸಕಲರನು ಸಂತೈಸಿ
ಕಳುಹುತಲಿ ಕೌರವನು ಕಾಡಿನಲಿ ಒರಗಿರಲು
ರಾತ್ರಿಯಲಿ ತಮ್ಮಯಾ ಸಮಯವದು ಬಂದಿಹುದು
ಎನ್ನುತಲಿ ಪಾತಾಳ ದೈತ್ಯರುಗಳ್ [illegible] ॥೨೦೩೪॥

ಗುಡಿಸಲಿನ ಒಳಹೊಕ್ಕು ಕೌರವನ ಕೊಳ್ಳುತಲಿ
ಪಾತಾಳಲೋಕಕ್ಕೆ ಒಯ್ಯುತಲಿ ಇರಿಸುತಲಿ
ಪ್ರಾಯೋಪವೇಶನವ ಕೈಕೊಂಡು ಕುರುಕುಲಕೆ
ಹೀನತರ ಅಪಕೀರ್ತಿ ತಂದಿರುವೆ ಎಂದಿಹರು ॥೨೦೩೫॥

ಸುರರುಗಳು ಎಮ್ಮಯಾ ದ್ವೇಷಿಗಳು ಶತ್ರುಗಳು
ಸುರರುಗಳ ಸುತರಾದ ಪಾಂಡವರು ರಾಜ್ಯವನು
ಆಳುವದು ಎಮ್ಮಯಾ ಅಪಮಾನವೆನಿಸುವುದು
ನಾವಿದನು ಎಂದಿಗೂ ಸಹಿಸದಿರೆವೆಂದಿಹರು ॥೨೦೩೬॥

ಸೂಜಿಯಾ ಮೊನೆ ನೆಲವ ಪಾಂಡರಿಗೀಯದಿರು
ಈ ಅಶ್ವ ಗಜನಿಕರ ದಾನವರ ಸೈನ್ಯವು
ಎಲ್ಲವೂ ನಿನ್ನದಿದೆ ನಾವುಗಳು ಯುದ್ಧದಲಿ
ನೆರವನ್ನು ಈಯುತಲಿ ಪಾಂಡವರ ವಧಿಸುವೆವು ॥೨೦೩೭॥

ನಾವುಗಳು ನಿಮ್ಮವರು ನೀವುಗಳು ನಮ್ಮವರು
ನಿನಗಾಗಿ ದಾನವರು ಪ್ರಾಣಗಳ ನೀಡುವರು
ರಣದೊಳಗೆ ಪಾಂಡವರ ಜಯಿಸುವೆವು ಇಲ್ಲದಿರೆ
ಸಾಯುವೆವು ಎನ್ನುತಲಿ ದಾನವರು ನುಡಿದಿಹರು ॥೨೦೩೮॥

ಮಾನವನು ನಾನಿಹೆನು ದಾನವರು ನೀವಿಹಿರಿ
ಮಾನವರಿಗಿಂತಲೂ ದಾನವರು ಬಲಯುತರು
ನಿಮ್ಮಯಾ ಶೌರ್ಯಕ್ಕೆ ಯುದ್ಧದಾ ಕುಶಲತೆಗೆ
ಸುರರುಗಳು ಅಂಜುವರು ಎಂದಿಹನು ಕೌರವನು ॥೨೦೩೯॥

ಗಂಧರ್ವನೆನ್ನಯಾ ಅಪಮಾನಗೈದಿಹನು
ಭೀಮಾರ್ಜುನೀರ್ವರೂ ಗರ್ವದಲಿ ನುಡಿದಿಹರು
ದುಷ್ಟೆ ಆ ದ್ರೌಪದಿಯು ಮೂದಲಿಸಿ ನುಡಿದುದನು
ನಾನೆಂತು ಉಸುರುವೆನು ಎಂದಿಹನು ಕೌರವನು ॥೨೦೪೦॥

ಚಿಂತೆಯನು ಮಾಡದಿರು ಕುರುಪತಿಯೆ ನಾವುಗಳು
ದಾನವರು ಸಕಲರೂ ನಿನ್ನಯಾ ಸೋದರರು
ಗಂಧರ್ವ ಸಹಿತದಲಿ ಪಾಂಡವರನೆಳೆತಂದು
ನಿನ್ನಯಾ ಚರಣದಲಿ ಒಗೆಯುವೆವು ಎಂದಿಹರು ॥೨೦೪೧॥

ಈ ಪರಿಯೆ ರಕ್ಕಸರು ಕೌರವನ ಸಂತೈಸಿ
ಭುಜದಲ್ಲಿ ಕೊಳ್ಳುತಲಿ ಗಂಗೆಯಾ ತೀರಕ್ಕೆ
ಐತಂದು ಇರಿಸುತಿರೆ ಕೌರವನು ದಾನವರ
ಮೈತ್ರಿಯನು ನೆನೆಯುತಲಿ ಅರಮನೆಯ ಹೊಕ್ಕಿಹನು ॥೨೦೪೨॥

ಕುರುಪತಿಯು ಬಂದಿಹನು ಎನ್ನುತಲಿ ಸಂಭ್ರಮದಿ
ಅರಮನೆಯ ನಾರಿಯರು ಹೊನ್ನಿನಾ ಆರುತಿಯ
ಎತ್ತುತಲಿ ಮುತ್ತಿನಾ ಸೇಸೆಯನು ಎರಚುತಲಿ
ಸಕಲರೂ ಹರ್ಷದಲಿ ಉತ್ಸವದಿ ನಲಿದಿಹರು ॥೨೦೪೩॥

ದೈತ್ಯರಾ ಮಿತ್ರತ್ವ ನೆರವಿನಲಿ ಬೆಸುಗೆಯಲಿ
ಪಾಂಡವರ ಸೊಕ್ಕನ್ನು ಮುರಿಯುವೆನು ಎನ್ನುತಲಿ
ಯೋಚಿಸುತ ಕೌರವನು ಋತ್ವಿಜರ ಕರೆಸುತಲಿ
ಮಹಯಜ್ಞ ಗೈದಿಹನು ತನ್ನಿಷ್ಟ ಫಲಿಸಲಿಕೆ ॥೨೦೪೪॥

ಇತ್ತಲಾ ಪಾಂಡವರು ಕೌರವನ ದಾನವರ
ಸಖ್ಯತ್ವ ಸಹಕಾರ ಬೆಸುಗೆಯಾ ವಿಷಯವನು
ಮಹಯಾಗ ಗೈದಿರುವ ವೃತ್ತಾಂತವರಿಯುತಲಿ
ಕಳವಳವಗೊಳ್ಳುತಲಿ ಚಿಂತೆಯನು ಗೈದಿಹರು ॥೨೦೪೫॥

ಹೇಕೃಷ್ಣ ಯಾದವ ಶಿರೋಮಣಿಯೆ ಮಾಧವನೆ
ಗೋವಿಂದ ಅಚ್ಯುತ ಜನಾರ್ಧನನೆ ಕೇಶವನೆ
ಎಮ್ಮನ್ನು ರಕ್ಷಿಪುದು ಎನ್ನುತಲಿ ಪಾಂಡವರು
ದ್ವಾರಕಾಧೀಶನನು ನೆನೆಯುತಲಿ ಇರ್ದಿಹರು ॥೨೦೪೬॥

**ಸೈಂಧವನು ದ್ರೌಪದಿಯು ಕಪಟದಲಿ ಒಯ್ಯುತಿರೆ ।**
**ಭೀಮಾರ್ಜುನೀರ್ವರೂ ಜಯಿಸಿದರು ಯುದ್ಧದಲಿ ॥**

ಜನಮೇಜಯಾಲಿಪುದು ಪಾಂಡವರು ವನದೊಳಗೆ
ಈ ತೆರದಿ ವಿಧವಿಧದ ಕಷ್ಟಗಳ ಸಹಿಸುತಲಿ
ಹನ್ನೊಂದು ವರುಷಗಳ ಕಾಲವನು ಕಳೆಯುತಲಿ
ಪಯಣದಲಿ ಆ ಸಿಂಧು ದೇಶಕ್ಕೆ ಬಂದಿಹರು ॥೨೦೪೭॥

ಅಂಧನಾ ಧೃತರಾಷ್ಟ್ರ ಭೂಪತಿಯು ಅಳಿಯನಿಹ
ಕೌರವನ ತಂಗಿಯಾ ದುಸ್ಸಳೆಯು ಗಂಡನಿಹ
ವರಸಿಂಧು ದೇಶವನು ಆಳುತಿಹ ಜಯದ್ರಥನು
ಪಾಂಡವರು ಬಂದಿರುವ ವಾರ್ತೆಯನು ಕೇಳಿದನು ॥೨೦೪೮॥

ಈಗಲೇ ಪಾಂಡವರ ಮುತ್ತುತಲಿ ಹಿಂಸಿಪುದು
ಎನ್ನುತಲಿ ಸೊಕ್ಕಿನಲಿ ಸೈಂಧವನು ಯೋಚಿಸುತ
ಅಗಣಿತದ ಗಜತುರಗ ಕಾಲಾಳು ಸೈನಿಕರ
ರಥಿಕರಾ ಸಹಿತದಲಿ ಸಂಗರಕೆ ಹೊರಟಿಹನು ॥೨೦೪೯॥

ರವಿಚಂದ್ರ ತಾರೆಗಳು ಅಶುಭದಲಿ ಇರುತಿರಲು
ಜೋಯಿಸರ ನುಡಿಗಳನು ಆಲಿಸದೆ ಲೆಕ್ಕಿಸದೆ
ವಿಧವಿಧದ ಅಪಶಕುನ ಗಣನೆಯಲಿ ತಾರದಲೆ
ರಥವೇರಿ ಹೊರಟಿಹನು ಕುಹಕಿಯು ಜಯದ್ರಥನು ॥೨೦೫೦॥

ಹಕ್ಕಿಗಳು ಚೀರುತಲಿ ಧರೆಗುರುಳಿ ಬಿದ್ದಿಹವು
ಮುಗಿಲಿಂದ ಮಾಂಸದಾ ಕರಣೆಗಳು ಸುರಿದಿಹವು
ಪಶುಪಕ್ಷಿ ಪ್ರಾಣಿಗಳು ಚೀಕುತಲಿ ರೋದಿಸುತ
ದೆಸೆದೆಸೆಗೆ ಕಂಗೆಟ್ಟು ಭೀತಿಯಲಿ ಓಡಿಹವು ॥೨೦೫೦॥

ಹಗಲಿನಲಿ ಮುಗಿಲಿನಲಿ ತಾರೆಗಳು ಮಿನುಗಿದವು
ಬರಿಗುಡುಗು ಮೊಳಗಿಡವು ಮಿಂಚುಗಳು ಹೊಳೆದಿಹವು
ಬಿರುಗಾಳಿ ಬೀಸುತಲಿ ಧೂಳಿಯದು ಪಸರಿದುದು
ಅಗಣಿತದ ಅಪಶಕುನ ಮಧ್ಯದಲಿ ಸಾಗಿಹನು ॥೨೦೫೧॥

ಕಹಳೆಗಳು ಕೊಂಬುಗಳು ನೌಬತ್ತು ನಗಾರಿಗಳು
ಭೇರಿಗಳು ಮೊಳಗುತಿರೆ ದಶದಿಕ್ಕು ನಡುಗಿಹವು
ಸೈನ್ಯದಾ ಪದಹತಿಗೆ ಅವನಿಯದು ಕುಗ್ಗಿದುದು
ದಶದಿಶೆಯು ನಡುಗುತಲಿ ದಿಗ್ದಂತಿ ಚೀರಿದವು ॥೨೦೫೨॥

ದುಷ್ಟರಾ ಸಾಲ್ವರಾ ಖಳರೊಳಗೆ ಒಬ್ಬನಿಹ
ಕೌರವನ ಗರುಡಿಯೊಳು ಪಳಗಿರುವ ಸೈಂಧವನು
ಪಯಣದಲಿ ಸಾಗುತಲಿ ಪಾಂಡವರ ಆಶ್ರಮದ
ಸನಿಹದಲಿ ಐತಂದು ಬೀಡಾರ ಹೂಡಿದನು ॥೨೦೫೩॥

ಹೊಳೆಹೊಳೆವ ವಜ್ರಗಳ ರತ್ನಗಳ ಹಾರಗಳ
ವಿಲಸಿತದ ಪೀತಾಂಬರಾದಿಗಳ ವಸ್ತ್ರಗಳ
ಅಗಣಿತದ ಸ್ವರ್ಣದಾ ಆಭರಣ ತೆಗೆಯುತಲಿ
ದೂತರಿಗೆ ಈಯುತಲಿ ಸೈಂಧವನು ನುಡಿದಿಹನು ॥೨೦೫೪॥

ಮಾನಿನಿಗೆ ದ್ರೌಪದಿಗೆ ಉಡುಗೊರೆಯನೀಯುತಲಿ
ವನದೊಳಗೆ ಆರಿರದ ತಾಣದಲಿ ಎನ್ನನ್ನು
ಕಾಣುವುದು ಎನ್ನುತಲಿ ಅರುಹುವುದು ಎನ್ನುತಲಿ
ದೂತರನು ಕಳುಹಿದನು ಕಾಮಾಂಧ ಸೈಂಧವನು ॥೨೦೫೫॥

ಇತ್ತಲಾ ಪಾಂಡವರು ಧೌಮರನು ನೆನೆಯುತಿರೆ
ಗುರುಧೌಮ್ಯ ಮುನಿವರರ ಸಹಿತದಲಿ ಬರುತಿರಲು
ದ್ರೌಪದಿಯ ರಕ್ಷಿಸಲು ಆಶ್ರಮದಿ ಇರಿರುತಿರಲು
ಪಾಂಡವರು ಬೇಂಟೆಯನು ಆಡಲಿಕೆ ತೆರಳಿದರು ॥೨೦೫೬॥

ಸೇವಕರು ಐತಂದು ದ್ರೌಪದಿಗೆ ನಮಿಸುತಲಿ
ಹೇತಾಯೆ ನಿಮ್ಮಯಾ ಭಾವನಿಹ ಕುರುಪತಿಯು
ಸೋದರಿಯು ದುಸ್ಸಳೆಯು ಗಂಡನಿಹ ಜಯದ್ರಥನು
ಈ ಸಿಂಧುದೇಶದಾ ಅಧಿಪತಿಯು ಬಂದಿಹನು ॥೨೦೫೭॥

ನಿಮಗಾಗಿ ದಿವ್ಯಪ್ರಕಾಶದಲಿ ಹೊಳೆಹೊಳೆವ
ವಜ್ರಗಳ ವೈಡೂರ್ಯರತ್ನಗಳ ಹಾರಗಳ
ಪೀತಾಂಬರಾದಿಗಳ ಉಡುಗೊರೆಯ ಕಳಿಸಿಹನು
ಎನ್ನುತಲಿ ನಮಿಸುತಲಿ ದ್ರೌಪದಿಗೆ ಇತ್ತಿಹರು ॥೨೦೫೮॥

ಎಮ್ಮಯಾ ನಾದಿನಿಯು ದುಶ್ಶಳೆ ಕುಶಲಳೇ
ಆಕೆಯಾ ಗಂಡನಿಹ ಸೈಂಧವ ಜಯದ್ರಥನು
ಎಮ್ಮಯಾ ಬಂಧುವಿಹ ಸೋದರವ ಸಮನಿಹನು
ಕುಶಲವ ವಿರುತಿಹನೆ ಎಂದಿಹಳು ದ್ರೌಪದಿಯು ॥೨೦೫೯॥

ಆದೊಡೆಯು ನಾವುಗಳು ವನವಾಸಿ ಭಿಕ್ಷುಕರು
ನಾರಿನಾ ವಸ್ತ್ರಗಳ ಚಿಂದಿಗಳ ಧರಿಸುವೆವು
ಗಡ್ಡೆಗಳ ಗೆಡಸುಗಳ ತಿನ್ನುತಲಿ ಜೀವಿಪೆವು
ಉಡುಗೊರೆಯ ನಾವುಗಳು ಸ್ವೀಕರಿಸೆವೆಂದಿಹಳು ॥೨೦೬೦॥

ಸ್ವರ್ಣದಾ ಉಡುಗೊರೆಯ ನೀಯಲಿಕೆ ಬಯಸಿದೊಡೆ
ಬೇಟೆಯಲಿ ತೆರಳಿರುವ ಗಂಡಂದಿರೈವರಲು
ಅವರುಗಳಿಗೀಯುವುದು ನೀವೀಗ ಬೇರೆಡೆಗೆ
ತೆರಳುತಲಿ ಬೀಡಾರ ಹೂಡುವುದು ಎಂದಿಹಳು ॥೨೦೬೧॥

ಸೈಂಧವ ಜಯದ್ರಥನು ನಿಮಗಾಗಿ ಒಲಿಯುತಲಿ
ಉಡುಗೊರೆಯ ಕಳಿಸಿಹನು ಬಿಡದಲೇ ಕೊಳ್ಳುವುದು
ಈ ಸಿಂಧು ದೇಶದಾ ನೃಪನಿಂಗೆ ಬಡತನವೆ
ಪಾಂಡವರ್ಗೆ ಬೇರೆಯಾ ಉಡುಗೊರೆಯ ನೀಯುವನು ॥೨೦೬೨॥

ಈ ಪರಿಯ ನುಡಿಯುತಿರೆ ದ್ರೌಪದಿಯು ಕೋಪದಲಿ
ಈಗಲೇ ಆಶ್ರಮವ ತೊರೆಯುತಲಿ ತೊಲಗುವುದು
ಇಲ್ಲದಿರೆ ಎನ್ನಯಾ ಗಂಡಂದಿರೈವರೂ
ನಿಮ್ಮಯಾ ರುಂಡಗಳ ತೆಗೆಯುವರು ಎಂದಿಹಳು ॥೨೦೬೩॥

ಸೇವಕರು ಭಯಗೊಂಡು ಭರದಲ್ಲಿ ಓಡುತಲಿ
ಸೈಂಧವಗೆ ದ್ರೌಪದಿಯು ನುಡಿದಿರುವ ನುಡಿಗಳನು
ಹೇಳುತಿರೆ ಸಿಂಧುಪತಿ ನಾನೆಯೇ ನೋಡುವೆನು
ಎನ್ನುತಲಿ ಕಾಮಾಂಧ ಮದಾಂಧನು ಹೊರಟಿಹನು ॥೨೦೬೪॥

ಹೊಳೆ ಹೊಳೆವ ವಸ್ತ್ರಗಳ ಪೀತಾಂಬರಾದಿಗಳ
ರತ್ನಗಳ ಹಾರಗಳ ವಜ್ರಗಳ ಪದಕಗಳ
ಧರಿಸುತಲಿ ದ್ರೌಪದಿಯನೊಲಿಸುವ ಮನೋರಥದಿ
ರಥವೇರಿ ಹೊರಟಿಹನು ಆ ಖಳ ಜಯದ್ರಥನು ॥೨೦೬೫॥

ದೂರದಲಿ ರಥವಿರಿಸಿ ಆಶ್ರಮದ ಬಳಿಬರುತ
ಸುಳಿಯುತಿರೆ ದ್ರೌಪದಿಯು ಕಡೆಗಣ್ಣ ನೋಟದಲಿ
ನೋಡುತಲಿ ಪರ್ಣಕುಟಿಯೊಳಗಡೆಗೆ ತೆರಳುತಿರೆ.
ಸೈಂಧವನು ಆಶ್ರಮದ ಒಳಗಡೆಗೆ ಹೊಕ್ಕಿಹನು ॥೨೦೬೭॥

ನಾವುಗಳು ನಿಮ್ಮಯಾ ಭಾವನಿಹ ಕೌರವನ
ತಂಗಿಯಾ ದುಶ್ಶಳೆಯ ಗಂಡನು ಜಯದ್ರಥನು
ಈ ಸಿಂಧು ದೇಶದಾ ಅಧಿಪತಿಯು ಸೈಂಧವನು.
ನಾ ನಿಮ್ಮ ಬಾಂಧವನು ಅಂಜದಿರು ಎಂದಿಹನು. ॥೨೦೬೮॥

ಅಹುದಹುದು ನೀವೆಮ್ಮ ನಾದಿನಿಯ ದುಶ್ಶಳೆಯ
ಗಂಡನಿಹೆ ಗಾಂಧಾರಿ ಕುಂತಿಯರ ಅಳಿಯನಿಹೆ
ನೀವೆಮಗೆ ಅನ್ಯರೇ ಸೋದರರ ಸಮರಿಹಿರಿ.
ನಮಗಾವ ಭಯವಿಲ್ಲ ಎಂದಿಹಳು ದ್ರೌಪದಿಯು. ॥೨೦೬೯॥

ಧೃತರಾಷ್ಟ್ರ ಗಾಂಧಾರಿ ದುಶ್ಶಳೆ ಕ್ಷೇಮವೇ
ಆ ಭಾವ ಮೈದುನರು ದುರ್ಯೋಧನಾದಿಗಳು
ನಾದಿನಿಯು ಭಾನುಮತಿ ಮೊದಲಾದ ನಾರಿಯರು.
ಸುಕ್ಷೇಮವಿರುತಿಹರೇ ಎಂದಿಹಳು ದ್ರೌಪದಿಯು ॥೨೦೭೦॥

ಗಂಡಂದಿರೈವರೂ ಬೇಟೆಯಲಿ ತೆರಳಿಹರು
ಇಷ್ಟರಲಿ ಬರುತಿಹರು ನೀವುಗಳು ಮಿಂದಿಸುತ
ಫಲಮೂಲಕೊಳ್ಳುತಲಿ ವಿಶ್ರಾಂತಿಗೊಳ್ಳುವುದು.
ಎನ್ನುತಲಿ ದರ್ಭೆಯಾ ಆಸನವ ನಿತ್ತಿಹಳು ॥೨೦೭೧॥

ಗಡ್ಡೆಗಳ ಗೆಣಸುಗಳ ಭಿಕ್ಷೆಯಲಿ ಬಂದಿಲ್ಲ
ಹೇ ಚೆಲುವೆ ನಿನ್ನಯಾ ಸೌಂದರ್ಯ ನೋಡುತಲಿ
ಮರುಳಾಗಿ ಪ್ರೇಮದಾ ಭಿಕ್ಷೆಯಲಿ ಬಂದಿಹೆನು
ಎನ್ನವಳು ನೀನಾಗಿ ರಮಿಸುವುದು ಎಂದಿಹನು. ॥೨೦೭೨॥

ಈ ಸಿಂಧು ದೇಶದಾ ಅಧಿಪತಿಯು ನಾನಿಹೆನು
ಎನ್ನನ್ನು ವರಿಸುತಲಿ ಸಿಂಹಾಸನೇರುತಲಿ
ಮಹರಾಣಿಯಾಗುತಲಿ ರತ್ನದಾ ತಲ್ಪದಲಿ.
ಸುಖವಾಗಿ ರಮಿಸುವುದು ಎಂದಿಹನು ಸೈಂಧವನು ॥೨೦೭೩॥

ರಾಜ್ಯವನು ಕಳಕೊಂಡು ವನವಾಸವನಲೆಯುತಿಹ
ತಿರಿದುಂಬ ಭಿಕ್ಷುಕರ ಪಾಂಡವರ ಜೊತೆಯಲ್ಲಿ
ಈ ಮುರುಕ ಗುಡಿಸಲಲಿ ನೀನಾವ ಸೌಖ್ಯವನು
ಭೋಗಿಸುವೆ ಎಂದಿಹನು ಆ ಖಳನು ಸೈಂಧವನು ॥೨೦೭೪॥

ಹೇ ದುಷ್ಟ ಸೈಂಧವನೆ ಗಂಡಂದಿರಿಲ್ಲದಿಹ
ಸಮಯವನು ಸಾಧಿಸುತ ಹೇಡಿಯಾ ಪರಿಯಲ್ಲಿ
ಸಾಧ್ವಿಯ ಪತಿವ್ರತೆಯ ಹೆಂಗುಸನು ಕೆಣಕುವುದು
ಭೂಷಣವು ನಿನಗಲ್ಲ ಎಂದಿಹಳು ದ್ರೌಪದಿಯು ॥೨೦೭೫॥

ಕಾಮಾಂಧ ಪಾಪಿಯೇ ದುಷ್ಟಾತ್ಮ ನೀಚನೇ
ಕಾಮದಾ ಪಿತ್ತವದು ತಲೆಗೇರಿ ಬೊಗಳುತಿಹೆ
ಈಗಲೇ ಗಂಡಂದಿರೈವರೂ ಬಂದು
ನಿನ್ನನ್ನು ಕಡಿಕಡಿದು ದಿಗುಬಲಿಯ ನೀಯುವರು ॥೨೦೭೬॥

ಸಾಧ್ವಿಯ ಪತಿವ್ರತೆಯ ಕೆಣಕುವುದು ಸಲ್ಲದಿದು
ಕಾಮದಾ ಕೂಪದಲಿ ಬೀಳುತಲಿ ಹೊರಳುತಲಿ
ನರಳುತಿಹ ನರಜಂತು ಕ್ಷುದ್ರಹುಳು ನೀನಿರುವೆ
ಆಶ್ರಮವ ತೊಲಗುತಲಿ ಹೊರಹೋಗು ಎಂದಿಹಳು ॥೨೦೭೭॥

ನೀನಾವ ಸಾಧ್ವಿಯಿಹೆ ಶೀಲೆಯು ಪತಿವ್ರತೆಯು
ಐವರೂ ಪತಿಗಳಿಹ ನೀನಾವ ಪತಿವ್ರತೆಯು
ಹಲವರುಗಳೊಲಿಯುತಲಿ ಭೋಗಿಸುವ ವೇಶ್ಯೆಯಾ
ಪರಿಯಲ್ಲಿ ನೀ ವೇಶ್ಯೆ ಎಂದಿಹನು ಸೈಂಧವನು. ॥೨೦೭೮॥

ನಿನ್ನಯಾ ಗಂಡಂದಿರೈವರನು ನಾ ಬಲ್ಲೆ
ಅಂದಿನಲಿ ಸಭೆಯಲ್ಲಿ ನಿನ್ನಯಾ ಸೀರೆಯನು
ಸೆಳೆಯುತಿರೆ ಸುಮ್ಮನೇ ನೋಡುತಲಿ ಕುಳಿತಿರ್ದ
ಪಾಂಡವರು ಆವ ಪರಿ ಶೂರರುಗಳೆಂದಿಹನು ॥೨೦೭೯॥

ಎನ್ನಯಾ ಜೊತೆಯಲ್ಲಿ ಅರಮನೆಗೆ ತೆರಳುತಲಿ
ರಾಣೀ ನಿವಾಸದಲಿ ಎನ್ನೊಡನೆ ರಮಿಸುತಲಿ
ಹೃದಯದಾ ಬೇಗೆಯನು ಕಳೆಯಲಿಕೆ ನಡೆ ಎಂದು
ದ್ರೌಪದಿಯ ತುರುಬಿಂಗೆ ಕೈಯ್ಯನ್ನು ಇಕ್ಕಿದನು ॥೨೦೮೦॥

ದ್ರೌಪದಿಯು ದುಷ್ಟನಾ ಕೈಯ್ಯನ್ನು ಕೊಸರುತಲಿ
ರೋದಿಸುತ ಆಶ್ರಮವ ಹೊರಗಡೆಗೆ ಓಡುತಿರೆ
ದ್ರೌಪದಿಯನೆಳೆಯುತಲಿ ಎತ್ತುತಲಿ ರಥದೊಳಗೆ
ಒಗೆಯುತಲಿ ವೇಗದಲಿ ರಥವನ್ನು ಬಿಟ್ಟಿಹನು ॥೨೦೮೧॥

ಹಾ ಭೀಮ ಅರ್ಜುನನೆ ಧರ್ಮಜನೆ ಮಾದ್ರಿಜರೆ
ಬೇಗನೇ ಬಂದು ಖಳನನ್ನು ವಧಿಸುವುದು
ಎನ್ನಯಾ ಮಾನವನು ರಕ್ಷಿಪುದು ಎನ್ನುತಲಿ
ದಶದಿಶೆಯು ಬಿರಿವಂತೆ ಆಕ್ರೋಶಗೈದಿಹಳು ॥೨೦೮೨॥

ಗುರುಧೌಮ್ಯ ರಕ್ಷೋಘ್ನ ಮಂತ್ರವನು ಪಠಿಸುತಲಿ
ಮುನಿವೃಂದ ದೈನ್ಯದಲಿ ಬೇಡಲವೊ ಸೈಂಧವನೆ
ಈ ಪರಿಯ ದುಷ್ಕೃತ್ಯವೆಸಗದಿರು ಎನ್ನುತಲಿ
ಪ್ರಾರ್ಥಿಸಲು ಲೆಕ್ಕಿಸದೆ ತಳ್ಳುತಲಿ ಸಾಗಿದನು ॥೨೦೮೩॥

ಕಡಿವಾಣ ಜಗ್ಗುತಲಿ ಕುದುರೆಗಳ ಬೆನ್ನನ್ನು
ಚಪ್ಪರಿಸಿ ಬಿಡುತಲಿರೆ ಖುರಪುಟದ ಹತಿಯಲ್ಲಿ
ರಥ ಪುಟಿದು ಪುಟಿಯುತಲಿ ವಾಯುವಿನ ವೇಗದಲಿ
ಸಾಗುತಲಿ ಸೇನೆಯಾ ಮಧ್ಯದಲಿ ಸೇರಿದುದು ॥೨೦೮೪॥

ಆಗಲಾ ಮುನಿವರರು ಋಷಿವೃಂದ ಸಾಧುಗಳು
ದೆಸೆದೆಸೆಗೆ ಬಾಯ್ಬಿಡುತ ಹಲುಬುತಲಿ ಚೀರುತಲಿ
ವನದೊಳಗೆ ಸಿಕ್ಕೆಡೆಗೆ ಭಯದಲ್ಲಿ ಓಡುತಿರೆ
ಪಾಂಡವರು ನೋಡುತಲಿ ಬೆರಗಾಗಿ ಕೇಳಿದರು ॥೨೦೮೫॥

ಋಷಿವರರೆ ಮುನಿವರರೆ ಸಾಧುಗಳೆ ಸಜ್ಜನರೆ
ಏತಕ್ಕೆ ಭೀತಿಯಲಿ ದಿಕ್ಕೆಟ್ಟು ಓಡುವಿರಿ
ದುಷ್ಟರಾ ರಕ್ಕಸರು ಹಿಂಸೆಯನು ಗೈದಿಹರೆ
ವಿಸ್ತರದಿ ಹೇಳುವುದು ಎಂದಿಹರು ಪಾಂಡವರು ॥೨೦೮೬॥

ಏನೆಂದು ಹೇಳುವುದು ಪಾಂಡವರೆ ನೀವಿರದ
ಸಮಯವನು ಸಾಧಿಸುತ ಸಿಂಧುನೃಪ ಜಯದ್ರಥನು
ರಾವಣನು ಸೀತೆಯನು ಅಪಹರಣ ಗೈದಂತೆ
ದ್ರೌಪದಿಯ ಅಪಹರಣ ಗೈದಿಹನು ಎಂದಿಹರು ॥೨೦೮೭॥

ನೀವುಗಳು ರಾಮನಾ ಪರಿಯಲ್ಲಿ ಈಕ್ಷಣದಿ
ಸೈಂಧವನ ವಧಿಸುತಲಿ ದ್ರೌಪದಿಯ ರಕ್ಷಿಪುದು
ಎನ್ನುತಲಿ ನುಡಿಯುತಿರೆ ಭೀಮಾರ್ಜುನೀರ್ವರೂ
ಧರ್ಮಜನ ಆಜ್ಞೆಯಲಿ ಧಾವಿಸುತ ಹೊರಟಿಹರು ॥೨೦೮೮॥

ಅಡವಿಯಲಿ ಅರಸುತಲಿ ವೇಗದಲಿ ಸಾಗುತಲಿ
ಸೇನೆಯಾ ಮಧ್ಯದಲಿ ಸೈಂಧವನ ಕಾಣುತಲಿ
ಎಲವೆಲವೊ ಹೆಂಗುಸನು ಕದ್ದಿರುವ ಕಳ್ಳನೇ
ನಿನ್ನನ್ನು ಯಮಸದನಕಟ್ಟುವೆವು ಎನ್ನುತಲಿ ॥೨೦೮೯॥

ಅಗಣಿತದ ಬಾಣಗಳ ವೃಷ್ಟಿಗಳೆ ಸುರಿಸುತಲಿ
ಸೈಂಧವನ ಎಚ್ಚುತಲಿ ಮುಸುಕುತಲಿ ಮುಚ್ಚುತಿರೆ
ಶರಜಾಲ ಕಡಿಯುತಲಿ ಭೀಮಾರ್ಜುನೀರ್ವರನು
ವಧಿಸುವುದು ಎನ್ನುತಲಿ ಸೈನ್ಯಕ್ಕೆ ನುಡಿದಿಹನು ॥೨೦೯೦॥

ದ್ರೌಪದಿಯ ಸಹಿತದಲಿ ರಥವನ್ನು ತೀವ್ರದಲಿ
ಬಿಡುತಲಿರೆ ಅರ್ಜುನನು ಎಲವೆಲವೊ ಪಾಪಿಯೇ
ನಿನ್ನಯಾ ಶಿರವನ್ನು ಗಗನಕ್ಕೆ ಕಟ್ಟುವೆನು
ಎನ್ನುತಲಿ ಸೈನ್ಯದಾ ಮಧ್ಯದಲಿ ನುಗ್ಗಿದನು ॥೨೦೯೧॥

ನಿಶಿತ ಶರವಗಣಿತವ ಸುರಿಸುತಲಿ ರಿಪುಬಲದ
ಶಿರಗಳನು ತರಿಯುತಲಿ ನೆಗೆಸುತಲಿ ಕೆಡಹುತಲಿ
ರಕುತದಾ ಕೋಡಿಯನು ಹರಿಸುತಲಿ ಅರ್ಜುನನು
ಸೈಂಧವನ ಬೆನ್ನಟ್ಟಿ ಸಾಗಿಹನು ವೇಗದಲಿ ॥೨೦೯೨॥

ಮಾನಿನಿಯ ಕದ್ದಿರುವ ಖೂಳನಾ ಸೈಂಧವನ
ಪ್ರಾಣವನು ತೆಗೆಯುತಲಿ ದಿಗುಬಲಿಯ ನೀಯುವೆನು
ಎನ್ನುತಲಿ ಗದೆಯನ್ನು ತಿರುಹುತಲಿ ಅಡ್ಡೈಸಿ
ಸೈಂಧವನ ತಡೆಯುತಲಿ ಕಲಿಭೀಮ ನಿಂದಿಹನು ॥೨೦೯೩॥

ಎಲವೆಲವೊ ಆಶ್ರಮದಿ ಆರಿರದ ಸಮಯದಲಿ
ಹೆಂಗುಸನು ಕದ್ದಿರುವ ಹೇ ಹೇಡಿ ಕಳ್ಳನೇ
ನಿನ್ನಯಾ ಶೌರ್ಯವನು ಎಮ್ಮಲ್ಲಿ ತೋರುವುದು
ಎನ್ನುತಲಿ ಪವನಜನು ಗರ್ಜಿಸುತ ನುಡಿದಿಹನು ॥೨೦೯೪॥

ಧನುವನ್ನು ಕೊಳ್ಳುತಲಿ ಆ ಖಳ ಜಯದ್ರಥನು
ಶರಗಳನು ಸುರಿಸುತಲಿ ಭೀಮನನು ಮುಸುಕುತಿರೆ
ಫಲಗುಣನು ನೋಡುತಲಿ ಬಾಣಗಳ ನೆಸೆಯುತಲಿ
ಕಡಿಕಡಿದು ಪುಡಿಗೈದು ನಾಶವನು ಮಾಡಿಹನು ॥೨೦೯೫॥

ಆ ಕ್ಷಣದಿ ಕಲಿಭೀಮ ರಥದ ಬಳಿ ಧಾವಿಸಲು
ಸೈಂಧವನು ಖಡುಗವನು ಹಿರಿಯುತಲಿ ಝಳಪಿಸುತ
ಬೀಸುತಲಿ ಎರಗುತಿರೆ ಪವನಜನು ಕ್ರೋಧದಲಿ
ಗದೆಯಿಂದ ಅಪ್ಪಳಿಸಿ ಖಡುಗವನು ಪುಡಿಗೈದ ॥೨೦೯೬॥

ಮುಂದಕ್ಕೆ ಭರದಲ್ಲಿ ನುಗ್ಗುತಲಿ ಎಳೆಯುತಲಿ
ಜುಟ್ಟನ್ನು ಹಿಡಿಯುತಲಿ ಕುತ್ತಿಗೆಯ ತರಿಯಲಿಕೆ
ಕತ್ತಿಯನು ಹಿರಿಯುತಲಿ ಕುತ್ತಿಗೆಯ ತರಿಯಲಿಕೆ
ಯತ್ನಿಸಲು ಫಲಗುಣನು ನೋಡುತಲಿ ನುಡಿದಿಹನು ॥೨೦೯೭॥

ಅಕಟಕಟ ಪವನಜನೆ ಸೈಂಧವನ ಕೊಲ್ಲದಿರೆ
ಆ ತಂಗಿ ದುಸ್ಸಳೆಯು ವಿಧವೆಯಳು ಆಗುವಳು
ಧೃತರಾಷ್ಟ್ರ ಗಾಂಧಾರಿ ಎಮ್ಮನ್ನು ಶಪಿಸುವರು
ಮಹತಾಯಿ ಆ ಕುಂತಿ ನವೆಯುವಳು ಎಂದಿಹನು ॥೨೦೯೮॥

ಆ ತೊಡಕು ನಮಗೇಕೆ ಸೈಂಧವನ ಬಂಧಿಸುತ
ಒಯ್ಯುತಲಿ ಧರ್ಮಜನ ಪಾದದಲಿ ಒಗೆಯುವುದು
ಅವನಿಚ್ಛೆ ಇದ್ದಂತೆ ರಕ್ಷಿಸಲಿ ಇಲ್ಲವೇ
ಧರ್ಮಜನೆ ಶಿಕ್ಷೆಯನು ವಿಧಿಸುವುದು ಎಂದಿಹನು ॥೨೦೯೯॥

ಗುರುಧೌಮ್ಯ ದ್ರೌಪದಿಯ ಸಹಿತದಲಿ ಆಶ್ರಮಕೆ
ರಥದೊಳಗೆ ತೆರಳುವುದು ಎನ್ನುತಲಿ ಅರ್ಜುನನು
ಅಶ್ವಗಳ ಹೂಡುತಲಿ ಸಾರಥಿಯ ಸಹಿತದಲಿ
ಕಳುಹಿಸುತ ಭೀಮನನು ಸಾಂತ್ವನವ ಗೈದಿಹನು ॥೨೧೦೦॥

ಹೇ ಪಾರ್ಥ ಎಮ್ಮಯಾ ಸತಿಯನ್ನು ಕದ್ದಿರುವ
ಚೋರನಾ ಕಾಮಾಂಧ ಸೈಂಧವನು ದುಷ್ಟನನು
ಯಮಲೋಕಕಟ್ಟುವಾ ಬಯಕೆಯೊಳು ನಾನಿರ್ದೆ
ಭಂಗವನು ಮಾಡಿರುವೆ ಎಂದಿಹನು ಕಲಿಭೀಮ ॥೨೧೦೧॥

ಹೆಂಗುಸಿನ ಚೋರನೇ ಹೇ ಹೀನ ಜಂತುವೇ
ನಿನಗಾರು ಈ ಪರಿಯ ದುರ್ಬುದ್ಧಿ ಕಲಿಸಿಹರು
ಕೌರವನೊ ಸೌಬಲನೊ ಖಳಕರ್ಣ ಮೂವರೊಳು
ನಿನಗಾರ ಈ ವಿದ್ಯೆ ಕಲಿಸಿಹರು ಎನ್ನುತಲಿ ॥೨೧೦೨॥

ಪವನಜನು ಸೈಂಧವನ ಬಾಹುಗಳ ಎರಡನ್ನು
ಹಗ್ಗದಲಿ ಬಿಗಿಯುತಲಿ ಬೆನ್ನಿನಲಿ ಕಟ್ಟುತಲಿ
ದರದರನೆ ಎಳೆಯುತಲಿ ಎಳೆತಂದು ಭರದಲ್ಲಿ
ಧರ್ಮಜನ ಚರಣದಲಿ ಧೊಪ್ಪನೇ ಒಗೆದಿಹನು ॥೨೧೦೩॥

ಅಕಟಕಟ ಆ ಸಿಂಧು ದೇಶದಾ ನೃಪನಿವನು
ಎಮ್ಮಯಾ ಧೃತರಾಷ್ಟ್ರ ಗಾಂಧಾರಿಯಳಿಯನಿಹ
ಎಮ್ಮಯಾ ತಂಗಿಯಾ ದುಸ್ಸಳೆಯ ಗಂಡನಿಹ
ನೀವುಗಳು ನಿರ್ದಯರು ಎಂದಿಹನು ಧರ್ಮಜನು ॥೨೧೦೪॥

ಹೇ ಭೀಮ ಸೈಂಧವನು ಬಂಧನದಿ ಬಳಲಿಹನು
ಬೆಂಡಾಗಿ ಬಾಡಿಹನು ಬತ್ತಿಹನು ಕುಂದಿಹನು
ಬೇಗನೇ ಬಂಧನವ ಬಿಡಿಸುವುದು ಎನ್ನುತಲಿ
ಧರ್ಮಜನು ನುಡಿಯುತಿರೆ ಪವನಜನು ನುಡಿದಿಹನು ॥೨೧೦೫॥

ಎಮ್ಮಯಾ ಸತಿಯನ್ನು ಕದ್ದಿರುವ ಪಾತಕಿಯು
ಮರಣದಾ ದಂಡನೆಗೆ ಯೋಗ್ಯನಿಹ ವಧಿಸುವುದು
ಇಲ್ಲದಿರೆ ಹೆಂಡತಿಯ ರಕ್ಷಿಸದ ಎನ್ನನ್ನು
ಅಗ್ನಿಯಲಿ ದಹಿಸುವುದು ಎಂದಿಹನು ಕಲಿಭೀಮ ॥೨೧೦೬॥

ಹೇ ಭೀಮ ಕ್ರೋಧದಲಿ ಉದ್ರೇಕಗೊಳ್ಳದೆಯೆ
ಶಾಂತಿಯಲಿ ಸಮತೆಯಾ ಚಿತ್ತದಲಿ ಯೋಚಿಪುದು
ಸೈಂಧವನು ಎಮ್ಮಯಾ ಬಾಂಧವನು ಎಂಬುದನು
ನೀತಿಳಿದು ನೋಡುವುದು ಎಂದಿಹನು ಧರ್ಮಜನು ॥೨೧೦೭॥

ಅಳಿಯನಾ ಮರಣಕ್ಕೆ ಧೃತರಾಷ್ಟ್ರ ಗಾಂಧಾರಿ
ಶೋಕಿಸುತ ಎಮ್ಮನ್ನು ಶಪಿಸದೇ ಇರುತಿಹರೆ
ಆ ತಂಗಿ ದುಸ್ಸಳೆಯು ವಿಧವೆಯಳು ಎನಿಸುತಲಿ
ಎಮ್ಮನ್ನು ನಿಂದಿಸದೆ ಇರುತಿಹಳೆ ಎಂದಿಹನು ॥೨೧೦೮॥

ಮಗಳಾದ ದುಸ್ಸಳೆಯ ವೈಧವ್ಯ ನೋಡುತಲಿ
ಮಹತಾಯಿ ಕುಂತಿಯಾ ಉದರವದು ಉರಿಯುತಲಿ
ಚಿಂತೆಯಲಿ ಬಳಲುತಲಿ ಬೆಂಡಾಗಿ ನವೆಯುತಲಿ
ಎಮ್ಮನ್ನು ಶಪಿಸದೇ ಇರುತಿಹಳೆ ಎಂದಿಹನು ॥೨೧೦೯॥

ಸೋಲುವುದು ಗೆಲ್ಲುವುದು ರಣದೊಳಗೆ ಸಹಜವಿದೆ
ಯುದ್ಧದಲಿ ಸೆರೆಯೊಳಗೆ ಸಿಕ್ಕಿರುವ ಶತ್ರುಗಳ
ಕೊಲ್ಲುವುದು ಕ್ಷತ್ರಿಯರ ಧರ್ಮವದು ಅಲ್ಲೆಂದು
ಧರ್ಮಜನು ಪವನಜನ ಸಾಂತ್ವನವ ಗೈದಿಹನು ॥೨೧೧೦॥

ಸೈಂಧವನ ವಧಿಸುವುದು ನಿಮಗಿಷ್ಟವಿಲ್ಲದಿರೆ
ಎನ್ನಯಾ ಶೌರ್ಯಕ್ಕೆ ವಚನಕ್ಕೆ ಭಂಗವದು
ಕುಂದೆನಿಸದಂತಿರುವ ಶಿಕ್ಷೆಯನು ಸೈಂಧವಗೆ
ವಿಧಿಸುವುದು ಎನ್ನುತಲಿ ಕಲಿಭೀಮ ನುಡಿದಿಹನು ॥೨೧೧೧॥

ಆಗಲಾ ಧರ್ಮಜನು ಧೌಮ್ಯರನು ಮುನಿಗಳನು
ನೋಡುತಲಿ ಭೀಮನಾ ನುಡಿಗಳಿಗೆ ಯೋಗ್ಯವಿಹ
ಶಿಕ್ಷೆಯನು ಸೈಂಧವಗೆ ಪ್ರಾಣವನು ಕೊಳ್ಳದೆಯೆ
ಆವ ಪರಿ ವಿಧಿಸುವುದು ಎನ್ನುತಲಿ ಕೇಳಿದನು ॥೨೧೧೨॥

ಗುರುಧೌಮ್ಯ ಮೊದಲಾದ ಮುನಿವರರು ಋಷಿವರರು
ಶಾಸ್ತ್ರಗಳ ಪಂಡಿತರು ಚರ್ಚಿಸುತ ನುಡಿದಿಹರು
ಮಾನವದು ಪ್ರಾಣವೇ ಆಗಿರುವ ಗರುವರಿಗೆ
ಮಾನವನು ಕಳೆಯುವದು ಮರಣವದು ಎನಿಸುವುದು ॥೨೧೧೩॥

ಮಾನಧನವುಳ್ಳವರು ಮಾನವದು ತೊಲಗುತಿರೆ
ಜೀವಂತ ಹೆಣವಾಗಿ ಜಗದೊಳಗೆ ಜೀವಿಪರು
ಸೊಕ್ಕಿನಲಿ ಮೆರೆಯುವೀ ಕಾಮಾಂಧ ಸೈಂಧವನ
ಅಪಮಾನಗೊಳಿಸುತಲಿ ನೂಕುವುದು ಎಂದಿಹರು ॥೨೧೧೪॥

ಧರ್ಮಜನ ಚರಣಕ್ಕೆ ಎರಗುತಲಿ ಸೈಂಧವನು
ಧರ್ಮಜನ ಪಾದದಾ ಸೇವಕನು ತಾನಿಹೆನು
ತಾಗೈದ ತಪ್ಪನ್ನು ಮನ್ನಿಪುದು ಎನ್ನುತಲಿ
ಕ್ಷಮೆಯನ್ನು ಕೇಳುವುದು ಎಂದಿಹರು ಮುನಿವರರು ॥೨೧೧೫॥

ಬಳಿಕಲಾ ಸೈಂಧವನ ತಲೆಯನ್ನು ಬೋಳಿಸುತ
ಮುಖಕೆಲ್ಲ ಸುಣ್ಣವನು ಬಣ್ಣವನು ಬಳಿಯುತಲಿ
ಕತ್ತೆಯಾ ಮೇಲಕ್ಕೆ ಕೂಡ್ರಿಸುತ ಮೆರೆಸುತಲಿ
ಒದೆಯುತಲಿ ತಳ್ಳುವುದು ಯೋಗ್ಯವದು ಎಂದಿಪರು ॥೨೧೧೬॥

ಬಾ ಭೀಮ ಸೈಂಧವನ ಬಂಧನವ ಬಿಡಿಸುವುದು
ಎನ್ನುತಿರೆ ಧರ್ಮಸುತ ಅನಿಲಸುತನೈತರುತ
ದುರುಳನಾ ಸೈಂಧವನ ಸೆರೆಯನ್ನು ಬಿಡಿಸುತಿರೆ
ಮನದೊಳಗೆ ಏನನ್ನೊ ಬೇರೆಯನು ನೆನೆಯುತಲಿ ॥೨೧೧೭॥

ಸೈಂಧವನು ಧರ್ಮಜನ ಪಾದಕ್ಕೆ ಎರಗುತಲಿ
ನಿಮ್ಮಯಾ ಪಾದದಾ ಸೇವಕನು ನಾನಿಹನು
ನಾಗೈದ ತಪ್ಪನ್ನು ಮನ್ನಿಪುದು ಎನ್ನುತಲಿ
ಪ್ರಾರ್ಥಿಸುತ ಮನದೊಳಗೆ ಕುಹಕವನು ನೆನೆದಿಹನು ॥೨೧೧೮॥

ಬಳಿಕಲಾ ಕಲಿಭೀಮ ಕತ್ತಿಯನು ಹಿರಿಯುತಲಿ
ಸೈಂಧವನ ಜುಟ್ಟನ್ನು ತಲೆಯನ್ನು ಹಿಡಿಯುತಲಿ
ಕೂದಲನು ಬೋಳಿಸುತ ಬೋಳುತಲೆ ಗೈಯ್ಯುತಲಿ
ಮುಖಕೆಲ್ಲ ಸುಣ್ಣವನು ಬಣ್ಣವನು ಬಳಿದಿಹನು ॥೨೧೧೯॥

ಬಳಿಕಲಾ ಕತ್ತೆಯಲಿ ಕೂಡ್ರಿಸುತ ಮೆರೆಸುತಲಿ
ದುರುಳನಾ ಕಾಮಾಂಧ ಸೈಂಧವನ ಒದೆಯುತಲಿ
ಕಲಿಭೀಮ ನಿನ್ನಯಾ ಪ್ರಾಣವನು ಕೊಳ್ಳದೆಯೆ
ಬಿಟ್ಟಿಹೆವು ನೀ ಬದುಕು ಹೋಗೆಂದು ನೂಕಿದನು ॥೨೧೨೦॥

**ಅಪಮಾನ ಸಹಿಸದಲೆ ಸೈಂಧವನು ಶಿವನನ್ನು ।**
**ಭಜಿಸುತಲಿ ವರವನ್ನು ಪಡೆದಿಹನು ಕೋಪದಲಿ ।**

ಕೇಳುವುದು ಜನಮೆಜಯ ಕ್ಷಿತಿಪನೆ ಬಳಿಕಿನಲಿ
ದುಷ್ಟರಾ ಕೆಟ್ಟಗುಣ ಸತ್ತರೂ ಹೋಗದದು
ಎಂಬಂತೆ ತಾಪದಲಿ ರಕುತವದು ಕುದಿಯುತಲಿ
ಕೋಪದಾ ಜ್ವಾಲೆಯಲಿ ಉರಿಯುತಲಿ ನವೆಯುತಲಿ ॥೨೧೨೧॥

ಪಾಂಡವರನೈವರಾ ರುಂಡಗಳ ನೆಗೆಸುವೆನು
ಎನ್ನುತಲಿ ಆ ಭಂಡನುದ್ದಂಡ ಸೈಂಧವನು
ತ್ರಿಪುರಾರಿ ಕಾಮಾರಿ ತಾಂಡವನ ಪರಶಿವನ
ಭಜಿಸುತಲಿ ಉಗ್ರತರ ತಪವನ್ನು ಗೈದಿಹನು ॥೨೧೨೨॥

ಕೈಲಾಸದಧಿಪತಿಯು ಪಾರ್ವತಿಯ ಸಹಿತದಲಿ
ಪ್ರತ್ಯಕ್ಷನಾಗುತಲಿ ನಿನ್ನಯಾ ತಪಸಿಂಗೆ
ಮೆಚ್ಚಿಹೆನು ನಿನ್ನಿಷ್ಟವಾದುದನು ಬೇಡುವುದು
ಕರುಣಿಸುವೆನೆಂದಿಹನು ಕರುಣಾಳು ಕರುಣೆಯಲಿ ॥೨೧೨೩॥

ಸಿಂಧುಪತಿ ಕಣ್ದೆರೆದು ಪಾರ್ವತಿಯ ಸಹಿತದಲಿ
ಶೋಭಿಸುವ ಪಶುಪತಿಯ ಕಾಣುತಲಿ ಹರುಷದಲಿ
ಹರಹರನೆ ಪರಶಿವನೆ ಶಂಕರನೆ ರಕ್ಷಿಪುದು
ಎನ್ನುತಲಿ ಸಾಷ್ಟಾಂಗವೆರಗಿದನು ಭಕುತಿಯಲಿ ॥೨೧೨೪॥

ಹೇ ಶಿವನೆ ಪಾಂಡವರನೈವರನು ಒಂದು ದಿನ
ಗೆಲ್ಲುವಾ ವರವನ್ನು ನೀಡುವುದು ಎನ್ನುತಿರೆ
ಪರಶಿವನು ಪಾರ್ವತಿಯ ಮೊಗನೋಡಿ ದುಷ್ಟರಾ
ಹುಟ್ಟುಗುಣ ಸತ್ತರೂ ಹೋಗದದು ಎಂದಿಹನು ॥೨೧೨೫॥

ಸೈಂಧವನೆ ಫಲುಗುಣಗೆ ಪಾಶುಪತವಿತ್ತಿಹೆನು
ಅರ್ಜುನರ ಜಯಿಸುವುದು ಆರಿಗೂ ಅಸದಳವು
ಉಳಿದಿರುವ ನಾಲ್ವರನು ಪಾಂಡವರನೊಂದೆ ದಿನ
ನೀ ಜಯಿಪ ವರನನ್ನು ಇತ್ತಿಹೆನು ಎಂದಿಹನು ॥೨೧೨೬॥

ಶಂಭುವಿನ ವರವನ್ನು ಪಡೆಯುತಲಿ ಸೈಂಧವನು
ಪಾಂಡವರ ಜಯಿಸುತಲಿ ಸೇಡನ್ನು ತೀರಿಪೆನು
ಎನ್ನುತಲಿ ಮನದೊಳಗೆ ಉಬ್ಬುತಲಿ ಸಂತಸದಿ
ಸೈಂಧವನು ನಿಜನಗರಕೈದಿದನು ಹರುಷದಲಿ ॥೨೧೨೭॥

ಸಾಗರದ ತೆರೆಗಳಾ ಪರಿಯಲ್ಲಿ ಸಂತತವು
ಘೋರತರ ಕಷ್ಟಗಳು ಮುತ್ತುತಲಿ ಎನ್ನನ್ನು
ಘಾತಿಪವು ಹಿಂಸಿಪವು ಎನ್ನುತಲಿ ಧರ್ಮಸುತ
ಮನದೊಳಗೆ ನೋಯುತಲಿ ನೊಂದಿಹನು ಕುಂದಿಹನು ॥೨೧೨೮॥

**ಮಾರ್ಕಂಡೇಯ ಮುನಿ ಧರ್ಮಜನ ದುಗುಡವನು ।**
**ಕಳೆಯಲಿಕೆ ರಾಮನಾ ಚರಿತೆಯನು ಪೇಳಿದನು ॥**

ಆಗಲಾ ಮಾರ್ಕಂಡೇಯ ಮುನಿವರನು ಐತರಲು
ಧರ್ಮಜನು ಆದರದಿ ಆಸನವನೀಯುತಲಿ
ಫಲಪುಷ್ಪ ಅರ್ಘ್ಯಾದಿ ಈಯುತಲಿ ಸತ್ಕರಿಸಿ
ಸಾಷ್ಟಾಂಗವೆರಗುತಿರೆ ಮುನಿವರನು ನುಡಿದಿಹನು ॥೨೧೨೯॥

ನೃಪವರನೆ ನಿನ್ನಯಾ ಮುಖಕಮಲ ಬಾಡಿಹುದು
ಆವುದೋ ಚಿಂತೆಯಲಿ ನಿಸ್ತೇಜವಾಗಿಹುದು
ನಿನ್ನಯಾ ದುಗುಡಕ್ಕೆ ಕಾರಣವನರುಹುವುದು
ಎನ್ನುತಲಿ ಋಷಿವರನು ಧರ್ಮಜಗೆ ನುಡಿದಿಹನು ॥೨೧೩೦॥

ಘನಮಹಿಮ ಮುನಿವರರೆ ಏನೆಂದು ಹೇಳುವೆನು
ರಾಜ್ಯವನು ಕಳಕೊಂಡು ಸೋದರರ ಒಡಗೂಡಿ
ಹೆಂಡತಿಯ ಸಹಿತದಲಿ ವನವನವನಲೆಯುತಲಿ
ನನ್ನ ಪರಿ ನವೆದವರು ಆರಿಲ್ಲ ಎಂದಿಹನು ॥೨೧೩೧॥

ಈ ಚಂದ್ರವಂಶದಲಿ ಮುನ್ನಿನಲಿ ಎನ್ನವೋಲ್
ದುಃಖಗಳ ಭೋಗಿಸಿದ ನೃಪರುಗಳು ಆರಿಲ್ಲ
ಜಗದೊಳಗೆ ಎನ್ನಂಥ ಹತಭಾಗ್ಯ ದುರ್ದೈವಿ
ಆರಿಲ್ಲ ಎಂದಿಹನು ಧರ್ಮಜನು ಖೇದದಲಿ ॥೨೧೩೨॥

ಧರ್ಮಜನೆ ಸುಮ್ಮನೇ ಚಿಂತೆಯನು ಮಾಡದಿರು
ಮುನ್ನಿನಲಿ ನಿನಗಿಂತ ಹೆಚ್ಚಿನಾ ಕಷ್ಟಗಳ
ದುಃಖಗಳ ಭೋಗಿಸುತ ತೊಳಲಿರುವ ಬಳಲಿರುವ
ನೃಪರುಗಳು ಬಹಳುಂಟು ಎಂದಿಹನು ಮುನಿವರನು ॥೨೧೩೩॥

ಆ ಸೂರ್ಯವಂಶದಲಿ ಸೂರ್ಯನಾ ತೇಜದಲಿ
ತೊಳಗುತಲಿ ಬೆಳಗಿರುವ ಹರಿಶ್ಚಂದ್ರ ನೃಪವರನು
ರಾಜ್ಯವನು ಕೌಶಿಕಗೆ ದಾನದಲಿ ಈಯುತಲಿ
ಸತಿಸುತರ ಸಹಿತದಲಿ ಅಡವಿಯೊಳು ಅಲೆಯುತಲಿ ॥೨೧೩೪॥

ಹೆಂಡತಿಯ ತಾರೆಯನು ಪೇಟೆಯಲಿ ಮಾರುತಲಿ
ಮಸಣವನು ಕಾಯುತಲಿ ಕಾನನದಿ ನಿಜಸುತನು
ಲೋಹಿತನು ಹಾವಿನಾ ಕಡಿತದಲಿ ಸಾಯುತಲಿ
ನಿನಗಿಂತ ಮಿಗಿಲಾದ ಕಷ್ಟಗಳ ಭೋಗಿಸಿದ ॥೨೧೩೫॥

ನಿನ್ನ ಪರಿ ನಳನೃಪನು ಸೋದರನ ಪುಷ್ಕರನ
ಜೊತೆಯಲ್ಲಿ ದ್ಯೂತವನು ಆಡುತಲಿ ರಾಜ್ಯವನು
ಹೆಂಡತಿಯ ಕಳಕೊಂಡು ಕಾಡಿನಲಿ ಅಲೆಯುತಲಿ
ರಾತ್ರಿಯಲಿ ಸತಿಯನ್ನು ತ್ಯಜಿಸುತಲಿ ತೆರಳುತಲಿ ॥೨೧೩೬॥

ಘಟಸರ್ಪ ಬಂಧನದಿ ಸಿಲುಕುತಲಿ ನರಳುತಲಿ
ಋತುಪರ್ಣ ನೃಪವರನ ಅರಮನೆಯ ಆಳಾಗಿ
ಕುಮರೆಗಳ ಲದ್ದೆಗಳ ಬಳೆಯುತಲಿ ಬಳಲಿರುವ
ಕಥೆಯನ್ನು ಅರಿಯೆಯಾ ಎಂದಿಹನು ಋಷಿವರನು ॥೨೧೩೭॥

ನಿನ್ನಯಾ ಕಷ್ಟದಲಿ ನಿನಸತಿಯು ದ್ರೌಪದಿಯು
ನಾಲ್ವರೂ ಸೋದರರು ಜೊತೆಯಾಗಿ ಇರುತಿಹರು
ಹೆಂಡತಿಯ ಕಳಕೊಂಡು ನಳ ಹರಿಶ್ಚಂದ್ರರು
ನಿನಗಿಂತ ಹೆಚ್ಚಿನಾ ದುಃಖದಲಿ ಬಳಲಿದರು ॥೨೧೩೮॥

ಸಾಕ್ಷಾತ್ತ ಶ್ರೀವಿಷ್ಣು ಪರಮಪುರುಷೋತ್ತಮನು
ಭೃಗುಮುನಿಯ ಶಾಪದಲಿ ನರನಾಗಿ ಅವತರಿಸಿ
ರಾಮನಾ ರೂಪದಲಿ ರಾಜ್ಯವನು ತೊರೆಯುತಲಿ
ಹದಿನಾಲ್ಕು ವರುಷಗಳ ವನವಾಸ ಭೋಗಿಸಿದ ॥೨೧೩೯॥

ರಾವಣನು ಸೀತೆಯನು ಅಪಹರಿಸಿ ಶೋಕದಲಿ
ರೋದಿಸುತ ವನವನವನಲೆಯುತಲಿ ಅರಸುತಲಿ
ಸಾಗರಕೆ ಸೇತುವೆಯ ಕಟ್ಟುತಲಿ ಬಳಲಿದನು
ಇನ್ನುಳಿದ ನರರುಗಳ ಪಾಡೇನು ಎಂದಿಹನು ॥೨೧೪೦॥

ಮುನಿವರರೆ ನಾರಾಯಣನು ನರನಾಗಿ ಜನಿಸುತಲಿ
ರಾಮನಾ ರೂಪದಲಿ ವಿಧವಿಧದ ಕಷ್ಟಗಳ
ಭೋಗಿಸಿದ ಪಾವನದ ರಾಘವನ ಚರಿತೆಯನು
ಪೇಳ್ವುದು ಎನ್ನುತಲಿ ಧರ್ಮಜನು ನುಡಿದಿಹನು ॥೨೧೪೧॥

ಆಗಲಾ ಮಾರ್ಕಂಡೇಯ ಮುನಿವರನು ಧರ್ಮಜಗೆ
ಆ ದೇವ ಮಹವಿಷ್ಣು ನರನಾಗಿ ಜನಿಸುತಲಿ
ಜಗದೊಳಗೆ ಅಗಣಿತದ ಕಷ್ಟಗಳ ಭೋಗಿಸಿದ
ರಾಘವನ ಚರಿತೆಯನು ವಿಸ್ತರದಿ ಪೇಳಿದನು ॥೨೧೪೨॥

ಕೇಳುವುದು ಧರ್ಮಜನೆ ಆ ಸೂರ್ಯವಂಶದಲಿ
ಇಕ್ಷ್ವಾಕು ಕುಲದೊಳಗೆ ಜನಿಸಿರುವ ಶ್ರೇಷ್ಠನೃಪ
ದಶರಥನು ವೈಭವದಿ ಸಾಕೇತ ರಾಜ್ಯವನು
ಸಾವಿರದ ವರುಷಗಳ ಪರ್ಯಂತವಾಳುತಿರೆ ॥೨೧೪೩॥

ವೃದ್ಧಾಪ್ಯವಡರುತಿರೆ ತ್ರಾಣವದು ಅಳಿಯುತಿರೆ
ಸಂತಾನ ವಿಲ್ಲದೆಯೆ ನರಳುತಲಿ ಕೊರಗುತಲ
ವಸಿಷ್ಠರಾ ಆಜ್ಞೆಯಲಿ ಪುತ್ರಕಾಮೇಷ್ಠಿಯನು
ಯಜ್ಞವನು ಗೈದಿಹನು ದಶರಥನು ವೈಭವದಿ ॥೨೧೪೪॥

ಪಾವಕನು ಪ್ರತ್ಯಕ್ಷನಾಗುತಲಿ ದಶರಥಗೆ
ಪಾಯಸವನೀಯುತಿರೆ ಕೌಸಲೆ ಸುಮಿತ್ರೆಯರು
ಕೈಕೆಯಿಯು ಮೂವರೂ ಪತ್ನಿಯರು ಸೇವಿಸಲು
ನಾಲ್ವರಾ ಪುತ್ರರನು ಶ್ರೇಷ್ಠರನು ಹೆತ್ತಿಹರು ॥೨೧೪೫॥

ಶ್ರೀರಾಮ ಲಕ್ಷ್ಮಣನು ವರಭರತ ಶತ್ರುಘ್ನ
ಎನ್ನುತಲಿ ಶಿಶುಗಳಿಗೆ ಹೆಸರುಗಳನಿರಿಸುತಲಿ
ಅಗಣಿತದ ಧನ ಕನಕ ದಾನಗಳನೀಯುತಲಿ
ಸಂಭ್ರಮದಿ ಸಡಗರದಿ ಉತ್ಸವವ ಗೈದಿಹನು ॥೨೧೪೬॥

ದಿನದಿನದಿ ಶುಕ್ಲದಾ ಚಂದಿರನ ಪರಿಯಲ್ಲಿ
ಶಿಶುನಾಲ್ಕು ಬೆಳೆಯುತಲಿ ಸಂತಸವ ಗೊಳಿಸುತಿರೆ
ಕೌಶಿಕನು ಐತಂದು ಯಜ್ಞದಾರಕ್ಷಣೆಗೆ
ಶ್ರೀರಾಮ ಲಕ್ಷ್ಮಣರ ಕೊಂಡೊಯ್ದನಾಶ್ರಮಕೆ ॥೨೧೪೭॥

ಮಾರ್ಗದಾ ಮಧ್ಯದಲಿ ತಾಟಕಿಯ ರಕ್ಕಸಿಯ
ವಧಿಸುತಲಿ ವನವನ್ನು ನಿಷ್ಕಂಟಕಾಗಿಸುತ
ಸುಬಾಹುವ ನಿರಿಯುತಲಿ ಮಾರೀಚನಟ್ಟುತಲಿ
ಶ್ರೀರಾಮ ಕೌಶಿಕನ ಯಜ್ಞವನು ಪೊರೆದಿಹನು ॥೨೧೪೮॥

ಮಿಥಿಲೆಯಾ ಪಟ್ಟಣಕೆ ಶ್ರೀರಾಮ ಲಕ್ಷ್ಮಣರು
ಕೌಶಿಕನ ಜೊತೆಯಲ್ಲಿ ತೆರಳುತಿರೆ ಮಾರ್ಗದಲಿ
ಶಿಲೆಯಾಗಿ ಬಿದ್ದಿರುವ ಸಾಧ್ವೀಶಿರೋಮಣಿಯ
ಅಹಲ್ಯೆಯನು ಉದ್ಧಾರ ಗೈದಿಹನು ರಾಘವನು ॥೨೧೪೯॥

ಸೀತೆಯ ಸ್ವಯಂವರದ ಮಂಟಪವ ಸೇರುತಲಿ
ಶ್ರೀ ರಾಮ ಹರಧನುವ ಮುರಿಯುತಿರೆ ಜನಕನೃಪ
ರಾಮಂಗೆ ಸೀತೆಯನು ಈಯುತಲಿ ಮದುವೆಯನು
ವೈಭವದಿ ಮಾಡುತಿರೆ ಸಕಲರೂ ನಲಿದಿಹರು ॥೨೧೫೦॥

ಲಕ್ಷ್ಮಣಗೆ ಊರ್ಮಿಳೆಯ ಭರತ ಶತ್ರುಘ್ನರಿಗೆ
ಮಾಂಡವೀ ಶೃತಿಕೀರ್ತಿ ಪುತ್ರಿಯರನೀಯುತಲಿ
ಸಂಭ್ರಮದಿ ವೈವಾಹದುತ್ಸವವ ಗೈಯ್ಯುತರೆ
ಜನಕನೃಪ ದಶರಥನು ಸಂತಸದಿ ತೇಲಿವನು ॥೨೧೫೧॥

ವರುಷಗಳು ಉರುಳುತಿರೆ ದಶರಥನು ಯೋಚಿಸುತ
ರಾಮಂಗೆ ಪಟ್ಟಾಭಿಷೇಕವನು ಗೈಯ್ಯುವುದು
ಎನ್ನುತಲಿ ಸಿದ್ಧತೆಯನೆಲ್ಲವನು ಮಾಡುತಿರೆ
ಕೈಕೆಯಿಯು ದಶರಥಗೆ ವರವೆರಡ ಬೇಡಿದಳು ॥೨೧೫೨॥

ರಾಘವನು ಹದಿನಾಲ್ಕು ವರುಷಗಳ ಪರ್ಯಂತ
ಕಾನನಕೆ ತೆರಳುವುದು ಇನ್ನೊಂದು ವರದಲ್ಲಿ
ತನ್ನಯಾ ಮಗನಿಂಗೆ ಭರತಂಗೆ ರಾಜ್ಯವನು
ಈಯುವುದು ಎನ್ನುತಲಿ ವರವೆರಡ ಬೇಡಿಹಳು ॥೨೧೫೩॥

ಕಿವಿಯೊಳಗೆ ಕಾದಿರುವ ಸೀಸದಾ ಎರಕವನು
ಹೊಯ್ದಂತೆ ಕೇಳುತಲಿ ದಶರಥನು ಬಿದ್ದಿಹನು
ಶ್ರೀರಾಮ ಜಾನಕಿಯು ಲಕ್ಷ್ಮಣರ ಸಹಿತದಲಿ
ವಚನವನು ನಡೆಸಲಿಕೆ ಕಾನನಕೆ ತೆರಳಿದನು ॥೨೧೫೪॥

ರಾಘವನ ವಿರಹದಲಿ ದಶರಥನು ಶೋಕಿಸುತ
ಹಾ ರಾಮ ಎನ್ನುತಲಿ ಪ್ರಾಣವನು ತೊರೆದಿಹನು
ಭರತಸತಿ ದುಃಖದಲಿ ರಾಮನಾ ಪಾದುಕೆಯ
ತಂದಿರಿಸಿ ಪೂಜಿಸುತ ರಾಜ್ಯವನು ಆಳಿದನು ॥೨೧೫೫॥

ದಂಡಕ ಅರಣ್ಯದಲಿ ದಶಶಿರನ ಸೋದರಿಯು
ಶೂರ್ಪಣಖೆ ರಕ್ಕಸಿಯು ರಾಘವನ ನೋಡುತಲಿ
ಮೋಹಿಸಲು ಲಕ್ಷ್ಮಣನು ಮೂಗನ್ನು ಕೊಯ್ಯುತಿರೆ
ರೋದಿಸುತಲೈತಂದು ರಾವಣಗೆ ನುಡಿದಿಹಳು ॥೨೧೫೬॥

ಚತುರಂಗ ಬಲಸಹಿತ ಖರದೂಷಣಾದಿಗಳು
ಯುದ್ಧವನು ಗೈಯ್ಯುತಿರೆ ರಾಘವನು ವಧಿಸಿದನು
ಮಾರೀಚ ಅಸುರನನು ಚಿಗರೆಯಾ ರೂಪದಲಿ
ರಾಮನಾ ಆಶ್ರಮಕೆ ರಾವಣನು ಕಳುಹಿದನು ॥೨೧೫೭॥

ಜಾನಕಿಯು ಜಿಂಕೆಯನು ನೋಡುತಲಿ ಮೋಹಿಸಲು
ಶ್ರೀರಾಮ ಜಿಂಕೆಯನು ಬೆನ್ನಟ್ಟಿ ತೆರಳುತಿರೆ
ಸೌಮಿತ್ರಿ ರಾಘವನ ಅರಸುತಲಿ ನಡೆದಿರಲು
ರಾವಣನು ಸೀತೆಯನು ಅಪಹರಣ ಗೈದಿಹನು ॥೨೧೫೮॥

ಶ್ರೀರಾಮ ನೈತಂದು ಸೀತೆಯನು ಕಾಣದಲೆ
ಶೋಕಿಸುತ ವನವನವನೆಲ್ಲವನು ಶೋಧಿಸುತ
ಕಿಷ್ಕಂಧೆಗೈತರಲು ಸುಗ್ರೀವ ಕಪಿವರನ
ಕಾಣುತಲಿ ಸ್ನೇಹದಲಿ ಸಖ್ಯವನು ಬೆಳೆಸಿದನು ॥೨೧೫೯॥

ಸಾಗರವ ಲಂಘಿಸುತ ಕಪಿವರನು ಮಾರುತಿಯು
ಅಶೋಕದ ವನದೊಳಗೆ ಜಾನಕಿಯ ಕಾಣುತಲಿ
ಶ್ರೀರಾಮ ದೂತನಿಹೆ ಎನ್ನುತಲಿ ನುಡಿಯುತಲಿ
ಶ್ರೀರಾಮನಂಕಿತದ ಉಂಗುರವನಿತ್ತಿಹನು ॥೨೧೬೦॥

ವನದೊಳಿಹ ತರುಗಳನು ಮಾರುತಿಯು ಧ್ವಂಸಿಸಲು
ರಾವಣನ ಸೈನಿಕರು ಮಾರುತಿಯ ಬಂಧಿಸುತ
ಬಾಲಕ್ಕೆ ಬೆಂಕಿಯನ್ನು ಇಕ್ಕುತಿರೆ ಕಲಹವನು
ಲಂಕೆಯನು ದಹಿಸುತಲಿ ಭಸ್ಮವನು ಮಾಡಿಹನು ॥೨೧೬೧॥

ರಾಘವಗೆ ಜಾನಕಿಯ ವೃತ್ತಾಂತವರುಹುತಿರೆ
ಸುಗ್ರೀವ ಜಾಂಬುವಂತ ಹನುಮಂತ ಅಂಗದನ
ವಾನರರ ಸೈನ್ಯದಾ ಸಹಿತದಲಿ ಸಾಗರಕೆ
ಸೇತುವೆಯ ಕಟ್ಟುತಲಿ ಕಡಲನ್ನು ದಾಂಟುತಲಿ ॥೨೧೬೨॥

ರಾಘವನು ಲಂಕೆಯನು ಮುತ್ತುತಲಿ ರಾವಣನ
ಅಗಣಿತದ ಸೈನಿಕರ ನಾಯಕರ ಕೊಂದಿಹನು
ದಶಶಿರನ ಪುತ್ರನನಾ ಇಂದ್ರಜಿತು ವೀರನನೆ
ಲಕ್ಷ್ಮಣನು ಶೌರ್ಯದಲಿ ಸಂಹಾರ ಗೈದಿಹನು ॥೨೧೬೩॥

ರಾವಣನ ಸೋದರನ ಆ ಕುಂಭಕರ್ಣನಾ
ಶಿರವನ್ನು ಶ್ರೀರಾಮ ಆಗಸಕೆ ನೆಗೆಸಿಹನು
ಬಂಧುಗಳು ಬಾಂಧವರು ನಾಯಕರು ಮಡಿಯುತಿರೆ
ರಾವಣನು ಕೋಪದಲಿ ಕೆಂಡವನು ಕಾರುತಲಿ ॥೨೧೬೪॥

ರಥವೇರಿ ಯುದ್ಧಕ್ಕೆ ಬರುತಿರಲು ರಾಘವನು
ಆದಿತ್ಯ ಮಂತ್ರವನು ಜಪಿಸುತಲಿ ಶಕ್ತಿಯನು
ಪಡೆಯುತಲಿ ದಿವ್ಯಮಿಹ ಬ್ರಹ್ಮಾಸ್ತ್ರ ಬಿಡುತಲಿರೆ
ದಶಶಿರನ ದಶಶಿರಗಳುರುಳುತಲಿ ಬಿದ್ದಿಹವು ॥೨೧೬೫॥

ವಿಭೀಷಣಗೆ ಲಂಕೆಯಾ ಪಟ್ಟವನು ಕಟ್ಟುತಲಿ
ರಾಘವನು ಜಾನಕಿಯ ಲಕ್ಷ್ಮಣನ ಸಹಿತದಲಿ
ಸಾಕೇತಕೈತರುತ ಸಿಂಹಾಸನೇರುತಿರೆ
ಪಟ್ಟಾಭಿಷೇಕವನು ಗೈದಿಹನು ಸಂತಸದಿ ॥೨೧೬೬॥

ಈ ಪರಿಯ ಜಗದೊಡೆಯ ದೇವಾಧಿ ದೇವನಾ
ಪರಮಪುರುಷೋತ್ತಮನು ಮಹವಿಷ್ಣು ನರಯಣನು
ನರನಾಗಿ ಜನಿಸುತಲಿ ಕಷ್ಟಗಳ ಭೋಗಿಸಿದ
ಇನ್ನುಳಿದ ಹುಳುಜಂತು ನರರುಗಳ ಪಾಡೇನು ॥೨೧೬೭॥

ಈ ತೆರದಿ ಪಾವನನ ರಾಮನಾ ಚರಿತೆಯನು
ವಿಸ್ತರದಿ ಪೇಳುತಲಿ ಧರ್ಮಜನ ಮನದೊಳಿಹ
ದುಗುಡವನು ಚಿಂತೆಯನು ಕಳವಳವ ಕಳೆಯುತಲಿ
ಸಾಂತ್ವನವ ಗೊಳಿಸುತಲಿ ಮುನಿವರನ್ನು ನುಡಿದಿಹನು ॥೨೧೬೮॥

**ಜಗದ ಶೀಲ ನಾರಿಯರ ಮಸ್ತಕ ಶಿರೋಮಣಿಯು**
**ಸಾವಿತ್ರಿ ಸಾಧ್ವಿಯಳ ಚರಿತೆಯನು ಪೇಳಿದನು**

ಕೇಳುವುದು ಧರ್ಮಜನೆ ಮುನ್ನಿನಲಿ ಜಗದೊಳಿಹ
ನಾರಿಯರ ಮಸ್ತಕದ ಮಣಿ ಎನಿಪ ಪಾವನಳ
ಸಾವಿತ್ರಿ ಸಾಧ್ವಿಯಳ ದಿವ್ಯದಾ ಚರಿತೆಯನು
ಎನ್ನುತಲಿ ವಿಸ್ತರದಿ ಚರಿತೆಯನು ಪೇಳಿದನು ॥೨೧೬೯॥

ಕೇಳುವುದು ಧರ್ಮಜನೆ ಮದ್ರದಾ ದೇಶವನು
ಆಳುತ್ತಲಿರುತಿರ್ದ ಅಶ್ವಪತಿ ಎಂಬರಸು
ಸಂತಾನವಿಲ್ಲದೆಯೆ ವ್ರತನಿಯಮ ಗೈಯುತಲಿ
ಸಾವಿತ್ರಿ ಮಂತ್ರದಾ ಜಪವನ್ನು ಗೈದಿಹನು ॥೨೧೭೦॥

ಭಕುತಿಯಲಿ ಜಪಗೈಯ್ಯೆ ಓರ್ವಳಾ ಪುತ್ರಿಯನು
ಪಡೆಯುತಿರೆ ಸಾವಿತ್ರಿ ಎಂಬುವಾ ಹೆಸರಿಡಲು
ದಿನದಿನದಿ ಸಿತಪಕ್ಷ ಚಂದಿರನ ಪರಿಯಲ್ಲಿ
ಚೆಲುವಿನಾ ಸೌಂದರ್ಯ ರೂಪದಲಿ ಬೆಳೆದಿಹಳು ॥೨೧೭೧॥

ವರಷಗಳು ಕಳೆಯುತಿರೆ ಯೌವನದ ಲಾವಣ್ಯ
ಸೊಬಗಿನಲಿ ಮೆರೆಯುತಿರೆ ರಾಜರಾ ಕುವರರು
ಈಕೆಯಾ ಅಪ್ರತಿಮ ಸೌಂದರ್ಯ ನೋಡುತಲಿ
ಧರೆಗಿಳಿದು ಬಂದಿರುವದೇವತೆಯು ಇವಳಿಹಳು ॥೨೧೭೨॥

ಇವಳನ್ನು ವರಿಸಲಿಕೆ ನಾವುಗಳಯೋಗ್ಯರು
ಎನ್ನುತಲಿ ಒಪ್ಪದಿರೆ ಸಾವಿತ್ರಿ ತಾನೆಯೇ
ವರನನ್ನು ಹುಡುಕುವೆನು ಎನ್ನುತಲಿ ಅಲೆಯುತಲಿ
ದೇಶಗಳ ವನವನವ ಆಶ್ರಮಗಳರಸಿದಳು ॥೨೧೭೩॥

ಒಂದುದಿನ ನಾರದರು ಐತರಲು ಅಶ್ವಪತಿ
ಸಾವಿತ್ರಿ ಸುತೆಯನ್ನು ಕರೆಸುತಲಿ ಆವನನು
ವರನನ್ನು ಮೆಚ್ಚಿರುವೆ ಎಂಬುದನು ಹೇಳುವುದು
ಎನ್ನುತಲಿ ನುಡಿಯುತಿರೆ ಸಾವಿತ್ರಿ ನುಡಿದಿಹಳು ॥೨೧೭೪॥

ಆ ಸಾಲ್ವ ದೇಶದಾ ದ್ಯುಮತ್ಸೇನ ನೃಪನನ್ನು
ಶತ್ರುಗಳು ಮುತ್ತುತಲಿ ರಾಜ್ಯವನು ಕೊಳ್ಳುತಿರೆ
ಧರಣಿಪನು ಸತಿಸುತರ ಸಹಿತದಲಿ ತೆರಳುತಲಿ
ಕಾನನವ ಸೇರುತಲಿ ಆಶ್ರಮದೊಳಿರುತಿಹನು ॥೨೧೭೫॥

ಈಗಲಾ ಅಂಧನೃಪ ಕ್ಷತ್ರಿಯ ದ್ಯುಮತ್ಸೇನ
ಭೂಪತಿಯ ಪುತ್ರನಾ ವರಸತ್ಯವಾನನು
ನುತಚರಿತ ಸದ್ಗುಣಿಯು ಸುಂದರ ಸುಶೀಲನು
ಅವನನ್ನು ಮೆಚ್ಚಿಹೆನು ಎಂದಿಹಳು ಸಾವಿತ್ರಿ ॥೨೧೭೬॥

ಆಗಲಾ ನಾರದರು ತಪ್ಪನ್ನು ಮಾಡಿರುವೆ
ಆ ಸತ್ಯವಾನನು ಅಲ್ಪಾಯು ಇರುತಿಹನು
ಇಂದಿನಲಿ ವರುಷೊಂದು ಪರ್ಯಂತ ಬದುಕುವನು
ಬೇರೊಬ್ಬ ವರನನ್ನು ಹುಡುಕುವುದು ಎಂದಿಹನು ॥೨೧೭೭॥

ಆ ಸತ್ಯವಾನನನು ಮನಸಾರೆ ಮೆಚ್ಚಿಹೆನು
ಅನ್ಯರನು ನಾನೆಂದು ವರಿಸದಿಹೆ ಎನ್ನುತಲಿ
ಸಾವಿತ್ರಿ ನುಡಿಯುತಿರೆ ದೃಢವಾಗಿ ನಾರದರು
ನೃಪನಿಂಗೆ ಮದುವೆಯನು ಗೈಯ್ಯಲಿಕೆ ತಿಳುಹಿದರು ॥೨೧೭೮॥

ಬಳಿಕಲಾ ನೃಪವರನು ಅಶ್ವಪತಿ ವೈಭವದಿ
ಆ ಸತ್ಯವಾನನಿಗೆ ಸಾವಿತ್ರಿ ಸುತೆಯನ್ನು
ಈಯುತಲಿ ಸಂಭ್ರಮದಿ ಮದುವೆಯನು ಮಾಡುತಲಿ
ಒಡವೆಗಳ ವಸ್ತುಗಳ ಸಹಿತದಲಿ ಕಳುಹಿದನು ॥೨೧೭೯॥

ಪತಿ ಸತ್ಯವಾನನಾ ಚಿಂತೆಯಲಿ ಕಾನನಕೆ
ಆಶ್ರಮಕೆ ಬರುತಿರಲು ಸ್ವರ್ಣದಾ ಒಡವೆಗಳ
ಪೀತಾಂಬರಾದಿಗಳ ಕಳಚುತಲಿ ತೆಗೆಯುತಲಿ
ನಾರಿನಾ ವಸ್ತ್ರವನು ರವಕೆಯನು ತೊಟ್ಟಿಹಳು ॥೨೧೮೦॥

ಮುನಿವಧುವ ಪರಿಯಲ್ಲಿ ಜಡೆಯನ್ನು ಕಟ್ಟುತಲಿ
ಹೂವನ್ನು ಮುಡಿಯುತಲಿ ಆಶ್ರಮದ ಕಸಗುಡಿಸಿ
ಗಿಡಗಳಿಗೆ ನೀರೆರೆದು ಗಂಡನಾ ಸೇವೆಯನು
ಶ್ರದ್ಧೆಯಲಿ ಅನವರತ ಗೈಯ್ಯುತಲಿ ಇರ್ದಿಹಳು ॥೨೧೮೦॥

ದಿವಸಗಳು ಉರುಳುತಿರೆ ಮಾಸಗಳು ತೆರಳುತಿರೆ
ವರುಷಕ್ಕೆ ನಾಲ್ಕುದಿನ ಇರುತಿರಲು ಸಾವಿತ್ರಿ
ತ್ರಿರಾತ್ರ ಎಂಬುವಾ ವ್ರತವನ್ನು ಹಿಡಿಯುತಲಿ
ಉಪವಾಸವಿರುತಿರ್ದು ಜಪತಪವ ಗೈದಿಹಳು ॥೨೧೮೨॥

ನಾಲ್ಕನೆಯ ದಿವಸದಲಿ ಸ್ನಾನವನು ಗೈಯ್ಯುತಲಿ
ಋಷಿವರರ ಮುನಿವರರ ಸೇವೆಯನು ಗೈಯ್ಯುತಿರೆ
'ದೀರ್ಘಸುಮಂಗಲೀಭವ' ಎನ್ನುತಲಿ ಹರಸುತಿರೆ
ನಿಜವಾಗಲೆನ್ನುತಲಿ ಮನದೊಳಗೆ ನಲಿದಿಹಳು ॥೨೧೮೩॥

ಸೌದೆಯನು ತರಲೆಂದು ವರಸತ್ಯವಾನನು
ಕೊಡಲಿಯನು ಕೊಳ್ಳುತಲಿ ಕಾನನಕೆ ನಡೆದಿರಲು
ಈ ದಿವಸ ಕಾನನಕೆ ತೆರಳುವುದು ಬೇಡೆಂದು
ಸಾವಿತ್ರಿ ದೈನ್ಯದಲಿ ಪ್ರಾರ್ಥನೆಯ ಗೈದಿಹಳು ॥೨೧೮೪॥

ತಲೆಯದುವೆ ಬೀಳುವಾ ಎಡೆಯಲ್ಲಿ ಕಾಲುಗಳು
ಎಳೆದೊಯ್ವ ಪರಿಯಲ್ಲಿ ಆ ಸತ್ಯವಾನನು
ಕಾನನಕೆ ತೆರಳುತಿರೆ ಸಾವಿತ್ರಿ ಪತಿವರನ
ಬೆನ್ನಿನಲಿ ಜೊತೆಯಲ್ಲಿ ಅಡವಿಯಲಿ ನಡೆದಿಹಳು ॥೨೧೮೫॥

ಮರಗಳನು ಕಡಿಯುತಲಿ ಕಟ್ಟಿಗೆಯ ನೂಕುತಲಿ
ಬಿಸಿಲಿನಲಿ ಬಳಲುಳಲಿ ಆ ಸತ್ಯವಾನನು
ಮೂರ್ಛೆಯನು ಹೊಂದುತಲಿ ಧರೆಯಲ್ಲಿ ಬೀಳುತಿರೆ
ಸಾವಿತ್ರಿ ನೋಡುತಲಿ ಕಳವಳವಗೊಳ್ಳುತಲಿ ॥೨೧೮೬॥

ಆ ಸಮಯ ಬಂದಿಹುದು ಎನ್ನುತಲಿ ಅರಿಯುತಲಿ
ಪತಿವರನ ಆ ಸತ್ಯವಾನನಾ ಶಿರವನ್ನು
ತೊಡೆಯಲ್ಲಿ ಕೊಳ್ಳುತಲಿ ಗಾಳಿಯನು ಬೀಸುತಲಿ
ಶೈತ್ಯೋಪಚಾರವನು ಗೈದಿಹಳು ಭರದಲ್ಲಿ ॥೨೧೮೭॥

ಏಕಾಗ್ರ ಚಿತ್ತದಲಿ ಧ್ಯಾನಿಸುತ ಮನದೊಳಹ
ಒಳಗಣ್ಣ ತೆರಯುತಿರೆ ಕರಿಕಾಯ ಕಾಂತಿಯಲಿ
ತೇಜದಲಿ ಹೊಳೆಯುತಲಿ ಕರದೊಳಗೆ ಪಾಶವನು
ಹಿಡಿಯುತಲಿ ನಿಂತಿರ್ದ ಯಮನನ್ನು ಕಂಡಿಹಳು ॥೨೧೮೮॥

ಹೇ ಯಮನೆ ಗಂಡನಾ ಪ್ರಾಣವನು ಕೊಳ್ಳದಿರು
ಪತಿಯನ್ನು ತೊರೆಯುತಲಿ ಜೀವಂತ ನಾನಿರೆನು
ಒಡಲೆರಡು ಪ್ರಾಣೊಂದು ಎಂಬಂತೆ ನಾವಿಹೆವು
ಪಾಶವನು ಎಸೆಯದಿರು ಎಂದಿಹಳು ಸಾವಿತ್ರಿ ॥೨೧೮೯॥

ಅವರವರ ಆಯುಷ್ಯ ಕರ್ಮಕ್ಕೆ ಭಾಗ್ಯಕ್ಕೆ
ಅವರವರು ಭಾಗಿಗಳು ನಿನ್ನಯಾ ಪತಿವರನ
ಆಯುಷ್ಯ ಮುಗಿದಿಹುದು ಪ್ರಾಣವನು ಕೊಂಡೊಯ್ವೆ
ಎನ್ನುತಲಿ ಯಮಧರ್ಮ ಪಾಶವನು ಎಸೆಯುತಲಿ ॥೨೧೯೦॥

ಆ ಸತ್ಯವಾನನಾ ಪ್ರಾಣವನು ಸೆಳೆಯುತಲಿ
ಒಯ್ಯುತಿರೆ ಸಾವಿತ್ರಿ ಸೂಕ್ಷ್ಮದಾ ದೇಹದಲಿ
ಯಮನೊಡನೆ ಸಾಗುತಿರೆ ನೀ ಹೋಗಿ ಗಂಡನಾ
ಕ್ರಿಯೆಗಳನು ಗೈಯ್ಯುವುದು ಎಂದಿಹನು ಯಮಧರ್ಮ ॥೨೧೯೧॥

ಎನ್ನಯಾ ಪತಿವರನು ಎಲ್ಲಿಹನೊ ಅಲ್ಲಿಯೇ
ಸತಿಯಾದ ನಾನಿಹುದು ಧರ್ಮವದು ಶೃತಿಯಿಹುದು
ಎನ್ನಯಾ ಪತಿಸೇವೆ ಪುಣ್ಯದಾ ಬಲದಿಂದ
ಈವರೆಗೆ ನಿನ್ನ ಜೊತೆ ಬಂದಿಹೆನು ಎಂದಿಹಳು ॥೨೧೯೨॥

ಎನ್ನಯಾ ಪತಿವರನ ದೇಹವನು ಆಶಿಸೆನು
ಆತನಾ ದಿವ್ಯದಾ ಆತ್ಮವನು ಆಶಿಪೆನು
ಎನ್ನಾತ್ಮ ಪತಿಯಾತ್ಮ ಒಂದಾಗಿ ಬೆಸೆದಿಹವು
ಬಿಡಿಸಲಿಕೆ ಅಸದಳವು ಎಂದಿಹಳು ಸಾವಿತ್ರಿ ॥೨೧೯೩॥

ಇಂದ್ರಿಯದ ನಿಗ್ರಹದಿ ಆತ್ಮವನು ಅರಿಯುತಲಿ
ಈ ವಿಶ್ವ ಮೂಲವನು ಬ್ರಹ್ಮನನು ಅರಿಯುವುದು
ವಿಜ್ಞಾನವೆನಿಸುವುದು ಇದನರಿಯಲೋಸುಗವೆ.
ಮುನಿವರರು ಋಷಿವರರು ತಪಗೈವರೆಂದಿಹಳು ॥೨೧೯೪॥

ಈ ಪರಿಯ ಆತ್ಮದಾ ಧರ್ಮವನು ಇಚ್ಛಿಸುವೆ
ಎನ್ನಯಾ ಪತಿವರನ ಪ್ರಾಣವನು ಬಿಟ್ಟುಬಿಡು
ಅವನಿರದೆ ಕ್ಷಣವೊಂದು ಜೀವಿಸೆನು ಎನ್ನುತಲಿ
ದೈನ್ಯದಲಿ ಸಾವಿತ್ರಿ ಪ್ರಾರ್ಥನೆಯ ಗೈದಿಹಳು ॥೨೧೯೫॥

ಆಗಲಾ ಯಮಧರ್ಮ ಬೆರಗಾಗೆ ನುಡಿದಿಹನು
ಸತ್ತಿರುವ ಗಂಡನಾ ಜೊತೆಯಲ್ಲಿ ಬಂದಿರುವ
ಸ್ತ್ರೀಯಳನು ಇಲ್ಲಿಯಾ ಪರ್ಯಂತ ಕಂಡಿಲ್ಲ
ನಿನ್ನಯಾ ಆತ್ಮದಾ ಧರ್ಮವನು ಮೆಚ್ಚಿಹೆನು ॥೨೧೯೬॥

ನಿನಗಿಷ್ಟವಾಗಿರುವ ವರವನ್ನು ಬೇಡುವುದು
ಪತಿಯನ್ನು ಕೊಡು ಎಂದು ಒಂದನ್ನು ಕೇಳದಿರು
ಎನ್ನುತಲಿ ಯಮಧರ್ಮ ನುಡಿಯುತಿರೆ ವರಸಾಧ್ವಿ
ಸಾವಿತ್ರಿ ಸಂತಸದಿ ವರವನ್ನು ಬೇಡಿವಳು ॥೨೧೯೭॥

ಎನ್ನಯಾ ಮಾವಯ್ಯ ಅಂಧನಿಹ ನೃಪವರನು
ರಾಜ್ಯವನು ಕಳಕೊಂಡು ವನದೊಳಗೆ ವಾಸಿಪನು
ದೃಷ್ಟಿಯನು ರಾಜ್ಯವನು ಎರಡನ್ನು ಮಾವಂಗೆ
ಈಯುವುದು ಎನ್ನುತಲಿ ಸಾವಿತ್ರಿ ನುಡಿದಿಹಳು ॥೨೧೯೮॥

ನೀ ಕೇಳ್ದ ವರವನ್ನು ಇತ್ತಿಹೆನು ಮತ್ತೆಯೂ
ನಿನಗಾಗಿ ಬೇಕಾದ ವರವನ್ನು ಕೇಳುವುದು
ಗಂಡನಾ ಪ್ರಾಣವನು ಒಂದನ್ನು ಕೇಳದೆಯೆ
ಬೇರೆಯನು ಕೇಳುವುದು ಎಂದಿಹನು ಯಮಧರ್ಮ ॥೨೧೯೯॥

ಎನ್ನಯಾ ವಂಶವನು ಉದ್ಧರಿಪ ವರ್ಧಿಸುವ
ಔರಸದ ಸುತರುಗಳು ಎನ್ನಯಾ ಪತಿಯಿಂದ
ಎನ್ನಯಾ ಉದರದಲಿ ಜನಿಪಂತೆ ವರವನ್ನು
ಈಯುವದು ಎನ್ನುತಲಿ ಸಾವಿತ್ರಿ ನುಡಿದಿಹಳು ॥೨೨೦೦॥

ನಿನ್ನಯಾ ಉದರದಲಿ ಮಕ್ಕಳನು ನೀ ಪಡೆವೆ
ನಿನ್ನಿಷ್ಟ ವರವನ್ನು ಇತ್ತಿಹೆನು ಮರುಳುವುದು
ಎನ್ನುತಲಿ ಯಮರಾಯ ನುಡಿಯುತಿರೆ ಸಾವಿತ್ರಿ
ಸಂತಸವ ಗೊಳ್ಳುತಲಿ ಆತಕನಿಗುಸುರಿದಳು ॥೨೨೦೧॥

ಪತಿಯಿರದೆ ಸುತರುಗಳು ಅವರೆಂತು ಜನಿಸುವರು
ಎನ್ನಯಾ ಪತಿಯನ್ನು ಈಯುವುದು ಇಲ್ಲದಿರೆ
ನಿನ್ನಯಾ ವರವದುವೆ ನಿಷ್ಫಲವು ಹುಸಿಯಿಹುದು
ಎನ್ನುತಲಿ ಸಾವಿತ್ರಿ ಯಮಧರ್ಮಗುಸುರಿದಳು ॥೨೨೦೨॥

ಎನ್ನಯಾ ವರವದುವೆ ಹುಸಿಯಾಗದೆಂದಿಗೂ
ನಿನ್ನಯಾ ಪತಿವರನ ಪ್ರಾಣವನು ಬಿಟ್ಟಿಹೆನು
ಜಗದಖಿಲ ನಾರಿಯರ ಮಸ್ತಕ ಶಿರೋಮಣಿಯು
ವರಸಾಧ್ವಿ ಪತಿವ್ರತೆಯು ನೀನಿರುವೆ ಎನ್ನುತಲಿ ॥೨೨೦೩॥

ಪಾಶವನು ಕೊಳ್ಳುತಲಿ ವರಸತ್ಯವಾನನಾ
ಪ್ರಾಣವನು ಬಿಡುತಲಿರೆ ಸಾವಿತ್ರಿ ಎರಗುತಿರೆ
ಯಮಧರ್ಮ ಹರಸುತಲಿ ನಿಜದೆಡೆಗೆ ತೆರಳುತಿರೆ
ಸಾವಿತ್ರಿ ಸೂಕ್ಷ್ಮದಾ ದೇಹವನು ತೊರೆಯುತಲಿ ॥೨೨೦೪॥

ಜಡದೇಹದೊಳಗಡೆಗೆ ಸೇರುತಿರೆ ಆ ಕ್ಷಣದಿ
ಆ ಸತ್ಯವಾನನು ನಿದ್ರೆಯನು ತೊರೆಯುತಲಿ
ಮೇಲಕ್ಕೆ ಏಳ್ವಂತೆ ಏಳುತಿರೆ ಈರ್ವರೂ
ದಂಪತಿಗಳಾಶ್ರಮಕೆ ಹರುಷದಲಿ ಐತಂದು ॥೨೨೦೫॥

ನಡೆದಿರುವ ವೃತ್ತಾಂತವೆಲ್ಲವನು ಅರುಹುತಿರೆ
ದ್ಯುಮತ್ಸೇನ ನೃಪವರಗೆ ದೃಷ್ಟಿಯದು ಬಂದಿಹುದು
ಆ ಸಾಲ್ವ ದೇಶದಾ ಜನರುಗಳು ಐತಂದು
ತಮ್ಮಯಾ ರಾಜನನು ಮಂತ್ರಿಗಳು ಕೊಂದಿಹರು ॥೨೨೦೬॥

ನೀವುಗಳು ಮರಳುತಲಿ ರಾಜ್ಯವನು ಆಳುವುದು
ಎನ್ನುತಲಿ ಪ್ರಾರ್ಥಿಸಲು ದ್ಯುಮತ್ಸೇನ ನೃಪವರನು
ನಿಜರಾಜ್ಯಕೈತಂದು ಆ ಸತ್ಯವಾನಂಗೆ
ರಾಜ್ಯವನು ಇತ್ತಿಹನು ಪಟ್ಟಾಭಿಷೇಕದಲಿ ॥೨೨೦೭॥

ಬಳಿಕಲಾ ಸಾವಿತ್ರಿ ಶತಸುತರ ಪಡೆದಿಹಳು
ಆಕೆಯಾ ಪಿತನಾದ ಅಶ್ವಪತಿ ಧರಣಿಪತಿ
ಪುತ್ರರನು ನೂರರನು ಪಡೆಯುತಲಿ ನಲಿದಿಹನು
ಸಕಲರೂ ಸಂಭ್ರಮದಿ ಉತ್ಸವವ ಗೈದಿಹರು ॥೨೨೦೮॥

ಈ ಪರಿಯೆ ಸಾಧ್ವಿಯಳು ಸಾವಿತ್ರಿ ಪತಿವ್ರತೆಯು
ಹುಟ್ಟಿರುವ ಕುಲವನ್ನು ಕೊಟ್ಟಿರುವ ಕುಲವನ್ನು
ಉದ್ಧಾರಗೈದಿಹಳು ಜಗದಖಿಲ ಸ್ತ್ರೀಯರಾ
ರತುನಳಾ ಕಥೆಯನ್ನು ವಿಸ್ತರದಿ ಪೇಳಿದನು ॥೨೨೦೯॥

ಸಾವಿತ್ರಿ ಪರಿಯಲ್ಲಿ ನಿಮ್ಮಯಾ ಮಹಸತಿಯು
ದ್ರೌಪದಿಯು ನಿಮ್ಮೊಡನೆ ವನವಾಸ ಭೋಗಿಸುತ
ನಿಮ್ಮಯಾ ಸೇವೆಯನು ಅನವರತ ಗೈಯ್ಯುತಲಿ
ನಿಮ್ಮಯಾ ಕುಲವನ್ನು ಉದ್ಧರಿಪಳೆಂದಿಹನು ॥೨೨೧೦॥

ಈ ಪರಿಯೆ ಮಾರ್ಕಂಡೇಯ ಸಾವಿತ್ರಿ ಕಥೆಯನ್ನು
ಪೇಳುತಿರೆ ಧರ್ಮಜನು ಕೇಳುತಲಿ ಸಂತಸದಿ
ತನುಪುಳಕಗೊಳ್ಳುತಲಿ ಮುನಿವರಗೆ ನಮಿಸುತಿರೆ
ಹರಸುತಲಿ ಮುನಿವರನು ತೆರಳಿದನು ಆಶ್ರಮಕೆ ॥೨೨೧೧॥

ಹೇಕೃಷ್ಣ ಕೇಶವನೆ ವಾಮನ ತ್ರಿವಿಕ್ರಮನೆ
ಯಾದವನೆ ಮಾಧವನೆ ನಿನ್ನನ್ನು ನಂಬಿಹೆವು
ಅನವರತ ರಕ್ಷಿಪುದು ಎನ್ನುತಲಿ ಧರ್ಮಜನು
ದ್ವಾರಕಾಧೀಶನನ ನರಯಣನ ನೆನೆದಿಹನು ॥೨೨೧೨॥

**ವಿಪ್ರನಾ ಅರಣಿಯನು ತಂದಿತ್ತ ಧರ್ಮಜನು ।**
**ಸತ್ತಿರುವ ಸೋದರರ ನೆತ್ತಿದನು ಪ್ರಾಣದಲಿ ॥**

ವನವಾಸದವಧಿಯದು ಮುಗಿಯಲಿಕೆ ಬಂದಿಹುದು
ವರುಷಗಳು ಹನ್ನೊಂದು ಮೇಲಾರು ಮಾಸಗಳು
ಕಳೆದಿಹವು ಇನ್ನೊಮ್ಮೆ ಕಷ್ಟಗಳು ತೊಲಗುವವು
ಎನ್ನುತಲಿ ಧರ್ಮಜನು ದಿನಗಳನು ನೂಕಿದನು ॥೨೨೧೩॥

ಒಂದು ದಿನ ಸಾರಂಗ ಮೃಗವೊಂದು ನುಗ್ಗುತಲಿ
ಆಶ್ರಮದೊಳಿರುತಿರುವ ಮುನಿವರನ ಸಹಿತದಲಿ ಓರ್ವನಾ
ಅರಣಿಯನು ಕೊಳ್ಳುತಲಿ ಆರಣ್ಯದಲಿ ಓಡುತಿರೆ
ಮುನಿವರನು ಮುನಿನಿಕರ ಸಹಿತದಲಿ ಕಳವಳದಿ ॥೨೨೧೪॥

ಧರ್ಮಜನ ಬಳಿಯಲ್ಲಿ ಐತಂದು ನೃಪವರನೆ
ನಿಮ್ಮಯಾ ದೋಷದಲಿ ಮೃಗವೊಂದು ಎನ್ನಯಾ
ಔಪಾಸನರಣಿಯನು ಕೊಳ್ಳುತಲಿ ಓಡಿಹುದು
ಎನ್ನಯಾ ವ್ರತನಿಯಮ ಭಂಗವದು ಆಗಿಹುದು ॥೨೨೧೫॥

ಮುನಿಗಳನು ರಕ್ಷಿಪುದು ಕ್ಷತ್ರಿಯರ ಧರ್ಮವಿದೆ
ಬೇಗನೇ ಮೃಗವನ್ನು ಹಿಡಿಯುತಲಿ ಎನ್ನಯಾ
ಅರಣಿಯನು ಈಯುವುದು ಇಲ್ಲದಿರೆ ಪಾಪವದು
ಸೋಂಕುವುದು ಎನ್ನುತಲಿ ಮುನಿವರನು ನುಡಿದಿಹನು ॥೨೨೧೬॥

ಆಗಲಾ ಧರ್ಮಜನು ಧನುವನ್ನು ಕೊಳ್ಳುತಲಿ
ಸೋದರರ ಸಹಿತದಲಿ ಕಾನನಕೆ ತೆರಳುತಲಿ
ಗಿಡಗಂಟಿ ಪೊದರುಗಳ ಕೊಳ ಕೆರೆಯು ತಡಿಗಳನು
ಅರಸುತಲಿ ಮೃಗವನ್ನು ಕಾಣದಲೆ ಸಾಗಿರಲು ॥೨೨೧೭॥

ದೂರದಲಿ ಮೃಗವನ್ನು ಕಾಣುತಲಿ ಧಾವಿಸುತ
ಹಿಡಿಯಲಿಕೆ ಯತ್ನಿಸಲು ಪುಟಿಯುತಲಿ ನೆಗೆಯುತಲಿ
ಗಾವುದವು ಗಾವುದವು ದೂರದಲಿ ಓಡುತಿರೆ
ಪಾಂಡವರು ಬೆಂಬತ್ತಿ ಬಳಲಿದರು ತೊಳಲಿದರು ॥೨೨೧೮॥

ಸನಿಹದಲಿ ಕಾಣುತಿರೆ ಹಿಡಿಯಲಿಕೆ ಯತ್ನಿಸಲು
ಭರದಲ್ಲಿ ಮಾಯವದು ಆಗುತಲಿ ಮರುಕ್ಷಣದಿ
ದೂರದಲಿ ಕಾಣುತಲಿ ಈ ಪರಿಯೆ ಬಹುಕಾಲ
ಮೃಗವನ್ನು ಹಿಡಿಯಲಿಕೆ ಯತ್ನವನು ಗೈದಿಹರು ॥೨೨೧೯॥

ಕೊನೆಯಲ್ಲಿ ಪಾಶವನು ಬೀಸುತಲಿ ಎಸೆಯುತಿರೆ
ಪಾಶವದು ಕೊಸರುತಲಿ ಆಗಸಕೆ ನೆಗೆಯುತಲಿ
ಮಿಂಚಿನಾ ಪರಿಯಲ್ಲಿ ಹೊಳೆಹೊಳೆದು ಆ ಮೃಗವು
ಮಾಯವದು ಆಗಿಹುದು ಮುಗಿಲಿನಾ ಅಂಚಿನಲಿ ॥೨೨೨೦॥

ಅಕಟಕಟ ಮುನಿವರಗೆ ಅರಣಿಯನು ನಾವೆಂತೀ
ಈಯುವುದು ಇಲ್ಲದಿರೆ ಪಾಪವದು ಸೋಂಕುವುದು
ಎನ್ನುತಲಿ ಧರ್ಮಜನು ಚಿಂತಿಸುತ ನವೆಯುತಲಿ
ಮರದಡಿಯೆ ಕುಳಿತಿಹನು ಸೋದರರ ಸಹಿತದಲಿ ॥೨೨೨೧॥

ಗುಡ್ಡಗಳ ಬೆಟ್ಟಗಳ ದಾಂಟುತಲಿ ಧಾವಿಸುತ
ಮೃಗವನ್ನು ಬೆನ್ನಟ್ಟಿ ಬಳಲುತಲಿ ದಣಿಯುತಲಿ
ನಾಲಗೆಯು ಒಣಗುತಲಿ ನೀರಡಿಕೆ ದಾಹದಲಿ
ಧರ್ಮಜನು ತೊಳಲುತಲಿ ನಕುಲಂಗೆ ನುಡಿದಿಹನು ॥೨೨೨೨॥

**ಕೊಳಜಲವ ಕುಡಿಯುತಲಿ ಕಲಿಭೀಮ ಅರ್ಜುನನು ।**
**ಮಾದ್ರಿಜರು ನಾಲ್ವರೂ ಪ್ರಾಣಗಳ ತೊರೆದಿಹರು ॥**

ಹೇ ನಕುಲ ಬೇಗನೇ ಸಾಗುತಲಿ ಸನಿಹದಲಿ
ಕೊಳವನ್ನು ಅರಸುತಲಿ ಪತ್ರದಲಿ ಜಲವನ್ನು
ತಹುದೆಂದು ನುಡಿಯುತಿರೆ ಆಕ್ಷಣದಿ ವರನಕುಲ
ಕಾನನದಿ ಕೊಳವನ್ನು ಅರಸುತಲಿ ನಡೆದಿಹನು ॥೨೨೨೩॥

ಕಮಲಗಳ ಶೋಭಿತದ ಸುಂದರ ಸರೋವರವ
ನೋಡುತಲಿ ಆ ನಕುಲ ಸಂತಸವ ಗೊಳ್ಳುತಲಿ
ಎನ್ನಯಾ ನೀರಡಿಕೆ ಮೊದಲಿಂಗೆ ಓಂಗಿಪೆನು
ಎನ್ನುತಲಿ ಹರುಷದಲಿ ಕೊಳದ ಬಳಿ ಬಂದಿಹನು ॥೨೨೨೪॥

ನೀರನ್ನು ಕೊಳ್ಳಲಿಕೆ ಬೊಗಸೆಯನು ಚಾಚುತಿರೆ
ಮಾದ್ರಿಜನೆ ಮೊದಲಿಂಗೆ ಎನ್ನಯಾ ಪ್ರಶ್ನೆಯನು
ಉತ್ತರಿಸಿ ಬಳಿಕಿನಲಿ ನೀರನ್ನು ಕುಡಿಯುವುದು
ಎನ್ನುತಲಿ ಆಕಾಶವಾಣಿಯದು ನುಡಿದಿಹುದು ॥೨೨೨೫॥

ನೀರಡಿಕೆ ದಾಹದಲಿ ಬಹುವಾಗಿ ಬಳಲಿಹೆನು
ಮೊದಲಿಂಗೆ ನೀರನ್ನು ಕುಡಿಯುತಲಿ ಬಳಿಕಿನಲಿ
ಉತ್ತರಿಪೆ ಎನ್ನುತಲಿ ನೀರನ್ನು ಕುಡಿಯುತಲಿ
ಆ ನಕುಲ ಪ್ರಾಣವನು ತೊರೆಯುತಲಿ ಬಿದ್ದಿಹನು ॥೨೨೨೬॥

ಬಹುಕಾಲ ಕಳೆಯುತಿರೆ ಆ ನಕುಲ ಬಾರದಿರೆ
ಮನದೊಳಗೆ ಏನಾಯ್ತೊ ಎನ್ನುತಲಿ ಚಿಂತಿಸುತ
ಕಳವಳದಿ ಸಹದೇವನನುಜನನು ಕರೆಯುತಲಿ
ನಕುಲನನು ಕರೆತಹುದು ಎನ್ನುತಲಿ ಅಟ್ಟಿದನು ॥೨೨೨೭॥

ಸಹದೇವ ಮಿಡುಕುತಲಿ ಭರದಲ್ಲಿ ಸಾಗುತಲಿ
ಸೌರಭವ ಸೂಸುತಿಹ ಸರಸಿರುಹ ನಿಕರಗಳ
ಶೋಭಿತದ ಸುಂದರ ಸರೋವರದ ಬಳಿಯಲ್ಲಿ
ಬರುತಿರಲು ಒರಗಿರುವ ನಕುಲನನು ಕಂಡಿಹನು ॥೨೨೨೮॥

ದೇಹದಲಿ ಆವುದೂ ಗಾಯವದು ಒಂದಿಲ್ಲ
ನಿದ್ರೆಯಲಿ ಮಲಗಿರುವ ಪರಿಯಲ್ಲಿ ತೋರುವನು
ಎನ್ನುತಲಿ ಚಕಿತದಲಿ ನೀರನ್ನು ಕುಡಿಯುತಲಿ
ನೋಡುವೆನು ಎನ್ನುತಲಿ ಮನದೊಳಗೆ ಯೋಚಿಸುತ ॥೨೨೨೯॥

ಸರಸಿಯಲಿ ಇಳಿಯುತಲಿ ಕೈಕಾಲು ಮುಖವನ್ನು
ತೊಳೆಯುತಲಿ ಕರದೊಳಗೆ ವಿಷಜಲವ ಕೊಳ್ಳುತಿರೆ
ಸಹದೇವ ಮೊದಲಿಂಗೆ ಎನ್ನಯಾ ಪ್ರಶ್ನೆಯನು ಉತ್ತರಿಸಿ
ನೀರನ್ನು ಕುಡಿಯುವುದು ಎಂದಿಹುದು ನಭವಾಣಿ ॥೨೨೩೦॥

ನಿನ್ನಯಾ ಸೋದರಗೆ ಒದಗಿರುವ ಗತಿಯನ್ನು
ನೀರನ್ನು ಕುಡಿದೊಡೆಯು ನೀ ಪಡೆವೆ ಎಂದಿಹುದು
ಆಕಾಶವಾಣಿಯನು ಲೆಕ್ಕಿಸದೆ ಸಹದೇವ
ಆ ಕಾಳಕೂಟದಾ ವಿಷಜಲವ ಕುಡಿಯುತಿರೆ ॥೨೨೩೧॥

ಪ್ರಾಣದಾ ಪಕ್ಷಿಯದು ದೇಹವನು ತೊರೆಯುತಲಿ
ಹಾರುತಿರೆ ಸಹದೇವ ಧರೆಗುರುಳಿ ಬಿದ್ದಿಹನು
ಬಹುಸಮಯ ಸವೆದರೂ ಸಹದೇವ ಬಾರದಿರೆ
ಧರ್ಮಜನು ಚಿಂತೆಯಲಿ ಮುಳುಗುತಲಿ ನುಡಿದಿಹನು ॥೨೨೩೨॥

ಹುಲಿಕರಡಿ ಸಿಂಹಗಳು ಮಾದ್ರಿಜರ ಒಡೆಯುತಲಿ
ಹರಿಯುತಲಿ ತಿನ್ನುತಲಿ ತೇಗಿದವೊ ಎನ್ನುತಲಿ
ಮಿಡುಕುತಲಿ ಸ್ವರ್ಗದಲಿ ಇರುತಿರುವ ಮಾದ್ರಿಯಳು
ತಾಯಿಯಳು ನೋಯುವಳು ಎಂದಿಹನು ಮನದೊಳಗೆ ॥೨೨೩೩॥

ಮೊದಲಿಂಗೆ ಎನ್ನಯಾ ಸೋದರರನೀರ್ವರನು
ಭೀಮನನು ಅರ್ಜುನನ ಕಳಿಸಿದಲೆ ತನ್ನಯಾ
ಮಕ್ಕಳನು ಆ ನಕುಲ ಸಹದೇವನೀರ್ವರನು
ಕಳಿಸಿದನು ಎನ್ನುತಲಿ ಶಪಿಸುವಳು ಎಂದಿಹನು ॥೨೨೩೪॥

ಹೇ ಪಾರ್ಥ ಬೇಗನೇ ಮಾದ್ರಿಜರನರಸುತಲಿ
ಕರೆತಹುದು ಎನ್ನುತಲಿ ಅರ್ಜುನನ ಅಟ್ಟುತಿರೆ
ವೇಗದಲಿ ಧಾವಿಸುತ ಗಂಧವನು ಬೀರುತಿಹ
ಮಾರುತನ ಪಥವಿಡಿದು ಕೊಳದ ಬಳಿ ಬಂದಿಹನು ॥೨೨೩೫॥

ಆ ಕೊಳದ ತೀರದಲಿ ವರನಕುಲ ಸಹದೇವ
ಸೋದರರು ಈರ್ವರೂ ಒರಗಿಹುದ ಕಾಣುತಲಿ
ದಾರಿಯಾ ಶ್ರಮವನ್ನು ನೀಗಲಿಕೆ ಹಾಯಾಗಿ
ನಿದ್ರೆಯಲಿ ಮಲಗಿರುವ ಪರಿಯಲ್ಲಿ ತೋರುವರು ॥೨೨೩೬॥

ಬಿಸಿಲಿನಾ ಧಗೆಯೊಳಗೆ ನಾಲಗೆಯು ಒಣಗಿಹುದು
ಜಲವನ್ನು ಈಂಟುತಲಿ ನೀರಡಿಕೆ ಹಿಂಗಿಪೆನು
ಎನ್ನುತಲಿ ಫಲುಗುಣನು ಸರಸಿಯೊಳು ಕಾಲಿರಿಸಿ
ಕರದೊಳಗೆ ಜಲವನ್ನು ಕುಡಿಯಲಿಕೆ ಕೊಳ್ಳುತಿರೆ ॥೨೨೩೭॥

ಹೇ ಪಾರ್ಥ ಎನ್ನಯಾ ಪ್ರಶ್ನೆಯನು ಉತ್ತರಿಸಿ
ನಂತರದಿ ಜಲವನ್ನು ಈಂಟುವುದು ಇಲ್ಲದಿರೆ
ನಿನ್ನಯಾ ಸೋದರರು ಈರ್ವರಿಗೆ ಒದಗಿರುವ
ಗತಿಯನ್ನು ನೀ ಪಡೆವೆ ಎಂದಿಹುದು ನಭವಾಣಿ ॥೨೨೩೮॥

ಆಕಾಶವಾಣಿಯನು ಲೆಕ್ಕಿಸದೆ ಫಲುಗುಣನು
ರಕ್ಕಸರ ಕುತಂತ್ರ ಮಾಯೆಯಿದು ಎನ್ನುತಲಿ
ನೀರನ್ನು ಕುಡಿಯುತಲಿ ನೋಡುವೆನು ಎನ್ನುತಲಿ
ಕೊಳದೊಳಿಹ ವಿಷಜಲವ ಫಲುಗುಣನು ಕುಡಿಯುತಿರೆ ॥೨೨೩೯॥

ಪ್ರಾಣದಾ ಪಕ್ಷಿಯದು ದೇಹವನು ತೊರೆಯುತಿರೆ
ಥರಥರನೆ ನಡುಗುತಲಿ ಫಲುಗುಣನು ಬಿದ್ದಿಹನು
ಮೂವರೂ ಸೋದರರು ಬಾರದಿರೆ ಧರ್ಮಜನು
ಚಿಂತೆಯಲಿ ಮುಳುಗುತಲಿ ಭೀಮನಿಗೆ ನುಡಿದಿಹನು ॥೨೨೪೦॥

ಹೇ ಭೀಮ ಎಲ್ಲರೊಳು ಬಲಯುತನು ನೀನಿರುವೆ
ಮೂವರೂ ಸೋದರರು ಬಾರದಲೆ ಚಿಂತಿಸುತ
ಕಳವಳವಗೊಂಡಿಹೆನು ಈ ಕ್ಷಣದಿ ತೆರಳುತಲಿ
ಅರಸುತಲಿ ಕರೆತಹುದು ಎನ್ನುತಲಿ ನುಡಿದಿಹನು ॥೨೨೪೧॥

ಭರದಲ್ಲಿ ಬಲಿಭೀಮ ಗದೆಯನ್ನು ಕೊಳ್ಳುತಲಿ
ಮಾರುತನಾ ವೇಗದಲಿ ಮಾರುತಜನು ಸಾಗುತಿರೆ
ಕೆಲಬಲನ ತರುಲತೆಯು ಕಿತ್ತೆಸೆದು ಬಿದ್ದಿಹವು
ಭೂಮಿಯದು ಕುಗ್ಗುತಲಿ ದಶದಿಶೆಯು ಕಂಪಿಸಿತು ॥೨೨೪೨॥

ಕಾನನದಿ ಅರಸುತಲಿ ಚರಿಸುತಲಿ ಬರುತಲಿರೆ
ಸೊಗಯಿಸುವ ಕಮಲಗಳು ಎಸೆಯುತಿಹ ಸುಂದರದ
ಕೊಳದ ಬಳಿ ಬರುತಿರಲು ಮೂವರೂ ಸೋದರರು
ತೀರದಲಿ ಒರಗಿದುದ ಕಂಡಿಹನು ಬೆರಗಿನಲಿ ॥೨೨೪೩॥

ಬಳಿಸಾಗಿ ನೋಡುತಿರೆ ಉಸಿರಾಟವಿಲ್ಲದೆಯೆ
ಪ್ರಾಣವದು ತೊಲಗಿರುವ ಸೋದರರ ಮೂವರನು
ಕಾಣುತಲಿ ಮರುತಜನು ಕಳವಳವಗೊಳ್ಳುತಲಿ
ಮನದೊಳಗೆ ಮಿಡುಕುತಲಿ ರಕುತವದು ಕುದಿಯುತಲಿ ॥೨೨೪೪॥

ಕೋಪದಾ ಜ್ವಾಲೆಯದು ಹೊತ್ತುತಲಿ ಉರಿಯುತಲಿ
ಎನ್ನಯಾ ಸೋದರರ ಪ್ರಾಣಗಳ ಕೊಂಡಿರುವ
ಮೃತ್ಯುವಿನ ಗಂಟಲವ ನಾಲಗೆಯ ಸೀಳುವೆನು
ಆ ಯಮನ ಪಟ್ಟಣವ ಭಸ್ಮವನು ಮಾಡುವೆನು ॥೨೨೪೫॥

ಎನ್ನುತಲಿ ಕ್ರೋಧದಾ ಜ್ವಾಲೆಯಲಿ ಉರಿಯುತಲಿ
ನೀರಡಿಕೆ ದಾಹವದು ಹೆಚ್ಚುತಿರೆ ಕಲಿಭೀಮ
ನೀರನ್ನು ಕುಡಿಯುತಲಿ ಮುಂದಣವ ಕಾರ್ಯವನು
ನೆನೆಯುವೆನು ಎನ್ನುತಲಿ ಕೊಳದೊಳಗೆ ಇಳಿದಿಹನು ॥೨೨೪೬॥

ನೀರನ್ನು ಗದೆಯಿಂದ ಕುಲುಕುತಲಿ ಕಲಿಭೀಮ
ಬೊಗಸೆಯಲಿ ಜಲವನ್ನು ಕೊಳ್ಳುತಿರೆ ಆ ಕ್ಷಣದಿ
ಎನ್ನಯಾ ಪ್ರಶ್ನೆಯನು ಮೊದಲಿಂಗೆ ಉತ್ತರಿಸು
ಎನ್ನುತಲಿ ಅಶರೀರವಾಣಿಯದು ನುಡಿದಿಹುದು ॥೨೨೪೭॥

ಇಲ್ಲದಿರೆ ಮೂವರಾ ಸೋದರರ ಪರಿಯಲ್ಲಿ
ದುರ್ಗತಿಯು ನಿನಗಹುದು ಎನ್ನುತಲಿ ನುಡಿದಿಹುದು
ರಕ್ಕಸರ ಮಾಯೆಯಿದು ಎನ್ನುತಲಿ ಮರುತಜನು
ಲೆಕ್ಕಿಸದೆ ವಿಷಜಲವ ಮೊಗೆಮೊಗೆದು ಈಂಟಿದನು ॥೨೨೪೮॥

ಸರಸಿಯಾ ತೀರದಲಿ ಬರುತಿರಲು ಮರುತಜನು
ಪ್ರಾಣವದು ಕುಂದುತಲಿ ಥರಥರನೆ ನಡುಗುತಲಿ
ಮಂದರದ ಗಿರಿಯಂತೆ ಧರೆಯೊಳಗೆ ಬಿದ್ದಿಹನು
ಅವನಿಯದು ಕುಗ್ಗುತಲಿ ದಿಗ್ಗಜಗಳೊವರಿದವು ॥೨೨೪೯॥

ನಾಲ್ವರೂ ಸೋದರರು ಬಾರದಿರೆ ಧರ್ಮಜನು
ಅತ್ತ ಕಡೆ ಹೋದವರು ಏನಾದರೆನ್ನುತಲಿ
ಕಳವಳವಗೊಳ್ಳುತಲಿ ನಾನೆಯೇ ತೆರಳುತಲಿ
ನೋಡುವೆನು ಎನ್ನುತಲಿ ಅಡವಿಯಲಿ ನಡೆದಿಹನು ॥೨೨೫೦॥

ಸೋದರರನರಸುತಲಿ ಕೊಳದ ಬಳಿ ಬರುತಿರಲು
ಕಣ್ದೆರೆದ ಬಾಯ್ದೆರೆದ ಬತ್ತಿರುವ ಬಾಡಿರುವ
ನಿಸ್ತೇಜವದನಗಳ ಕರಗಳನು ಚೆಲ್ಲಿರುವ
ಅಂಗಾತ ಬಿದ್ದಿರುವ ಸೋದರರ ಕಂಡಿಹನು ॥೨೨೫೧॥

ದುಗುಡದಲಿ ಧಾವಿಸುತ ನಾಸಿಕದ ಸನಿಹದಲಿ
ಬೆರಳುಗಳನಾಡಿಸಲು ಉಸಿರಮಾವೆ ಸೋಂಕದಿದೆ
ಅಕಟಕಟ ಅಸುಗಳನು ನೀಗಿಹರು ಎನ್ನುತಲಿ
ದಿಗ್ಭ್ರಾಂತನಾಗುತಲಿ ಹೌಹಾರಿ ನಿಂದಿಹನು ॥೨೨೫೨॥

ಆಕಾಶ ಕಳಚುತಲಿ ತಲೆಯಲ್ಲಿ ಬಿದ್ದಂತೆ
ಸಾವಿರದ ಅಲಗುಗಳು ಹೃದಯವನು ಇರಿದಂತೆ
ನೋಯುತಲಿ ನವೆಯುತಲಿ ದುಃಖದಾ ಕಡಲುಕ್ಕಿ
ಮಿಕ್ಕುತಲಿ ಹರಿಯುತಲಿ ಧರ್ಮಜನು ಚಿಂತಿಸಿದ ॥೨೨೫೩॥

ದ್ಯೂತವನು ಆಡುತಲಿ ರಾಜ್ಯವನು ಕಳಕೊಂಡು
ವನದೊಳಗೆ ಎನ್ನಯಾ ಜೊತೆಯಲ್ಲಿ ನಿಮಗೆಲ್ಲ
ಅನ್ನ ನೀರಿಲ್ಲದೆಯೆ ಅಗಣಿತದ ಕಷ್ಟಗಳ
ನಿಮಗಿತ್ತ ಕಡುಪಾಪಿ ನಾನೆಂದು ನುಡಿದಿಹನು ॥೨೨೫೪॥

ನಿಮ್ಮಯಾ ಮರಣಕ್ಕೆ ಕಾರಣನು ನಾನಿಹೆನು
ಬಂಧುಗಳ ಕೊಂದಿರುವ ಘಾತುಕಿಯು ನಾನಿಹೆನು
ನಾಲ್ವರನು ಸೋದರರ ಕಳಕೊಂಡ ಎನ್ನಯಾ
ಪ್ರಾಣವದು ಇನ್ನೇಕೆ ತೊಲಗದಿದೆ ಎಂದಿಹನು ॥೨೨೫೫॥

ಚಂದ್ರಕುಲ ಬಳ್ಳಿಯಾ ಕುಸುಮಗಳು ಬಾಡಿದವು
ಎಮ್ಮಯಾ ಶತ್ರುಗಳು ಆನಂದ ಸಾಗರದಿ
ಮುಳುಗುತಲಿ ಹರ್ಷದಲಿ ಹಾಲನ್ನು ಕುಡಿಯ
ಹತಭಾಗ್ಯ ನಾನಿಹೆನು ಎನ್ನುತಲಿ ಶೋಕಿಸಿದ ॥೨೨೫೬॥

ಗಾಯದಾ ಗುರುತಿಲ್ಲ ರಕುತದಾ ಕಲೆಯಿಲ್ಲ
ಸೋದರರ ಮರಣಕ್ಕೆ ಕಾರಣವು ತಿಳಿಯದಿದೆ
ಇದು ಭೂತಚೇಷ್ಟೆಯೋ ರಕ್ಕಸರ ಮಾಯೆಯೋ
ಎಂಬುದನು ಅರಿಯುವುದು ಎನ್ನುತಲಿ ಧರ್ಮಜನು ॥೨೨೫೭॥

ಅಡವಿಯಲಿ ಅಲೆಯುತಲಿ ನಾಲಗೆಯು ಒಣಗಿಹುದು
ನೀರನ್ನು ಕುಡಿಯುತಲಿ ನೀರಡಿಕೆ ಹಿಂಗಿಸುತ
ಬಳಿಕಿನಲಿ ಕಾರಣವನರಸುವೆನು ಎನ್ನುತಲಿ
ಧರ್ಮಜನು ಕೊಳದೊಳಗೆ ಇಳಿಯುತಲಿ ॥೨೨೫೮॥

**ಯಕ್ಷನಾ ಧರ್ಮದಾ ಪ್ರಶ್ನೆಗಳನುತ್ತರಿಸಿ ।**
**ಸೋದರರ ನಾಲ್ವರನು ಜೀವಂತಗೊಳಿಸಿಹನು ॥**

ಕರದಲ್ಲಿ ವಿಷಜಲವ ಕುಡಿಯಲಿಕೆ ಕೊಳ್ಳುತಿರೆ
ಹೇನೃಪನೆ ಎನ್ನಯಾ ಪ್ರಶ್ನೆಯನು ಉತ್ತರಿಸಿ
ನಂತರದಿ ನೀರನ್ನು ಕುಡಿಯಾವುದು ಎನ್ನುತಲಿ
ಆಕಾಶವಾಣಿಯದು ಆ ಕ್ಷಣದಿ ನುಡಿದಿಹುದು ॥೨೨೫೯॥

ಧರ್ಮಜನು ಕೌತುಕದಿ ಕೇಳುತಲಿ ಚಕಿತದಲಿ
ನೀನಾರು ಇರುತಿರುವೆ ನಭದೊಳಗೆ ಮರೆಯಾಗಿ
ನಿಲ್ಲುತಲಿ ನೀನಿಂತು ಏತಕ್ಕೆ ನುಡಿಯುತಿಹೆ
ಬೇಗನೇ ಹೇಳೆಂದು ನುಡಿದಿಹನು ಕಾತರದಿ ॥೨೨೬೦॥

ಕರಿಮೇಘ ಮಾಲೆಯಾ ಕಾಂತಿಯಲಿ ಹೊಳೆಯುತಲಿ
ಕಠಕಾಯ ಶೋಭಿತನು ಆಕಾಶ ಮಧ್ಯದಲಿ
ತೋರುತಲಿ ನಿನ್ನಯಾ ಸೋದರರ ಪ್ರಾಣಗಳ
ಕೊಂಡಿರುವ ಯಕ್ಷನೇ ನಾನಿಹೆನು ಎಂದಿಹನು ॥೨೨೬೧॥

ಎನ್ನಯಾ ಪ್ರಶ್ನೆಯನು ಉತ್ತರಿಸಿ ಉದಕವನು
ಕುಡಿಯುವುದು ಎನ್ನುತಲಿ ನುಡಿದೊಡೆಯು ನಿನ್ನಯಾ
ಮಂದಮತಿ ಸೋದರರು ಮೀರುತಲಿ ನೀರನ್ನು
ಕುಡಿಯುತಲಿ ಪ್ರಾಣಗಳ ಬಿಟ್ಟಿಹರು ಎಂದಿಹನು ॥೨೨೬೨॥

ಶಾಸ್ತ್ರಗಳ ನರಿತಿರುವೆ ಸುಜ್ಞಾನಿ ನೀನಿರುವೆ
ಎನ್ನಯಾ ಪ್ರಶ್ನೆಗಳಿಗುತ್ತರವನೀಯದಲೆ
ಜಲವನ್ನು ಈಂಟಿದೊಡೆ ನೀನು ಸಹ ಸಾಯುವುದು
ಖಚಿತವದು ಎನ್ನುತಲಿ ವರಯಕ್ಷ ನುಡಿದಿಹನು ॥೨೨೬೩॥

ಹೇ ಯಕ್ಷ ನಿನ್ನಯಾ ಪ್ರಶ್ನೆಯನು ಉತ್ತರಿಸಿ
ನಂತರದಿ ಜಲವನ್ನು ಕುಡಿಯುವೆನು ಎನ್ನುತಲಿ
ಎನ್ನಯಾ ಬುದ್ಧಿಯಲಿ ಹೊಳೆದಷ್ಟು ಹೇಳುವೆನು
ಪ್ರಶ್ನೆಯನು ಕೇಳುವುದು ಎಂದಿಹನು ಧರ್ಮಜನು ॥೨೨೬೪॥

ಸಾಗರಕೆ ಸರಿಸಮವು ಸರಸಿಯದು ಆವುದಿದೆ
ಜಗಕೆಲ್ಲ ಹಿತವನ್ನು ಗೈವವನು ಆವನಿಹ
ಲೋಕದಾ ಜನರಿಂಗೆ ಜನನಿಯಳು ಆರಿಹಳು
ಸೂರ್ಯಂಗೆ ಸರಿಸಾಟಿ ಆವುದಿದೆ ಹೇಳೆಂದ ॥೨೨೬೫॥

ಹೇ ಯಕ್ಷ ಅಲಿಪುದು ಸಾಗರಕೆ ನೀಲಿಮೆಯ
ಆಕಾಶ ಸರಿಸಮ ಸರೋವರವು ಇರುತಿಹುದು
ಲೋಕಕ್ಕೆ ಮಳೆಸುರಿಸಿ ಆಹಾರ ಧಾನ್ಯವನು
ಈಯುತಿಹ ದೇವೇಂದ್ರ ಹಿತಕರನು ಎಂದಿಹನು ॥೨೨೬೬॥

ಜಗದೊಳಗೆ ಹಾಲಿನಾ ಅಮೃತವನು ಈಯುತಲಿ
ಗೋಮಾತೆ ಜಗಕೆಲ್ಲ ಮಾತೆಯಳು ಎನಿಸುವಳು
ಸೂರ್ಯನಾ ಪರಿಯಲ್ಲಿ ದಿವ್ಯ ಪ್ರಕಾಶದಲಿ
ಹೊಳೆ ಹೊಳೆವ ಸತ್ಯವೇ ಸೂರ್ಯಸಮವೆಂದಿಹನು ॥೨೨೬೭॥

ದ್ವಿಜರೊಳಗೆ ನಿಜವಾದ ಶ್ರೋತ್ರಿಯನು ಆವನಿಹ
ಕ್ಷತ್ರಿಯನು ಸಜ್ಜನನು ಮಹಪುರುಷ ಸುಜ್ಞಾನಿ
ದೇವರಿಗೆ ಪ್ರಿಯನಿಹನು ಆರಿಹರು ಎಂಬುದನು
ವಿಸ್ತರದಿ ಪೇಳುವುದು ಎಂದಿಹನು ವರಯಕ್ಷ ॥೨೨೬೮॥

ಕೇಳುವುದು ವರಯಕ್ಷ ವೇದಗಳ ಶಾಸ್ತ್ರಗಳ
ಅಧ್ಯಯನ ಗೈಯ್ಯುತಲಿ ವೇದೋಕ್ತ ಕಾರ್ಯಗಳ
ಗೈಯ್ಯುತಲಿ ಸತತವೂ ಬ್ರಹ್ಮನನು ಭಜಿಸುತಿಹ
ವರವಿಪ್ರ ಶ್ರೋತ್ರಿಯನು ಎನಿಸುವನು ಕೇಳೆಂದ ॥೨೨೬೯॥

ಧನುರ್ವಿದ್ಯೆ ಕಲಿಯುತಲಿ ಸಾಧುಗಳ ಸಜ್ಜನರ
ದೀನರನು ದುರ್ಬಲರ ಅನವರತರಕ್ಷಿಸುತ
ಯುದ್ಧವನು ಗೈಯ್ಯುತಲಿ ರಣದಿಂದ ಹಿಂದಕ್ಕೆ
ಕಾಲ್ಕಿತ್ತಿ ಓಡದವ ಕ್ಷತ್ರಿಯನು ಕೇಳೆಂದ ॥೨೨೭೦॥

ನುಡಿಗಳಲಿ ನಡೆಗಳಲಿ ಪರರನ್ನು ನೋಯಿಸದೆ
ಹಿಂಸೆಯನು ಗೈಯದವ ಸಜ್ಜನನು ಎನಿಸುವನು
ಸತತವೂ ಪರರಿಂಗೆ ಉಪಕಾರ ಗೈವವನು
ದೇವರಿಗೆ ಪ್ರಿಯನಿಹನು ಹೇ ಯಕ್ಷ ಕೇಳೆಂದ ॥೨೨೭೧॥

ಗುರು ಹಿರಿಯ ಪೂಜ್ಯರನು ಜ್ಞಾನಿಗಳ ಸೇವಿಸುತ
ಜ್ಞಾನವನು ಪಡೆದವನು ಸುಜ್ಞಾನಿ ಎನಿಸುವನು
ಗುರುಗಳಾ ನುಡಿಗಳನು ಮೀರುತಲಿ ಗರ್ವದಲಿ
ನಡೆವವನೆ ಅಜ್ಞಾನಿ ಎನಿಸುವನು ಕೇಳೆಂದ ॥೨೨೭೨॥

ನಿಂದ್ಯರುಗಳಾರಿಹರು ವಂದ್ಯರುಗಳಾರಿಹರು
ಕಡುದುಃಖಿ ಜೀವಂತ ಹೆಣನಾರು ಇರುತಿಹರು
ಕಡುಬಡವನಾರಿಹರು ದೇಶವದು ಆರಿಂದ
ನಾಶವದು ಆಗುವದು ಹೇಳೆಂದ ವರಯಕ್ಷ ॥೨೨೭೩॥

ಪರರನ್ನು ನಿಂದಿಸುವನವನಿಹನು ನಿಂದ್ಯಕನು
ಪರರಿಂಗೆ ಉಪಕಾರ ಗೈವವನು ವಂದ್ಯನಿಹ
ಲಂಪಟನ ನೃಪನಿಂದ ದೇಶವದು ಅಳಿಯುವುದು
ಧನದಾಸೆ ತೀರದವ ಕಡುಬಡವನೆಂದಿಹನು ॥೨೨೭೪॥

ಆವನಾ ನರಕಿಯಿಹ ಸುಜನರಿಗೆ ದೂರವಿಹ
ಜೀವಂತವಿರುತಿರಲು ಸತ್ತಿರುವ ನೃಪನಾರು
ಜಗದೊಳಗೆ ಅಭಿಮಾನ ಶೂನ್ಯರವರಾರಿಹರು
ಎಂಬುದನು ಸರಸದಲಿ ಪೇಳುವುದು ಎಂದಿಹನು ॥೨೨೭೫॥

ಉಪಕಾರ ಗೈದವಗೆ ಅಪಕಾರ ಗೈಯ್ಯುವವ
ಕಡುಪಾಪಿ ಕೃತಘ್ನ ನರಕಿಯೆಂದೆನಿಸುವನು
ವಿದ್ಯೆಯಾ ಮದದಿಂದ ಸೊಕ್ಕಿನಲಿ ಮೆರೆವವನು
ಸುಜನರಿಗೆ ದೂರವಿಹ ಬಾಹಿರನು ಎಂದಿಹನು ॥೨೨೭೬॥

ಯುದ್ಧವನು ಗೈಯ್ಯದಲೆ ಭೀತಿಯಲಿ ರಣದಿಂದ
ಓಡುವಾ ನೃಪವರನು ಜೀವಂತ ಮೃತನೆನಿಪ
ಹೆಂಗುಸಿನ ಮಾತುಗಳ ಕೇಳುತಲಿ ನಡೆವವನು
ಅಭಿಮಾನ ಶೂನ್ಯನೆಂದೆನಿಸುವನು ಕೇಳೆಂದ ॥೨೨೭೭॥

ಶ್ರೇಷ್ಠರಾ ಸತಿಪತಿಯು ಸುತರಾರು ಇರುತಿಹರು
ಎನ್ನುತಲಿ ವರಯಕ್ಷ ನುಡಿಯುತಿರೆ ಧರ್ಮಜನು
ಪರಸ್ತ್ರೀಯ ಕಣ್ಣೆತ್ತಿ ನೋಡದಲೆ ಕೈವಿಡಿದ
ಸತಿಯನ್ನು ಪ್ರೀತಿಸುವ ಪತಿಶ್ರೇಷ್ಠನೆಂದಿಹನು ॥೨೨೭೮॥

ಪರನರನ ಮೋಹಿಸದೆ ಒಲುವಿನಲಿ ನಿಜಪತಿಯು
ಸತತವೂ ಸೇವಿಸುವ ಸತಿ ಶ್ರೇಷ್ಠಳೆನಿಸುವಳು
ಪಿತೃಗಳಾ ನುಡಿಗಳನು ಅನವರತ ಪಾಲಿಸುತ
ಮುಪ್ಪಿನಲಿ ಪೊರೆಯುತಿಹ ಸುತ ಶ್ರೇಷ್ಠನೆಂದಿಹನು ॥೨೨೭೯॥

ಆ ಅಜ್ಜ ಮುತ್ತಜ್ಜ ತಾಯ್ತಂದೆ ಬಂಧುಗಳು
ಸಕಲರೂ ಸಾಯುವುದ ಕಾಣುತಲಿ ನರರುಗಳು
ಜೀವನವು ಶಾಶ್ವತವು ಎನ್ನುತಲಿ ನಂಬುತಲಿ
ಏತಕ್ಕೆ ನರಳುವರು ತಿಳುಹುವುದು ಎಂದಿಹನು ॥೨೨೮೦॥

ಹೇ ಯಕ್ಷ ಕಣ್ಣಿಂಗೆ ಕಾಣುವಾ ಎಲ್ಲವನು
ಸತ್ಯವದು ಶಾಶ್ವತವು ಎನ್ನುತಲಿ ಭಾವಿಸುತ
ವಿಶ್ವದ ರಹಸ್ಯವನು ಅರಿಯದಲೆ ಮೋಹಿಸುತ
ಸಂಸಾರ ಸಾಗರದಿ ನರಳುವರು ಎಂದಿಹನು ॥೨೨೮೧॥

ರವಿಚಂದ್ರ ತಾರೆಗಳ ಪ್ರಾಣಿಗಳ ಕೋಟಿಗಳ
ವಿಶ್ವವನು ಸೃಜಿಸಿರುವ ಆ ಪುರುಷನಾರಿಹನು
ಸಕಲಮೀ ಜಂಗಮದ ಸ್ಥಾವರದ ವ್ಯಾಪಾರ
ಕಾರ್ಯಗಳು ಆರಿಂದ ನಡೆಯುತಿವೆ ಎಂದಿಹನು ॥೨೨೮೨॥

ಹೇ ಯಕ್ಷ ಕೇಳುವುದು ಆದ್ಯಂತವಿಲ್ಲದಿಹ
ಸತ್ಯನಿಹ ನಿತ್ಯನಿಹ ಸನಾತನು ಪುರಾಣನು
ಪರಬ್ರಹ್ಮ ಈ ಜಗವ ಸಕಲವನು ಸೃಷ್ಟಿಸುತ
ಅಣುರೇಣು ತೃಣಕಾಷ್ಠವೆಲ್ಲವನು ವ್ಯಾಪಿಸುತ ॥೨೨೮೩॥

ಕೋಟಿಗಳ ಪ್ರಾಣಿಗಳ ಹೃದಯಾಂತರಾಳದಲಿ
ಅಂಗುಷ್ಠ ಮಾತ್ರದಾ ಆತ್ಮದಾ ಗುಹೆಯೊಳಗೆ
ವಾಸಿಸುವ ಚೈತನ್ಯ ರೂಪದಲಿ ಜಗದೊಳಿಹ
ವ್ಯಾಪಾರವೆಲ್ಲವನು ಗೈಯ್ಯುವನು ಎಂದಿಹನು ॥೨೨೮೪॥

ವೇದಗಳ ಶಾಸ್ತ್ರಗಳ ಪರಿಣತನು ನೀನಿರುವೆ
ಜ್ಞಾನಿಯಿಹೆ ನಿನ್ನಯಾ ನುಡಿಗಳನು ಕೇಳುತಲಿ
ಮನದೊಳಿಹ ಕಲ್ಮಷವು ತೊಲಗುತಲಿ ಶುದ್ಧದಲಿ
ತನುಪುಳಕ ಗೊಂಡಿಹುದು ಎಂದಿಹನು ಆ ಯಕ್ಷ ॥೨೨೮೫॥

ನಿನಗೊಂದು ವರವನ್ನು ಈಯುವೆನು ಬೇಡುವುದು
ಸತ್ತಿರುವ ಸೋದರರೊಳೊಬ್ಬನನು ಬದುಕಿಪೆನು
ಆರನ್ನು ಬದುಕಿಪುದು ಪೇಳುವುದು ಎನ್ನುತಲಿ
ವರ ಯಕ್ಷನುಡಿಯುತಿರೆ ಧರ್ಮಜನು ನುಡಿದಿಹನು ॥೨೨೮೬॥

ಹೇಖಚರ ಮಾಧ್ರೀಕುಮಾರನನು ನಕುಲನನು ಬದುಕಿಪುದು
ಎನ್ನುತಿರೆ ನಿದ್ದೆಯನು ತೊಲಗುತಲಿ ಸರಸದಲಿ
ಮೇಲಕ್ಕೆ ಏಳ್ವಂತೆ ವರನಕುಲ ನಸುನಗುತ
ಏಳುತಿರೆ ಧರ್ಮಜನು ಸಂತಸವ ಗೊಂಡಿಹನು ॥೨೨೮೭॥

ಹೇ ಧರ್ಮನಂದನನೆ ಇನ್ನೊಂದು ವರವನ್ನು
ಈಯುವೆನು ಬೇಡುವುದು ಎನ್ನುತಿರೆ ಧರ್ಮಜನು
ನಕುಲನಾ ಒಡಹುಟ್ಟಿದಾತನನ ಸಹದೇವ
ಸೋದರನ ಬದುಕಿಪುದು ಎನ್ನುತಲಿ ನುಡಿದಿಹನು ॥೨೨೮೮॥

ಆಗಲಾ ಸಹದೇವ ನಸುನಗುತ ಏಳುತಿರೆ
ಅಚ್ಚರಿಯ ಗೊಳ್ಳುತಲಿ ಆ ಯಕ್ಷ ನುಡಿದಿಹನು
ನಿನ್ನಯಾ ಖಾಸಮಿಹ ತಮ್ಮಂದಿರೀರ್ವರನು
ಭೀಮನನು ಅರ್ಜುನನ ಬದುಕಿಸಲು ಕೇಳದೆಯೆ ॥೨೨೮೯॥

ಮಾಧ್ರೀಕುಮಾರಕರ ಆನಕುಲ ಸಹದೇವ
ಈರ್ವರನು ಜೀವಂತ ಗೊಳಿಸಲಿಕೆ ಕೇಳಿದುದು
ಕೌತುಕವು ಅಚ್ಚರಿಯು ಕಾರಣವನರುಹುವುದು
ಎನ್ನುತಲಿ ವರಯಕ್ಷ ಧರ್ಮಜಗೆ ನುಡಿದಿಹನು ॥೨೨೯೦॥

ಪಾಂಡುನೃಪ ವಿಪಿನದಲಿ ಸಾವನ್ನು ಅಪ್ಪುತಿರೆ
ಮಹತಾಯಿ ವರವಾದ್ರಿ ಎನ್ನಯಾ ಕರದೊಳಗೆ
ಆ ನಕುಲ ಸಹದೇವರೀರ್ವರಾ ಕರಗಳನು
ಈಯುತಲಿ ನಿನ್ನಯಾ ಒಡಹುಟ್ಟಿದವರಂತೆ ॥೨೯೯೧॥

ಭೇದವನು ಮಾಡದಲೆ ಪ್ರೀತಿಯಲಿ ನೋಡುವುದು
ಎನ್ನಯಾ ಸುತರುಗಳ ಒಳಿತುಗಳು ಕೇಡುಗಳು
ಎಲ್ಲವೂ ನಿನ್ನವಿವೆ ರಕ್ಷಿಪುದು ಎನ್ನುತಲಿ
ನುಡಿಡುದನು ನಾನೆಂತು ಮರೆಯುವೆನು ಎಂದಿಹನು ॥೨೯೯೨॥

ನಿನ್ನಯಾ ಸೋದರರ ನಿರ್ಮಲದ ಪ್ರೇಮಕ್ಕೆ
ಸತ್ಯಕ್ಕೆ ಧರ್ಮಕ್ಕೆ ಮೆಚ್ಚಿದೆನು ಬೆಚ್ಚಿದೆನು
ಇನ್ನುಳಿದ ಬಂಧುಗಳು ಭೀಮಾರ್ಜುನೀರ್ವರೂ
ಜೀವಿಸಲಿ ಎನ್ನುತಿರೆ ಈರ್ವರೂ ಎದ್ದಿಹರು ॥೨೯೯೩॥

ಆಗಲಾಧರ್ಮಜನು ಸೋದರರ ಸಹಿತದಲಿ
ಯಕ್ಷನಾ ಚರಣಕ್ಕೆ ಎರಗುತಲಿ ಮಹಾತ್ಮನೇ
ನಿಜವಾಗಿ ನೀನಾರು ಎಂಬುದನು ಪೇಳುವುದು
ಕೌತುಕವು ಎಮಗಿಹುದು ಎಂದಿಹನು ಧರ್ಮಜನು ॥೨೯೯೪॥

**ಆ ಯಕ್ಷ ರೂಪದಾ ಯಮಧರ್ಮ ಪ್ರತ್ಯಕ್ಷ**
**ಗೊಳ್ಳುತಲಿ ಪಾಂಡವರ ಸಕಲರನು ಹರಸಿದನು**

ಧರ್ಮಜನೆ ನಾನೆಯೇ ಯಮಧರ್ಮ ನಿರುತಿಹೆನು
ನಿನ್ನಯಾ ಪಿತನಿಹೆನು ನಿನ್ನನ್ನು ನೋಡಲಿಕೆ
ಬಂದಿಹೆನು ಎನ್ನುತಲಿ ಧರ್ಮಜನ ಒಲುಮೆಯಲಿ
ಬಿಗಿದಪ್ಪಿಕೊಳ್ಳುತಲಿ ಹರ್ಷಾಶ್ರು ಸುರಿಸಿಹನು ॥೨೯೯೫॥

ಹೇ ಮಗನೆ ಧರ್ಮಜನೆ ವನವಾಸದವಧಿಯದು
ಮುಗಿಯಲಿಕೆ ಬಂದಿಹುದು ಅಜ್ಞಾತವಾಸಕ್ಕೆ
ಸಿದ್ಧತೆಯ ಮಾಡುತಲಿ ಪರಿವಾರವೆಲ್ಲವನು
ಅವರವರ ನಿಲಯಕ್ಕೆ ಕಳುಹುವುದು ಎಂದಿಹನು ॥೨೯೯೬॥

ನಿನಗಿಷ್ಟವಾದುದನು ಕೇಳುವುದು ಎನ್ನುತಿರೆ
ಎತ್ತಣದ ಅರಣಿಯದು ಎತ್ತಣದ ಜಿಂಕೆಯದು
ನಿಮ್ಮಯಾ ದರುಶನವು ಎಮಗಾಯ್ತು ಪುಣ್ಯದಲಿ
ನಾವುಗಳು ಧನ್ಯರುಗಳೆಂದಿಹನು ಧರ್ಮಜನು ॥೨೯೯೭॥

ನಾನೆಯೇ ಆ ಜಿಂಕೆ ನಿಮ್ಮನ್ನು ಪರಿಕಿಸಲು
ಜಿಂಕೆಯಾ ರೂಪದಲಿ ಅರಣಿಯನು ಒಯ್ದಿಹೆನು
ಕೊಳ್ಳುವುದು ಎನ್ನುತಲಿ ಅರಣಿಯನು ಧರ್ಮಜನ
ಕರದೊಳಗೆ ಇತ್ತಿಹನು ಯಮಧರ್ಮನಾಕ್ಷಣದಿ ॥೨೯೯೮॥

ವರುಷವೊಂದು ಅಜ್ಞಾತವಾಸದಲಿ ಎಮ್ಮನ್ನು
ಪರರುಗಳು ಗುರುತಿಸದ ಪರಿಯಲ್ಲಿ ರೂಪವನು
ಎಮಗೀವುದೆನ್ನುತಲಿ ಧರ್ಮಜನು ನುಡಿಯುತಿರೆ
ತಥಾಸ್ತು ಎನ್ನುತಲಿ ಯಮಧರ್ಮ ನುಡಿದಿಹನು ॥೨೯೯೯॥

ಹೇ ಧರ್ಮನಂದನನೆ ಸತ್ಯದಲಿ ಧರ್ಮದಲಿ
ನಿಮ್ಮಯಾ ವಚನಕ್ಕೆ ಭಂಗವದು ಬಾರದಲೆ
ವನದೊಳಗೆ ಅಗಣಿತದ ಕಷ್ಟಗಳ ದುಃಖಗಳ
ಸಹಿಸುತಲಿ ತೊಳಲಿದಿರಿ ಬಳಲಿದಿರಿ ಎಂದಿಹನು ॥೩೦೦೦॥

ನಿಮಗೆಲ್ಲ ದೈವದಾ ಧರ್ಮದಾ ಬಲವುಂಟು
ಬಂದಿರುವ ಕಷ್ಟಗಳು ಎಲ್ಲವೂ ತೊಲಗುತಲಿ
ರಾಜ್ಯವನು ಪಡೆಯುತಲಿ ಕೀರ್ತಿಯಲಿ ಮೆರೆಯುವಿರಿ
ಎನ್ನುತಲಿ ಹರಸುತಲಿ ಯಮಧರ್ಮ ತೆರಳಿದನು ॥೩೦೦೧॥

ಧರ್ಮಜನು ಅರಣಿಯನು ಮುನಿವರಗೆ ಈಯುತಲಿ
ಧೌಮ್ಯಾದಿ ಮುನಿವರರ ಮಂತ್ರಿಗಳ ಬಂಧುಗಳ
ಸುಭದ್ರೆಯನು ದೃಷ್ಟದ್ಯುಮ್ನ ಪಾಂಚಾಲ ಸಕಲರನು
ಸತ್ಕರಿಸಿ ಅವರವರ ನಿಲಯಕ್ಕೆ ಕಳುಹಿದನು ॥೩೦೦೨॥

ಅವಧಿವರುಷವೊಂದು ಅಜ್ಞಾತವಾಸವನು
ಕಳೆಯುವುದು ಎನ್ನುತಲಿ ಧರ್ಮಜನು ಚಿಂತಿಸುತ
ಹೇ ಕೃಷ್ಣಯಾದವನೆ ರಕ್ಷಿಪುದು ಎನ್ನುತಲಿ
ದ್ವಾರಕಾಧೀಶನನ ನೆನೆಯುತಲಿ ಇರ್ದಿಹನು ॥೩೦೦೩॥

**—ಅರಣ್ಯಪರ್ವ ಸಮಾಪ್ತಮಾದುದು—**

**ಇತಿ ಶ್ರೀ ಜೋಶಿಕುಲ ಸಂಭೂತ**
**ವಿರೂಪಾಕ್ಷಸುತ ಕವಿವರ ಲಕ್ಷ್ಮಣ ಕುಮಾರವ್ಯಾಸ ಕುಮಾರ**
**ವಿರಚಿತಮಪ್ಪ ಶ್ರೀಕೃಷ್ಣ ಕಥಾಮೃತ ಪಾನಪುಷ್ಟ**
**ಲಲಿತ ಪದವಿನ್ಯಾಸ ವಿಲಾಸ ವಿಸ್ತರದ**
**ಸರಸ ಚೌಪದಿ ಟೀಕಾಯುಮಪ್ಪ ಶ್ರೀಮನ್ಮಹಾಭಾರತ**
**ಕಾವ್ಯದೊಳ್ ಅರಣ್ಯಪರ್ವ ಸಮಾಪ್ತಮಾದುದು**

# ವಿರಾಟ ಪರ್ವ

**ಪಾಂಡವರು ವಿರಾಟ ನಗರಕ್ಕೆ ಐತಂದು ।**
**ವಿಧವಿಧದ ವೇಷದಲಿ ಗುಪಿತದಲಿ ನೆಲೆಸಿಹರು ॥**

ಮತ್ಸ್ಯದಾ ದೇಶದಲಿ ವಿರಾಟನೃಪ ವೈಭವದಿ
ಸಿಂಹಾಸನಾರೂಢನಾಗುತಲಿ ಕುಳಿತಿರಲು
ಸೇವಕರು ಛತ್ರಗಳ ಚಾಮರವ ಬೀಸುತಿರೆ
ಸುತ್ತಲೂ ಮಂತ್ರಿಗಳು ಸಭೆಯಲ್ಲಿ ಕುಳಿತಿರಲು ॥೧॥

ಧೋತ್ರವನು ಉಟ್ಟಿರುವ ಜನಿವಾರ ತೊಟ್ಟಿರುವ
ಉದ್ದನೆಯ ಕುಂಕುಮವ ನೊಸಲಿನಲಿ ಇಟ್ಟಿರುವ
ಕರದೊಳಗೆ ಪಂಚಾಂಗ ಜಪಮಾಲೆ ಹಿಡಿಯುತಲಿ
ಓರ್ವನಾ ಬ್ರಾಹ್ಮಣನು ಸಭೆಯಲ್ಲಿ ಬಂದಿಹನು ॥೨॥

ವಿರಾಟನೃಪ ನೀವಾರು ಎನ್ನುತಲಿ ಕೇಳುತಿರೆ
ಪಾಂಡವರ ಭವನದಲಿ ಪುರೋಹಿತನು ನಾನಾಗಿ
ಯಜ್ಞಗಳ ಯಾಗಗಳ ಧರ್ಮಾದಿ ಕಾರ್ಯಗಳ
ಮಾಡಿಸುತ ಜೀವನವ ಸಾಗಿಸುತಲಿರುತಿರಲು ॥೩॥

ಜೂಜಿನಲಿ ಸೋಲುತಲಿ ರಾಜ್ಯವನು ತೊರೆಯುತಲಿ
ಪಾಂಡವರು ಕಾನನದ ವಾಸಕ್ಕೆ ತೆರಳುತಿರೆ
ಅಲ್ಲಲ್ಲಿ ಅಲೆಯುತಲಿ ಕಾಲವನು ಕಳೆಯುತಲಿ
ನಿಮ್ಮಲ್ಲಿ ಆಶ್ರಯವ ಬಯಸುತಲಿ ಬಂದಿಹೆವು ॥೪॥

ಕಂಕನೆಂಬಭಿದಾನ ಎನಗಿಹುದು ಭೂಪತಿಯೆ
ಕರುಣೆಯಲಿ ಆಶ್ರಯವನೀಯುತಲಿ ರಕ್ಷಿಪುದು
ಎನ್ನುತಿರೆ ಧರ್ಮಜನು ವಿರಾಟನೃಪನೊಪ್ಪುತಿರೆ
ಆ ಕಂಕ ಮೆರೆದಿಹನು ತೇಜದಲಿ ಸಭೆಯೊಳಗೆ ॥೫॥

ಬಳಿಕೋರ್ವ ಧೃಡಕಾಯ ಬಲಯುತದ ಬಾಹುಗಳ
ವಿಪುಳದಾ ವೃಕ್ಷದಲಿ ಜಗಜಟ್ಟಿಯಂತೆಸೆವ
ಕರದೊಳಗೆ ಸೌಟನ್ನು ಹಿಡಿಯುತಲಿ ಐತಂದು
ವಿರಾಟನಾ ಧರಣಿಪಗೆ ಶಿರಬಾಗಿ ನುಡಿದಿಹನು ॥೬॥

ಪಾಕದಾ ಶಾಸ್ತ್ರದಲಿ ಪರಿಣತನು ನಾನಿಹೆನು
ಬಗೆಬಗೆಯ ರುಚಿಕರದ ಪಕ್ವಾನ್ನದಡಿಗೆಯನು
ಲಕ್ಷೋಪ ಲಕ್ಷದಾ ಜನರಿಂಗೆ ನಿಮಿಷದಲಿ
ಮಾಡಲಿಕೆ ಬಡಿಸಲಿಕೆ ಶಕ್ತನಿಹೆ ಸಮರ್ಥನಿಹೆ ॥೭॥

ಪಾಂಡವರ ನಿಲಯದಲಿ ಅಡಿಗೆಯನು ಮಾಡುತಲಿ
ಜೀವಿಸುತ ನಾನಿರ್ದೆ ಅವರೊಲುಮೆ ಬಲುಮೆಯಲಿ
ಅವರೆಲ್ಲ ಸೋಲಿನಲಿ ಅಡವಿಯನು ಸೇರುತಿರೆ
ಪರದೇಶ ನಾನಾಗಿ ದೇಶಗಳ ಅಲೆಯುತಲಿ ॥೮॥

ನಿಮಲ್ಲಿ ಆಶ್ರಯವನರಸುತಲಿ ಬಂದಿಹೆನು
ನಿಮ್ಮಯಾ ಬಾಣಸಿಗ ನಾನಾಗಿ ಜೀವಿಪೆನು
ವಲಲೆಂಬ ಎನ್ನಯಾ ಹೆಸರಿಹುದು ಎನ್ನುತಿರೆ
ವಿರಾಟನೃಪನೊಪ್ಪಿದನು ಭೀಮನಾ ಆಶಯಕೆ ॥೯॥

ಅನಿತರಲಿ ಕೇಶಗಳು ಬಿಚ್ಚಿರುವ ಹರಡಿರುವ
ಉದ್ದನೆಯ ನಿಲುವಂಗಿ ಧೋತ್ರವನು ತೊಟ್ಟಿರುವ
ಕರಗಳಲಿ ಕಾಲ್ಗಳಲಿ ಗೆಜ್ಜೆಗಳ ಕಟ್ಟಿರುವ
ನೂಪುರದ ನಾದದಲಿ ಮತ್ತೋರ್ವ ಬರುತಿರಲು ॥೧೦॥

ಸಭೆ ಎಲ್ಲ ಬೆರಗಾಗಿ ಕೌತುಕದಿ ನೋಡುತಿರೆ
ಧರಣಿಪಗೆ ಶಿರಬಾಗಿ ವಂದಿಸುತ ಇಂತೆಂದ
ಸಂಗೀತ ನೃತ್ಯದಲಿ ಪರಿಣತನು ನಾನಿಪನು
ಅಪರಿಮಿತ ಶಿಷ್ಯರಿಗೆ ನೃತ್ಯವನು ಕಲಿಸಿಹೆನು ॥೧೧॥

ಪಾಂಡವರ ಅರಮನೆಯ ಬಾಲೆಯರ್ಗೆ ಲಲನೆಯರ್ಗೆ
ಸಂಗೀತ ನೃತ್ಯವನು ಕಲಿಸುತಲಿ ನಾನಿರ್ದೆ
ಅವರೆಲ್ಲ ವಿಧಿಯಲ್ಲಿ ವಿಪಿನಕ್ಕೆ ತೆರಳುತಿರೆ
ದಿಕ್ಕಿಲ್ಲವೆನಗಾಗಿ ದೇಶಗಳ ಅಲೆಯುತಲಿ ॥೧೨॥

ಧರ್ಮದಾ ತವರೂರು ಕರುಣೆಯಾ ನೆಲೆವೀಡು
ನೀವೆಂದು ಅರಿಯುತಲಿ ನಿಮ್ಮ ಬಳಿ ಬಂದಿಹೆನು
ನೆರಳನ್ನು ಎನಗಿತ್ತು ರಕ್ಷಿಪುದು ಎನ್ನುತಿರೆ
ವಿರಾಟನೃಪ ನುಡಿದಿಹನು ಪಾರ್ಥಂಗೆ ಹರುಷದಲಿ ॥೧೩॥

ನೀವಿಲ್ಲಿ ಬಂದಿಹುದು ಎಮ್ಮಯಾ ಸುಕೃತವಿದು
ನಮ್ಮಯಾ ಮಗಳಿಂಗೆ ಸಂಗೀತ ನೃತ್ಯವನು
ನಿಮ್ಮಯಾ ಮಗಳೆಂದು ಭಾವಿಸುತ ಕಲಿಸುತಲಿ
ಎಮ್ಮಯಾ ಸೌಧದಲಿ ವಾಸಿಪುದು ಎಂದಿಹನು ॥೧೪॥

ಆ ನಕುಲ ಅಶ್ವಗಳ ಪಾಲಕನು ವೃತ್ತಿಯಲಿ
ಸಹದೇವ ಗೋವುಗಳ ಕಾಯುವಾ ಕೆಲಸದಲಿ
ಪರಿಣತರು ತಾವೆಂದು ಐತಂದು ಹೇಳುತಿರೆ
ವಿರಾಟನೃಪ ನೊಪ್ಪಿಸಿದ ಕಾರ್ಯಗಳನೀರ್ವರಿಗೆ ॥೧೫॥

ಇತ್ತಲಾ ಪಾಂಡವರ ವರರಾಣಿ ದ್ರೌಪದಿಯು
ಸುದೇಷ್ಣೆಯಾ ಬಳಿಬಂದು ಕರಮುಗಿದು ದೈನ್ಯದಲಿ
ಎನಗಾರು ದಿಕ್ಕಿಲ್ಲ ಸಲಹುವರು ಯಾರಿಲ್ಲ
ಆಶ್ರಯವ ನೀವಿತ್ತು ಎನ್ನನ್ನು ರಕ್ಷಿಪುದು ॥೧೬॥

ಪಾಂಡವರ ಸೌಧದಲಿ ಅರಸಿಯಾ ದ್ರೌಪದಿಗೆ
ಕೂದಲನು ಹಿಕ್ಕುವದು ತುರುಬನ್ನು ಕಟ್ಟುವುದು
ಹೂಗಳನು ಮುಡಿಸುವುದು ಆಭರಣ ತೊಡಿಸುವದು
ಶೃಂಗಾರ ಗೈಯ್ಯುವಾ ಸೇವೆಯನು ಮಾಡಿಹೆನು ॥೧೭॥

ಕುಹಕನಾ ಕೌರವನ ಜಾಲದಲಿ ಸಿಲುಕುತಲಿ
ದ್ಯೂತದಲಿ ಧರ್ಮಜನು ರಾಜ್ಯವನು ಸೋಲುತಲಿ
ಕಾನನವ ಸೇರುತಿರೆ ಪರದೇಶಿ ನಾನಾಗಿ
ದೇಶಗಳ ಅಲೆಯುತಲಿ ನಿಮ್ಮಡಿಗೆ ಬಂದಿಹೆನು ॥೧೮॥

ದೇವಿಯರೆ ನೀವೆನಗೆ ಆಶ್ರಯವ ನೀಯುವದು
ನಿಮ್ಮಯಾ ಸೇವೆಯನು ಅನವರತ ಗೈಯ್ಯುವೆನು
ಸೈರಂಧ್ರಿ ಎಂಬವದು ಎಮ್ಮಯಾ ಹೆಸರಿಹುದು
ಎನ್ನುತಲಿ ದ್ರೌಪದಿಯು ನಯವಾಗಿ ನುಡಿಯುತಿರೆ ॥೧೯॥

ವರದಿವ್ಯ ತೇಜದಲಿ ಹೊಳೆಯುತಿಹ ದ್ರೌಪದಿಯ
ಸಿರಿಮೊಗವ ನೋಡುತಲಿ ಬೆರಗಾಗಿ ಸುದೇಷ್ಣೆಯು
ಎಮ್ಮಯಾ ಸೌಧದಲಿ ಸೇವೆಯಲಿ ನೀವಿಹುದು
ನೀವಾವ ಚಿಂತೆಯನು ಮಾಡದಿರಿ ಎಂದಿಹಳು ॥೨೦॥

ಸಿರಿಯನ್ನು ಹೇಳುವೊಡೆ ಇಭಪುರಿಯ ಅರಸುಗಳು
ಶೌರ್ಯವನು ಹೊಗಳುವೊಡೆ ಇಂದ್ರಂಗೆ ಸರಿಮಿಗಿಲು
ವಿರಾಟನಾ ಸೇವಿಸುವ ಗತಿಯಾಯ್ತು ಪಾಂಡವರ್ಗೆ
ಇನ್ನುಳಿದ ಹುಲುಜಂತು ಮಾನವರ ಪಾಡೇನು ॥೨೧॥

**ಕೀಚಕನು ದ್ರೌಪದಿಯ ಸೌಂದರ್ಯ ರೂಪವನು।**
**ನೋಡುತಲಿ ಮನಸೋತು ಕೊಳಲಿದನು ಬಳಲಿದನು ॥**

ಇಂತಿರಲು ಒಂದು ದಿನ ದುರುಳನಾ ಕೀಚಕನು
ಸೋದರಿ ಸುದೇಷ್ಣೆಯಾ ಮಂದಿರಕೆ ಬರುತಿರಲು
ತಾರೆಗಳ ಮಧ್ಯದಲಿ ಹೊಳೆಯುತಿಹ ಚಂದ್ರಮನ
ಪರಿಯಲ್ಲಿ ಬೆಳಗುತಿಹ ಸುಂದರಿಯ ಕಾಣುತಲಿ ॥೨೨॥

ಬೆರಗಾಗಿ ಕೀಚಕನು ಇವಳಾರು ಹೇಳಕ್ಕಾ
ಹೊಸದಾಗಿ ಮಂದಿರದಿ ಬಂದಂತೆ ತೋರುವಳು
ಸ್ವರ್ಗದಿಂದಿಳಿದಿರುವ ಮೇನಕೆಯೊ ಊರ್ವಶಿಯೊ
ರಂಭೆಯೊ ತಿಲೋತ್ತಮೆಯೊ ಅರಿಹಳು ಎನ್ನುತಲಿ ॥೨೩॥

ಇವಳನ್ನು ನೋಡಿದಾ ಕ್ಷಣದಲ್ಲಿ ಮನಸೋತು
ಮನ್ಮಥನ ಕೂರಲಗು ಎನ್ನದೆಯ ನಿರಿದಿಹುದು
ಇವಳನ್ನು ಮನಒಲಿಸಿ ಎನ್ನಯಾ ಮಂದಿರಕೆ
ಕಳುಹುವುದು ಎನ್ನುತಿರೆ ಸೋದರಿಯು ನುಡಿದಿಹಳು ॥೨೪॥

ಇವಳಾರು ಎಂಬುದನು ನಾನರಿಯೆ ತಮ್ಮನೆ
ನಮ್ಮಲ್ಲಿ ಆಶ್ರಯವ ಬಯಸುತಲಿ ಬಂದಿಹಳು
ಗಂಧರ್ವಪರೈವರೂ ಈಕೆಯಾ ಪತಿಯಿಹರು
ಆರಾದರೀಕೆಯನು ಕೆಣಕಿದರೆ ಕೊಲ್ಲುವರು ॥೨೫॥

ಪರಸತಿಯ ಮೋಹಿಪುದು ಮಹಪಾಪ ಪಾತಕವು
ಕ್ಷಣವೊಂದ ಸುಖಕಾಗಿ ನರಕದಲಿ ಬೀಳದಿರು
ವಂಶದಾ ಬೇರಿಂಗೆ ಕೊಡಲಿಯನು ಹಾಕದಿರು
ಪಾಪದಾಕೃತ್ಯಕ್ಕೆ ಜಗವೆಲ್ಲ ನಿಂದಿಪೂದು ॥೨೬॥

ದುರುಳನಾ ದಶಶಿರನು ಸೀತೆಯನು ಬಯಸುತಲಿ
ಅಪಕೀರ್ತಿಯಂಗನೆಯ ಅಪ್ಪುತಲಿ ಸತ್ತಂತೆ
ಇವಳನ್ನು ಬಯಸುತಲಿ ನೀಸಾಯ್ವೆ ತಪ್ಪದೆಯೆ
ಬಂಧುಗಳ ಸಹಿತದಲಿ ನೀನಾಶವಾಗದಿರು ॥೨೭॥

ದೀಪವನು ಮುತ್ತುತಲಿ ದೀಪದಾ ನೊರಜುಗಳು
ಸಾಯಂತೆ ಖಚಿತದಲಿ ನೀ ಸಾಯ್ವೆ ನಂಬವುದು
ಈಕೆಯಾ ಪತಿಬಂದು ಕರುಳನ್ನು ಬಗೆಯುವನು
ಈಕೆಯಾ ಗೊಡವೆಗೇ ಹೋಗದಿರು ತಮ್ಮನೆ ॥೨೮॥

ಸಾವಿರದ ಲಲನೆಯರು ಸುಂದರಿಯರಿಹರಿಲ್ಲಿ
ನಿನಗಿಷ್ಟ ಬಂದವರ ಚೆಲುವೆಯರ ಕೊಳ್ಳುವದು
ಇಲ್ಲದಿರೆ ಈಕೆಯಾ ಗಂಧರ್ವಪತಿಬಂದು
ನಿನ್ನನ್ನು ಕೊಲ್ಲುವನು ಎನ್ನುತಲಿ ನುಡಿದಿಹಳು ॥೨೯॥

ಆಗೊಡ್ಡು ಧರ್ಮಗಳ ಪಾಪಗಳ ಪುಣ್ಯಗಳ
ನಾನೊಂದು ಯೋಚಿಸೆನು ಲೆಕ್ಕಿಸೆನು ಈಕ್ಷಣದಿ
ಕಾಮದಾ ಬಾಧೆಯಲಿ ಚಿತ್ತದಲಿ ಕಾಣಿಸದು
ಅವಳನ್ನು ಕಳುಹುವುದು ಇಲ್ಲದಿರೆ ಸಾಯುವೆನು ॥೩೦॥

ಜಗದೊಳಗೆ ನನ್ನನ್ನು ಕೊಲ್ಲುವಾ ವೀರನನು
ಇಂದಿಗೂ ಕಂಡಿಲ್ಲ ಮುಂದೆಯೂ ನಾಕಾಣೆ
ನೀಏಕೆ ಚಿಂತಿಸುವೆ ನಾ ಶಕ್ತನಿರುತಿರಲು
ಸೈರಂಧ್ರಿ ಸುಂದರಿಯ ನಾಳೆಯೇ ಕಳುಹಿಪುದು ॥೩೧॥

ಅವಳನ್ನು ತೊರೆಯುತಲಿ ಕ್ಷಣವೊಂದು ಜೀವಿಸೆನು
ಕ್ಷಣವೊಂದು ಯುಗವಾಗಿ ತೋರುತಿದೆ ಬಾಧೆಯಲಿ
ಸೋದರನ ಇಚ್ಛೆಯನು ಸಲಿಸುವುದು ಎನ್ನುತಿರೆ
ನಿರುಪಾಯಳಾಗುತಲಿ ಸುದೇಷ್ಣೆ ನುಡಿದಿಹಳು ॥೩೨॥

ನಾಳಿನಾ ದಿವಸದಲಿ ನಿನ್ನಯಾ ಗೃಹದಿಂದ
ಮಧುವನ್ನು ತರಲಿಕ್ಕೆ ಅವಳನ್ನು ಕಳುಹಿಸುವೆ
ವಿಧಿಯಲ್ಲಿ ಬರೆದದ್ದು ಆಗುವದು ಭೋಗಿಪುದು
ನೀ ಈಗ ಹೋಗೆಂದು ತಮ್ಮನನು ಕಳುಹಿದಳು ॥೩೩॥

ರಾತ್ರಿಯಲಿ ಕೀಚಕನು ಕನಸಿನಲಿ ಮನಸಿನಲಿ
ಸೈರಂಧ್ರಿ ರೂಪವನು ನೆನೆಯುತಲಿ ನವೆಯುತಲಿ
ಕಾಮದಾ ಜ್ವರವೇರಿ ನರಳುತಲಿ ಹೊರಳುತಲಿ
ಇರುಳನ್ನು ಕಳೆದಿಹನು ನಿಮಿಷವದು ಯುಗವಾಗಿ ॥೩೪॥

**ಸುಧೇಷ್ಣೆಯ ಆಜ್ಞೆಯಲಿ ಮಧುವನ್ನು ತರಲೆಂದು**
**ದ್ರೌಪದಿಯು ಕೀಚಕನ ಮಂದಿರವ ಹೊಕ್ಕಿಹಳು**

ಸುದೇಷ್ಣೆಯಾದೇವಿ ಸೈರಂಧ್ರಿ ಬಳಿಬಂದು
ಕೀಚಕನ | ಗೃಹದೊಳಗೆ ನೀನೀಗ ಹೋಗುತಲಿ
ಮಧುವನ್ನು ಬೇಗನೆ ತಹುದೆಂದು ನುಡಿಯುತಿರೆ
ಸೈರಂಧ್ರಿ ದುಗುಡದಲಿ ಕಳವಳದಿ ತೆರಳಿದನು ॥೩೫॥

ದೂರದಲಿ ಸೈರಂಧ್ರಿ ಬರುತಲಿರೆ ಕಾಣುತಲಿ
ತೊಲಗಿರುವ ಪ್ರಾಣವದು ಬಂದಂತೆ ಕೀಚಕನು
ಹರ್ಷದಲಿ ಮುಳುಗಿದನು ಕಾಮಾಂಧ ಮೋಹಿತಗೆ
ಪಾಪಗಳ ಪುಣ್ಯಗಳ ವಿಚಾರವದು ತೋರದಿದೆ ॥೩೬॥

ಮಂದಿರದಿ ಸೈರಂಧ್ರಿ ಬಂದುದನು ಕಾಣುತಲಿ
ಕೀಚಕನು ತುರುಬಿಂಗೆ ಕೈಯ್ಯನ್ನು ಇಕ್ಕುತಿರೆ
ನೀಚನಾ ಕರವನ್ನು ಕಿತ್ತೆಸೆದು ಚೀರುತಲಿ
ಛಟಹೋಗು ನಾಯಿಯೇ ಎನ್ನುತಲಿ ಕೂಗುತಲಿ ॥೩೭॥

ಸೈರಂಧ್ರಿ ರಭಸದಲಿ ಹೊರವಂಟು ರೋದಿಸುತ
ಬೀದಿಯಲಿ ಓಡುತಿರೆ ಬಾಣಸಿಗ ನೋಡುತಲಿ
ದಾರಿಯಾ ಮರವೊಂದ ಕೀಳಲಿಕೆ ಯತ್ನಿಸಲು
ವರಕಂಕ ನೋಡುತಲಿ ವಲಲನಿಗೆ ನುಡಿದಿಹನು ॥೩೮॥

ಮರವನ್ನು ಕಿತ್ತಿದರೆ ಭೀಮನಿವ ಎನ್ನುತಲಿ
ಸಕಲರೂ ಅರಿಯುವರು ಎಲ್ಲವೂ ವ್ಯರ್ಥವದು
ಎನ್ನುತಲಿ ಹೇ ವಲಲ ತರುವಿದನು ಮುರಿಯದಿರು
ಪಥಿಕರಿಗೆ ನೆರಳನ್ನು ಆಶ್ರಯವ ನೀಯುವದು ॥೩೯॥

ಅಡಿಗೆಯನು ಮಾಡಲಿಕೆ ಬೆಂಕಿಯನು ಉರಿಸಲಿಕೆ
ಅಗಣಿತದ ಗಿಡಬಳ್ಳಿ ಬೇರುಂಟು ಬೇರೆಡೆಗೆ
ಆವುದೊ ಭರದಲ್ಲಿ ಧರ್ಮಮಯ ತರುವಿದನು
ಮುರಿಯದಿರು ಎನ್ನುತಲಿ ವರಕಂಕ ನುಡಿದಿಹನು ॥೪೦॥

ಕೇಳುತಲಿ ಕಲಿಭೀಮ ತೊಲಗುತಲಿ ನಡೆದಿಹನು
ಸೈರಣೆಯು ತಾಳುವುದು ಸೈರಂಧ್ರಿ ನೀಸಾಧ್ವಿ
ಹಿಂದಿನಾ ಜನ್ಮದಲಿ ಮಾಡಿರುವ ಪಾಪಗಳ
ಕರ್ಮಗಳ ಫಲವಿಹುದು ಕ್ಷಮಿಸುತಲಿ ಸಹಿಸುವುದು ॥೪೧॥

ನಿನ್ನವರು ನಿರ್ಬಲರು ಹೇಡಿಗಳು ಅಲ್ಲವು
ಧರ್ಮದಾ ಬಂಧನದಿ ಸಿಲುಕಿಹರು ವಿಧಿಯಲ್ಲಿ
ತಾಳ್ಮೆಯೇ ಬಾಳುವೆಯ ಮೂಲದಾ ಮಂತ್ರವಿದು
ಮುಂದಕ್ಕೆ ಶುಭವಹುದು ನೀ ಶಾಂತಳಾಗುತಲಿ ॥೪೨॥

ಚಿಂತೆಯನು ಮಾಡದಲೆ ನಿಲಯಕ್ಕೆ ತೆರಳುವುದು
ಎನ್ನುತಿರೆ ವರಕಂಕ ಸೈರಂಧ್ರಿ ನುಡಿದಿಹಳು
ಸೈರಣೆಗೆ ಮಿತಿ ಇಹುದು ಮೇರೆಯನು ಮೀರಿಹುದು
ಎನ್ನಯಾ ಭಂಗವನು ಇನ್ನೆಂದು ನಾಸಹಿಸೆ ॥೪೩॥

ನಿಮ್ಮಲ್ಲಿ ಹೇಳುವದು ರಕ್ಷಣೆಯು ಬೇಡುವುದು
ನೀರ್ಗಲ್ಲ ಮೇಲಕ್ಕೆ ಮಳೆತಾನೆ ಸುರಿದಂತೆ
ನಿಮ್ಮಲ್ಲಿ ಅರ್ಥವದು ಏನಿಲ್ಲ ಹುರುಳಿಲ್ಲ
ಪವನಜಗೆ ಹೇಳುವೆನು ಎನ್ನುತಲಿ ಸೈರಂಧ್ರಿ ॥೪೪॥

ಭರದಿಂದ ಸಾಗುತಲಿ ನಿಜನಿಲಯ ಸೇರುತಲಿ
ದುರುಳನಾ ದುಶ್ಯಾಸನನು ಸೀರೆಯನು ಸೆಳೆದಂತೆ
ಮತ್ತೊಮ್ಮೆ ಭೀಕರದ ಭಯವೀಗ ಬಂಧಿಹುದು
ಎನ್ನುತಲಿ ಚಿಂತಿಸುತ ಯೋಚನೆಯ ಗೈದಿಹಳು ॥೪೫॥

ಧರ್ಮಜಗೆ ಧರ್ಮದಾ ಮುದಿಹುಚ್ಚು ಹಿಡಿದಿಹುದು
ಅರ್ಜುನನು ಅಣ್ಣನಾ ಆಜ್ಞೆಯನು ಮೀರದಿಹ
ಆ ನಕುಲ ಸಹದೇವ ಈ ನಾಯಿ ಕೀಚಕನ
ಕೊಲ್ಲಲಿಕೆ ನಿರ್ಬಲರು ಅಸಮರ್ಥರಾಗಿಹರು ॥೪೬॥

ಎನ್ನಯಾ ಕಷ್ಟವನು ಪರಿಹರಿಪ ಬಲವುಳ್ಳ
ಗಂಡನವ ಕಲಿಭೀಮ ಒಬ್ಬನೇ ಎನ್ನುತಲಿ
ಎನ್ನಯಾ ದುಃಖವನು ಅವನಲ್ಲಿ ತೋಡುತಲಿ
ಮನಒಲಿಸಿ ಕೀಚಕನ ಕೊಲ್ಲಿಸುವುದೆನ್ನುತಲಿ ॥೪೭॥

**ದ್ರೌಪದಿಯು ಭೀಮನಾ ಬಳಿಬಂದು ತನ್ನಯಾ ।**
**ಒಡಲಿನಾ ದುಃಖವನು ತೋಡಿದಳು ಬೇಡಿದಳು ॥**

ಅಂದಿನಾ ಇರುಳಿನಲಿ ಸೈರಂಧ್ರಿ ದುಃಖದಲಿ
ಗಂಡಸರ ಗಂಡನಿಹ ಪುರುಷರಿಗೆ ಪುರುಷನಿಹ
ಕಲಿಭೀಮ ವಾಸಿಸುವ ಅಡಿಗೆಯಾ ಮನೆಯೊಳಗೆ
ಸೇರುತಲಿ ನಿದ್ರಿಸುವ ಗಂಡನನು ಕಂಡಿಹಳು ॥೪೮॥

ಪರ್ವತದ ಪರಿಯಲ್ಲಿ ಒಟ್ಟಿರುವ ಶಾಕಗಳ
ಮಧ್ಯದಲಿ ಬಾಳೆಯಾ ಎಲೆಗಳನು ಹಾಸುತಲಿ
ಕುಂಬಳದ ಕಾಯನ್ನು ತಲೆದಿಂಬು ಮಾಡುತಲಿ
ತಲೆಯಿಟ್ಟು ಮಲಗಿರುವ ಫಲನನ್ನು ಕಾಣುತಲಿ ॥೪೯॥

ಅಡಿಗೆಯಾ ವಿದ್ಯೆಯನು ಇವನೆಲ್ಲಿ ಕಲಿತಿಹನು
ಕಷ್ಟಗಳು ಎನಿತೆನಿತೊ ವಿದ್ಯೆಗಳ ಕಲಿಸುವವು
ಧರಣಿಯನು ಆಳುವಾ ಶಕ್ತನಿಗೆ ವೀರನಿಗೆ
ಆಳಾಗಿ ದುಡಿಯುವಾ ಹೀನಗತಿ ಬಂದಿಹುದೆ ॥೫೦॥

ಎನ್ನುತಲಿ ಸೈರಂಧ್ರಿ ಕಂಬನಿಯ ಸುರಿಸುತಲಿ
ಗಂಡನನು ಮೈಮುಟ್ಟಿ ಎಬ್ಬಿಸಲು ಕೋಪದಲಿ
ಸಿಡಿಲಂತೆ ಎರಗುತಲಿ ಹೊಡೆಯುವನೊ ಎನ್ನುತಲಿ
ಕೆಲದೊಳಿಹ ನೀರನ್ನು ಮುಖದಲ್ಲಿ ಸಿಂಪಡಿಸೆ ॥೫೧॥

ಕಲಿಭೀಮ ಕಣ್‌ತೆರೆದು ಮಸುಕಿನಲಿ ನೋಡುತಿರೆ
ಓರ್ವಸ್ತ್ರೀ ನಿಂತುದನು ಕಾಣುತಲಿ ಬೆರಗಾಗಿ
ಸ್ವಪ್ನವನು ಕಾಣುವೆನೊ ನಿಜಸ್ತ್ರೀಯ ನೋಡುವೆನೊ
ಎನ್ನುತಲಿ ದಿಟ್ಟಿಸುತ ನಿಜಸತಿಯ ಕಾಣುತಲಿ ॥೫೨॥

ಭಾಮಿನಿಯೆ ರಾತ್ರಿಯಲಿ ಏಕಾಂಗಿಯಾಗುತಲಿ
ಏತಕ್ಕೆ ಬಂದಿರುವೆ ಕಾರಣವ ತಿಳಿಸುವದು
ಆರಾದರೆಮ್ಮನ್ನು ನೋಡಿದರೆ ಈ ಕ್ಷಣದಿ
ನಮ್ಮಯಾ ಗುಟ್ಟೆಲ್ಲ ರಟ್ಟಾಗಿ ಹೋಗುವದು ॥೫೩॥

ಹನ್ನೆರಡು ವರ್ಷಗಳ ವನವಾಸ ಸಹಿಸಿದ್ದು
ಹಾಳಾಗಿ ಹೋಗುವದು ವ್ಯರ್ಥವದು ಎನಿಸುವದು
ಸತ್ಯದಾ ಪಾಲನೆಗೆ ಕಷ್ಟದಲಿ ನವೆದಿರುವ
ಧರ್ಮಜನು ನೋಯುತಲಿ ನಮ್ಮನ್ನು ನಿಂದಿಸನೆ ॥೫೪॥

ಎಮ್ಮಯಾ ಮಾನವದು ತೊಲಗುತಲಿ ಪುರಜನರು
ನಮ್ಮನ್ನು ನಿಂದಿಪರು ಹಿಂಸೆಯನು ಈಯುವರು
ನೀನಿಲ್ಲಿ ಕ್ಷಣವೊಂದು ನಿಲ್ಲದೆಯೆ ದ್ರೌಪದಿಯೆ
ಬೇರೆಡೆಗೆ ಹೋಗುವುದು ಎನ್ನುತಿರೆ ಕಲಿಭೀಮ ॥೫೫॥

ಸೈರಂಧ್ರಿ ಕೇಳುತಲಿ ಮನನೊಂದು ಮಿಡುಕುತಲಿ
ದುಃಖಿದಾ ತೆರೆಯುಕ್ಕಿ ಕಂಬನಿಯ ಮಿಡಿಯುತಲಿ
ಆ ನಾಯಿ ಕೀಚಕನು ಎನ್ನಯಾ ತುರುಬನ್ನು
ಹಿಡಿದೆಳೆಯೆ ಇನ್ನೆಲ್ಲಿ ನಮಗೆಂತು ಮಾನವಿದೆ ॥೫೬॥

ಕೀಚಕನು ನಿಮ್ಮಯಾ ಹೆಂಡತಿಯ ಹಿಡಿಯುತಲಿ
ಮಾನವನು ಕೆಡಿಸಲಿಕೆ ಯುಕ್ತಿಪ್ರದ ಕಾಣುತಲಿ
ಧರ್ಮದಾ ಹೆಸರಿನಲಿ ಹೇಡಿಗಳ ತೆರದಲ್ಲಿ
ಕೈಕಟ್ಟಿ ಕುಳಿತಿರುವ ನಿಮಗೆಲ್ಲಿ ಮಾನವಿದೆ ॥೫೭॥

ಧರ್ಮಜಗೆ ಧರ್ಮದಾ ಮರುಳುಚ್ಚು ಹಿಡಿದಿಹುದು
ಫಲ್ಗುಣನು ಧರ್ಮಜನ ನುಡಿಯಂತೆ ನಡೆಯುವನು
ಆ ನಕುಲ ಸಹದೇವ ಈರ್ವರೂ ನಿರ್ಬಲರು
ಕೀಚಕನ ಕೊಲ್ಲಲಿಕೆ ಅಸಮರ್ಥರಾಗಿಹರು ॥೫೮॥

ಐವರಿಗೆ ಗಂಡರೊಳು ನೀನೊಬ್ಬನೇ ಗಂಡನಿಹೆ
ಗಂಡುಸರ ಗಂಡನಿಹೆ ಎನ್ನುತಲಿ ನಿನ್ನಲ್ಲಿ
ಕಷ್ಟವನು ಹೇಳಿದರೆ ನೀನಿಂತು ನುಡಿಯುವದೆ
ನೀನಿಲ್ಲದಿನ್ನಾರು ಎನ್ನನ್ನು ರಕ್ಷಿಪರು ॥೫೯॥

ಹೆಂಡತಿಯ ಮಾನವನು ರಕ್ಷಿಸಲು ನಿಜಗಂಡ
ಅರಿರುಂಡ ಚಂಡಾಡಿ ಹೆಂಡತಿಯ ರಕ್ಷಿಪನು
ಇಲ್ಲದಿರೆ ತನ್ನಯಾ ಪ್ರಾಣವನು ತೊರೆಯುವನು
ನಿಮ್ಮಂಥ ಹೇಡಿಗಳ ನಾಕಾಣೆ ಜಗದೊಳಗೆ ॥೬೦॥

ನಾನೇನು ಮಾಡುವುದು ದ್ರೌಪದಿಯೆ ಅಂದಿನಲಿ
ಕೀಚಕನ ಕೊಲ್ಲಲಿಕೆ ಮರವೊಂದ ಕೀಳುತಿರೆ
ಧರ್ಮಜನು ಬೇಡೆಂದು ಎನ್ನನ್ನು ತಡೆದಿಹನು
ಅಣ್ಣನಾ ಆಜ್ಞೆಯನು ನಾನೆಂತು ಮೀರುವದು ॥೬೧॥

ಧರ್ಮಜಗೆ ಹೇಳುವುದು ಅರ್ಜುನನ ತಿದ್ದುವುದು
ಅವರಿಂದ ಕೀಚಕನ ನಾಯಿಯನು ಕೊಲಿಸುವುದು
ಭೋಗಕ್ಕೆ ಅವರಿಹರು ಕಷ್ಟಕ್ಕೆ ನಾನೆಂದು
ತಿಳಿಯುವದು ನ್ಯಾಯವೇ ಹೇಳೆಂದ ಕಲಿಭೀಮ ॥೬೨॥

ಭೀಮನಾ ಮಾತುಗಳ ಕೇಳುತಲಿ ದ್ರೌಪದಿಯು
ದುಃಖದಾ ಜ್ವಾಲೆಯದು ಹೊತ್ತುತಲಿ ಸುಡುತಿರಲು
ಕಳವಳದಿ ತಳಮಳಿಸಿ ನಾಗಿಣಿಯ ತೆರದಲ್ಲಿ
ಬಿಸಿಯುಸಿರ ಸೂಸುತಲಿ ರೋಷದಲಿ ನುಡಿದಿಹಳು ॥೬೩॥

ಹೆಂಡತಿಯ ಮಾನವನು ಎದುರಿನಲಿ ಕಳೆವುದನು
ಕಣ್ಣಾರೆ ಕಾಣುತಲಿ ಸುಮ್ಮನೇ ಕುಳಿತಿರುವ
ನೀವೇನು ಗಂಡರೋ ಷಂಡರೋ ಹೇಳುವುದು
ಎನ್ನುತಲಿ ಸಿಡಿಲಂತೆ ನುಡಿದಿಹಳು ದ್ರೌಪದಿಯು ॥೬೪॥

ಸಾಯಲಿಕೆ ನೀ ಎನಗೆ ಆಜ್ಞೆಯನು ಇತ್ತಿರುವೆ
ವಿಷವನ್ನು ಕುಡಿಯುವೆನು ಬಾವಿಯೊಳು ಬೀಳುವೆನು
ಉರಿಯೊಳಗೆ ಬೀಳುತಲಿ ಪ್ರಾಣವನು ತೊರೆಯುವೆನು
ಅಪಮಾನ ಸಹಿಸುತಲಿ ಜಗದೊಳಗೆ ಜೀವಿಸೆನು ॥೬೫॥

ಅಣ್ಣನಾ ಆಜ್ಞೆಯನು ಪಾಲಿಸುತ ಧರ್ಮದಲಿ
ನೀವೆಲ್ಲ ಹಾಯಾಗಿ ಸುಖವಾಗಿ ಜೀವಿಪುದು
ನಿಮ್ಮಯಾ ಸತ್ಯವದು ಧರ್ಮವದು ಮೆರೆಯಲಿ
ನಾ ಇನ್ನು ಪ್ರಾಣವನು ತೊರೆಯುವೆನು ಮನ್ನಿಪುದು ॥೬೬॥

ದುಃಖದಾ ಭರದಲ್ಲಿ ತಿಳಿಯದಲೆ ನುಡಿದಿರುವ
ಉದ್ಧಟದ ಮಾತುಗಳ ಸಹಿಸುತಲಿ ಮನ್ನಿಪುದು
ಎನ್ನುತಲಿ ಭೀಮನಾ ಪದಯುಗಕೆ ನಮಿಸುತಿರೆ
ವಜ್ರದಾ ಹೃದಯವದು ಕರಗುತಲಿ ನೀರಾಯ್ತು ॥೬೭॥

ದ್ರೌಪದಿಯು ದುಃಖದಾ ನುಡಿಗಳನು ಕೇಳುತಲಿ
ಮಿಡುಕುತಲಿ ಕಲಿಭೀಮ ಮನದೊಳಗೆ ಕೀಚಕನ
ಹಿಂಡುತಲಿ ಕೊಲ್ಲುತಲಿ ವಿರಾಟನಾ ವಂಶವನು
ನಿರ್ಮೂಲ ಮಾಡುವೆನು ಎಂದಿಹನು ರೋಷದಲಿ ॥೬೭ ಅ॥

**ದ್ರೌಪದಿಯ ದುಃಖದಾ ನುಡಿಗಳನು ಕೇಳುತಲಿ ।**
**ಮನಕರಗಿ ಕಲಿಭಿಮ ಸಾಂತ್ವನವ ಗೈದಿಹನು ॥**

ಹೃದಯದಲಿ ಪ್ರೀತಿಯಾ ತೊರೆಉಕ್ಕಿ ಹರಿಯುತಲಿ
ಕಲಿಭೀಮ ದ್ರೌಪದಿಯ ಕರವಿಡಿದು ಎಬ್ಬಿಸುತಲಿ
ಗಲ್ಲವನು ಪಿಡಿಯುತಲಿ ಬಿಗಿದಪ್ಪಿಕೊಳ್ಳುತಲಿ
ಕಂಬನಿಯ ನೊರೆಸುತಲಿ ನುಡಿದಿಹನು ಭರದಲ್ಲಿ ॥೬೮॥

ಮೀರಿದೆನು ಮೀರಿದೆನು ಅಣ್ಣನಾ ಆಜ್ಞೆಯನು
ದಾಂಟಿದೆನು ಧರ್ಮಜನ ಆಜ್ಞೆಯಾ ಗೆರೆಯನ್ನು
ಇಂದೆನ್ನ ತಡೆವವರು ಆರಿಲ್ಲ ಜಗದೊಳಗೆ
ನೀಚನಾ ಕೀಚಕನ ಖಚಿತದಲಿ ಕೊಲ್ಲುವೆನು ॥೬೯॥

ಶ್ರೀಕೃಷ್ಣ ಧರ್ಮಜನು ಎನ್ನಯಾ ಕಾರ್ಯದಲಿ
ಇದು ಸಲ್ಲದೆನ್ನುತಲಿ ಅಡ್ಡಿಯನು ಮಾಡಿದರೆ
ಅವರನ್ನು ಮನ್ನಿಸದೆ ತಳ್ಳುತಲಿ ನೂಕುತಲಿ
ಕೀಚಕನ ಕೊಲ್ಲುವೆನು ನೀನಂಬು ಮನದನ್ನೆ ॥೭೦॥

ದೇವೇಂದ್ರ ಸುರವೃಂದ ಅಜರುದ್ರ ರಡ್ಡೈಸಿ
ಎನ್ನನ್ನು ತಡೆಯುತಿರೆ ಅವರನ್ನು ಜಯಿಸುತಲಿ
ಕಾಮುಕನ ಕೀಚಕನ ಯಮಸದನಕಟ್ಟುವೆನು
ಭೀಮನಾ ಹೆಸರಿದುವೆ ಜಗದಲ್ಲಿ ಬೆಳಗುತಿರೆ ॥೭೧॥

ಭಾಮಿನಿಯೆ ದ್ರೌಪದಿಯೆ ಚಿಂತೆಯನು ತೊರೆಯುತಲಿ
ನಿಶ್ಚಿಂತಳಾಗುತಲಿ ನಿರ್ಭಯದಿ ನೀನಿಹುದು
ನಾಳಿನಾ ರಾತ್ರಿಯಲಿ ನಾಟ್ಯದಾ ಮಂದಿರದಿ
ಕೀಚಕಗೆ ಬರಹೇಳು ಖಚಿತದಲಿ ಕೊಲ್ಲುವೆನು ॥೭೨॥

ಕೇಳುತಿರೆ ಹರುಷದಲಿ ಮನದೊಳಗೆ ಉಬ್ಬುತಲಿ
ಆನಂದ ಬಾಷ್ಪವನು ಸುರಿಸುತಲಿ ದ್ರೌಪತಿಯು
ಭೀಮನಿಗೆ ವಂದಿಸುತ ಹೊರವಂಟು ಇರುಳಿನಲಿ
ಆರಿಗೂ ಕಾಣದಲೆ ನಿಜನಿಲಯ ಸೇರಿದಳು ॥೭೩॥

ಕ್ಷಣವೊಂದು ಯುಗವಾಗಿ ಕಳೆಯುತಲಿ ಕೀಚಕನು
ವಿರಹದಾ ಕಾಮಾಗ್ನಿ ಕುಂಡದಲಿ ಬೇಯುತಲಿ
ಬೆಳದಿಂಗಳಾ ತಂಪು ಬಿಸಿಲಾಗಿ ಸುಡುತಿರಲು
ರಾತ್ರಿಯನು ಕಳೆಯುತಲಿ ಕಾಮುಕನು ಕೀಚಕನು ॥೭೪॥

ಸೋದರಿ ಸುದೇಷ್ಣೆಯಾ ಮಂದಿರಕೆ ಐತಂದು
ಸೈರಂಧ್ರಿ ಸಾಧ್ವಿಯನು ನೋಡುತಲಿ ಅಂಜುತಲಿ
ನಿನ್ನನ್ನು ನೆನೆಸುತಲಿ ಇರುಳನ್ನು ಕಳೆದಿಹೆನು ॥೭೫॥
ಕಾಮದಾ ಬಾಧೆಯಲಿ ತೊಳಲಿದೆನು ಬಳಲಿದೆನು

ಚಂದಿರನ ನಲ್ವೆಳಕು ಬಿಸಿಲಾಗಿ ಸುಡುತಿತ್ತು
ಗಂಧದಾ ಮಾರುತವು ಎದೆಯುರಿಯು ಎನಗಾಯ್ತು
ಕಾಮನಾ ಬಾಣವನು ಹೃದಯವನು ಇರಿಯುತಿದೆ
ಎನ್ನಿಚ್ಛೆ ಸಲಿಸುವುದು ಎನ್ನುತಿರೆ ಕೀಚಕನು ॥೭೬॥

ಎನ್ನಯಾ ವಲ್ಲಭರು ಈ ವಿಷಯವರಿಯುತಲಿ
ನಿನ್ನನ್ನು ಕೊಲ್ಲುವರು ವಂಶವನು ತರಿಯುವರು
ವಿಧಿಲಿಖಿತ ಭೋಗಿಸುವೆ ಇಂದಿರುಳು ಗುಪಿತದಲಿ
ನಾಟ್ಯದಾಮಂದಿರದಿ ನೀ ಬಂದು ನಿಲ್ಲುವುದು ॥೭೭॥

ನಿನ್ನನ್ನು ಕಾಣಲಿಕೆ ನಾನಲ್ಲಿ ಐತರುವೆ
ನಿನ್ನಯಾ ಆಯುಷ್ಯ ಬಟ್ಟಲವು ತುಂಬಿಹುದು
ಎನ್ನುತಲಿ ಸೈರಂಧ್ರಿ ಕೀಚಕನು ಕಳುಹಿಸುತ
ಭರದಿಂದ ಬಾಣಸಿಗನಿದ್ದೆಡೆಗೆ ಧಾವಿಸುತ ॥೭೮॥

ಇಂದಿನಾ ರಾತ್ರಿಯಲಿ ನಾಟ್ಯದಾ ಮದಿರಕೆ
ದುಷ್ಟನಿಗೆ ಕೀಚಕಗೆ ಬರಹೇಳಿ ಬಂದಿಹೆನು
ನೀಚನಾ ಕೀಚಕನ ಕೊಲ್ಲುವುದು ಎನ್ನುತಲಿ
ಭೀಮನಾ ನೊಸಲಿನಲಿ ಕುಂಕುಮವ ಹಚ್ಚಿದಳು ॥೭೯॥

**ಹೆಣ್ಣಿನಾ ವೇಷದಲಿ ಕಲಿಭೀಮ ಐತಂದು ।**
**ದುರುಳನಾ ಕೀಚಕನ ಯಮಸದನಕಟ್ಟಿದನು ॥**

ಕೇಶವನು ಓಕ್ಕುತಲಿ ಮಲ್ಲಿಗೆಯ ಮುಡಿಯುತಲಿ
ಜರದಂಚಿನಾ ಸೀರೆ ಧರಿಸುತಲಿ ಹೊಳೆಯುತಲಿ
ಅರಿಶಿನವ ಕುಂಕುಮದ ಆಭರಣ ಭೂಷಣದಿ
ಕಲಿಭೀಮ ಹೆಣ್ಣಿನಾ ರೂಪವನು ಧರಿಸುತಲಿ ॥೮೦॥

ಇರುಳಿನಲಿ ನಾಟ್ಯದಾ ಮಂದಿರಕೆ ಐತಂದು
ರತ್ನದಾ ಮಂಚದಲಿ ಕಲಿಭೀಮ ಪವಡಿಸಿರೆ
ಮೃತ್ಯುವಿನ ಬಾಯಿಯನು ಹೊಗುವಂತೆ ಧಾವಿಸುತ
ಮಂಚದಾ ಬಳಿಬಂದ ಕಾಮುಕನು ಕೀಚಕನು ॥೮೧॥

ಎನ್ನತೆರ ಸುಂದರರ ಪುರುಷರನು ಜಗದೊಳಗೆ
ನೀ ಮುನ್ನ ನೋಡಿದೆಯಾ ಸೈರಂಧ್ರಿ ಹೇಳೆನಲು
ನಿನ್ನತೆರ ಪುರುಷರಾ ಪರಿಯುದುವೆ ಬೇರಿರಲಿ
ಎನ್ನತೆರ ಸ್ತ್ರೀಯಳನು ಲೋಕದಲಿ ಕಂಡಿಹೆಯಾ ॥೮೨॥

ಲೋಕದಾ ಲಲನೆಯರ ರೂಪಕ್ಕೆ ಭಿನ್ನವಿಹ
ಆರಿಗೂ ಸರಿಯಿಲ್ಲದೀ ರೂಪವದ್ಭುತವು
ಜಗದೊಳಗೆ ನನಗಾರು ಸೋಲದಾ ನರರಿಲ್ಲ
ನನ್ನಯಾ ಹೆಣ್ಣುತನ ಬೇರೆಯೇ ಇರುತಿಹುದು ॥೮೩॥

ಬೇಗನೇ ತೋರುವೆನು ಎನ್ನುತಿರೆ ಕಲಿಭೀಮ
ಕೀಚಕನು ಹರುಷದಲಿ ಪವನಜನ ಮೈದಡವಿ
ವೃತ್ತದಾ ಸ್ತನಗಳನು ಕಾಣದಲೆ ಹೆದರುತಲಿ
ನಾರಿಯೋ ಮೋಹಮಾರಿಯೊ ನೀನಾರು ಹೇಳೆನಲು ॥೮೪॥

ಪರಸತಿಯ ಬಯಸುವಗೆ ಕೋಮಲತೆ ಕರ್ಕಶವು
ಅಮೃತವದು ವಿಷವಹುದು ಖಳಹೋಗು ಎನ್ನುತಲಿ
ಕಲಿಭೀಮ ಕೀಚಕನ ಮುಂದಲೆಯ ಹಿಡಿಯುತಿರೆ
ಹೆಂಗುಸಳು ಇವಳಲ್ಲ ಪುರುಷನಿಹ ಶತ್ರುವಿಹ ॥೮೫॥

ಎನ್ನುತಲಿ ಕೀಚಕನು ಮಾರುತಿಯ ಮುತ್ತುತಲಿ
ಮುಷ್ಟಿಯಲಿ ಹೊಯ್ಯುತಲಿ ಮಲ್ಲದಲಿ ಕಾದಾಡಿ
ಎತ್ತುತಲಿ ಒಗೆಯುತಲಿ ಯುದ್ಧವನು ಗೈಯ್ಯುತಿರೆ
ಅದ್ರಿಗಳು ಕಾದುವಾ ಪರಿಯಲ್ಲಿ ಕಂಡಿಹರು ॥೮೬॥

ಮಾರುತಿಯು ಶಿರದಲ್ಲಿ ಮುಷ್ಟಿಯಲಿ ಹೊಡೆಯುತಿರೆ
ಪವನಜನು ರೋಷದಲಿ ಪರ್ವತದ ಶಿಖರಕ್ಕೆ
ಬರಸಿಡಿಲು ಎರಗುವಾ ತೆರದಲ್ಲಿ ಬಲವಾಗಿ
ಕೀಚಕನ ಶಿರದಲ್ಲಿ ಮುಷ್ಟಿಯಲಿ ಹೊಡೆಯುತಿರೆ ॥೮೭॥

ಕೀಚಕನ ತಲೆಯದುವ ಹೋಳಾಗಿ ಒಡೆಯುತಿರೆ
ರಕುತದಾ ಬುಗ್ಗೆಯದು ಘಳಿಲೆಂದು ಚಿಮ್ಮುತಿರೆ
ದುರುಳನಾ ಉದರವನು ತಿವಿಯುತಿರೆ ಭರದಲ್ಲಿ
ದವಡೆಯು ಬಿರಿಯುವಾ ತೆರದಲ್ಲಿ ಚೀರುತಲಿ ॥೮೮॥

ಕರುಳಿನಾ ಮಾಲೆಯದು ಹೊರಸೂಸಿ ಚೆಲ್ಲುತಿರೆ
ರುಧಿರದಾ ಝರಿಯದುವೆ ಚಿಮ್ಮುತಲಿ ಹರಿಯುತಿರೆ
ಕೀಚಕನ ಪ್ರಾಣದಾ ಪಕ್ಷಿಯದು ಹಾರುತಲಿ
ದೇಹವದು ಬಿದ್ದಿಹುದು ರಕುತದಾ ಮಡುವಿನಲಿ ॥೮೯॥

ಹೋರಾಟ ಸಪ್ಪಳವ ಕೇಳುತಿಹ ಸೈರಂಧ್ರಿ
ಕಾಮುಕನು ಪ್ರಾಣವನು ತೊರೆದುದನು ಕಾಣುತಲಿ
ಸಂತಸವು ಉಕ್ಕುತಲಿ ಧಾವಿಸುತ ಓಡುತಲಿ
ಪವನಜನ ಬಿಗಿದಪ್ಪಿ ಹರ್ಷಜಲ ಸುರಿಸಿದಳು ॥೯೦॥

ದುರುಳನಾ ಕೀಚಕನು ಮಡಿದಿರುವ ವೃತ್ತಾಂತ
ಕಾಳ್ಗಿಚ್ಚು ಹಬ್ಬುವಾ ಪರಿಯಲ್ಲಿ ಭರದಲ್ಲಿ
ನಗರದಲಿ ಬಾಯಿಂದ ಬಾಯಿಯಲಿ ಪಸರುತಿರೆ
ಕೀಚಕನ ಸೋದರರು ಕೇಳುತಲಿ ಕಳವಳಿಸಿ ॥೯೧॥

ಪವನಜನ ಮುತ್ತುತಿರೆ ಕಲಿಭೀಮ ಕೋಪದಲಿ
ದಾರಿಯಾ ಮರವೊಂದ ಕೀಳುತಲಿ ಕ್ಷಣದಲ್ಲಿ
ಹುಳಬಡಿದ ತೆರದಲ್ಲಿ ಕೀಚಕನ ಸೋದರರ
ಬಡಿಯುತಲಿ ಒರಸುತಲಿ ಸವರಿದನು ಸಕಲರನು ॥೯೨॥

ಪರವನಿತೆಗಳುಪಿದೊಡೆ ಸರಿಯಾದ ಶಿಕ್ಷೆಯಿದು
ಸೈರಂಧ್ರಿ ಸಾಧ್ವಿಯನು ಕಾಮಿಸಿದ ಕೀಚಕನ
ಅವಳ ಪತಿ ಗಂಧರ್ವ ಕೋಪದಲಿ ಕೊಂದಿಹನು
ಸೈರಂಧ್ರಿಗಿದೊ ನಮನ ಎಂದಿಹುದು ಪುರಜನವು ॥೯೩॥

ಸೈರಂಧ್ರಿ ನೋಡುತಲಿ ಮುಗುಳುನಗೆ ಬೀರುತಿರೆ
ಕಲಿಭೀಮ ಬಾಣಸಿನ ಮನೆಯೊಳಗೆ ಸೇರಿದನು
ನಗರಜನ ದ್ರೌಪದಿಗೆ ನಮೊ ಎಂದು ನಮಿಸುತಿರೆ
ದ್ರೌಪದಿಯು ನಸುನಗುತ ನಿಜನಿಲಯ ಹೊಕ್ಕಿಹಳು ॥೯೪॥

ಕೀಚಕನ ಮರಣದಾ ವಾರ್ತೆಯನು ಕೇಳುತಲಿ
ವಿರಾಟನೃಪ ದುಃಖದಲಿ ಸುದೇಷ್ಣೆಯನು ಕರೆಸುತಲಿ
ದುಷ್ಟಳೀ ಸೈರಂಧ್ರಿ ಚಂಡಿಯೊ ಮೇಣ್ಮಾರಿಯೊ
ಇವಳನ್ನು ಹೊರಗಟ್ಟು ಎನ್ನುತಲಿ ನುಡಿದಿಹನು ॥೯೫॥

ವಿರಾಟನಾ ಅಂಗನೆಯು ಸೈರಂಧ್ರಿ ಕರೆಸುತಲಿ
ಎನ್ನಯಾ ಸೋದರನ ಕೀಚಕನ ಕೊಲ್ಲಲಿಕೆ
ಕಾರಣಳು ನೀನಿರುವೆ ನೀ ಮೋಸ ಗೈದಿರುವೆ
ಇಲ್ಲಿಂದ ತೊಲಗುತಲಿ ಬೇರೆಡೆಗೆ ನೀ ಹೋಗು ॥೯೬॥

ಆಶ್ರಯವ ನಿತ್ತುದಕೆ ಉಪಕಾರ ತೀರಿಸಿದೆ
ಉಂಡಮನೆ ಗಳಗಳನು ಎಣಿಸಿರುವ ಕೃತಘ್ನೆಳಿಹೆ
ನಿಮಿಷವೂ ನಿಲ್ಲದೆಯೆ ಈ ಕ್ಷಣದಿ ಹೋಗುವದು
ಎನ್ನುತಲಿ ಸೈರಂಧ್ರಿಗೊರೆಯುತಿರೆ ಕೋಪದಲಿ ॥೯೭॥

ದೇವಿಯರೆ ಎನ್ನೊಳಗೆ ಆವುದೂ ತಪ್ಪಿಲ್ಲ
ನಿಮ್ಮಯಾ ಸೋದರನು ಎನ್ನನ್ನು ಮೋಹಿಸುತ
ಕೆಣಕುತಿರೆ ಎನ್ನಯಾ ಗಂಧರ್ವ ವಲ್ಲಭನು
ಕೀಚಕನ ಕೊಂದಿಹನು ಸೋದರರ ಸಹಿತದಲಿ ॥೯೮॥

ತಮ್ಮಯಾ ಕರ್ಮದಲಿ ತಾವೆಲ್ಲ ಅಳಿದಿಹರು
ಎಮ್ಮೊಳಗೆ ಆವುದೂ ಅಪರಾಧವೆನಿತಿಲ್ಲ
ತಮ್ಮಯಾ ತಮ್ಮಯ್ಯ ತಪ್ಪುತಲಿ ನಡೆದಿರಲು
ನಮ್ಮಲ್ಲಿ ಆವುದೂ ದೋಷವದು ಕಾಣೆಸದು ॥೯೯॥

ಸೈರಂಧ್ರಿ ನಿಮ್ಮೊಳಗೆ ಆವುದದು ತಪ್ಪಿಲ್ಲ
ನಿಮಗೆನಾವ್ ಅಂಜುವೆವು ಮಹಾತುಮೆ ತಾಯಿಯೆ
ನಗರದೊಳು ನೀವಿರಲು ಭಯಭೀತಿ ಹೆಚ್ಚುವುದು
ಬೇಕಾದ ಠಾವಿಂಗೆ ತೆರಳುವುದು ನೀವೆನಲು ॥೧೦೦॥

ನಿಮ್ಮಯಾ ಸೇವೆಯಲಿ ಹದಿಮೂರು ದಿವಸಗಳ
ಕಳೆಯುತಲಿ ನಿಮಿಷವದು ನಿಲ್ಲದೆಯೆ ಹೋಗುವೆವು
ಒಳಿತೆಮಗೆ ಲೇಸಹುದು ಜಗಳದವರಾವಲ್ಲ
ಎನ್ನುತಲಿ ಸೈರಂಧ್ರಿ ನಿಜಗೃಹಕೆ ತೆರಳಿದಳು ॥೧೦೧॥

ಕೀಚಕನ ಮರಣದಾ ಸುದ್ದಿಯದು ಪಸರುತಲಿ
ಇಭಪುರಿಗೆ ತಲುಪುತಲಿ ಕೌರವನು ಕೇಳುತಿರೆ
ಆವಳೀ ದಿವಿಜಸತಿ ಅತಿಚೆಲುವೆ ಸುಂದರಿಯು
ಕೀಚಕನ ಕೊಂದಿರುವ ಗಂಧರ್ವರಾರಿಹರು ॥೧೦೨॥

ಜಗದೊಳಗೆ ಸಮರದಲಿ ಬಲರಾಮ ಕಲಿಭೀಮ
ಕೀಚಕನು ಶಲ್ಯನೃಪ ಸಮಬಲರು ಎನಿಸುವರು
ದಿವಿಜಸತಿ ದ್ರೌಪದಿಯು ಕೀಚಕನ ಕೊಂದವನು
ಕಲಿಭೀಮ ಖಚಿತವಿದು ಎನ್ನುತಲಿ ನಿಶ್ಚಯಿಸಿ ॥೧೦೩॥

ಅವಧಿಯದು ಮುಗಿಯದಾ ಮುನ್ನಿನಲಿ ಪಾಂಡವರು
ಅರಿಯುತಲಿ ಈರೇಳು ವರ್ಷಗಳ ಪರ್ಯಂತ
ಮತ್ತೊಮ್ಮೆ ವನವಾಸಕಟ್ಟುವುದು ಎನ್ನುತಲಿ
ಗುರುಭೀಷ್ಮ ದ್ರೋಣರನು ಕರೆಸುತಲಿ ಇಂತೆಂದ ॥೧೦೪॥

ಸೈರಂಧ್ರಿ ದ್ರೌಪದಿಯು ಅವಳನ್ನು ಮೋಹಿಸುತ
ಕೀಚಕನ ಕೊಂದವನು ಪವನಜನು ಖಚಿತವಿದು
ಮತ್ಸ್ಯದಾ ದೇಶದಲಿ ಪಾಂಡವರು ಇರುತಿಹರು
ಕಾಲವದು ಸವೆದಿಲ್ಲ ಈಗಳೇ ಅರಿಯುತಲಿ ॥೧೦೫॥

ಮತ್ತೊಮ್ಮೆ ಹದಿಮೂರು ವರ್ಷಗಳ ಪರ್ಯಂತ
ವನವಾಸಕಟ್ಟುವುದು ಎನ್ನುತಿರೆ ಗುರುಭೀಷ್ಮ
ಇದು ಯೋಗ್ಯವೆನ್ನಿಸದು ಪಾಂಡವರ ಕರೆಸುತಲಿ
ರಾಜ್ಯವನು ಈಯುವುದು ಎನ್ನುತಲಿ ನುಡಿದಿಹನು ॥೧೦೬॥

ಪಾಂಡವರು ಈ ರಾಜ್ಯದಧಿಪತಿಗಳಿರುತಿಹರು
ಸರಿ ಅರ್ಧ ರಾಜ್ಯವನು ಸರಸದಲಿ ಈಯುವುದು
ನಿನಗಿದುವೆ ಭೂಷಣವು ಜಗವೆಲ್ಲ ಹೊಗಳುವುದು
ಎನ್ನುತಲಿ ಗುರುಭೀಷ್ಮ ಹಿತವಚನ ನುಡಿಯುತಿರೆ ॥೧೦೭॥

ನಿಮ್ಮಯಾ ನುಡಿಗಳನು ಕೇಳುತಲಿ ಒಪ್ಪಿದರೆ
ಕಡುಮೂರ್ಖ ನಾನೆನಿಪೆ ಸಂಧಿಯದು ಬೇಡೆಮಗೆ
ಮತ್ಸ್ಯದಾ ದೇಶವನು ಮುತ್ತುತಲಿ ಪಾಂಡವರ
ಅರಿಯುತಲಿ ಮತ್ತೊಮ್ಮೆ ವನವಾಸಕಟ್ಟುವೆವು ॥೧೦೮॥

**ದಕ್ಷಿಣದ ಗೋಗ್ರಹಣ ಕದನದಲಿ ಕಲಿಭೀಮ ।**
**ಸುಶರ್ಮನನ ಬಂಧಿಸುತ ಧರ್ಮಜಗೆ ಒಪ್ಪಿಸಿದ ॥**

ಎನ್ನುತಲಿ ಕೌರವನು ಮಂತ್ರಿಗಳ ಸಹಿತದಲಿ
ಗಾಂಗೇಯ ಗುರುದ್ರೋಣ ಕಲಿಕರ್ಣ ಸುಶರ್ಮಾದಿ
ನಾಯಕರ ಸಹಿತದಲಿ ಚತುರಂಗ ಸೈನ್ಯದಲಿ
ಯುದ್ಧಕ್ಕೆ ಹೊರಟಿಹನು ಭೂಮಿಯದು ಕುಸಿಯುತಿರೆ ॥೧೦೯॥

ಕೌರವರ ಸೈನ್ಯವನು ಎರಡಾಗಿ ಮಾಡುತಲಿ
ಸುಶರ್ಮನನು ದೆಂಕಣಕೆ ಮುತ್ತಲಿಕೆ ಕಳಿಸುತಲಿ
ಉತ್ತರದ ದೆಸೆಯೊಳಗೆ ತಾನಿಹೆನು ಎನ್ನುತಲಿ
ತ್ರಿಗರ್ತನಾ ಸಹಿತದಲಿ ಉತ್ತರಕೆ ಸಾಗಿದನು ॥೧೧೦॥

ದಕ್ಷಿಣದ ದೆಸೆಯಲ್ಲಿ ಸುಶರ್ಮ ಮುತ್ತುತಲಿ
ಅಗಣಿತದ ಗೋವುಗಳ ಅಪಹರಿಸಿ ಒಯ್ಯುತಿರೆ
ವಿರಾಟನೃಪ ಕಳವಳದಿ ಸೈನ್ಯವನು ಕೊಳ್ಳುತಲಿ
ಯುದ್ಧವನು ಮಾಡಲಿಕೆ ಚಿಂತಿಸುತ ಸಾಗಿರಲು ॥೧೧೧॥

ಗೋವುಗಳ ಅಪಹರಣ ನೋಡುತಲಿ ಪರಕಂಕ
ನಾವೀಗ ಸುಮ್ಮನೇ ನೋಡುತಲಿ ಕುಳಿತಿಹುದು
ಕ್ಷತ್ರಿಯರ ಧರ್ಮಕ್ಕೆ ವಿಪರೀತ ವೆನ್ನುತಲಿ
ಸೋದರರ ಸಹಿತದಲಿ ಯುದ್ಧಕ್ಕೆ ತೆರಳಿದನು ॥೧೧೨॥

ಘನಘೋರ ಯುದ್ಧವನು ಗೈಯ್ಯುತಲಿ ಸುಶರ್ಮನು
ವಿರಾಟನೃಪನನ್ನು ಬಂಧಿಸುತ ಒಯ್ಯುತಿರೆ
ಬಾಣಸಿಗ ಆ ಎಲಲಿ ನೋಡುತಲಿ ಭರದಲ್ಲಿ
ಸನಿಹದಲಿ ಹೆಮ್ಮರವ ಕೀಳಲಿಕೆ ಯತ್ನಿಸುತಿರೆ ॥೧೧೩॥

ಭೀಮನಿವ ಮರವನ್ನು ಕೀಳುತಲಿ ಎತ್ತಿದರೆ
ಕಲಿಭೀಮ ಎನ್ನುತಲಿ ಕೌರವನು ಅರಿಯುವನು
ಎಂದರಿತು ಪರಕಂಕ ಬಾಣಸಿಗ ವಲಲನೆ
ತರುವನ್ನು ಮುರಿಯದಿರು ಪಥಿಕರಿಗೆ ನೆರಳಿಹುದು ॥೧೧೪॥

ಧರ್ಮದಾ ಆಶ್ರಯದ ಮರವಿದನು ಮುರಿಯದಿರು
ಅಡಿಗೆಯನು ಮಾಡಲಿಕೆ ಕಟ್ಟಿಗೆಯು ಬೇರುಂಟು
ಬಾಹುಬಲ ನಿನಗುಂಟು ಬೇರೆಡೆಗೆ ದೊರೆಯುವದು
ಎನ್ನುತಲಿ ಪರಕಂಕ ವಲಲನಿಗೆ ನುಡಿಯುತಿರೆ ॥೧೧೫॥

ಸರಳದಲಿ ಸಾವಿರದ ತುರುಗಳನು ತರಿಯುತಲಿ
ಕರಿಗಳನು ಐನೂರ ತಿವಿಯುತಲಿ ಕೊಲ್ಲುತಲಿ
ಲಕ್ಷದಲಿ ಕಾಲಾಳು ಸೈನಿಕರ ಒರೆಸುತಲಿ
ಪವನಜನು ಸುಶರ್ಮನನ ಜೆನ್ನಟ್ಟಿ ಸೆರೆಹಿಡಿದು ॥೧೧೬॥

ಧರ್ಮಜಗೆ ಒಪ್ಪಿಸಲು ಸುಶರ್ಮನನು ಬಿಡಿಸುತಿರೆ
ವಿರಾಟನೃಪ ಸಂತಸದಿ ನೀವೆಮ್ಮ ಅರಸುಗಳು
ನಿಮ್ಮಯಾ ಸೇವೆಯನು ನಾವಿನ್ನು ಮಾಡುವೆವು
ಈ ದೇಶ ನಿಮ್ಮದಿದೆ ನೀವೆಯೇ ಆಳುವದು ॥೧೧೭॥

ನಾಲ್ವರೂ ನೀವಾವ ದೇಶದಾ ನೃಪರಿಹಿರಿ
ನಿಮ್ಮಯಾ ವೇಷಗಳು ಅಚ್ಚರಿಯು ಎನಿಸುವದು
ಎನ್ನುತಲಿ ವಿರಾಟನೃಪ ನುಡಿಯುತಿರೆ ಧರ್ಮಜನು
ಸಂತಸದಿ ಭಾವಿಸಿದೊಡೆ ಧರೆಯಿದುವೆ ನಮ್ಮದಿದೆ ॥೧೧೮॥

ಕಷ್ಟದಾ ಸಮಯದಲಿ ದಾರಿಯನು ಕಾಣದಲೆ
ನಾವೆಲ್ಲ ನಿಮ್ಮಯಾ ಬಳಿಬರಲು ಕರುಣೆಯಲಿ
ಆಶ್ರಯವನಿತ್ತಿರುವ ನಿಮ್ಮಯಾ ಋಣವನ್ನು
ನಾವೆಂತು ತೀರಿಪೆವು ಎನ್ನುತಲಿ ನುಡಿದಿಹನು ॥೧೧೯॥

**ಉತ್ತರದ ಗೋಗ್ರಹಣ ಸಮಯದಲಿ ಕಲಿಪಾರ್ಥ ।**
**ಉತ್ತರ ಕುಮಾರಂಗೆ ಸಾರಥಿಯು ಆಗಿಹನು ॥**

ಕೌರವನು ದಕ್ಷಿಣದ ಗೋಗ್ರಹಣ ಪರಿಭವದಿ
ಮನನೊಂದು ಮಿಡುಕುತಲಿ ಮೂಗುಡದಲಿ ಕಳವಳಿಸಿ
ಉತ್ತರದ ಗೋಗ್ರಹಣ ಮನದೊಳಗೆ ನೆನೆಯುತಲಿ
ಮರುದಿವಸ ಉತ್ತರದಿ ನುಗ್ಗುತಲಿ ಮುತ್ತುತಲಿ ॥೧೨೦॥

ಅಪರಿಮಿತ ಗೋವುಗಳ ಅಪಹರಣ ಗೈಯುತಲಿ
ಓರ್ವನಾ ಮುಖಕೆಲ್ಲ ಸುಣ್ಣವನು ಬಳಿಯುತಲಿ
ಕಳುಹಿಸಲು ಭೀತಿಯಲಿ ಉಸಿರು ಮೇಲ್ಕೆಳಗಾಗಿ
ಉತ್ತರನ ಬಳಿಬಂದು ನುಡಿದಿಹನು ತೊದಲುತಲಿ ॥೧೨೧॥

ಸಾಗರದ ಪರಿಯಲ್ಲಿ ತೋರುತಿಹ ಸೈನ್ಯದಲಿ
ಗಜಪುರದ ಅರಸುಗಳು ಕೌರವರು ಮುತ್ತುತಲಿ
ನಮ್ಮಯಾ ಗೋವುಗಳ ಅಪಹರಣ ಗೈದಿಹರು
ಬೇಗನೆ ಗೋವುಗಳ ಬಿಡಿಸುವುದು ಎನ್ನುತಿರೆ ॥೧೨೨॥

ಎಲವೆಲವೊ ಹೇಡಿಯೆ ಯುದ್ಧವನು ಮಾಡದಲೆ
ಪ್ರಾಣದಾ ಭಯದಿಂದ ಓಡುತಲಿ ಬರುತಿಲ್ಲಿ
ವಾರ್ತೆಯನು ಹೇಳಲಿಕೆ ನಾಚಿಕೆಯು ಬಾರದೇ
ಯುದ್ಧವನು ಗೈಯ್ಯದಲೆ ಬಂದಿರುವ ಮೂರ್ಖನಿಹೆ ॥೧೨೩॥

ನಾನಾರು ಎಂಬುದನು ತಿಳಿಯದಲೆ ಹುಚ್ಚನೆ
ಕೌರವನ ಶೌರ್ಯವನು ಮನಸಾರೆ ಹೊಗಳುತಿಹೆ
ಬಾಯಿಯಲಿ ಬಂದುದನು ಬೊಗಳುತಿಹ ಮೂರ್ಖನೆ
ಎನ್ನಯಾ ಸರಿಸಮರು ಯುದ್ಧದಲಿ ಆರಿಲ್ಲ ॥೧೨೪॥

ಹುಲಿಯನ್ನು ಕೆಣಕುತಿಹ ಇಲಿಮರಿಯ ಪರಿಯಲ್ಲಿ
ಆನೆಯನು ಕೆಣಕುತಿಹ ಶ್ವಾನದಾ ಪರಿಯಂತೆ
ಎನ್ನನ್ನು ಆರೆಂದು ತಿಳಿಯದಲೆ ಕೆಣಕಿರುವ
ಕಡುಮೂರ್ಖ ಕೌರವನ ಯಮಸದನಕಟ್ಟುವೆನು ॥೧೨೫॥

ಮಾನಿನಿಯ ಮಾನವನು ಕಳೆಯಲಿಕೆ ಯತ್ನಿಸುತ
ಪಾಂಡವರ ಕಾನನಕೆ ನೂಕಿದಾ ಪರಿಯಲ್ಲಿ
ಹೀನನೆನ್ನುತಲಿ ಎನ್ನನ್ನು ಬಗೆದಿಹನೆ
ಕೌರವನ ಕರುಳನ್ನು ಬಗೆಯುತಲಿ ಕೊಲ್ಲುವೆನು ॥೧೨೬॥

ಆರೊಡನೆ ಕಾದುವೆನು ಕೌರವನ ಸೈನ್ಯದಲಿ
ವರಭೀಷ್ಮ ಮುದುಕನಿಹ ದ್ರೋಣನವ ಗುರುವಿಹನು
ಕಲಿಕರ್ಣ ಕುಲದೊಳಗೆ ಕೊರತೆಯಾಗಿಹನು
ನನಗಾರು ಸರಿಸಮರು ವೀರರನು ನಾಕಾಣೆ ॥೧೨೭॥

ಕೌರವನ ಸೈನ್ಯವನು ಖಡ್ಗದಲಿ ತರಿದಿಕ್ಕಿ
ದಿಗುಬಲಿಯ ನಿಕ್ಕುವೆನು ಭೂತಗಳಿಗುಣಿಸುವನು
ಅರಿಗಳಾ ರುಂಡಗಳ ತರಿಯುತಲಿ ನೆಗೆಸುತಲಿ
ಗಗನಕ್ಕೆ ತೋರಣವ ಕಟ್ಟುವೆನು ವಿಕ್ರಮದಿ ॥೧೨೮॥

ಹಸ್ತಿನಾಪುರವನ್ನು ಭಸ್ಮವನು ಮಾಡುವೆನು
ಯಮಧರ್ಮ ನಾನಿಹೆನು ಯಮಲೋಕಕಟ್ಟುವೆನು
ಎನ್ನುತಲಿ ಉತ್ತರನು ಹೆಂಗಳೆಯರೆಮರಿನಲಿ
ತನ್ನಯಾ ಪೌರುಷವ ಜಂಭವನು ಕೊಚ್ಚುತಲಿ ॥೧೨೯॥

ಆದರೇನುಸುರುದು ನಿನ್ನೆಯಾ ಯುದ್ಧದಲಿ
ಸಾರಥಿಯು ಸತ್ತಿಹನು ಎನಗಿಲ್ಲ ಸಾರಥಿಯು
ಆ ಪರಿಯ ಇರುತಿರುವ ಸಾರಥಿಯು ಸಿಕ್ಕಿದರೆ
ಯುದ್ಧವನು ಗೈಯ್ಯುತಲಿ ಜಯಿಸುವೆನು ಎನ್ನುತಿರೆ ॥೧೩೦॥

ಸೈರಂಧ್ರಿ ಕೇಳುತಲಿ ಉತ್ತರಗೆ ನುಡಿದಿಹಳು
ದೇವಿಯರೆ ನಾಟ್ಯವನು ಕಲಿಸುವೀ ಬೃಹನ್ನಳೆಯು
ಖಾಂಡವರ ಕದನದಲಿ ಕಲಿಪಾರ್ಥ ವೀರಂಗೆ
ಸಾರಥ್ಯಗೈದುದನು ಚನ್ನಾಗಿ ಅರಿತಿಹೆನು ॥೧೩೧॥

ನೀವ್ ತೆರಳಿ ನಿಮ್ಮಣ್ಣ ದೇವನಿಗೆ ಧೈರ್ಯದಲಿ
ಬೃಹನ್ನಳೆಯು ಪಾರ್ಥಂಗೆ ಸಾರಥ್ಯಗೈದಿಹನು
ನಿಮ್ಮಯಾ ಸಾರಥ್ಯಗೈಯ್ಯುವನು ಎನ್ನುತಲಿ
ಸೂಚಿಪುದು ಎನ್ನುತಿರೆ ಉತ್ತರೆಯು ಸಂತಸದಿ ॥೧೩೨॥

ಅಣ್ಣನಾ ಉತ್ತರನ ಬಳಿಬಂದು ನುಡಿದಿಹಳು
ಇಂದ್ರನಾ ಜೊತೆಯಲ್ಲಿ ಯುದ್ಧವನು ಮಾಡುತಿರೆ
ಪಾರ್ಥಂಗೆ ಬೃಹನ್ನಳೆಯು ಸಾರಥ್ಯಗೈದಿಹನು
ನಿನಗಿವನು ಸಾರಥಿಯು ಆಗುವನು ಎನ್ನುತಿರೆ ॥೧೩೩॥

ತಂಗಿಯೇ ನೀನೊಬ್ಬ ಸಾರಥಿಯನೀಯುತಲಿ
ಎನ್ನಯಾ ಮಾನವನು ಶೌರ್ಯವನು ಉಳಿಸಿರುವೆ
ನಿನಗಾರು ಈ ವಿಷಯ ತಿಳಿಸಿದರು ಹೇಳುವುದು
ಎನ್ನುತಿರೆ ಸೈರಂಧ್ರಿ ಅರುಹಿದಳು ಎನ್ನುತಿರೆ ॥೧೩೪॥

ಉತ್ತರನು ಸೈರಂಧ್ರಿಯವಳನ್ನು ಕರೆಸುತಲಿ
ನೀನೀಗ ತೆರಳುತಲಿ ಬೃಹನ್ನಳೆಯ ಮನಒಲಿಸಿ
ಎನ್ನಯಾ ಸಾರಥಿಯು ಆಗುವದು ಎನ್ನುತಲಿ
ಕರೆತರುವದೆನ್ನುತಿರೆ ಸೈರಂಧ್ರಿ ನುಡಿದಿಹಳು ॥೧೩೫॥

ಎಮ್ಮಯಾ ಮಾತನ್ನು ಕೇಳನು ಬೃಹನ್ನಳೆಯು
ನಿಮ್ಮಯಾ ತಂಗಿಯನು ಉತ್ತರೆಯ ಕಳುಹುವುದು
ಎನ್ನುತಿರೆ ಉತ್ತರೆಯು ಶೃಂಗಾರ ಭೂಷಣದಿ
ಬೃಹನ್ನಳೆಯು ಇದ್ದೆಡೆಗೆ ಸಂಭ್ರಮದಿ ನಡೆತಂದು ॥೧೩೬॥

ಖಾಂಡವದ ದಹನದಲಿ ಸುರರೊಡನೆ ಯುದ್ಧದಲಿ
ಅರ್ಜುನಗೆ ಸಾರಥಿಯು ಆದುದನು ಅರಿತಿಹೆವು
ನೀವೀಗ ನಮ್ಮಣ್ಣದೇವನಿಗೆ ಯುದ್ಧದಲಿ
ಸಾರಥ್ಯಗೈಯುವುದು ಎನ್ನುತಿರೆ ಉತ್ತರೆಯು ॥೧೩೭॥

ನಿಮಗಾರು ಅರುಹಿದರು ಈ ವಿಷಯವೆನ್ನುತಿರೆ
ಸೈರಂಧ್ರಿ ಅರುಹಿದಳು ಎನ್ನುತಿರೆ ಉತ್ತರೆಯು
ನರ್ತನವ ಕಲಿಸುತಲಿ ಸಾರಥ್ಯ ಮರೆತಿಹೆವು
ವರುಷಗಳು ಕಳೆದಿಹವು ಮುಪ್ಪೆಮಗೆ ಬಂದಿಹುದು ॥೧೩೮॥

ಬೇರಾರು ಸಾರಥಿಯು ಆಗುವನು ಎನ್ನುತಿರೆ
ಪಾರ್ಥನಾ ಸಾರಥಿಯು ನೀವಿಹಿರಿ ಶಕ್ತರು
ಎಂಬುದನು ಸೈರಂಧ್ರಿ ಅರುಹಿದಳು ಕಾರಣವು
ಎಮ್ಮಣ್ಣದೇವನಿಗೆ ಸಾರಥ್ಯಗೈಯುವುದು ॥೧೩೯॥

ಎನ್ನುತಿರೆ ಉತ್ತರೆಯು ಸಂತಸದಿ ಬೃಹನ್ನಳೆಯು
ಒಪ್ಪುತಲಿ ಉತ್ತರನ ಬಳಿಬಂದು ನುಡಿದಿಹನು
ನರ್ತನವ ನಾಟ್ಯವನು ಕಲಿಸುತಲಿ ನಾವೀಗ
ಸಾರಥಿಯತನವನ್ನು ಕಾಲವಲಿ ಮರತಿಹೆವು ॥೧೪೦॥

ವರಭೀಷ್ಮ ಗುರುದ್ರೋಣ ಕಲಿಕರ್ಣ ಕೌರವರು
ಅತಿರಥ ಮಹಾರಥರು ಅತುಳಬಲ ವಿಕ್ರಮರು
ಚತುರಂಗ ಬಲ ಸೈನ್ಯ ಸಹಿತದಲಿ ಬಂದಿಹರು
ಘನಘೋರ ಯುದ್ಧವಿದು ಮಕ್ಕಳಾ ಆಟಲ್ಲ ॥೧೪೧॥

ನಾವೆಂತು ಯುದ್ಧವನು ಗೈಯ್ಯುವುದು ಎನ್ನುತಲಿ
ಬೃಹನ್ನಳೆಯು ನುಡಿಯುತಿರೆ ಉತ್ತರನು ಗರ್ವದಲಿ
ನಾನಿರಲು ಭೀಷ್ಮಾದಿ ಕೌರವರು ಹೇಡಿಗಳು
ನಿನಗೇನ ಮಾಡುವರು ಭೀತಿಯನು ತೊರೆಯುತಲಿ ॥೧೪೨॥

ನೀನೀಗ ಎನ್ನಯಾ ಸಾರಥಿಯು ಆಗುವದು
ರಣದೊಳಗೆ ಎನ್ನಯಾ ಶೌರ್ಯವನು ನೋಡುವುದು
ಅರಿಭಟರ ರುಂಡಗಳ ಚೆಂಡಾಟವಾಡುತಲಿ
ಕೌರವನ ಸೈನ್ಯವನು ಧೂಳಿಪಟ ಮಾಡುವೆನು ॥೧೪೩॥

ಆದದ್ದು ಆಗುವದು ಸಾರಥ್ಯಗೈಯ್ಯುವೆನು
ರಥವನ್ನು ತರಿಸೆಂದು ಬೃಹನ್ನಳೆಯು ಹೇಳುತಿರೆ
ಉತ್ತರಗೆ ಕುಂಕುಮದ ತಿಲಕವನು ಹಚ್ಚುತಲಿ
ಬಂಗಾರದಾರುತಿಯ ನೆತ್ತಿದರು ಲಲನೆಯರು ॥೧೪೪॥

ಸರ್ವಾಂಗ ಆಭರಣ ಧರಿಸುತಲಿ ಉತ್ತರನು
ಕವಚದಾ ಅಂಗಿಗಳ ಮೈಯೊಳಗೆ ಅಳವಡಿಸಿ
ಬಂಗಾರ ಕವಚವನು ಸಾರಥಿಗೆ ಕೊಡುತಲಿರೆ
ತಲೆಕೆಳಗೆ ಕವಚವನು ಅರ್ಜುನನು ತೊಡುತಿರಲು ॥೧೪೫॥

ಎಲ್ಲರೂ ಲಲನೆಯರು ಘೊಳ್ಳೆಂದು ನಗುತಿರಲು
ಉತ್ತರನು ಕವಚವನು ಸರಿಯಾಗಿ ತೊಡಿಸುತಿರೆ
ಕವಚವನು ಧರಿಸಲಿಕೆ ಅರಿಯದಾ ಸಾರಥಿಯು
ಯುದ್ಧದಲಿ ತಾನೆಂತು ಸಾರಥ್ಯ ಗೈಯ್ಯುವನು ॥೧೪೬॥

ಎನ್ನುತಲಿ ವನಿತೆಯರು ಹಾಸ್ಯವನು ಮಾಡುತಿರೆ
ಬೃಹನ್ನಳೆಗೆ ಉತ್ತರೆಯು ಈ ತೆರದಿ ನುಡಿದಿಹಳು
ಯುದ್ಧವನು ಗೈಯ್ಯುತಲಿ ಶತ್ರುಗಳ ಕೊಲ್ಲುತಲಿ
ಎಮ್ಮಣ್ಣ ಜಯಿಸುವನು ನಿನಗಾವ ಭಯಬೇಡ ॥೧೪೭॥

ರಣದೊಳಗೆ ಮಡಿದಿರುವ ಅರಸುಗಳ ವಸ್ತ್ರಗಳ
ವಜ್ರಗಳ ಮುತುಗಳ ರತ್ನಗಳ ಹಾರಗಳ
ವಿಧವಿಧದಾ ಸ್ವರ್ಣದಾ ಆಭರಣಗಳ ಕೊಳ್ಳುತ
ನೀತಂದು ಎನಗೀವುದೆನ್ನುತಲಿ ನುಡಿದಿಹಳು ॥೧೪೮॥

ಸ್ವರ್ಣದಾ ರಥವೇರಿ ಉತ್ತರನು ಕುಳಿತಿರಲು
ಅಗ್ರದಲಿ ಸಾರಥಿಯು ಅರ್ಜುನನು ಮಂಡಿಸುತ
ಕುದುರೆಗಳ ಚಪ್ಪರಿಸಿ ಕಡಿವಾಣ ಜಗ್ಗುತಲಿ
ರಥವನ್ನು ಬಿಟ್ಟಿಹನು ವಾಯುವಿನ ವೇಗದಲಿ ॥೧೪೯॥

ಇವನೊಬ್ಬ ಹೊಸಪರಿಯ ಸಾರಥಿಯು ಕಾಣುವನು
ಇವನೊಡನೆ ಸಾಗಲಿಕೆ ಸಮಗಾಗದೆನ್ನುತಲಿ
ಚತುರಂಗ ಬಲಸೈನ್ಯ ಅಶ್ವದಳ ಗಜದಳವು
ಹಿಂದುಗಡೆ ಮುಂದದಲಿ ಯುದ್ಧಕ್ಕೆ ನಡೆದಿಹುದು ॥೧೫೦॥

ಮಾರುತನ ವೇಗವನು ಮೀರುವಾ ಪರಿಯಲ್ಲಿ
ಕುಣಿಯುತಲಿ ಜಿಗಿಯುತಲಿ ಹೂಂಕಾರ ಗೈಯುತಲಿ
ಶುಭ್ರದಾ ಅಶ್ವಗಳು ಧಾವಿಸುತ ಓಡುತಲಿ
ಕೌರವನ ಸೈನ್ಯದಾ ಎದುರಿನಲಿ ನಿಂದಿಹವು ॥೧೫೧॥

ಕಡಲಿನಾ ಪರಿಯಲ್ಲಿ ನೆಲತುಂಬಿ ನಿಂತಿರುವ
ಕೌರವನ ಸೈನ್ಯವನು ನೋಡುತಲಿ ಉತ್ತರನು
ಹೃದಯವನು ಭೀತಿಯಲಿ ಬಡಿಯುತಿರೆ ರಭಸದಲಿ
ಸಾರಥಿಗೆ ನುಡಿದಿಹನು ಗದ್ಗದಿತ ಕಂಠದಲಿ ॥೧೫೨॥

ಅತಿರಥ ಮಹಾರಥ ಅಪರಿಮಿತರು ಸೈನ್ಯವಿದು
ಯುದ್ಧವನು ಮಾಡಲಿಕೆ ಎಮಗಿಲ್ಲ ಸಾಧ್ಯವಿದು
ಕುದುರೆಗಳ ಓಡಿಯುತಲಿ ರಥವನ್ನು ತಿರುಗಿಸುತ
ಪುರದೆಡೆಗೆ ಓಂದಕ್ಕೆ ಹೋಗುವುದು ಎನ್ನುತಿರೆ ॥೧೫೩॥

ಫಲುಗುಣನು ಕೇಳದೆಯೆ ರಥವನ್ನು ನಡೆಸಿರಲು
ಉತ್ತರನು ರಥದಿಂದ ಹಿಂಬದಿಗೆ ಜಿಗಿಯುತಲಿ
ಕೆಟ್ಟೋಟ ಓಡುತಿರೆ ಅರ್ಜುನನು ನೋಡುತಲಿ
ಕುದುರೆಗಳ ಕಡಿವಾಣ ಜಗ್ಗುತಲಿ ರಥವನ್ನು ॥೧೫೪॥

ಬೆನ್ನನ್ನು ತೋರಿಸದೆ ಹಿಂದಕ್ಕೆ ಓಡಿಸುತ
ಉತ್ತರನ ಹಿಡಿಯುತಲಿ ರಥದೊಳಗೆ ಕುಳ್ಳಿರಿಸಿ
ಯುದ್ಧವನು ತೊರೆಯುತಲಿ ಭೀತಿಯಲಿ ಓಡುವದು
ಕ್ಷತ್ರಿಯನು ಎನಿಸಿರುವ ನಿನಗಿದುವೆ ಭೂಷಣವೆ ॥೧೫೫॥

ಅರಮನೆಯ ಹೆಂಗಳೆಯರೆದುರಿನಲಿ ಗರ್ವದಲಿ
ಬಾಯಿಯಲಿ ಬಂದಂತೆ ಪೌರುಷವ ಕೊಚ್ಚಿರುವೆ
ಯುದ್ಧವನು ಮಾಡಲಿಕೆ ನಡೆಬೇಗ ನೀನೀಗ
ಇಲ್ಲದಿರೆ ನಿನ್ನಯಾ ಕಟಬಾಯ ಕೊಯ್ಯುವೆನು ॥೧೫೬॥

ಹುಲಿಯಂತೆ ವೀರನಿಹ ವಿರಾಟನಾ ಹೊಟ್ಟೆಯಲಿ
ಇಲಿಯಂತೆ ಏತಕ್ಕೆ ಹುಟ್ಟಿರುವೆ ಹೇಡಿಯೇ
ನಾನಿಹೆ ನಪುಂಸಕನು ಯುದ್ಧಕ್ಕೆ ಅಂಜಿದೆನೆ
ಕ್ಷತ್ರಿಯನು ನೀನಿರುವೆ ಹೆದರುವದು ಯೋಗ್ಯವೆ ॥೧೫೭॥

ನಿನ್ನಯಾ ವಂಶಕ್ಕೆ ಕೀರ್ತಿಯನು ತರುವಂತೆ
ಕ್ಷತ್ರಿಯರ ಧರ್ಮವನು ಪಾಲಿಸುವ ತೆರದಲ್ಲಿ
ಶಾಶ್ವತದ ಕೀರ್ತಿಯನು ಪಡೆಯಲಿಕೆ ಮುನ್ನುಗ್ಗಿ
ಯುದ್ಧವನು ಮಾಡಲಿಕೆ ನಡೆಬೇಗ ಎನ್ನುತಲಿ ॥೧೫೮॥

ಅರ್ಜುನನು ನುಡಿಯುತಿರೆ ಸುಕುಮಾರ ಉತ್ತರನು
ಶಾಶ್ವತದ ಕೀರ್ತಿಯದು ನಮಗಾವುದೂ ಬೇಡ
ನಾವೇ ನಪುಂಸಕರು ನೀವೇ ಮಹಾ ವೀರರು
ನಮ್ಮಯಾ ಪಾಡಿಂಗೆ ನಮ್ಮನ್ನು ಬಿಟ್ಟುಬಿಡು ॥೧೫೯॥

ನಿನ್ನಯಾ ಹೊಟ್ಟೆಯಲಿ ಹುಟ್ಟುತಲಿ ಬಂದಂತೆ
ನಿನ್ನಯಾ ಹೆಸರನ್ನು ಜೀವಿಸುವ ಪರ್ಯಂತ
ಹೇಳುತಲಿ ಜೀವಿಸುವೆ ಬಿಟ್ಟುಬಿಡು ಎನ್ನನ್ನು
ಏತಕ್ಕೆ ಎನ್ನನ್ನು ಮೃತ್ಯುವಿಗೆ ಬಲಿಕೊಡುವೆ ॥೧೬೦॥

ಎನ್ನುತಿರೆ ನಸುನಗುತ ಅರ್ಜುನನು ಉತ್ತರಗೆ
ರಣದೊಳಗೆ ಒಂದಡಿಯ ಮುಂದಕ್ಕೆ ಇಡುತಿರಲು
ವರಅಶ್ವಮೇಧದಾ ಫಲವದುವೆ ದೊರೆಯುವದು
ಹಿಂದಕ್ಕೆ ಇಡುತಿರಲು ನರಕದಲಿ ಬೀಳುವನು ॥೧೬೧॥

ಈ ಪರಿಯ ಫಲುಗುಣನು ನುಡಿಯುತಿರ ಉತ್ತರನು
ಯಜ್ಞಗಳ ಗೈಯ್ಯುತಲಿ ಪಾಪಗಳು ಕಳೆಯುತಲಿ
ಪುಣ್ಯವನು ಪಡೆಯುವೆವು ಋತ್ವಿಜರ ಮಂತ್ರದಲಿ
ಯುದ್ಧದಾ ಪುಣ್ಯವಿದು ಬೇಡೆಮಗೆ ಎನ್ನುತಿರೆ ॥೧೬೨॥

ಯುದ್ಧವನು ಗೈಯ್ಯುತಲಿ ಸಾವನ್ನು ಅಪ್ಪಿದರ
ಸ್ವರ್ಗದಲಿ ಅತಿಚೆಲುವ ಲಲನೆಯರು ಲಭಿಸುವಳು
ಎನ್ನುತಿರೆ ಅರ್ಜುನನು ಉತ್ತರನು ದೈನ್ಯದಲಿ
ನಮ್ಮಯಾ ಅರಮನೆಯ ನಾರಿಯರು ಸಾಕೆಮಗೆ ॥೧೬೩॥

ಸ್ವರ್ಗದಾ ಸುಂದರಿಯರಪ್ಸರೆಯರಧಿಕಂತಲೂ
ನಮ್ಮಯಾ ಅರಮನೆಯ ನಾರಿಯರೇ ಚೆಲುವೆಯರು
ಇಲ್ಲಿಯಾ ಸುಖಕಿಂತ ಸ್ವರ್ಗಸುಖ ಮಿಗಿಲಿಲ್ಲ
ಬಿಟ್ಟುಬಿಡು ಎನ್ನನ್ನು ಎನ್ನುತಿರೆ ಉತ್ತರನು ॥೧೬೪॥

ಅಂಜದಿರು ಅಳುಕದಿರು ಸುಕುಮಾರ ಉತ್ತರನೆ
ಯುದ್ಧವನು ನಾಗೈವೆ ಸಾರಥಿಯು ನೀನಾಗು
ರಣದಲ್ಲಿ ಎನ್ನಯಾ ಶೌರ್ಯವನು ನೀನೋಡು
ಎನ್ನುತಲಿ ರಥದಲ್ಲಿ ಉತ್ತರನ ಕುಳ್ಳಿರಿಸಿ ॥೧೬೫॥

ವೇಗದಲಿ ರಥವನ್ನು ಚಲಿಸುತಲಿ ಕ್ಷಣದಲಿ
ಶಮಿವೃಕ್ಷ ಸನಿಹದಲಿ ನಿಲ್ಲಿಸುತ ಇಳಿಯುತಿರೆ
ಮರದ ತುದಿ ಭಾಗದಲಿ ನೇತಾಡುತಿರುತಿರುವ
ಹೆಣದಂತೆ ಕಾಣುವಾ ವಸ್ತುವನು ನೋಡುತಲಿ ॥೧೬೬॥

ವೈರಾಟ ಹೆದರುತಲಿ ಭೀತಿಯಲಿ ಬೆವರುತಲಿ
ಇದು ಏನು ರಣವಿಹುದೊ ಮಸಣವೋ ತಿಳಿಯದಿದೆ
ಹೆಣದಂತೆ ಭೀಕರದಿ ಅದು ಏನೊ ತೋರುತಿರೆ
ಎನ್ನುತಲಿ ದುಗುಡದಲಿ ನಡುಗುತಲಿ ನುಡಿದಿಹನು ೧೬೭॥

ಆವುದೂ ಭಯಬೇಡ ಹೆಣವಲ್ಲ ಮೂಟೆಯಿದು
ಮರವೇರಿ ಮೂಟೆಯನು ಸರಸದಲಿ ಕೆಳಗಿಳಿಸು
ನಾನಿಹೆನು ಅಂಜದಿರು ಎನ್ನುತಿರೆ ಕಲಿಪಾರ್ಥ
ಮತ್ತೆ ಆ ಉತ್ತರನು ಯೋಚಿಸುತ ಇಂತೆಂದ ॥೧೬೮॥

ಅರಸುಗಳು ಹೆಣವನ್ನು ಮುಟ್ಟುವುದು ಸರಿಯಲ್ಲ
ರಾಜರಾ ಧರ್ಮಕಿದು ವಿಪರೀತವಾಗಿಹುದು
ನಾ ರಾಜಪುತ್ರನಿಹೆ ಮುಟ್ಟುವುದು ಅನುಚಿತವು
ನೀನೆಯೇ ಇಳಿಸುವುದು ಎನ್ನುತಲಿ ನುಡಿದಿಹನು ॥೧೬೯॥

ಇದು ಭೂತ ರಾಕ್ಷಸವೊ ನರಭಕ್ಷಕಿರುತಿಹುದೊ
ಮೃತ್ಯುವಿನ ಪರಿಯಲ್ಲಿ ಭೀಕರದಿ ತೋರುವುದು
ಮುಟ್ಟಿದೊಡೆ ಎನ್ನನ್ನು ಖಚಿತದಲಿ ನುಂಗುವುದು
ಬೇರೆಯಾ ಕೆಲಸವನು ಹೇಳುವುದು ಎಂದಿಹನು ॥೧೭೦॥

ಮರದಲ್ಲಿ ಕಾಂಬುವದು ಹೆಣವಲ್ಲ ಉತ್ತರನೆ
ಮುನ್ನಿನಲಿ ಪಾಂಡವರು ಕಾನನಕೆ ತೆರಳುವಾ
ಸಮಯದಲಿ ತಮ್ಮಯಾ ಅಸ್ತ್ರಗಳ ಚರ್ಮದಲಿ
ಕಟ್ಟುತಲಿ ಇರಿಸಿಹರು ಎಂದಿಹನು ಕಲಿಪಾರ್ಥ ॥೧೭೧॥

ಅಂಜದಿರು ಹೆದರದಿರು ಗಂಟನ್ನು ಬಿಚ್ಚುತಲಿ
ಪಾರ್ಥನನ ನೆನೆಯುತಲಿ ಗಾಂಡೀವವ ತೆಗೆಯುತಲಿ
ಎನಗೀವುದೆನ್ನುತಿರೆ ಉತ್ತರನು ಧೈರ್ಯದಲಿ
ಗಂಟನ್ನು ಬಿಚ್ಚುತಿರೆ ಹೊಳೆಯುತಿಹ ಅಸ್ತ್ರಗಳ ॥೧೭೨॥

ಕೋಟಿಯಾ ಸೂರ್ಯರಾ ಕಾಂತಿಯದು ಹೊಮ್ಮುತಿರೆ
ಕಣ್ಣನ್ನು ಮುಚ್ಚುತಲಿ ಭೀತಿಯದು ಮುತ್ತುತಲಿ
ಸುಕುಮಾರ ಉತ್ತರನು ಕಂಗಳನು ತಿಕ್ಕುತಲಿ
ಸಾರಥಿಯೆ ಎನ್ನನ್ನು ನೀಕೊಂಡೆ ಎಂದಿಹನು ॥೧೭೩॥

ಭಯಬೇಡ ಉತ್ತರನೆ ಒದೊಂದು ಅಸ್ತ್ರವನು
ಎನ್ನಯಾ ಕರದಲ್ಲಿ ನೀಡುವುದು ಎನ್ನುತಿರೆ
ಗಿರಿಗಳನು ಪರ್ವತವ ಎತ್ತಲಿಕೆ ಸಾಧ್ಯವಿದೆ
ಇವುಗಳನು ಎತ್ತಲಿಕೆ ಆರಿಗೂ ಅಸದಳವು ॥೧೭೪॥

ಭಾರಿಯಾ ಅಸ್ತ್ರಗಳು ಎನ್ನುತಲಿ ಉತ್ತರನು
ಗಾಂಡಿವವ ತೆಗೆಯುತಲಿ ಅರ್ಜುನಗೆ ಈಯುತಲಿ
ಆಮೇಲೆ ಬಾಣಗಳ ಬಿಲ್ಲುಗಳ ಖಡ್ಗಗಳ
ಭಾರಿಯಾ ಗದೆಯನ್ನು ಪಾರ್ಥಂಗೆ ಈಯುತಲಿ ॥೧೭೫॥

ಆರು ಈ ಅಸ್ತ್ರಗಳ ಧರಿಸುವರು ಹೇಳೆನಲು
ಧರ್ಮಜನ ಧನವಿದುವು ಗದೆಯಿದುವು ಭೀಮನದು
ಇದು ನರನ ಗಾಂಡೀವ ಮತ್ತೆ ಈ ಬಿಲ್ಲುಗಳು
ಸಹದೇವ ನಕುಲರವು ಎನ್ನುತಿರೆ ಅರ್ಜುನನು ॥೧೭೬॥

ಕೌತುಕದಿ ಉತ್ತರನು ಪಾಂಡವರ ಅಸ್ತ್ರಗಳ
ಎಲ್ಲವನು ಅರಿತಿರುವ ನೀನಾರು ಧರ್ಮಜನೊ
ಪವನಜನೊ ಅರ್ಜುನನೊ ನಕುಲ ಸಹದೇವನೊ
ಆಶ್ಚರಿಯು ಎನಿಸುವದು ನೀನಾರು ಹೇಳೆನಲು ॥೧೭೭॥

ಸುಕುಮಾರ ಕೇಳುವುದು ಕಂಕನೇ ಧರ್ಮಜನು
ವಲಲನೇ ಪವನಜನು ನಾನಿಹೆನು ಅರ್ಜುನನು
ಅಶ್ವಗಳ ಪಾಲಕನು ನಕುಲನಿಹ ಮತ್ತೆ ಆ
ಗೋವುಗಳ ಕಾಯುವವ ಸಹದೇವನಿಹನೆಂದ ॥೧೭೮॥

ಸುದೇಷ್ಣೆಯಾ ಸೇವೆಯನು ಗೈಯುತಿಹ ಸೈರಂಧ್ರಿ
ಪಾಂಡವರ ಸತಿಯಿಹಳು ವರಸಾಧ್ವಿ ದ್ರೌಪದಿಯು
ಅಜ್ಞಾತವಾಸವನು ಗುಪಿತದಲಿ ಕಳೆಯಲಿಕೆ
ವೇಷಗಳ ಧರಿಸುತಲಿ ನಿಮ್ಮಲ್ಲಿ ಬಂದಿಹೆವು ॥೧೭೯॥

ತ್ರೈಲೋಕ್ಯ ವೀರನಿಹೆ ನಪುಂಸಕನ ಈ ವೇಷ
ನಿನಗೆಂತು ಬಂದಿಹುದು ಎನ್ನುತಿರೆ ಉತ್ತರನು
ಊರ್ವಶಿಯ ಶಾಪದಲಿ ಬಂದಿಹುದು ಈ ವೇಷ
ಎನ್ನುತಿರೆ ವಿಸ್ತರದಿ ಅರ್ಜುನನು ಹೇಳುತಿರೆ ॥೧೮೦॥

ನಿನ್ನಯಾ ಈ ಹತ್ತು ಹೆಸರುಗಳ ಹೇಳುವುದು
ಎನ್ನುತಲಿ ಉತ್ತರನು ಪಾರ್ಥನನು ಕೇಳುತಿರೆ
ಫಲುಗುಣನು ಅರ್ಜುನನು ಜಿಷ್ಣು ಸಿತವಾಹನನು
ವರವಿಜಯ ಭೀಭತ್ಸು ಕಲಿಪಾರ್ಥ ಕಿರೀಟಿಯು ॥೧೮೧॥

ವರಕೃಷ್ಣ ಸವ್ಯಸಾಚಿ ಎಂಬುವಾ ಈರೈದು
ನನ್ನಯಾ ಹೆಸರುಗಳು ಖ್ಯಾತವಿಹೆ ಜಗದೊಳಗೆ
ವೀರರಾ ಕ್ಷತ್ರಿಯರ ಕುಲದಲ್ಲಿ ಹುಟ್ಟಿರುವೆ
ನೀನಾರು ಎಂಬುದನು ಯೋಚಿಪುದು ಉತ್ತರನೆ ॥೧೮೨॥

ನಶ್ವರದ ದೇಹದಾ ಭೋಗಕ್ಕೆ ಮನಸೋತು
ನಿನ್ನಾತ್ಮ ಶಕ್ತಿಯನು ಅರಿಯದಲೆ ಮೌಢ್ಯದಲಿ
ನಿಮೇಡಿ ಎನ್ನುತಲಿ ಮನದಲ್ಲಿ ಬಗೆದಿರುವೆ
ಜಾಗೃತನು ಆಗುತಲಿ ಕಲಿವೀರ ನೀನಾಗು ॥೧೮೩॥

**ಕದನ ಪ್ರಚಂಡನಿಹ ತ್ರೈಲೋಕ್ಯವೀರನಿಹ**
**ಕಲಿಪಾರ್ಥ ರಣರಂಗ ಹೊಕ್ಕಿಹನು ಧರದಲ್ಲಿ**

ಎನ್ನುತಿರೆ ಅರ್ಜುನನು ಉತ್ತರನು ಕೇಳುತಲಿ
ಉತ್ಸಾಹ ಆವೇಶ ಧೈರ್ಯವದು ತುಂಬುತಿರೆ
ಫಲುಗುಣನು ರಥವನ್ನು ವೇಗದಲಿ ಸಾಗಿಸುತ
ಕೌರವನ ಸೈನ್ಯದಾ ಎದುರಿನಲಿ ನಿಂದಿಹನು ॥೧೮೪॥

ಸಾಗರದ ಪರಿಯಲ್ಲಿ ಸೈನ್ಯವನು ನೋಡುತಲಿ
ಉತ್ತರನು ಕೌರವನ ಸೈನ್ಯದೊಳು ಒಬ್ಬರನು
ನಾನರಿಯೆ ಇವರಾರು ಎಂಬುದನು ಹೇಳುವುದು
ಎನ್ನುತಲಿ ನುಡಿಯುತಿರೆ ಅರ್ಜುನನು ನುಡಿದಿಹನು ॥೧೮೫॥

ಅಗೋ ಅಲ್ಲಿ ಕೇಸರಿಯ ವಸ್ತ್ರವನು ಧರಿಸುತಲಿ
ನೊಸಲಿನಲಿ ಭಸ್ಮವನು ಕುಂಕುಮವ ಧರಿಸಿರುವ
ಬಿಳಿಜಡೆಯು ಗಡ್ಡಗಳ ಬಿಲ್ಲಿನಲಿ ಶೋಭಿಸುತ
ನಿಂತಿರುವ ಮುತ್ತಯ್ಯ ಗಾಂಗೇಯ ಭೀಷ್ಮನಿಹ ॥೧೮೬॥

ಅವರಬಳಿ ಕೆಂಜೆಡೆಯ ಭಸ್ಮಾಂಗ ಭೂಷಿತನು
ಬಾಣವನು ಬಿಲ್ಲನ್ನು ಕರಗಳಲಿ ಧರಿಸುತಲಿ
ಹೊಳೆಹೊಳೆವ ಕಂಗಳಲಿ ರುದ್ರನಂತೆಸೆಯುತಿಹ
ಗುರುವಿನಾ ಆಚಾರ್ಯ ಗುರುದ್ರೋಣನಿಹನೆಂದ ॥೧೮೭॥

ಗುರುಸುತನು ಬರಕೃಪನು ಮತ್ತೆ ಆ ಅಶ್ವತ್ಥಾಮ
ಅಶ್ವಗಳ ಗಜಗಳವು ಕಾಲಾಳು ಬಿಲ್ಲಾಳು
ಚತುರಂಗ ಬಲಸೈನ್ಯ ವಾರಿಧಿಯ ಪರಿಯಲ್ಲಿ
ಭೂಮಿಯನು ವ್ಯಾಪಿಸುತ ಯುದ್ಧಕ್ಕೆ ನಿಂದಿಹರು ॥೧೮೮॥

ಅಗೊ ಅತ್ತ ವಜ್ರದ ಕಿರೀಟವನು ಧರಿಸಿರುವ
ಕೊರಳಲ್ಲಿ ರತ್ನಗಳ ಹಾರಗಳು ಶೋಭಿಸುವ
ಹಾವಿನಾ ಧ್ವಜವೆಸೆವ ರಥದಲ್ಲಿ ಕುಳಿತಿರುವ
ಗೋವುಗಳ ಕದ್ದಿರುವ ಕೌರವನು ಕಾಣುವನು ॥೧೮೯॥

ಸನಿಹದಲಿವಜ್ರದಾ ಕವಚದಲಿ ಶೋಭಿಸುವ
ಕಿವಿಗಳಲಿ ಎರಡರಲಿ ಕುಂಡಲಗಳೆಸೆಯುತಿಹ
ರತ್ನದ ಕಿರೀಟದಲಿ ಮೆರೆಯುತಿಹ ಜಗಖ್ಯಾತ
ಸೂತಸುತ ರಾಧೇಯ ಕಲಿಕರ್ಣನವನೆಂದ ॥೧೯೦॥

ಗಾಂಗೇಯ ಗುರುದ್ರೋಣ ಈತನೇ ಅರ್ಜುನನು
ಎಂಬುದನು ಅರಿಯುತಲಿ ಗುರುದ್ರೋಣನಿಂತೆಂದ
ಫಲುಗುಣನು ಎಮ್ಮಯಾ ನಾಶವನು ಮಾಡುತಲಿ
ಕೌರವನ ವಂಶವನು ನಿರ್ಮೂಲ ಗೈಯ್ಯುವನು ॥೧೯೧॥

ಕಪಿವರನ ಗರ್ಜನೆಯು ಗಗನವನು ಮುಟ್ಟುತಿರೆ
ಗಾಂಡಿವದ ಟಂಕಾರ ದಶದಿಶೆಯ ತುಂಬುತಿರೆ
ಆ ದೇವದತ್ತವನು ಅರ್ಜುನನು ಊದುತಿರೆ
ನಾದವದು ಕೌರವನ ಎದೆಯನ್ನು ಬಿರಿದಿಹುದು ॥೧೯೨॥

ಗೋಗ್ರಹಣ ಗೈಯ್ಯುತಲಿ ಕೌರವನು ಕೆಟ್ಟಿಹನು
ಇನ್ನುಳಿವು ಅವಗಿಲ್ಲ ಎನ್ನುತಿರೆ ಗುರುದ್ರೋಣ
ಕೋಪದಲಿ ಕಲಿಕರ್ಣ ನರನೆಂದು ನರನೆಂದು
ಸತತವೂ ಹೊಗಳುವಿರಿ ತಲೆಬಿರಿಯ ಹೇಸದಲೆ ॥೧೯೩॥

ಎನ್ನದಿರು ಇಂದ್ರನೇ ಇಂದ್ರನಾ ನಂದನನು
ಆ ಪರಶುರಾಮನೆ ಯುದ್ಧಕ್ಕೆ ಬಂದರೆಯು
ನಿಮಿಷದಲಿ ಗೆಲ್ಲುವೆನು ಎನ್ನಯಾ ಶೌರ್ಯದಲಿ
ಬಡಪಾರ್ಥ ಹೇಡಿಯನು ಸುಮ್ಮನೆ ಹೊಗಳುವಿರಿ ॥೧೯೪॥

ಭೀಷ್ಮಂಗೆ ದ್ರೋಣಂಗೆ ಅನ್ನವನು ಇತ್ತುವಕೆ
ಕೌರವನೆ ನಿನಗಿಂದು ಪ್ರತಿಫಲವನಿತ್ತಿಪರು
ಉಂಡಮನೆಗೆರಡನ್ನು ಬಗೆಯುತಿಹ ಭೀಷ್ಮರನು
ದ್ರೋಣರನು ಕೃಪನನ್ನು ನಂಬದಿರು ಎಂದಿಹನು ॥೧೯೫॥

ಆಗ ಕೃಪ ಕೋಪದಲಿ ಕೌರವ ಮಹೀಪತಿಯೆ
ಅರ್ಜುನನ ಶೌರ್ಯವನು ಅರಿಯದೀ ಕರ್ಣನಿವ
ಶ್ವಾನದಾ ಪರಿಯಲ್ಲಿ ಬೊಗಳಿದುದ ನಂಬದಿರು
ಫಲುಗುಣನ ಗೆಲ್ಲುವುದು ದಿವಿಜರಿಗೆ ಅಸದಳವು ॥೧೯೬॥

ಮತ್ಸ್ಯದಾ ಯಂತ್ರವನು ಭೇದಿಸಿದ ಶೂರನಿವ
ಖಾಂಡವದ ವನವನ್ನು ವಹ್ನಿಗೇ ಕೊಟ್ಟಿಹನು
ಹರನೊಡನೆ ಘನಘೋರ ಯುದ್ಧವನು ಗೈಯ್ಯುತಲಿ
ಪಾಶುಪತ ಅಸ್ತ್ರವನು ಪಡೆದಿಹನು ಕರುಣೆಯಲಿ ॥೧೯೭॥

ದ್ರೌಪದಿಯ ಲಗ್ನದಾ ಮಂಡಪದಿ ಧನುವನ್ನು
ಎತ್ತಲಿಕೆ ಆಗದೆಯೆ ಕರ್ಣನಿವ ನೆಲಕುರುಳಿ
ಬಿದ್ದುದನು ಮರೆತಿಹೆಯಾ ಇವನನ್ನು ಮನ್ನಿಸುತ
ರಾಜ್ಯವನು ಈಯುತಲಿ ನೀಕೆಟ್ಟೆ ಎಂದಿಹನು ॥೧೯೮॥

ಭಸ್ಮವನು ಲೇಪಿಸುತ ಜನಿವಾರ ಧರಿಸುತಲಿ
ಕೈಯಲ್ಲಿ ಧರ್ಭೆಯನು ಹಿಡಿಯುತಲಿ ಪರಗೃಹದಿ
ಶ್ರಾದ್ಧವನು ಮಾಡಿಸುವ ವಿದ್ಯೆಯನು ಅರಿತಿಹಿರಿ
ಯುದ್ಧದಾ ವಿದ್ಯೆಯನು ನೀವೇನು ಬಲ್ಲಿಹಿರಿ ॥೧೯೯॥

ತಿಥಿವಾರ ನಕ್ಷತ್ರ ಪಂಚಾಂಗ ಹೇಳುತಲಿ
ಜಪತಪದಿ ಧ್ಯಾನದಲಿ ಕಾಲವನು ಕಳೆಯುತಲಿ
ನೆರೆಹೊರೆಯ ಮನೆಯಲ್ಲಿ ಹೊಟ್ಟೆಯನು ಹೊರೆಯುತಿಹ
ನೀವೆಂತು ಶಸ್ತ್ರಗಳ ಹಿಡಿಯುತಲಿ ಕಾದುವಿರಿ ॥೨೦೦॥

ಹಬ್ಬದಲಿ ಹರಿದಿನದಿ ಮಣೆಮೇಲೆ ಕೂಡ್ರುತಲಿ
ಪಕ್ವಾನ್ನದೂಟವನು ಸವಿಸವಿದು ತೇಗುತಲಿ
ಕಾವ್ಯದಲಿ ಶಾಸ್ತ್ರದಲಿ ಕಾಲವನು ಕಳೆಯುತಿಹ
ಹಾರುವರು ನೀವೆಂತು ಶಾಸ್ತ್ರಗಳ ಹಿಡಿಯುವಿರಿ ॥೨೦೧॥

ಮುತ್ತಯ್ಯ ಹಿರಿಯಯ್ಯ ಗುರುವೆಂದು ಹೇಳುತಲಿ
ಕೌರವನು ಇಕ್ಕಿರುವ ಅನ್ನವನು ತಿನ್ನುತಲಿ
ಡೊಳ್ಳಿನಾ ಹೊಟ್ಟೆಯನು ಬೆಳೆಸುತಲಿ ಹೇಸವಲೆ
ಕೌರವಗೆ ಮೋಸವನು ಮಾಡಿಹಿರಿ ಎಂದಿಹನು ॥೨೦೨॥

ಈ ಪರಿಯೆ ಆ ಕರ್ಣ ರೋಷದಲಿ ನುಡಿಯುತಿರೆ
ಗುರುಸುತನು ಅಶ್ವತ್ಥ ಕೇಳುತಲಿ ಕೋಪದಲಿ
ಎಲವೆಲವೊ ಸೂತಸುತ ನೀನಾವ ಕುಲವಲ್ಲಿ
ಜನಿಸಿರುವೆ ಎಂಬುದನು ಸರಿಯಾಗಿ ಯೋಚಿಪುದು ॥೨೦೩॥

ಸೂತಸುತ ನೀನಿರುವೆ ಶ್ವಾನದಾ ಪರಿಯಲ್ಲಿ
ಬೊಗಳುತಿಹೆ ನಿನ್ನಯಾ ಕುಲವನ್ನು ಸೂಚಿಸುತ
ನಾಲಗೆಯು ಕುಲವನ್ನುಸೂಚಿಪುದು ಎಂಬಂತೆ
ಹೀನದಾ ನುಡಿಗಳಿವು ಕುಲವನ್ನು ತಿಳಿಸುತಿವೆ ॥೨೦೪॥

ಗುರುಭೀಷ್ಮ ದ್ರೋಣರನು ವರಕೃಪನ ನಿಂದಿಸುವ
ನಿನ್ನಯಾ ಶಿರವನ್ನು ತರಿಯುವೆನು ಎನ್ನುತಲಿ
ಅಶ್ವತ್ಥ ಖಡ್ಗವನು ಮೇಲಕ್ಕೆ ಎತ್ತುತಿರೆ
ಕೌರವನು ಧಾವಿಸುತ ಗುರುಸುತನ ತಡೆದಿಹನು ॥೨೦೫॥

ನಮ್ಮೊಳಗೆ ಒಳಜಗಳ ಸಲ್ಲದಿದು ಎನ್ನುತಲಿ
ಕೌರವನು ಈರ್ವರನು ಸಾಂತ್ವನವ ಗೊಳಿಸುತಲಿ
ಭೀಷ್ಮನಾ ಬಳಿಬಂದು ಶಿರವನ್ನು ಚಾಚುತಲಿ
ಚರಣಕ್ಕೆ ಎರಗುತಲಿ ಈ ಪರಿಯ ನುಡಿದಿಹನು ॥೨೦೬॥

ಅವಧಿಯದು ಸವೆಯದಾ ಮುನ್ನವೆ ಅರ್ಜುನನು
ಬಂದಿರುವದರಿತಿರಲು ಮತ್ತೊಮ್ಮೆ ಪಾಂಡವರು
ಹದಿಮೂರು ವರ್ಷಗಳ ವನವಾಸ ಭೋಗಿಸಲು
ಕಾನನಕೆ ಅಟ್ಟುವೆನು ಎನ್ನುತಿರೆ ಕೌರವನು ॥೨೦೭॥

ನಿನ್ನೆಯಾ ದಿನವದುವೆ ನಿನ್ನಯಾ ದಿನವಿತ್ತು
ಇಂದಿನದು ಪಾಂಡವರ ದಿನವಿಹುದು ಲೆಕ್ಕದಲಿ
ಹದಿನಾಲ್ಕು ವರ್ಷಗಳು ನಿನ್ನೆಯೇ ಮುಗಿದಿಹವು
ಧರಣಿಯನು ಆಳಲಿಕೆ ಭಾಗಿಗಳು ಆಗಿಹರು ॥೨೦೮॥

ಸತ್ಯವನು ಪಾಲಿಸುತಾ ಕಾನನದಿ ಚರಿಸುತಲಿ
ವಿಧವಿಧದ ಕಷ್ಟಗಳ ಸಹಿಸಿದರು ಧರ್ಮದಲಿ
ಪಾಂಡವರ ಕರೆಸುತಲಿ ಕೊಡು ಅರ್ಧ ರಾಜ್ಯವನು
ನಿನ್ನಯಾ ಕೀರ್ತಿಯದು ಚಿರಕಾಲ ಬೆಳಗುವದು ॥೨೦೯॥

ಕೌರವನೆ ಭೀಷ್ಮರಾ ಮಾತುಗಳ ಕೇಳದಿರು
ಭೀಷ್ಮರಾ ದೇಹವದು ನಿಮ್ಮಲ್ಲಿ ಇರುತಿಹುದು
ಅವರ ಮನ ಪಾಂಡವರ ಬಳಿಯಲ್ಲಿ ನೆಲಸಿಹುದು
ಅವರನ್ನು ನಂಬದಿರು ಬೆನ್ನಿನಲಿ ಇರಿಯುವರು ॥೨೧೦॥

ರಣದೊಳಗೆ ಶೌರ್ಯದಲಿ ಯುದ್ಧವನು ಗೈಯ್ಯುತಲಿ
ಅರ್ಜುನನ ಶಿರವನ್ನು ಗಗನಕ್ಕೆ ನೆಗೆಸುವೆನು
ನಾನಿರುವ ತನಕವೂ ನಿನಗಾವ ಭಯಬೇಡ
ಪಾಂಡವರ ತರಿಯುವೆನು ಎನ್ನುತಿರೆ ಕಲಿಕರ್ಣ ॥೨೧೧॥

ಯುದ್ಧವನು ಗೈಯ್ಯದಲೆ ರಾಜ್ಯವನು ಈಯುವದು
ಕ್ಷತ್ರಿಯರ ಧರ್ಮಕ್ಕೆ ವಿಪರೀತವಾಗಿಹುದು
ಯುದ್ಧವೇ ನಿರ್ಣಯವ ಗೈಯುವುದು ಎನ್ನುತಲಿ
ಕೌರವ ಮಹೀಪತಿಯು ಭೀಷ್ಮಂಗೆ ನುಡಿಯುತಿರೆ ॥೨೧೨॥

ಕೌರವನೆ ನಿನ್ನಯಾ ಅನ್ನವನು ಉಂಡಿಹೆನು
ವಿಪರೀತವಾದುದನು ನಿನಗೆಂದು ನುಡಿಯದಿರೆ
ಗೋವುಗಳ ಕೊಳ್ಳುತಲಿ ನೀವುಂಕೆ ಸಾಗುವುದು
ಯುದ್ಧವನು ಗೈಯುವೆನು ಎಂದಿಹನು ಗುರುಭೀಷ್ಮ ॥೨೧೩॥

**ಕೌರವರ ಸಕಲರನು ಜಯಿಸುತಲಿ ಕಲಿಪಾರ್ಥ**
**ಗೋವುಗಳನೆಲ್ಲವನು ನಗರಕ್ಕೆ ಮರಳಿಸಿದ**

ಗೋವುಗಳ ಕೊಳ್ಳುತಲಿ ಕೌರವನು ಸಾಗುತಿರೆ
ಫಲಗುಣನು ನೋಡುತಲಿ ಕ್ಷಣದಲ್ಲಿ ಉತ್ತರಗೆ
ಕಡಿವಾಣ ಕೊಳ್ಳುತಲಿ ರಥವನ್ನು ನೀನಡೆಸು
ಈಗೆನ್ನ ವಿಕ್ರಮವ ನೋಡೆಂದು ನುಡಿಯುತಲಿ ॥೨೧೪॥

ಕೌರವನ ಮುತ್ತುತಿರೆ ಉತ್ತರನು ಹರುಷದಲಿ
ಎಲವೆಲವೊ ಕೌರವನೆ ತುರುಗಳನು ಬಿಟ್ಟುಕೊಡು
ಕುರುಕುಲದ ವನವನ್ನು ಭಸ್ಮವನು ಗೈಯ್ಯುವಾ
ನರನಿವನು ವಿಲಯದಾ ಹರನೆಂದು ನುಡಿದಿಹನು ॥೨೧೫॥

ಬಿಲ್ಲಿನಲಿ ಶರಗಳನು ಅಳವಡಿಸಿ ಜಗ್ಗುತಲಿ
ಟಂಕಾರ ಗೈಯುತಲಿ ಪ್ರಳಯದಾ ಮಳೆಯುತೆ
ಅರ್ಜುನನು ಸುರಿಸುತಿರೆ ಅರಿಗಳಾ ರುಂಡಗಳು
ಗಗನಕ್ಕೆ ಹಾರುತಲಿ ತೋರಣವ ಕಟ್ಟಿಹವು ॥೨೧೬॥

ಸಾವಿರದ ಆನೆಗಳ ಲಕ್ಷದಾ ಕುದುರೆಗಳ
ಕೋಟಿಯಾ ಸಂಖ್ಯೆಯಲಿ ಕಾಲಾಳು ಸೈನಿಕರ
ಕೊಲ್ಲುತಲಿ ರಕುತದಾ ನದಿಯನ್ನು ಹರಿಸುತಿರೆ
ರುಂಡಗಳು ಕಮಲಗಳ ಪರಿಯಲ್ಲಿ ತೇಲಿಹವು ॥೨೧೭॥

ಅಪರಿಮಿತ ಆನೆಗಳು ಅಶ್ವಗಳು ಶರನಟ್ಟು
ಪ್ರಾಣವನು ಬಿಟ್ಟಿಹವು ಘೀಳಿಡುತ ಚೀರುತಲಿ
ಅಗಣಿತದ ಸೈನಿಕರು ರಕುತವನು ಕಾರುತಲಿ
ಕರುಳನ್ನು ಹೊರಸೂಸಿ ಅಸುವನ್ನು ತೊರೆದಿಹರು ॥೨೧೮॥

ವೈರಿಗಳ ಬಿಲ್ಲುಗಳ ಬಾಣಗಳ ಕಡಿದಿಹನು
ಅಗಣಿತದ ರಥಗಳನು ಹುಡಿಗುಟ್ಟಿ ಕೆಡಹಿದನು
ಕಲಿಕರ್ಣ ಕೌರವನ ಶಕುನಿ ದುಶ್ಯಾಸನನ
ರಥಗಳನು ಮುರಿಯುತಲಿ ವಿರಥರನು ಮಾಡಿದನು ॥೨೧೯॥

ಭೀಷ್ಮನಾ ಕವಚವನು ಹರಿಯುತಲಿ ಕೆಡಹಿದನು
ದ್ರೋಣನಾ ಧನುವನ್ನು ಬಾಣಗಳ ಮುರಿದಿಹನು
ವರಕೃಪನ ಧನುವನ್ನು ಖಂಡಿಸುತ ಮತ್ತೆ ಆ
ಅಶ್ವತ್ಥಾಮನಾ ರಥವನ್ನು ಗಾಳಿಪಟ ಗೈದಿಹನು ॥೨೨೦॥

ಪ್ರಳಯದಾ ರುದ್ರನೊ ಆ ಕಾಲಭೈರವನೊ
ಮೃತ್ಯುವಿನ ದೇವತೆಯೊ ಕಲ್ಪಾಂತ ಜ್ವಾಲೆಯೊ
ಸಾಕ್ಷಾತ್ತು ಯಮದೇವ ಫಲುಗುಣನ ರೂಪದಲಿ
ಯುದ್ಧವನು ಗೈವನೊ ಎಂದಿಹುದು ಕುರುಸೇನೆ ॥೨೨೧॥

ಅರ್ಜುನನ ಶೌರ್ಯವನು ನೋಡುತಲಿ ಕುರುಸೈನ್ಯ
ಗೋವುಗಳ ಗೊಡವೆ ಇದು ನಮಗೇಕೆ ಎನ್ನುತಲಿ
ಎಮ್ಮಯಾ ಪ್ರಾಣಗಳು ಉಳಿಯುತಿರೆ ಸಾಕೆಮಗೆ
ಎನ್ನುತಲಿ ದಿಕ್ಕೆಟ್ಟು ಓಡುತಲಿ ಚದುರಿದುದು ॥೨೨೨॥

ಕೌರವನ ಮುತ್ತಿರುವ ಫಲುಗುಣನ ಕಾಣುತಲಿ
ಗುರುದ್ರೋಣ ಗೌತಮರು ಭರದಲ್ಲಿ ಬರುತಿರಲು
ಎರಡೆರಡು ಶರಗಳನು ಗುರುಗಳಾ ಚರಣಕ್ಕೆ
ಎಸೆಯುತಲಿ ವಂದಿಸುತ ಮುಂದಕ್ಕೆ ಸಾಗುತಲಿ ॥೨೨೩॥

ಕೌರವನು ಅರ್ಜುನನ ಶೌರ್ಯವನು ಕಾಣುತಲಿ
ಭಯದಲ್ಲಿ ಬೆಮರುತಲಿ ಸರಿಯುತಿರೆ ಒಂದಕ್ಕೆ
ಫಲುಗುಣನು ರಥವನ್ನು ಸಾಗಿಸುತ ವೇಗದಲಿ
ಕೌರವನ ಮುತ್ತುತಲಿ ಶರಗಳಲಿ ಮುಚ್ಚಿದನು ॥೨೨೪॥

ಅಕಟಕಟ ಕೌರವನು ಕಾಣಿಸನು ಎಲ್ಲಿಹನು
ಎನ್ನುತಲಿ ಕಳವಳದಿ ಗುರುಭೀಷ್ಮ ದ್ರೋಣ ಕೃಪ
ಕಲಿಕರ್ಣ ಸೌಬಲನು ಸೈಂಧವ ವಿಕರ್ಣರು
ಕುರುಸೇನೆ ಚಿಂತೆಯಾ ಸಾಗರದಿ ಮುಳುಗಿರಲು ॥೨೨೫॥

ಶತೃಗಳು ಗೋವುಗಳ ಬಿಸುಡುತಲಿ ಓಡುತಿರೆ
ರಾವುತರು ಗೋವುಗಳ ಕೊಳ್ಳುತಲಿ ಹರುಷದಲಿ
ಪುರದತ್ತ ಸಾಗುತಿರೆ ಕೇಕೆಯಲಿ ಕುಣಿತದಲಿ
ಉತ್ತರನು ಆನಂದ ಸಾಗರದಿ ಮುಳುಗಿಹನು ॥೨೨೬॥

ಇತ್ತಲಾ ಗೋವರರು ಗೋವುಗಳ ಸಹಿತದಲಿ
ನಿಜಪುರಕೆ ತೆರಳುತಿರೆ ಕೌರವನು ನೋಯುತಿರೆ
ಸೌಬಲ ಜಯದ್ರಥರು ದುಶ್ಯಾಸನಾದಿಗಳು
ಸೈನ್ಯದಾ ಸಹಿತದಲಿ ಅರ್ಜುನನ ಮುತ್ತಿದರು ॥೨೨೭॥

ಖಾಂಡವದ ದಹನದಲಿ ದಿವಿಜರನು ಜಯಿಸಿದೆನು
ಮತ್ಸ್ಯದಾ ಯಂತ್ರವನು ಭೇದಿಸಿದ ಗರ್ವದಲಿ
ಹರನೊಡನೆ ಯುದ್ಧವನು ಮಾಡಿರುವೆ ಎನ್ನುತಲಿ
ಉಬ್ಬದಿರು ಯುದ್ಧದಲಿ ನೀನಾವ ಶೂರನಿಹೆ ॥೨೨೮॥

ಗೋವುಗಳ ಮರಳಿಸಿವೆ ಎನ್ನುವಾ ಗರ್ವದಲಿ
ಜಂಭವನು ಮಾಡದಿರು ಶಿರವನ್ನು ತರಿಯುವೆವು
ಎನ್ನುತಲಿ ಪ್ರಳಯದಾ ಮೇಘಗಳ ಪರಿಯಲ್ಲಿ
ಬಾಣಗಳ ಸುರಿಸುತಲಿ ಅರ್ಜುನನ ಮುಚ್ಚಿದರು ॥೨೨೯॥

ನರಿನಿಕರ ಬೊಗಳಿದೊಡೆ ಸಿಂಹವದು ಅಂಜುವದೆ
ನಿಮ್ಮಯಾ ಶೌರ್ಯವದು ನಮಗೆಲ್ಲ ಗೊತ್ತಿಹುದು
ಎನ್ನುತಲಿ ಫಲುಗುಣನು ಅಗಣಿತದ ಬಾಣಗಳ
ಸುರಿಸುತಲಿ ಶರಜಾಲ ತಂದಿಹನು ನಿಮಿಷದಲಿ ॥೨೩೦॥

ಭೀಷ್ಮನಾ ಸನಿಹದಲಿ ನೂರಾರು ರಥಗಳನು
ದ್ರೋಣನಾ ಬಳಿಯಲ್ಲಿ ಸಾವಿರದ ರಥಗಳನು
ಕರ್ಣನಾ ಕೌರವನ ಸೈಂಧವನ ಬಳಿಯಲ್ಲಿ
ಕೋಟಿಯಾ ರಥಗಳನು ಪುಡಿಪುಡಿಯ ಗೈದಿಹನು ॥೨೩೧॥

ಭಿಷ್ಮನಾ ಕವಚವನು ದ್ರೋಣನಾ ಧನುವನ್ನು
ಕರ್ಣನಾ ಕೌರವನ ಕಿರಿಟಗಳ ಕೆಡಹುತಲಿ
ದುಶ್ಯಾಸನಾದಿಗಳ ಬಿಲ್ಲುಗಳ ಖಂಡಿಸುತ
ಅಪರಿಮಿತ ಸೈನ್ಯವನು ಶರಗಳಲಿ ಇರಿದಿಹನು ॥೨೩೨॥

ಮತ್ತೆ ಶರ ಎಸೆಯುತಲಿ ಅರ್ಜುನನು ಕೋಪದಲಿ
ಕರ್ಣನನು ಸೈಂಧವನ ಸೌಬಲನ ಕೌರವನ
ಗಾಯವನು ಗೊಳಿಸುತಲಿ ರಕುತದಲಿ ತೋಯಿಸಲು
ಕುರುಸೇನೆ ಹೌಹಾರಿ ದಿಕ್ಕೆಟ್ಟು ಓಡಿದುದು ॥೨೩೩॥

ಗಾಯವನು ಹೊಂದಿರುವ ಕರ್ಣನನು ನೋಡುತಲಿ
ಗುರುಸುತನು ಅಶ್ವತ್ಥ ನುಡಿದಿಹನು ಕೋಪದಲಿ
ಆಗಲೇ ಎಮ್ಮನ್ನು ಹಾರುವರು ಎನ್ನುತಲಿ
ನಿಂದೆಯನು ಗೈದಿರುವೆ ನಿನಗೀಗ ಏನಾಯ್ತು ॥೨೩೪॥

ಫಲುಗುಣನು ನಿನ್ನನ್ನು ಗಾಯದಲಿ ನೋಯಿಸಿದ
ಫಲುಗುಣನ ಶೌರ್ಯದಾ ಸವಿರುಚಿಯು ಅರಿವಾಯ್ತೆ
ನೀ ನುಡಿದ ನುಡಿಗಳನು ನಂಬುತಲಿ ಕೌರವನು
ಈ ಪರಿಯ ಭೋಗಿಪನು ನಿನ್ನಯಾ ಎದುರಿನಲಿ ॥೨೩೫॥

ನೀನೀಗ ಕ್ಷತ್ರಿಯನು ಇದ್ದದ್ದು ಆದರೆ
ಅರ್ಜುನನ ಜಯಿಸುತಲಿ ಗೋವುಗಳ ಮರಳಿಸುತ
ಕೌರವಗೆ ಒಪ್ಪಿಸುವ ಇಲ್ಲದಿರೆ ನೀನೆಯೇ
ಹಾರುವನು ಎನ್ನುತಲಿ ಅಶ್ವತ್ಥ ನುಡಿದಿಹನು ॥೨೩೬॥

ಕೇಳುತಲಿ ಕಲಿಕರ್ಣ ಕೋಪದಲಿ ಸಿಡಿದೆದ್ದು
ಹಾರುವರು ಮಾತುಗಳ ಬಾಣಗಳ ಹಾರಿಪರು
ಕವಿತೆಯಾ ರಚನೆಯಲಿ ಕೌಶಲವ ತೋರುವರು
ಮೃಷ್ಟಾನ್ನದೂಟದಲಿ ಶೌರ್ಯವನ್ನು ಭೀರುವರು ॥೨೩೭॥

ನಿಮ್ಮೊಡನೆ ನಿಮ್ಮಯಾ ಜಗಳವಿದು ಏತಕ್ಕೆ
ಇಂದೆನ್ನ ಶೌರ್ಯವನು ರಣದಲ್ಲಿ ನೋಡುವುದು
ಫಲುಗುಣನ ಶಿರವನ್ನು ನಭಕಟ್ಟದಿರ್ದೊಡೆ
ಕಲಿಕರ್ಣ ನಾನಲ್ಲ ಎನ್ನುತಲಿ ಕ್ಷಣದಲ್ಲಿ ॥೨೩೮॥

ಬಿಲ್ಲನ್ನು ಧರಿಸುತಲಿ ರಾಧೇಯ ರಥವೇರಿ
ಸಾಗುತಲಿ ಅರ್ಜುನನ ಮುಂದಕ್ಕೆ ನಿಲ್ಲುತಲಿ
ಮುತ್ತಯ್ಯ ಗುರುಗಳನು ಬಾಲರನು ಹೆದರಿಸುತ
ನೀನೆಲ್ಲಿ ಓಡುತಿಹೆ ಹೋಗದಿರು ನಿಲ್ಲುತಲಿ ॥೨೩೯॥

ಎನ್ನೊಡನೆ ಯುದ್ಧವನು ಗೈಯುತಲಿ ಗೆಲ್ಲುವೊದು
ಎನ್ನುತಿರೆ ಕಲಿಕರ್ಣ ಫಲಗುಣನು ನುಡಿದಿಹನು
ಕೌರವನ ಸೈನ್ಯದಲಿ ನೀನೊಬ್ಬನೇಮಾತ್ರ
ಎನ್ನಯಾ ಸರಿಸಮನು ಶೂರನಿಹೆ ಬಂಟನಿಹೆ ॥೨೪೦॥

ಶರದಲ್ಲಿ ನಿನ್ನಯಾ ಕರುಳನ್ನು ತೆಗೆಯುತಲಿ
ಭೂತಕ್ಕೆ ಉಣಬಡಿಪೆ ಎನ್ನುತಲಿ ಕಲಿಪಾರ್ಥ
ಸಾವಿರದ ಶರಗಳನು ಸುರಿಸುತಲಿ ಕರ್ಣನನು
ಮುಸುಕಿದನು ಮುಚ್ಚಿದನು ಶರಜಾಲ ಬಂಧನದಲಿ ॥೨೪೧॥

ಕಲಿಕರ್ಣ ಕನಲುತಲಿ ಅಗಣಿತದ ಬಾಣಗಳ
ಎಸೆಯುತಲಿ ಶರಜಾಲ ಕಡಿಯುತಲಿ ಕೊಚ್ಚುತಲಿ
ಭೀಕರದ ಶಿರಗಳನು ಪ್ರಳಯದಾ ಮಳೆಯಂತೆ
ಸುರಿಸುತಲಿ ಅರ್ಜುನನ ಮುಸುಕಿವನು ಭರದಲ್ಲಿ ॥೨೪೨॥

ರಥದಗ್ರ ಕುಳಿತಿರುವ ಕಪಿವರನು ಕಳವಳಿಸಿ
ಈ ಪರಿಯ ಯುದ್ಧವನು ನಾನೆಂದು ಕಂಡಿಲ್ಲ
ರಾಘವನ ರಾವಣರ ಯುದ್ಧವನು ಮೀರಿಪುದು
ಎನ್ನುತಲಿ ಬೆರಗಾದ ಈರ್ವರಾ ಯುದ್ಧಕ್ಕೆ ॥೨೪೩॥

ಫಲಗುಣನು ಸೋತಿಹನು ಕಲಿಕರ್ಣ ಗೆಲಿದಿಹನು
ಎನ್ನುತಲಿ ಹರ್ಷದಲಿ ಕುರುಸೇನೆ ಕುಣಿಯುತಿರೆ
ಕಲಿಪಾರ್ಥ ರೋಷದಲಿ ಶರಗಳನು ಎಚ್ಚುತಲಿ
ಕರ್ಣನಾ ಸಾರಥಿಯ ಇರಿಯುತಲಿ ಕೆಡಹಿದನು ॥೨೪೪॥

ಬಳಿಗೈದು ಶರಗಳಲಿ ಕರ್ಣನಾ ಧನುವನ್ನು
ಖಂಡಿಸುತ ರಥವನ್ನು ಪುಡಿಪುಡಿಯ ಗೈಯುತಿರೆ
ರತ್ನದ ಕಿರೀಟವದು ಗಗನಕ್ಕೆ ಹಾರುತಿರೆ
ಕಲಿಕರ್ಣ ಸರಿದಿಹನು ಮಾನದಾ ಭಂಗದಲಿ ॥೨೪೫॥

ರವಿಸುತನು ಜಾರಿದುದ ಕಾಣುತಲಿ ಗುರುದ್ರೋಣ
ಭರದಿಂದ ಧಾವಿಸುತ ನರನೆದುರು ನಿಲ್ಲುತಲಿ
ಫಲಗುಣನೆ ನಾವೀಗ ವೃದ್ಧರು ಕೈಲಾಗದವರು
ಯುದ್ಧವನು ಮಾಡಲಿಕೆ ಅಸಮರ್ಥರಾಗಿಹೆವು ॥೨೪೬॥

ಪರಶಿವನ ಒಲುಮೆಯಿದೆ ಮುರಹರನ ಕರುಣೆಯಿದೆ
ನಿಮ್ಮನ್ನು ಸೋಲಿಸಲು ಪರರಿಂಗೆ ಅಸದಳವು
ನಮ್ಮಯಾ ಕರ್ತವ್ಯ ನಾವೀಗ ಮಾಡುವೆವು
ಎನ್ನುತಲಿ ನುಡಿಯುತಿರೆ ಅರ್ಜುನನು ಇಂತೆಂದ ॥೨೪೭॥

ಪರಶಿವನು ಮುರಹರನು ನಿಮ್ಮೊಳಗೆ ಇರುತಿಹರು
ಎಮ್ಮಗುರು ನೀವಿಹಿರಿ ನಿಮ್ಮಯಾ ಶಿಷ್ಯನಿಹೆ
ನಿಮ್ಮಯಾ ಗರುಡಿಯಲಿ ಕಲಿತಿದುದ ಒಪ್ಪಿಪೆನಂ
ಗುರುಗಳನು ಮೀರಿಸುವ ಶಿಷ್ಯರನು ನಾಕಾಣೆ ॥೨೪೮॥

ಎನ್ನುತಲಿ ಕಲಿಪಾರ್ಥ ಶರವೆರಡು ತೆಗೆಯುತಲಿ
ದ್ರೋಣನಾ ಪಾದಕ್ಕೆ ಎಸೆಯುತಲಿ ವಂದಿಸಲು
ಸಾಕಿದುವೆ ಗುರು ಶಿಷ್ಯ ಸಂಭೇದ ರಣದೊಳಗೆ
ಶರಗಳಲಿ ನುಡಿಯುತಲಿ ಕರ್ತವ್ಯ ಗೈಯುವುದು ॥೨೪೯॥

ಎನ್ನುತಲಿ ಗುರುದ್ರೋಣ ಅಂಬುಗಳ ಧಾರೆಯನು
ಸುರಿಸುತಿರೆ ನಭಸುರರು ದ್ರೋಣನನ ಹೊಗಳುತಿರೆ
ಫಲಗುಣನು ಸಾವಿರದ ಬಾಣಗಳ ಎಚ್ಚುತಲಿ
ನುಚ್ಚುನಲಿ ಪುಡಿಗೈಯ್ಯೆ ಸುರನಿಕರ ಬೆರಗಾಯ್ತು ॥೨೫೦॥

ಭಲೆ ಪಾರ್ಥ ಎನ್ನಯಾ ಅಪ್ರತಿಮ ಶಿಷ್ಯನಿಹೆ
ಶಿಷ್ಯನಿಂದಪಜಯವ ನಿಜಗುರುವು ಇಚ್ಛಿಪುದು
ಎಂಬಂತೆ ನಿನ್ನಯಾ ವಿಕ್ರಮವು ಅದ್ಭುತವು
ಜಗದೊಳಗೆ ಎನ್ನಯಾ ಹೆಸರನ್ನುಮೆರೆಸಿರುವೆ ॥೨೫೧॥

ಎಮ್ಮಯಾ ಸಂಸಾರ ಪುತ್ರನೀ ಅಶ್ವತ್ಥಾಮ
ನೀ ಎನ್ನಮೋಹದಾ ನಿಜಪುತ್ರ ಎನ್ನುತಲಿ
ಗುರುದ್ರೋಣ ಪ್ರಳಯದಾ ಮಳೆಯಂತೆ ಭೀಕರದ
ಬಾಣಗಳ ಸುರಿಸುತಲಿ ಅರ್ಜುನನ ಮುಚ್ಚಿದನು ॥೨೫೨॥

ಫಲಗುಣನು ಶರಗಳಲಿ ಶರಜಾಲ ಕಡಿಯುತಲಿ
ಮತ್ತೊಂದು ಬಾಣದಲಿ ಸಾರಥಿಯ ಕೊಲ್ಲುತಲಿ
ಬೇರೊಂದು ಬಾಣದಲಿ ದ್ರೋಣನಾ ಬಿಲ್ಲನ್ನು
ಕತ್ತರಿಸಿ ಕೆಡಹುತಿರೆ ಗುರುದ್ರೋಣ ಸರಿದಿಹನು ॥೨೫೩॥

ಇದ ನೋಡಿ ಗುರುಸುತನು ಅಶ್ವತ್ಥಾಮನಾವೀರ
ಧಾವಿಸುತ ಅರ್ಜುನನೆ ವೃದ್ಧರನು ಜಯಿಸಿಹೆನು
ಎನ್ನುತಲಿ ಉಬ್ಬದಿರು ನಿನ್ನಯಾ ಕೊಬ್ಬನ್ನು
ಇಳಿಸುತಲಿ ಉಬ್ಬಸವ ನಿನಗುಂಟು ಮಾಡುವೆನು ॥೨೫೪॥

ಎನ್ನುತಲಿ ಅಗಣಿತದ ಸರಳುಗಳ ಬಿಡುತಲಿರೆ
ಅರ್ಜುನನು ಶರಗಳನು ಎಲ್ಲವನು ಖಂಡಿಸುತ
ಅಶ್ವತ್ಥ ಧರಿಸಿರುವ ಧನುವನ್ನು ಭಂಗಿಸಲು
ಸರಿದಿಹನು ಕಾಣದಲೆ ಮುಖಭಂಗವಾಗುತಲಿ ॥೨೫೫॥

ವರಕೃಪನು ನೋಡುತಲಿ ಭರದಲ್ಲಿ ಧಾವಿಸುತ
ತಂದೆಮಗ ಸೋತಿಹರು ಜಯಶೀಲನಾಗಿಹೆನು
ಎನ್ನುತಲಿ ಓಡದಿರು ಎನ್ನಯಾ ಜೊತೆಯಲ್ಲಿ
ಸಂಗ್ರಾಮ ಗೈಯ್ಯುತಲಿ ಗೆಲ್ಲುವುದು ಎನ್ನುತಲಿ ॥೨೫೬॥

ಹರಿತವಿಹ ಭೀಕರದ ಬಾಣಗಳ ಬಿಡುತಲಿರೆ
ಫಲಗುಣನು ಬಾಣಗಳ ನಿಕರವನು ಕತ್ತರಿಸಿ
ಸಾರಥಿಯ ಕೊಲ್ಲುತಲಿ ರಥವನ್ನು ಪುಡಿಗೈದು
ವರಕೃಪನ ಬಿಲ್ಲನ್ನು ಕಡಿಯುತಲಿ ಸಾಗಿದನು ॥೨೫೭॥

ಕಲಿಕರ್ಣ ಗುರುದ್ರೋಣ ಅಶ್ವತ್ಥ ವರಕೃಪನು
ಅರ್ಜುನನ ಸೋಲಿಸಲು ಅಸಮರ್ಥರಾಗಿಹರು
ಅಕಟಕಟ ಇನ್ನಾರು ಅರ್ಜುನನ ಸೋಲಿಪರು
ಎನ್ನುತಲಿ ಕುರುಸೇನೆ ಬಾಯನ್ನು ಬಿಡುತಿರಲು ॥೨೫೮॥

ವರಭೀಷ್ಮ ನೋಡುತಲಿ ರಥವನ್ನು ಓಡಿಸುತ
ಪಾರ್ಥನನು ಅಡ್ಡೈಸಿ ತಡೆಯುತಲಿ ನಿಂದಿರಲು
ಕುರುಸೇನೆ ಕುಣಿಯುತಲಿ ಕೇಕೆಯನು ಹಾಕುತಲಿ
ಗರ್ಜನೆಯ ಗೈಯ್ಯುತಲಿ ಅಬ್ಬರದಿ ನುಡಿದಿಹುದು ॥೨೫೯॥

ಪ್ರಳಯದಾ ರುದ್ರನಿವ ಆ ಕಾಲಭೈರವನೆ
ಮೃತ್ಯುವಿನ ದೇವತೆಯು ಯಮಧರ್ಮನೀ ಭೀಷ್ಮ
ಘಡಹೋಗು ಅರ್ಜುನನೆ ಗಾಂಗೇಯ ಕನಲಿದರೆ
ನಿನ್ನನ್ನು ಕಾಯುವರು ಯಾರಿಲ್ಲ ಎಂದಿಹರು ॥೨೬೦॥

ಭೀಷ್ಮರನು ಕಾಣುತಲಿ ಕಲಿಪಾರ್ಥ ಶರಬೆರಡು
ತೆಗೆಯುತಲಿ ಚರಣಕ್ಕೆ ಎಸೆಯುತಲಿ ವಂದಿಸುತ
ನೀವೆಮ್ಮ ಮುತ್ತಯ್ಯ ಮೊಮ್ಮಗನು ನಾನಿಹೆನು
ನಿಮ್ಮೊಡನೆ ಕಾದಲಿಕೆ ನಮಗೆಂತು ಶಕ್ಯವಿದೆ ॥೨೬೧॥

ಎನ್ನುತಿರೆ ಅರ್ಜುನನು ಗಾಂಗೇಯ ನುಡಿದಿಹನು
ಮುರಹರನ ಕರುಣೆಯಲಿ ಹದಿನಾಲ್ಕು ವರ್ಷಗಳ
ವನವಾಸ ಕಳೆಯುತಲಿ ಸತ್ಯವನು ಪಾಲಿಸುತ
ಮೇದಿಯನಾಳಲಿಕೆ ಮತ್ತೇ ನೀವ್ ಬಂದಿಹಿರಿ ॥೨೬೨॥

ಗುರುದ್ರೋಣ ಕರ್ಣನನು ಅಶ್ವತ್ಥ ಕೃಪರನ್ನು
ಸೋಲಿಸಿದೆ ಇನ್ನೇನು ಜಯ ನಿಮಗೆ ಕಟ್ಟಿಹುದು
ಎಂದೆನುತ ಜಂಭವನು ಮಾಡದಿರು ಅರ್ಜುನನೆ
ಎನ್ನುತಲಿ ಗಾಂಗೇಯ ಬಾಣಗಳ ಸುರಿಸಿದನು ॥೨೬೩॥

ಫಲಗುಣನು ಕೂರಂಬು ಸುರಿಸುತಲಿ ಕಡಿಯುತಿರೆ
ಕೋಪದಲಿ ಗಾಂಗೇಯ ಶರವೊಂದನೆಚ್ಚುತಲಿ
ಸಾರಥಿಯ ಕೊಲ್ಲುತಲಿ ಮಗುದೊಂದು ಬಾಣವನು
ರಥದಗ್ರ ಮಾರುತಿಯ ನೊಸಲಿಂಗೆ ಎಸೆಯುತಿರೆ ॥೨೬೪॥

ರಾವಣನು ಈ ಪರಿಯ ಗಾಯವನು ಗೊಳಿಸಿರ್ದ
ಎನ್ನುತಲಿ ಕಪಿವರನು ಹಿಂದಿನದ ನೆನೆಯುತಿರೆ
ಗಾಂಗೇಯ ಅರ್ಜುನನ ವಕ್ಷಕ್ಕೆ ಬಾಣಗಳ
ಸುರಿಸುತಲಿ ಧರಿಸಿರುವ ಕವಚವನು ಕತ್ತರಿಸಿ ॥೨೬೫॥

ಶರದಲ್ಲಿ ಉತ್ತರನ ನೋಯಿಸುತ ಗಾಯದಲಿ
ಅರ್ಜುನನು ಉತ್ತರಗೆ ಧೈರ್ಯವನು ಹೇಳುತಲಿ
ಈಗೆನ್ನ ಯುದ್ಧದಾ ಕೌಶಲವ ನೋಡೆನುತ
ಆಗ್ನೇಯ ಅಸ್ತ್ರವನು ಜಗು ತಲಿ ಬಿಟ್ಟಿಹನು ೨೬೬॥

ಕುರುಥಟ್ಟು ಹೌಹಾರಿ ಬಾಯ್ಬಿಟ್ಟು ಚೀರುತಿರೆ
ಗುರುಭೀಷ್ಮ ವರುಣಾಸ್ತ್ರ ಎಸೆಯುತಲಿ ನಂದಿಸುತ
ಭೀಷ್ಮನಾ ಸರ್ಪಾಸ್ತ್ರ ಬಿಡುತಿರಲು ಫಲಗುಣನು
ಗರುಡಾಸ್ತ್ರವೆಚ್ಚುತಲಿ ಧ್ವಂಸವನು ಗೈದಿಹನು ॥೨೬೭॥

ಈ ತೆರದಿ ಅಸ್ತ್ರಗಳ ಪ್ರತ್ಯಾಸ್ತ್ರ ಎಸೆಯುತಲಿ
ಘನಘೋರ ಯುದ್ಧವನು ಈರ್ವರೂ ಗೈಯ್ಯುತಿರೆ
ಭೀಷ್ಮರಾ ಎದುರಿನಲಿ ಅರ್ಜುನನು ಅಲ್ಲದೆಯೆ
ಬೇರಾರು ನಿಲ್ಲಲಿಕೆ ಆಗದದು ಎಂದಿಹರು ॥೨೬೮॥

ತ್ರೈಲೋಕ್ಯ ವೀರನಾ ಅರ್ಜುನನ ಎದುರಿನಲಿ
ಕಲಿಭೀಷ್ಮರಲ್ಲದೇ ಇನ್ನಾರು ಶಕ್ತರು
ಅಂದಿನಾ ರಾಘವನ ಜೊತೆಯಲ್ಲಿ ಭಾರ್ಗವನ
ಯುದ ದಾ ಪರಿಯಂತೆ ಅದ್ಭುತದಿ ತೋರುತಿರೆ ॥೨೬೯॥

ಎನ್ನುತಿರೆ ಸುರವೃಂದ ದೇವೇಂದ್ರ ನುಡಿಯುತಿರೆ
ಫಲಗುಣನು ಈರೈದು ಶರಗಳನು ಜಗ್ಗುತಲಿ
ಭೀಷ್ಮಂಗೆ ಬಿಡುತಲಿರೆ ದೇಹದಲಿ ನಡುತಲಿರೆ
ಗುರುಭೀಷ್ಮ ಒರಗಿದನು ಸ್ತಂಬಕ್ಕೆ ರಥವಲ್ಲಿ ॥೨೭೦॥

ಅಕಟಕಟ ಅರ್ಜುನನು ಅತಿಕ್ರೂರ ನಿಷ್ಕರುಣೆ
ಮುಪ್ಪಿನಾ ಮುದುಕನನು ಮುತ್ತಯ್ಯ ಭೀಷ್ಮನನು
ಬಾಣದಲಿ ಇರಿಯುತಲಿ ಓಡಿಸುತ ಕೆಡುಹಿದನು
ಎನ್ನುತಲಿ ಅರ್ಜುನನ ಕುರುಸೇನೆ ಶಪಿಸಿದುದು ॥೨೭೧॥

ಇನ್ನಾರು ಗತಿ ಎಮಗೆ ಎನ್ನುತಲಿ ಚಿಂತಿಸುತ
ಕಳವಳವಗೊಳ್ಳುತಿರೆ ಕೌರವನು ವೇಗದಲಿ
ರಥವನ್ನು ಓಡಿಸುತ ಫಲಗುಣನು ಎದುರಿನಲಿ
ಅಡಹಾಯ್ದು ತಡೆಯುತಲಿ ಕ್ರೋಧದಲಿ ನುಡಿದಿಹನು ॥೨೭೨॥

ಎಲವೆಲವೊ ಅರ್ಜುನನೆ ಹುಡುಗರನು ಮುದುಕರನು
ಹೆದರಿಸುತ ಗೆಲ್ಲುತಲಿ ನೀನೆಲ್ಲಿ ಓಡುತಿಹೆ
ಎನ್ನೊಡನೆ ನಿನ್ನಯಾ ಶೌರ್ಯವನು ತೋರಿಪುದು
ನಿನ್ನಯಾ ಶಿರತರಿದು ಯಮನೂರಿಗಟ್ಟುವೆನು ॥೨೭೩॥

ಅಹುದಹುದು ನೀ ಶೂರನೆಂಬುದನು ನಾಬಲ್ಲೆ
ವೃದ್ಧರನು ಬಾಲರನು ಯುದ್ಧಕ್ಕೆ ಕಳಿಸುತಲಿ
ಹೇಡಿಯಾ ಪರಿಯಲ್ಲಿ ಮರೆಯಲ್ಲಿ ಏಕಿರ್ದೆ
ನಿನ್ನನ್ನು ರಣದೊಳಗೆ ಅರಸುತಲಿ ನಾನಿರ್ದೆ ॥೨೭೪॥

ವನವಾಸ ಕಳೆಯುತಲಿ ಅವಧಿಯನು ಸವೆಸುತಲಿ
ನಿನ್ನಯಾ ತಲೆಮೆಟ್ಟಿ ರಾಜ್ಯವನು ಆಳಲಿಕೆ
ನಾವೀಗ ಬಂದಿಹೆವು ಈಗ ನೀ ಸಿಕ್ಕಿರುವೆ
ನಿನ್ನಯಾ ಶಿರವನ್ನು ಗಗನಕ್ಕೆ ನೆಗೆಸುವೆನು ॥೨೭೫॥

ಎನ್ನುತಲಿ ಕಲಿಪಾರ್ಥ ಹರಿತವಿಹ ಶರಗಳನು
ಕೌರವನ ನೆಚ್ಚುತಿರೆ ಕೋಪದಲಿ ಕೌರವನು
ಬಾಣಗಳನೆಸೆಯುತಲಿ ಶರಗಳನು ಕಡಿಯುತಿರೆ
ಫಲಗುಣನು ಸಾವಿರದ ಶರಗಳನು ಎಸೆಯುತಲಿ ॥೨೭೬॥

ಶರಜಾಲ ಪಸರಿಸುತ ಕೌರವನ ಮುಚ್ಚುತಿರೆ
ಅಕಟಕಟ ಕೌರವನು ಎಲ್ಲಿಹನು ಕಾಣೆನು
ಸೆರೆಯಲ್ಲಿ ಸಿಕ್ಕಿದನೆ ಎನ್ನುತಲಿ ಭೀತಿಯಲಿ
ಕುರುಸೇನೆ ದಶದಿಸಗೆ ಚದುರುತಲಿ ಓಡುತಿರೆ ॥೨೭೭॥

ರಾಧೇಯ ಸೌಬಲನು ಜಯದ್ರಥನು ಭೂರಿಯು
ದುಶ್ಯಾಸನಾದಿಗಳು ಸೇರುತಲಿ ಭರದಲ್ಲಿ
ಯೋಚಿಸುವ ಸಮಯವಿದು ಅಲ್ಲೆನುತ ಸಕಲರೂ
ಚತುರಂಗ ಬಲಸಹಿತ ಅರ್ಜುನನ ಮುತ್ತಿದರು ॥೨೭೮॥

ರಾವಣನ ಸೈನ್ಯದಾ ಪರಿಯಲ್ಲಿ ತೋರುತಿರೆ
ಭೀಕರವು ತೋರುತಿದೆ ಎನ್ನುತಿರೆ ಕಪಿವರನು
ಉತ್ತರನು ಹೆದರುತಲಿ ಬೆಮರುತಲಿ ಪಾರ್ಥಂಗೆ
ನುಡಿದಿಹನು ಕಳವಳದಿ ನಡುನಡುಗಿ ದೈನ್ಯದಲಿ ॥೨೭೯॥

ನಿನ್ನಯಾ ಶಕ್ತಿಯನು ಅರಿಯದಲೆ ಹುಚ್ಚಿನಲಿ
ಸುಮ್ಮನೆ ಸಾರಥ್ಯ ಗೈಯ್ಯುವೆನು ಎನ್ನುತಲಿ
ಮೋಸವನು ಗೈಯ್ಯುವೆನು ಎನ್ನನ್ನು ಎಳೆತಂದು
ಯಜ್ಞದಾ ಪಶುವಂತೆ ಬಲಿಕೊಡುವೆ ಎನ್ನುತಿರೆ ॥೨೮೦॥

ಅಂಜದಿರು ಉತ್ತರನೆ ಯುದ್ಧದಲಿ ಸೈನ್ಯವಿದು
ಮುತ್ತುವುದು ಸಹಜವಿದು ಅಚ್ಚರಿಯು ಏನಲ್ಲ
ನಿನ್ನಯಾ ಕೂದಲವು ಎಳ್ಳನಿತು ಕೊಂಕದದು
ಈಗಲೇ ಎನ್ನಯಾ ಶೌರ್ಯವನು ನೋಡುವುದು ॥೨೮೧॥

ಎನ್ನುತಲಿ ಕಲಿಪಾರ್ಥ ಹೊಳೆಹೊಳೆವ ದಿವ್ಯಮಿಹ
ಸಮ್ಮೋಹನಾಸ್ತ್ರವನು ಹೊರತೆಗೆದು ಬಿಲ್ಲಿನಲಿ
ಹೂಡುತಲಿ ತೂಗುತಲಿ ಜಗ್ಗುತಲಿ ಬಿಡುತಿರಲು
ಕೌರವರ ಸೈನ್ಯವನು ಸಕಲರನು ತಾಗುತಿರೆ ॥೨೮೨॥

ಕಲಿಕರ್ಣ ಸೌಬಲನು ದುರ್ಯೋಧನಾದಿಗಳು
ಕುರುಸೇನೆ ಸಕಲವೂ ಬಾಣಗಳ ಬಿಲ್ಲುಗಳ
ಬಿಸುಡುತಲಿ ಭೂಮಿಯಲಿ ಬೀಳುತಲಿ ಒರಗುತಲಿ
ಗಾಢದಾ ನಿದ್ರೆಯಲಿ ಮೈಮರೆತು ಮಲಗಿದರು ॥೨೮೩॥

ಬಿಲ್ಲುಗಳು ಬಾಣಗಳು ಕಳಚುತಲಿ ಬೀಳುತಲಿ
ಕೈಗಳನು ಕಾಲ್ಗಳನು ಎಸೆಯುತಲಿ ಚೆಲ್ಲುತಲಿ
ಕಣ್ಗಳನು ಮುಚ್ಚುತಲಿ ಗೊರಕೆಯನು ಹೊಡೆಯುತಲಿ
ಕುರುಸೇನೆ ನಿದ್ರೆಯಾ ಅಂಗನೆಯನಪ್ಪಿದರು ॥೨೮೪॥

ಹನ್ನೊಂದು ಅಕ್ಷೋಹಿಣಿ ಸೈನ್ಯವನು ಒಬ್ಬನೆ
ಕಲಿಪಾರ್ಥ ಕೆಡಹಿದುದ ಕಾಣುತಲಿ ಬೆರಗಾಗಿ
ನಭದಲ್ಲಿ ನೆರೆದಿರ್ದ ಸುರವೃಂದ ದೇವೇಂದ್ರ
ಪುಷ್ಪದಾ ವೃಷ್ಟಿಯನು ಸುರಿಸಿದರು ಸಂತಸದಿ ॥೨೮೫॥

ಭೀಷ್ಮರನು ಒಬ್ಬರನು ಬಿಟ್ಟುಳಿದ ಸಕಲರೂ
ಮಲಗಿದುದ ಕಾಣುತಲಿ ಫಲುಗುಣನು ರಥವಿಳಿದು
ಮುತ್ತಯ್ಯ ಭೀಷ್ಮಂಗೆ ವರಗುರುವ ದ್ರೋಣಂಗೆ
ಸಾಷ್ಟಾಂಗ ಗೈಯ್ಯುತಲಿ ನಮಿಸಿದನು ಭಕುತಿಯಲಿ ॥೨೮೬॥

ಬಳಿಕ ಆ ಉತ್ತರಗೆ ಕೌರವನ ವಸ್ತ್ರವನು
ದುರುಳನಾ ದುಶ್ಯಾಸನನ ವಸ್ತ್ರವನು ಸೆಳೆಯುತಲಿ
ಕರ್ಣನಾ ಆಭರಣ ಉಳಿದವರ ವಜ್ರಗಳ
ಹಾರಗಳ ಕೊಳ್ಳುವುದು ಎನ್ನುತಲಿ ನುಡಿಯುತಲಿ ॥೨೮೭॥

ಕೌರವನ ಅಂಗದನ ದುಶ್ಯಾಸನಾದಿಗಳ
ಮಕುಟಗಳ ಭಂಗಿಸುತ ಹೊಳೆಯುತಿಹ ವಜ್ರಗಳ
ರತ್ನಗಳ ಕೊಳ್ಳುತಲಿ ಸೌಬಲನ ಸೈಂಧವನ
ಎಡಗಾಲಿನಿಂದೊದ್ದು ರಥವೇರಿ ಕುಳಿತಿಹನು ॥೨೮೮॥

ಉತ್ತರನು ರಥವಿಳಿದು ಕೌರವನ ದುಶ್ಯಾಸನನ
ವಸ್ತ್ರಗಳ ಸೆಳೆಯುತಲಿ ವಜ್ರಗಳ ಕೊಳ್ಳುತಲಿ
ಮಿಕ್ಕವರ ಮಿರುಗುವಾ ಆಭರಣ ಕಿತ್ತುತಲಿ
ದ್ರೋಣನಾ ಕೇಸರಿಯ ಸೆಲ್ಲೆಯನು ಕಸಿಯುತಲಿ ॥೨೮೯॥

ಭೀಷ್ಮರಾ ಬಳಿಬರಲು ಗುರುಭೀಷ್ಮ ಕಾಕ್ಷ್ಟರೆಯ
ಭೀತಿಯಲಿ ಒಡುತಲಿ ರಥವೇರಿ ಕೂಡ್ರುತಿರೆ
ಕಲಿಪಾರ್ಥ ರಥವನ್ನು ವೇಗದಲಿ ಬಿಡುತಿರಲು
ಗಾಂಗೇಯ ಅಡಹಾಯ್ದು ಫಲಗುಣನ ತಡೆಯುತಿರೆ ॥೨೯೦॥

ಶರಗಳನು ಎಚ್ಚುತಲಿ ಭೀಷ್ಮರಾ ಬಿಲ್ಲನ್ನು
ಖಂಡಿಸುತ ಕೆಡಹುತಲಿ ಕೌರವನ ಮಕುಟವನು
ಕರ್ಣನ ಕಿರೀಟವನು ಹಾರಿಸುತ ಧ್ವಂಸಿಸುತ
ನಸುನಗುತ ಅರ್ಜುನನು ರಥವನ್ನು ಸಾಗಿಸುತ ॥೨೯೦॥

ಶಮಿವೃಕ್ಷ ಬಳಿಬರಲು ಶಸ್ತ್ರಗಳ ಅಸ್ತ್ರಗಳ
ಮೊದಲಿನಾ ಪರಿಯಲ್ಲಿ ಕಟ್ಟುತಲಿ ಇರಿಸುತಲಿ
ಸುರರೆಲ್ಲ ಜಯಜಯವು ಎನ್ನುತಲಿ ಹೊಗಳುತಿರೆ
ಕಲಿವಿಜಯ ಹೊಕ್ಕಿಹನು ನಿಜಪುರವ ವಿಜಯದಲಿ ॥೨೯೨॥

ಪುರದೊಳಗೆ ಬರುತಿರಲು ಫಲಗುಣನು ಉತ್ತರಗೆ
ಧುರವನ್ನು ನೀನೆಯೇ ಗೆಲಿದಿಹೆನು ಎನ್ನುತಲಿ
ಸಾರುತಲಿ ಡಂಗುರವ ಹೊಯಿಸುತಲಿ ನಿನ್ನಯಾ
ವಿಕ್ರಮವ ಮೆರೆಸುವುದು ನಗರದಲಿ ಎನ್ನುತಿರೆ ॥೨೯೩॥

ಉತ್ತರನು ಎಲ್ಲವನು ನೀನೆಯೇ ಅರಿತಿರುವೆ
ಎನ್ನುತಲಿ ಭೃತ್ಯರನು ಕರೆಯುತಲಿ ನುಡಿದಿಹನು
ಬವರವನು ಜಯಿಸಿದೆನು ಎನ್ನುತಲಿ ಡಂಗುರವ
ಪುರದೊಳಗೆ ಹೊಯಿಸುವುದು ಎನ್ನುತಿರೆ ಫಲಗುಣನು ॥೨೯೪॥

ಎಮ್ಮರವ ಸುದ್ದಿಯನು ಆರಿಗೂ ಅರುಹದಿರು
ಯುದ್ಧದಾ ವಾರ್ತೆಯನು ಆರಿಗೂ ತಿಳಿಸದಿರು
ನಿನ್ನಯಾ ತಂದೆಯನು ಕಾಣುವುದು ಎನ್ನುತಲಿ
ಫಲುಗುಣನು ಉತ್ತರಗೆ ನುಡಿಯುತಲಿ ಕಳುಹಿದನು ॥೨೯೫॥

ಇತ್ತಲಾ ವಿರಾಟನೃಪ ಅರಮನೆಯ ಸೇರುತಲಿ
ಕುವರರನು ಕಾಣದಲೆ ಕಳವಳವಗೊಳ್ಳುತಿರೆ
ಉತ್ತರನು ಯುದ್ಧಕ್ಕೆ ತೆರಳಿದನು ಎನ್ನುತಲಿ
ಹೇಳುತಿರೆ ದಿಗ್ಭ್ರಾಂತನಾಗಿಹನು ದುಗುಡದಲಿ ॥೨೯೬॥

ಸುಕುಮಾರ ಕೌರವನ ಸೈನ್ಯವನು ಭೀಷ್ಮರನು
ದ್ರೋಣನನು ಕರ್ಣನನು ತಾನೆಂತು ಜಯಿಸುವನು
ಎನ್ನುತಲಿ ಮಿಡುಕುತಲಿ ಚಿಂತಿಸುತಲಿರಲು
ಸೇವಕರು ವಾದ್ಯದಲಿ ಐತಂದು ನುಡಿದಿಹರು ॥೨೯೭॥

ಉತ್ತರನು ಯುದ್ಧವನು ಗೈಯ್ಯುತಲಿ ಜಯಿಸುತಲಿ
ತುರುಗಳನು ಮರಳಿಸುತ ಬಂದಿಹನು ವಿಜಯದಲಿ
ವೈಭವದಿ ಕರೆತರುವುದೆನ್ನುತಲಿ ನುಡಿಯುತಿರೆ
ಹರ್ಷದಾ ಸಾಗರದಿ ಮುಳುಗಿಹನು ಭೂಪತಿಯು ॥೨೯೮॥

ಹೊಳೆಹೊಳೆವ ವಸ್ತ್ರಗಳ ಧರಿಸುತಲಿ ಶೋಭಿಸುತ
ಮುತ್ತುಗಳ ರತ್ನಗಳ ಬಂಗಾರದೊಡವೆಗಳ
ಧರಿಸುತಲಿ ಅರಮನೆಯ ನಾರಿಯರು ಸಿಂಗರದಿ
ವಾದ್ಯದಲಿ ಹೊರಟಿಹರು ಉತ್ತರನ ಕರೆತರಲು ॥೨೯೯॥

**ದ್ಯೂತದಲಿ ವಿರಾಟನೃಪ ಧರ್ಮಜನ ನೆತ್ತಿಯಲಿ ।**
**ಲೆತ್ತವನು ಎಸೆಯುತಿರೆ ನೆತ್ತರವು ಸುರಿದಿಹುದು ॥**

ಆನಂದ ಸಾಗರವು ಉಕ್ಕುತಿರೆ ವಿರಾಟದೊರೆ
ಕಂಕನನ ಕರೆಸುತಲಿ ಸಂತಸದ ದಿನವಿಂದು
ನಿನ್ನೊಡನೆ ದ್ಯೂತವನು ಆಡಲಿಕೆ ಬಯಸುವೆನು
ಎನ್ನುತಿರೆ ವರಕಂಕ ನುಡಿದಿಹನು ವಿನಯದಲಿ ॥೩೦೦॥

ಹೇ ನೃಪತಿ ಪಾಂಡವರು ದ್ಯೂತವನು ಆಡುತಲಿ
ರಾಜ್ಯವನು ಸೋಲುತಲಿ ಕಾನನವ ಸೇರುತಲಿ
ಕಷ್ಟವನು ಪಡುತಿಹುದ ಅರಿತಿರಲು ನೀನಿಂತು
ದ್ಯೂತವನು ಬಯಸುವುದು ಯೋಗ್ಯವೇ ಹೇಳೆನಲು ॥೩೦೧॥

ಪಾಂಡವರು ರಾಜ್ಯವನು ಪಣಒಡ್ಡಿ ಸೋತಿಹರು
ಎನ್ನಯಾ ಸುಕುಮಾರ ಯುದ್ಧವನು ಗೆಲಿದಿಹರು
ಹರುಷದಲಿ ಕಾಲವನು ಕಳೆಯಲಿಕೆ ಸಂತಸದಿ
ಆವಪಣ ಇಲ್ಲದೆಯೆ ಆಡುವುದು ಸುಮ್ಮನೆ ॥೩೦೨॥

ಎನ್ನುತಲಿ ನರಪತಿಯು ನಸುನಗುತ ಭರದಲ್ಲಿ
ಥಳಥಳಿಪ ಪಗಡೆಯಾ ಪಟ್ಟವನು ಹಾಸುತಲಿ
ಲೆತ್ತಗಳ ಎಸೆಯುತಲಿ ಉತ್ಸಾಹ ಉಕ್ಕುತಲಿ
ಮೇರೆಯನು ಮೀರಿರುವ ಸಂತಸವ ತಡೆಯದಲೆ ॥೩೦೩॥

ಗುರುಭೀಷ್ಮ ದ್ರೋಣರನು ಅಂಗದನ ಕೌರವನ
ಜಯಿಸುತಲಿ ಗೋವುಗಳ ಮರಳಿಸಿದ ಉತ್ತರನು
ಸುರರೊಳಗೆ ನರರೊಳಗೆ ಉತ್ತರನ ಹೋಲುವಾ
ವಿಕ್ರಮರ ಶೂರರನು ನಾಕಾಣೆ ಎನ್ನುತಿರೆ ॥೩೦೪॥

ಜಗದೊಳಗೆ ಅಪ್ರತಿಮ ಎನಿಸುತಿಹ ಸಾರಥಿಯು
ಇರುತಿರಲು ಉತ್ತರಗೆ ಭಯಭೀತಿ ಎಲ್ಲಿಹುದು
ಯುದ್ಧವನು ಜಯಿಸುವುದು ಅಚ್ಚರಿಯು ಏನಿಲ್ಲ
ಸಾರಥಿಯ ದೆಸೆಯಿಂದ ವಿಜಯವದು ದೊರತಿಹುದು ॥೩೦೫॥

ಕಂಕನಾ ನುಡಿಗಳನು ಕೇಳುತಲಿ ನರಪತಿಯು
ಎಲೆಕಂಕ ಉತ್ತರನ ಶೌರ್ಯವನು ತೆಗಳುವೆಯಾ
ಸಾರಥಿ ನಪುಂಸಕನ ಹೊಗಳುತಿಹೆ ತಿಳಿಯದಲೆ
ನೀನಿಂತು ನುಡಿದುದನು ಮತ್ತಾರಿಗುಸುರದಿರು ॥೩೦೬॥

ನಿನ್ನಯಾ ಚಿತ್ತದಲಿ ಮತ್ಸರದ ಜ್ವಾಲೆಯದು
ಉರಿಯುತಲಿ ನುಡಿಯುತಿಹೆ ಬಾಯಿಯಲಿ ಬಂದಂತೆ
ನೋಡಲಿಕೆ ಸನ್ಯಾಸಿ ಪರಿಯಲ್ಲಿ ಕಾಣುತಿಪ
ಮನದೊಳಗೆ ವಿಷತುಂಬಿ ತುಳುಕುತಿದೆ ಮತ್ಸರದಿ ॥೩೦೭॥

ಎನ್ನಯಾ ಆಶ್ರಯದಿ ಅನ್ನವನು ಉಣ್ಣುತಲಿ
ವಿಷವಾಗಿ ಕಾರುತಿಹೆ ನಾಗನಾ ತೆರದಲ್ಲಿ
ಗೋಮುಖದ ವ್ಯಾಘ್ರನಿಹೆ ಕೃತಘ್ನ ನೀನಿರುವೆ
ತೊಲಗಿಹೋಗು ದುಷ್ಟಾತ್ಮ ಎನ್ನುತಿರೆ ವಿರಾಟನೃಪ ॥೩೦೮॥

ಎಲೆನೃಪತಿ ನಿಜಸುತನ ಮೋಹದಲಿ ಕುರುಡಾದ
ಕಂಗಳಿಗೆ ಮಗಗೆಲಿದನೆಂಬುವುದು ಸಹಜವಿದು
ಜಗವೀರ ಸಾರಥಿ ಬೃಹನ್ನಳೆಯು ಜಯಿಸಿಹನು
ಎನ್ನುತಲಿ ಡಂಗುರವ ಹೊಯಿಸುವುದು ನಿಜವಿದುವು ॥೩೦೯॥

ಈ ಪರಿಯೆ ವರಕಂಕ ನುಡಿಯುತಿರೆ ಖಂಡಿತದಿ
ಕೋಪದಾ ಜ್ವಾಲೆಯದು ಹೊತ್ತುತಲಿ ಉರಿಯುತಲಿ
ವಿರಾಟನೃಪ ಲೆತ್ತವನು ಎತ್ತುತಲಿ ಘೋರದಲಿ
ಕಂಕನಾ ನೊಸಲಿಂಗೆ ಭೀಕರದಿ ಎಸೆಯುತಿರೆ ॥೦೧೦॥

**ಧರ್ಮಜನ ಹಣೆಯೊಡೆದು ನೆತ್ತರವು ಸುರಿಯುತಿರೆ ।**
**ದ್ರೌಪದಿಯು ಕರಪುಟದಿ ನೆತ್ತರವ ಹಿಡಿದಿಹಳು ॥**

ಹಣೆಯೊಡೆದು ರಕುತದಾ ಬುಗ್ಗೆಯದು ಚಿಮ್ಮುತಲಿ
ಘಳಿಲೆಂದು ರಕುತದಾ ಧಾರೆಯದು ಸುರಿಯುತಿರೆ
ವರಕಂಕ ಬೊಗಸೆಯಲಿ ರಕುತವನು ಹಿಡಿಯುತಲಿ
ನೋಟದಲಿ ಸೈರಂಧ್ರಿಯವಳನ್ನು ಕರೆದಿಹನು ॥೩೧೧॥

ಅಕಟಕಟ ಸನ್ಯಾಸಿ ಗಾಯದಲಿ ಬಳಲಿದನು
ಎನ್ನುತಲಿ ಸೈರಂಧ್ರಿ ಧಾವಿಸುತ ಸೆರಗಿನಲಿ
ರಕುತವನು ತೊಯಿಸುತ ನೆನೆಯಿಸುತ ಕಂಕನಾ
ವದನವನು ಒರಸಿದಳು ಕಂಬನಿಯ ಸುರಿಸುತಲಿ ॥೩೧೨॥

ವಿರಾಟನೃಪ ನೋಡುತಲಿ ಬೆರಗಾಗಿ ನುಡಿದಿಹನು
ಕಂಕನಿವ ನೋಯುತಿರೆ ನೀನೇಕೆ ಕಳವಳದಿ
ರಕುತವನು ಬೊಗಸೆಯಲಿ ಧಾವಿಸುತ ಹಿಡಿದಿರುವೆ
ಕಂಕನಿಗೆ ನಿನಗಾವ ಸಂಬಂಧ ಹೇಳೆನಲು ॥೩೧೩॥

ಧರ್ಮದಾ ನೆಲೆಎನಿಪ ಸನ್ಯಾಸಿ ಕಂಕನಾ
ರಕುತದಾ ಹನಿಯೊಂದ ನೆಲದಲ್ಲಿ ಕೆಡುಹಿದರೆ
ರಾಜ್ಯದಾ ಸಂಪದವು ಉರಿಯುತಲಿ ನಶಿಸುವುದು
ಬೇರಿನಾ ಸಹಿತದಲಿ ವಂಶವದು ಅಳಿಯುವುದು ॥೩೧೪॥

ಎಂಬುವಾ ಬಿರುದಿಹುದು ಬೃಹನ್ನಳೆಗೆ ಎನ್ನುತಲಿ
ವರಕಂಕ ಬೊಗಸೆಯಲಿ ರಕುತವನು ಹಿಡಿಯುತಲಿ
ನಿನ್ನಯಾ ಪ್ರಾಣವನು ವಂಶವನು ಉಳಿಸಿಹನು
ಎನ್ನುತಿರೆ ಸೈರಂಧ್ರಿ ವಿರಾಟದೊರೆ ಬೆರಗಿನಲಿ ॥೩೧೫॥

ಅರಿಹನು ವರಕಂಕ ಅರಿಹಳು ಸೈರಂಧ್ರಿ
ಅರಿಹನು ಸಾರಥಿಯು ಆಗಿಹ ಬೃಹನನ್ನಳೆಯು
ಎತ್ತಣದ ಸಂಬಂಧ ಮೂವರಿಗೆ ಇರುತಿಹುದು
ಎನ್ನುತಲಿ ಮನದೊಳಗೆ ಯೋಚಿಸುತಲಿರುತಿರಲು ॥೩೧೬॥

ಮಂತ್ರಿಗಳು ಧಾವಿಸುತ ನೃಪನೆಡೆಗೆ ಐತಂದು
ಕೌರವನ ಅಗಣಿತದ ಸೈನ್ಯವನು ಕೊಲ್ಲುತಲಿ
ಉತ್ತರನು ಬಂದಿಹನು ಎನ್ನುತಲಿ ಅರುಹುತಿರೆ
ಸಂತಸದಿ ವಿರಾಟನೃಪ ಹೊಕ್ಕಿಹನು ಅರಮನೆಯ ॥೩೧೭॥

ಕಹಳೆಗಳು ಕೊಂಬುಗಳು ವಾದ್ಯಗಳು ಮೊಳಗುತಿರೆ
ಜಯ ಜಯದ ಧ್ವನಿಯದುವೆ ಗಗನವನು ಭೇದಿಸಿರೆ
ಲಲನೆಯರು ಬಂಗಾರದಾರತಿನೆತ್ತುತಲಿ
ಮಂಗಲದ ಗೀತದಲಿ ಸೇಸೆಯನು ಎರಚುತಿರೆ ॥೩೧೮॥

ನಿಸ್ತೇಜ ವದನದಲಿ ಉತ್ಸಾಹವಳಿಯುತಲಿ
ಉತ್ತರನು ಅರಮನೆಯ ಒಳಗಡೆಗೆ ಬರುತಿರಲು
ಬಾ ಮಗನೆ ಎನ್ನಯಾ ಮೋಹದಾ ಸುಕುಮಾರ
ಯುದ್ಧವನು ಗೆದ್ದಿರುವ ಮದ್ದಾನೆ ಬಾ ಎಂದು ॥೩೧೯॥

ಉತ್ತರ ಬಿಗಿದಪ್ಪಿ ಕೊಳ್ಳುತಲಿ ವಿರಾಟನೃಪ
ಭೀಷ್ಮರನು ದ್ರೋಣರನು ಅಪ್ರತಿಮ ವೀರರನು
ಜಯಿಸಿರುವ ನಿನ್ನಯಾ ಸರಿಸಮರು ಶೂರರು
ಜಗದೊಳಗೆ ಆರಿಲ್ಲ ಎನ್ನುತಲಿ ನುಡಿಯುತಿರೆ ॥೩೨೦॥

ಎನ್ನನ್ನು ಸುಮ್ಮನೆ ಹೊಗಳದಿರು ಬೊಪ್ಪನೆ
ಬವರವನು ಗೆಲಿದವನು ಬೇರೊಬ್ಬ ತಾನಿಹನು
ನಿನ್ನಯಾ ನುಡಿಗಳನು ಕೇಳುತಲಿ ನವೆಯುತಲಿ
ನಾಚಿಕೆಯು ಎನಿಸುವುದು ಎನ್ನುತಿರೆ ಉತ್ತರನು ॥೩೨೧॥

ಅಹುದಹುದು ಸುಕುಮಾರ ನಿನಗಿದುವೆ ಒಪ್ಪುವುದು
ಲೋಕೈಕ ವೀರನನು ಜಗವೆಲ್ಲ ಹೊಗಳಿದೊಡೆ
ಉಬ್ಬದಿಹ ವೀರನಾ ಪರಿಯಲ್ಲಿ ನೀನಿಂತು
ನುಡಿಯುತಿಹೆ ನಮ್ರದಲಿ ಎನ್ನುತಿರೆ ಮತ್ಸ್ಯದೊರೆ ॥೩೨೨॥

ಯುದ್ಧವನು ಜಯಿಸಿರುವ ವೀರನವ ಬೇರೆ ಇಹ
ಸಾರಥಿಯು ತಾನಾದ ತನಗೇಕೆ ಹೊಗಳಿಕೆಯು
ಸಮರವನು ಗೆಲ್ಲುವಾ ಶಕ್ತಿಯದು ಎನಗುಂಟೆ
ನೊಂದಿಹೆನು ಮತ್ತಿಷ್ಟು ನೋಯಿಸಲು ಬೇಡೆನಲು ॥೩೨೩॥

ಸುಳ್ಳೇಕೆ ನುಡಿಯುತಿಹೆ ಸುಕುಮಾರ ಉತ್ತರನೆ
ಉತ್ತರನೆ ನಾಟ್ಯವನು ಕಲಿಸುವಾ ಬೃಹನ್ನಳೆಯು
ಸಾರಥಿಯು ಆಗುತಲಿ ನೀ ಯುದ್ಧ ಜಯಿಸಿದುದು
ನಿಜವಾಗಿ ಅರಿತಿಹೆನು ಎನ್ನುತಿರೆ ವಿರಾಟನೃಪ ॥೩೨೪॥

ಕಾದುತಲಿ ಕದನವನು ಗೆದ್ದಿರುವ ಶೂರರನು
ನಾಳೆಯಾ ದಿನದಲ್ಲಿ ನಿಮ್ಮೆದುರು ತೋರಿಪೆನು
ಈಗೆನ್ನ ಕಳಿಸಿಕೊಡಿ ಎನ್ನುತಿರ ಉತ್ತರನು
ಭೂಪತಿಯು ನಿಜಸುತನ ಕಳುಹಿದನು ಅರಮನೆಗೆ ॥೩೨೫॥

ಅತ್ತಲಾ ಅರ್ಜುನನು ಉತ್ತರೆಯ ಸದನವನು
ಸೇರುತಲಿ ಹೊಳೆಯುತಿಹ ವಜ್ರಗಳ ಹಾರಗಳ
ರತ್ನಗಳ ಆಭರಣ ಪೀತಾಂಬರಾದಿಗಳ
ಈಯುತಿರೆ ಉತ್ತರೆಯು ಸಂತಸವ ಗೊಳ್ಳುತಿರೆ ॥೩೨೬॥

ಫಲಗುಣನು ಹೊರವಂಟು ಭರದಲ್ಲಿ ಕಾತರದಿ
ಧರ್ಮಜನ ಭವನವನು ಹೊಗುತಲಿರೆ ಆಕ್ಷಣದಿ
ದ್ರೌಪದಿಯು ಅನಿಲಜನು ಸಹದೇವ ನಕುಲರು
ಬರುತಿರಲು ಒಬ್ಬೊಬ್ಬರಪ್ಪಿದರು ಹರುಷದಲಿ ॥೩೨೭॥

ಧರ್ಮಜನ ಚರಣಕ್ಕೆ ಕಲಿಪಾರ್ಥ ಎರಗುತಲಿ
ಕೌರವನ ಸೈನ್ಯವನು ಜಯಿಸಿರುವ ಪರಿಯನ್ನು
ಯುದ್ಧದಾ ವಾರ್ತೆಯನು ವಿಸ್ತರದಿ ಹೇಳುತಲಿ
ಧರ್ಮಜನ ಹಣೆಯಲ್ಲಿ ರಕುತವನು ಕಾಣುತಲಿ ॥೩೨೮॥

ಅಕಟಕಟ ಧರ್ಮಜಗೆ ಗಾಯವನು ಗೈದಿರುವ
ನೀಚನವ ದುಷ್ಟಾತ್ಮನಾರಿಹರು ಪೇಳುವುದು
ಯಮಸದನಕಟ್ಟುವೆನು ನಿಮಿಷದಲಿ ಎನ್ನುತಲಿ
ಗಾಂಡಿವವ ಜಡಿಯುತಲಿ ಪಿಡಿದೆದ್ದ ಫಲಗುಣನು ॥೩೨೯॥

ಕೋಪದಲಿ ಕುದಿಯುತಲಿ ಕಳವಳಿಸಿ ಕಲಿಭೀಮ
ವಿರಾಟನಾ ವಂಶವನು ಸಕಲರನು ತರಿಯುತಲಿ
ಕೀಚಕನು ಇದ್ದೆಡೆಗೆ ಕಳಿಸುವೆನು ಎನ್ನುತಲಿ
ಗದೆಯನ್ನು ತಿರುಹುತಲಿ ಎದ್ದಿಹನು ಆರ್ಭಟಿಸಿ ॥೩೩೦॥

ಪವನಜನೆ ನಿನ್ನಯಾ ಶಕ್ತಿಯನು ಅರಿತಿಹೆನು
ಕೋಪದಾ ಸಮಯವಿದು ನಮಗಲ್ಲ ಸೈರಿಪುದು
ಎನ್ನಯಾ ರಕುತವನು ಭೂಮಿಯನು ಸೋಂಕುವುದು
ತಡೆದಿಹಳು ವರಸಾಧ್ವಿ ತನ್ನಯಾ ಸೆರಗಿನಲಿ ॥೩೩೧॥

ಆಶ್ರಯವ ನೀಯುತಲಿ ಅನ್ನವನು ಇತ್ತಿರುವ
ಕಾರುಣಿಕ ಮತ್ಸ್ಯನನು ಕೋಪದಲಿ ಕೊಲ್ಲುತಿರೆ
ಜಗವೆಲ್ಲ ನಮ್ಮನ್ನು ನಿಂದಿಸದೆ ಇರುತಿಹುದೆ
ನಮಗೀಗ ಕಷ್ಟದಾ ಸಮಯವಿದೆ ಸಹಿಸುವುದು ॥೩೩೨॥

ಪೂರ್ವದಲಿ ಮಾಡಿರುವ ಪಾಪದಾ ಫಲದಿಂದ
ನಾವೀಗ ದುಃಖವನು ಪಡುತಿಹೆವು ವಿಧಿಯಲ್ಲಿ
ಸುಮ್ಮನೇಪರರನ್ನು ದೂಷಿಪುದು ಸರಿಯಲ್ಲ
ಎನ್ನುತಲಿ ಧರ್ಮಜನುಪವನಜನೆತ ಡೆಯುತಿರೆ ॥೩೩೩॥

ನಿಮ್ಮಯಾ ಧರ್ಮದಾ ನುಡಿಗಳನು ಪಾಲಿಸುತ
ಹದಿಮೂರು ವರುಷಗಳ ವನವಾಸ ಸಹಿಸಿದೆವು
ರಾಜಸುಖ ನಮಗೆಂದು ದೊರೆಯುವುದು ಜನುಮದಲಿ
ಬಿಟ್ಟು-ಬಿಡಿ ನಮ್ಮನ್ನು ಕಾರ್ಯವನು ಮೆರೆಸುವೆವು ॥೩೩೪॥

ಎನ್ನುತಿರೆ ಪವನಜನು ಧರ್ಮಜನು ನೋಯುತಲಿ
ಅಹುದಹುದು ತಮ್ಮನೆ ಎನ್ನಯಾ ದೆಸೆಯಿಂದ
ಮಾತನ್ನು ಮೀರದಲೆ ನೀವೆಲ್ಲ ಬಳಲಿದಿರಿ
ಇಂದಿನಾ ದಿನವೊಂದು ಮಾತ್ರವೇ ಸಹಿಸುವುದು ॥೩೩೫॥

ನಾಳೆಯಾ ದಿನದಲ್ಲಿ ಭಾನುವಿನ ಉದಯದಲಿ
ವಿರಾಟನಾ ಸಿಂಹಾಸನೇರುವೆವು ಖಚಿತದಲಿ
ವಿರಾಟನೃಪ ಕನಲಿದಡೆ ಕೊಲ್ಲುವುದು ಎನ್ನುತಲಿ
ಪವನಜನ ಸಂತೈಸಿ ನುಡಿದಿಹನು ಧರ್ಮಜನು ॥೩೩೬॥

**ಪಾಂಡವರು ವೇಷಗಳ ತೊರೆಯುತಲಿ ಹೊಳೆಹೊಳೆವ**
**ವರನೃಪರ ರೂಪದಲಿ ತೋಳದಗಿರು ಬೆಳಗಿದರು**

ಅಜ್ಞಾತವಾಸದಾ ವರುಷವೊಂದು ಉರುಳುತಲಿ
ಪಾಂಡವರು ಕೊನೆರಾತ್ರಿ ಕಳೆಯುತಿರೆ ಹರುಷದಲಿ
ಉದಯದಲಿ ಮೂಡಣದಿ ಬಾಲರವಿ ತೊಳಗುತಲಿ
ಮೂಡಿದನು ಪಾಂಡವರ ಅಭ್ಯುದಯ ನೋಡಲಿಕೆ ॥೩೩೭॥

ಹರಹರನೆ ಮುರಹರನೆ ಗೋವಿಂದ ಮಾಧವನೆ
ಶ್ರೀವಿಷ್ಣು ವಾಮನನೆ ಕೇಶವನೆ ಎನ್ನುತಲಿ
ಐವರೂ ಮಂಗಲದ ಮಜ್ಜನವ ಗೈಯುತಲಿ
ನಳನಳಿಪ ಶಾಲಿವನ ತೇಜದಲಿ ಬೆಳಗಿದರು ॥೩೩೮॥

ಹೊಳೆಹೊಳೆವ ಪೀತಾಂಬರಾದಿಗಳ ಧರಿಸುತಲಿ
ನೊಸಲಿನಲಿ ಕುಂಕುಮದ ತಿಲಕವನು ಇರಿಸುತಲಿ
ಥಳಥಳಿಪ ಅಂಗಿಗಳ ಅಂಗದಲಿ ಆಳವಡಿಸಿ
ರತ್ನಗಳ ಹಾರಗಳ ಧರಿಸುತಲಿ ಮೆರೆದಿಹರು ॥೩೩೯॥

ಧರೆಗಿಳಿದ ಉದಯರವಿ ಕಿರಣಗಳು ಎಂಬಂತೆ
ಸುರದಿವ್ಯ ತೇಜದಲಿ ಹೊಳೆಯುತಲಿ ಬೆಳಗುತಲಿ
ಧರ್ಮಜನು ಸೋದರರ ಮತ್ತೆ ಆ ದ್ರೌಪದಿಯ
ವರಸಾಧ್ವಿ ಸಹಿತದಲಿ ವಿರಾಟನಾ ಓಲಗಕೆ ॥೩೪೦॥

ಹರುಷದಲಿ ಐತಂದು ಸಿಂಹದಾ ಪೀಠವನು
ಏರುತಲಿ ಕುಳಿತಿಹನು ದ್ರೌಪದಿಯ ಸಹಿತದಲಿ
ನಾಲ್ವರಾ ಸೋದರರು ಶಿರಬಾಗಿ ನಮಿಸುತಲಿ
ಜಯಜಯವು ಧರ್ಮಜಗೆ ಜಯಜಯವು ಎಂದಿಹರು ॥೩೪೧॥

ಕಣ್ಣನ್ನು ಕುಕ್ಕಿಸುವ ಕಾಂತಿಯಲಿ ಹೊಳೆಯುತಿಹ
ಐವರನು ನೋಡುತಲಿ ಬೆರಗಾಗಿ ಸೇವಕರು
ವಿರಾಟನಾ ಬಳಿಬಂದು ಆವನೋ ಐತಂದು
ಸಿಂಹಾಸನೇರುತಲಿ ಕುಳಿತಿಹನು ಎಂದಿಹರು ॥೩೪೨॥

ಅಪ್ರತಿಮ ತೇಜದಲಿ ಹೊಳೆಯುತಿಹ ಆ ಮಹಿಮ
ಸುರರೊಡೆಯ ದೇವೇಂದ್ರ ಮಹದೇವ ನರಯಣನೊ
ಮಾನುಷನು ಅವನಲ್ಲ ಸುರರಂತೆ ಕಾಣುವನು
ಅವನಾರು ಎಂಬುದನು ನಾವರಿಯೆವೆನ್ನುತಿರೆ ॥೩೪೩॥

ವಿರಾಟನೃಪ ಕಳವಳದಿ ಪರಿವಾರ ಸಹಿತದಲಿ
ಧಾವಿಸುತ ಐತಂದು ಕಣ್ಣೆವೆಯನಿಕ್ಕದಲೆ
ಚಂದ್ರನಾ ಕಿರಣಗಳ ಪರಿಯಲ್ಲಿ ಹೊಳೆಯುತಿಹ
ಪಾಂಡವರ ಐವರನು ಕಾಣುತಲಿ ಬೆರಗಾದ ॥೩೪೪॥

ಶತ್ರುಗಳು ಇವರಲ್ಲ ಮತ್ಸರವು ಇಲ್ಲಿಲ್ಲ
ಉತ್ತಮರು ಸಾತ್ವಿಕದ ತೇಜದಲಿ ಬೆಳಗುವರು
ಎಮ್ಮಯಾ ಭಾಗ್ಯದಾ ಬೆಳವಿಗೆಯು ಎಂಬಂತೆ
ವರಸುರರು ಧರೆಗಿಳಿದು ಬಂದಿಹರು ಎನ್ನುತಿರೆ ॥೩೪೫॥

ಇವಕಂಕ ವಲಲನಿವ ಬೃಹನ್ನಳೆ ಎಂಬಂತೆ
ಸಾಮ್ಯದಲಿ ತೋರುವರು ಅಚ್ಚರಿಯು ಎನ್ನುತಲಿ
ಕೆಲಬಲದ ಜನರೆಲ್ಲ ಬೆರಗಾಗಿ ನುಡಿಯುತಿರೆ
ಉತ್ತರನು ಮುಂದಕ್ಕೆ ಧಾವಿಸುತ ನುಡಿದಿಹನು ॥೩೪೬॥

ತಂದೆಯೆ ನೋಡೀತ ನಿನ್ನೆಯಾ ಸಮರದಲಿ
ಕೌರವನ ಸೈನ್ಯವನು ಧ್ವಂಸವನು ಮಾಡುತಲಿ
ಭೀಷ್ಮರನು ದ್ರೋಣರನು ಕೃಪನನ್ನು ಜಯಿಸುತಲಿ
ಯುದ್ಧವನು ಗೆದ್ದಿರುವ ಕಲಿಪಾರ್ಥ ನೆಂದಿಹನು ॥೩೪೭॥

ಸೋದರರ ಸಹಿತದಲಿ ಕೀಚಕನ ಕೊಂದಿರುವ
ಕಲಿಭೀಮ ವಿಕ್ರಮನು ಕೆಲದಲ್ಲಿ ಮೆರೆಯುವನು
ಅವನ ಬಳಿನಿಂದಿಹರು ನಕುಲನಾ ಸಹದೇವ
ನೋಡಲ್ಲಿ ಸಿಂಹಾಸನಾರೂಢನಾಗುತಲಿ ॥೩೪೮॥

ಸುರದಿವ್ಯ ತೇಜದಲಿ ಚಂದ್ರನಾ ಕಾಂತಿಯಲಿ
ಶೋಭಿಸುವ ಹಿರಿಯನಿಹ ಇವರಣ್ಣ ಧರ್ಮಜನು
ಐವರಿಗೆ ಸಾಮ್ರಾಜ್ಞಿ ವರಸಾಧ್ವಿ ದ್ರೌಪದಿಯು
ಎಡದಲ್ಲಿ ಕುಳಿತಿಹಳು ಲಕುಮಿಯಾ ತೇಜದಲಿ ॥೩೪೯॥

ನಡೆನೋಡು ಇವರಿಹರು ಐವರೂ ಪಾಂಡವರು
ಭಾಗ್ಯದಾ ಲಕ್ಷ್ಮಿಯಿದು ಬಾಗಿಲಿಗೆ ಬಂದಿಹುದು
ಪೂರ್ವದಾಪುಣ್ಯವದು ಫಲವಾಯ್ತು ಇಂದಿನಲಿ
ಎನ್ನುತಲಿ ಉತ್ತರನು ತಂದೆಯನು ಕರವಿಡಿದು ॥೩೫೦॥

ಐತಂದು ನೋಡಿತ ಧರ್ಮಜನು ಪವನಜನು
ಫಲಗುಣನು ಸಹದೇವ ನಕುಲೀ ಪಾಂಡವರು
ಸ್ವರ್ಗದಾ ಸೌಂದರ್ಯ ತೇಜದಲಿ ಮೆರೆಯುತಿಹ
ಶಚಿಯಂತೆ ಮೆರೆಯುತಿಹ ದ್ರೌಪದಿಯು ಇವಳಿಹಳು ॥೩೫೧॥

ಗಜಪುರವು ಎಲ್ಲಿಹುದು ಮತ್ಸ್ಯಪುರ ಎಲ್ಲಿಹುದು
ಇವರೆಂತು ಬಂದಿಹರು ನಮ್ಮಯಾ ತಾಣಂಗೆ
ಇದು ಅತುಳ ಅದ್ಭುತವು ಕೌತುಕವು ಕಾಂಬುವುದು
ಎಮ್ಮಯಾ ಸುಕೃತವಿದು ಎನ್ನುತಲಿ ವಿರಾಟನು ॥೩೫೨॥

ವರುಷೊಂದು ಅಜ್ಞಾತ ವಾಸವನು ಕಳೆಯಲಿಕೆ
ವೇಷದಲಿ ಬಂದಿರುವ ಇವರನ್ನು ಅರಿಯದಲೆ
ಕಷ್ಟಗಳ ಕೊಟ್ಟುದಕೆ ಮನದೊಳಗೆ ಮರುಗುತಲಿ
ಕಡುಮೂರ್ಖನಾನಾದೆ ಎನ್ನುತಲಿ ಭರದಲಿ ॥೩೫೩॥

ಧರ್ಮಜನ ಚರಣದಲಿ ಶಿರವನ್ನು ಇರಿಸುತಲಿ
ಹರ್ಷಾಶ್ರು ಸುರಿಸುತಲಿ ಪಾದಗಳ ತೊಳೆಯುತಲಿ
ಕಾರುಣಿಕ ಕ್ಷಮೆದೋರಿ ಎನ್ನನ್ನು ರಕ್ಷಿಪುದು
ನಿಮ್ಮನ್ನು ಅರಿಯದಲೆ ಕಷ್ಟಗಳ ಕೊಟ್ಟಿಹೆನು ॥೩೫೪॥

ನಿಮ್ಮಯಾ ಹಣೆಯೊಡೆದ ಕಡುಪಾಪಿ ನಾನಿಹೆನು
ದಯೆದೋರಿ ರಕ್ಷಿಪುದು ನಿಮ್ಮಯಾ ದಾಸನಿಹೆ
ಈ ರಾಜ್ಯ ಈ ಕೋಶ ಎಲ್ಲವೂ ನಿಮ್ಮದಿದೆ
ಪಟ್ಟಾಭಿಷೇಕವನು ನಿಮಗೀಗ ಗೈಯ್ಯುವೆವು ॥೩೫೫॥

ಇಂತೊರೆಯೆ ವಿರಾಟನೃಪ ಯಮಸುತನು ಕೇಳುತಲಿ
ಭೂಪತಿಯ ಮುಖವನ್ನು ಮೇಲಕ್ಕೆ ಎತ್ತುತಲಿ
ನಿನ್ನಯಾ ಸವಿರಸದ ಮಧುರೋಕ್ತಿ ವಿಲಾಸದಲಿ
ಎಮ್ಮಯಾ ಅಭಿಷೇಕ ಗೈದಿರುವ ಸಾಲದೇ ॥೩೫೬॥

ನಿಮ್ಮಯಾ ಪ್ರೇಮವೇ ನಮ್ಮಯಾ ಧನಕನಕ
ನೀವಿತ್ತ ಹೃದಯವೇ ಸಿಂಹಾಸನಿರುತಿಹುದು
ನೀವೆಲ್ಲ ನಮ್ಮವರು ಜನವೆಲ್ಲ ನಮ್ಮವರು
ನಮ್ಮದಿದು ಪ್ರೇಮದಾ ಸಾಮ್ರಾಜ್ಯವಿರುತಿಹುದು ॥೩೫೭॥

ಅನಿಲಜನು ಅರ್ಜುನನು ವಿಪಿನದಲಿ ತೊಳಲಿದರು
ರಾಜ್ಯವನು ಕೊಂಡಿರುವ ದುರ್ಯೋಧನಾದಿಗಳ
ಸದೆಬಡೆದು ರಾಜ್ಯವನು ಕೊಂಬುವಾ ಕಾತುರರು
ನಾವಿಹೆವು ಎಂದಿಹನು ಧರ್ಮಜನು ನಸುನಗುತ ॥೩೫೮॥

**ವಿರಾಟನೃಪ ಅಭಿಮನ್ಯು ವೀರಂಗೆ ಸುತೆಯನ್ನು ।**
**ಉತ್ತರೆಯ ನೀಯುತಲಿ ಸಂಭ್ರಮದಿ ನಲಿದಿಹನು ॥**

ನೀವಿಂದು ದೊರೆತಿಹುದು ಎಮ್ಮಯಾ ಭಾಗ್ಯವಿದೆ
ಅರ್ಜುನಗೆ ಎನ್ನಯಾ ಉತ್ತರೆಯನೀಯುವೆನು
ನಮ್ಮೆರಡು ವಂಶಗಳು ಬೆಸುಗೆಯಲಿ ವೃದ್ಧಿಸಲಿ
ಎನ್ನುತಲಿ ವಿರಾಟದೊರೆ ಧರ್ಮಜಗೆ ಎರಗಿದನು ॥೩೫೯॥

ಧರ್ಮಜನು ಹರುಷದಲಿ ಅರ್ಜುನನ ಮೊಗನೋಡೆ
ಮಗಳೆಂದು ಭಾವಿಸುತ ವುತ್ತರೆಗೆ ನಾಟ್ಯವನು
ಕಲಿಸಿಹೆನು ಎನ್ನನ್ನು ಪಿತನೆಂದು ಭಾವಿಪಳು
ಕೊಡಿ ಎನ್ನ ತನಯಂಗೆ ಅಭಿಮನ್ಯುಗೆನ್ನುತಿರೆ ॥೩೬೦॥

ನೀವೇನು ಅವನೇನು ನಮಗೀರ್ವರೊಂದೇ
ಮಂಗಳದ ಕಾರ್ಯವದು ಶೀಘ್ರದಲಿ ನಡೆಸುವುದು
ಎನಿತೆನಿತೊ ಜನ್ಮಗಳ ಪುಣ್ಯದಾ ಫಲವಿಂದು
ಕೈಗೂಡಿ ಬಂದಿಹುದು ಎನ್ನುತಿರೆ ವಿರಾಟನೃಪ ॥೩೬೧॥

ಭೂಪತಿಯೆ ಕೇಳೆಮ್ಮ ಮಾಪನಿಹ ಶ್ರೀಕೃಷ್ಣ
ಅವನೊಪ್ಪುತಿರುತಿರಲು ನಮಗೆಲ್ಲ ಒಪ್ಪಿಗೆಯು
ಎನ್ನುತಿರೆ ಧರ್ಮಜನು ವಿರಾಟದೊರೆ ಹರುಷದಲಿ
ಕರೆಸುವುದು ಯಾದವನ ಶ್ರೀಕೃಷ್ಣರಾಯನನು ॥೩೬೨॥

ಮದುವೆಯದು ನೆಪಮಾತ್ರ ಶ್ರೀಕೃಷ್ಣ ಯಾದವನ
ವದನಾರವಿಂದದಾ ದರುಶನವು ದೊರೆತರೆ
ಪೂರ್ವದಲಿ ಗೈದಿರುವ ಪುಣ್ಯದಾ ತರುವಿಂದು
ಫಲವಿತ್ತುದಾಯ್ತೆಂದು ಭಾವಿಪೆನು ಎನ್ನುತಿರೆ ॥೩೬೩॥

ಯಮಸುತನು ಹರುಷದಲಿ ಓಲೆಯನು ಬರೆಸಿದನು
ಸ್ವಸ್ತಿಯಿದು ಶ್ರೀಕೃಷ್ಣ ಮಾವಂದರಂಘ್ರಿಯಲಿ
ನಿಮ್ಮಳಿಯ ಧರ್ಮಜನ ಸಾಷ್ಟಾಂಗ ನಮನಗಳು
ಓಲೆಯನು ಬರೆಯಲಿಕೆ ಇಂತಿಹುದು ಕಾರಣವು ॥೩೬೪॥

ಕಾನನದಿ ಈರೇಳು ವರ್ಷಗಳ ವನವಾಸ
ನಿಮ್ಮಯಾ ಕರುಣೆಯಲಿ ಕಳೆದಿಹೆವು ಸತ್ಯದಲಿ
ಮಂಗಲದ ವಾರ್ತೆಯಿದು ನಿಮ್ಮಯಾ ಸೋದರಿಯ
ಸುಭದ್ರೆಯಾ ತನಯಂಗೆ ಅಭಿಮನ್ಯು ವೀರಂಗೆ ॥೩೬೫॥

ಮತ್ಸ್ಯದಾ ಭೂಪತಿಯ ವಿರಾಟನಾ ಪುತ್ರಿಯನು
ಉತ್ತರೆಯ ನೀಯುತಲಿ ಮದುವೆಯನು ಮಾಡುವುದು
ಪರಿವಾರ ಸಹಿತದಲಿ ನೀವೆಲ್ಲ ಐತಂದು
ಹರಸುವುದು ಮಂಗಲದ ಮದುವೆಯಾ ಉತ್ಸವದಿ ॥೩೬೬॥

ನಿಮ್ಮನ್ನು ನಂಬಿಹೆವು ನಿಮ್ಮ ಮತವರುಹುವುದು
ನೀವಲ್ಲದೆಮಗಾರು ದಾರಿಯನು ತೋರುವರು
ಮದುವೆ ಇದು ನೆಪಮಾತ್ರ ನಿಮ್ಮಯಾ ಚರಣವನು
ಕಾಂಬುವಾ ತವಕಿಗರು ನಾವಿಹೆವು ನಮಿಸುವೆವು ॥೩೬೭॥

ಎನ್ನುತಲಿ ಮಂಗಲದ ಓಲೆಯನು ಬರೆಸುತಲಿ
ಅರಿಶಿನದಿ ಕುಂಕುಮದಿ ಉಡುಗೊರೆಯ ಸಹಿತದಲಿ
ದೂತರನು ಶ್ರೀ ಕೃಷ್ಣರಾಯನಿಗೆ ಕಳಿಸುತಿರೆ
ದ್ವಾರಕೆಗೆ ಐತಂದು ಕೃಷ್ಣನಿಗೆ ಇತ್ತಿಹರು ॥೩೬೮॥

ಓಲೆಯನು ಓದುತಿರೆ ಯಾದವನು ಸಂತಸದಿ
ಪಾಂಡವರು ಕಾನನದಿ ಎನಿತೆನಿತೊ ಕಷ್ಟಗಳ
ಅನುಭವಿಸಿ ಕಾಲವನು ಕಳೆದಿಹರು ಪಂಥದಲಿ
ನಾವಿಲ್ಲಿ ಸುಖದಲ್ಲ ತೇಲಾಡುತಿರುತಿರಲು ॥೩೬೯॥

ಮೇಲಿರುವ ಪಾಂಡುನೃಪ ಮನದಲ್ಲಿ ನೊಂದಿಹನು
ಕುಂತಿಯಾ ಉದರವದು ಉರಿಯುತಲಿ ನವೆದಿಹುದು
ಪಾಂಡವರ ಏಳಿಗೆಯ ಮಂಗಲಕೆ ನಾಂದಿಯಿದು
ಅಭಿಮನ್ಯು ಪರಿಣಯವು ಎನ್ನುತಲಿ ಧರ್ಮಜಗೆ ॥೩೭೦॥

ಓಲೆಯನು ಬರೆಸುತಲ ತನ್ನ ಮತವರುಹುತಲಿ
ಪರಿವಾರ ಸಹಿತದಲಿ ತಾ ಬರುವೆ ಎನ್ನುತಲಿ
ಚರರನ್ನು ಕಳಿಸುತಿರೆ ಧರ್ಮಜನ ಬಳಿಬರುತ
ಶ್ರೀಕೃಷ್ಣನೋಲೆಯನು ಸಂತಸದಿ ಇತ್ತಿಹರು ॥೩೭೧॥

ಯಮಸುತನು ಓಲೆಯನು ಓದುತಲಿ ಹರುಷದಲಿ
ಹರ್ಷಾಶ್ರು ಸುರಿಸುತಲಿ ಎಮ್ಮಯಾ ಮೇಲಣದಿ
ಮಾಧವನ ಕರುಣೆಯದು ಎಂತಿಹುದೊ ಎನ್ನುತಲಿ
ಮದುವೆಯಾ ಸಿದ್ಧತೆಯ ಭರದಲ್ಲಿ ಗೈದಿಹನು ॥೩೭೨॥

ಅರ್ಜುನನ ತನಯಂಗೆ ವೀರ ಅಭಿಮನ್ಯುವಿಗೆ
ಮತ್ಸ್ಯನೃಪ ಪುತ್ರಿಯನು ಉತ್ತರೆಯ ನೀಯುವಾ
ಮಂಗಲದ ಲಗ್ನದಾ ಕಾರ್ಯಕ್ಕೆ ಪುರಜನವು
ಬಹುದೆಂದು ಡಂಗುರವ ಹೊಯ್ಸಿದನು ಪುರದೊಳಗೆ ॥೩೭೩॥

ಮತ್ಸ್ಯಪುರ ಹೊರಗಡೆಗೆ ಯೋಜನದ ಆಳತೆಯಲಿ
ಸುಂದರ ಉಪಪ್ಲಾವ್ಯ ನಗರವನು ನಿರ್ಮಿಸುತ
ರತ್ನಗಳ ಸ್ತಂಭಗಳೆ ಸ್ವರ್ಣದಾ ಹೊದಿಕೆಗಳ
ಚಿತ್ರದಾ ಕುಸುರಿನಲಿ ಗೋಪುರದ ಸೊಬಗಿನಲಿ ॥೩೭೪॥

ಹೊಳೆಯುತಿಹ ವಜ್ರಗಳ ವೈಡೂರ್ಯ ನೀಲಗಳ
ಮುತ್ತುಗಳ ತೋರಣದ ಕನ್ನಡಿಯ ಸೊಬಗಿನಲಿ
ಸ್ವಾಗತದ ಫಲಕಗಳ ಧ್ವಜಪತಾಕಾವಳಿಯ
ವೈಭವದ ವೈವಾಹ ಮಂಡಪವ ರಚಿಸಿದರು ॥೩೭೫॥

ಧರ್ಮಜನು ಮಾವಂಗೆ ದ್ರುಪದನಿಗೆ ವಿನಯದಲಿ
ಉಡುಗೊರೆಯ ಸಹಿತದಲಿ ಓಲೆಯನು ಕಳಿಸಿದನು
ಆ ಭರತ ವರ್ಷದಾ ರಾಜರಿಗೆ ಋಷಿಗಳಿಗೆ
ಆಮಂತ್ರಣೋಲೆಗಳ ಕಳಿಸಿದನು ಹರುಷದಲಿ ॥೩೭೬॥

ವಸುದೇವ ಸಾತ್ಯಕಿಗೆ ಬಲರಾಮ ಉಗ್ರನೃಪ
ಮೊದಲಾದ ಯಾದವರ ವರ್ಗಕ್ಕೆ ಎಲ್ಲರಿಗೆ
ಮದುವೆಯಾ ಆಮಂತ್ರಣೋಲೆಗಳ ಬರೆಸುತಲಿ
ಉಡುಗೊರೆಯ ಸಹಿತದಲಿ ದೂತರನು ಕಳುಹಿದನು ॥೩೭೭॥

ಪುರಜನರು ಸಾರಣೆಯ ಕಾರಣೆಯ ಗೈಯ್ಯುತಲಿ
ಓರಣದಿ ತೋರಣದಿ ಮನೆಗಳನು ಸಿಂಗರಿಸಿ
ಶ್ರೀ ಕೃಷ್ಣದೇವನೇ ಬಹನೆಂದು ಸಂತಸದಿ
ಸ್ವಾಗತದ ಮಂಡಪವ ರಚಿಸಿದರು ಕೇರಿಯಲಿ ॥೩೭೮॥

ಅರಮನೆಯ ಲಲನೆಯರು ಮಜ್ಜನವ ಗೈಯ್ಯುತಲಿ
ಹೊಳೆಯುತಿಹ ವಸ್ತ್ರಗಳ ಆಭರಣ ಧರಿಸುತಲಿ
ಅರಿಶಿನದಿ ಕುಂಕುಮದಿ ಹೂಮಾಲೆ ಸೊಬಗಿನಲಿ
ಸ್ವರ್ಗದಾ ಚೆಲುವೆಯರ ಪರಿಯಲ್ಲಿ ಹೊರಟಿಹರು ॥೩೭೯॥

ಪಾಂಚಾಲ ಭೂಪತಿಯು ದ್ರುಪದನತಿ ಸಂತಸದಿ
ಅಕ್ಷೋಣಿ ಬಲಸಹಿತ ಧೃಷ್ಟದ್ಯುಮ್ನನೊಡನೆಯೆ
ಬರುತಿರಲು ಧರ್ಮಜನು ದ್ರೌಪದಿಯ ಬಾಂಧವರ
ಸಕಲರನು ಸ್ವಾಗತಿಸಿ ಸತ್ಕಾರ ಗೈದಿಹನು ॥೩೮೦॥

ಕಾಂಭೋಜ ವೈದರ್ಭ ಸೌರಾಷ್ಟ್ರ ಮಾಳವದ
ಕುಂತಳದ ಆ ಚೋಳ ಪಾಂಡ್ಯದಾ ಚೇಳದಾ
ನೃಪರೆಲ್ಲ ಉಡುಗೊರೆಯ ಕಾಣಿಕೆಯ ಸಹಿತದಲಿ
ಬಂದಿಹರು ವೈಭವದಿ ಅಭಿಮನ್ಯು ಪರಿಣಯಕೆ ॥೩೮೧॥

ಕೌಶಿಕನು ಜಮದಗ್ನಿ ಜಾಬಾಲಿ ಗೌತಮನು
ವಸಿಷ್ಠಾದಿ ಋಷಿವರರು ಶಿಷ್ಯರಾ ಸಹಿತದಲಿ
ಶಾಸ್ತ್ರಗಳ ಪರಿಣತರು ಮೀಮಾಂಸ ತಾರ್ಕಿಗರು
ಕವಿವಾಗ್ಮಿ ಗಮಕಿಗಳು ಗಾಯಕರು ಬಂದಿಹರು ॥೩೮೨॥

ಇತ್ತಲಾ ದ್ವಾರಕೆಯ ಪುರದೊಳಗೆ ಶ್ರೀಕೃಷ್ಣ
ತನ್ನಯಾ ಸೋದರಿಯ ತನಯಂಗೆ ಶುಭಮದುವೆ
ಎನ್ನುತಲಿ ಯಾದವರ್ಗೆ ಬಾಂಧವರ್ಗೆ ಪುರಜನಕೆ
ಅರುಹುತಲಿ ಶೀಘ್ರದಲಿ ಹೊರಡುವುದು ಎನ್ನುತಿರೆ ॥೩೮೩॥

ಯಾದವರ ಆನಂದ ಸಾಗರವು ಉಕ್ಕುತಲಿ
ಮುತ್ತುಗಳ ರತ್ನಗಳ ವಜ್ರಗಳ ಹಾರಗಳ
ಅಗಣಿತದ ಸ್ವರ್ಣದಾ ಆಭರಣ ಒಡವೆಗಳ
ಪೀತಾಂಬರಾದಿಗಳ ಭಂಡಿಯಲಿ ಹೇರಿದರು ॥೩೮೪॥

ಅರಮನೆಯ ಲಲನೆಯರು ಮಜ್ಜನವ ಗೈಯ್ಯುತಲಿ
ಹೊಳೆಹೊಳೆವ ವಸ್ತ್ರಗಳ ಸ್ವರ್ಣದಾ ಬಳೆಗಳನು
ವಜ್ರಗಳ ಹಾರಗಳ ಕುಂಕುಮದ ಸೊಬಗಿನಲಿ
ಸ್ವರ್ಗದಾ ಸೌಂದರ್ಯ ತೇಜದಲಿ ನಡೆದಿಹರು ॥೩೮೫॥

ವಸುದೇವ ದೇವಕಿಯು ಸಾತ್ಯಕಿಯು ಉಗ್ರನೃಪ
ಅಕ್ರೂರ ಬಲರಾಮ ಯಾದವರ ಸಹಿತದಲಿ
ಚತುರಂಗ ಬಲಸೈನ್ಯ ಕೊಳ್ಳುತಲಿ ಮುರರಿಪುವು
ಮಂಗಳದ ವಾದ್ಯಗಳು ಮೊಳಗುತಿರೆ ನಡೆದಿಹನು ॥೩೮೬॥

**ಶ್ರೀಕೃಷ್ಣ ಬಂಧುಗಳ ಯಾದವರ ಸಹಿತದಲಿ ।**
**ಐತಂದು ಪಾಂಡವರ ಹರಸಿದನು ಕರುಣೆಯಲಿ ॥**

ಪಯಣದಲಿ ಮಾರ್ಗವನು ಕ್ರಮಿಸುತಲಿ ಸಂತಸದಿ
ಉಪಪ್ಲವದ ನಗರದಾ ಸನಿಹದಲಿ ಬರುತಲಿರೆ
ದೂರದಲಿ ಗರುಡನಾ ಧ್ವಜವನ್ನು ಕಾಣುತಿಹ
ಧರ್ಮಜನು ಸೋದರರ ಸಹಿತದಲಿ ಐತಂದು ॥೩೮೭॥

ಮುರಹರನ ಸ್ವಾಗತಿಸಿ ಸಾಷ್ಟಾಂಗ ಗೈಯ್ಯುತಿರೆ
ವಿರಾಟದೊರೆ ಪಾಂಚಾಲ ಶಿರಬಾಗಿ ನಮಿಸುತಿರೆ
ನೆರೆದಿರ್ದ ಅಖಿಳ ಜನ ಹರುಷದಲಿ ನಲಿಯುತಲಿ
ಪುಷ್ಪದಾ ವೃಷ್ಟಿಯನು ಗೈದಿಹರು ಸಂತಸದಿ ॥೩೮೮॥

ಜಯಜಯತು ಮುರಹರಗೆ ಯಾದವ ಶಿರೋಮಣಿಗೆ
ಜಯಜಯತು ಕಂಸಾರಿ ವಸುದೇವ ಸುತಶೌರಿ
ಪಾಂಡವರು ಮಮಪ್ರಾಣ ಎಂಬುವಾ ಬಿರುದಿನಾ
ದೇವನಿಗೆ ಜಯವೆಂದು ಜಯಘೋಷ ಗೈದಿಹರು ॥೩೮೯॥

ಯಾದವನ ವೈಭವದಿ ಇದಿರ್ಗೊಂಡು ಧರ್ಮಜನು
ಕರೆತರಲು ಇಕ್ಕೆಲದಿ ನಿಂದಿರ್ದ ಜನನಿಕರ
ಕೃಷ್ಣನಿಗೆ ಜಯವೆಂದು ಜಯಕಾರ ಗೈಯ್ಯುತಿರೆ
ಜಯಘೋಷ ಧ್ವನಿಯದುವೆ ಗಗನವನು ಭೇದಿಸಿತು ॥೩೯೦॥

ಕೋಮಲನ ಶಾಮಲನ ಕಮಲಾಯತಾಕ್ಷಕನನ
ಭವದುರಿತ ಪಾಪಗಳ ತರಿಯುವನೆ ಪಾವನದ
ಮಂಗಳದ ಮೂರ್ತಿಯನು ಶ್ರೀಕೃಷ್ಣರಾಯನನು
ನೋಡುತಲಿ ಜನ್ಮವಿದು ಸಾರ್ಥಕವು ಎಂದಿಹರು ॥೩೯೧॥

ಶೃತಿಗಳಿಗೆ ಸ್ಮೃತಿಗಳಿಗೆ ಶಾಸ್ತ್ರಕ್ಕೆ ಸಿಲುಕದಿಹ
ಸಾವಿರದ ವರುಷಗಳ ತಪಸಿಂಗೆ ಕಾಣದಿಹ
ಘನಮಹಿಮ ದೇವನೀ ಕೃಷ್ಣನನು ಕಾಣುತಲಿ
ಜನ್ಮವಿದು ಪಾವನವು ಆಗಿಹುದು ಎಂದಿಹರು ॥೩೯೨॥

ಮನ್ಮಥನ ಹೆತ್ತವಗೆ ರೂಪಕ್ಕೆ ಒಡತನವೆ
ಅಪ್ರತಿಮ ಸೌಂದರ್ಯ ರೂಪದಲಿ ಮೆರೆಯುತಿಹ
ಮುರರಿಪುವ ರೂಪವನು ಕಂಗಳಲಿ ಕುಡಿಕುಡಿದು
ತಣಿಯದೆ ಇರುತಿಹರು ನೆರೆದಿರ್ದ ನಾರಿಯರು ॥೩೯೩॥

ಯಾದವನ ನೊಸಲಿಂಗೆ ಕುಂಕುಮವ ಹಚ್ಚುತಲಿ
ಸೇಸೆಯನು ಪುಷ್ಪಗಳ ಎರಚುತಲಿ ವನಿತೆಯರು
ಸವಿ ಮಧುರ ಸುಸ್ವರದ ಕಂಠದಲಿ ಹಾಡುತಲಿ
ಬಂಗಾರದಾರತಿಯ ಬೆಳಗಿದರು ಕೃಷ್ಣನಿಗೆ ॥೩೯೪॥

ಬರುತಿರಲು ಅಸುರಾರಿ ಅಂಬಾರಿ ಇಳಿಯುತಲಿ
ಯಮಸುತನು ಸೋದರರ ಸಹಿತದಲಿ ಸಂತಸದಿ
ಶ್ರೀಕೃಷ್ಣ ಚರಣಾರವಿಂದದಲಿ ಶಿರವಿರಿಸಿ
ಸಾಷ್ಟಾಂಗ ಗೈದಿಹರು ಹರುಷವದು ಉಕ್ಕುತಿರೆ ॥೩೯೫॥

ಎನ್ನಯಾ ಪ್ರಾಣಗಳ ಏಳುವುದು ಎನ್ನುತಲಿ
ಧರ್ಮಜನ ಅನಿಲಜನ ಅರ್ಜುನನ ಯಮಳರನು
ತೆಗೆಯುತಲಿ ಅಪ್ಪಿದನು ದೃಢದಿಂದ ಹರುಷದಲಿ
ಧನ್ಯನೀ ಪಾಂಡವರು ಎಂದಿಹುದು ಜನಸ್ತೋಮ ॥೩೯೬॥

ಬಳಿಕಲಾ ಪಾಂಡವರ ವರಸಾಧ್ವಿ ದ್ರೌಪದಿಯು
ಎಳಗರವು ತಾಯಿಯನು ಕಾಣುತಲಿ ಧಾವಿಸುತ
ಪರಿಯಲ್ಲಿ ಧಾವಿಸುತ ಕೃಷ್ಣನಾ ಚರಣದಲಿ
ಶಿರವಿಟ್ಟು ನಮಿಸುತಲಿ ದೃಗುಜಲವ ಮಿಡಿದಿಹಳು ॥೩೯೭॥

ಸಭೆಯಲ್ಲಿ ಮಾನವನು ಕಾಯ್ದಿರುವ ಪಾದವಿದು
ಅಕ್ಷಯದ ಅನ್ನವನು ಇತ್ತಿರುವ ಪಾದವಿದು
ಕಾನನದಿ ಕಷ್ಟಗಳ ಕಳೆದಿರುವ ಪಾದವಿದು
ಎನ್ನುತಲಿ ದೃಗುಜಲದಿ ಪಾದಗಳ ತೊಳೆದಿಹಳು ॥೯೯೮॥

ದ್ರೌಪದಿಯ ನುಡಿಗೆಳ್ದು ನವೆಯುತಲಿ ಕೃಷ್ಣನಾ
ಹೃದಯವದು ಕರಗುತಲಿ ನೀಠಾಗಿ ನುಡಿದಿಹನು
ಏಳೆನ್ನ ತಂಗಿಯೇ ಕೃಷ್ಣಗಳ ಭೋಗಿಸಲು
ಜಗದೊಳಗೆ ನೀಹುಟ್ಟಿಬಂದಂತೆ ಆಗಿಹುದು ॥೯೯೯॥

ನೀನವೆಯೆ ನಮಗೆಂತು ಸುಖವಿಹುದು ಸೋದರಿಯೆ
ಎನ್ನ ಒಡ ಹುಟ್ಟಿರುವ ಆ ತಂಗಿ ಸುಭದ್ರೆಗೆ
ತೂಕೊಂದು ಮಿಗಿಲಾಗಿ ನಿನ್ನನ್ನು ಪ್ರೀತಿಸುವೆ
ಎನ್ನುತಲಿ ದ್ರೌಪದಿಯ ಸಾಂತ್ವನವ ಗೈದಿಹನು ॥೧೦೦೦॥

ಸುಭದ್ರೆಯಾ ದೇವಿ ಧರ್ಮಜನೆ ಮೊದಲಾದ
ಭಾವಂದಿರೆಲ್ಲರಿಗೆ ನಮಿಸುತಲಿ ನಿಜಪತಿಗೆ
ಅರ್ಜುನಗೆ ನಮಿಸುತಿರೆ ಸುಕುಮಾರ ಅಭಿಮನ್ಯು
ದೊಡಪ್ಪ ಚಿಕ್ಕಪ್ಪ"ಎಲ್ಲರನು ಅಪ್ಪಿದನು ॥೧೦೦೧॥

ಧರ್ಮಜನು ವಸುದೇವನಂಘ್ರಿಗಳಿಗೆರಗುತಿರೆ
ವಸುದೇವ ನುಡಿದಿಹನು ಧರ್ಮಜಗೆ ನಸುನಗುತ
ತಂದೆಯನು ತಾಯಿಯನು ಹೆಂಡತಿಯು ಮಕ್ಕಳನು
ಲೆಕ್ಕಿಸದೆ ನಿಮ್ಮನ್ನು ಈ ಕೃಷ್ಣ ನೆನೆಯುತಿಹ ॥೧೦೦೨॥

ತನ್ನನ್ನು ನಂಬಿರುವ ಭಕುತರನು ಸಲುಹುವಾ
ಬಿರುದನ್ನು ಹೊತ್ತಿರುವ ಈ ಕೃಷ್ಣರಾಯನಿಗೆ
ಭಕ್ತರೇ ಬಾಂಧವರು ಭಕ್ತರೇ ಪ್ರಿಯರಿಹರು
ಎಮ್ಮನ್ನು ನೆನಸದಿಹ ಎನ್ನುತಲಿ ನುಡಿದಿಹನು ॥೧೦೦೩॥

ಧರ್ಮಜನು ಸಕಲರನು ನಿಲಯದಲಿ ಕರೆದೊಯ್ದು
ರತ್ನಗಳ ಪೀಠಗಳನೀಯುತಲಿ ಕೂಡ್ರಿಸುತ
ಮುತ್ತುಗಳ ವಜ್ರಗಳ ಒಡವೆಗಳ ವಸ್ತ್ರಗಳ
ಫಲಗಳನು ಈಯುತಲಿ ಸತ್ಕಾರಗೈದಿಹನು ॥೧೦೦೪॥

ದ್ರೌಪದಿಯು ರುಕ್ಮಿಣಿಗೆ ಮೊದಲಾದ ಕೃಷ್ಣನಾ
ಹದಿನಾರು ಸಾವಿರದ ಸತಿಯರ್ಗೆ ಲಲನೆಯರ್ಗೆ
ಬಂಗಾರದಾಭರಣ ಪೀತಾಂಬರಾದಿಗಳ
ಅರಿಶಿನದಿ ಕಂಕುಮದಿ ಉಡುಗೊರೆಯ ನಿತ್ತಿಹಳು ॥೧೦೦೫॥

ಫಲಗುಣನು ಯುದ್ಧವನು ಗೈಯ್ಯುತಲಿ ಜಯಿಸುತಲಿ
ಗೋವುಗಳ ಮರಳಿಸಲು ಹರುಷದಲಿ ವಿರಾಟದೊರೆ
ತನ್ನಯಾ ಕುವರಿಯನು ಚೆಲುವೆಯಾ ಉತ್ತರೆಯ
ಅಭಿಮನ್ಯುಗೀಯಲಿಕೆ ಕಾತರವ ಪಡತಿಹನು ॥೧೦೦೭॥

ನಿಮ್ಮಯಾ ಮತವರುಹಿ ಮಾರ್ಗವನು ತೋರುವುದು
ಎನ್ನುತಿರೆ ವಿನಯದಲಿ ಶ್ರೀಕೃಷ್ಣ ನಸುನಗುತ
ಸುಮ್ಮನೇ ನೀವೆಮ್ಮ ದೇವನೆಂದೆನ್ನುವಿರಿ
ದೇವತನ ಲವಲೇಶ ನಮ್ಮಲ್ಲಿ ಎನಿತಿಲ್ಲ ॥೧೦೦೮॥

ರಕುತವನು ಸುರಿಸುತಲಿ ಯುದ್ಧವನು ಗೈಯ್ಯುತಲಿ
ಕಲಿಪಾರ್ಥ ಗೆದ್ದಿಹನು ನಾವೇನು ಮಾಡಿಲ್ಲ
ಮಗಳನ್ನು ಕೊಡುವುದಕೆ ವಿರಾಟನೃಪನೊಪ್ಪಿರಲು
ಕೊಳ್ಳಲಿಕೆ ಸಂತಸದಿ ನೀಒಪ್ಪುತಿರುತಿರಲು ॥೧೦೦೯॥

ನಮ್ಮಯಾ ಮತವೆಂತು ಬಯುಸುವೆಯ ಗಹನಮಿದು
ಮದುವೆಯಾ ಸಂಭ್ರಮವು ಮೃಷ್ಟಾನ್ನ ಭೋಜನವು
ನಮಗಿರಲು ಸಂತಸವು ತುಷ್ಟರಾವೆಂದು
ನಗೆಸೂಸಿ ಶ್ರೀಕೃಷ್ಣ ನುಡಿಯುತಿರೆ ಧರ್ಮಜನು ॥೧೦೧೦॥

ಸುಮ್ಮನೇ ಏತಕ್ಕೆ ಸುಳ್ಳನ್ನು ನುಡಿಯುವಿರಿ
ನಿಮ್ಮಯಾ ಮಹಿಮೆನು ನಾವೆಂತು ಬಣ್ಣಿಪೆವು
ನಾವೆಲ್ಲ ಬೊಂಬೆಗಳು ನಮ್ಮನ್ನು ಆಡಿಸುವ
ವಿಶ್ವದಾ ನಾಟಕದ ಆ ಸೂತ್ರಧಾರನಿವೆ ॥೧೦೧೧॥

ಜಗದೊಳಿಪ ಅಣುರೇಣು ತೃಣಕಾಷ್ಠ ಸರ್ವದಲಿ
ವ್ಯಾಪಿಸುತ ಕಾರ್ಯಗಳ ಮಾಡಿಸುತಲಿರುತಿರುವೆ
ನೀನಿಲ್ಲದಿರುತಿರಲು ತೃಣವೊಂದು ಚಲಿಸದದು
ಎನ್ನುತಲಿ ಧರ್ಮಜನು ನುಡಿಯುತಿರೆ ಶಿರಬಾಗಿ ॥೧೦೧೨॥

ಶ್ರೀಕೃಷ್ಣ ಧರ್ಮಜನ ಹರಸುತಲಿ ಅಭಯದಲಿ
ಪಸುಗಳಾ ವಂಶದಾ ವಿರಾಟನೃಪ ಕುಲದೊಡನೆ
ಶ್ರೇಷ್ಠಮಿಹ ನಿಮ್ಮಯಾ ಚಂದ್ರಮನ ವಂಶದಾ
ಬೆಸುಗೆಯಿದು ಮಂಗಲವು ಶುಭಕರವು ಪುಣ್ಯಮಿದು ॥೧೦೧೩॥

ಜೋಯಿಸಸ ಕರೆಸುವುದು ಸುಮುಹೂರ್ತ ತೆಗೆಸುವುದು
ಮಂಗಲದ ಕಾರ್ಯವನು ಗೈಯ್ಯುವುದು ಎನ್ನುತಿರೆ
ಧರ್ಮಜನು ಜೋಯಿಸರ ಕರೆಸುತಲಿ ಹರುಷದಲಿ
ತಾರೆ ಗ್ರಹ ಶುಭವಿರುವ ಸಮುಹೂರ್ತ ನಿಶ್ಚಯಿಸೆ ॥೧೦೧೪॥

ಮದುವೆಯಾ ಸಿದ್ಧತೆಯು ಭರದಿಂದ ಸಾಗಿಹುದು
ಮಂಗಳದ ವಾದ್ಯಗಳು ದೆಸೆತುಂಬಿ ಮೊಳಗಿಹವು
ದೇಶಗಳ ನೃಪತಿಗಳು ಅರಸಿಯರು ಲಲನೆಯರು
ಶೃಂಗಾರದಾಭರಣ ಭೂಷಣದಿ ಮೆರೆದಿಹರು ॥೪೧೫॥

ಧರ್ಮಜನು ಮಾಧವಗೆ ಶಿರಬಾಗಿ ನಮಿಸುತಲಿ
ನಿಮ್ಮಯಾ ಕರುಣೆಯಲಿ ವನವಾಸ ಕಳೆಯುತಿರೆ
ಕೌರವನು ಎಮ್ಮನ್ನು ಕುಹಕದಲಿ ಅರಿಯಲಿಕೆ
ವಿರಾಟನಾ ಗೋವುಗಳ ಅಪಹರಣ ಗೈಯ್ಯುತಿರೆ ॥೪೧೬॥

ಮಂಗಳದ ಮಜ್ಜನವ ಗೈಯ್ಯುತಲಿ ಉತ್ತರೆಯು
ಥಳಥಳಿಪ ಸೀರೆಯನು ಜರದಂಚ ರವಿಕೆಯನು
ಧರಿಸುತಲಿ ನೊಸಲಿನಲಿ ಕುಂಕುಮವನಿರಿಸುತಲಿ
ವಜ್ರಗಳ ಹಾರಗಳ ಕೊರಳೊಳಗೆ ಧರಿಸುತಲಿ ॥೪೧೭॥

ಮಿಂಚುತಿಹ ಝುಲ್ಲರಿಯ ಕಿವಿಯೊಳಗೆ ಎರಡರಲಿ
ರತ್ನದಾ ಮೂಗುತಿಯ ಮೂಗಿನಲಿ ಇರಿಸುತಲಿ
ಸ್ವರ್ಣದಾ ಬಳೆಗಳನು ಕೈತುಂಬ ಧರಿಸುತಲಿ
ಐದುಗಳ ಬೆರಳಿನಲಿ ಉಂಗುರಗಳೆಸೆಯುತಿರೆ ॥೪೧೮॥

ಹೊಚ್ಚಹೊಸ ಯೌವ್ವನದ ತೇಜದಲಿ ತೊಳಗುತಲಿ
ಮನ್ಮಥನ ಹರಿತದಾ ಖಡ್ಗಮಿದು ಎಂಬಂತೆ
ಅಪ್ರತಿಮ ಸ್ವರ್ಗದಾ ಸೌಂದರ್ಯ ತೇಜದಲಿ
ಸುರವಧುವ ಸೊಬಗಿನಲಿ ಶೋಭಿಸುವ ಉತ್ತರೆಯ ॥೪೧೯॥

ಕರಪಿಡಿದು ವಿರಾಟನೃಪ ಮೆಲ್ಲಡಿಯನಿಡಿಸುತಲಿ
ವೈವಾಹ ಮಂಡಪದ ಮಧ್ಯದಲಿ ಕರೆತರಲು
ಸಭೆಯಲ್ಲಿ ನೆರೆದಿರ್ದ ಸಕಲ ಜನ ಬೆರಗಾಗಿ
ಅಭಿಮನ್ಯುಗೀವಧುವು ಅತಿಯೋಗ್ಯವೆಂದಿಹರು ॥೪೨೦॥

ಅಭಿಮನ್ಯು ವೀರನಾ ಎಡದಲ್ಲಿ ಸನಿಹದಲಿ
ಉತ್ತರೆಯು ನಸುನಾಚಿ ಶಿರಬಾಗಿ ನಿಲ್ಲುತಿರೆ
ರೋಹಿಣೀ ಚಂದ್ರಮರ ಜೋಡಿನಾ ಪರಿಯಲ್ಲಿ
ಈರ್ವರೂ ಎಸೆದಿಹರು ಕಣ್ಮನವ ತಣಿಸುತಲಿ ॥೪೨೦॥

ಗಳಿಗೆಯಾ ಬಟ್ಟಲವು ತುಂಬುತಿರೆ ವೈದಿಕರು
ಮಂಗಳದ ಅಷ್ಟಕವ ಮಂತ್ರಗಳ ಪಠಿಸುತಿರೆ
ವಾದ್ಯಗಳ ಸುಸ್ವರವು ದಶದಿಶೆಯ ತುಂಬುತಿರೆ
ಮಂಗಳದ ಅಕ್ಷತೆಯು ವಧುವರರಿಗೆರಚಿದರು ॥೪೨೧॥

ವಸುದೇವ ಶ್ರೀಕೃಷ್ಣ ಬಲರಾಮ ಉಗ್ರನೃಪ
ಸಾತ್ಯಕಿಯು ಅಕ್ರೂರ ಯಾದವರು ಪಾಂಡವರು
ದೇವಕಿಯು ರುಕ್ಮಿಣಿಯು ದ್ರೌಪದಿ ಸುಭದ್ರೆಯು
ನೆರೆದಿರ್ದ ನೃಪರುಗಳು ಅಕ್ಷತೆಯ ಸುರಿಸಿದರು ॥೪೨೨॥

ವನಿತೆಯರು ಸುಸ್ವರದಿ ಗೀತಗಳ ಹಾಡುತಲಿ
ಸ್ವರ್ಣದಾ ಆರತಿಯನೆತ್ತುತಲಿ ಬೆಳಗುತಲಿ
ಮಂಗಳದ ಸೇಸೆಯನು ಎರಚುತಲಿ ಹರುಷದಲಿ
ವಧುವರರ ಹರಸಿದರು ಮಂಗಲವು ಶುಭವೆಂದು ॥೪೨೩॥

ಬಳಿಕಖಿಳ ಬಾಂಧವರು ಯಾದವರು ನೃಪರುಗಳು
ಧನಕನಕ ವಜ್ರಗಳ ಪೀತಾಂಬರಾದಿಗಳ
ಮಾಣಿಕ್ಯ ರತ್ನಗಳ ಸ್ವರ್ಣದಾಭರಣಗಳ
ಅಗಣಿತದ ಉಡುಗೊರೆಯ ನೀಯುತಲಿ ಹರಸಿದರು ॥೪೨೪॥

ಚಂದ್ರಕುಲದೇಳಿಗೆಗೆ ಈ ಮದುವೆ ನಾಂದಿಯುದು
ಪಾಂಡವರ ವಂಶಲತೆ ಬೆಳವಿಗೆಗೆ ಪ್ರಾರಂಭ
ಎನ್ನವರ ಉನ್ನತಿಕೆ ಮೊದಲಿನಾ ಅಭ್ಯುದಯ
ಎನ್ನುತಲಿ ಶ್ರೀಕೃಷ್ಣ ವಧುವರರ ಹರಸಿದನು ॥೪೨೫॥

ಲಾಜಾದಿ ಹೋಮಗಳ ಮಂಗಳದ ಕಾರ್ಯದಲಿ
ಅಭಿಮನ್ಯು ಉತ್ತರೆಯ ಕರಗಳಾ ಬೆಸುಗೆಯಲಿ
ಅಗ್ನಿಯಾ ಸುತ್ತಲೂ ಸಪ್ತಪದಿ ನಡೆಯುತಿರೆ
ವಸುದೇವ ದೇವಕಿಯು ಹರಸಿದರು ಹರುಷದಲಿ ॥೪೨೬॥

ಮಂಡಿಗೆಯ ಘಾರಿಗೆಯ ವಿಧವಿಧದ ಷಡ್ರಸದ
ಪಕ್ವಾನ್ನದೂಟಗಳ ಸವಿಸವಿದು ತೇಗುತಲಿ
ಈ ಪರಿಯ ಸಂತಸದ ಮದುವೆಯನು ಮುನ್ನಿನಲಿ
ನಾವೆಂದು ಕಂಡಿಲ್ಲವೆಂದಿಹರು ನಿಖಿಳಜನ ॥೪೨೭॥

ಎನಿತೆನಿತು ಧನ್ಯರೀ ಪಾಂಡವರು ಮಹಿಮರು
ಶ್ರೀಕೃಷ್ಣನೊಲುಮೆಯಾ ಕವಚವದು ಇರುತಿರಲು
ಪಾಂಡವರ ಕೂದಲೆಳೆ ಕೊಂಕದದು ಮಿಸುಕದದು
ಕುಹಕನಾ ಕೌರವನು ದ್ವೇಷಿಸುತ ಕೆಟ್ಟಿಹನು ॥೪೨೮॥

ಸತ್ಯದಲಿ ಧರ್ಮದಲಿ ನಡೆಯುತಲಿ ಪಾಂಡವರು
ವನವಾಸ ಕಷ್ಟವನು ಕಳೆಯುತಲಿ ಮೆರೆದಿಹರು
ಪಾಂಡವರ್ಗೆ ಮಂಗಲವು ಶುಭವಾಗಲೆನ್ನುತಲಿ
ನೆರೆದಿರ್ದ ಸಕಲಜನ ಹರಸಿದರು ಹರುಷದಲಿ ॥೪೨೯॥

ಮತ್ಸ್ಯನೃಪ ಆಳಿಯಂಗೆ ಅಭಿಮನ್ಯು ವೀರಂಗೆ
ಅಗಣಿತದ ಧನಕನಕ ರತ್ನಗಳ ವಜ್ರಗಳ
ಗಜತುರಗ ರಥಗಳನು ಅಸ್ತ್ರಗಳ ಶಸ್ತ್ರಗಳ
ವಿಪುಳದಲಿ ಉಡುಗೊರೆಯ ನಿತ್ತಿಹನು ವೈಭವದಿ ||೪೩೦||

ಧರ್ಮಜನು ಗೋವುಗಳ ಧನ ಕನಕ ವಸ್ತ್ರಗಳ
ರತ್ನಗಳ ದಾನಗಳ ವಿಪ್ರರಿಗೆ ಇತ್ತಿಹನು
ನೆರೆದಿರ್ದ ನೃಪರಿಂಗೆ ಮುತ್ತುಗಳ ರತ್ನಗಳ
ಉಡುಗೊರೆಯ ನೀಯುತಲಿ ಸನ್ಮಾನ ಗೈದಿಹನು ||೪೩೧||

ಅಭಿಮನ್ಯು ಉತ್ತರೆಯ ಉರುಟಣೆಯು ಒಗಟಗಳ
ಮಧುರೋಕ್ತಿ ವಿಲಾಸದಲಿ ಸಂಗೀತ ನೃತ್ಯದಲಿ
ಅರಸಿಯರು ಬಂಧುಗಳು ಬಾಂಧವರು ಸಕಲರೂ
ಹರುಷದಲಿ ವೈವಾಹದುತ್ಸವದಿ ನಲಿದಿಹರು ||೪೩೨||

ಮರುದಿವಸ ದ್ರೌಪದಿಯು ರುಕ್ಮಿಣಿಯು ಭಾಮೆಯರು
ವಿರಾಟನಾ ರಾಣಿಯರ ನಾರಿಯರ ಜೊತೆಯಲ್ಲಿ
ಶ್ರೀಕೃಷ್ಣ ಪಾಂಡವರು ಪಾಂಚಾಲ ಯಾದವರು
ವಿರಾಟನಾ ಜೊತೆಯಲ್ಲಿ ಓಕುಳಿಯನಾಡಿದರು ||೪೩೩||

ಬಳಿಕಲಾ ಧರ್ಮಜನು ಮುರಹರನ ಚರಣಕ್ಕೆ
ಸಾಷ್ಟಾಂಗವೆರಗುತಲಿ ನಿಮ್ಮಯಾ ಕರುಣೆಯಲಿ
ಕಾನನದ ವಿಧವಿಧದ ಕಷ್ಟಗಳು ತೊಲಗುತಲಿ
ಇಂದಿನಲಿ ಮಂಗಲವು ಲಭಿಸಿದುದು ಎಂದಿಹನು ||೪೩೪||

ಹೇಕೃಷ್ಣ ಕೇಶವನೆ ಮಾಧವ ಜನಾರ್ದನನೆ
ಗೋವಿಂದ ಅಚ್ಯುತನೆ ಯಾದವ ಶಿರೋಮಣಿಯೆ
ಹೇ ವೀರ ನರಯಣನೆ ನಿನ್ನನ್ನು ನಂಬಿಹೆವು
ಅನವರತ ಎಮ್ಮನ್ನು ರಕ್ಷಿಪುದು ಎಂದಿಹನು ||೪೩೫||

**ಇತಿ ಶ್ರೀ ಕೋಶಿಕುಲ ಸಂಭೂತ ವಿರುಪಾಕ್ಷಸುತ**
**ಕವಿವರ ಲಕ್ಷ್ಮಣ ಕುಮಾರವ್ಯಾಸ ಕುಮಾರ ವಿರಚಿತಮಪ್ಪ**
**ಶ್ರೀಕೃಷ್ಣ ಕರುಣಾಮೃತ ಪಾನಪುಷ್ಟ ಲಲಿತಪದ ವಿನ್ಯಾಸ ವಿಲಾಸ ವಿಸ್ತರದ**
**ಸರಸ ಚೌಪದಿ ನಿಕಾಯಮಪ್ಪ ಶ್ರೀ ಮನ್ಮಹಾಭಾರತ ಕಾವ್ಯದೊಳ್**
**ವಿರಾಟಪರ್ವ ಸಮಾಪ್ತವಾದುದು**

● ●

## ಇದೇ ಲೇಖಕರು ರಚಿಸಿರುವ ಇತರ ಗ್ರಂಥಗಳು

| ನಂ | ಹೆಸರು | ಬೆಲೆ |
|---|---|---|
| ೧) | ಕಾವ್ಯ ರಾಮಾಯಣ ಭಾಗ-೧ (ಬಾಲಕಾಂಡ, ಅಯೋಧ್ಯಾಕಾಂಡ) | ರೂ. ೫-೦೦ |
| ೨) | ಕಾವ್ಯ ರಾಮಾಯಣ ಭಾಗ-೨ (ಅರಣ್ಯಕಾಂಡ, ಕಿಷ್ಕಿಂಧಾಕಾಂಡ) | ರೂ. ೨೫-೦೦ |
| ೩) | ಕಾವ್ಯ ರಾಮಾಯಣ ಭಾಗ-೩ (ಸುಂದರಕಾಂಡ, ಯುದ್ಧಕಾಂಡ) | ರೂ. ೩೫-೦೦ |
| ೪) | ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿ. ಭಜಗೋವಿಂದಂ ಸ್ತೋತ್ರಗಳ ಕನ್ನಡ ಪದ್ಯಾನುವಾದ | ರೂ. ೫-೦೦ |
| ೫) | ಶ್ರೀ ಶಂಕರಾಚಾರ್ಯ ವಿರಚಿತ 'ಆನಂದಲಹರಿ' ಮತ್ತು ಇತರ ಸ್ತೋತ್ರಗಳ ಕನ್ನಡ ಪದ್ಯಾನುವಾದ | ರೂ. ೫-೦೦ |
| ೬) | ಅಷ್ಟೋಪನಿಷತ್ತುಗಳು (ಈಶ, ಕೇನ, ಕಠ, ಪ್ರಶ್ನ, ಐತರೇಯ, ಮುಂಡಕ, ಮಾಂಡುಕ್ಯ ಮತ್ತು ಶ್ವೇತಾಶ್ವತರೋಪನಿಷತ್ತುಗಳ ಕನ್ನಡ ಪದ್ಯಾನುವಾದ | ರೂ. ೨೦-೦೦ |
| ೭) | ಶ್ರೀ ಮಹಾಭಾರತ ಕಾವ್ಯ (ಮೊದಲನೆಯ ಸಂಪುಟ) (ಆದಿಪರ್ವ ಮತ್ತು ಸಭಾಪರ್ವ) | ರೂ. ೮೦-೦೦ |

(ಅಂಚೆವೆಚ್ಚ ಪ್ರತ್ಯೇಕ)

## ಅಪ್ರಕಟಿತ ಗ್ರಂಥಗಳು

೧) ಶ್ರೀಮನ್ಮಹಾಭಾರತ ಕಾವ್ಯ (ಸಂಪುಟ-೩)
(ಉದ್ಯೋಗಪರ್ವ ಮತ್ತು ಭೀಷ್ಮಪರ್ವ
ಭಗವದ್ಗೀತೆಯ ಕನ್ನಡ ಪದ್ಯಾನುವಾದ ಸಹಿತ )

ಮೇಲಿನ ಪುಸ್ತಕಗಳು ದೊರೆಯುವ ವಿಳಾಸ

ಲಕ್ಷ್ಮಣ ವಿರೂಪಾಕ್ಷ ಜೋಶಿ
ಶ್ರೀರಾಮ ಪ್ರಕಾಶನ,
ಜೋಶಿ ಕಂಪೌಂಡ, ಮಾಳಮಡ್ಡಿ,
ಧಾರವಾಡ-೫೮೦೦೦೭

# ರಚನಕಾರರನ್ನು ಕುರಿತು



**ಶ್ರೀ ಲಕ್ಷ್ಮಣ ವಿರೂಪಾಕ್ಷ ಜೋಶಿ,** ಇವರು ಹುಬ್ಬಳ್ಳಿಯಲ್ಲಿ ಜನಿಸಿದವರು. ಕನ್ನಡ ಮತ್ತು ಸಂಸ್ಕೃತವನ್ನು ಬಲ್ಲವರು. ಬಾಲ್ಯದಿಂದಲೂ ಸಾಹಿತ್ಯದಲ್ಲಿ ಅಭಿರುಚಿಯುಳ್ಳವರು. ವಿಶೇಷವಾಗಿ ಹಳಗನ್ನಡ ಕಾವ್ಯಗಳಲ್ಲಿ ಆಸಕ್ತಿಯುಳ್ಳವರು. ಇವರು 'ಕಾವ್ಯ-ರಾಮಾಯಣ' ಎಂಬ ೬೨೦೦ ಪದ್ಯಗಳ ಮಹಾಕಾವ್ಯವನ್ನು ಬರೆದು ೩ ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಮೊದಲನೆಯ ಭಾಗಕ್ಕೆ ಹಿರಿಯ ಕವಿಗಳಾದ ಶ್ರೀ ಪು. ತಿ. ನರಸಿಂಹಾಚಾರರು ಮತ್ತು ಎರಡನೆಯ, ಮೂರನೆಯ ಭಾಗಗಳಿಗೆ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಎನ್ಕೆ ಕುಲಕರ್ಣಿಯವರು ಮುನ್ನುಡಿಗಳನ್ನು ಬರೆದು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಹಿರಿಯ ಸಾಹಿತಿಗಳಾದ ಡಾ॥ ವಿ. ಕೃ. ಗೋಕಾಕ, ಡಾ॥ ಮುಗಳಿ, ಪ್ರೊ. ಚನ್ನವೀರ ಕಣವಿ, ಪ್ರೊ. ಕೆ.ಎಸ್. ನಾರಾಯಣಾಚಾರ್ ಮೊದಲಾದ ವಿದ್ವಾಂಸರಿಂದ ಪ್ರಶಂಸಿಸಲ್ಪಟ್ಟಿದೆ. ಇವರು ೮ ಉಪನಿಷತ್ತುಗಳನ್ನು ಎಂದರೆ, ಈಶ, ಕೇನ, ಕಠ, ಪ್ರಶ್ನ, ಐತರೇಯ, ಮುಂಡಕ, ಮಾಂಡೂಕ್ಯ ಮತ್ತು ಶ್ವೇತಾಶ್ವತರೋಪನಿಷತ್ತುಗಳನ್ನು ಕನ್ನಡದಲ್ಲಿ, ಪದ್ಯರೂಪದಲ್ಲಿ ಅನುವಾದ ಮಾಡಿದ್ದಾರೆ. ಶ್ರೀ ಮದ್ಭಗವದ್ಗೀತೆಯನ್ನು ಸಹ, ಸಮಗ್ರವಾಗಿ ಕನ್ನಡದಲ್ಲಿ ಪದ್ಯರೂಪದಲ್ಲಿ ಅನುವಾದ ಮಾಡಿದ್ದಾರೆ.

ಈಗ ಇವರು 'ಶ್ರೀಮನ್ಮಹಾಭಾರತ ಕಾವ್ಯವನ್ನು' ಬರೆಯುತ್ತಿದ್ದಾರೆ. ಇದರ ಮೊದಲನೆಯ ಭಾಗವಾದ ಆದಿಪರ್ವ ಮತ್ತು ಸಭಾಪರ್ವವನ್ನು ಈಗಾಗಲೇ ಪ್ರಕಟಿಸಿದ್ದಾರೆ. ಶ್ರೀ ಎನ್ಕೆಯವರು ಮುನ್ನುಡಿಯನ್ನು ಬರೆದಿದ್ದಾರೆ. ಖ್ಯಾತ ವಿಮರ್ಶಕರಾದ ಪ್ರೊ. ಜಿ. ಡಿ. ನಾಡಕರ್ಣಿ ಮತ್ತು ಪ್ರೊ. ಟಿ.ಮಹಾಬಲೇಶ್ವರ ಭಟ್ಟ ಮೊದಲಾದವರು, ಇವರು ವಿಮರ್ಶೆಗಳನ್ನು ಬರೆದು ಪ್ರಶಂಸಿಸಿ-ದ್ದಾರೆ. ಪಂಡಿತರಿಗೂ, ಜನಸಾಮಾನ್ಯರಿಗೂ, ಅರ್ಥವಾಗುವಂತೆ ಬಹುಸರಳವಾದ, ಲಲಿತವಾದ, ಚಿತ್ತಾಕರ್ಷಕವಾದ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಇದಕ್ಕೂ ಸಹ ಶ್ರೀ ಎನ್ಕೆ ಕುಲಕರ್ಣಿಯವರು· ಖ್ಯಾತಸಾಹಿತಿಗಳು ಮುನ್ನುಡಿಯನ್ನು ಬರೆದು ಹೊಗಳಿದ್ದಾರೆ. ಇದು ಪಂಪ,ರನ್ನ, ಕುಮಾರವ್ಯಾಸ, ಮೊದಲಾದ ಮಹಾಕವಿಗಳು ಸೇವೆಯನ್ನು ಸಲ್ಲಿಸಿದ, ಘನಪರಂಪರೆಯ ಕನ್ನಡ ಕಾವ್ಯ ಪ್ರಪಂಚಕ್ಕೆ ಈ ಶತಮಾನದ ಮಹಾಕೊಡುಗೆಯಾಗಿದೆ 'ಎಂದು ಹೇಳಬಹುದು. ಶ್ರೀಮನ್ಮಹಾಭಾರತ ಕಾವ್ಯದ ಮೊದಲನೆಯ ಭಾಗಕ್ಕೆ ಧಾರವಾಡದ ಕೆ. ಓ. ಈ. ಎಸ್. ಕಾಲೇಜಿನ ಮಹಾಲಕ್ಷ್ಮಿ ಮಂದಿರದ ೧೯೯೮ರ ಸಾಹಿತ್ಯ ಪ್ರಶಸ್ತಿಯ ಪ್ರಥಮ ಪುರಸ್ಕಾರ ಲಭಿಸಿದೆ. ಕನ್ನಡದ ಮಹಾಜನರು, 'ಕಾವ್ಯ ರಾಮಾಯಣವನ್ನು' ಓದಿ ಆನಂದಿಸಿದಂತೆ, ಈ ಶ್ರೇಷ್ಠ ಶ್ರೀಮನ್ಮಹಾಭಾರತ ಕಾವ್ಯವನ್ನು ಓದಿ, ದೈವಿಕ ಆನಂದವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಧಾರವಾಡ<br>೧೫-೫-೯೮

ಪ್ರಕಾಶಕರು.

and destroy the sinful enemies. The utterance of the names, forms and powers of these Divine weapons puts to flight Grahas and Bhutas.

In the Narayana Varma Mantra, the Grace of the powerful Garuda, the embodiment of Soma hymns and Vedic songs, and of Viswaksena is invoked. For. Sri Hari's names, forms, weapons and vehicles protect our thought, mind, heart, breaths and senses from all dangers. Protection from the omniscient and glorious Lord is to be sought for all means.

Indra, who learnt this Mantra from Viswarupa, conquered the Asuras in battle, and enjoyed the royal fortunes of the three worlds. People who devoutly learn, or repeat, or at least listen to this Mantra will get over all fear.

**Viswarupa is killed: Vrithra is born.**

Though Viswarupa was the Guru of Devas in place of Brihaspathi, he had his own bias for Asuras due to his love for his mother, who was of Asuric family. So, though he offered the entire sacrifices openly to Indra, Agni and so on, he gave a share of the offerings under cover to Asuras. This pretended righteousness and double game, enraged Indra, who cut off the three heads of Viswarupa and ended him. The head with which Viswarupa drank Soma became Kapinjala bird: that used for drinking liquor became Kalavinka bird; and other with which he ate food became Tittiri bird. The killing of the Brahmana with his hands, subjected Indra to the sin of Brahmahatya.

The loss of Viswarupa pained his father Twasta intensely, and he poured offerings into the fire for Indra's destruction. From the sacrificial fire, rose a dreadful spirit, of fierce eyes, holding a brilliant trident, roaring aloud and shaking the earth with his foot. Day by day, he grew in size wonderfully, as if to swallow the whole sky, lick up the stars and devour the three worlds. He had terrible tusks and was a terror in all the ten directions. Twashta named the spirit Vrithra, as he could cover the worlds with darkness.

The Devas, in vain, tried to fight their new enemy Vrithra, as he was swallowing up all the missiles hurled at him. Much disappointed, they prayed to the Supreme Lord for protection thus:

" We pray to You, who are the Highest Overlord to whom Brahma, Yama, Vayu, Varuna, Agni, Akasa and Bhu reverently

pay their humble homage. You are unlimited by conditions, and are perfect in your own realisation. May You mercifully protect us from the wrath of the dreadful Vrithra. Eternal You are, and through Your Mercy and power, and Avatara among gods, Rishis, human beings and even animals, You have protected us, when badly beaten and harassed by enemies. You are the one Lord, Pradhana, Purusha and all, fit to be resorted to as the asylum. Protect us and bestow on us, Your devotees, happiness."

Thus prayed to, the Lord revealed Himself, wielding Sankha, Chakra, Gada and Padma. He was waited upon by sixteen persons like unto Himself, but without Srivatsa and Kaustubha. His eyes were like the autumn full-blown lotus, and the gods were overjoyed at the sight, and fell prostrate, and slowly rising, offered thus their praises to the Lord, who was the highest goal to be reached:

"The Lord is the omnipotent Vasudeva, the First and the Supreme Person, most powerful, auspicious and merciful, of highest bliss and pure intelligence. The creation is His sport. He has nothing to depend on, and no help to expect from any. By His own will, He creates, preserves and destroys this universe of Satva, Rajas and Tamas. He delights by Himself, unagitated in His undiminished and unaffected spiritual essence. He is the absolute Lord of infinite and excellent attributes. Maya is His will, but He is untouched by Maya. He is the ruler of all; He is the essence of everything; and He is in everything. He is the intimate friend of all beings and the Antaryamin of all. He cures the miseries in the hearts of beings by His bright, charming, soothing and smiling looks. The sweet accents from his lips are real drops of nector. The shade of His lotus-like feet refresh His devotees from the fatigue of Samsara. He is the abode of unlimited bliss, the seer of all, the dweller in every heart, to whom the Devas prayed for protection from Vrithra, who was swallowing the worlds and overpowering their race."

The Lord was pleased with the cherishing devotion to Him, directed Indra to go to Rishi Dadhyan, and beg of him his body, which was very strong by virtue of his Yoga, austerities and Tapas. The Rishi was a realised soul, who had taught a sacred Mantra to Aswins, who attained immortality thereby. Dadhyan of